


ತಪಸ್ವಿ

1988

ಸಂಪಾದಕರು

ಪ್ರೊ. ಎಚ್.ವಿ. ನಾಗೇಶ
ಪ್ರೊ. ಎಚ್. ಆರ್. ರಘುನಾಥ ಭಟ್

ಡಾ. ಎಸ್. ರಾಮೇಗೌಡ ಸನ್ಮಾನ ಸಮಿತಿ, ಧಾರವಾಡ

ತಪಸ್ವಿ

ಕುಲಪತಿ ಡಾ. ಎಸ್. ರಾಮೇಗೌಡ ಅವರಿಗೆ
ಸಮರ್ಪಿಸಿದ ಗೌರವ ಗ್ರಂಥ

Tapasvi

Felicitation Volume presented to
Dr. S. Rame Gowda Vice-Chancellor,
Karnatak University, Dharwad

ಸಂಪಾದಕರು

ಪ್ರೊ. ಎಚ್.ವಿ. ನಾಗೇಶ
ಪ್ರೊ. ಎಚ್. ಆರ್. ರಘುನಾಥ ಭಟ್

೧೯೯೬

ಡಾ. ಎಸ್. ರಾಮೇಗೌಡ ಸನ್ಮಾನ ಸಮಿತಿ
ಧಾರವಾಡ

TAPASVI - A Felicitation volume presented to Dr. S. Rame Gowda, Vice-Chancellor, Karnataka University; edited by Prof. H. V. Nagesh, Director Prasaranga and Prof. H. R. Raghunath Bhat, Professor and Chairman, Ancient Indian History & Epigraphy, Karnataka University; Published by Dr. S. Rame Gowda Felicitation Committee, Dharwad - 580 003, 1996.

Pp : xvi + 448 + Plates 16

First Edition : 1996


Price : **Rs. 300/-**

Cover Design : **Raghu**

Dr. S. Rame Gowda Felicitation Committee
118, **'Sourabha',** 1st Main, 2nd B Cross
Srinagar, Dharwad - 580 003

Typeset : **Akhil Graphics**
"Vijayalaxmi"
Jayanagar
Dharwad - 580 001

Printed at : **Lakshmi Mudranalaya**
Chamarajpet, Bangalore.
Phone : 6613123, 6618752



[illegible]

[illegible]

ಸಂಪಾದಕರ ಮಾತು

ಸನ್ಮಾನ್ಯ ಡಾ. ಎಸ್. ರಾಮೇಗೌಡರು ರೇಷಿಮೆ ಸೀಮೆಯಾದ ಕೊಳ್ಳೇಗಾಲ ತಾಲೂಕಿನ ಹೊಂಡರಬಾಳಿನಿಂದ ಧಾರವಾಡಕ್ಕೆ ಬಂದರು. ಹಳೆಯ ಮೈಸೂರು, ಉತ್ತರ ಕರ್ನಾಟಕ ಎಂಬಿತ್ಯಾದಿ ಸೀಮೆಗಳನ್ನು ಮೀರಿ ನಿಂತು ಧಾರವಾಡದವರಾದರು. ನಾವು ಧಾರವಾಡದವರು ಕಂಡ ಶ್ರೇಷ್ಠ ಕುಲಪತಿಗಳಲ್ಲಿ ಅವರು ಒಬ್ಬರು. ಹಾಗೆಯೇ ಧಾರವಾಡದ ನಾಗರಿಕರು ಕಂಡ ಉತ್ತಮ ವಾಗ್ಮಿಗಳಲ್ಲಿ ಗಣ್ಯರು. ಕನ್ನಡ ನಾಡು, ನುಡಿಯ, ಸಂಸ್ಕೃತಿಯ ಪ್ರಾಮಾಣಿಕ ಆರಾಧಕರಲ್ಲಿ ಒಬ್ಬರು. ನಮ್ಮ ಜನರ ನಡುವೆ ಅವರು ಕಳೆದ ಆರು ವರ್ಷಗಳಿಂದ ಕುಲಪತಿಗಳಾಗಿ ಇದ್ದಾರೆ. ಆದರೆ ಆರು ದಶಕಗಳಿಂದ ಇದ್ದವರಂತೆ ನಮ್ಮವರಾಗಿ ಹೋಗಿದ್ದಾರೆ. ನಮ್ಮ ಬೇಂದ್ರೆಯವರನ್ನು, ನಮ್ಮ ಮಲ್ಲಿಕಾರ್ಜುನ ಮನಸೂರರನ್ನು, ಏಣಗಿ ಬಾಳಪ್ಪನವರನ್ನು, ವಿ. ಕೃ. ಗೋಕಾಕರನ್ನು ತಮ್ಮವರನ್ನಾಗಿ ಮಾಡಿಕೊಂಡಿದ್ದಾರೆ. ಇಲ್ಲಿಯ ಸಾಹಿತಿಗಳನ್ನು, ಕಲಾವಿದರನ್ನು, ವಿದ್ಯಾರ್ಥಿಗಳನ್ನು ತಮ್ಮವರನ್ನಾಗಿ ಪ್ರೋತ್ಸಾಹಿಸಿದ್ದಾರೆ. ಇಲ್ಲಿಯ ಶಿಕ್ಷಕರ, ಶಿಕ್ಷಕ್ಷೇತರರ, ವಿದ್ಯಾರ್ಥಿ, ಸಾರ್ವಜನಿಕರಿಗೆಂದು ವಿಶ್ವವಿದ್ಯಾಲಯದಲ್ಲಿ 'ವಿಶ್ವಚೇತನ' ಹೆಸರಿನ ಸಾಂಸ್ಕೃತಿಕ ವೇದಿಕೆ ಕಟ್ಟಲು ಪ್ರೇರಣೆ ಕೊಟ್ಟು ಗೀತ, ಸಂಗೀತ, ನೃತ್ಯ, ನಾಟಕಗಳಿಗೆ ಉತ್ತೇಜನ ಕೊಟ್ಟರು. ಹೀಗೆ ಅವರು ಧಾರವಾಡದ ಸಾಂಸ್ಕೃತಿಕ ಬದುಕಿನ ಭಾಗವಾಗಿ ಹೋಗಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯ ಅವರ ಆರು ವರ್ಷಗಳ ಅಧಿಕಾರಾವಧಿಯಲ್ಲಿ ಅದ್ಭುತವಾದ ಪ್ರಗತಿ ಕಂಡಿತು. ಆಧುನಿಕವಾದ ಹಾಗೂ ಉಪಯುಕ್ತವಾದ ಹತ್ತು ಹಲವು ಕೋರ್ಸುಗಳು ಬಂದವು. ಜಿಲ್ಲೆಗೊಂದರಂತೆ ಸ್ನಾತಕೋತ್ತರ ಕೇಂದ್ರಗಳು ಗರ್ವದಿಂದ ತಲೆಯೆತ್ತಿವೆ. ಬೆಳಗಾವಿ ಕೇಂದ್ರ ಅದ್ಭುತವಾಗಿ ಬೆಳದು ನಿಂತಿದೆ. ಈಗ ಕಾರವಾರ ಮತ್ತು ಬಿಜಾಪುರಗಳ ಸರದಿ. ಏಶಿಯಾದಲ್ಲಿಯೇ ವಿನೂತನವಾದ ಹಾಗೂ ಪರಿಸರಾನುಕೂಲವಾದ ಭವ್ಯ ಕ್ರೀಡಾಂಗಣ ಪಾವಟೆ ನಗರದ ಇಳಿಜಾರು ಅಂಚಿನಲ್ಲಿ ತಲೆಯೆತ್ತಿದೆ. ಸಂಶೋಧನೆ ಮತ್ತು ಶೈಕ್ಷಣಿಕ ಸಾಧನೆಗಳ ಮೂಲಕ ಈ ವಿಶ್ವವಿದ್ಯಾಲಯ ಭಾರತದ ಹಾಗೂ ವಿಶ್ವದ ಶೈಕ್ಷಣಿಕ ನಕಾಶೆಯಲ್ಲಿ ಪ್ರಧಾನವಾಗಿ ಗುರುತಿಸಲ್ಪಡುತ್ತದೆ. ಈ ವಿಶ್ವವಿದ್ಯಾಲಯಕ್ಕೆ, ಈ ಊರಿಗೆ, ಉತ್ತರ ಕರ್ನಾಟಕದ ಈ ಭಾಗಕ್ಕೆ ಅವರಿಂದ ಮಹದುಪಕಾರವಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

ಇಂಥ ಉಪಕಾರವನ್ನು ಸ್ಮರಿಸುತ್ತ, ಆರು ವರ್ಷದ ಅಧಿಕಾರಾವಧಿ ಪೂರ್ಣಗೊಳಿಸುತ್ತಿರುವ ಈ ಸಂದರ್ಭದಲ್ಲಿ ಧಾರವಾಡದ ಡಾ. ಎಸ್. ರಾಮೇಗೌಡ ಸನ್ಮಾನ ಸಮಿತಿ ಈ 'ತಪಸ್ವಿ' ಅಭಿನಂದನ ಗ್ರಂಥವನ್ನು ಅರ್ಪಿಸುತ್ತಿದೆ. ಡಾ. ರಾಮೇಗೌಡರ ಅಭಿಮಾನಿಗಳ ಬರಹಗಳಿಂದ ಕೂಡಿ ನಾನೂರಅರವತ್ತು ಪುಟಗಳ ಬೃಹತ್ ಗ್ರಂಥವಾಗಿ ಹೊರಬರುತ್ತಿದೆ. ಬಂದ ಲೇಖನಗಳನ್ನು 'ವ್ಯಕ್ತಿ' ಮತ್ತು 'ವಿಷಯ' ಎಂಬ ಎರಡು ವಿಭಾಗಗಳಲ್ಲಿ ಹೊಂದಿಸಿಕೊಡಲಾಗಿದೆ. 'ವ್ಯಕ್ತಿ' ಹೆಸರಿನ ಮೊದಲ ಭಾಗದಲ್ಲಿ ಕುಲಪತಿ ಡಾ. ರಾಮೇಗೌಡರನ್ನು ಆಶೀರ್ವದಿಸುವ, ಅಭಿನಂದಿಸುವ ಬರಹಗಳು ಸೇರಿವೆ. ಅವರಿಗೆ ಅರ್ಪಿಸಿದ ಮಾನಪತ್ರಗಳಲ್ಲಿ ಕೆಲವನ್ನು ಇಲ್ಲಿ ಸೇರಿಸಲಾಗಿದೆ. ಆಯ್ದ ಕೆಲವು ಪತ್ರಗಳೂ, ಚಿತ್ರಗಳೂ ಸೇರಿವೆ. ಇವೆಲ್ಲ ಕುಲಪತಿ ರಾಮೇಗೌಡರ ವ್ಯಕ್ತಿತ್ವದ ದಿಗ್ದರ್ಶನ ಮಾಡಿಸುತ್ತವೆ.

ಅನೇಕರು ಗುರುತಿಸಿದಂತೆ, ಹಳ್ಳಿಗಾಡಿನ ಬಡ ರೈತಾಪಿ ಕುಟುಂಬದಿಂದ ಬಂದ ಅವರು ಛಲದಿಂದ, ಸತತ ಪ್ರಯತ್ನದಿಂದ, ಸ್ವಂತ ಯೋಗ್ಯತೆಯಿಂದ ಮೇಲೇರಿಯೇ ಏರುತ್ತೇನೆಂದು ಪಣ ತೊಟ್ಟವರು. ಅದನ್ನು ತಪಸ್ವಿಯಂತೆ ಸಾಧಿಸಿಯೇ ತೋರಿಸಿದವರು. ಈ ಹಿನ್ನೆಲೆಯಲ್ಲಿ ಅವರೊಬ್ಬ 'ತಪಸ್ವಿ'. 'ಗೌರವತಪಸ್ವಿ' ಎಂಬ ಪದ ಕುವೆಂಪು ಅವರಿಗೆ ಅತಿ ಪ್ರಿಯವಾದದ್ದು. ಹಾಗೆಯೇ ಡಾ. ರಾಮೇಗೌಡರಿಗೂ ಕೂಡ. ಈ ಕಾರಣಕ್ಕಾಗಿ ನಾವು ಅವರಿಗೆ ಅರ್ಪಿಸುತ್ತಿರುವ ಅಭಿನಂದನಾ ಗ್ರಂಥಕ್ಕೆ '**ತಪಸ್ವಿ**' ಎಂದೇ ಹೆಸರಿಟ್ಟೆವು. ವಿದ್ಯಾರ್ಥಿ ದೆಸೆಯಲ್ಲಿಯೇ ಸಾಹಿತ್ಯ, ಸಂಗೀತ, ನಾಟಕಗಳ ಗೀಳು ಹಿಡಿಸಿಕೊಂಡವರು. ಪುಸ್ತಕಪ್ರೇಮಿಗಳು, ಕುವೆಂಪು ಭಕ್ತರು. ಮೇಧಾವಿ ಯಂತ್ರಶಾಸ್ತ್ರಜ್ಞರು, ಪ್ರಾಧ್ಯಾಪಕರಾಗಿ ದೇಶ-ವಿದೇಶ ಸುತ್ತಿದರೂ ಕನ್ನಡದ ಪ್ರೀತಿ ಉಳಿಸಿಕೊಂಡವರು. ಶಾಲಾದಿನಗಳಿಂದಲೇ ವಾಗ್ಮಿಯಾಗಿ ತರಬೇತು ಹೊಂದಿದ ಅವರೀಗ ಸಾಟಿಯಿಲ್ಲದ ಮಾತುಗಾರರಾಗಿದ್ದಾರೆ.

ಈ ಗ್ರಂಥದ 'ವಿಷಯ' ಎಂಬ ಎರಡನೆಯ ವಿಭಾಗದಲ್ಲಿ ಅವರ ಅಭಿಮಾನಿಗಳು ಡಾ. ರಾಮೇ ಗೌಡರಿಗೆ ಪ್ರಿಯವಾದ ವಿಷಯಗಳಾದ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಸಾಹಿತ್ಯ, ಭಾಷೆ, ಕುವೆಂಪು, ಆಡಳಿತ ವಿಚಾರಗಳ ಬಗೆಗೆ ವಿದ್ವತ್‌ಪೂರ್ಣ ಲೇಖನಗಳನ್ನು ಸಲ್ಲಿಸಿದವರಲ್ಲಿ ಹಾಗೂ ಲೇಖನಗಳನ್ನು ಬರೆದವರಲ್ಲಿ ಮಠಾಧಿಪತಿಗಳೂ, ಡಾ. ಗೌಡರ ವಿದ್ಯಾಗುರುಗಳೂ, ಸಹಪಾಠಿಗಳೂ, ಧಾರವಾಡದಲ್ಲಿ ಅವರ ಸಂಪರ್ಕಕ್ಕೆ ಬಂದ ಹಿರಿಯರೂ, ಕಿರಿಯರೂ, ಶಿಕ್ಷಕರೂ, ಸಾಹಿತಿಗಳೂ, ಒಬ್ಬ ವಿದೇಶಿ ತಂತ್ರಜ್ಞರೂ ಇದ್ದಾರೆ. ಅವರೆಲ್ಲರಿಗೆ ನಾವು ಕೃತಜ್ಞರಾಗಿದ್ದೇವೆ. ಸನ್ಮಾನ ಸಮಿತಿಯ ಮಾನ್ಯ ಅಧ್ಯಕ್ಷರು ಹಾಗೂ ಎಲ್ಲ ಪದಾಧಿಕಾರಿಗಳಿಗೂ ನಾವು ಕೃತಜ್ಞರಾಗಿದ್ದೇವೆ. ಈ ಗ್ರಂಥದ ಮುದ್ರಣಕಾರ್ಯದಲ್ಲಿ ಅಕ್ಷರಜೋಡಣೆಯನ್ನು ಅಂದವಾಗಿ ಮಾಡಿಕೊಟ್ಟ ಧಾರವಾಡದ ಅಖಿಲ ಗ್ರಾಫಿಕ್ಸ್‌ನ ಗೆಳೆಯರಿಗೆ ಹಾಗೂ ಚೆಂದವಾಗಿ ಮುದ್ರಿಸಿಕೊಟ್ಟ ಬೆಂಗಳೂರಿನ ಲಕ್ಷ್ಮಿ ಮುದ್ರಣಾಲಯದ ಸ್ನೇಹಿತರಿಗೆ ಕೃತಜ್ಞತೆಗಳು. ಕರಡು ತಿದ್ದುವುದರಲ್ಲಿ ಸಹಕರಿಸಿದ ಡಾ. ಶಾಲಿನಿ ರಘುನಾಥರಿಗೆ ಅಭಿನಂದನೆಗಳು. ಸನ್ಮಾನಿತರಾದ ಕುಲಪತಿ ಡಾ. ಎಸ್. ರಾಮೇಗೌಡರಿಗೆ ಈ ತಪಸ್ವಿಯನ್ನು ಸನ್ಮಾನ ಸಮಿತಿಯ ಪ್ರೀತಿಯ ಒಂದು ಕಾಣಿಕೆಯೆಂದು ಅರ್ಪಿಸುತ್ತಿದ್ದೇವೆ.

ಪ್ರೊ॥ ಎಚ್. ವಿ. ನಾಗೇಶ, ಪ್ರೊ॥ ಎಚ್. ಆರ್. ರಘುನಾಥ ಭಟ್

ಸಂಪಾದಕರು.

ಪರಿವಿಡಿ

೨. ಮಾನ-ಸನ್ಮಾನ:

❊ ❊ ❊

ನಮ್ಮ ಲೇಖಕರು

[ಲೇಖನಗಳ ಅನುಕ್ರಮವಾಗಿ]

೧. ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರು,
ಧರ್ಮಾಧಿಕಾರಿಗಳು, ಶ್ರೀ ಕ್ಷೇತ್ರ, ಧರ್ಮಸ್ಥಳ

೨. ಪೂಜ್ಯ ಮೂಜಗಂ
ಜಗದ್ಗುರು ಗಂಗಾಧರ ರಾಜಯೋಗೀಂದ್ರ
ಮಹಾಸ್ವಾಮಿಗಳು, ಮೂರು ಸಾವಿರ ಮಠ, ಹುಬ್ಬಳ್ಳಿ

೩. ಮೋಸ್ಟ್ ರೆ. ಡಾ. ವಸಂತ ಪಿ. ದಂಡಿನ,
ಮಹಾಧರ್ಮಾಧ್ಯಕ್ಷರು, ಚರ್ಚ್ ಆಫ್ ಸೌಥ್ ಇಂಡಿಯಾ, ಧಾರವಾಡ

೪. ಪೂಜ್ಯ ಚಿತ್ತರಗಿ ಮಹಾಂತ ಸ್ವಾಮಿಗಳವರು,
ಚಿತ್ತರಗಿ ಸಂಸ್ಥಾನ ಮಠ

೫. ಡಾ. ಕೆ. ಶಿವರಾಮ ಕಾರಂತ,
'ಸುಹಾಸ', ಸಾಲಿಗ್ರಾಮ. ಉಡುಪಿ. ದ.ಕ

೬. ಸಿ. ವೀರಪ್ಪ,
ನಿವೃತ್ತ ಶಿಕ್ಷಕರು, ಕೊಳ್ಳೆಗಾಲ, ಮೈಸೂರು

೭. ತ. ರಾ. ಕೃಷ್ಣೇಗೌಡ,
ಅಧ್ಯಕ್ಷರು, ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು ಘಟಕ, ಬೆಂಗಳೂರು

೮. ಗೌರೀಶ ಕಾಯ್ಕಿಣಿ,
ಖ್ಯಾತ ಲೇಖಕರು, ಗೋಕರ್ಣ, ಉ.ಕ.

೯. 'ಎನ್ಕೆ', ಎನ್. ಕೆ. ಕುಲಕರ್ಣಿ,
ಖ್ಯಾತ ಸಾಹಿತಿಗಳು, 'ಪರಿಮಳ', ಗುಡ್ಸ್‌ಶೆಡ್ ಬಳಿ, ಧಾರವಾಡ

೧೦. ಶ್ರೀಮತಿ ಶಾಂತಾದೇವಿ ಮಾಳವಾಡ,
ಹಿರಿಯಲೇಖಕಿ, 'ಪ್ರಶಾಂತ', ಕಲ್ಯಾಣನಗರ, ಧಾರವಾಡ

೧೧. ಶ್ರೀಮತಿ ಸುಶೀಲಾ ರಾಮೇಗೌಡ,
'ಸಂಗಮ', ಕುಲಪತಿ ನಿವಾಸ, ಕ. ವಿ. ವಿ. ಧಾರವಾಡ

೧೨. ಡಾ. ಪ್ರಭುಶಂಕರ,
೧೦೦೬, ಇ & ಎಫ್ ಬ್ಲಾಕ್, ಕುವೆಂಪು ನಗರ , ಮೈಸೂರು

೧೩. ಜಿ. ವೆಂಕಟಸುಬ್ಬಯ್ಯ,
೩೧ನೇ ಕ್ರಾಸ್, ೭ನೆಯ ಬ್ಲಾಕ್, ಜಯನಗರ, ಬೆಂಗಳೂರು

೧೪. ಡಾ. ವಾಮನ ಬೇಂದ್ರೆ,
ನಿವೃತ್ತ ಪ್ರಾಧ್ಯಾಪಕರು, 'ಶ್ರೀಮಾತಾ' ಸಾಧನಕೇರಿ, ಧಾರವಾಡ

೧೫. 'ವೈಶಂಪಾಯನ'
ಜಿ. ಎಂ. ಪಾಟೀಲ, ನಿವೃತ್ತ ಪ್ರಾಚಾರ್ಯರು,
ಕೆ. ಪಿ. ಇ. ಎಸ್. ಲಾ ಕಾಲೇಜು, ಧಾರವಾಡ

೧೬. ಡಾ. ಸೋಮಶೇಖರ ಇಮ್ರಾಪುರ,
ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ

೧೭. ಸತೀಶ ತಗರಪುರ
ಜಯನಗರ, ಧಾರವಾಡ

೧೮. ಪ್ರೊ. ಚಂದ್ರಶೇಖರ ಪಾಟೀಲ
ಇಂಗ್ಲೀಷ್ ಪ್ರಾಧ್ಯಾಪಕರು, ಕ.ವಿ.ವಿ ಧಾರವಾಡ

೧೯. ಕೆ. ಎಂ. ಉಡುಪ
ಜೋನಲ್ ಆಫೀಸ್, ಸಿಂಡಿಕೇಟ್ ಬ್ಯಾಂಕ್, ಹೈದರಾಬಾದ್, ಆಂಧ್ರಪ್ರದೇಶ

೨೦. ಕೆ. ಚಿದಾನಂದ ಗೌಡ,
ಉಪಪ್ರಾಂಶುಪಾಲರು, ಜೆ.ಸಿ.ಇ., ಮೈಸೂರು

೨೧. ಡಾ. ಎಂ. ಬಿ. ನೇಗಿನಹಾಳ,
ಮುಖ್ಯಸ್ಥರು, ಕನ್ನಡ ಅಧ್ಯಯನ ಪೀಠ, ಕ. ವಿ. ವಿ. ಧಾರವಾಡ

೨೨. ಅಶೋಕ ಚೊಳಚಗುಡ್ಡ,
ಪ್ರಸಾರಾಂಗ, ಕ. ವಿ. ವಿ. ಧಾರವಾಡ

೨೩. ಡಾ. ಹರಿಲಾಲ ಪವಾರ,
ಸಹಾಯಕ ನಿರ್ದೇಶಕರು, ಪ್ರಸಾರಾಂಗ, ಕ. ವಿ. ವಿ. ಧಾರವಾಡ

೨೪. ಡಾ. ಎಂ. ಜಿ. ಶಾಸ್ತ್ರೀಮಠ,
ಆಪ್ತ ಕಾರ್ಯದರ್ಶಿಗಳು, ಕುಲಪತಿಗಳ ಕಚೇರಿ, ಕ. ವಿ. ವಿ. ಧಾರವಾಡ

೨೫. ಪ್ರೊ. ಎಸ್.ಎಫ್. ಪೂಜಾರ್
ಪ್ರಾಧ್ಯಾಪಕರು, ಅಧ್ಯಕ್ಷರು, ಸಮಾಜಕಾರ್ಯ ವಿಭಾಗ, ಕ.ವಿ.ವಿ. ಧಾರವಾಡ

೨೬. ಡಾ. ಶಾಲಿನಿ ರಘುನಾಥ,
ಪ್ರವಾಚಕರು, ಕನ್ನಡ ಅಧ್ಯಯನಪೀಠ, ಕ. ವಿ. ವಿ. ಧಾರವಾಡ

೨೭. ಡಾ. ಜಿ. ಎಂ. ಹೆಗಡೆ,
ಕನ್ನಡ ಅಧ್ಯಾಪಕರು, ಕಿಟೆಲ್ ಕಲಾಮಹಾವಿದ್ಯಾಲಯ, ಧಾರವಾಡ

೨೮. ಎಂ.ಕೆ. ಹೆಗಡೆ
'ಅನುಗ್ರಹ', ಕಲ್ಯಾಣನಗರ, ಧಾರವಾಡ

೨೯. ಎಸ್. ಕೆ. ಪಾಟೀಲ,
ಕುಲಪತಿಗಳ ಆಪ್ತ ಸಹಾಯಕ, ಕ. ವಿ. ವಿ. ಧಾರವಾಡ

೩೦. Dr. U.R.Rao
Vikram Sarabhai Professor, Antariksha Bhavan, ISRO, Bangalore

೩೧. P.N.Tirunarayana
Wipro Professor of Management, IIM, Bangalore

೩೨. Dr. M. Mahadevappa,
Vice-Chancellor, University of Agricultural Sciences, Dharwad

೩೩. Rajaneesh Goel I.A.S.
Registrar, K.U.D. Dharwad

೩೪. T.M. Aminabhavi
Professor, Dept of Chemistry, K.U.Dharwad

೩೫. Smt. Dhyana Shoba Nagaraj
1950, Roswell Road, 15.C.3., Marietta GA, USA

೩೬. Prof S.B.Nargundakar,
Kamalakunj, Near KEB, Vidyagiri, Dharwad

೩೭. A. Sundara,
Director PG Centre, Bijapur

೩೮. ಸಂತೋಷಕುಮಾರ ಗುಲ್ವಾಡಿ,
ಸಂಪಾದಕರು, ತರಂಗ, ಮಣಿಪಾಲ, ದ.ಕ.

೩೯. ಕೋ. ಚನ್ನಬಸಪ್ಪ,
ನಿವೃತ್ತ ನ್ಯಾಯಾಧೀಶರು, ಬೆಂಗಳೂರು

೪೦. ಕೆ. ಎಸ್. ನಿಸಾರ್ ಅಹಮದ್,
ಖ್ಯಾತ ಕವಿಗಳು, ಬೆಂಗಳೂರು

೪೧. ಡಾ. ಆರ್. ಸಿ. ಹಿರೇಮಠ,
ನಿವೃತ್ತ ಕುಲಪತಿಗಳು, ಕೆಲಗೇರಿ ರಸ್ತೆ, ಧಾರವಾಡ

೪೨. ದಿ|| ಡಾ. ವಿ. ಕೃ. ಗೋಕಾಕ್, ಮುಂಬಯಿ

೪೩. ಎಸ್. ಪಿ. ಗುಪ್ತಾ,
೧೪೮, ವಿಜ್ಞಾನ ವಿಹಾರ, ನವದೆಹಲಿ

೪೪. ದಿ| ಎಂ. ಪಿ. ಪಂಡಿತ,
ಪಾಂಡಿಚೇರಿ

೪೫. ಡಾ. ಎ. ಇ. ಪುನೀತ,
ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ

೪೬. ಡಾ. ಉ. ಅತ್ತಾರ,
ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಕ. ವಿ. ವಿ. ಧಾರವಾಡ

೪೭. ಎಚ್. ವಿ. ನಾಗೇಶ್,
ನಿರ್ದೇಶಕರು, ಪ್ರಸಾರಾಂಗ, ಕ. ವಿ. ವಿ. ಧಾರವಾಡ

೪೮. 'ರಾಗೌ', ಡಾ. ರಾಮೇಗೌಡ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೪೯. ಎಸ್. ಶಿವಾನಂದ
ಹಣಕಾಸು ಅಧಿಕಾರಿಗಳು, ಕ. ವಿ. ವಿ. ಧಾರವಾಡ

೫೦. ಕೆ. ವಿ. ಸುಬ್ಬಣ್ಣ,
ನೀನಾಸಂ, ಹೆಗ್ಗೋಡು, ಸಾಗರ, ಶಿವಮೊಗ್ಗ

೫೧. ಅಂಬಳಿಕೆ ಹಿರಿಯಣ್ಣ,
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು

೫೨. Dr. S. Sampath,
Shantinivas, Kasturba Nagar, Adyar,
Madras, TN

೫೩. Prof. C.D. Narasimhaiah,
Director, Dhvanyaloka, Mysore

೫೪. Dr. G.S. Dikshit,
B1. Kailas Apartments, Malleshwaram, Bangalore

೫೫. Dr. N. Sheshagiri,
Director General, NIC & Spl, Sec,
Planning Commission, New Delhi

೫೬. Dr. J.M. Vergnaud
Dept. of Chemical Engg.
University of St. Etienne
42023, St. Etienne, Cedex 2, France.

೫೭. Dr. H.R.Raghunath Bhat,
Professor & Chairman, Ancient Indian History & Epigraphy
K.U.Dharwad

೫೮. Aruna Goel
Punjab University, Chandigarh

೫೯. Dr. D.N. Shanbhag
Gopalpur, Malmaddi, Dharwad

೬೦. Dr. K.G.Shastri,
Retd Professor of Kannada, Srinagar, Dharwad

೬೧. Shalini Rajaneesh I.A.S.
Director, CEDOK, Dharwad

೬೨. S.L. Goel
Member, UGC, New Delhi

❊ ❊ ❊

ತಪಸ್ವಿ

ಡಾ॥ ಎಸ್. ರಾಮೇಗೌಡ ಅಭಿನಂದನ ಸಮಿತಿ, ಧಾರವಾಡ

ಅಧ್ಯಕ್ಷರು
ದಿ. ಮೋಸ್ಟ್ ರೆ. ಡಾ.ವಸಂತ ಪಿ.ದಂಡಿನ

ಮಹಾಪೋಷಕರು
ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ

ಪೋಷಕರು
ಶ್ರೀ ಸಿ.ಜೆ. ಕಮಲಾನಿ, ಡಾ.ಮಮ್ತಾಜ್ ಅಹ್ಮಮದ್‌ಖಾನ್, ಶ್ರೀ ಮೋಹನ ಶಿರೂರ್

ಸದಸ್ಯರು
ಶ್ರೀ ಎನ್. ವಜ್ರಕುಮಾರ
ಡಾ. ಎ.ಇ. ಪುನೀತ
ಡಾ. ಬಿ. ಹನುಮಯ್ಯ
ಡಾ. ಎಂ. ಬಿ. ನೇಗಿನಹಾಳ
ಶ್ರೀಮತಿ ಸುಕನ್ಯಾ ಮಾರುತಿ
ಡಾ. ಎಸ್. ಎಫ್. ಪೂಜಾರ್
ಶ್ರೀಮತಿ ಶಾಂತಾದೇವಿ ಮಾಳವಾಡ
ಡಾ. ಬಿ. ಎ. ವಿವೇಕ ರೈ
ಡಾ. ಸಿ. ಪಿ. ಕೃಷ್ಣಕುಮಾರ
ಡಾ. ಟಿ. ಎಂ. ಅಮ್ಮಿನಭಾವಿ
ಡಾ. ಸಿ. ಜಿ. ಹುಸೇನ್‌ಖಾನ್
ಡಾ. ಅಶೋಕ ಪಾಳ

ಸಂಚಾಲಕರು
ಡಾ। ಎಚ್. ಆರ್. ರಘುನಾಥ ಭಟ್

'ತಪಸ್ವಿ' ಸಂಪಾದಕರು
ಪ್ರೊ॥ ಎಚ್.ವಿ. ನಾಗೇಶ
ಪ್ರೊ॥ ಎಚ್.ಆರ್. ರಘುನಾಥ ಭಟ್



'ಶ್ರೇಷ್ಠ ಶಿಕ್ಷಣತಜ್ಞ' ಡಾ. ಎಸ್. ರಾಮೇಗೌಡ
ಕುಲಪತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
(೧೯೯೦–೧೯೯೬)




ಡಾ. ಎಸ್. ರಾಮೇಗೌಡ ಹಾಗೂ ಪತ್ನಿ ಸುಶೀಲಮ್ಮನವರು



೯ನೆಯ ತರಗತಿ ವಿದ್ಯಾರ್ಥಿ

(೧೯೫೨)




ಎರಡನೆಯ ಬಿ. ಇ. ವಿದ್ಯಾರ್ಥಿ

(೧೯೫೭–೫೮)



ಎನ್.ಸಿ.ಸಿ. ಲೆಫ್ಟಿನೆಂಟ್

(೧೯೬೩)



'ಗಂಡ್ಸಲ್ವೇ ಗಂಡ್ಸು' ನಾಟಕ ನಿರ್ದೇಶಕರಾಗಿ
ಡಾ. ಎಸ್. ರಾಮೇಗೌಡರು (೧೯೬೦) (ಎಡ ಅಂಚಿನಲ್ಲಿ)



ಕುವೆಂಪು ನಾಟಕೋತ್ಸವ (ಮಂಡ್ಯ) – (೧೯೭೨)
ಡಾ. ಕುವೆಂಪು, ಡಾ. ರಾಮೇಗೌಡ, ಕೆ. ವಿ. ಶಂಕರೇಗೌಡ, ಡಾ. ದೇ.ಜ. ಗೌಡ



“ಉದಯರವಿ”ಯಲ್ಲಿ ರಾಷ್ಟ್ರಕವಿ ಕುವೆಂಪು ಜೊತೆ
ಡಾ. ಎಸ್. ರಾಮೇಗೌಡರು (೧೯೬೬)



ಡಾ. ರಾಮೇಗೌಡರನ್ನು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯಾಗಿ ೧೯೯೦ರಲ್ಲಿ ನೇಮಕ ಮಾಡಿದ ಕುಲಾಧಿಪತಿ ಭಾನುಪ್ರತಾಪ ಸಿಂಗ್‌ರ ಜೊತೆ ಘಟಿಕೋತ್ಸವ ಸಮಾಲೋಚನೆ (೧೯೯೦)



ಕ.ವಿ.ವಿ. ಘಟಿಕೋತ್ಸವ – (೧೯೯೦) ಮಾಜಿ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯ್ಲಿ ಡಾ. ದಲಾಯಿಲಾಮ, ರಾಜ್ಯಪಾಲ ಭಾನುಪ್ರತಾಪ ಸಿಂಗರ ಜೊತೆ ಕುಲಪತಿ ಡಾ. ರಾಮೇಗೌಡರು ತಲ್ಲೀನ



ಅಖಿಲ ಭಾರತ ಮಟ್ಟದಲ್ಲಿ ಪಾಂಡಿಚೇರಿಯಲ್ಲಿ ನಡೆದ ಕುಲಪತಿಗಳ ಸಮಾವೇಶದಲ್ಲಿ
ಕ.ವಿ.ವಿ. ಕುಲಪತಿ ಪತ್ನಿ ಸಮೇತ. ಡಾ. ರಾಮೇಗೌಡರಿಗೆ ಭರ್ಜರಿ ಹಾರ
ಅರ್ಪಿಸಿ ಸನ್ಮಾನ ಮಾಡುತ್ತಿರುವುದು – (೧೯೯೩)



ಕನ್ನಡ ಪ್ರಾಧಿಕಾರದ ಅಧ್ಯಕ್ಷ ಡಾ. ಎಚ್. ನರಸಿಂಹಯ್ಯನವರಿಂದ
ಸನ್ಮಾನಗೊಳ್ಳುತ್ತಿರುವ ಕುಲಪತಿ ಡಾ. ರಾಮೇಗೌಡ



೧೯೯೦ರಲ್ಲಿ ಕ.ವಿ.ವಿ. ಕುಲಪತಿಯಾಗಿ ನೇಮಕವಾದಾಗ ಪಾಂಡಿಚೇರಿಯ
ಜನ ಸುಮಾರು ಒಂದೂವರೆ ಕಿ.ಮೀ. ದೂರದವರೆಗೂ ನೆರೆದು
ಅದ್ದೂರಿ ಸನ್ಮಾನ ಮಾಡುತ್ತಿರುವುದು



ಗುಲ್ಬರ್ಗದ ಡಾ. ಶರಣಬಸಪ್ಪ ಅಪ್ಪನವರಿಂದ ಸಂತಸದಿಂದ ಸನ್ಮಾನ
ಸ್ವೀಕರಿಸುತ್ತಿರುವ ಡಾ. ರಾಮೇಗೌಡರು – (೧೯೯೩)



ಇಂದಿನ ಪ್ರಧಾನಿ ಹೆಚ್. ಡಿ. ದೇವೇಗೌಡರಿಂದ ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸಿ
ಸನ್ಮಾನ ಪಡೆಯುತ್ತಿರುವ ಡಾ. ರಾಮೇಗೌಡರು ಪತ್ನಿ ಸುಶೀಲಮ್ಮನವರ ಸಮೇತ



ಡಾ. ಗಿರೀಶ ಕಾರ್ನಾಡರ ಜೊತೆ ಡಾ. ರಾಮೇಗೌಡರು
ಸಾಹಿತ್ಯಕ ಸಂವಾದದಲ್ಲಿ ನಿರತ – (೧೯೯೪)



ಡಾ. ರಾಮೇಗೌಡರು ಡಾ. ರಾಜಕುಮಾರರ ಜೊತೆ ನಾಟಕೀಯ
ಸಮಾಲೋಚನೆಯೊಂದರಲ್ಲಿ ತಲ್ಲೀನ – (೧೯೯೪)



‘ವಿಶ್ವಚೇತನ’ದ ಅಧ್ಯಕ್ಷ ಡಾ. ರಾಮೇಗೌಡರು ‘ವಿನಾಯಕ’ರ
ಜೊತೆ ರಸಘಳಿಗೆಯೊಂದರಲ್ಲಿ – (೧೯೯೫)



ಡಾ. ಮಲ್ಲಿಕಾರ್ಜುನ ಮನ್ಸೂರರನ್ನು ಅವರ ಮನೆಯಲ್ಲೇ ಸನ್ಮಾನಿಸುತ್ತ
ಡಾ. ರಾಮೇಗೌಡರು ಸಂತಸವನ್ನು ಹಂಚಿಕೊಳ್ಳುತ್ತಿರುವುದು – (೧೯೯೫)



ಕಡಲ ತೀರದ ಭಾರ್ಗವ ಡಾ. ಶಿವರಾಮಕಾರಂತರ ಜೊತೆ
ಡಾ. ರಾಮೇಗೌಡರು ಗಂಭೀರ ಚಿಂತನೆಯೊಂದರಲ್ಲಿ – (೧೯೯೭)



ಡಾ. ವಿ. ಕೃ. ಗೋಕಾಕ ಸನ್ಮಾನದ ಆನಂದದಲ್ಲಿ
ಡಾ. ರಾಮೇಗೌಡರು ಮಗ್ನ – (೧೯೯೧)



ಯು.ಜಿ.ಸಿ. ಅಧ್ಯಕ್ಷರಾಗಿದ್ದ ಡಾ. ಜಿ. ರಾಮರೆಡ್ಡಿಯವರನ್ನು
ಸಂತಸದಿಂದ ಸ್ವಾಗತಿಸುತ್ತ ಡಾ. ರಾಮೇಗೌಡರು – (೧೯೯೪)



'ಪ್ರಶಾಂತ' ಪ್ರೊ. ಸ.ಸ. ಮಾಳವಾಡರ ಗೃಹದಲ್ಲಿ ಅರವಿಂದ ಅಭ್ಯಾಸ
ಮಂಡಳಿಯಲ್ಲಿ ಶ್ರೀಮತಿ ಶಾಂತಾದೇವಿ ಮಾಳವಾಡ, ಶ್ರೀ ಎನ್ಕೆ,
ಶ್ರೀ ಚೆನ್ನವೀರಕಣವಿ ಮುಂತಾದವರ ಜೊತೆಯಲ್ಲಿ ಡಾ. ಎಸ್. ರಾಮೇಗೌಡ



ಬೆಳಗಾಂವ ಕಾನೂನು ವಿದ್ಯಾಲಯದಲ್ಲಿ ನ್ಯಾಯಮೂರ್ತಿ ಮಿಶ್ರ,
ಇ. ಎಸ್. ವೆಂಕಟರಾಮಯ್ಯ ಮತ್ತು ಮಳೀಮಠರ ಜೊತೆ ಸಮಾಲೋಚನೆಯಲ್ಲಿ
ಕುಲಪತಿ ಡಾ. ಎಸ್. ರಾಮೇಗೌಡರು



ಕ.ವಿ.ವಿ. ಶಿಲ್ಪಿ ಡಾ. ದಾ. ಚೆಂ. ಪಾವಟೆ ಜನ್ಮದಿನಾಚರಣೆ ನಿಮಿತ್ತದಲ್ಲಿ
ಅಧ್ಯಕ್ಷೀಯ ಭಾಷಣ – (೧೯೯೬)



ಡಾ. ಡಿ. ಸಿ. ಪಾವಟೆ ಜನ್ಮದಿನಾಚರಣೆ (೨–೮–೧೯೯೫) ಆಚರಿಸಲು ಉತ್ಸಾಹದಿಂದ ಹೊರಟ ಕುಲಪತಿ ಡಾ. ರಾಮೇಗೌಡರು. ಶ್ರೀ ಎನ್ಕೆ, ಶ್ರೀ ರಜನೀಶ ಗೋಯಲ್ (ಕುಲಸಚಿವರು) ಹಾಗೂ ಡಾ. ಎಚ್. ಆರ್. ರಘುನಾಥ ಭಟ್ (ಸಂಘಟನಾ ಕಾರ್ಯದರ್ಶಿ) ಜೊತೆಗೂಡಿ



ಡಾ. ರಾಮೇಗೌಡರು ಕಳೆದ ಜೂನ್ ೭ರಂದು ಕರ್ನಾಟಕ ಇತಿಹಾಸ ಅಕಾದೆಮಿಯ ದಶವಾರ್ಷಿಕ ಸಮ್ಮೇಳನವನ್ನು ಉದ್ಘಾಟಿಸುತ್ತಿರುವುದು. ಪೂಜ್ಯ ಶಿವಯೋಗಿ ಸ್ವಾಮಿಗಳಲ್ಲದೆ ಪ್ರೊ. ಜಿ. ಎಸ್. ದೀಕ್ಷಿತ್ ಡಾ. ಆರ್. ಸಿ. ಹಿರೇಮಠ, ಸಂಜೀವಕುಮಾರ ಡಾ. ಡಿ. ವಿ. ದೇವರಾಜ ಮುಂತಾದವರು ಇದ್ದಾರೆ.

ಭಾಗ ೧: ೧. ವ್ಯಕ್ತಿ

ಸಕಲ ಸನ್ಮಂಗಲವಾಗಲಿ

ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರು, ಧರ್ಮಸ್ಥಳ

ಸನ್ಮಾನ್ಯ ಕುಲಪತಿ ಡಾ. ಎಸ್. ರಾಮೇಗೌಡರು ಪ್ರತಿಭಾವಂತರು. ಸದಾ ಚಟುವಟಿಕೆ, ಒಳ್ಳೆಯ ಮಾತುಗಾರಿಕೆ, ವಿಷಯದ ಸ್ಪಷ್ಟವಾದ ಜ್ಞಾನ, ತಾನು ಏನು ಮಾಡಬೇಕೆಂದಿದ್ದೇನೆ ಮತ್ತು ಏನು ಮಾಡಬಲ್ಲೆ ಎಂಬ ಪರಿಜ್ಞಾನ, ಕೆಲಸ ಮಾಡಿಯೇ ತೋರಿಸುವ ಛಲ, ಧೈರ್ಯ - ಇವೆಲ್ಲ ಡಾ. ಎಸ್. ರಾಮೇಗೌಡರಲ್ಲಿ ನಿಚ್ಚಳವಾಗಿ ಕಾಣುವ ಗುಣಗಳು. ಆ ಗುಣಗಳಿಂದಾಗಿಯೇ ಅವರು ಜನರ ಮೇಲೆ ಪ್ರಭಾವ ಬೀರಬಲ್ಲರು.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಒಂದು ಜೈನ ಅಧ್ಯಯನ ಪೀಠವಿದೆ. ಡಾ. ಎಸ್. ರಾಮೇಗೌಡರು ಕುಲಪತಿಗಳಾಗಿ ಆ ಪೀಠದ ಮಾರ್ಗದರ್ಶನ ಮಾಡುತ್ತಾರೆ. ಪೀಠದ ಸಭೆಗಳಲ್ಲಿ ಡಾ. ಎಸ್. ರಾಮೇಗೌಡರು ಅನೇಕ ಸಂದರ್ಭಗಳಲ್ಲಿ ಧರ್ಮದ ಬಗ್ಗೆ ತಮಗಿರುವ ಕಳಕಳಿಯನ್ನು ಮಾತ್ರವಲ್ಲ, ತುಲನಾತ್ಮಕ ದೃಷ್ಟಿಕೋನವನ್ನು ಹಾಗೂ ಆಳವಾದ ಜ್ಞಾನವನ್ನು ತೋರಿಸಿ ಕೊಟ್ಟಿದ್ದಾರೆ. ಒಂದು ರೀತಿಯ ಸರ್ವಧರ್ಮ ಸಮಭಾವ ಹಾಗೂ ಸಮತೋಲ ಅವರು ಸಾಧಿಸಿದ ನಿಲುವು. ಅವರು ಧರ್ಮ ಪಂಡಿತರಲ್ಲ, ಜಿಜ್ಞಾಸುಗಳು, ಬಹಳ ನಿಷ್ಠೆಯ ಜಿಜ್ಞಾಸುಗಳು.

ಡಾ. ಎಸ್. ರಾಮೇಗೌಡರ ಸಾಹಿತ್ಯ ಪ್ರೀತಿ ಎಲ್ಲರಿಗೂ ತಿಳಿದದ್ದು. ನಾಟಕ ಮತ್ತಿತರ ಕಲೆಗಳ ಬಗೆಗೂ ಅವರಿಗೆ ವಿಶೇಷ ಪ್ರೀತಿ, ಅಭಿಮಾನ. ಇದನ್ನು ತಿಳಿದ ನಾವು ಅವರನ್ನು ೧೯೯೩ರಲ್ಲಿ ಶ್ರೀ ಕ್ಷೇತ್ರದಲ್ಲಿ ನಡೆದ ಅರವತ್ತೊಂದನೇ ಸಾಹಿತ್ಯ ಸಮ್ಮೇಳನದ ಮುಖ್ಯ ಅತಿಥಿಗಳಾಗಿ ಆಮಂತ್ರಿಸಿದ್ದೆವು. ಅವರ ವ್ಯಕ್ತಿತ್ವ ಮತ್ತು ಸಾಧನೆಗಳನ್ನು ಯುಕ್ತವಾಗಿ ಸ್ಮರಿಸುವ ಸನ್ಮಾನಪತ್ರವನ್ನು ನೀಡಿ ಅವರನ್ನು ಯೋಗ್ಯವಾಗಿ ಗೌರವಿಸಲಾಯಿತು. ಅವರು ಆ ದಿನ ಧರ್ಮಸ್ಥಳದಲ್ಲಿ ಮಾಡಿದ ಉಪನ್ಯಾಸ ಅವರ ವಾಗ್ಮಿತೆಗೆ ಉತ್ತಮ ನಿದರ್ಶನವಾಗಿತ್ತು. ತಮ್ಮ ಬಹುಶ್ರುತತೆಗೆ ಇನ್ನೊಮ್ಮೆ ಸಾಕ್ಷಿ ಒದಗಿಸಿದರು. ಎಂಥ ಸಭೆಯನ್ನೂ ಅವರು ತಮ್ಮ ವಾಕ್ಶೈಲಿಯಿಂದ ಮಂತ್ರಮುಗ್ಧರನ್ನಾಗಿ ಮಾಡಬಲ್ಲರು.

ಅವರಲ್ಲಿ ಅತಿ ಸುಸ್ಪಷ್ಟವಾಗಿ ಕಾಣುವ ಇನ್ನೊಂದು ಗುಣವೆಂದರೆ ಅವರ ದೈವಭಕ್ತಿ. ಡಾ. ಎಸ್. ರಾಮೇಗೌಡರು ಮಾತ್ರವಲ್ಲ, ಅವರ ಶ್ರೀಮತಿಯವರೂ ಅನನ್ಯ ದೈವಭಕ್ತರು. ವಿಜ್ಞಾನ, ತಂತ್ರಜ್ಞಾನ, ಆಧುನಿಕತೆ ಇವೆಲ್ಲ ಅವರನ್ನು ದೈವವಿಮುಖರನ್ನಾಗಿ ಮಾಡಿಲ್ಲ. ಅವರ ದೈವವು ಅವರನ್ನು ಕಾಪಾಡುತ್ತದೆ.

ಡಾ. ಎಸ್. ರಾಮೇಗೌಡರಿಗೆ ಅವರೋಹಣ ಎಂಬುದಿಲ್ಲ. ಎಲ್ಲಿಯೂ ಎಲ್ಲವೂ ಆರೋಹಣವೇ. ಅವರು ಯಶಸ್ಸಿನ ಇನ್ನಷ್ಟು ಮೆಟ್ಟಿಲುಗಳನ್ನು ಹತ್ತುತ್ತಿರುವ ಈ ಶುಭ ಸಂದರ್ಭದಲ್ಲಿ ಅವರಿಗೆ ಶ್ರೀ ಮಂಜುನಾಥ ಸ್ವಾಮಿ ಸಕಲ ಸನ್ಮಂಗಲವನ್ನುಂಟುಮಾಡಲಿ ಎಂದು ಹಾರೈಸುತ್ತೇವೆ.

❋ ❋ ❋

ಶ್ರೀ ಮನ್ಮಹಾರಾಜ ನಿರಂಜನ ಜಗದ್ಗುರು ಡಾ. ಗಂಗಾಧರ ರಾಜಯೋಗೀಂದ್ರ ಮಹಾಸ್ವಾಮಿಗಳವರು ಮೂರು ಸಾವಿರಮಠ ಹುಬ್ಬಳ್ಳಿ ಅವರ ಶುಭಾಶೀರ್ವಚನ

ಡಾ. ಶ್ರೀ ಮೂಜಗಂ

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಶ್ರೀ ಎಸ್. ರಾಮೇಗೌಡ ಅವರನ್ನು ಸಾರ್ವಜನಿಕರು ಸನ್ಮಾನ ಮಾಡಲಿರುವ ಸಂಗತಿ ತಿಳಿದು ನಮಗೆ ಅತೀವ ಹರ್ಷಾನಂದವಾಗಿದೆ.

ನಾವು ತಿಳಿದಿರುವಂತೆ ಡಾ. ಎಸ್. ರಾಮೇಗೌಡರು ಉತ್ತಮ ವಾಗ್ಮಿಗಳು, ಶಿಕ್ಷಣ ತಜ್ಞರು ಹಾಗೂ ದಕ್ಷ ಆಡಳಿತಗಾರರು. ಅವರ ಸೇವಾವಧಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯವು ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಸೂಕ್ತ ಮಾರ್ಗದಲ್ಲಿ ಸಾಗಿರುವುದು ಸರ್ವವೇದ್ಯವಾಗಿದೆ. ಸದಾ ಹಸನ್ಮುಖದ ಡಾ. ಎಸ್. ರಾಮೇಗೌಡರು ಇತ್ತೀಚೆಗೆ ಪ್ರಣವಾನಂದ ಪ್ರಶಸ್ತಿ ಪಡೆದದ್ದು ಹೆಮ್ಮೆಯ ಸಂಗತಿಯಾಗಿದೆ.

ಶಿಕ್ಷಣ ರಂಗದಲ್ಲಿನ ತೊಂದರೆ ನಿವಾರಣೆಯಿರಲಿ, ಶಿಕ್ಷಣದ ಪ್ರಗತಿ ಬಗೆಗಿನ ವಿಚಾರಗಳಿರಲಿ ಅವರ ಕಾಳಜಿ ಮುಂಚೂಣಿಯಲ್ಲಿರುತ್ತದೆ. ಅವರ ವ್ಯಕ್ತಿತ್ವ ಶಕ್ತಿಪರಿಪೂರ್ಣ.

❋ ❋ ❋

ಅದ್ವಿತೀಯ ಭಾಷಣ ಪ್ರತಿಭೆಯ ಧೀಮಂತ ಚೇತನ

ಮೋಫ್ಸ್ಪ ರೆ. ವಸಂತ ಪಿ. ದಂಡಿನ್

ಕರ್ನಾಟಕದ ಸಾಂಸ್ಕೃತಿಕ ರಾಜಧಾನಿಯೆಂದು ಕರೆಯಲ್ಪಡುವ ಧಾರವಾಡವು ಸುಂದರವಾದ ನಗರ. ವಿದ್ಯಾಕೇಂದ್ರವಾದ ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯ ನಾಡಿನ ಹಳೆಯ ವಿಶ್ವವಿದ್ಯಾಲಯಗಳಲ್ಲೊಂದಾಗಿದೆ. ಪ್ರಕೃತಿಯ ರಮ್ಯ ಪರಿಸರಲ್ಲಿ ಎದ್ದು ನಿಂತ ಕರ್ನಾಟಕ ವಿಶ್ವವಿದ್ಯಾಲಯದ ಆವರಣ ಬಹಳ ಮೋಹಕವಾದದ್ದು. ಶಾಂತವಾದ ವಾತಾವರಣ ಸುಂದರ ಉದ್ಯಾನಗಳಿಂದ ಕೂಡಿರುವ ವಿಶ್ವವಿದ್ಯಾಲಯ 'ಛೋಟಾ ಮಹಾಬಳೇಶ್ವರ' ಎಂದೇ ಕರೆಯಲ್ಪಡುತ್ತದೆ. ಸುಮಾರು ೪೬ ವರ್ಷಗಳ ಸುದೀರ್ಘ ಇತಿಹಾಸವುಳ್ಳ ಈ ವಿಶ್ವವಿದ್ಯಾಲಯ ಉತ್ತರ ಕರ್ನಾಟಕದ ಜನತೆಯ ಹೃದಯವಾಗಿ, ಜ್ಞಾನದೇಗುಲವಾಗಿ ಬೆಳೆದು ನಿಂತಿದೆ. ಇಂಥ ಸುಂದರ ಕರ್ನಾಟಕ ವಿಶ್ವವಿದ್ಯಾಲಯದ ಬೆಳವಣಿಗೆಯಲ್ಲಿ ಆರು ವರ್ಷಗಳ ಕಾಲ ಕುಲಪತಿಗಳಾಗಿ ಜನಪ್ರಿಯರಾದ ಡಾ. ಎಸ್. ರಾಮೇಗೌಡರ ಆಡಳಿತ ಕಾಲವು ಸುವರ್ಣಯುಗವಾಗಿ ಜನಮನ್ನಣೆ ಗಳಿಸಿದೆ. ಕೀರ್ತಿಪ್ರಾಯವಾಗಿ ಪರಿಣಮಿಸಿದೆ. ವಿಶ್ವವಿದ್ಯಾಲಯದ ಘನತೆ ಗೌರವಗಳು ಹೂವಿನ ಪರಿಮಳದಂತೆ ಹರಡಿವೆ.

ಶಿಕ್ಷಣ, ಸಾಹಿತ್ಯ, ಸಂಸ್ಕೃತಿಗಳಿಗೆ ತಮ್ಮ ಬದುಕನ್ನು ಅರ್ಪಿಸಿಕೊಂಡ ಅಪೂರ್ವ ಚೇತನ ಡಾ. ಎಸ್. ರಾಮೇಗೌಡರು. ಬಾಲ್ಯದಿಂದಲೂ ಪ್ರತಿಭಾವಂತರಾಗಿದ್ದ ಅವರು ವಿದ್ಯಾರ್ಥಿ ಜೀವನದುದ್ದಕ್ಕೂ ಆದರ್ಶ ಮೌಲ್ಯಗಳನ್ನು ತಮ್ಮ ವ್ಯಕ್ತಿತ್ವದಲ್ಲಿ ಬೆಳೆಸಿಕೊಳ್ಳುತ್ತ ಬಂದವರು. ಮೈಸೂರ ಜಿಲ್ಲೆಯ ಕೊಳ್ಳೆಗಾಲ ತಾಲೂಕಿನ ಹೊಂಡರಬಾಳು ಗ್ರಾಮದ ರೈತ ಕುಟುಂಬದಲ್ಲಿ (೧೯೩೪) ಜನಿಸಿದ ಅವರು ಬೆಳೆದದ್ದು ಮೈಸೂರಿನ ಸಾಂಸ್ಕೃತಿಕ ಪರಿಸರದಲ್ಲಿ, ರಾಷ್ಟ್ರಕವಿ ಕುವೆಂಪು ಅವರ ಸಾಹಿತ್ಯಾಭಿಮಾನಿಯಾಗಿ ತಮ್ಮ ಚೇತನಕ್ಕೆ ಜೀವ ಸಂಸ್ಕಾರವನ್ನು ಪಡೆದವರು. ಬೆಂಗಳೂರಿನ ಯುನಿವರ್ಸಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪದವೀಧರರಾದ ಡಾ. ಎಸ್. ರಾಮೇಗೌಡ ಅವರು ಅಧ್ಯಾಪಕ ವೃತ್ತಿಯನ್ನು ಆರಿಸಿಕೊಂಡದ್ದಲ್ಲದೆ ತಮ್ಮ ಕ್ಷೇತ್ರದಲ್ಲಿ ನಿರಂತರ ಸಂಶೋಧನೆ ಮಾಡುವ ಉತ್ಸಾಹ

ಹೊಂದಿದ್ದರು. ಅವರು ಅಮೇರಿಕೆಯ ವಾಶಿಂಗಟನ್ ಸ್ಟೇಟ್ ವಿಶ್ವವಿದ್ಯಾಲಯದಲ್ಲಿ ಡಾ ಝೂಬ್ಲಿಯಾ ಮಾರ್ಗದರ್ಶನದಲ್ಲಿ ಪಿ.ಎಚ್.ಡಿ. ಪದವಿ ಪಡೆದು ಭಾರತಕ್ಕೆ ಹಿಂದಿರುಗಿದರು. ಅವರು ಮನಸ್ಸು ಮಾಡಿದ್ದರೆ ಅಮೇರಿಕೆಯಲ್ಲಿ ನೆಲಸಿ ಅಪಾರ ಹಣ ಗಳಿಸಬಹುದಿತ್ತು. ಆದರೆ ಡಾ. ಎಸ್. ರಾಮೇಗೌಡರಲ್ಲಿ ಧ್ಯೇಯವಾದ, ಭಾರತೀಯ ಸಂಸ್ಕೃತಿಯ ಪ್ರೀತಿ, ತಾನು ಕಲಿತ ವಿದ್ಯೆಯ ಲಾಭ ತನ್ನ ದೇಶದ ಜನತೆಗೆ ಸಿಗಬೇಕೆಂಬ ಆದರ್ಶ ತುಂಬಿಕೊಂಡ ಪರಿಣಾಮವಾಗಿ ಅವರು ತಾಯ್ನಾಡಿಗೆ ಹಿಂದಿರುಗಿದರು. ಬೆಂಗಳೂರಿನ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಸಂಸ್ಥಾಪಕ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ ಡಾ. ಎಸ್. ರಾಮೇಗೌಡರು ಮುಂದೆ ಪಾಂಡಿಚೇರಿಯಲ್ಲಿ ಇಂಜನಿಯರಿಂಗ್ ಕಾಲೇಜಿನ ಪ್ರಾಚಾರ್ಯರಾಗಿ ಆರು ವರ್ಷ ಕಾಲ ಕಾರ್ಯ ಮಾಡಿದರು. ವಿಜ್ಞಾನ ಹಾಗೂ ತಂತ್ರಜ್ಞಾನ ವಿಷಯಗಳಲ್ಲಿ ಉನ್ನತ ಸಂಶೋಧನೆಗೆ ಅವಕಾಶ ಕಲ್ಪಿಸುವ ಕಂಪ್ಯೂಟರ್ ತಂತ್ರಜ್ಞಾನವನ್ನು ತಮ್ಮ ಸಂಸ್ಥೆಗಳಲ್ಲಿ ಅಳವಡಿಸಿದ ಕೀರ್ತಿ ಡಾ. ಎಸ್. ರಾಮೇಗೌಡರಿಗೆ ಸಲ್ಲುತ್ತದೆ. ಡಾ. ಎಸ್. ರಾಮೇಗೌಡರು ಹೊರನಾಡಿನ ಪಾಂಡಿಚೇರಿಯಲ್ಲಿದ್ದರೂ ಅವರ ಹೆಸರು ದೇಶಾದ್ಯಂತ ಹರಡಿತ್ತು. ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಡಾ. ಎಸ್. ರಾಮೇಗೌಡ ಅವರು ಕುಲಪತಿಯಾಗಿ ನೇಮಕಗೊಂಡಿದ್ದಾರೆಂದು ಪತ್ರಿಕೆಗಳಲ್ಲಿ ಪ್ರಕಟವಾದಾಗ (ಜೂನ ೩೦. ೧೯೯೦) ಎಲ್ಲೆಡೆ ಆಶ್ಚರ್ಯ ಸಂಭ್ರಮದ ವಾತಾವರಣ ಉಂಟಾಯಿತು. ಜುಲೈ ೨, ೧೯೯೦ ರಂದು ಅವರು ಕುಲಪತಿ ಹುದ್ದೆಯನ್ನು ಅಲಂಕರಿಸಿದಾಗ ಬೆರಗು ಕುತೂಹಲದ ಕಣ್ಣಿನಿಂದ ಎಲ್ಲರೂ ನೋಡತೊಡಗಿದರು.

ಡಾ. ಎಸ್. ರಾಮೇಗೌಡರದು ಆಕರ್ಷಕ ವ್ಯಕ್ತಿತ್ವ, ಪ್ರಸನ್ನಮುಖ, ಇವೆಲ್ಲಕ್ಕಿಂತ ಮುಖ್ಯವಾಗಿ ಅವರ ಸಮ್ಮೋಹನಗೊಳಿಸುವ ಮಾತುಗಾರಿಕೆ ನೋಡಿ ಪ್ರಾಧ್ಯಾಪಕರು, ಆಡಳಿತ ಸೌಧದ ಅಧಿಕಾರಿಗಳು ಚಕಿತಗೊಂಡರು. ಡಾ. ಎಸ್. ರಾಮೇಗೌಡರು ಈಗಾಗಲೆ ಶೈಕ್ಷಣಿಕ ಆಡಳಿತ ನಡೆಸಿ ಪಳಗಿದ್ದರು. ಅವರ ಚಲನಶೀಲ ವ್ಯಕ್ತಿತ್ವ ವಿದ್ವತ್ತು, ಗಾಂಭೀರ್ಯ, ಮಾತುಗಾರಿಕೆ, ಎಲ್ಲೆಡೆ ಹರಡಿತು. ಡಾ. ಎಸ್. ರಾಮೇಗೌಡರ ಭಾಷಣ ಕೇಳಿದವರು ಅವರ ವಾಗ್ಮಿತೆಗೆ ತಲೆಬಾಗತೊಡಗಿದರು.

ಡಾ. ಎಸ್. ರಾಮೇಗೌಡರು ವಿದ್ಯಾರ್ಥಿ ಜೀವನದಿಂದಲೂ ಭಾಷಣಕಾರರಾಗಿದ್ದರು. ಚರ್ಚಾ ಸ್ಪರ್ಧೆಗಳಲ್ಲಿ ಭರ್ಜರಿಯಾಗಿ ಮಾತನಾಡಿ ಪಾರಿತೋಷಕಗಳನ್ನು ಪಡೆಯುತ್ತಿದ್ದ ಅವರು ತಮ್ಮ ಜೀವನದುದ್ದಕ್ಕೂ ಭಾಷಣ ಕಲೆಯನ್ನು ಬೆಳೆಸಿಕೊಂಡು ಬಂದ ಧೀಮಂತರು. ಕೇಳುವವರ ಮನಸ್ಸನ್ನು ಸೆರೆಹಿಡಿದು ಆಕರ್ಷಿಸಬಲ್ಲ ಜಾಣ್ಮೆ ಹಾಗೂ ಮಾತುಗಾರಿಕೆಯಲ್ಲಿ ಅವರು ಬಳಸುವ ಶಬ್ದಸಂಪತ್ತು ಎಂಥವರನ್ನೂ ದಂಗು ಬಡಿಸುತ್ತದೆ. ಭಾಷಣಕಾರನಿಗೆ ಬೇಕಾದ ಪ್ರಸಂಗಾವಧಾನ ಅವರಲ್ಲಿದೆ. ಸಮಯ ಸ್ಫೂರ್ತಿಯಿಂದ ವಿಷಯದ ಸುತ್ತ ಮಾತಿನ ಮಾಲೆಯನ್ನು ಹೆಣೆಯುವುದು ಅವರ ವೈಶಿಷ್ಟ್ಯ. ಇದಕ್ಕೆ ಮುಖ್ಯವಾಗಿ ಬೇಕಾದದ್ದು ಅಪಾರವಾದ ಓದು. ಯಾರು ವಿದ್ಯಾರ್ಥಿಯಾಗಿದ್ದಾಗ ಚೆನ್ನಾಗಿ ಸಾಹಿತ್ಯ ಹಾಗೂ ಪ್ರಪಂಚಜ್ಞಾನದ ವಿಚಾರಗಳನ್ನು ಅಭ್ಯಾಸ ಮಾಡುತ್ತಾರೋ ಅವರಿಗೆ ಮುಂದಿನ ಜೀವನದುದ್ದಕ್ಕೂ ಅದು ದಾರಿ ಬುತ್ತಿಯಂತೆ ಸಹಾಯಕವಾಗುತ್ತದೆ. ಡಾ. ಎಸ್.

ರಾಮೇಗೌಡರ ವಾಚನಾಭಿರುಚಿ ಹಾಗೂ ಅದ್ಭುತ ಸ್ಮರಣಶಕ್ತಿ ಆಶ್ಚರ್ಯವನ್ನುಂಟು ಮಾಡುತ್ತದೆ. ಸಾಹಿತ್ಯ, ಸಂಗೀತ, ಕಲೆ, ವಿಜ್ಞಾನ, ಸಮಾಜವಿಜ್ಞಾನ, ಹೀಗೆ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ದಣಿವಿಲ್ಲದೆ ಮಾತನಾಡುವ ಶಕ್ತಿ ಹಾಗೂ ಪಾಂಡಿತ್ಯ ಡಾ. ಎಸ್. ರಾಮೇಗೌಡರಲ್ಲಿದೆ. ಅವರು ಸಾಹಿತ್ಯದ ವಿಷಯವಾಗಿ ಮಾತನಾಡುತ್ತಿದ್ದರೆ ಇವರು ಶ್ರೇಷ್ಠ ಸಾಹಿತಿಗಳೆಂದೂ, ವಿಜ್ಞಾನದ ವಿಷಯವಾಗಿ ಮಾತನಾಡಲು ತೊಡಗಿದರೆ ದೊಡ್ಡ ವಿಜ್ಞಾನಿಗಳೆಂದೂ ಅನಿಸುವ ಹಾಗೆ ಮಾತನಾಡುತ್ತಾರೆ. ಡಾ. ಎಸ್. ರಾಮೇಗೌಡರ ಭಾಷಣ ಕೇಳುವದೆಂದರೆ ನಮ್ಮ ಜೀವನದ ಒಂದು ಸುಂದರ ಸಮಯವೆನ್ನಬಹುದು. ಧರ್ಮ, ಆಧ್ಯಾತ್ಮ ವಿಷಯದಲ್ಲಿ ಅವರ ತಿಳುವಳಿಕೆಯೂ ಅಗಾಧವಾದದ್ದು. ಮುಖ್ಯವಾಗಿ ಡಾ. ಎಸ್. ರಾಮೇಗೌಡರಲ್ಲಿ ಜಾತೀಯತೆ ಆಗಲಿ, ಸಂಕುಚಿತ ಮನೋಭಾವವಾಗಲಿ, ಸುಳಿಯುವದಿಲ್ಲ. ಅವರು ಅಪ್ಪಟ ವಿಶ್ವಮಾನವರು. ನಮ್ಮ ಆಲ್‌ಸೈಂಟ್ಸ ಚರ್ಚ ಸಭಾ ಭವನದಲ್ಲಿ ಕ್ರೈಸ್ತ ಜನಸಮೂಹವನ್ನುದ್ದೇಶಿಸಿ ಡಾ. ಎಸ್. ರಾಮೇಗೌಡರು ಮೂರು ನಾಲ್ಕು ಬಾರಿ ಮಾತನಾಡಿದ್ದಾರೆ. ಅವರ ಕ್ರೈಸ್ತ ಧರ್ಮಾಭಿಮಾನ ಮತ್ತು ವಿಶ್ವ ಮಾನವ ಪ್ರೀತಿ, ಬಂಧುತ್ವ, ಅಲ್ಪ ಸಂಖ್ಯಾತರ ಬಗೆಗೆ ಇರುವ ಅಪಾರ ಪ್ರೀತಿ ವಾತ್ಸಲ್ಯ ನೋಡಿ ನಮಗೆ ಹರ್ಷವಾಯಿತು. ಡಾ. ಎಸ್. ರಾಮೇಗೌಡರು ವಿಶ್ವಧರ್ಮದ ಆರಾಧಕರು. ಅವರಲ್ಲಿ ದೈವ ಚೈತನ್ಯವಿದೆ. ಸದಾ ಉತ್ಸಾಹದ ಬುಗ್ಗೆಯಾಗಿ ನಗುನಗುತ್ತಾ ಮಾತನಾಡುವ ಡಾ. ಎಸ್. ರಾಮೇಗೌಡರಲ್ಲಿ ವಿದ್ವತ್ತಿನ ಗಾಂಭೀರ್ಯವಿದೆ. ಮಗುವಿನ ಮುಗ್ಧತನವೂ ಮಾಗಿದ ಜೀವನಾನುಭವವೂ ಸ್ನೇಹ ಪ್ರೀತಿಗಳೂ ಸಂಗಮಿಸಿದ್ದನ್ನು ನಾವು ಕಾಣುತ್ತೇವೆ. ಕುಲಪತಿಗಳಾದವರಿಗೆ ಅವರ ಆಪ್ತ ಕಾರ್ಯದರ್ಶಿ ಇಲ್ಲವೆ ಸಹಾಯಕರು ಭಾಷಣದ ಟಿಪ್ಪಣೆಗಳನ್ನು ಸಾಮಾನ್ಯವಾಗಿ ಹಾಕಿಕೊಡುತ್ತಾರೆ. ಆದರೆ ಡಾ. ಎಸ್. ರಾಮೇಗೌಡರಿಗೆ ಯಾವ ಟಿಪ್ಪಣಿ ಅಗತ್ಯವೂ ಇಲ್ಲ. ಚಲಿಸುವ ವಿಶ್ವಕೋಶದಂತೆ ಅವರು ಯಾವ ವಿಷಯವೇ ಇರಲಿ, ಯಾವ ಸಭೆ ಸಮಾರಂಭಗಳೇ ಇರಲಿ ಅದ್ಭುತವಾಗಿ ಮಾತನಾಡಿ ಸಮಾರಂಭಕ್ಕೆ ಕಳೆ ತರುತ್ತಾರೆ. ಡಾ. ಎಸ್. ರಾಮೇಗೌಡರು ಧಾರವಾಡದ ಸಾಹಿತ್ಯಿಕ, ಸಾಂಸ್ಕೃತಿಕ ಸಮಾರಂಭಗಳ ರೂವಾರಿಗಳೂ, ಅದರಲ್ಲಿ ಪಾಲ್ಗೊಂಡ ಧೀಮಂತರೂ ಆಗಿದ್ದಾರೆ. ಕರ್ನಾಟಕ ವಿದ್ಯಾವರ್ಧಕ ಸಂಘ, ಸಾಹಿತ್ಯ ಪರಿಷತ್ತು, ವಿಶ್ವವಿದ್ಯಾಲಯದ ವಿವಿಧ ವಿಭಾಗಗಳ ವಿಚಾರ ಸಂಕಿರಣಗಳಲ್ಲಿ, ಕಾಲೇಜುಗಳ ಸಮಾರಂಭಗಳಲ್ಲಿ ಡಾ. ಎಸ್. ರಾಮೇಗೌಡರು ಅತಿಥಿಯಾಗಿ ಪಾಲ್ಗೊಂಡು ತಮ್ಮ ಭಾಷಣದ ಮೂಲಕ ರಸದೌತಣ ನೀಡುತ್ತಾ ಬಂದಿದ್ದಾರೆ. ಡಾ. ಎಸ್. ರಾಮೇಗೌಡರು ವಿಶ್ವವಿದ್ಯಾಲಯಕ್ಕೆ ಕುಲಪತಿಯಾಗಿ ಬಂದ ದಿನದಿಂದಲೂ ವಿಶ್ವವಿದ್ಯಾಲಯದ ವಾತಾವರಣವೇ ಬದಲಾಗಿದೆ. ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಯ ಕೇಂದ್ರವನ್ನಾಗಿ ಅವರು ನಿರ್ಮಾಣ ಮಾಡಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಗಾಂಧೀಭವನದಲ್ಲಿ ಜ್ಞಾನಪೀಠ ಪ್ರಶಸ್ತಿ ವಿಜೇತ ಡಾ. ಗೋಕಾಕರಿಗೆ ಅವರು ಮಾಡಿಸಿದ ದೊಡ್ಡ ಸನ್ಮಾನ ಅಭೂತಪೂರ್ವವಾದುದು. ಪ್ರತಿ ವರ್ಷ ವಿವಿಧ ವ್ಯಾಖ್ಯಾನಮಾಲೆ, ವಿಶೇಷ ಉಪನ್ಯಾಸ, ಕವಿದಿನ, ಘಟಿಕೋತ್ಸವ ಸಮಾರಂಭಗಳಿಗೆ ರಾಷ್ಟ್ರಮಟ್ಟದ ಖ್ಯಾತಿಯ ಸಾಹಿತಿ, ವಿದ್ವಾಂಸರನ್ನು, ವಿಜ್ಞಾನಿಗಳನ್ನು ಕರೆದು ಅವರಿಂದ ಉಪನ್ಯಾಸ ಮಾಡಿಸಿ ಸಾಂಸ್ಕೃತಿಕ ಉತ್ಸವವನ್ನಾಗಿ ಆಚರಿಸುವಂತಾದುದು ಅವರ ನಾಯಕತ್ವದ

ಮಾರ್ಗದರ್ಶನದ ದ್ಯೋತಕವಾಗಿದೆ. ಕನ್ನಡ ಭಾಷೆಗೆ ಮಹಾಕೋಶವನ್ನು ರಚಿಸಿಕೊಟ್ಟ ರೆ. ಎಫ್. ಕಿಟೆಲ್‌ರ ಶಬ್ದಕೋಶದ ಶತಮಾನೋತ್ಸವವನ್ನು ಜರ್ಮನಿ ದೇಶದ ಸಹಕಾರದಿಂದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಂತರಾಷ್ಟ್ರೀಯ ವಿಚಾರ ಸಂಕಿರಣ ಜರುಗಿಸಿರುವುದು ಒಂದು ದೊಡ್ಡ ಸಾಧನೆಯಾಗಿದೆ. ಜರ್ಮನಿ, ಹಾಲಂಡ, ಮೊದಲಾದ ದೇಶಗಳಿಂದ ಬಂದ ವಿದ್ವಾಂಸರು ಈ ವಿಚಾರಸಂಕಿರಣವನ್ನು ಮುಕ್ತಕಂಠದಿಂದ ಶ್ಲಾಘಿಸಿದರು. ಟ್ಯೂಬಿಂಗನ್ ವಿಶ್ವವಿದ್ಯಾಲಯದ ಡಾ. ಬ್ರುಕ್ನರ್ ಅವರು ಡಾ. ಎಸ್. ರಾಮೇಗೌಡರ ಸಂಘಟನಾ ಶಕ್ತಿಯನ್ನು ಮುಕ್ತಕಂಠದಿಂದ ಪ್ರಶಂಶಿಸಿದರು. ಆ ಸಮಾರಂಭದಲ್ಲಿ ನನ್ನನ್ನು ಅವರು ಆಮಂತ್ರಿಸಿದ್ದರು. ಆದರಲ್ಲಿ ಪಾಲ್ಗೊಂಡ ನನಗೆ ಇಂದಿಗೂ ಸಂತಸದ ನೆನಪು ಅಚ್ಚಳಿಯದೆ ಉಳಿದಿದೆ.

ಡಾ. ಎಸ್. ರಾಮೇಗೌಡರು ಆದರ್ಶ ಶಿಕ್ಷಣವೇತ್ತರೂ ಆಗಿದ್ದಾರೆ. ಅವರು ಇಂಜಿನಿಯರಿಂಗ್ ಪದವೀಧರರಾದರೂ ವಿದೇಶಕ್ಕೆ ತೆರಳುವ ಮನಸ್ಸು ಮಾಡದೆ ತಮ್ಮ ಜ್ಞಾನ ವಿದ್ಯೆಯನ್ನು ನಮ್ಮ ದೇಶದ ಪ್ರತಿಭಾವಂತರಿಗೆ ನೀಡಲು ತಮ್ಮ ಬದುಕನ್ನು ಮುಡಿಪಿಟ್ಟವರು ಡಾ. ಎಸ್. ರಾಮೇಗೌಡರು. ಈ ದೃಷ್ಟಿಯಿಂದ ಪ್ರತಿಭಾಪಲಾಯನ ಮಾಡುತ್ತಿರುವ ಭಾರತೀಯ ವಿಜ್ಞಾನಿಗಳಿಗೆ ಮಾದರಿಯಾಗಿದ್ದಾರೆ. ವಿದೇಶಕ್ಕೆ ಹೋಗಿ ವಿದ್ಯಾ ವ್ಯಾಸಂಗ ಮಾಡಿ ಬಂದು ಭಾರತದ ವಿಜ್ಞಾನ ಪ್ರಪಂಚದಲ್ಲಿ ಬೆಳಗಬೇಕೆಂಬ ಅವರ ಧೋರಣೆ ನಿಜಕ್ಕೂ ಆದರಣೀಯ ವಿಚಾರವಾಗಿದೆ. ಡಾ. ಎಸ್. ರಾಮೇಗೌಡರು ತಾಂತ್ರಿಕ ಕ್ಷೇತ್ರ ವಿಜ್ಞಾನ ಕ್ಷೇತ್ರದಲ್ಲಿ ಉನ್ನತ ಸಂಶೋಧನೆಗೆ ತಮ್ಮ ಮನಸ್ಸನ್ನು ತೆರೆದುಕೊಂಡ ಧೀಮಂತರು. ಅವರ ಅನೇಕ ಸಂಶೋಧನೆ ಬರಹಗಳು ಪಾಶ್ಚಾತ್ಯ ಪಂಡಿತ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಡಾ. ಎಸ್. ರಾಮೇಗೌಡರು ಶಿಕ್ಷಣದ ಪ್ರಾಥಮಿಕ ಹಂತದಿಂದಲೂ ಮಾತೃ ಭಾಷೆಯ ಶಿಕ್ಷಣವೇ ಸರ್ವೋತ್ಕೃಷ್ಟವಾದುದು ಎಂಬ ಅಭಿಮತ ವ್ಯಕ್ತಪಡಿಸುತ್ತಾ ಬಂದಿದ್ದಾರೆ. ಕನ್ನಡ ನಾಡಿನಲ್ಲಿ ಕನ್ನಡ ಭಾಷೆಗೆ ಪ್ರಥಮ ಸ್ಥಾನವಿರಬೇಕು. ಆಡಳಿತದಲ್ಲಿ, ಶಿಕ್ಷಣದಲ್ಲಿ ಕನ್ನಡ ಬೆಳೆಯಬೇಕು ಎಂಬ ಆದರ್ಶ ಭಾವನೆಯನ್ನು ಅವರು ಪ್ರಕಟಪಡಿಸಿದ್ದಾರೆ. ವಿಶ್ವವಿದ್ಯಾಲಯದ ಆಡಳಿತದಲ್ಲೂ ಕನ್ನಡ ಅನುಷ್ಠಾನವನ್ನು ಅವರು ಜಾರಿಗೆ ತಂದಿದ್ದಾರೆ. ಕುಲಪತಿಯಾಗಿ ಕನ್ನಡದಲ್ಲಿ ಭಾಷಣ, ಚರ್ಚೆ ನಡೆಸುವದಲ್ಲದೆ, ಸಂಬಂಧಿಸಿದ ಪತ್ರಗಳಿಗೆ ಟಿಪ್ಪಣಿಗಳನ್ನೂ ಹಾಕುತ್ತಾ ಬಂದಿದ್ದು ಕಾಣಿಸುತ್ತದೆ.

ಡಾ. ಎಸ್. ರಾಮೇಗೌಡರಿಗೆ ಸಾಹಿತ್ಯದಲ್ಲಿ ಅಪಾರ ಅಭಿಮಾನ, ಅಭಿರುಚಿ. ಡಾ. ಶಿವರಾಮ ಕಾರಂತರಂಥ ದೊಡ್ಡ ದೊಡ್ಡ ಸಾಹಿತಿಗಳನ್ನು ವಿಶ್ವವಿದ್ಯಾಲಯಕ್ಕೆ ಕರೆಸುವದು, ಅವರಿಂದ ಉಪನ್ಯಾಸ ಮಾಡಿಸುವದು ಮಾಡುತ್ತಾ ಬಂದ ಡಾ. ಎಸ್. ರಾಮೇಗೌಡರು ಸ್ವತಃ ಸಾಹಿತ್ಯಪ್ರಿಯರಾಗಿದ್ದಾರೆ. ಕುಲಪತಿಯಾಗಿ ಅಧಿಕಾರ ಸ್ವೀಕಾರ ಮಾಡಿದ ಕೂಡಲೇ ಧಾರವಾಡದಲ್ಲಿರುವ ವರಕವಿ ಅಂಬಿಕಾತನಯದತ್ತ ನಿವಾಸಕ್ಕೆ ಭೇಟಿ ನೀಡಿದ್ದಲ್ಲದೆ ಬೇಂದ್ರೆ ಕವಿದಿನ ಆಚರಣೆ, ಬೇಂದ್ರೆ ಶತಮಾನೋತ್ಸವದ ಮಾರ್ಗದರ್ಶಕರಾಗಿ ಕಾರ್ಯಮಾಡಿದ್ದಾರೆ. ಧಾರವಾಡದ ಸಾಹಿತ್ಯಕ ಸಮಾರಂಭಗಳಲ್ಲಿ ಲೆಕ್ಕವಿಲ್ಲದಷ್ಟು ಬಾರಿ ಮಾತನಾಡಿದ್ದಾರೆ. ಯುವ ಬರಹಗಾರರಿಗೆ ಸ್ಫೂರ್ತಿ ತುಂಬಿದ್ದಾರೆ.

ಡಾ. ಎಸ್. ರಾಮೇಗೌಡರು ವಿಶ್ವವಿದ್ಯಾಲಯದಲ್ಲಿ ಆರಂಭಿಸಿದ 'ವಿಶ್ವಚೇತನ' ಸಾಂಸ್ಕೃತಿಕ ವೇದಿಕೆ ಸಾಹಿತ್ಯ, ಸಾಂಸ್ಕೃತಿಕ ವೇದಿಕೆಯಾಗಿ ಬೆಳೆದಿದೆ. ವಿಶ್ವವಿದ್ಯಾಲಯ ಪ್ರಗತಿ ಹೊಂದಬೇಕಾದರೆ ಅದರ ಶೈಕ್ಷಣಿಕ ಹಾಗೂ ಆಡಳಿತಾಂಗ ಸರಿಯಾಗಿ ಕಾರ್ಯ ನಿರ್ವಹಿಸಬೇಕಾಗುತ್ತದೆ. ಭಾರತದ ಹಲವು ವಿಶ್ವವಿದ್ಯಾಲಯಗಳು ಯಾವ ಯಾವದೋ ಕಾರಣಗಳಿಂದ ಚಳುವಳಿ, ಮುಷ್ಕರಗಳಿಂದ ಕಾರ್ಯ ಮಾಡಲಾರದೇ ಹೋಗಿರುವ ಕೆಟ್ಟ ವಾತಾವರಣದಲ್ಲಿ ನರಳುತ್ತಿರುವಾಗ ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯ ಡಾ. ಎಸ್. ರಾಮೇಗೌಡರ ಕುಲಪತಿಯ ಅಧಿಕಾರಾವಧಿಯ ಆರು ವರ್ಷಗಳಲ್ಲಿ ಯಾವ ಚಳುವಳಿ ಮುಷ್ಕರಗಳಿಲ್ಲದೆ ದೇಶಕ್ಕೆ ಮಾದರಿಯಾಗಿದೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ ಶೈಕ್ಷಣಿಕ ಬದುಕಿಗೆ ಉತ್ತಮ ವಾತಾವರಣ ನಿರ್ಮಾಣಗೊಂಡಿದೆ. ಯಾವ ಸಮಸ್ಯೆಯನ್ನಾಗಲಿ ಸರ್ವಜನಹಿತ ದೃಷ್ಟಿಯಿಂದ ಬಿಡಿಸಿ ಶಾಂತಿ ಸಾಮರಸ್ಯ ಕಾಪಾಡುವಲ್ಲಿ ಆಡಳಿತದಕ್ಷತೆ, ನೈಪುಣ್ಯ ಸಾಧಿಸುವಲ್ಲಿ ಡಾ. ಎಸ್. ರಾಮೇಗೌಡರು ಉಳಿದ ವಿಶ್ವವಿದ್ಯಾಲಯಗಳಿಗಿಂತ ಮೇಲುಗೈ ಸ್ಥಾಪಿಸಿದ್ದಾರೆ ಎಂದು ಹೇಳಿದರೆ ಅದು ಅತಿಶಯೋಕ್ತಿಯಾಗುವುದಿಲ್ಲ. ಡಾ. ಎಸ್. ರಾಮೇಗೌಡರ ಆಡಳಿತದಲ್ಲಿ ವಿಶ್ವವಿದ್ಯಾಲಯ ಶೈಕ್ಷಣಿಕ ಉನ್ನತಿ ಸಾಧಿಸುವಲ್ಲಿ ಯಶಸ್ವಿಯಾಗಿದೆ. ಯಾವ ಹಗರಣಗಳಿಲ್ಲದೆ ವಿಶ್ವವಿದ್ಯಾಲಯದಲ್ಲಿ ಡಾ. ಎಸ್. ರಾಮೇಗೌಡ ಆದರ್ಶ ಆಡಳಿತ ನಡೆಸಿ ಜನಪ್ರಿಯರಾಗಿದ್ದಾರೆ. ಬಹಳ ಮುಖ್ಯವಾದ ಮಾತು ಏನೆಂದರೆ ಸಿನೇಟ, ಸಿಂಡಿಕೇಟ, ಅಕ್ಯಾಡೆಮಿಕ ಕೌನ್ಸಿಲ್‌ಗಳ ಪೂರ್ಣ ವಿಶ್ವಾಸ, ಬೆಂಬಲ ಪಡೆದುಕೊಂಡು ಸರ್ವಾಂಗೀಣ ಪ್ರಗತಿ ಸಾಧಿಸುವಲ್ಲಿ ಅವರು ಯಶಸ್ವಿಯಾದುದು ಒಂದು ದೊಡ್ಡ ಸಾಧನೆಯೇ ಆಗಿದೆ. ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೂ, ಪ್ರಾಧ್ಯಾಪಕರೂ, ಆಡಳಿತಾಂಗದವರೂ ಶಾಂತಿ, ಸೌಮನಸ್ಯದಿಂದ ತಮ್ಮ ತಮ್ಮ ಕಾರ್ಯಗಳನ್ನು ನಿಷ್ಠೆಯಿಂದ ಸಾಧಿಸಲು ಡಾ. ಎಸ್. ರಾಮೇಗೌಡರು ಉತ್ತಮ ಪರಿಸರ ವಾತಾವರಣ ನಿರ್ಮಿಸಿದ್ದಾರೆ.

ಡಾ. ಎಸ್. ರಾಮೇಗೌಡರ ಆಡಳಿತಾವಧಿಯಲ್ಲಿ ಅನೇಕ ಅಭಿವೃದ್ಧಿ ಪರ ಕಾರ್ಯಗಳು ಕರ್ನಾಟಕ ವಿಶ್ವವಿದ್ಯಾಲಯದಲ್ಲಾಗಿವೆ. ಮುಖ್ಯವಾಗಿ ಬೆಳಗಾಂವಿಯಲ್ಲಿರುವ ಸ್ನಾತಕೋತ್ತರ ಕೇಂದ್ರಕ್ಕೆ ಒಂದು ಭವ್ಯವಾದ ಕಟ್ಟಡದ ನಿರ್ಮಾಣವಾದದ್ದು ಒಂದು ದೊಡ್ಡ ಸಾಧನೆ. ಎಪ್ಪತ್ತರ ದಶಕದಲ್ಲೇ ಸ್ನಾತಕೋತ್ತರ ಕೇಂದ್ರವಾಗಿದ್ದರೂ ಅಲ್ಲಿ ತನ್ನದೇ ಆದ ನಿವೇಶನ (ಕ್ಯಾಂಪಸ್) ಆಗಲಿ, ಕಟ್ಟಡವಾಗಲಿ, ಇರಲಿಲ್ಲ. ಡಾ. ಎಸ್. ರಾಮೇಗೌಡರು ಸರ್ಕಾರದ ಮನ ಒಲಿಸಿ ಅರಣ್ಯ ಇಲಾಖೆಯಿಂದ ಹಲವು ಎಕರೆಗಳುಳ್ಳ ಬೂತರಾಮನಹಟ್ಟಿ ಪ್ರದೇಶವನ್ನು ನಿವೇಶನವಾಗಿ ಪಡೆದುಕೊಂಡದ್ದಲ್ಲದೆ ಅಲ್ಲಿ ವಿಶ್ವವಿದ್ಯಾಲಯದ ಭವ್ಯ ಕಟ್ಟಡ ನಿರ್ಮಿಸಿದ್ದು ಅವರ ವಿಶೇಷ ಸಾಧನೆಯಾಗಿದೆ. ವಿಶ್ವವಿದ್ಯಾಲಯದ ಧನ ಸಹಾಯ ಆಯೋಗದಿಂದ ಹಲವು ಕೋಟಿ ರೂಪಾಯಿಗಳನ್ನು ಅನುದಾನವಾಗಿ ಪಡೆದುಕೊಂಡ ಹೆಗ್ಗಳಿಕೆಯು ಡಾ. ಎಸ್. ರಾಮೇಗೌಡರದಾಗಿದೆ. ಇದರಿಂದ ವಿಶ್ವವಿದ್ಯಾಲಯ ಆರ್ಥಿಕವಾಗಿ ಬೆಳೆದು ಅಭಿವೃದ್ಧಿಯ ಹಾದಿಯತ್ತ ಸಾಗಲು ಸಾಧ್ಯವಾಗಿದೆ. ವಿಶ್ವವಿದ್ಯಾಲಯದಲ್ಲಿ ಕಂಪ್ಯೂಟರ್ ಅಳವಡಿಸಿ ವೈಜ್ಞಾನಿಕ ಸಂಶೋಧನೆಗೆ ಹೆಚ್ಚಿನ ಅವಕಾಶ ಕಲ್ಪಿಸಲಾಗಿದೆ.

ಗ್ರಂಥಾಲಯದ ಬೆಳವಣಿಗೆ, ಪ್ರಸಾರಾಂಗದ ಮೂಲಕ ವಿವಿಧ ಪುಸ್ತಕ ಪ್ರಕಟಣೆ, ನಿಯತಕಾಲಿಕ ಪ್ರಕಟಣೆ ಮಾಡಲಾಗಿದ್ದು, ಕ್ರೀಡೆ ಕಲೆಗಳಲ್ಲೂ ಸಾಧನೆ ಮಾಡಲು ನೆರವು ನೀಡಲಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ ಸರ್ವ ರಂಗಗಳಲ್ಲಿಯೂ ಅಮೋಘ ಸಾಧನೆ ಮಾಡಿ ಮುನ್ನಡೆಯಲು ಡಾ. ಎಸ್. ರಾಮೇಗೌಡರ ಮುತ್ಸದ್ದಿತನ, ಕ್ರಿಯಾಶೀಲ ವ್ಯಕ್ತಿತ್ವದ ಆಡಳಿತ ಕಾರಣವಾಗಿದೆ.

ಬಾಸೆಲ್ ಮಿಶನ್ ಶಿಕ್ಷಣ ಸಂಸ್ಥೆಗಳ ಅಭ್ಯುದಯದ ಬಗೆಗೆ ಡಾ. ಎಸ್. ರಾಮೇಗೌಡರಿಗೆ ಅಪಾರ ಆಸಕ್ತಿ. ಅವರು ನೀಡುತ್ತಾ ಬಂದ ನಿರಂತರ ಮಾರ್ಗದರ್ಶನ, ಸಹಾಯ, ಸಹಕಾರಗಳು ನಮ್ಮ ಶಿಕ್ಷಣ ಸಂಸ್ಥೆಗಳ ಪ್ರಗತಿಗೆ ಕಾರಣವಾಗಿದೆ. ಡಾ. ಎಸ್. ರಾಮೇಗೌಡರು ದೊಡ್ಡ ವ್ಯಕ್ತಿತ್ವವುಳ್ಳ ಮೇಧಾವಿಗಳು. ಯಾರಲ್ಲಿಯೇ ಪ್ರತಿಭೆ ಇರಲಿ, ಅದನ್ನು ಗುರುತಿಸಿ ಪ್ರಶಂಸಿಸುವ ವಿಶಾಲ ಹೃದಯವುಳ್ಳವರು. ಕನ್ನಡದ ಕ್ರೈಸ್ತ ಧರ್ಮ ಗುರುವಾಗಿ ನಾನು ಮೊದಲು ದಕ್ಷಿಣಭಾರತ ಕ್ರೈಸ್ತ ಮಹಾಸಭೆಗೆ ಮಹಾಧರ್ಮಾಧ್ಯಕ್ಷನಾದಾಗ ಅಭಿನಂದಿಸಿ ಸಂತೋಷಪಟ್ಟವರು ಡಾ. ಎಸ್. ರಾಮೇಗೌಡರು. ಅವರಲ್ಲಿ ದೊಡ್ಡ ಮನಸ್ಸಿದೆ. ಧಾರವಾಡ ಅಭಿಮಾನಿಗಳು ನನಗೆ ಏರ್ಪಡಿಸಿದ ವೈಭವದ ಸನ್ಮಾನ ಸಮಾರಂಭದ ಅಧ್ಯಕ್ಷರಾಗಿ ಡಾ. ಎಸ್. ರಾಮೇಗೌಡರು ಮಾಡಿದ ಅಭಿನಂದನಾ ಭಾಷಣ ಇಂದಿಗೂ ನನ್ನ ಮನಸ್ಸಿನಲ್ಲಿ ಹಸಿರಾಗಿದೆ. ಕ್ರೈಸ್ತ ಮಿಶನರಿಗಳು ಕನ್ನಡ ನಾಡಿಗೆ, ದೇಶಕ್ಕೆ ಸಲ್ಲಿಸಿದ ಅಮೋಘ ಸೇವೆಯನ್ನು ಅವರು ಕೊಂಡಾಡಿದರು. ಧಾರ್ಮಿಕ ಸಹಿಷ್ಣುತೆ, ವಿಶ್ವಬಂಧುತ್ವವನ್ನು ಅವರು ಒತ್ತಿ ಹೇಳಿ ಭಾವೈಕ್ಯತೆಯಿಂದಲೇ ಹೊಸ ರಾಷ್ಟ್ರ ಕಟ್ಟಲು ನಾವು ಕಂಕಣ ಬದ್ಧರಾಗಬೇಕು ಎಂದು ಅವರು ಘೋಷಿಸಿದರು. ಡಾ. ಎಸ್. ರಾಮೇಗೌಡರ ಹೃದಯ ವೈಶಾಲ್ಯ, ಉದಾರ ಮನೋಧರ್ಮ, ಮತ್ತು ಭಾರತದ ಎಲ್ಲ ಧರ್ಮದ ಮತೀಯರ ಬಗೆಗೆ ಇರುವ ಪ್ರೀತಿ ಆದರಗಳನ್ನು ನೋಡಿ ನಾನು ಬೆರಗಾಗಿ ಹೋದೆನು. ಇಂಥ ಕುಲಪತಿಗಳಿಂದ ನಮ್ಮ ನಾಡು ಧನ್ಯ ಎಂದು ಹರ್ಷವಾಯಿತು. ಡಾ. ಎಸ್. ರಾಮೇಗೌಡರು ಕುಲಪತಿಯಾಗಿದ್ದಾಗ ನನಗೆ ಕರ್ನಾಟಕ ವಿಶ್ವವಿದ್ಯಾಲಯ ಗೌರವ ಡಿ. ಲಿಟ್ ಪದವಿ ನೀಡಿ ಗೌರವಿಸಿತು. ಆ ವೈಭವದ ಸಮಾರಂಭ ನನ್ನ ಬಾಳಿನ ಸುವರ್ಣ ಅಧ್ಯಾಯಗಳಲ್ಲೊಂದಾಗಿದೆ. ಕರ್ನಾಟಕ ವಿಶ್ವವಿದ್ಯಾಲಯ ಕ್ರೈಸ್ತ ಮಿಶನರಿಗಳ ತ್ಯಾಗ, ಶಾಂತಿ, ಪ್ರೀತಿಯ ಸೇವೆಯನ್ನು, ಶೈಕ್ಷಣಿಕ ಉನ್ನತಿಯ ಕಾರ್ಯವನ್ನು, ಧಾರ್ಮಿಕ ಸೌಹಾರ್ದದ ಮಹೋನ್ನತಿಯನ್ನು ಮನ್ನಿಸಿ ಮಹಾಧರ್ಮಾಧ್ಯಕ್ಷನಾದ ನನ್ನನ್ನು ಗೌರವಿಸಿದುದು ವಿಶ್ವವಿದ್ಯಾಲಯದ ಇತಿಹಾಸದಲ್ಲಿಯೇ ಅಭೂತಪೂರ್ವ ಘಟನೆಯಾಗಿದೆ. ಅಲ್ಪಸಂಖ್ಯಾತ ಕ್ರೈಸ್ತ ಜನಸಮೂಹಕ್ಕೆ ತೋರಿದ ಪ್ರೀತಿ, ವಿಶ್ವಾಸದ ಮನ್ನಣೆಯಾಗಿದೆ. ಈ ಗೌರವ ಪಡೆಯುವ ಭಾಗ್ಯ ನನ್ನದಾಗಿದ್ದು, ಆದರ ಹಿಂದೆ ಕುಲಪತಿ ಡಾ. ಎಸ್. ರಾಮೇಗೌಡ ಹಾಗೂ ಸಿಂಡಿಕೇಟ ಸದಸ್ಯರ ಪ್ರೀತಿ, ಆದರದ ಒತ್ತಾಸೆ ಕಾರಣವೆಂಬುದನ್ನು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆಯುತ್ತೇನೆ.

ಡಾ. ಎಸ್. ರಾಮೇಗೌಡರು ಬುದ್ಧಿಶಾಲಿಗಳೂ, ಪ್ರತಿಭಾವಂತರೂ, ದಕ್ಷ ಆಡಳಿತಗಾರರೂ, ಧೀಮಂತ ಶಿಕ್ಷಣವೇತ್ತರೂ, ಪ್ರಗಲ್ಭ ಭಾಷಣಕಾರರೂ,

ಆದರ್ಶವಾದಿಗಳೂ, ಧ್ಯೇಯ ಸಂಪನ್ನರೂ, ಉದಾರ ಹೃದಯರೂ, ಸಾಹಿತ್ಯ ಸಂಸ್ಕೃತಿಯ ಆರಾಧಕರೂ, ಉತ್ತಮ ವಿಜ್ಞಾನಿಗಳೂ, ನಾಡಿನ ಶ್ರೇಷ್ಠ ವ್ಯಕ್ತಿ ಶಕ್ತಿಗಳಾಗಿ ಮಹಾಚೇತನರಾಗಿದ್ದಾರೆ. ಅವರು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಆರು ವರ್ಷಕಾಲ ಆರದ ಆಸಕ್ತಿ ಉತ್ಸಾಹ ಲವಲವಿಕೆಯಿಂದ ಕಾರ್ಯ ಮಾಡಿ ಜನಮಾನಸದಲ್ಲಿ ನೆಲೆ ನಿಂತಿದ್ದಾರೆ. ಕುಲಪತಿ ಹುದ್ದೆಯಿಂದ ಡಾ. ಎಸ್. ರಾಮೇಗೌಡರು ನಿವೃತ್ತರಾಗುವುದು ಅವರ ಅಭಿಮಾನಿಗಳಿಗೆ ನೋವಿನ ಸಂಗತಿಯಾಗಿದೆಯಾದರೂ ಇಂತಹ ಇನ್ನೊಂದು ಉನ್ನತ ಹುದ್ದೆಯನ್ನು ಅವರು ಅಲಂಕರಿಸಲಿದ್ದಾರೆ. ಯಾಕೆಂದರೆ ಅವರ ಸೌಜನ್ಯಶೀಲ ವ್ಯಕ್ತಿತ್ವಕ್ಕೆ ವಿಶ್ರಾಂತಿಯೆಂಬುದಿಲ್ಲ. ಭಾವ ಶ್ರೀಮಂತಿಕೆಯಿಂದ ಕೂಡಿದ ಇಂಥ ಅಪೂರ್ವ ವಾಗ್ಮಿಗಳು ಕುಲಪತಿ ಹುದ್ದೆಗೆ ಭೂಷಣ ಪ್ರಾಯರಾಗಿರುವುದು ಸಹಜವೇ ಸರಿ. ಕುಲಪತಿಯಾಗಿ ಆ ಹುದ್ದೆಗೆ ಅರ್ಥವನ್ನು, ಗೌರವವನ್ನು ತಂದುಕೊಟ್ಟು ಅಭಿಮಾನಿಗಳ ಮಹಾಪೂರವನ್ನೇ ಪಡೆದುಕೊಂಡ ಡಾ. ಎಸ್. ರಾಮೇಗೌಡರು ಕೌಟುಂಬಿಕವಾಗಿಯೂ ಆದರ್ಶ ಜೀವನ ನಡೆಸಿದವರು. ಸೌ. ಸುಶೀಲಾ ದೇವಿಯವರು ಅವರ ಜೀವನವನ್ನು ಬೆಳಗಿದ್ದಾರೆ. ಈ ಆದರ್ಶ ದಂಪತಿಗಳಿಗೆ ನಮ್ಮ ಕರ್ತನಾದ ದೇವರ ಕೃಪಾಶೀರ್ವಾದವಿರಲಿ. ದೇವರ ಅನುಗ್ರಹದಿಂದ ಡಾ. ಎಸ್. ರಾಮೇಗೌಡರಿಗೆ ದೀರ್ಘವಾದ ಆಯುರಾರೋಗ್ಯ ಪ್ರಾಪ್ತವಾಗಲಿ. ಅವರಿಂದ ಕನ್ನಡ ಪ್ರಪಂಚಕ್ಕೆ ಇನ್ನಷ್ಟು ಸೇವೆ ಸಲ್ಲುವಂತಾಗಲಿ. ಅವರ ಭಾಷಣಗಳ ಮೆಲುಕು ಅವರ ವ್ಯಕ್ತಿತ್ವದ ನೆನಪನ್ನು ಸದಾ ನಮ್ಮ ಹೃದಯದಲ್ಲಿ ಚಿರಸ್ಥಾಯಿಗೊಳಿಸುವಂತಾಗಲಿ ಎಂದು ಹಾರೈಸಿ ಕರ್ತನಲ್ಲಿ ಪ್ರಾರ್ಥಿಸುತ್ತೇನೆ.

❊ ❊ ❊

ಶುಭ ಹಾರೈಕೆಗಳು

ಚಿತ್ತರಗಿ ಮಹಾಂತಸ್ವಾಮಿಗಳು

ಕರ್ನಾಟಕ ವಿಶ್ವವಿದ್ಯಾಲಯದ ಕ್ರಿಯಾಶೀಲ ಕುಲಪತಿಗಳಾಗಿರುವ ಡಾ. ಎಸ್. ರಾಮೇಗೌಡ ಅವರು ಅಪರೂಪದ ವ್ಯಕ್ತಿತ್ವ ಹೊಂದಿದ ಶ್ರೇಷ್ಠ ಶಿಕ್ಷಣ ತಜ್ಞರು; ದಕ್ಷ ಆಡಳಿತಗಾರರು ಎಂಬುದು ನಮಗೆ ಹೆಮ್ಮೆಯ ಸಂಗತಿಯಾಗಿದೆ. ಅವರ ಸಾಧನೆಯನ್ನು ಗುರುತಿಸಿ, ಅವರನ್ನು ಸನ್ಮಾನಿಸಿ, ಸನ್ಮಾನ ಗ್ರಂಥವನ್ನು ಸಮರ್ಪಿಸಲು ಸಮಿತಿಯು ತೀರ್ಮಾನಿಸಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ. ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಪರಮ ಪೂಜ್ಯ ಡಾ. ವೀರೇಂದ್ರ ಹೆಗ್ಗಡೆಯವರು ಈ ಅನುಕರಣೀಯ ಕಾರ್ಯಕ್ರಮದ ನೇತೃತ್ವ ವಹಿಸಿರುವುದು ನಮಗೆ ಇನ್ನೂ ಅಭಿಮಾನವೆನಿಸಿತು.

ಡಾ. ಎಸ್ ರಾಮೇಗೌಡ ಅವರು ೧೯೯೦ ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಅಧಿಕಾರವಹಿಸಿಕೊಂಡು ಕಳೆದ ಆರು ವರ್ಷಗಳಲ್ಲಿ ವಿಶ್ವವಿದ್ಯಾಲಯದ ಸರ್ವಾಂಗೀಣ ಪ್ರಗತಿಗಾಗಿ ಅವಿಶ್ರಾಂತವಾಗಿ ಪರಿಶ್ರಮಿಸಿದ್ದಾರೆ. ನಿಜವಾದ ಅರ್ಥದಲ್ಲಿ ಅದು ವಿಶ್ವವಿದ್ಯಾಲಯವಾಗುವಂತೆ ಹೊಸಹೊಸ ವಿಷಯಗಳನ್ನು ಆರಂಭಿಸಿ ಅದರ ಜ್ಞಾನ ಕ್ಷಿತಿಜವನ್ನು ವಿಕಾಸಗೊಳಿಸಿದ್ದಾರೆ. ಉನ್ನತ ಮಟ್ಟದ ಕಂಪ್ಯೂಟರ್ ಶಿಕ್ಷಣಕ್ಕೆ ಅನುವಾಗಲು ಸ್ನಾತಕೋತ್ತರ ಮಟ್ಟದಲ್ಲಿ ಎಂ. ಸಿ. ಎ ವ್ಯಾಸಂಗ, ರೇಶ್ಮೆಯ ಕೃಷಿಗೆ ಸಂಬಂಧಪಟ್ಟ ಎಂ. ಎಸ್. ಸಿ ತರಗತಿ, ಮಹಿಳೆ ಹಾಗೂ ಶಿಶು ಸಂಬಂಧಿ ಸ್ನಾತಕೋತ್ತರ ಡಿಪ್ಲೋಮಾ, ಯೋಗಾಭ್ಯಾಸದಲ್ಲಿ ಸ್ನಾತಕೋತ್ತರ ವ್ಯಾಸಂಗ, ಮೈಕ್ರೋ ಎಲೆಕ್ಟ್ರಾನಿನಲ್ಲಿ ಸಂಶೋಧನಾ ಕೇಂದ್ರ ಮೊದಲಾದವುಗಳು ಇವರ ಅವಧಿಯಲ್ಲಿ ಅಸ್ತಿತ್ವಕ್ಕೆ ಬಂದಿವೆ. ಮೂಲೆಗುಂಪಾಗಿದ್ದ ಮುದ್ರಣಾಲಯಕ್ಕೆ ಕಾಯಕಲ್ಪನೀಡಿ ಆಫ್‌ಸೆಟ್ ವ್ಯವಸ್ಥೆ ಮಾಡಿಸಿದ್ದಾರೆ. ಒಂದೇ, ಎರಡೇ ಅವರು ಮಾಡಿದ ಸಾಧನೆಗಳ ಸಾಲುದೀಪ ಬೆಳೆಯುತ್ತ; ಬೆಳಗುತ್ತ ಹೋಗುತ್ತದೆ.

ತೀವ್ರಗತಿಯಿಂದ ಪೂರ್ಣವಾಗಿರುವ ಭೂತರಾಮನಹಟ್ಟಿಯ ಸುಂದರ ಹಾಗೂ ಭವ್ಯ ಬೆಳಗಾವಿ ಸ್ನಾತಕೋತ್ತರ ಕೇಂದ್ರದ ಕಟ್ಟಡಗಳು, ಬಹುದಿನದ ಕನಸಾಗಿದ್ದ ವಿಜಾಪೂರದಲ್ಲಿ ಸ್ನಾತಕೋತ್ತರ ಕೇಂದ್ರದ ಸ್ಥಾಪನೆಯನ್ನು ನನಸಾಗಿಸಿದ್ದು,

ವಿಶ್ವವಿದ್ಯಾಲಯದ ರೂವಾರಿಗಳಲ್ಲೊಬ್ಬರಾದ ಶರಣ ಸಾಹಿತ್ಯದ ಶ್ರೇಷ್ಠ ವಿದ್ವಾಂಸರಾಗಿದ್ದ ಪ್ರೊ. ಶಿ.ಶಿ. ಬಸವನಾಳ ಅವರ ಹೆಸರಿನಲ್ಲಿ ಪ್ರಚಾರೋಪನ್ಯಾಸಮಾಲೆಯನ್ನು ಪ್ರಾರಂಭಿಸಿದ್ದಲ್ಲದೆ ವಿಶ್ವವಿದ್ಯಾಲಯದ ವಾಚನಾಲಯಕ್ಕೆ ಅವರ ಹೆಸರನ್ನಿಟ್ಟಿರುವುದು ಡಾ. ಎಸ್. ರಾಮೇಗೌಡರ ಕ್ರಿಯಾಶೀಲತೆಗೆ ಸಾಕ್ಷಿಗಳಾಗಿವೆ.

ಶಿಕ್ಷಣ ತಜ್ಞರಾಗಿ, ದಕ್ಷ ಆಡಳಿತಗಾರರಾಗಿ, ಹಿರಿಯ ವಿದ್ವಾಂಸರಾಗಿ, ಶ್ರೇಷ್ಠ ವಾಗ್ಮಿಗಳಾಗಿ ಬೆಳಗಿದ ಡಾ. ಎಸ್. ರಾಮೇಗೌಡ ಅವರ ಸಾಧನೆಯನ್ನು ಗುರುತಿಸಿ ಕಳೆದವರ್ಷ ಕರ್ನಾಟಕ ಸರ್ಕಾರ ರಾಜ್ಯಪ್ರಶಸ್ತಿ ಪ್ರದಾನಮಾಡಿ ಗೌರವಿಸಿದೆ. ಇಲಕಲ್ಲಿನ ನಮ್ಮ ಶ್ರೀ ವಿಜಯ ಮಹಾಂತೇಶ ಮಹಾವಿದ್ಯಾಲಯವು ಸಂಘಟಿಸಿದ ೪೨ನೆಯ ಅಂತರ ಕಾಲೇಜ ಕ್ರೀಡಾಕೂಟವನ್ನು ಡಾ. ಎಸ್. ರಾಮೇಗೌಡರು ಉದ್ಘಾಟಿಸಿದ ಸಂಭ್ರಮದ ಸಮಾರಂಭದಲ್ಲಿ ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನಪೀಠದ ಪರವಾಗಿ ಅವರನ್ನು ಹೃದಯತುಂಬಿ ಸತ್ಕರಿಸಿ ಸನ್ಮಾನ ಪತ್ರ ಸಮರ್ಪಿಸಿದ ಸಂದರ್ಭ ಇನ್ನೂ ನಮ್ಮ ಮನಸ್ಸಿನಲ್ಲಿ ಹಚ್ಚಹಸಿರಾಗಿ ಉಳಿದಿದೆ. ಪ್ರಸ್ತುತವರ್ಷ ಕೇಂದ್ರ ಸರ್ಕಾರದ ಪ್ರತಿಷ್ಠಿತ'ಪ್ರಣವಾನಂದ'ಪ್ರಶಸ್ತಿ ಅವರಿಗೆ ಸಂದಿದೆ. ಕರ್ನಾಟಕ ವಿಶ್ವವಿದ್ಯಾಲಯವನ್ನು ತಮ್ಮ ಅಧಿಕಾರಾವಧಿಯಲ್ಲಿ ವೈವಿಧ್ಯಮಯವಾಗಿ ಬೆಳೆಸಿ, ದೇಶದ ವಿಶ್ವವಿದ್ಯಾಲಯಗಳಲ್ಲಿಯೇ ಅದಕ್ಕೊಂದು ವಿಶಿಷ್ಟ ಅಗ್ರಮಾನ್ಯ ಸ್ಥಾನ ತಂದುಕೊಟ್ಟಿರುವ ಪ್ರತಿಭಾವಂತರಾದ ಡಾ. ಎಸ್. ರಾಮೇಗೌಡರ ಸೇವೆ ನಮ್ಮ ನಾಡಿನ, ರಾಷ್ಟ್ರದ ಶೈಕ್ಷಣಿಕ ಕ್ಷೇತ್ರಕ್ಕೆ ಇನ್ನೂ ಲಭಿಸುವಂತಾಗಲಿ, ವಿಶ್ವಧರ್ಮಿ ಅಪ್ಪ ಬಸವೇಶ್ವರನು ಹಾಗೂ ಚಿತ್ತರಗಿ ಶ್ರೀ ವಿಜಯ ಮಹಾಂತೇಶನು ಅವರಿಗೆ ಆಯುರಾರೋಗ್ಯ ಭಾಗ್ಯವನ್ನು ಅನುಗ್ರಹಿಸಲಿ ಎಂದು ನಾವು ಹೃದಯಾರೆ ಶುಭ ಹಾರೈಸುತ್ತೇವೆ.

❊ ❊ ❊

ಡಾ. ರಾಮೇಗೌಡರಿಗೆ ಶುಭಹಾರೈಕೆ

ಶಿವರಾಮ ಕಾರಂತ

ಕರ್ನಾಟಕ ವಿಶ್ವವಿದ್ಯಾಲಯದ ಅಭಿಮಾನಿಗರಾದ ನೀವೆಲ್ಲರೂ, ತಮಗೆ ಬಲು ಪ್ರಿಯರಾಗಿ, ಮಾರ್ಗದರ್ಶಕರಾಗಿ ನಿಮ್ಮ ವಿ. ವಿ.ಯನ್ನು ನಡೆಯಿಸಿಕೊಂಡು ಬಂದ ಮಾನ್ಯ ಡಾ. ರಾಮೇಗೌಡರನ್ನು ಬೀಳ್ಕೊಡುವ ಸಿದ್ಧತೆ ಮಾಡಿದ್ದೀರಿ. ಅವರು ನಮ್ಮಿಂದ ದೂರ ಸರಿಯುತ್ತಾರೆ ಎಂದರೆ ನಮ್ಮ ಕರ್ನಾಟಕದಿಂದಲೂ ದೂರ ಸರಿಯುತ್ತಿರುವ ಅನುಭವವಾದರೂ ಆಗುತ್ತಿದೆ. ಅವರಂತೆ ಜ್ಞಾನಕ್ಷೇತ್ರದಲ್ಲಿ ಸಾಧನೆಮಾಡಿದ ಡಾ. ಗೌಡರು ನಮ್ಮ ನಾಡಿಗೇ ಬೇಕಾದವರು. ಅವರ ಸೇವೆ, ಮಾರ್ಗದರ್ಶನ, ತಂತ್ರಜ್ಞಾನಕ್ಷೇತ್ರದಲ್ಲಿ ದೇಶಕ್ಕೆ ಬೇಕಾಗಿದೆ.

ಅವರನ್ನು ಬೀಳ್ಕೊಡುವ ಸಂದರ್ಭ, ನಾನೂ ನಿಮ್ಮೊಡನೆ ಸಹಭಾಗಿ. ಅವರ ಸೇವೆ ಸೀಮಿತ ಕರ್ನಾಟಕಕ್ಕೆ ಸಲ್ಲುವ ಬದಲು ಈ ನಾಡಿಗೇ ಸಿಗುವಂತಾದರೆ ಅವರ ನೆನಪು ನಮ್ಮಿಂದ ಅಳಿಯಲಾರದ ಒಂದು ಅಭಿಮಾನದ ನಾಮಾಂಕಿತವಾದೀತು.

❊ ❊ ❊

ಡಾ. ಎಸ್. ರಾಮೇಗೌಡರಿಗೆ ಶುಭಾಶೀರ್ವಾದ

ಸಿ. ವೀರಪ್ಪ, ಕೊಳ್ಳೆಗಾಲ

ಶ್ರೀಯುತ ಯಂ. ಸಿದ್ದೇಗೌಡ ಮತ್ತು ಶ್ರೀಮತಿ ಪುಟ್ಟಲಿಂಗಮ್ಮನವರ ಸುಪುತ್ರರಾಗಿ ಡಾ. ಎಸ್. ರಾಮೇಗೌಡರು ದಿನಾಂಕ ೧೪. ೧. ೧೯೩೯ ರಂದು ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಹೊಂಡ್ರಬಾಳು ಗ್ರಾಮದಲ್ಲಿ ಜನಿಸಿದರು. ೧೯೬೭ನೇ ಇಸವಿಯಲ್ಲಿ ಇವರ ವಿವಾಹವು ಶ್ರೀಮತಿ ಸುಶೀಲಮ್ಮನವರೊಡನೆ ನೆರವೇರಿತು. ಇವರದು ಆದರ್ಶ ದಾಂಪತ್ಯಜೀವನ. ದಯಾಮಯನಾದ ಭಗವಂತನು ಇವರಿಗೆ ಎರಡು ಗಂಡು ಮಕ್ಕಳನ್ನೂ ಒಂದು ಹೆಣ್ಣು ಮಗುವನ್ನೂ ದಯಪಾಲಿಸಿದ್ದಾನೆ.

ಶ್ರೀಯುತರ ಮಾಧ್ಯಮಿಕ ಹಾಗೂ ಪ್ರೌಢ ಶಾಲಾ ಶಿಕ್ಷಣವು ಕೊಳ್ಳೇಗಾಲದ ಎಮ್. ಜಿ. ಎಸ್. ವಿ. ಪದವಿ ಪೂರ್ವ ಕಾಲೇಜಿನಲ್ಲಿ ಆಯಿತು. ೧೯೬೧ ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಬಿ. ಇ. ಪದವಿಯನ್ನು ಗಳಿಸಿದರು. ವೆಸ್ಟ್ ಇಂಡೀಸ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ಸೇವೆಯನ್ನು ಸಲ್ಲಿಸುತ್ತಿದ್ದ ಸಮಯದಲ್ಲಿ ಅಮೇರಿಕದ ವಾಷಿಂಗ್ಟನ್ ಸ್ಟೇಟ್ ವಿಶ್ವವಿದ್ಯಾಲಯದ ಪಿ.ಎಚ್. ಡಿ. ಪದವಿಯನ್ನು ಪಡೆದುಕೊಂಡರು.

ಡಾ| ಎಸ್. ರಾಮೇಗೌಡರು ಅಧ್ಯಯನಶೀಲರು. ಸತತವಾಗಿ ಉತ್ತಮ ಗ್ರಂಥಗಳನ್ನು ಓದುತ್ತಿದ್ದು ಜ್ಞಾನಾರ್ಜನೆಯನ್ನು ಮಾಡುವುದು ಇವರ ಹವ್ಯಾಸ. ಇವರು ಒಳ್ಳೆಯ ಬರಹಕಾರರು ಹಾಗೂ ಶ್ರೇಷ್ಠ ದರ್ಜೆಯ ಭಾಷಣಕಾರರು ಆಗಿದ್ದಾರೆ. ಶಾಲೆಯಲ್ಲಿ ಕಲಿಯುವಾಗಲೇ ಶಾಲಾವಾರ್ಷಿಕ ಸಂಚಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು. ಶಾಲಾ 'ಸಾಹಿತ್ಯ ಸಂಘ' ವು ಏರ್ಪಡಿಸುತ್ತಿದ್ದ ಸಭೆಗಳಲ್ಲೂ, ಚರ್ಚಾಕೂಟಗಳಲ್ಲೂ ಸಕ್ರಿಯ ಪಾತ್ರವನ್ನು ವಹಿಸಿ, ದೋಷರಹಿತವೂ ಸರಳವೂ ಆದ ಭಾಷೆಯಲ್ಲಿ ಆಕರ್ಷಕವಾಗಿ ಮಾತನಾಡುತ್ತಿದ್ದರು.

ಶ್ರೀಯುತ ಗೌಡರು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಅತ್ಯಮೂಲ್ಯವಾದ ಸೇವೆಯನ್ನು ಸಲ್ಲಿಸಿರುತ್ತಾರೆ. ಕೋಲಾರ್ ಗೋಲ್ಡ್ ಫೀಲ್ಡ್ಸ್‌ಗಳಲ್ಲಿ ಜ್ಯೂನಿಯರ್ ಇಂಜನೀಯರ್ ಆಗಿ ವೃತ್ತಿಯನ್ನು ಆರಂಭಿಸಿ, ಮೈಸೂರಿನ ಎನ್. ಆಯ್.ಇ. ಹಾಗೂ ವೆಸ್ಟ್ ಇಂಡೀಸ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿ, ಮಂಡ್ಯದ ಪಿ. ಇ. ಎಸ್. ಇಂಜಿನೀಯರಿಂಗ್ ಕಾಲೇಜ್‌ನಲ್ಲಿ ಇಲೆಕ್ಟ್ರಿಕಲ್ ಮತ್ತು ಇಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಪ್ರೊಫೆಸರ್ ಆಗಿ ಅಮೋಘವಾದ ಸೇವೆಯನ್ನು ಸಲ್ಲಿಸಿದ್ದಾರೆ. ಬೆಂಗಳೂರಿನ ಬಿ. ಆಯ್. ಟಿ. ಮತ್ತು ಪಾಂಡಿಚೇರಿಯ ಇಂಜಿನೀಯರಿಂಗ್ ಕಾಲೇಜ್‌ಗಳ ಸಂಸ್ಥಾಪಕ ಪ್ರಿನ್ಸಿಪಾಲರಾಗಿ ಗಣನೀಯವಾದ ಸೇವೆಯನ್ನು ಸಲ್ಲಿಸಿ ಎಲ್ಲರ ಪ್ರಶಂಸೆಗೂ ಪಾತ್ರರಾಗಿರುತ್ತಾರೆ.

ಜುಲೈ ೧೯೯೦ ರಿಂದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿ ದಕ್ಷ ಯಶಸ್ವೀ ಆಡಳಿತವನ್ನು ಒದಗಿಸುತ್ತಿದ್ದು ಈ ವಿಶ್ವವಿದ್ಯಾಲಯದ ಸರ್ವತೋಮುಖ ಅಭಿವೃದ್ಧಿಗೆ ಕಂಕಣಬದ್ಧರಾಗಿದ್ದಾರೆ.

ಡಾ। ಗೌಡರು ತಾಂತ್ರಿಕ ಶಿಕ್ಷಣಕ್ಕೆ ಸಂಬಂಧ ಪಟ್ಟಂತೆ ಇಪ್ಪತ್ತಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಸಂಶೋಧನಾ ಲೇಖನಗಳನ್ನು ಪ್ರಕಟಗೊಳಿಸಿದ್ದಾರೆ. ಹಲವಾರು ಪ್ರಮುಖವಾದ ಸಮಿತಿಗಳಲ್ಲಿ ಕೆಲಸವನ್ನು ನಿರ್ವಹಿಸಿ, ಭಾರತದಲ್ಲಿ ತಾಂತ್ರಿಕ ಶಿಕ್ಷಣದ ಗುಣಮಟ್ಟವು ವೃದ್ಧಿಗೊಳ್ಳಲು ಶ್ರಮಿಸಿದ್ದಾರೆ. ಕರ್ನಾಟಕ ರಾಜ್ಯ ಸರ್ಕಾರವು ಇವರನ್ನು ಶ್ರೇಷ್ಠ ಶಿಕ್ಷಣತಜ್ಞರೆಂದು ಪರಿಗಣಿಸಿ ಸನ್ಮಾನಿಸಿದೆ.

ಮಾನ್ಯ ಡಾ. ಎಸ್. ರಾಮೇಗೌಡರು ಸದ್ಗುಣಶೀಲ ಸಂಪನ್ನರು. ಗುರು-ಹಿರಿಯರಲ್ಲಿ ಭಕ್ತಿ ಗೌರವವುಳ್ಳವರು. ಕರ್ತವ್ಯದಲ್ಲಿ ಶ್ರದ್ಧೆ ನಿಷ್ಠೆಯುಳ್ಳ ಸಹಜ ಕರ್ಮಯೋಗಿಗಳು. ಇಂತಹ ಮಹನೀಯರನ್ನು ಸನ್ಮಾನಿಸಿ, ಸನ್ಮಾನಗ್ರಂಥವನ್ನು ಅರ್ಪಿಸುತ್ತಿರುವುದು ಸೂಕ್ತ ಹಾಗೂ ಸಮಂಜಸವೆಂದು ಭಾವಿಸಿ, ಈ ಶುಭ ಸಂದರ್ಭದಲ್ಲಿ ಅವರಿಗೂ ಅವರ ಕುಟುಂಬ ವರ್ಗಕ್ಕೂ ಶುಭವನ್ನು ಹಾರೈಸಿ, ಪರಮಾತ್ಮನು ಅವರಿಗೆ ಸನ್ಮಂಗಳವನ್ನು ಕರುಣಿಸಲೆಂದು ನನ್ನ ನಮ್ರ ಪ್ರಾರ್ಥನೆಯನ್ನು ಸಲ್ಲಿಸುತ್ತೇನೆ.

❋ ❋ ❋

ಸಂಸ್ಥೆ ಕಟ್ಟುವ ಸಾಹಸಿಗ

ತ.ರಾ. ಕೃಷ್ಣೇಗೌಡ

ಡಾ. ಎಸ್. ರಾಮೇಗೌಡರ ನೆನಪು ಬಂದೊಡನೆಯೇ ನನ್ನ ಮನಸ್ಸಿನ ಮುಂದೆ ನಿಲ್ಲುವ ಚಿತ್ರ: ವಿಶಾಲವಾದ ನಗೆ, ಸ್ನೇಹಪೂರ್ಣವಾದ ನಿಲುವು, ಪಾದರಸದಂತಹ ಚಟುವಟಿಕೆ, ಲವಲವಿಕೆಯ ಮಾತುಕತೆ, ಎಲ್ಲರನ್ನೂ ಆಕರ್ಷಿಸುವ ವ್ಯಕ್ತಿತ್ವ.

ಡಾ. ಎಸ್. ರಾಮೇಗೌಡರು ನನಗೆ ಪರಿಚಯವಾದದ್ದು, ಸಾವಿರದ ಒಂಬೈನೂರ ಐವತ್ತೊಂಬತ್ತರಲ್ಲಿ. ಆಗ ನಾನು ಬೆಂಗಳೂರಿನ ವಿಶ್ವವಿದ್ಯಾನಿಲಯದ ಇಂಜಿನಿಯರಿಂಗ್ ಕಾಲೇಜಿನಲ್ಲಿ ವಿದ್ಯುತ್ ಇಂಜಿನಿಯರಿಂಗ್‌ನಲ್ಲಿ ಉಪನ್ಯಾಸಕನಾಗಿದ್ದೆ. ಆಗ ಅವರು ಮೂರನೇವರ್ಷದ ವಿದ್ಯಾರ್ಥಿಯಾಗಿದ್ದರು. ನಾನು ಅವರ ತರಗತಿಗೆ ಪಾಠ ಹೇಳುತ್ತಿದ್ದುದರಿಂದ ಸಹಜವಾಗಿಯೇ ಇತರ ವಿದ್ಯಾರ್ಥಿಗಳಂತೆಯೇ ಇವರ ಪರಿಚಯವಾಯಿತು. ಇವರ ಬಗ್ಗೆ ಪ್ರಪ್ರಥಮವಾಗಿ ನನ್ನ ಗಮನ ಸೆಳೆದದ್ದು ಇವರ ಚುರುಕುತನ. ಪಾಠಪ್ರವಚನಗಳಲ್ಲಿ, ಮಾತುಕತೆಗಳಲ್ಲಿ ಇತರ ವಿಷಯಗಳಲ್ಲಿ ಗುಂಪಿನಲ್ಲಿ ಎದ್ದು ಕಾಣುವ ವೈಶಿಷ್ಟ್ಯತೆ. ಆ ವರ್ಷ ದಕ್ಷಿಣ ಭಾರತದಲ್ಲಿ ಅಧ್ಯಯನ ಪ್ರವಾಸ ಕೈಗೊಂಡಾಗ ಆ ತರಗತಿಯ ವಿದ್ಯಾರ್ಥಿ ತಂಡಕ್ಕೆ ನಾನು ಕಾಲೇಜಿನ ಪರವಾಗಿ ಹೋಗಬೇಕಾಯಿತು. ವಿದ್ಯಾರ್ಥಿತಂಡದ ಪ್ರವಾಸಕ್ಕೆ ಡಾ.ಎಸ್.ರಾಮೇಗೌಡರೇ ಕಾರ್ಯದರ್ಶಿ. ಪ್ರವಾಸದಲ್ಲಿ ಇವರೊಡನೆ ನನಗೆ ನಿಕಟ ಪರಿಚಯವಾಯಿತು. ಪ್ರವಾಸದ ಏರ್ಪಾಡುಗಳನ್ನು ಯಾವುದೇ ಕುಂದು ಕೊರತೆ ಅಥವಾ ಅನಿರೀಕ್ಷಿತ ಅನಾನುಕೂಲವುಂಟಾಗದಂತೆ ಮಾಡಿ ಆಗಲೇ ತಮ್ಮ ಕಾರ್ಯಕ್ಷಮತೆ ಎಲ್ಲರ ಮೆಚ್ಚುಗೆಗೆ ಪಾತ್ರವಾಗುವಂತೆ ನಿರ್ವಹಿಸಿದ್ದರು. ನಂತರದ ದಿನಗಳಲ್ಲಿ ನಮ್ಮ ನಡುವಿನ ಸ್ನೇಹ ವೃದ್ಧಿಯಾಗುತ್ತಾ ಇಂದಿಗೂ ನನಗೆ ಬಹಳ ಅಚ್ಚುಮೆಚ್ಚಿನವರಾಗಿದ್ದಾರೆ.

ಸಾವಿರದ ಒಂಬೈನೂರ ಅವರತ್ತರಲ್ಲಿ ನಾನು ಕಾಲೇಜಿನ ಉಪನ್ಯಾಸಕ ವೃತ್ತಿ ತ್ಯಜಿಸಿ ಕೈಗಾರಿಕೆಯಲ್ಲಿ ವೃತ್ತಿ ಆರಂಭಿಸಿದ ಕೆಲವು ವರ್ಷಗಳು ಇವರೊಡನೆ ಸಂಪರ್ಕ

ಹೆಚ್ಚಾಗಿರಲಿಲ್ಲ. ಈ ವರ್ಷಗಳಲ್ಲಿ ಅವರು ಮೈಸೂರಿನ ಎನ್.ಐ.ಇ ಮತ್ತು ಮಂಡ್ಯದ ಪಿ.ಇ.ಎಸ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿ, ನಂತರ ವೆಸ್ಟ್ ಇಂಡೀಸ್ ದೇಶದಲ್ಲಿ ಹೆಚ್ಚಿನ ವ್ಯಾಸಂಗ ಮಾಡಿ ವಿದ್ಯುತ್ ಇಂಜಿನಿಯರಿಂಗ್‌ನಲ್ಲಿ ಡಾಕ್ಟರೇಟ್ ಪದವಿ ಪಡೆದು ಮಂಡ್ಯದ ಕಾಲೇಜಿನಲ್ಲಿ ಮತ್ತೆ ಪ್ರಾಧ್ಯಾಪಕರಾಗಿದ್ದರು.

ಡಾ.ಎಸ್.ರಾಮೇಗೌಡರ ವ್ಯಕ್ತಿತ್ವ ಸೂಜಿಗಲ್ಲಿನಂತೆ. ಇವರು ಯಾರೊಡನೆ ಸಂಪರ್ಕ ಪಡೆದರೂ ಅವರು ಡಾ.ಎಸ್.ರಾಮೇಗೌಡರ ಕಡೆಗೆ ಕೂಡಲೇ ಆಕರ್ಷಿತರಾಗಿ ಬಿಡುತ್ತಿದ್ದರು. ಮಂಡ್ಯದ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದಾಗ ಇವರು ಮಾಜಿ ಶಿಕ್ಷಣ ಸಚಿವ ದಿವಂಗತ ಶಂಕರೇಗೌಡರಿಗೆ ಬಹುಹತ್ತಿರ. ಈ ಸಂಬಂಧ ಶಂಕರೇಗೌಡರು ಕಾಲವಾಗುವವರೆಗೂ ನಿರಂತರವಾಗಿ ಸಾಗಿತ್ತು. ಹಾಗೆಯೇ ದಿವಂಗತ ಪ್ರೊ|| ಡಿ. ಬಿ. ನರಸಿಂಹಯ್ಯನವರು ಡಾ. ಎಸ್. ರಾಮೇಗೌಡರ ಬಗ್ಗೆ ಬಹಳ ಮೆಚ್ಚುಗೆ ಹೊಂದಿದ್ದವರು. ಪ್ರೊ. ನರಸಿಂಹಯ್ಯನವರು ವೆಸ್ಟ್ ಇಂಡೀಸ್‌ನಲ್ಲಿದ್ದ ಕಾಲದಲ್ಲೇ ಡಾ.ಎಸ್.ರಾಮೇಗೌಡರು ಕೂಡ ಅವರೊಡನೆ ಇದ್ದು ಉನ್ನತ ವ್ಯಾಸಂಗ ಮಾಡಿದ್ದು. ಅಂತೆಯೇ ಒಕ್ಕಲಿಗರ ಸಂಘದ ಅಧ್ಯಕ್ಷರಾಗಿದ್ದ ದಿವಂಗತ ಡಾ. ಎಂ. ಎಚ್.ಮರೀಗೌಡರಿಗೂ ಡಾ.ಎಸ್.ರಾಮೇಗೌಡರನ್ನು ಕಂಡರೆ ಬಹಳ ವಿಶ್ವಾಸ.

ಡಾ.ಎಸ್.ರಾಮೇಗೌಡರು ಮಂಡ್ಯದ ಪಿ.ಇ.ಎಸ್ ಕಾಲೇಜಿನಲ್ಲಿ ಸೇವೆ ಸಲ್ಲಿಸಿದ ಸುಮಾರು ಒಂದೂವರೆ ದಶಕದ ಅವಧಿ, ಆ ಕಾಲೇಜು ಪ್ರಾರಂಭದಿಂದ ಕ್ರಮೇಣ ಅಭಿವೃದ್ಧಿ ಹೊಂದಿ, ದೊಡ್ಡ ಸಂಸ್ಥೆಯಾಗಿ ಬೆಳೆದ ಕಾಲ. ಬುದ್ಧಿಮತ್ತರೂ, ಸೂಕ್ಷ್ಮಗ್ರಾಹಿಗಳೂ ಆದ ಡಾ.ಎಸ್.ರಾಮೇಗೌಡರು ಸಂಸ್ಥೆ ಕಟ್ಟುವ ಹಾಗೂ ಬೆಳೆಸುವ ಕೌಶಲ್ಯವನ್ನು ಈ ಅವಧಿಯಲ್ಲಿ ಬಹು ಚೆನ್ನಾಗಿ ಗ್ರಹಿಸಿದರೆಂದು ಕಾಣುತ್ತದೆ. ಇವರ ಮುಂದಿನ ವೃತ್ತಿ ಜೀವನದಲ್ಲಿ ಈ ಅಂಶ ಬಹು ಪ್ರಮುಖವಾಗಿ ಕಂಡುಬರುತ್ತದೆ.

ಪಿ.ಇ.ಎಸ್. ಕಾಲೇಜು ಒಂದು ದೊಡ್ಡ ಸಂಸ್ಥೆಯಾಗಿ ಬೆಳೆದದ್ದನ್ನು ಗಮನಿಸಿದ ಗೌಡರು, ಬೆಂಗಳೂರಿನಲ್ಲಿ ಒಕ್ಕಲಿಗರ ಸಂಘದ ಆಶ್ರಯದಲ್ಲಿ ಇಂಜಿನಿಯರಿಂಗ್ ಕಾಲೇಜು ಸ್ಥಾಪಿಸಿದರೆ ಇರುವ ಅಗಾಧವಾದ ಸುಪ್ತ ಅವಕಾಶವನ್ನು ಗುರುತಿಸಿದುದು ಇವರ ದೂರದೃಷ್ಟಿಯ ದ್ಯೋತಕ. ಕೂಡಲೇ ಕಾರ್ಯಪ್ರವೃತ್ತರಾದ ಇವರು, ಒಕ್ಕಲಿಗರ ಸಂಘದ ಅಂದಿನ ಅದ್ಯಕ್ಷರಾಗಿದ್ದ ಡಾ||ಮರೀಗೌಡರಿಗೆ ಕಾಲೇಜು ಪ್ರಾರಂಭಿಸುವಂತೆ ದುಂಬಾಲು ಬಿದ್ದರು. ಜೊತೆಗೆ ಒಕ್ಕಲಿಗರ ಜನಾಂಗದ ಪ್ರಮುಖ ನಾಯಕರುಗಳನ್ನು ಸಂಪರ್ಕಿಸಿ ಅವರನ್ನೂ ಒಪ್ಪಿಸಿ, ಒತ್ತಡ ತಂದರು. ಇವರ ಸತತ ಪ್ರಯತ್ನದ ಫಲವಾಗಿ, ಸಂಘದಲ್ಲಿ ಒಮ್ಮತದ ನಿರ್ಧಾರವಾಗಿ ಸುಮಾರು ೧೯೭೯ರಲ್ಲಿ ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಅಸ್ತಿತ್ವಕ್ಕೆ ಬಂತು. ಆ ಸಂಸ್ಥೆಯ ನೇತೃತ್ವ ವಹಿಸುವ ಜವಾಬ್ದಾರಿಯನ್ನು ಒಕ್ಕಲಿಗರ ಸಂಘ ಡಾ.ಎಸ್.ರಾಮೇಗೌಡರಿಗೆ ವಹಿಸಿ ಅದರ ಪ್ರಿನ್‌ಸಿಪಾಲರಾಗಿ ನೇಮಕ ಮಾಡಿತು. ಹೊಸದಾಗಿ ಒಂದು ತಾಂತ್ರಿಕ ವಿದ್ಯಾಸಂಸ್ಥೆ ಕಟ್ಟುವ ಅಗಾಧ ಜವಾಬ್ದಾರಿ, ನಿರಂತರ ಪರಿಶ್ರಮಗಳನ್ನು ಡಾ.ಎಸ್.ರಾಮೇಗೌಡರು ಸಮರ್ಥವಾಗಿಯೇ ನಿರ್ವಹಿಸಿ

ಯಶಸ್ವಿಯಾದರು. ಕಟ್ಟಡಗಳ ಯೋಜನೆ, ನಿರ್ಮಾಣದ ಉಸ್ತುವಾರಿ, ಸಿಬ್ಬಂದಿಯ ಆಯ್ಕೆ ಮತ್ತು ನೇಮಕ, ಕಾಲೇಜಿನ ಆಡಳಿತ ಮತ್ತು ವಿದ್ಯಾರ್ಥಿಗಳ ತರಪೇತು ಇವುಗಳೆಲ್ಲಾ ಇವರ ಮುಂದಾಳತ್ವದಲ್ಲಿ ಸಮರ್ಪಕವಾಗಿ ನಡೆದು ಬಿ.ಐ.ಟಿ ಸಂಸ್ಥೆ ಇಡೀ ದೇಶದಲ್ಲೇ ಹೆಸರುವಾಸಿಯಾಯಿತು.

ಸಾವಿರದ ಒಂಬೈನೂರ ಎಂಭತ್ತಮೂರರಲ್ಲಿ ನಾನು ಒಕ್ಕಲಿಗರ ಸಂಘದ ಆಡಳಿತ ಸಮಿತಿಗೆ ಚುನಾಯಿತನಾಗಿ, ಬಿ.ಐ.ಟಿ. ಸಂಸ್ಥೆಯ ಗೌರ್ನಿಂಗ್ ಕೌನ್ಸಿಲ್‌ಗೆ ಅಧ್ಯಕ್ಷನಾದೆ. ಈ ಅವಧಿಯಲ್ಲಿ ಡಾ.ಎಸ್.ರಾಮೇಗೌಡರ ಕಾರ್ಯದಕ್ಷತೆಯನ್ನು ಹತ್ತಿರದಿಂದ ವೀಕ್ಷಿಸುವ ಅವಕಾಶ ನನಗೆ ದೊರಕಿತ್ತು. ಬೇರೆ ಬೇರೆ ವಿಭಾಗಗಳನ್ನು ಸರಿಯಾಗಿ ವ್ಯವಸ್ಥೆ ಮಾಡುವುದರ ಜೊತೆಗೆ ಕಂಪ್ಯೂಟರ್, ಇನ್‌ಸ್ಟ್ರುಮೆಂಟೇಷನ್ ಮೊದಲಾದ ಹೊಸ ಹೊಸ ಕೋರ್ಸುಗಳನ್ನು ಪ್ರಾರಂಭಿಸಿದ ಕೀರ್ತಿ ಇವರಿಗೆ ಸಲ್ಲಬೇಕು.

ಬಿ.ಐ.ಟಿ ಯಲ್ಲಿ ಇವರು ಯಶಸ್ವಿಯಾಗಬೇಕಾದರೆ ಎಲ್ಲರೊಡನೆ ಹೊಂದಿಕೊಂಡು ಹೋಗಿ ಸ್ನೇಹಭಾವದಿಂದ ತಮ್ಮ ಅಭಿಪ್ರಾಯ ಸಲಹೆಗಳಿಗೆ ಅವರೆಲ್ಲರ ಮನ್ನಣೆ ಗಳಿಸಿಕೊಳ್ಳುತ್ತಿದ್ದ ಇವರ ಪ್ರವೃತ್ತಿಯೇ ಕಾರಣ. ಆಡಳಿತ ಮಂಡಲಿಯ ಸದಸ್ಯರೇ ಆಗಲಿ, ಕಾಲೇಜಿನ ಸಿಬ್ಬಂದಿಯೇ ಆಗಲಿ ಇವರ ವಿಷಯದಲ್ಲಿ ಸದಭಿಪ್ರಾಯ ಇಟ್ಟುಕೊಂಡಿದ್ದುದು ಒಂದು ವಿಶೇಷ. ಯಾವುದೇ ಕೆಲಸವಾಗಲೀ, ಗುರಿ ಸಾಧನೆ ಮುಖ್ಯ, ಕಾರ್ಯವಿಧಾನ ಗೌಣ ಎಂಬುದು ಇವರ ತಾತ್ವಿಕ ನಿಲುವು.

ಸುಮಾರು ೧೯೬೮-೬೯ರಲ್ಲಿ ಪಾಂಡಿಚೇರಿಯಲ್ಲಿ, ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಲು ಯೋಜನೆ ಪ್ರಾರಂಭವಾದಾಗ ಬಿ.ಐ.ಟಿ.ಯಲ್ಲಿ ಒಳ್ಳೆಯ ಯಶಸ್ಸುಗಳಿಸಿದ್ದ ಡಾ.ಎಸ್.ರಾಮೇಗೌಡರನ್ನು ಅಲ್ಲಿನ ಆಡಳಿತ ಮಂಡಲಿ ಪ್ರಿನ್ಸಿಪಾಲರಾಗಿ ಕಾರ್ಯನಿರ್ವಹಿಸಲು ಆಹ್ವಾನಿಸಿತು. ಆಗ ಡಾ.ಎಸ್.ರಾಮೇಗೌಡರು ಅಲ್ಲಿನ ಆಹ್ವಾನವನ್ನು ಒಪ್ಪಿಕೊಳ್ಳುವ ಅಥವಾ ಬಿಡುವ ಬಗ್ಗೆ ನನ್ನ ಸಲಹೆಯನ್ನು ಕೇಳಿದರು. ಇವರಲ್ಲಿ ಅಂತಸ್ಥವಾಗಿದ್ದ ಸುಪ್ತದಕ್ಷತೆಯನ್ನು ಗುರುತಿಸಿದ್ದ ನಾನು, ಬಿ.ಐ.ಟಿ ಸಂಸ್ಥೆಗೆ ನಷ್ಟವಾದರೂ ಇವರ ವ್ಯಕ್ತಿತ್ವ ಬೆಳೆಯಲು ವಿಪುಲ ಅವಕಾಶವನ್ನು ಕಲ್ಪಿಸುತ್ತಿದ್ದ ಹೊಸ ಹುದ್ದೆಯನ್ನು ಹಿಂದು ಮುಂದು ನೋಡದೆ ಒಪ್ಪಿಕೊಂಡು ಅದನ್ನು ವಹಿಸಿಕೊಳ್ಳಬೇಕೆಂದು ಸಲಹೆ ನೀಡಿದೆ. ಅವರೂ ಅದೇ ತೀರ್ಮಾನಕ್ಕೆ ಬಂದು ಬೆಂಗಳೂರು ಬಿಟ್ಟು ಪಾಂಡಿಚೇರಿಗೆ ವಲಸೆ ಹೋದರು.

ಮತ್ತೊಂದು ಮಹಾಸಂಸ್ಥೆಯನ್ನು ಕಟ್ಟುವ ಸುವರ್ಣಾವಕಾಶ ಅವರ ಪಾಲಿಗೆ ಬಂತು. ಅದನ್ನು ಕೂಡ ಅವರು ಸದುಪಯೋಗಪಡಿಸಿಕೊಂಡು, ಅದರಿಂದ ಕೀರ್ತಿಗಳಿಸಿದರು. ತಾತ್ಕಾಲಿಕವಾಗಿ ಅನುವು ಮಾಡಿಕೊಡಲಾಗಿದ್ದ ಕಟ್ಟಡಗಳಲ್ಲಿ ಕಾಲೇಜು ಪ್ರಾರಂಭಮಾಡಿ, ಜೊತೆಯಲ್ಲಿಯೇ, ಪೂರ್ವಸಮುದ್ರಕ್ಕೆ ಅಭಿಮುಖವಾಗಿ ಸಮುದ್ರತೀರದ ವಿಶಾಲ

ಪ್ರದೇಶದಲ್ಲಿ ಪ್ರಾದೇಶಿಕ ಇಂಜಿನಿಯರಿಂಗ್ ಕಾಲೇಜಿನ ಬೃಹತ್ ಪಾಳೆಯವನ್ನು ಸ್ಥಾಪಿಸುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಈ ಯೋಜನೆಯ ಪ್ರಾರಂಭದಲ್ಲಿ ಒಮ್ಮೆ ಡಾ.ಎಸ್.ರಾಮೇಗೌಡರ ಅತಿಥಿಯಾಗಿ ಪಾಂಡಿಚೇರಿಗೆ ಹೋಗಿದ್ದ ನಾನು ಈ ಯೋಜನೆಯ ಗಾತ್ರವನ್ನು ನೋಡಿ ಬಹುವಾಗಿ ಪ್ರಭಾವಿತನಾಗಿದ್ದೆ.

ಇವರು ಪಾಂಡಿಚೇರಿಯಲ್ಲಿದ್ದಾಗಲೇ ಅಲ್ಲಿನ ಲೆಫ್ಟಿನೆಂಟ್ ಗೌರ್‍ನರ್‌ರವರು ಪಾಂಡಿಚೇರಿಯಲ್ಲಿ ಒಂದು ವಿಶಾಲವಾದ ಗಾಲ್ಫ್ ಆಟದ ಮೈದಾನ ನಿರ್ಮಿಸುವ ಯೋಜನೆಯನ್ನು ಇವರಿಗೆ ವಹಿಸಿದ್ದರು. ಆ ಯೋಜನೆಯ ಮೇಲೂ ಇವರ ಪ್ರಭಾವ ಮುದ್ರೆ ಇದೆ.

ನಂತರ ೧೯೮೯-೯೦ ರ ಸುಮಾರಿನಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯ ಸ್ಥಾನ ತುಂಬಬೇಕಾಗಿ ಬಂದಾಗ ಡಾ.ಎಸ್.ರಾಮೇಗೌಡ ಅಭ್ಯರ್ಥಿಯಾದರು. ಕುಲಪತಿಗೆ ಬೇಕಾದ ಎಲ್ಲಾ ಅರ್ಹತೆಗಳನ್ನು ಹೊಂದಿದ್ದರು. ಇವರು ಬಹಳ ಕಿರಿಯ ವಯಸ್ಸಿನವರೆಂಬ ಭಾವನೆ ನೇಮಕಾತಿ ಸಮಿತಿಯ ಮುಂದೆ ಬಂದು ಸ್ವಲ್ಪಕಾಲ ಜಿಜ್ಞಾಸೆಗೆ ಕಾರಣವಾಗಿತ್ತು. ಆದರೆ ಅಂತಿಮವಾಗಿ ಈ ಕಾರಣವನ್ನು ಬದಿಗಿರಿಸಿ, ಇವರನ್ನು ಕುಲಪತಿಯಾಗಿ ನೇಮಕಮಾಡಲಾಯಿತು.

ಕುಲಪತಿಯಾಗಿ ಈಗಾಗಲೇ ಆರು ವರ್ಷಗಳ ಕಾಲ ವಿಶ್ವವಿದ್ಯಾಲಯವನ್ನು ಪ್ರಗತಿಯತ್ತ ಕೊಂಡೊಯ್ದಿದ್ದಾರೆ. ವಿಶ್ವವಿದ್ಯಾಲಯದ ಸಿಬ್ಬಂದಿಯ ನಡುವೆ ಅತ್ಯಂತ ಜನಪ್ರಿಯರಾಗಿ, ಹಲವು ಯೋಜನೆಗಳನ್ನು ಕಾರ್ಯಗತಮಾಡಿ ಅಂತಾರಾಷ್ಟ್ರೀಯ ಖ್ಯಾತಿಯನ್ನು ತಂದುಕೊಟ್ಟಿದ್ದಾರೆಂದು ಕೇಳಿದ್ದೇನೆ. ಇವರ ಸಾಧನೆಯಿಂದ ಪ್ರತಿಷ್ಠಿತ ಪ್ರಶಸ್ತಿಯಾದ ಪ್ರಣವಾನಂದ ಪ್ರಶಸ್ತಿಯನ್ನು ಗಳಿಸಿಕೊಂಡಿದ್ದಾರೆ. ೧೯೯೩ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಇವರಿಗೆ ನೀಡಲಾಗಿದೆ.

ಡಾ.ಎಸ್.ರಾಮೇಗೌಡರ ಕುಟುಂಬ ಜೀವನ ತುಂಬಾ ಸಂತೋಷಮಯ ಹಾಗೂ ಸಂತೃಪ್ತವಾದದ್ದು. ಅವರ ಧರ್ಮಪತ್ನಿ ಶ್ರೀಮತಿ ಸುಶೀಲಮ್ಮನವರು ಅತ್ಯಂತ ಮೃದುಭಾಷಿ ಮತ್ತು ಸ್ನೇಹಮಯಿ. ಜೊತೆಗೆ ಶಾಂತಸ್ವಭಾವದವರು. ಡಾ.ಎಸ್.ರಾಮೇಗೌಡರ ವೃತ್ತಿಜೀವನದ ಯಶಸ್ಸಿಗೆ ಈ ಮಹಿಳೆ ಬಹುಮಟ್ಟಿಗೆ ಕಾರಣರು ಎಂದರೆ ತಪ್ಪಾಗಲಾರದು ಎಂದು ನನ್ನ ಭಾವನೆ. ಇಬ್ಬರು ಗಂಡು ಮಕ್ಕಳೂ ಚೆನ್ನಾಗಿ ವಿದ್ಯಾಭ್ಯಾಸ ಮಾಡಿ, ಒಬ್ಬ ವೈದ್ಯ ವೃತ್ತಿ ಮತ್ತೊಬ್ಬ ಇಂಜಿನಿಯರ್ ವೃತ್ತಿ ಹಿಡಿದಿದ್ದಾರೆ. ಮಗಳು ಶೋಭಾ ಕೂಡ ಇಂಜಿನಿಯರಿಂಗ್ ಪದವಿ ಪಡೆದು, ಇಂಜಿನಿಯರ್ ಒಬ್ಬರನ್ನು ಮದುವೆಯಾಗಿ ಅಮೇರಿಕಾದಲ್ಲಿ ನೆಲಸಿದ್ದಾಳೆ. ಮಕ್ಕಳೆಲ್ಲಾ ತಂದೆ ತಾಯಿಯಂತೆಯೇ ಸಂಭಾವಿತರು. ಡಾ.ಎಸ್.ರಾಮೇಗೌಡರ ಕುಟುಂಬ ನನಗೆ ತುಂಬಾ ಹತ್ತಿರವಾದುದರಿಂದ ತುಂಬಾ ಅಭಿಮಾನದಿಂದ ಈ ಮಾತುಗಳನ್ನು ಹೇಳುತ್ತಿದ್ದೇನೆ.

ಡಾ.ಎಸ್.ರಾಮೇಗೌಡರು ಸಮರ್ಥ ವಾಗ್ಮಿ. ಅದರಲ್ಲೂ ಕನ್ನಡಭಾಷೆಯಲ್ಲಿ ಅವರ ಭಾಷಣವನ್ನು ಕೇಳಿಯೇ ಆನಂದಿಸಬೇಕು. ಹೇಳಬೇಕಾದ ಮಾತುಗಳನ್ನು ನಿಷ್ಪಷ್ಟವಾಗಿ, ಅರ್ಥಪೂರ್ಣವಾಗಿ ಹೇಳಿ ಶ್ರೋತೃಗಳ ಮನಮುಟ್ಟುವಂತೆ ಮಾಡುವ ಕೌಶಲ್ಯ ಅವರಿಗೆ ಸ್ವಾಭಾವಿಕವಾಗಿಯೇ ಬಂದದ್ದು. ಇದಲ್ಲದೆ ಇವರಿಗೆ ಸಾಹಿತ್ಯದಲ್ಲಿ ಅಪಾರ ಆಸಕ್ತಿ, ಕನ್ನಡ ಕವನಗಳನ್ನು ಸಾರ್ವಜನಿಕ ವೇದಿಕೆಯ ಮೇಲೆ ಸುಶ್ರಾವ್ಯವಾಗಿ ಹಾಡುವ ಕಂಠ ಮಾಧುರ್ಯವನ್ನೂ ಪಡೆದಿದ್ದಾರೆ. ಇದು ಇವರ ತಂದೆ ಸಿದ್ದೇಗೌಡರಿಂದ ಅನುವಂಶಿಕವಾಗಿ ಬಂದದ್ದು. ಇವರು ಬಹುಮುಖ ಪ್ರತಿಭೆಯುಳ್ಳ ವ್ಯಕ್ತಿ.

ಡಾ.ಎಸ್.ರಾಮೇಗೌಡರ ಹುಟ್ಟುಸ್ಥಳ ಕೊಳ್ಳೇಗಾಲದಿಂದ ಸುಮಾರು ಮೂರು ಕಿ.ಮೀ. ದೂರದಲ್ಲಿರುವ ಸಣ್ಣಗ್ರಾಮ "ಹೊಂಡರ ಬಾಳು". ತಂದೆ ಸಿದ್ದೇಗೌಡರು ಚಿಕ್ಕಂದಿನಲ್ಲಿ ಪೈಲ್ವಾನರು. ನಂತರ ಉಪಾಧ್ಯಾಯ, ವ್ಯವಸಾಯ ಮುಂತಾದ ವೃತ್ತಿ ಹಿಡಿದವರು. ರಾಮೇಗೌಡರ ಜೊತೆಯಲ್ಲಿ ಹುಟ್ಟಿದವರು ಇಬ್ಬರು ಕಿರಿಯ ಸಹೋದರರು, ಮತ್ತು ಇಬ್ಬರು ಕಿರಿಯ ಸಹೋದರಿಯರು. ಒಬ್ಬ ಸಹೋದರ ಕೆನಡಾದಲ್ಲಿ ಉನ್ನತ ಶಿಕ್ಷಣ ಪಡೆದು ಬೆಂಗಳೂರಿನ ಎನ್‌ಜಿಇಎಫ್‌ನಲ್ಲಿ ಉನ್ನತ ಅಧಿಕಾರಿಯಾಗಿದ್ದಾರೆ. ಇನ್ನೊಬ್ಬರು ಊರಿನಲ್ಲಿಯೇ ವ್ಯವಸಾಯ ಮಾಡಿಕೊಂಡಿದ್ದಾರೆ. ಒಬ್ಬ ಸಹೋದರಿ ಮದುವೆಯಾಗಿ ಇಲ್ಲಿಯೇ ಇದ್ದರೆ, ಮತ್ತೊಬ್ಬ ಸಹೋದರಿ ಪತಿಯೊಡನೆ ಫಿನ್‌ಲೆಂಡಿನ ಹೆಲ್ಸಿಂಕಿಯಲ್ಲಿದ್ದಾರೆ. ಡಾ.ಎಸ್.ರಾಮೇಗೌಡರು ಸುಮಾರು ಹದಿನೈದು ವರುಷ ವಯಸ್ಸಿನಲ್ಲಿದ್ದಾಗಲೇ ಇವರಿಗೆ ಮಾತೃವಿಯೋಗವಾದುದರಿಂದ ತಂದೆಯೇ ಇವರನ್ನೆಲ್ಲಾ ಪೋಷಿಸಿ ಬೆಳೆಸಿದವರು. ಸಿದ್ದೇಗೌಡರು ಪತ್ನಿವಿಯೋಗದ ನಂತರ, ಸಾಹಿತ್ಯ, ನಾಟಕ, ಕಾವ್ಯವಾಚನ ಇವುಗಳಲ್ಲೇ ತಮ್ಮನ್ನು ತೊಡಗಿಸಿಕೊಂಡು ಸಾತ್ವಿಕ ಜೀವನ ನಡೆಸಿದವರು. ಈಗ ಇವರು ಸ್ವರ್ಗಸ್ಥರಾಗಿದ್ದಾರೆ.

ಇಂತಹ ನಮ್ರ ಕುಟುಂಬದಲ್ಲಿ ಹುಟ್ಟಿ ಬೆಳೆದ ಡಾ.ಎಸ್.ರಾಮೇಗೌಡರು ಸ್ವಸಾಮರ್ಥ್ಯದಿಂದ ಜೀವನದಲ್ಲಿ ಮಾಡಿರುವ ಸಾಧನೆ ಅಗಾಧವಾದದ್ದು. ಅಭಿನಂದನೆಗೆ ಯೋಗ್ಯವಾದದ್ದು.

ಡಾ.ಎಸ್.ರಾಮೇಗೌಡರ ಸಾಧನೆಯನ್ನು ಮೆಚ್ಚಿ, ಬಾಯಿ ತುಂಬಾ ಹೊಗಳಿ ನಂತರ ಅಲ್ಲಿಗೇ ಬಿಟ್ಟರೆ ಸಾಲದು. ಅದು ಕೇವಲ ವ್ಯಕ್ತಿ ಪೂಜೆ ಆಗುತ್ತದೆ ಅಥವಾ ಮುಖಸ್ತುತಿ ಆಗುತ್ತದೆ.

ಅವರ ಜೀವನದಿಂದ ಯುವ ಪೀಳಿಗೆ ಕಲಿಯಬೇಕಾದ್ದು ಬಹಳ ಇದೆ. ಅವರಲ್ಲಿರುವ ಕೆಲವು ವಿಶಿಷ್ಟ ಗುಣಗಳು ಅವರ ಯಶಸ್ಸಿಗೆ ಕಾರಣ. ಅವುಗಳು ಕಿರಿಯರಿಂದ ಅನುಕರಣವಾದರೆ ಮುಂದೆ ಹಲವು ಡಾ.ಎಸ್.ರಾಮೇಗೌಡರ ಸೃಷ್ಟಿಯಾಗುತ್ತದೆ. ಎಲ್ಲರಲ್ಲಿ ಸ್ನೇಹಭಾವ, ಹಿರಿಯರ ಬಗ್ಗೆ ಗೌರವ, ಸಹೋದ್ಯೋಗಿಗಳನ್ನು ತನ್ನೊಡನೆ, ಗುರಿಯೆಡೆಗೆ ಕರೆದೊಯ್ಯುವ ಕೌಶಲ್ಯ, ಸ್ಪಷ್ಟ ಮುಂದಾಲೋಚನೆ, ಗುರಿತಲುಪಬೇಕೆಂಬ ದೃಢನಿರ್ಧಾರ, ಕಾರ್ಯಶ್ರದ್ಧೆ, ಅವಿಶ್ರಾಂತ ದುಡಿಮೆ, ಇತರರಿಗೆ ಮೇಲ್ಪಂಕ್ತಿಯಾಗುವ ನಡತೆ, ಇಂತಹ

ಅವರ ಗುಣಗಳನ್ನು ಕಿರಿಯರು ತಮ್ಮಲ್ಲಿ ಅಳವಡಿಸಿಕೊಂಡರೆ, ಅವರೂ ಜೀವನದಲ್ಲಿ ಉನ್ನತ ವ್ಯಕ್ತಿತ್ವ ಬೆಳೆಸಿಕೊಳ್ಳಲು ಸಾಧ್ಯ ಅನ್ನುವುದನ್ನು ಮನಗಾಣಬೇಕು.

ಡಾ.ಎಸ್.ರಾಮೇಗೌಡರಿಗೆ ದುಡಿಯುವ ವಯಸ್ಸು ಇನ್ನೂ ಬಹಳ ಇದೆ. ಆರೋಗ್ಯ ಚೆನ್ನಾಗಿದೆ, ಕುಟುಂಬ ಶಾಂತಿ ಇದೆ. ಆದುದರಿಂದ ಇವರ ದಕ್ಷ ಸೇವೆ ಜನತೆಗೆ ಇನ್ನೂ ಬಹಳ ಕಾಲ ದೊರಕಲಿ.

ಕುಟುಂಬ ಸದಸ್ಯರೆಲ್ಲರ ಸಮೇತವಾಗಿ ಡಾ.ಎಸ್.ರಾಮೇಗೌಡರಿಗೆ ಶ್ರೇಯಸ್ಸುಂಟಾಗಲಿ ಎಂದು ತುಂಬು ಮನಸ್ಸಿನಿಂದ ಹಾರೈಸುತ್ತೇನೆ.

***

ಒಂದು ಭಾವಚಿತ್ರ

ಗೌರೀಶ ಕಾಯ್ಕಿಣಿ

ಇದೊಂದು ಸಣ್ಣ ಭಾವ ಚಿತ್ರ. ಹಾಗೆಯೇ ಇದು ಒಂದು ದೊಡ್ಡ ಅಭಾವ ಚಿತ್ರವೆಂದರೂ ಸರಿ. ಏಕೆಂದರೆ ಇಲ್ಲಿ ಆಡಿದ್ದಕ್ಕಿಂತ ಆಡದೇ ಬಿಟ್ಟ, ಆಡಲಾರದೇ ಇದ್ದ ವಿವರಗಳೇ ಹೆಚ್ಚು. ಇದಕ್ಕೆ ಮುಖ್ಯ ಕಾರಣ ಡಾ. ಎಸ್. ರಾಮೇಗೌಡರನ್ನು ನಾನು ಕಂಡುಕೊಂಡ ಬಗೆಯೇ ಹಾಗೆ.

ವಿಶ್ವವಿದ್ಯಾಲಯಗಳೆಲ್ಲ ನನಗೆ ಬೆಟ್ಟದ ಹಳ್ಳಿಯಂತೆಯೇ ಬಲು ದೂರ. ನಾನೊಬ್ಬ ಆಕೆಡೆಮಿಕ್ ಇಸಮು ಅಲ್ಲ. ದೂರದ ಬೆಟ್ಟದಂತೆ ಯಾವ ವಿಶ್ವವಿದ್ಯಾಲಯವೂ ನನ್ನ ಅರಿವಿಗೆ ಅಂಥಃ ದೂರತಃ ಪರ್ವತೋ ರಮ್ಯಃ ಅಂತೆಯೇ ಕರ್ನಾಟಕ ವಿಶ್ವವಿದ್ಯಾಲಯವು ನನ್ನ ನಿಲುಕಿಗೆ ದೂರದ ಎತ್ತರದ ಪರ್ವತ. ನಾನೋ ಉತ್ತರ ಕನ್ನಡದ ಕರಾವಳಿಯ ಕಡಲ ತೀರದಲ್ಲಿ ಉಳಿಯುವವನು.

ಆದರೂ ವಿಶ್ವವಿದ್ಯಾಲಯದ ಕೆಲವು ಕುಲಪತಿಗಳ ಕಿರುಪರಿಚಯ ನನಗೆ ಆಗೊಮ್ಮೆ ಈಗೊಮ್ಮೆ ಬಂದಿದ್ದಿದೆ. ಕ.ವಿ.ವಿ. ಪ್ರಥಮ ಕುಲಪತಿ ನಿವೃತ್ತ ನ್ಯಾಯಮೂರ್ತಿ ಶ್ರೀ ಹುಲಕೋಟಿ ಅವರು ನನಗೆ ಗೊತ್ತು. ಆದರೆ ಅದೊಂದು ಉದ್ವೇಗದ ನೆನಪು. ಹಿಂದೊಮ್ಮೆ ನಮ್ಮ ಗೋಕರ್ಣದ ಜಟಾಯುತೀರ್ಥದಲ್ಲಿ ಘಟಿಸಿದ ಹನ್ನೆರಡು ಮಂದಿಯ ಕಗ್ಗೊಲೆಯಲ್ಲಿ ಮೃತರಾದವರಲ್ಲಿ ಒಬ್ಬ ಮಹಿಳೆ ಶ್ರೀ ಹುಲಕೋಟಿಯವರ ನಿಕಟ ಆಪ್ತರಲ್ಲಿ ಒಬ್ಬರಾಗಿದ್ದರೆಂದು ಆಗ ಕೇಳಿದ್ದೆ. ಅವರ ಕುರಿತು ನನಗೆ ಅದೊಂದೆ ದುರಂತ ಸ್ಮರಣೆ.

ಅನಂತರ ಕುಲಪತಿ ಶ್ರೀ ಅಡಕೆಯವರ ಸಂಪರ್ಕ - ಅದೂ ಸರ್ವೇ ಸಾಧಾರಣವಾಗಿತ್ತು. ಆ ಮುಂಚೆ ಮಾನ್ಯ ಅಡಕೆಯವರು ನಮ್ಮ ಜಿಲ್ಲೆಯ ಲೋಕೋಪಯೋಗಿ ವಿಭಾಗದ ಹಿರಿಯ ಇಂಜನೀಯರರಾಗಿದ್ದರು. ನಿಮ್ಮ ಜಿಲ್ಲೆಯ ಒಂದೊಂದು ಮೈಲುಗಲ್ಲಿಗೂ ನನ್ನ ಗುರುತಿದೆ ಎಂದು ಅವರು ಹೇಳಿದ್ದು ನೆನಪಿದೆ. ಮುಂದೆ ಮಾನ್ಯ ಶ್ರೀ ಸದಾಶಿವ ಒಡೆಯರು ಹಾಗೂ ಡಾ. ಆರ್.ಸಿ. ಹಿರೇಮಠರು ನನ್ನ ಒಳ್ಳೆಯ

ಪರಿಚಯದವರಿದ್ದರು. ಅವರಿಬ್ಬರೂ ಉತ್ತಮ ಆಕೆಡೆಮಿಕ್ ಮೇಧಾವಿಗಳು. ನಮ್ಮ ಸಾಹಿತ್ಯಿಕ ವಲಯದವರೇ.

ಆದರೆ ಇವರಾರೂ ನನ್ನ ಮಟ್ಟಿಗೆ ಡಾ. ರಾಮೇಗೌಡರಂತೆ ಆಗಲಿಲ್ಲ. ಅವರನ್ನು ಬಹಳಷ್ಟುಕಾಲ ಕಂಡಿದ್ದರೂ ಸಾಕಷ್ಟು ಅಂಶದಲ್ಲಿ ಅರಿತಿದ್ದಿಲ್ಲ. ಆದರೆ ಕುಲಪತಿ ಎಸ್. ರಾಮೇಗೌಡರು ನನಗೆ ತದ್ವಿರುದ್ಧವಾಗಿಯೇ ಕಂಡರು. ಅವರ ಚಾರಿತ್ರಿಕ ಅಂಶಗಳ ಬಗೆಗೆ ನನ್ನಲ್ಲಿ ಇಂದಿಗೂ ಮಾಹಿತಿಯ ಅಭಾವವೇ ಇದೆ. ಅಂತೆಯೇ ಇದು ಅಭಾವ ಚಿತ್ರ. ಆದರೆ ವ್ಯಕ್ತಿ ಮಾತ್ರರಾಗಿ ಅವರು ಏನೇ ಇದ್ದರೂ ವ್ಯಕ್ತಿತ್ವವಾಗಿ ಮಾನ್ಯ ರಾಮೇಗೌಡರು ನನ್ನ ಮನಸ್ಸನ್ನು ತಟ್ಟಿದರು, ತುಂಬಿದರು. ತಕ್ಕ ತೃಪ್ತಿಯನ್ನು ತಂದರು. ಅದಕ್ಕೆ ನಾನು ಅವರಿಗೆ ಋಣಿಯಾಗಿದ್ದೇನೆ. ಸಂಪರ್ಕದ ಅವಸರ ಸಣ್ಣದು. ಆದರೆ ಅದು ಸಂಪನ್ನವಾಗಿತ್ತು ಸಂಸ್ಕಾರದಿಂದ.

ಒಂದು "ಸುಂದರ ಸಂಜೆ"ಗೆ ಡಾ. ರಾಮೇಗೌಡರು ಅನಿರೀಕ್ಷಿತವಾಗಿ ನಮ್ಮ ಮನೆಗೆ ಬಂದರು. ಅದೂ ಕ್ಲಬ್ಬಿನ ಉಡುಪಿನಲ್ಲಿ ಅಲ್ಲ. ಮಡಿ ಉಟ್ಟು ಮಡಿ ಶಾಲು ಹೊದ್ದುಕೊಂಡು. ಜೊತೆಗೆ ಅವರ ಮಡದಿಯೂ ಇದ್ದರು, ಅಷ್ಟೇ ಮಡಿವಂತಿಕೆಯಲ್ಲಿ! ನಾನು ಮೂಕ ವಿಸ್ಮಿತನಾದೆ. ಆ ಮುಂಚೆ ನಾನು ಅವರನ್ನು ನೋಡಿಯೇ ಇದ್ದಿಲ್ಲ. ಅವರ ಸಂಗಡ ಕುಮಟೆಯ ಶ್ರೀಮತಿ ಕಮಲಾ ಬಾಳಿಗಾ ಬಿ.ಎಡ್ ಕಾಲೇಜಿನ ಪ್ರಾಂಶುಪಾಲ ಡಾ. ಕೆ. ಎಸ್. ಬೈಲಕೇರಿಯವರಿದ್ದರು. ಅವರು ನೇರವಾಗಿ ಶ್ರೀ ಮಹಾಬಳೇಶ್ವರ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಿ ನಮ್ಮಲ್ಲಿ ಬಂದಿದ್ದರು.

ಬಂದದ್ದು ಏಕೆ? ಕೇಳಿ ನನಗೆ ಒಂದಿಷ್ಟು ಸೋಜಿಗ. ಕರ್ನಾಟಕ ವಿಶ್ವವಿದ್ಯಾಲಯವು ನನಗೆ ಗೌರವ ಡಾಕ್ಟರೇಟ್ ನೀಡುವದೆಂದು ತಿಳಿಸಿ ನಾನು ಧಾರವಾಡಕ್ಕೆ ಬರಬೇಕೆಂದು ಬಿನ್ನವಿಸಲಿಕ್ಕೆ ! ನನಗೆ ಅನ್ನಿಸಿತು, ಇಷ್ಟಕ್ಕೆಲ್ಲ ನನ್ನನ್ನು ಹೀಗೆಯೇ ಮುಖತಃ ಭೆಟ್ಟಿಯಾಗುವ ತೊಂದರೆ ಪಡಬೇಕಾಗಿತ್ತೇ? ವಿಶ್ವವಿದ್ಯಾಲಯದ ಕುಲಪತಿಗಳೆಲ್ಲಿ! ಯಾವ ಪದವಿಯನ್ನೂ ಪಡೆಯದ, ಬಯಸದ ಯಕಶ್ಚಿತ್ ನಾನೆಲ್ಲಿ!

ಆದರೆ ಕುಲಪತಿಗಳು ಹಾಗೆ ಭಾವಿಸಲಿಲ್ಲ. ಇದು ಅವರ ಮಾತಿನಿಂದ ಸ್ಪಷ್ಟವಾಯಿತು.

ನನ್ನೊಂದಿಗೆ ಕುಳಿತು ಮಾತಾಡಿ ಕಳೆದ ಒಂದೆರಡು ಗಂಟೆಯಲ್ಲಿ ಅವರ ಶ್ರೀಮದ್ವಿಭೂತಿಮತ್ ವ್ಯಕ್ತಿತ್ವವು ವ್ಯಕ್ತವಾಯಿತು. ಡಾ. ರಾಮೇಗೌಡರ ನಾಮಾಂಕಿತದ ಅಧ್ಯಾಕ್ಷರ 'ಎಸ್' ಅವರ ಸಜ್ಜನಿಕೆ ಸುಸಂಸ್ಕೃತ ಪ್ರಜ್ಞೆಗೆ ಸರ್ವಗ್ರಾಹಿ ವಿಚಕ್ಷತೆಗೆ ಸೋಪಜ್ಞತೆಗೆ ಮತ್ತು ಸಹಜ ಸ್ನೇಹಮಯತೆಗೆ ಸಮನ್ವಿತವಾಗಿಯೇ ಒಂದು ಸಂಕೇತವಾಗಿತ್ತು ಎಂದು ನನಗೆ ಮನವರಿಕೆ ಆಯಿತು.

ಎಂಜಿನೀಯರಿಂಗ್ ಹಾಗೂ ಸ್ಥಾಪತ್ಯ ವಿಜ್ಞಾನದ ಉನ್ನತ ಪದವೀಧರರಾದ ವಿದ್ವನ್ಮಣಿಗಳು ಸಾಹಿತ್ಯದಲ್ಲಿ, ಅದೂ ಕನ್ನಡ ಕಾವ್ಯದಲ್ಲಿ ಆಳವಾದ ಅಷ್ಟೇ ವ್ಯಾಪಕವಾದ

ಪಾಂಡಿತ್ಯ ಮತ್ತು "ಕಾವ್ಯ ಪ್ರಯೋಗ ಪರಿಣತಮತಿ"ಯುಳ್ಳವರಾಗಿ ಲೀಲಾಜಾಲವಾಗಿ ವ್ಯಕ್ತವಾದದ್ದೂ ನನಗೆ ಅಪರಿಮಿತ ಆನಂದವನ್ನು ನೀಡಿತು. ವರಕವಿ ಬೇಂದ್ರೆ, ಕುವೆಂಪು ಡಾ. ಶಿವರಾಮ ಕಾರಂತರ ಬಗೆಗೆ ಅವರು ಆಡಿದ ವಿಚಾರಗಳ ವಿವಿಧತೆಯಿಂದ ಕೂಡಿದ ವಿದಗ್ಧತೆ ನನಗೆ ತುಂಬ ನಿಬ್ಬೆರಗು ಉಂಟು ಮಾಡಿತು. ಬಹುಶ್ರುತರನ್ನು ನಾನು ಕಂಡುದ್ದುಂಟು. ಆದರೆ ಅವರ ದರ್ಶನ ಸರ್ವತೋಮುಖವಾಗಿತ್ತು. ವಿಶೇಷತಃ ಅವರು ಬೇಂದ್ರೆ ಮತ್ತು ಶಿವರಾಮ ಕಾರಂತರ ಕುರಿತು ಅತ್ಯಂತ ಪ್ರೀತ್ಯಾದರದಿಂದ ಮಾತಾಡಿದರು. ನನಗೆ ಕಾಳಿದಾಸನ ಉದ್ಗಾರ ನೆನಪಾಯಿತು. ಕುಲಪತಿ ಕಣ್ವಮಹರ್ಷಿಯ ಬಗೆಗೆ ಈ ಕವಿ ಕುಲಗುರು ಅಂದಿದ್ದ 'ನಾಸ್ತಿಕಶ್ಚಿತ್ ಅವಿಷಯೋ ನಾಮ ಧೀಮತಃ' ಅಂಥ ಧೀಮಂತರು ಡಾ. ಎಸ್. ರಾಮೇಗೌಡರು ಎಂದುಕೊಂಡೆ!

ಅವರ ವಾಗ್ಮಿತೆಯ ಬಗೆಗೆ ಕೇಳಿದ್ದೇನೆ. ಯುನಿವರ್ಸಿಟಿಯ ವಿದ್ವಾಂಸರೊಂದಿಗೂ ವಿದ್ಯಾರ್ಥಿವೃಂದದೊಂದಿಗೂ ಅವರ ಸಹಜ ಸ್ನೇಹಮಯ ಅನೌಪಚಾರಿಕ ನಡೆನುಡಿಗಳ ಬಗೆಗೂ ತಿಳಿದಿದ್ದೆ. ಅವರು Education activist ಎಂದಿದ್ದರು ನನ್ನ ನಿಕಟ ಮಿತ್ರರಾದ ಹಿರಿಯ ಪ್ರಿನ್ಸಿಪಾಲರೊಬ್ಬರು. ವಿಶ್ವವಿದ್ಯಾಲಯದ ಪರಿಸರದ ಪ್ರಸನ್ನತೆಯನ್ನು, ವಿವಿಧ ವಿದ್ಯಾವಿಭಾಗಗಳ ಸಾಂಸ್ಕೃತಿಕ ಗುಣಗಳನ್ನು ಸದಾ ಸಂಪನ್ನವಾಗಿ ಇಡುವ ಅವರ ತತ್ಪರತೆ, ವ್ಯವಹಾರ ನಿಪುಣತೆ, ಧ್ಯೇಯವಾದದೊಂದಿಗೆ ತಾದಾತ್ಮ್ಯತೆ ಎಲ್ಲವನ್ನೂ ನಾನು ದೂರದಿಂದ ಮನಗಂಡಿದ್ದೇನೆ. ಅಂದು ಸಂಜೆ ಅವರ ಸಾನಿಧ್ಯದಿಂದ ಅವರ ಸ್ಪಂದನೆ ನನಗೆ ಆಯಿತು. ದಕ್ಷತೆಯೊಂದಿಗೆ ದಾಕ್ಷಿಣ್ಯ, ದಾಕ್ಷಿಣ್ಯದೊಂದಿಗೆ ದೀಕ್ಷಾಬದ್ಧತೆ ಅವರು ಕಾಪಾಡಿಕೊಂಡ ಮಾದರಿಯ ಕುಲಪತಿಗಳೆಂದರೆ ತಪ್ಪಾಗಲಿಕ್ಕಿಲ್ಲ. ಲೋಕಛಂದಾನುವರ್ತಿ ಮಾರ್ಗ, ಲೋಕಸಂಗ್ರಹದ ಕಲೆ ಅವರಿಗೆ ಹಸ್ತಸಿದ್ಧ. He may be right or wrong. But he can always be correct. ಅಪಾರ ವಿಚಾರಗಳ ಸಮತೂಕದಷ್ಟೇ ಸಮನ್ವಯಕ್ಕೂ ಅವರು ಒಂದು ನಿದರ್ಶನ.

ನಾನು ಪದವಿದಾನ ಸಮಾರಂಭಕ್ಕೆ ಬರಲೇಬೇಕೆಂದು ಅವರು ಆಗ್ರಹ ಮಾಡಿದರು. ಆದರೆ ನಾನು ಅವರಿಗೆ ಈ ಬಗೆಗೆ ನಿರಾಶೆ ಮಾಡಿದೆ. ಆಗ ನನ್ನ ಮಗನನ್ನು ನನ್ನ ಪರವಾಗಿ ಕಳುಹಿಸಲು ಅವರು ಒಪ್ಪಿದರು.

ಕುಲಪತಿಗಳ ಎಲ್ಲ ವರ್ತನೆ ನನಗೆ ಆಢ್ಯತೆ ಆಡಂಬರವಿಲ್ಲದ ಸ್ವಾಭಾವಿಕ ಸಲಿಗೆಯೆಂದಾಗಿಯೇ ತೋರಿತು. ಅಪರಿಚಿತನನ್ನು ಮಿತ್ರನಾಗಿ ಮಿತ್ರನನ್ನು ಸೋದರನಾಗಿ ಕಾಣುವ, ಮಾಡುವ ಸ್ವಭಾವ ಅವರದು. ಇದು ಕೇವಲ ಸ್ವಭಾವೋಕ್ತಿ. ಕಳೆದ ರಾಜ್ಯೋತ್ಸವದಲ್ಲಿ ಡಾ. ಎಸ್. ರಾಮೇಗೌಡರಿಗೆ ರಾಜ್ಯ ಪ್ರಶಸ್ತಿ ದೊರೆಯಿತು. ಅವರಿಂದ ಆ ಪ್ರಶಸ್ತಿಗೆ ತಕ್ಕ ಪ್ರಾಶಸ್ತ್ಯ ಬಂದಿತೆಂದು ನನ್ನ ನಂಬಿಕೆ.

ಕುಲಪತಿ ಡಾ. ಎಸ್. ರಾಮೇಗೌಡರ ದಕ್ಷ ದಾಕ್ಷಿಣ್ಯತೆಯ ಮಾತು ಆಡಿದೆ. ಅವರದೊಂದು ಸಣ್ಣ ಮಾತು ನೆನಪಿಗೆ ಬಂತು. ಬೆಂಗಳೂರಿನ ಯಾವುದೋ ಗುರುಸ್ವಾಮಿ ಟ್ರಸ್ಟಿನ ಪ್ರಸಂಗವದು. ಅವರು ಧಾರವಾಡದ ಸೆಂಟ್ರಲ್ ಬೋರ್ಡ್ ಆಫ್ ಎಜ್ಯುಕೇಶನ್

ಸಂಸ್ಥೆಗೆ ಒಳಪಟ್ಟ ಇಂಗ್ಲಿಷ್ ಮಾಧ್ಯಮದ ಒಂದು ಶಾಲೆ ವಿಶ್ವವಿದ್ಯಾಲಯದ ಒಡೆತನಕ್ಕೆ ಸೇರಿದ ಒಂದು ಕಟ್ಟಡದ ಮುಂದೆ ತೆರೆಯುವ ಸಂದರ್ಭ. ಕ.ವಿ.ವಿ ಸಿಂಡಿಕೇಟ್ ಮೂರು ವರ್ಷಗಳ ಅವಧಿಗೆ ಈ ಶಾಲೆಗೆ ತಮ್ಮ ನಿವೇಶನ ಕೊಡಲು ನಿರ್ಣಯ ಮಾಡಿತು. ಈ ಕುರಿತು ಕುಲಪತಿಗಳನ್ನು ಕೇಳಿದಾಗ ಅವರು ಆ ಶಾಲೆಗಾಗಿ ನಿವೇಶನ ನೀಡಿದ್ದನ್ನು ನಿರಾಕರಿಸಿದರು. ಇದು ಅವರು ನಿರ್ವಹಿಸಿದ ದಕ್ಷನಿಲುಮೆ ಆಗಿತ್ತು. ನಿಜವಾಗಿಯೂ ಅವರು ಅಂಥ ಅನುಮತಿ ನೀಡಿಯೇ ಇದ್ದಿಲ್ಲ. ಸಿಂಡಿಕೇಟ್ ನಿರ್ಣಯವೇನೋ ಆಗಿತ್ತು ನಿಜ. ಆ ಸಭೆಯಲ್ಲಿ ಕುಲಪತಿಯವರು ಉಪಸ್ಥಿತರಿದ್ದರು. ಆದರೆ ಅದರ ಮೂಲಕ ಅವರು ಆ ಟ್ರಸ್ಟಿನ ಶಾಲೆ ತೆರೆಯಲೆಂದು ಅನುಮತಿ ಅಥವಾ ಸೂಚನೆ ನೀಡಿದಂತೆ ಆಗಿದ್ದಿಲ್ಲ. (ಮುಂದೆ ಆ ಶಾಲೆ ಅಲ್ಲಿ ಆದಂತೆಯೂ ಇಲ್ಲ.) ಆದರೆ ಇಲ್ಲಿ ಕುಲಪತಿಗಳು ತಮ್ಮ ನಿಲುಮೆಯನ್ನು ನವಿರಾಗಿಯೇ ನಿರ್ವಹಿಸಿದರು.

ಕನ್ನಡದ ಉನ್ನತಿ ಪ್ರಗತಿ ಜಾಗೃತಿಗಳ ಕುರಿತು ಡಾ. ಎಸ್. ರಾಮೇಗೌಡರ ಭೂಮಿಕೆ ಏನು? ಅವರು ಕನ್ನಡದ ಅಪ್ಪಟ ಅಭಿಮಾನಿಗಳು. ಅದರ ಕಾಯಕಕ್ಕೆ ಕೈಂಕರ್ಯಕ್ಕೆ ಕಟಿಬದ್ಧರು. ದಿಲ್ಲಿಯಲ್ಲಿ ಮಾರ್ಚ ೨೫ನೇ ದಿನಾಂಕ ೧೨ನೆಯ ರಾಷ್ಟ್ರೀಯ ಕನ್ನಡ ಸಮ್ಮೇಲನದ ಅಧ್ಯಕ್ಷ ಸ್ಥಾನದಿಂದ ನಮ್ಮ ಕುಲಪತಿಗಳು ಹೀಗೆ ಅಪ್ಪಣೆ ಕೊಡಿಸಿದರು : ೧. ಕನ್ನಡ ಭಾಷಾ ಸಾಹಿತ್ಯ ಮತ್ತು ಸಂಸ್ಕೃತಿಯ ಸರಿಯಾದ ಯೋಜನೆ ಕೈಗೊಂಡು ಬೆಳೆಯಿಸಬೇಕು. ೨. ಭಾರತದಲ್ಲಿ ಕನ್ನಡಿಗರಿರುವ ಮುಖ್ಯ ನಗರಗಳಲ್ಲಿ ಕನ್ನಡ ಶಾಲೆಗಳನ್ನು ಕೇಂದ್ರಗಳನ್ನು ತೆರೆದು ಚೆನ್ನಾಗಿ ಬೆಳೆಸಬೇಕು. ೩. ರಾಜ್ಯದ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ, ಬೆಂಗಳೂರಿನಲ್ಲಿ ಕನ್ನಡದ ಪ್ರಗತಿಗೆ ಸಂಬಂಧಿಸಿದಂತೆ ಎಲ್ಲ ಕನ್ನಡದ ಪ್ರತಿನಿಧಿಗಳ ಮಹಾಧಿವೇಶನವನ್ನು ಏರ್ಪಡಿಸಬೇಕು. ೪. ನಮ್ಮ ಕನ್ನಡ ಸಂಸ್ಕೃತಿ ಇಲಾಖೆ ಈ ಹೊಣೆಯನ್ನು ನಿರ್ವಹಿಸಬೇಕು. ಮತ್ತು ೫. ಪ್ರತಿಯೊಬ್ಬ ಕನ್ನಡಿಗ ಕನ್ನಡದ ಪ್ರಜ್ಞೆಯನ್ನು ಪ್ರತಿಜ್ಞೆಯಂತೆ ನಿಭಾಯಿಸಬೇಕು.

ಕುಲಪತಿಗಳು ಹಾಕಿಕೊಟ್ಟ ಈ "ಪಂಚಶೀಲ"ಗಳನ್ನು ಅಲ್ಲಗಳೆಯುವವರು ಯಾರು? ಈ ಶೀಲಕ್ಕೆ ಅವರ ಚಾರಿತ್ರ್ಯದ ಮತ್ತು ಚಾತುರ್ಯದ ಚಟುವಟಿಕೆಗಳ ಶೈಲಿಯೇ ಉತ್ತಮ ಉದಾಹರಣೆ. ಅವರ ಚೈತನ್ಯದಿಂದ ಚೇತರಿಸಿದ ಕರ್ನಾಟಕ ವಿಶ್ವವಿದ್ಯಾಲಯವು ಸದಾ ಚೆಲುವಾಗಿರಲಿ !

***

ಕನ್ನಡವಾದಿ, ವಾಗ್ಮಿ, ಆಧ್ಯಾತ್ಮವಾದಿ ಕುಲಪತಿ ಡಾ. ಎಸ್. ರಾಮೇಗೌಡರು

ಎಸ್ಕೆ

ಒಬ್ಬ ಕುಲಪತಿ ಎತ್ತ! ಆ ಎತ್ತರವೇನು! ಒಬ್ಬ ನನ್ನಂತಹ ಕುಲಕರಣಿ ಎತ್ತ! ಈ ಕುಬ್ಜತೆ ಏನು! ಆದರೂ ಕುಲ ಇಬ್ಬರಿಗೂ ಸಾಮಾನ್ಯವಾದ ಕೊಂಡಿ-ಮಾನವೀಯ ಕುಲ. ಈ ಮಾನವೀಯ ಕುಲದ ನಾಲಗೆ, ನಮ್ಮ ಕುಲಪತಿ ಡಾ. ರಾಮೇಗೌಡರ ನಾಲಗೆ ನುಡಿವುದೆಲ್ಲ ಕಾವ್ಯ! 'ನುಡಿವರೇ ನಡುವೆ ತಿರುಳ್, ಪಿಡಿವರೇ ನಡುವೆ ಪುರುಳ್' ಎಂಬ ಮಾತು ಈ ವಾಗ್ಮಿಗೆ ಸರಿಯಾಗಿ ಅನ್ವಯಿಸುತ್ತದೆ. ನುಡಿದರೆ ಮುತ್ತಿನ ಹಾರದಂತಿರಬೇಕು ನಿಜ. ಆದರೆ ಆ ಮುತ್ತಿಗೆ ಜೇನು ಬಳೆದ ಹಲಸಿನ ತೊಳೆಯ ಸವಿಯೂ ಕೂಡಿದ್ದರೆ? ಕೂಡಿದ್ದರೆ ಅದುವೆ ನಮ್ಮ ಕವಿ ಹೃದಯದ ಕುಲಪತಿ, ಡಾ. ರಾಮೇಗೌಡರ ರಸವಾಹೀ ಭಾಷಣ!

ಒಬ್ಬ ಎಂಜನೀಯರ್ ಅಧಿಕಾರಿ, ಆಡಳಿತಗಾರ, ಪ್ರಪಂಚ ಪ್ರದಕ್ಷಿಣೆಗೈದ ಕುಲಪತಿ ಅದೆಷ್ಟು ವಿಷಯಗಳ ಬಗ್ಗೆ ಮಾತಾಡಲು ಸಾಧ್ಯ ಊಹಿಸಿ? ಒಂದು ಪರಿಸರ ಪ್ರಶ್ನೆ ಎನ್ನುತ್ತೀರಾ, ಭಾರತದ ಲಿಬರಲ್ ಆರ್ಥಿಕ ನೀತಿ ಎನ್ನುತ್ತೀರಾ, ಕಮ್ಯುನಿಜಂ ಎನ್ನುತ್ತೀರಾ, ಪ್ರಪಂಚದ ಪ್ರಜಾಪ್ರಭುತ್ವಗಳು ಎನ್ನುತ್ತೀರಾ, ಷಡ್ದರ್ಶನಗಳು ಎನ್ನುತ್ತೀರಾ, ಸಂಖ್ಯಾಶಾಸ್ತ್ರ ಎನ್ನುತ್ತೀರಾ, ಯೋಗಾಭ್ಯಾಸ ಎನ್ನುತ್ತೀರಾ? ವೈಜ್ಞಾನಿಕ ಅತ್ಯಾಧುನಿಕ ಶೋಧಗಳು ಎನ್ನುತ್ತೀರಾ, ಸಾಪೇಕ್ಷವಾದವೆ? ಅಣು ವಿಜ್ಞಾನವೇ? ಎಲೆಕ್ಟ್ರಾನಿಕ್ಸ್ ವಿಷಯಗತಿ? ಆಚಾರ್ಯತ್ರಯ ಸಿದ್ಧಾಂತಗಳೆ? . . . ಇನ್ನು ಕನ್ನಡ ಕವಿಕಾವ್ಯ ವಿಚಾರ ಬಂದರಂತೂ ತೀರಿಯೆ ಹೋಯಿತು. ಕಬ್ಬು ಸುಲಿದಂತೆ ಅರ್ಥೈಸಿ ವಿವರಿಸುತ್ತ ರಸ ಹೀರಿ ಅದನ್ನು ತಮ್ಮ ವಾಕ್ ವಾಹಿನಿಯಾಗಿ ಹಣಿಸುತ್ತಾರೆ.

ಇನ್ನು ಶ್ರೀ ಅರವಿಂದರ ವಿಜ್ಞಾನ ಎಂದರೆ ಅತಿಮಾನಸ ಇಲ್ಲವೆ ಸುಪ್ರಮಾನಸವಾಗಲಿ, ದಿವ್ಯಜೀವನವಾಗಲಿ, ಅವರ ಆಧ್ಯಾತ್ಮಿಕ ಮಹಾಕಾವ್ಯ 'ಸಾವಿತ್ರಿ'ಯಾಗಲಿ ಡಾ. ರಾಮೇಗೌಡರಿಗೆ ಅತ್ಯಂತ ಆಸಕ್ತಿಯ ವಿಷಯಗಳು. ಇದಕ್ಕೆ ಕಾರಣ

ಕೇಂದ್ರಾಡಳಿತ ಪಾಂಡಿಚೇರಿಯ ಎಂಜಿನಿಯರಿಂಗ್ ಕಾಲೇಜಿನ ಪ್ರಥಮ ಪ್ರಾಚಾರ್ಯರಾಗಿ ೧೯೯೦, ಜುಲೈ ೭ ಕ್ಕೆ ಧಾರವಾಡದ ಕುಲಪತಿಯಾಗಿ ಬರುವವರೆಗೆ, ಪಾಂಡಿಚೇರಿಯ ಆಶ್ರಮದ ಸಂಪರ್ಕ. ಆ ಸಂಪರ್ಕ, ಆ ಯೋಗ-ಸುಯೋಗಗಳೆ ಡಾ. ರಾಮೇಗೌಡರನ್ನು ಕುಲಪತಿಯ ಎತ್ತರಕ್ಕೆ ಏರಿಸಿರಬೇಕು. ಧಾರವಾಡಕ್ಕೆ ತಂದಿರಬೇಕು.

ಧಾರವಾಡಕ್ಕೆ ಬಂದ ಮೇಲೂ ಶ್ರೀ ಅರವಿಂದರ ಸೇವಾಯೋಗ, ಆಧ್ಯಾತ್ಮ ಸಂಪರ್ಕ ತಪ್ಪಲಿಲ್ಲ. ಶ್ರೀ ಅರವಿಂದೋ ಸೊಸೈಟಿಯ ಧಾರವಾಡ ಕೇಂದ್ರ, ಕುಲಪತಿ ಡಾ. ರಾಮೇಗೌಡರನ್ನು ಬರಮಾಡಿಕೊಂಡಿತು. ಡಾ. ರಾಮೇಗೌಡ ದಂಪತಿಗಳನ್ನು ಗೌರವಿಸಿತು.

೧೯೯೩ ಭಾರತದಾದ್ಯಂತ ಶ್ರೀ ಅರವಿಂದರ ಸ್ವದೇಶಾಗಮನ ಶತಮಾನ ವರ್ಷವೆಂದು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಡಾ. ರಾಮೇಗೌಡರು ಕರ್ನಾಟಕ ಸಮಿತಿಯ ನಮ್ಮ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಕರ್ನಾಟಕ ಸರ್ಕಾರದ ಮಟ್ಟದಲ್ಲಿ ಜರುಗಿದ ಸ್ವದೇಶಾಗಮನ ಚಟುವಟಿಕೆಗಳೆಲ್ಲ ನಮ್ಮ ಕುಲಪತಿಯ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರುಗಿದವು. ಶ್ರೀ ಅರವಿಂದರ ಶೈಕ್ಷಣಿಕ ವಿಚಾರಗಳನ್ನು ಕುರಿತು ಪ್ರಸಾರ ಭಾಷಣ ಮಾಡಿದ್ದಲ್ಲದೆ, ಬೆಂಗಳೂರು ವಿಧಾನ ಸೌಧದಲ್ಲಿ ಕರ್ನಾಟಕ ಕೇಂದ್ರದ ವತಿಯಿಂದ ಏರ್ಪಡಿಸಲಾಗಿದ್ದ ಗೋಷ್ಠಿಗಳಲ್ಲೂ ಕ್ರಿಯಾತ್ಮಕವಾಗಿ ಭಾಗವಹಿಸಿದರು. ನಮ್ಮ ಧಾರವಾಡ ಕೇಂದ್ರದ ಅಧ್ಯಕ್ಷರಾದ ಶ್ರೀಮತಿ ಶಾಂತಾದೇವಿ ಮಾಳವಾಡ ಅವರು ರಚಿಸಿದ ಗೀತಮಯ ರೂಪಕವು ಬೆಂಗಳೂರಿನ ಭವ್ಯ ರಂಗದ ಮೇಲೆ ಯಶಸ್ವಿಯಾಗುವುದಕ್ಕೆ ಶ್ರೀ ಅರವಿಂದೋ ಸೊಸೈಟಿಯ ಕರ್ನಾಟಕ ಕೇಂದ್ರದೊಡನೆ ಡಾ. ರಾಮೇಗೌಡರ ಶ್ರಮವೂ ಅದರ ಹಿಂದೆ ತೆರೆಮರೆಯಲ್ಲಿ ಕಾರ್ಯ ಮಾಡಿತ್ತು.

ಪಂಡಿತರು, ವಿಚಾರವೇತ್ತರು ತಮ್ಮ ಅನಿಸಿಕೆಗಳನ್ನು ವೇದಿಕೆಗಳಿಂದ ಸಭೆಯನ್ನುದ್ದೇಶಿಸಿ ಹೇಳಬಹುದು. ಆದರೆ ಅವರು 'ವಾಗ್ಮಿ' ಎನಿಸಲಾರರು. ಡಾ. ರಾಮೇಗೌಡರು ನಿಜವಾದ ಅರ್ಥದಲ್ಲಿ ವಾಗ್ಮಿ. ಗುರುದೇವ ಡಾ. ರಾನಡೆಯವರು ಮಹಾಜ್ಞಾನಿ, ಮಹಾ ಆಧ್ಯಾತ್ಮಿಯಾಗಿದ್ದರು. ಆದರೆ ವಾಗ್ಮಿತೆ ಅವರ ಮಾತುಗಾರಿಕೆಯಲ್ಲಿ ಮಹತ್ವದ್ದಾಗಿರಲಿಲ್ಲ. ಚುರುಕಾಗಿ ಬರೆಯುವ, ಪ್ರತಿಭಾವಂತ ಪತ್ರಿಕಾ ಸಂಪಾದಕ ಕೆರೂರ ವಾಸುದೇವಾಚಾರ್ಯ ಒಂದು ಅಪರೂಪದ ಸಂದರ್ಭದಲ್ಲಿ ಅಧ್ಯಕ್ಷತೆ ವಹಿಸಿದ್ದಾಗ ಕೊನೆಗೆ ಮಾತನಾಡಲು ಎದ್ದಾಗ ಅವರಿಗೆ ಸಭಾಕಂಪವಾಗಿ 'ಅಧ್ಯಕ್ಷನಾಗಿ ನಾನು ಮಾತನಾಡ ಬೇಕಾದುದನ್ನೆಲ್ಲಾ ನನ್ನ 'ಶುಭೋದಯ' (ವಾರಪತ್ರಿಕೆ)ದ ಸಂಪಾದಕೀಯದಿಂದ ಮಾತನಾಡುತ್ತೇನೆ' ಎಂದು ಹೇಳಿ ಕೂತು ಬಿಟ್ಟರಂತೆ. (ಆಮೇಲೆ ಪತ್ರಿಕೆಯಲ್ಲಿ ಬರೆದಾಗ ಪತ್ರಿಕೆಯ ಪ್ರತಿಗಳು ಕಬ್ಬಾಡಿ ಹೋದುವಂತೆ.)

ನಮ್ಮ ಕುಲಪತಿಗಳು ಅಧ್ಯಕ್ಷರಾಗಿಯೆ ಮಾತನಾಡಲಿ, ಅತಿಥಿಗಳಾಗಿಯೆ ಮಾತನಾಡಲಿ ಕೈಯಲ್ಲಿ ಒಂದಿಷ್ಟು ಟಿಪ್ಪಣಿಗಳನ್ನು ಕೂಡ ಹಿಡಿಯುತ್ತಿರಲಿಲ್ಲ. ಆದರೆ ವಿಚಾರ ಭಾಂಡಾರವು ವಾಕ್ ಪ್ರವಾಹವಾಗಿ ಹೊರಸೂಸತೊಡಗಿದಾಗ ಪ್ರೇಕ್ಷಕರು ಮುಗ್ಧರಾಗಿ ಹೋಗುತ್ತಿದ್ದರು. ಈ ವಾಗ್ಮಿತೆಯೆನ್ನುವುದು ಹಾಡುಗಾರಿಕೆಯಂತೆ ಪ್ರತಿಭೆಯ

ಒಂದು ಕಲೆ. ಡಾ. ರಾಮೇಗೌಡರು ಮಾತನಾಡಲಿಕ್ಕೆ ಎದ್ದರೆಂದರೆ ಆ ಸ್ಪಷ್ಟ ಉಚ್ಚಾರಣೆ, ಆಸ್ಫುಟವಾದ ವಾಣಿ, ಮನೋಜ್ಞವಾದ ವಿಚಾರ ಸರಣಿ, ಮಾತುಮಾತಿಗೆ ಕುವೆಂಪು, ಅಂಬಿಕಾತನಯದತ್ತರ ಕಾವ್ಯಗಳಿಂದ ಸಾಲುಗಟ್ಟಲೆ ಉದ್ಧರಣೆಗಳು, ಆ ಮಾತುಗಾರಿಕೆಯ ಶೈಲಿ, ಆ ಶೈಲಿಗೊಂದು ಓಘ, ಒಮ್ಮೊಮ್ಮೆ ಒಂದು ಅಂಶವನ್ನು ಬಿಂಬಿಸುವಂತೆ ಹೇಳುವ ಒಂದಕ್ಕೆ ನಾಲ್ಕು ಸಮಾನಾರ್ಥದ ಸುಂದರ ಶಬ್ದಗಳ ಸೂರಾಟ ಈ ಎಲ್ಲ ಗುಣಗಳಿಂದ ಅವರ ಭಾಷಣ, 'ವಾಗ್ಮಿತೆ' ಎನಿಸಿಕೊಳ್ಳುತ್ತಿತ್ತು.

ಕಳೆದ ಆರೇಳು ವರ್ಷಗಳಿಂದ ನಾನು ಡಾ. ರಾಮೇಗೌಡರ ಭಾಷಣಗಳನ್ನು ಹಲವಾರು ಸಂದರ್ಭಗಳಲ್ಲಿ, ಹಲವಾರು ವೇದಿಕೆಗಳಿಂದ ಕೇಳಿದ್ದೇನೆ. ಅಧ್ಯಕ್ಷರಾಗಿ ಮಾತನಾಡಿದ್ದನ್ನು, ಉದ್ಘಾಟಕರಾಗಿ ಮಾತನಾಡಿದ್ದನ್ನು, ಮುಖ್ಯ ಅತಿಥಿಗಳಾಗಿ ಮಾತನಾಡಿದ್ದನ್ನು ಕೇಳಿದ್ದೇನೆ. ಮುಖ್ಯವಾಗಿ ಅವರು ಹಲವು ಹತ್ತು ವಿಷಯಗಳ ಮೇಲೆ ಪ್ರಭುತ್ವವನ್ನು ತಂದುಕೊಂಡಂತಹ ಬಹುಶ್ರುತರು. ಒಮ್ಮೊಮ್ಮೆ ಪ್ರಾಸಂಗಿಕವಾಗಿ ಒಂದು ಹೊಸ ಪುಸ್ತಕವನ್ನು ಬಿಡುಗಡೆ ಮಾಡಬೇಕಾಗಿರುತ್ತದೆ. ಒಬ್ಬ VIP ಯ ಸನ್ಮಾನಾರ್ಥವಾಗಿ ಮಾತನಾಡುವುದಿರುತ್ತದೆ. ಇಂತಹ ಪ್ರಸಂಗಗಳಲ್ಲಿ ಭಾಷಣದ ತಯ್ಯಾರಿ ಎಂಬುದು ಸಾಧ್ಯವಾಗುವುದಿಲ್ಲ. ಅಂತಹ ಹನ್ನೊಂದನೆಯ ತಾಸಿನ ಅವರ ಆಶುಭಾಷಣಗಳನ್ನೂ ಕೇಳಿದ್ದೇನೆ. ಅಲ್ಲಿಯೂ ಅವರು ತಮ್ಮ ವಾಗ್ಮಿತೆಯ ಬಲದಿಂದ ಪರಿಣಾಮಕಾರಿಯಾಗಿ 'he has rosen to the occasion' ಎಂದು ಹೇಳಬಹುದು. " ಎಷ್ಟೋ ಸಾರಿ ಸಭೆಯ ಮುಂದೆ ನಿಂತಾಗ, ಮೈಕ್ ಮುಂದೆ ಬಾಯಿ' ತೆರೆದಾಗ, ವಿಷಯದೊಳಕ್ಕೆ ಇಣುಕಿ ನೋಡಿ ಹೊಳೆದುದನ್ನು ಹೇಳಿ, ಮಾತನ್ನು ನಿಲ್ಲಿಸದೆ, ಶ್ರೋತೃಗಳ ಮುಂದೆ 'ಬಚಾವ್' ಆದ ಸಂದರ್ಭಗಳೂ ಉಂಟು", ಎಂದು ನಮ್ಮ ರಾಮೇಗೌಡರು ವಿನಯ ಸೌಜನ್ಯಗಳಿಂದ ಹೇಳಿಯೂ ತಾವೊಬ್ಬ ಪ್ರಾಸಾದಿಕ ವಾಗ್ಮಿ ಎಂಬ ಮಾತನ್ನೇ ಸಿದ್ಧ ಮಾಡಿದ್ದಾರೆ.

ನಾನೂ ಡಾ. ರಾಮೇಗೌಡರೂ ಒಂದೇ ವೇದಿಕೆಯನ್ನು ಅನೇಕ ಸಲ ಹಂಚಿಕೊಂಡಿದ್ದೇವೆ. ಹೆಚ್ಚಾಗಿ ಬೇಂದ್ರೆ ಶತಮಾನೋತ್ಸವದ ಸಂದರ್ಭಗಳಲ್ಲಿ, ಶ್ರೀ ಅರವಿಂದರ ಸ್ವದೇಶಾಗಮನ ಸಂದರ್ಭಗಳಲ್ಲಿ, ವಿದ್ಯಾವರ್ಧಕ ಸಂಘದ ಅನೇಕ ಕಾರ್ಯಕ್ರಮಗಳಲ್ಲಿ. ಈ ಸಂದರ್ಭಗಳಲ್ಲೆಲ್ಲಾ ನನ್ನಂತಹ ಒಬ್ಬ ತೀರ ಸಾಮಾನ್ಯನನ್ನು, ಅದೂ ನಿವೃತ್ತನಾದ ಒಬ್ಬ ನಿರುಪಯೋಗಿ, (ನಿರುಪದ್ರವಿ ಎಂದೂ ಬೆನ್ನು ತಟ್ಟಿಕೊಳ್ಳಲೆ?) ವೃದ್ಧನನ್ನು ಅದೆಂತಹ ಪ್ರೀತಿಯಿಂದ, ವಿಶ್ವಾಸದಿಂದ, ವಾತ್ಸಲ್ಯಭಾವದಿಂದ ಕಂಡಿದ್ದಾರೆ! ಅವರ ಹಿತವಾದ ನಾಲ್ಕು ಹೊಗಳಿಕೆಯ ಮಾತು ಕೇಳಿಯೆ 'ಪರವಾಗಿಲ್ಲ ನನ್ನಲ್ಲೂ ಸ್ವಲ್ಪ ಯೋಗ್ಯತೆ ಇದೆ, ಇಲ್ಲದಿದ್ದರೆ ಒಂದು ಮಹಾವಿಶ್ವವಿದ್ಯಾಲಯದ ಕುಲಪತಿಯೊಬ್ಬರು ಹೀಗೆ ಅಂತಃಕರಣವುಕ್ಕುವಂತೆ ಮಾತನಾಡುತ್ತಿದ್ದರೆ?' ಎಂದು ಕೊಂಡಿದ್ದೇನೆ. ಅಂತೆಯೇ ಮೊದಲಿಗೆ ಹೇಳಿದ್ದೇನೆ ಎತ್ತಣ ಕುಲಪತಿ, ಎತ್ತಣ ಕುಲಕರಣಿ ಎಂದು.

ಗುಣಕ್ಕೆ ಗೌರವ, ಗುಣಕ್ಕೆ ನಿರ್ಮಾತ್ಸರ್ಯದ ಪೂಜೆ ಎಂಬ ಸದ್ಗುಣವನ್ನು ನಮ್ಮ ರಾಮೇಗೌಡರು ಡಾ. ವಿ. ಕೃ. ಗೋಕಾಕರನ್ನು ಅವರ ಕೊನೆಯ ದಿನಗಳಲ್ಲಿ ಕೊನೆಯ ಸಲ

ಅವರಿಗೆ ಧಾರವಾಡದ, ಕರ್ನಾಟಕ ಕಾಲೇಜಿನ ಗಂಧದ ಪ್ರತಿಮೆಯೊಂದನ್ನು ನೀಡಿ ಗೌರವಿಸಿ, ಅವರ ಹೆಗ್ಗಳಿಕೆಯನ್ನು ಹಾಡಿ ಹೊಗಳಿದಾಗ ಆನಂದಭಾಷ್ಪಗಳನ್ನು ಸುರಿಸದವರು ಬಹಳ ಕಡಿಮೆ. ಸ್ವತಃ ಅತಿಥಿ ಗೋಕಾರರು ನೀಡಿದ ಉತ್ತರವೇ ಇದಕ್ಕೆ ಸಾಕ್ಷಿ! “ ಅತ್ತೆಯ ಮನೆಗೆ ಹೋದ ಹೆಣ್ಣುಮಗಳು, ದೀಪಾವಳಿ ಹಬ್ಬಕ್ಕೆಂದು ಮತ್ತೆ ತವರಿಗೆ ಬಂದಂತೆ ನನಗೆ ಅನಿಸಿದೆ” ಎಂದು! ಧಾರವಾಡದ ಕೆಂಧೂಳಿಯಲ್ಲಿ ಗೋಧೂಳಿಯಕಾಲಕ್ಕೆ ಸಾಧನಕೇರಿ ಯಾತ್ರೆಮಾಡಿದ್ದ ಗೋಕಾಕರು ಬೇಂದ್ರೆ ಮತ್ತು ಗೆಳೆಯರ ಗುಂಪಿನ ಒಲವನ್ನು ಉಂಡವರು. ಕರ್ನಾಟಕ ಕಾಲೇಜಿನ ಅವರ ಪ್ರೀತಿ, ಆ ಗಂಧದ ಪ್ರತಿಮೆಯನ್ನು ಬಗಲೊಳಗಿಟ್ಟುಕೊಂಡಾಗ ಉಕ್ಕಿ ಹರಿದಿತ್ತು.‘ಗುಣಾಃ ಪೂಜಾಸ್ಥಾನಂ’ ಎಂಬ ಮಾತನ್ನು ಕೃತಿಯಾಗಿಸಿದ ಹೃದಯ ಶ್ರೀಮಂತಿಕೆ ನಮ್ಮ ಕುಲಪತಿ ಡಾ. ರಾಮೇಗೌಡರದು.

ಅಯ್ತು! ನಮ್ಮ ಕುಲಪತಿಗಳು ಸಲ್ಲಿಸಿದ ಸನ್ಮಾನವೇ ಡಾ. ಗೋಕಾಕರ ಬದುಕಿನಲ್ಲಿ ಸಂದ ನೂರಾರು ಸನ್ಮಾನಗಳಲ್ಲಿ ಕೊನೆಯದು! ‘ನಮ್ಮ ರಾಮೇಗೌಡರು ನನಗೆ ನನ್ನ ಮಗ ಅನಿಲನಿಗೇನೂ ಕಡಿಮೆಯಿಲ್ಲ’ ಎಂದು ಉದ್ಗರಿಸಿದರು ದಾದಾ!

ಇನ್ನು ನನ್ನಂತಹನು ಇಂತಹದೇ ಉದ್ಗಾರವೆತ್ತುವುದೇನು ಮಹಾ! ನನ್ನ ಕೊಂಚ ಬರವಣಿಗೆಯನ್ನು, ಗೋಕಾಕರ ಬಗ್ಗೆ ನಾನು ಬರೆದ ಗ್ರಂಥವನ್ನು, ಅಲ್ಲಲ್ಲಿ ಸಮಾನ ವೇದಿಕೆಯಿಂದ ನಾನು ನನ್ನ ಕನ್ನಡದಲ್ಲಿ ಮಾತನಾಡಿದುದನ್ನು, ಅದೂ ಅಲ್ಲದೆ ಶ್ರೀ ಅರವಿಂದರ ಶೈಕ್ಷಣಿಕ ವಿಚಾರಗಳನ್ನು ಕುರಿತ‘ಸಮಗ್ರಶಿಕ್ಷಣ’ ಎಂಬ ಗ್ರಂಥ ರಚನೆಯಲ್ಲಿ ನಾನು ತೊಡಗಿರುವುದನ್ನು ಕಂಡ ಡಾ. ರಾಮೇಗೌಡರು ನನಗೆ ೧೯೯೫ ಅಗಸ್ಟ್ ೭ ರಂದು ‘ಡಾ. ಪಾವಟೆ ಉಪನ್ಯಾಸಮಾಲಿಕೆಯ’ ಭಾಷಣವನ್ನು ಮಾಡಲು ಹಿಂದು ಮುಂದು ನೋಡದೆ(ಬಹುಶಃ ನಮ್ಮ ಡಾ. ರಘುನಾಥ ಭಟ್ಟರ, ಪ್ರಸಾರಾಂಗದ ಪ್ರೊ. ನಾಗೇಶರ ಶಿಫಾರಸಿನ ಆಧಾರದಮೇಲೆ) ನನ್ನನ್ನು ‘ಸಮಗ್ರಶಿಕ್ಷಣ’ ಕುರಿತು ಉಪನ್ಯಾಸ ಮಾಡಲು ಆಮಂತ್ರಿಸಿಬಿಟ್ಟರು. ಯಾರ ಉಪನ್ಯಾಸಮಾಲಿಕೆ, ಡಾ. ನಾನೀ ಪಾಲ್ಕಿವಾಲಾ ಅಂತಹ ಅತಿಥಿಯೋಗ್ಯರೆನಿಸಬೇಕೊ ಅಂತಹರ ಜಾಗದಲ್ಲಿ ಈ ನಾನೀಕಾಕಾ- ಬಾಯಿ ಹಾಕಿ ಬಿಟ್ಟನೆಂದರೆ ಅದು ನಮ್ಮ ಕುಲಪತಿಗಳ ನಿಕಟ ವಿಶ್ವಾಸದ ಒಂದು ನಿದರ್ಶನವೆನ್ನಬಹುದು.

ಒಂದು ವಿಶ್ವವಿದ್ಯಾಲಯದ ಕುಲಪತಿ ಎಂದರೆ ದಂತದ ಗೋಪುರದಲ್ಲಿರುವವರು ಎಂಬುದು ವಾಡಿಕೆ. ಶ್ರೀ ಸಾಮಾನ್ಯನಿಗೆ ಅಂತಹರ ದರ್ಶನ ದುರ್ಲಭ. ಆದರೆ ನಮ್ಮ ಈ ಕುಲಪತಿಗಳು ತಾವು ಶ್ರೀ ಸಾಮಾನ್ಯನ ಪ್ರತಿನಿಧಿ ಎಂಬುದನ್ನು ತಮ್ಮ ಒಲವು, ನಿಲುವುಗಳಿಂದ ತೋರಿಸಿದ್ದಾರೆ. ನಮ್ಮ ಗದುಗಿನ ಜಗದ್ಗುರುಗಳೂ ಹೀಗೆಯೆ- ನನ್ನಂತಹ ಶ್ರೀಸಾಮಾನ್ಯನೊಡನೆ ತಮ್ಮ ಮಲಗುವ ಕೋಣೆಯಲ್ಲಿ (ಅದು ಜಗದ್ಗುರುಗಳ ಗ್ರೀನ್ ರೂಂ ಎನ್ನಬಹುದೆ?) ನನಗೊಂದು ರಾಗಿ ರೊಟ್ಟಿಯನ್ನು ನೀಡಿ ತಾವೊಂದು ರಾಗಿ ರೊಟ್ಟಿ ತಿಂದು ತಮ್ಮ ಘನಮನವನ್ನು, ಏಕೋಭಾವವನ್ನು ತೋರಿದ್ದಾರೆ.

‘ಮೆಲುಕು’ ಡಾ. ರಾಮೇಗೌಡರ ಟಿಪ್ಪಣಿಗಳು ಕೂಡ ಇಲ್ಲದೆ ಮಾಡಿದ ಆಡು ಭಾಷಣಗಳ ಧ್ವನಿಸುರುಳಿಗಳಿಂದ ಕಾಗದ-ಮಸಿಗಿಳಿದ ಕಪ್ಪು-ಬಿಳುಪಿನ ಸಂಗ್ರಹ! ಇದರ

ಮೊದಲ ಭಾಗ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರ ನವನಿರ್ಮಿತ ಕಟ್ಟಡದ ಸುಂದರ ಆವರಣದಲ್ಲಿ ಈ ಪ್ರಕೃತಿರಮಣೀಯ ಭವ್ಯಮಂದಿರದ(ಬೆಳಗಾಂವಿ ರಸ್ತೆಯ ಭೂತರಾಮನ ಹಟ್ಟಿ) ಉದ್ಘಾಟನೆಯೊಂದಿಗೆ ಬಿಡುಗಡೆಯಾಯಿತು. ಕಟ್ಟಡದ ಉದ್ಘಾಟನೆ ಕರ್ನಾಟಕದ ಆಂದಿನ ಜನಪ್ರಿಯ ಮುಖ್ಯಮಂತ್ರಿ, ಸಾಹಿತಿ ಮಾನ್ಯ ಶ್ರೀ ವೀರಪ್ಪಮೊಯ್ಲಿ ಆವರಿಂದ!! 'ಮೆಲುಕಿ'ನ ಬಿಡುಗಡೆ ಸಾಹಿತಿ ಶ್ರೀಸಾಮಾನ್ಯ ಎನ್ಕೆಯಿಂದ! ಎಲ್ಲಿಂದೆಲ್ಲಿಗೆ! ಇದು ನಮ್ಮ ಕುಲಪತಿಯವರ ಸಮತೂಕದ ಸಮತಾಭಾವದ ದೃಷ್ಟಿ!

ನಮ್ಮ ರಾಮೇಗೌಡರು ಇನ್ನೂ ನಿವೃತ್ತಿ ವಯಸ್ಸನ್ನು ಮುಟ್ಟಿಲ್ಲ. ಆವರಿಗೀಗ ೫೭. ವಯಸ್ಸು ಚಿಕ್ಕದು. ಚೇತನ ದೊಡ್ಡದು. ಉತ್ಸಾಹ ಅದಮ್ಯ. ಗುಣಕ್ಕೆ ಗೌರವದ ಭಾವ. ನಾನು ಮುಖ್ಯ ಅತಿಥಿಯಾಗಿದ್ದ ಡಾ. ಪಾವಟೆ ಉಪನ್ಯಾಸಮಾಲೆಯ ವಂದನಾರ್ಪಣೆಯಲ್ಲಿ ಕುಲಸಚಿವರು ಒಂದು ವಿಷಯ ಹೇಳಿದರು.' ಡಾ. ಪಾವಟೆ ಆವರು ತಮ್ಮ ಕುಲಪತಿಯ ನಿಲುವಂಗಿಯನ್ನು ಕಳಚಿಟ್ಟ ಮೇಲೆ ಪಂಜಾಬದ ಗವರ್ನರರಾಗಿ ಹೋದರು. ಡಾ. ರಾಮೇಗೌಡರು ತಮ್ಮ ನಿಲುವಂಗಿಯನ್ನು ತೆಗೆದಿಟ್ಟ ಮೇಲೆ ಯಾವ ರಾಜ್ಯದ ಗವರ್ನರರಾಗುವರೋ ನೋಡಬೇಕು.'

❊ ❊ ❊

ಆದರ್ಶ ದಂಪತಿಗಳು

ಶಾಂತಾದೇವಿ ಮಾಳವಾಡ

ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಡಾ. ಎಸ್. ರಾಮೇಗೌಡರು ಕುಲಪತಿಗಳಾಗಿ ಬಂದಿದ್ದಾರೆ. ಅವರು ಪಾಂಡಿಚೇರಿ ಎಂಜನೀಯರಿಂಗ್ ಕಾಲೇಜದ ಪ್ರಿನ್ಸಿಪಾಲರಾಗಿದ್ದರಂತೆ, ಶ್ರೀ ಅರವಿಂದಾಶ್ರಮದ ಸಂಪರ್ಕವಿದೆಯಂತೆ ಹಾಗೂ ಒಳ್ಳೆ ಭಾಷಣಕಾರರು ಎಂಬುದಾಗಿ ಅನೇಕರ ಬಾಯಿಯಿಂದ ಕೇಳಿದ್ದೆ. ಒಂದು ಸಲ ಯಾವುದೋ ಕಾರ್ಯಕ್ರಮದಲ್ಲಿ ಭಾಷಣ ಕೇಳುವ ಅವಕಾಶ ದೊರೆತಿತ್ತು. ಕಳೆದ ಐವತ್ತು ವರುಷಗಳಿಂದ ನಮ್ಮ ಮನೆಯಲ್ಲಿ ಶ್ರೀ ಅರವಿಂದ, ಮಾತೆಯರ ಧ್ಯಾನ ಪ್ರಾರ್ಥನೆ, ಅವರ ತತ್ವಜ್ಞಾನದ ಗ್ರಂಥ ವಾಚನ ಮೊದಲಾದ ಕಾರ್ಯಕ್ರಮಗಳು ಪ್ರತಿ ರವಿವಾರ ಬೆಳಿಗ್ಗೆ ನಡೆಯುತ್ತಿದ್ದವು. ಕರ್ನಾಟಕ ರಾಜ್ಯಮಟ್ಟದ ಅರವಿಂದೊ ಸೊಸೈಟಿಯ ಕಾರ್ಯದರ್ಶಿ ಶ್ರೀ ಎಸ್.ವಿ. ಸಬ್ನೀಸರ ಹೇಳಿಕೆಯ ಮೇರೆಗೆ ಅರವಿಂದ ಸೊಸೈಟಿ ಸೆಂಟರ್ ೧೯೬೨ ಫೆಬ್ರುವರಿಯಿಂದ ನಮ್ಮ ಮನೆಯಲ್ಲಿ ಪ್ರಾರಂಭವಾಯಿತು. ಜೂನ ೨೧ರಂದು ನಮ್ಮ ಸೆಂಟರಿನಲ್ಲಿ ಪ್ರಥಮ ಭಾಷಣಕಾರರನ್ನಾಗಿ ಕುಲಪತಿ ಡಾ. ಎಸ್. ರಾಮೇಗೌಡರನ್ನು ಆಮಂತ್ರಿಸಲಾಯಿತು. ಬೆಳಿಗ್ಗೆ ಒಂಭತ್ತು ಗಂಟೆಗೆ ಕಾರ್ಯಕ್ರಮಕ್ಕೆ ಸರಿಯಾದ ವೇಳೆಗೆ ಬಂದರು. ಸಾಕಷ್ಟು ಜನ ಸದಸ್ಯರೂ ಕೂಡಿದ್ದರು. ಮಾನ್ಯ ಕುಲಪತಿಗಳು ದೀಪ ಬೆಳಗಿಸಿ ಕಾರ್ಯಕ್ರಮದ ಉದ್ಘಾಟನೆ ಮಾಡಿದರು. ಶ್ರೀ ಮಾತಾರವಿಂದರ ಭಾವಚಿತ್ರಗಳಿಗೆ ಹೂಮಾಲೆ ಅರ್ಪಿಸಿದ ನಂತರ ಸದಸ್ಯೆಯರಿಂದ ಪ್ರಾರ್ಥನೆ, ನಂತರ ಡಾ. ಎಸ್. ರಾಮೇಗೌಡರ ಭಾಷಣ. ಅರವಿಂದಾಶ್ರಮದ ಶಾಂತ ಪವಿತ್ರ ವಾತಾವರಣ, ಅಲ್ಲಿಯ ಶಿಕ್ಷಣ ಪದ್ಧತಿ, ಆಶ್ರಮದ ಕಾರ್ಯವಿಧಾನ, ಶ್ರೀ ಅರವಿಂದ ಮಾತೆಯರ ತತ್ವಜ್ಞಾನ ಕುರಿತು ಉದ್ಬೋಧಕ ಭಾಷಣ ಮಾಡಿದರು. ಪಾಂಡಿಚೇರಿ ಎಂಜನೀಯರಿಂಗ್ ಕಾಲೇಜಿನಲ್ಲಿ ಕರ್ನಾಟಕ ಸಂಘ ಸ್ಥಾಪಿಸಿದ್ದನ್ನು, ಆಶ್ರಮಕ್ಕೆ ಬಂದ ಹಲವಾರು ಜನ ಹಿರಿಯ ಸಾಹಿತಿಗಳನ್ನು ಭಾಷಣಕ್ಕೆ ಕರೆಯಿಸಿದುದನ್ನೂ ಹೇಳಿದರು. ಶುಭ್ರ ಬಿಳಿಯ ಲುಂಗಿ, ಬಿಳಿ ಶಿಲ್ಕ ನೆಹರೂ ಶರ್ಟಧರಿಸಿ ಬಂದ ಕುಲಪತಿಗಳ ವೇಷ ಸರಳ, ಎಂದು ನಾವೆಲ್ಲ ಅಂದುಕೊಂಡೆವು. ಭಾಷಣ ಕೇಳಿದ ಮೇಲೆ ಅವರು ನಮ್ಮೆಲ್ಲರೊಂದಿಗೆ ೧ ೧/೨

ಗಂಟೆ ಕಳೆದಾಗ, ಅವರ ನಡೆ ಸರಳ, ನುಡಿ ಸರಳ, ಹೃದಯ ಸರಳ ಎಂದೆನಿಸಿತು. ಕುಲಪತಿ ಎಂಬ ಅಹಂಕಾರ ಸೋಂಕಿರಲಿಲ್ಲ.

"ತಾಯಿ ಶಕ್ತಿದಾತೆ, ಪತ್ನಿ ಸ್ಫೂರ್ತಿದಾತೆ" ಎಂದು ರವೀಂದ್ರನಾಥ ಠಾಕೂರರು ಬರೆದ ಈ ಮಾತು ಮಾನ್ಯ ರಾಮೇಗೌಡ ದಂಪತಿಗಳನ್ನು ಕಂಡಾಗ, ನಿಜವೆನಿಸಿತು. ಡಾ. ಎಸ್. ರಾಮೇಗೌಡರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಎರಡು ಅವಧಿಗೆ ಕುಲಪತಿಗಳಾಗಿದ್ದರು. ವಿಸ್ತಾರವಾಗಿ ಹಬ್ಬಿರುವ, ಇನ್ನೂ ಬೆಳೆಯುತ್ತಿರುವ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯ ಸ್ಥಾನ ದೊಡ್ಡದು, ಗೌರವಪೂರ್ಣವಾದುದು. ಆದರೆ ಆ ಕಾರ್ಯ ನಿರ್ವಹಿಸುವದು ಸುಲಭವಲ್ಲ. ಕುಲಪತಿಯ ಖುರ್ಚಿಗೆ ಹೂವಿನ ದಿಂಬು ಇದ್ದರೂ, ಗುಲಾಬಿ ಹೂವಿನ ಪರಿಮಳದ ಜೊತೆಗೆ ಅದರ ದೇಟಿನ ಮುಳ್ಳಿನ ಬಗೆಗೂ ಜಾಗೃತವಾಗಿರಬೇಕಾಗುವುದು. ಪೂಜ್ಯ ಕುವೆಂಪು ಅವರು ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದಾಗ, ನಾವಿಬ್ಬರೂ ವಾಡಿಕೆಯಂತೆ ಅವರ ಮನೆಗೆ ಹೋಗಿದ್ದೆವು. 'ಹೇಗಿದ್ದೀರಿ' ಎಂದು ಮಾಳವಾಡರು ಕೇಳಿದ ತಕ್ಷಣ, 'ಫೈಲ್ಸ ಸಹಿ ಮಾಡಿ, ಮಾಡಿ ಪೈಲ್ಸ ಪ್ರಾರಂಭವಾಗಿದೆ' ಎಂದು ಹಾಸ್ಯ ಮಾಡಿದ್ದರು. ಇಂಥ ಕಠಿಣ ಸ್ಥಾನದ ಕಾರ್ಯಗಳನ್ನು ಲೀಲಾಜಾಲವಾಗಿ ಮಾಡುವ ಚತುರತೆಯನ್ನು ದೇವರು ಡಾ. ಎಸ್. ರಾಮೇಗೌಡರಿಗೆ ಕೊಟ್ಟಿದ್ದಾನೆ, ಹೆತ್ತ ತಾಯಿ ಶಕ್ತಿದಾತೆ, ಪತ್ನಿ ಸುಶೀಲಮ್ಮ ಸ್ಫೂರ್ತಿದಾತೆ.

ಇಪ್ಪತ್ತೆರಡನೆಯ ವಯಸ್ಸಿನಲ್ಲಿ ಎಲೆಕ್ಟ್ರಿಕಲ್ ಎಂಜೀನಿಯರ್ ಪರೀಕ್ಷೆಯಲ್ಲಿ ಉತ್ತೀರ್ಣರಾದ ಪ್ರತಿಭಾವಂತ ಮಾನ್ಯ ಡಾ. ಎಸ್. ರಾಮೇಗೌಡರು ವೆಸ್ಟ ಇಂಡೀಜದಲ್ಲಿ ಯುನೆಸ್ಕೊ ಕಾರ್ಯಕ್ರಮದ ಎಲೆಕ್ಟ್ರಿಕಲ್ ಎಂಜನೀಯರ ಆಗಿ ಕಾರ್ಯಗೈದರು. ಅವರು ತಮ್ಮ ದಾಂಪತ್ಯ ಜೀವನದ ಕೆಲವು ವರ್ಷಗಳನ್ನು ಅಲ್ಲಿಯೆ ಕಳೆದರು. ದಂಪತಿಗಳು ವೆಸ್ಟ ಇಂಡೀಜದಿಂದ ಬಂದ ಮೇಲೆ ಮಂಡ್ಯ, ಬೆಂಗಳೂರು, ಪಾಂಡಿಚೇರಿಗಳಲ್ಲಿದ್ದರು, ಎಲ್ಲೆಲ್ಲಿ ಕಾರ್ಯಮಾಡಿದರೊ ಅಲ್ಲಿಯ ಸಂಸ್ಥೆಗಳನ್ನು ಚೆನ್ನಾಗಿ ಬೆಳೆಸಿ ೧೯೯೦ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಬಂದರು. ಬಂದಮೇಲೆ ಹಲವಾರು ಹೊಸ ಸಂಶೋಧನ ಸಂಸ್ಥೆಗಳನ್ನೂ, ಕಂಪ್ಯೂಟರ್ ಸೈನ್ಸ ಮೊದಲಾದ ವಿಷಯಗಳ ಶಿಕ್ಷಣ ಪಡೆಯುವ ಸೌಲಭ್ಯಗಳನ್ನೂ ವಿದ್ಯಾರ್ಥಿಗಳಿಗೆ ಒದಗಿಸಿಕೊಟ್ಟಿದ್ದಾರೆ. ಕರ್ನಾಟಕ ವಿಶ್ವವಿದ್ಯಾಲಯದ ಆವರಣದಲ್ಲಿ ರಚಿತವಾದ ಸುಂದರ ಅತಿಥಿ ಗೃಹ, ಕಿತ್ತೂರ ಚೆನ್ನಮ್ಮ ವಸತಿಗೃಹ ಮೊದಲಾದ ಹಲವಾರು ಕಟ್ಟಡಗಳು ಡಾ. ಎಸ್. ರಾಮೇಗೌಡರ ಕಾರ್ಯದಕ್ಷತೆಗೆ ಸಾಕ್ಷಿಯಾಗಿವೆ. ಬೆಳಗಾವಿ ಜಿಲ್ಲೆಯ ಭೂತರಾಯನ ಹಟ್ಟಿಯಲ್ಲಿ ಸ್ನಾತಕೋತ್ತರ ವಿಭಾಗದಲ್ಲಿ ಸುಂದರ ಕಟ್ಟಡಗಳು ತಲೆಎತ್ತಿವೆ. ವಿಜಾಪುರದಲ್ಲಿ ಪ್ರವಾಸೋದ್ಯಮ, ಇತಿಹಾಸ ಮೊದಲಾದ ಹೊಸ ವಿಷಯಗಳ ಡಿಪ್ಲೋಮಾ ಕೋರ್ಸ ಪ್ರಾರಂಭಿಸಿದ್ದಾರೆ. ಇಲ್ಲಿಯ ಕಟ್ಟಡಗಳಿಗಾಗಿ ೨೦೦ ಎಕರೆ ಭೂಮಿಯನ್ನು ಕರ್ನಾಟಕ ರಾಜ್ಯ ಸರ್ಕಾರದಿಂದ ಪಡೆದಿದ್ದಾರೆ. ಕೇವಲ ದೊಡ್ಡ ಕಟ್ಟಡಗಳು, ಶಿಕ್ಷಣದ ಅಳತೆಗೋಲಲ್ಲ ಎಂದು ನಂಬಿದ ಶಿಕ್ಷಣ ತಜ್ಞ ಡಾ. ಎಸ್. ರಾಮೇಗೌಡರು "ರಾಷ್ಟ್ರೀಯ ಏಕತೆ, ಪ್ರಾದೇಶಿಕ ಭದ್ರತೆಯ ಬಗೆಗೆ ವಿದ್ಯಾರ್ಥಿಗಳಲ್ಲಿ ಬೆಳೆಯುತ್ತಿರುವ ನಿರ್ಲಕ್ಷತನಕ್ಕೆ, ಶಿಕ್ಷಕರು ಸಾರ್ವಜನಿಕ

ಮುಂದಾಳುಗಳು ಕಾರಣರೇನೋ ಎಂದು ತಮ್ಮ ಭಾಷಣಗಳಲ್ಲಿ ನೊಂದು ನುಡಿಯುತ್ತಾರೆ. ಶಿಕ್ಷಣದ ಮಟ್ಟ ಮೇಲೇರಿಸಲು ಪ್ರಯತ್ನಿಸುತ್ತಿದ್ದಾರೆ. ವಿಶ್ವವಿದ್ಯಾಲಯದ ಏಳಿಗೆಗಾಗಿ, ಧನಸಹಾಯ ಪಡೆಯಲು ರಾಜ್ಯ ಸರ್ಕಾರ, ಯು.ಜಿ.ಸಿ.ಗೆ ಸಂಬಂಧಪಟ್ಟವರ ಭೆಟ್ಟಿಗಾಗಿ ದಿಲ್ಲಿ, ಧಾರವಾಡ, ಬೆಂಗಳೂರು ಪ್ರವಾಸವನ್ನು ದೇಹದ ದಣಿವಿನತ್ತ ಲಕ್ಷ್ಯಕೊಡದೆ ಮಾಡುತ್ತಾರೆ. ಆ ಧನಸಹಾಯ ಪಡೆಯುವದು ಸುಲಭ ಕೆಲಸವಲ್ಲ, ಆ ಕಾರ್ಯವನ್ನು ದಕ್ಷತೆಯಿಂದ, ಚತುರತೆಯಿಂದ ಮಾಡಿಕೊಂಡು ಬರುತ್ತಾರೆ. ವಿಜ್ಞಾನ ಹಾಗೂ ತಾಂತ್ರಿಕ ಜ್ಞಾನ ಶಿಕ್ಷಣ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಗತಿ ಪಥದಲ್ಲಿ ಸಾಗಿದೆ. ತಾಂತ್ರಿಕ ಜ್ಞಾನದ ಜೊತೆಗೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಹೆಚ್ಚಿನ ಪ್ರೋತ್ಸಾಹ ಕೊಡುತ್ತ ಬಂದಿದ್ದಾರೆ. ಶಿಕ್ಷಣ ಸಂಸ್ಕೃತಿ ನಾಣ್ಯದ ಎರಡು ಮುಖಗಳಿದ್ದಂತೆ. ಅವೆರಡೂ ವಿದ್ಯಾರ್ಥಿಗಳ ದೈಹಿಕ, ಮಾನಸಿಕ, ಬೌದ್ಧಿಕ, ಆಧ್ಯಾತ್ಮಿಕ ಮಟ್ಟವನ್ನೂ ಹೆಚ್ಚಿಸುವಂತಾದರೆ, ಅವರು ಜೀವನದ ಗುರಿಯನ್ನು ತಲುಪಬಲ್ಲರು ಎಂಬುದನ್ನರಿತ, ಕುಲಪತಿ ಡಾ. ಎಸ್. ರಾಮೇಗೌಡರು ಆ ದಿಸೆಯಲ್ಲಿ ಪರಿಶ್ರಮಿಸುತ್ತಿದ್ದಾರೆ. ಕೇಂದ್ರ ಸರ್ಕಾರದ ಹಲವಾರು ಶೈಕ್ಷಣಿಕ ಸಮಿತಿಯಲ್ಲಿ ಅವರು ಇರುವುದರಿಂದ ಕರ್ನಾಟಕದ ಯುವಕರು ಪರರಾಷ್ಟ್ರಗಳಿಗೆ ಹೋಗಿ ಶಿಕ್ಷಣ ಪಡೆಯುತ್ತಿದ್ದಾರೆ.

ಡಾ. ಎಸ್. ರಾಮೇಗೌಡರು ವಿದ್ಯಾರ್ಥಿದೆಸೆಯಿಂದಲೂ ಶಿಸ್ತು, ಸಂಘಟನೆ, ಪರಿಶ್ರಮ ಪೂರ್ವಕ ಅಭ್ಯಾಸದಿಂದ ಮುಂದೆ ಬಂದಿದ್ದಾರೆ. ತಾಂತ್ರಿಕ ವಿಷಯಗಳನ್ನು ಕುರಿತು ಹಲವಾರು ಪ್ರಬಂಧಗಳನ್ನು ದೇಶ, ವಿದೇಶಗಳಲ್ಲಿ ಮಂಡಿಸಿದ್ದಾರೆ. ತಾಂತ್ರಿಕ ತಜ್ಞರಾದವರು ನಾಟಕದಲ್ಲಿ ಅಭಿನಯ ದಿಗ್ದರ್ಶನ, ನಾಟಕ ರಚನೆ, ಜಾನಪದ ಗೀತಗಳ ಬಗೆಗೆ ಆಸ್ಥೆವಹಿಸುವದಲ್ಲದೇ ಆ ದಿಸೆಯಲ್ಲಿ ಅನುಭವ ಪಡೆದಿದ್ದಾರೆ. ತಂತ್ರಜ್ಞರಾದವರು ಸಾಹಿತಿ, ಕಲಾವಿದ, ವಾಗ್ಮಿಯಾಗಿರುವುದು ಅಪರೂಪ. ಡಾ. ಎಸ್. ರಾಮೇಗೌಡರ ಪ್ರತಿಭೆ, ಪಾಂಡಿತ್ಯಕ್ಕೆ ಅವರ ಭಾಷಣಗಳ ಸಂಕಲನ 'ಮೆಲುಕು' ಸಾಕ್ಷಿಯಾಗಿದೆ. ಈ ಸಂಕಲನದ ಳಳ ಪ್ರಬಂಧ(ಭಾಷಣ) ಓದಿದಾಗ ಅವರ ಅನುಭವದ ಆಳ, ವಿಷಯಗಳ ವೈವಿಧ್ಯತೆಯ ಅರಿವಾಗದಿರದು. ಕೇಳಿದ ಪ್ರಶ್ನೆಗೆ ಉತ್ತರ ಕೊಡಬಲ್ಲ ಅಷ್ಟಾವಧಾನಿಗಳ ಹೆಸರನ್ನು ಕೇಳಿದ್ದೆ, "ಮೆಲುಕು" ಒಂದೊಂದನ್ನೇ ಮೆಲುಕಾಡಿಸಿದಾಗ ಇವರೂ ಅಷ್ಟಾವಧಾನಿಗಳೇ ಎಂದೆನಿಸಿತು. ಧಾರವಾಡಕ್ಕೆ ಬಂದ ಮೇಲೆ, ಇಲ್ಲಿಯ ತಂಪು ಹವೆ, ಸಾಹಿತ್ಯ ಪರಸರ, ಅವರ ಪ್ರತಿಭೆ ಹೊರಹೊಮ್ಮಲು ಹೆಚ್ಚಿನ ಕಾರಣವಾಗಿರಬೇಕು. ಸ್ವಾಮಿ ಪ್ರಣವಾನಂದ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಹಾಗೂ ಜ್ಞಾನವಾರಿಧಿ ಪ್ರಶಸ್ತಿಗಳು ಅವರನ್ನು ಹುಡುಕಿಕೊಂಡು ಬಂದವು. ಈ ಪ್ರಶಸ್ತಿಗಳು ಡಾ. ಎಸ್. ರಾಮೇಗೌಡರು ಶಿಕ್ಷಣ ಕ್ಷೇತ್ರದಲ್ಲಿ ಸಾಧನೆಗೈದುದರ ದ್ಯೋತಕವಾಗಿವೆ.

ಬಾಲಕ ಅರವಿಂದರು ಇಂಗ್ಲೆಂಡಿಗೆ ಏಳು ವರುಷದವರಿದ್ದಾಗ ಶಿಕ್ಷಣ ಪಡೆಯಲು ಹೋದವರು ೧೮೯೩ರಲ್ಲಿ ತಮ್ಮ ಶಿಕ್ಷಣ ಪೂರೈಸಿಕೊಂಡು ಭಾರತಕ್ಕೆ ಬಂದರು. ಮುಂಬೈ, ಅಪೊಲೊ ಬಂದರದಲ್ಲಿ ಪಾದವಿಟ್ಟೊಡನೆ ಅವರ ಸುತ್ತಲೂ ಬೆಳಕಿನ ಮುಸುಕೊಂದು ಆವರಿಸಿದಂತಾಯಿತು. ಅಂದಿನಿಂದ ಭಾರತ ಭೂಮಿ ಕೇವಲ ಹಲವಾರು ನದಿಗಳಲ್ಲ,

ಭೂಭಾಗವಲ್ಲ ಆಕೆ ಭಾರತಮಾತೆ, ತಾಯಿ, ದೇವಿ ಎಂಬ ಅನುಭವವಾಯಿತು. ಅಂದಿನಿಂದ ಭಾರತ ಸ್ವಾತಂತ್ರ್ಯ, ದೈವೀಸಾಕ್ಷಾತ್ಕಾರಕ್ಕಾಗಿ ತಮ್ಮನ್ನು ಸಂಪೂರ್ಣವಾಗಿ ಅರ್ಪಿಸಿಕೊಂಡರು. ಆ ದಿನದ ಸವಿನೆನಪಿಗಾಗಿ, ಭಾರತೀಯರಲ್ಲಿ ಭಾವೈಕ್ಯತೆ, ರಾಷ್ಟ್ರೀಯ ಭಾವನೆಯ ಜಾಗೃತಿ ಆಧ್ಯಾತ್ಮ ಜೀವನದ ಪ್ರಗತಿ ಆಗಬೇಕು ಎಂದು ಭಾರತದಾದ್ಯಂತ, ಹಾಗೂ ಜಗತ್ತಿನ ಹಲವಾರು ರಾಷ್ಟ್ರಗಳಲ್ಲಿ ಶ್ರೀ ಅರವಿಂದರ ಸ್ವದೇಶಾಗಮನದ ಶತಮಾನೋತ್ಸವವನ್ನು ಆಚರಿಸಲಾಯಿತು. ಆ ಸಂದರ್ಭದಲ್ಲಿ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳಾಗಿದ್ದ ವೀರಪ್ಪ ಮೊಯಿಲಿ ಅವರ ಅಧ್ಯಕ್ಷತೆಯಲ್ಲಿ ರಾಜ್ಯಮಟ್ಟದ ಉಚ್ಚಸ್ತರದ ಸಮಿತಿಯನ್ನು ರಚಿಸಲಾಯಿತು. ಅದರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪರವಾಗಿ ಡಾ. ಎಸ್. ರಾಮೇಗೌಡರನ್ನು, ಧಾರವಾಡ ಅರವಿಂದೊ ಸೆಂಟರಿನ ಪ್ರತಿನಿಧಿಗಳಾಗಿ, ಸೋದರ ಎನ್ಕೆ ಅವರನ್ನೂ, ನನ್ನನ್ನೂ ಸದಸ್ಯರನ್ನಾಗಿ ಮಾಡಿದ್ದರು. ಡಾ. ಎಸ್. ರಾಮೇಗೌಡರು ಆ ಸಮಿತಿಯ ಶೈಕ್ಷಣಿಕ ಸಾಂಸ್ಕೃತಿಕ ವಿಭಾಗದ ಕಾರ್ಯಾಧ್ಯಕ್ಷರಾಗಿದ್ದರು. ೨೧.೭.೯೩ರಂದು ಬೆಂಗಳೂರಿನಲ್ಲಿ ಮೀಟಿಂಗ್ ಕರೆದಿದ್ದರು. ಶ್ರೀ ಎನ್ಕೆಯವರಿಗೆ ಪ್ರವಾಸ ಮಾಡಲಾಗುವುದಿಲ್ಲ ಮೀಟಿಂಗಿಗೆ ಹೋಗುವುದಿಲ್ಲ ಎಂದರು. ರೈಲ್ವೆ ಬ್ರಾಡ್‌ಗೇಜ ಮಾಡುತ್ತಿದ್ದುದರಿಂದ ಪ್ರವಾಸ ತೊಂದರೆದಾಯಕವೆನಿಸಿತು. ಅಂದು ರವಿವಾರ ಪ್ರೇಯರ್ ಮೀಟಿಂಗ ಇದ್ದುದರಿಂದ ಎಲ್ಲ ಸದಸ್ಯರು ಬಂದಿದ್ದರು. ಮಾನ್ಯ ಕುಲಪತಿ ಡಾ. ಎಸ್. ರಾಮೇಗೌಡರನ್ನು ಕೇಳಿರಿ, ಅವರು ಕಾರಿನಲ್ಲಿ ಹೋಗಬಹುದು ನಿಮ್ಮನ್ನು ಕರೆದುಕೊಂಡು ಹೋಗಬಹುದು ಎಂದರು. ಆಗ ಅವರ ಮನೆಗೆ ಫೋನಮಾಡಿ ನಿಮ್ಮ ಮನೆಗೆ ಬಂದು ಬೆಂಗಳೂರು ಪ್ರವಾಸದ ಬಗೆಗೆ ಮಾತನಾಡಬೇಕಾಗಿದೆ, ಎಂದೆ. ಸಾಯಂಕಾಲ ೫ ಘಂಟೆಗೆ ಬರಲು ದಂಪತಿಗಳು ತಿಳಿಸಿದರು. ಸೋದರಿ ಬಳುಂಡಗಿ ಕಾರಿನಲ್ಲಿ ಕುಲಪತಿ ನಿವಾಸಕ್ಕೆ ಕರೆದುಕೊಂಡು ಹೋದರು. ದಂಪತಿಗಳು ಪ್ರೀತಿಯಿಂದ ಬರಮಾಡಿಕೊಂಡು, ಕುಲಪತಿಗಳು ಹೇಳಿದರು, 'ನಾನು ದಿಲ್ಲಿಯಿಂದ ಇಂದೇ ಬಂದಿರುವೆ, ವಿಶ್ವವಿದ್ಯಾಲಯದ ಕೆಲಸ ಮುಗಿಸಿ ಯಾವಾಗ ಹೊರಡುವೆನೋ ನೋಡಿ ನಾಳೆ ತಿಳಿಸುತ್ತೇನೆ'' ಎಂದರು. ಅಷ್ಟರಲ್ಲಿ ಆತ್ಮೀಯರಾದ ಒಡೆಯರ ದಂಪತಿಗಳು ಅಲ್ಲಿಗೆ ಬಂದರು. ಅರವಿಂದಾಶ್ರಮದ ಸುದ್ದಿ ಮಾತನಾಡುತ್ತ ಕುಳಿತೆವು. ಆಗ ಸೋದರಿ ಸುಶೀಲಮ್ಮ ನಮ್ಮೆಲ್ಲರಿಗೂ ಉಪಹಾರ, ಕಾಫಿ ತಾವೇ ತಂದುಕೊಟ್ಟರು. ನಂತರ ಸುಶೀಲಮ್ಮನವರ ಜೊತೆಗೆ ಮಾತನಾಡುತ್ತ ಕುಳಿತೆವು. ಉಪಹಾರ, ಕಾಫಿ ಎಲ್ಲ ನೀವೆ ಮಾಡಿ ತಂದಿರಲ್ಲ ಜವಾನರಿಲ್ಲವೇ? ಎಂದು ಕೇಳಿದೆವು. ಮನೆಯ ಕೆಲಸಕ್ಕಾಗಿ ಸಂಬಳ ಕೊಟ್ಟು ಓರ್ವ ಕೆಲಸಗಿತ್ತಿಯನ್ನು ನೇಮಿಸಿಕೊಂಡಿರುವೆ, ಅಡಿಗೆಮನೆ ಕೆಲಸ ನಾನೇ ಮಾಡಿಕೊಳ್ಳುವೆ ಎಂದರು. ಅವರ ಸರಳ ಸ್ವಭಾವಕ್ಕೆ ನಾನು ಸೋದರಿ ಸುಶೀಲಾ ಮಾರುಹೋದೆವು. ಮರುದಿನ ಮಾನ್ಯ ಡಾ. ಎಸ್. ರಾಮೇಗೌಡರು ೨೧ ಬೆಳಿಗ್ಗೆ ೫ ಗಂಟೆಗೆ ಕಾರಿನಲ್ಲಿ ಹೊರಡುವೆ, ನೀವು ಬಂದರೆ ಕರೆದುಕೊಂಡು ಹೋಗುವೆ ಎಂದು ಹೇಳಿಕಳಿಸಿದರು.

ಒಂದೇ ಸವನೆ ಪ್ರವಾಸ ಮಾಡಿ, ಮತ್ತೆ ಮೀಟಿಂಗನಲ್ಲಿ ३-४ ಗಂಟೆ ಕುಳಿತುಕೊಳ್ಳಲು ನನ್ನಿಂದ ಸಾಧ್ಯವಿಲ್ಲ, ಆಯಾಸ ಬಹಳ ಆಗುತ್ತದೆ. ಆದ ಕಾರಣ ತೊಂದರೆಯಾದರೂ ಇಂದೇ ಟ್ರೇನಿಗೆ ಹೋಗುವೆ, ಜೊತೆಗೊಬ್ಬರು ಬರುವರು ಎಂದು

ಹೇಳಿ ಕಳಿಸಿದೆ. ಧರ್ಮಾವರಂನಲ್ಲಿ ಕಷ್ಟಪಟ್ಟು, ಟ್ರೇನ್ ಹತ್ತಿ ಬೆಳಿಗ್ಗೆ ಬೆಂಗಳೂರು ತಲುಪಿದೆವು. 'ಕುಮಾರ ಕೃಪಾ' ಅತಿಥಿಗೃಹದಲ್ಲಿ ಸದಸ್ಯರಿಗೆ ಕೋಣೆಗಳನ್ನು ಕಾದಿರಿಸಿದ್ದರು. ಬೆಳಿಗ್ಗೆ ಬೆಂಗಳೂರು ತಲುಪಿ ವಿಶ್ರಾಂತಿ ಪಡೆದ ೨ ಗಂಟೆಗೆ ಬೆಂಗಳೂರು ತಲುಪಿದ ಡಾ. ಎಸ್. ರಾಮೇಗೌಡರು ೨ ಹೋಳು ಬ್ರೆಡ್ ಕಾಫಿಯಿಂದ ಮಧ್ಯಾಹ್ನದ ಊಟ ಮುಗಿಸಿದರು. ೩ ಗಂಟೆಗೆ ಮೀಟಿಂಗಿಗೆ ಹೋಗುವಾಗ ನನ್ನನ್ನೂ ಕರೆದುಕೊಂಡು ಹೋದರು. ಮೀಟಿಂಗ್ ಹಾಲ್ ಮೂರನೆ ಅಂತಸ್ತಿನಲ್ಲಿತ್ತು. ಲಿಫ್ಟ ಇರಲಿಲ್ಲ. ಕೆಲಸದವನು ಊಟಕ್ಕೆ ಹೋಗಿದ್ದ, ವಯಸ್ಸಾದವರು ಹೇಗೆ ಹತ್ತಬೇಕು ಎಂದು ಅಲ್ಲಿದ್ದವರಿಗೆ ಹೇಳಿ, ಲಿಫ್ಟನವನನ್ನು ತಕ್ಷಣ ಕರೆಯಿಸಿದರು, ಮೀಟಿಂಗಿಗೆ ಹೋದೆವು. ಆತ್ಮೀಯ ತಮ್ಮನಂತೆ ನಡೆದುಕೊಂಡದ್ದು ನನ್ನ ಮೇಲೆ ಪರಿಣಾಮ ಬೀರಿತು, ನಾನು ಅಲ್ಲಿಂದ ಪಾಂಡಿಚೇರಿಗೆ ಹೋದೆ.

ಮಾನ್ಯ ಡಾ. ಎಸ್. ರಾಮೇಗೌಡರು "ಶ್ರೀ ಅರವಿಂದರ ಸ್ವದೇಶಾಗಮನದ ಶತಮಾನೋತ್ಸವ"ವನ್ನು ಧಾರವಾಡದ ವಿದ್ಯಾವರ್ಧಕ ಸಂಘದಲ್ಲಿ ಹಮ್ಮಿಕೊಂಡು ಯಶಸ್ವಿಯಾಗಿ ಜರುಗಿಸುವಲ್ಲಿ ಸಹಾಯ ಮಾಡಿದರು. ಅಂದು ಸೊಲ್ಲಾಪುರ, ಹಲಸಂಗಿ, ಹುಬ್ಬಳ್ಳಿ ಮೊದಲಾದ ಊರಿನಿಂದ ಭಾಷಣಕಾರರು ಬಂದಿದ್ದರು. ಆ ಭಾಷಣಗಳು, ಗಾಳಿಯಲ್ಲಿ ತೇಲಿ ಹೋಗಬಾರದೆಂದು ಯೋಚಿಸಿ, ಭಾಷಣಗಳ ಸಂಗ್ರಹ, ಇನ್ನು ಕೆಲ ಲೇಖನಗಳು, ಪೂಜ್ಯ ಡಾ. ದ. ರಾ. ಬೇಂದ್ರೆಯವರು ಶ್ರೀ ಮಾತಾರವಿಂದರನ್ನು ಕುರಿತು ರಚಿಸಿದ ಹಲವಾರು ಪದ್ಯಗಳನ್ನು ಸಂಗ್ರಹಿಸಿ "ಶ್ರೀ ಅರವಿಂದರ ಸ್ವದೇಶಾಗಮನ ದರ್ಶನ" (೧೯೯೩) ಸ್ಮರಣ ಸಂಚಿಕೆ ಸಿದ್ಧಗೊಳಿಸಲಾಯಿತು. ಈ ಸಂಚಿಕೆಯಲ್ಲಿ "ಶಿಕ್ಷಣವನ್ನು ಕುರಿತು ಶ್ರೀ ಅರವಿಂದರ ವಿಚಾರಗಳು" ಡಾ. ಎಸ್. ರಾಮೇಗೌಡರ ಲೇಖನ ಅತ್ಯುತ್ತಮವಾಗಿದೆ. ೫.೧೨.೯೩ರಂದು ಧಾರವಾಡದಲ್ಲಿ ಶತಮಾನೋತ್ಸವ ಸಮಾರಂಭ ನಡೆದಾಗ ಡಾ. ಎಸ್. ರಾಮೇಗೌಡರು ಸ್ಮರಣ ಸಂಚಿಕೆಯನ್ನು ಬಿಡುಗಡೆಮಾಡಿದರು. ಈ ಉತ್ಸವಕ್ಕೆ ಸರ್ಕಾರದ ಸಹಾಯ ಧನ ನಮಗೆ ಸಕಾಲದಲ್ಲಿ ದೊರೆಯುವಂತೆ ಮಾಡಿದ್ದರು. ಅಂದಿನ ಸಭೆ ಮುಗಿದೊಡನೆ ಡಾ. ಎಸ್. ರಾಮೇಗೌಡರು, ಸೋದರಿ ಸುಶೀಲಮ್ಮ ನಮ್ಮ ಮನೆವರೆಗೆ ಬಂದು ನನ್ನನ್ನು ಕಳುಹಿಸಿದರು. ಆ ದಿನ ಮಧ್ಯಾಹ್ನ ಕಾರ್ಯಕ್ರಮಕ್ಕೆ ಬಂದವರಿಗಾಗಿ ಊಟದ ಏರ್ಪಾಡನ್ನು ಮಾಡಲಾಗಿತ್ತು. ದಂಪತಿಗಳಿಗೆ ಆಗ ಬರಲಾಗಿರಲಿಲ್ಲ. ಈಗ ಸ್ವಲ್ಪ ಪ್ರಸಾದ ಸೇವಿಸಿ, ಅರ್ಧಗಂಟೆ ಕುಳಿತು ಪೂಜ್ಯ ಮಾಳವಾಡ, ಕುವೆಂಪು ಸ್ನೇಹ ಕುರಿತು ಮಾತನಾಡಿದರು. ಅವರಿಗೆ "ಸ್ವಾಮಿ ಪ್ರಣವಾನಂದ ಪ್ರಶಸ್ತಿ" ದೊರೆತಾಗ ನಮ್ಮ ಶ್ರೀ ಅರವಿಂದೊ ಸೆಂಟರಿನವರೆಲ್ಲ ಸಂತೋಷಪಟ್ಟೆವು, ಅಭಿಮಾನಪಟ್ಟೆವು. ದಂಪತಿಗಳನ್ನು ಕರೆದು ಸತ್ಕರಿಸಿದೆವು. ಕುಲಪತಿಯ ಸ್ಥಾನಕ್ಕೆ ಎರಡನೆ ಬಾರಿ ಆಯ್ಕೆಯಾದಾಗ ಸೆಂಟರಿನ ವತಿಯಿಂದ ಡಾ. ಕೆ. ಎಸ್ ಆಮೂರ ಅವರು ಅಭಿನಂದನ ಪತ್ರ ಕಳಿಸಿದರು.

ಡಾ. ಎಸ್. ರಾಮೇಗೌಡರ ಪರಿಚಯ ಆಗುವುದಕ್ಕಿಂತ ಮೊದಲೇ ಸೋದರಿ ಸುಶೀಲಮ್ಮನವರ ಪರಿಚಯ ನನಗಾಯಿತು. ಸರಳತೆ, ಸೌಜನ್ಯತೆಯೇ ಸಾಕಾರವಾದ ಸುಶೀಲಮ್ಮನವರನ್ನು ನೋಡಿದ ತಕ್ಷಣ ನನಗೆ ನೆನಪಾದವರು ಪೂಜ್ಯ ಹೇಮಾವತಿ ಕುವೆಂಪು, ಹಾಗೂ ಸೋದರಿ ಸಾವಿತ್ರಮ್ಮ ದೇ.ಜ.ಗೌ. ಕುಲಪತಿಯ ಪತ್ನಿಯರೆಂಬ

ಹಮ್ಮುಬಿಮ್ಮಿನಿಂದ ಬಹುದೂರ ಉಳಿದ ಈ ಇಬ್ಬರು ಆದರ್ಶ ಗೃಹಿಣಿಯರಂತೆ ಸುಶೀಲಮ್ಮನವರೂ ಇದ್ದುದನ್ನು ಕಂಡು ಮೊದಲ ಪರಿಚಯದಲ್ಲಿಯೇ ಆತ್ಮೀಯರಾದರು. ೯೧ನೇ ಇಸ್ವಿಯಲ್ಲಿ 'ಸಾವಿತ್ರಮ್ಮ ದೇ.ಜ.ಗೌ ಪ್ರಶಸ್ತಿ' ಮೊದಲ ಬಾರಿ ನನಗೆ ದೊರೆಯಿತು. ಆಗ ವಿಶ್ವವಿದ್ಯಾಲಯದ 'ಮಹಿಳಾ ವೇದಿಕೆ'ಯ ಅಧ್ಯಕ್ಷಿಣಿ ಸುಶೀಲಮ್ಮನವರು ಸತ್ಕಾರ ಸಮಾರಂಭ ಹಮ್ಮಿಕೊಂಡರು. ಅವರ ಜೊತೆಗೆ "ಉತ್ತರ ಕರ್ನಾಟಕ ಲೇಖಕಿಯರ ಸಂಘ" "ಮಹಿಳಾ ಅಧ್ಯಯನ ಸಮಿತಿ"ಯವರು ಒಂದುಗೂಡಿ ಗಾಂಧಿಭವನದಲ್ಲಿ ೨೮.೯.೯೧ರಂದು ಡಾ. ಸರೋಜಿನಿ ಶಿಂತ್ರಿಯವರ ಅಧ್ಯಕ್ಷತೆಯಲ್ಲಿ ಸನ್ಮಾನ ಮಾಡಿದರು. ಆ ದಿನ ಮೂರು ಸಂಸ್ಥೆಗಳ ಪರವಾಗಿ ನೆನಪಿನ ಕಾಣಿಕೆ ಕೊಟ್ಟವರು ಸೋದರಿ ಸುಶೀಲಮ್ಮನವರು. ಆ ನೆನಪಿನ ಕಾಣಿಕೆ ನಾನು ಬರೆಯುವ ಟೇಬಲ್ ಬಳಿ ನಿಂತಿದೆ. ಸೋದರಿ ಸುಶೀಲಮ್ಮನವರ ನೆನಪನ್ನು ಸದಾ ಜಾಗೃತಗೊಳಿಸುತ್ತದೆ. ಸೋದರಿ ಸುಶೀಲಮ್ಮ ಧಾರವಾಡಕ್ಕೆ ಬಂದಾಗಿನಿಂದ "ಮಹಿಳಾ ವೇದಿಕೆ" ಜಾಗೃತಗೊಂಡು ಉತ್ಸಾಹದಿಂದ ಕಾರ್ಯತತ್ಪರವಾಗಿದೆ. ವೇದಿಕೆಗೆ ಧನ ಸಹಾಯವನ್ನಿತ್ತು, ಮುನ್ನಡೆಸುತ್ತಿದ್ದಾರೆ. ಮಹಿಳಾ ವೇದಿಕೆಯ ಕೆಲಸಕ್ಕಾಗಿ ಅದರ ಕಾರ್ಯಾಧ್ಯಕ್ಷಿಣಿ, ಕಾರ್ಯದರ್ಶಿನಿಯರು ಯಾವ ವೇಳೆಗೆ ಹೋದರೂ ತಮ್ಮ ಕೆಲಸವನ್ನು ಬಿಟ್ಟು ಅವರಿಗೆ, ಸಲಹೆ, ಸಹಕಾರ, ಸಹಾಯವನ್ನೊದಗಿಸುತ್ತಾರೆ. ಎಲ್ಲರೊಂದಿಗೆ ಪ್ರೀತಿ ವಿಶ್ವಾಸದಿಂದ ಬೆರೆತು ಕೆಲಸಮಾಡುತ್ತಿರುವುದರಿಂದ, ಇವರು ನಮ್ಮವರು, ಎಂದೆನಿಸಿದ್ದಾರೆ. ಮಹಿಳಾ ವೇದಿಕೆಗೆ ಒಂದು ಕಪಾಟ ಕುರ್ಚಿಗಳನ್ನು ವಿಶ್ವವಿದ್ಯಾಲಯದಿಂದ ಕೊಡಿಸಿದ್ದಾರೆ. ಕಾರ್ಯಕ್ರಮ ನಡೆಸಲು ಅನುಕೂಲ ಸ್ಥಳ, ಲೈಟ, ಮೈಕ ಹೀಗೆ ಹಲವಾರು ಅನುಕೂಲತೆಯನ್ನು ಕಲ್ಪಿಸಿಕೊಡುವುದರಿಂದ ಕಾರ್ಯಕರ್ತರು ಉತ್ಸಾಹದಿಂದ ಕಾರ್ಯತತ್ಪರರಾಗಿದ್ದಾರೆ. ಸದಸ್ಯೆಯರಿಗೆ ಶೈಕ್ಷಣಿಕ, ಸಾಮಾಜಿಕ, ವೈಜ್ಞಾನಿಕ ವಿಷಯಗಳ ಬಗೆಗೆ ಉಪನ್ಯಾಸಗಳನ್ನೇರ್ಪಡಿಸುತ್ತಾರೆ. ಸದಸ್ಯೆಯರಲ್ಲಿ ಹುದುಗಿದ ಪ್ರತಿಭೆ ಹೊರಹೊಮ್ಮಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಾರೆ. ದಂಪತಿಗಳಿಬ್ಬರೂ ಭಾರತೀಯ ಸಂಸ್ಕೃತಿ ಸಂವರ್ಧನೆ ಬಗೆಗೆ ಆಸ್ಥೆಯುಳ್ಳವರಾಗಿದ್ದಾರೆ. ಪತಿಯೊಂದಿಗೆ ಹಲವಾರು ವರ್ಷ ವೆಸ್ಟ ಇಂಡೀಜದಲ್ಲಿ ಕಳೆದುದಲ್ಲದೆ, ಹಲವಾರು ರಾಷ್ಟ್ರಗಳನ್ನು ಸುತ್ತಿ ಬಂದಿದ್ದಾರೆ, ಆದರಿಂದಾಗಿ ವಿಶಾಲ ಭಾವನೆಯವರಾಗಿದ್ದಾರೆ, ಅನುಭವದ ಕುಂಭವಾಗಿದ್ದಾರೆ.

ಮೈಸೂರಿನ ರೇಲ್ವೆ ಅಧಿಕಾರಿಗಳ ಮಗಳಾಗಿ ಜನಿಸಿದವರು ಸುಶೀಲಮ್ಮ. ನಾಲ್ಕು ಜನ ಅಕ್ಕತಂಗಿಯರು, ಇಬ್ಬರು ಅಣ್ಣ ತಮ್ಮಂದಿರಿದ್ದ ದೊಡ್ಡ ಕುಟುಂಬದಲ್ಲಿ ಬೆಳೆದುದರಿಂದ ಸಹನ ಶೀಲರಾಗಿದ್ದಾರೆ. ಹೆಸರಿಗೆ ತಕ್ಕಂತೆ ಸುಶೀಲರಾಗಿದ್ದಾರೆ. ಮೈಸೂರಿನಲ್ಲಿ ವಿದ್ಯಾಭ್ಯಾಸ ಪಡೆದರು. ಸಾಹಿತ್ಯ, ಸಂಗೀತದ ತವರೂರಾದ ಮೈಸೂರಿನಲ್ಲಿ ಶಿಕ್ಷಣ ಪೂರೈಸಿದರು. ಬಿ.ಎ. ಮೊದಲ ವರ್ಷದಲ್ಲಿದ್ದಾಗಲೇ ಡಾ. ಎಸ್.ರಾಮೇಗೌಡರೊಂದಿಗೆ ೧೯೬೨ ರಲ್ಲಿ ವಿವಾಹವಾಯಿತು. ಮದುವೆಯ ನಂತರ ಕನ್ನಡವನ್ನು ಐಚ್ಛಿಕ ವಿಷಯವನ್ನಾಗಿ ಆಯ್ದುಕೊಂಡು ಮಹಾರಾಣಿ ಕಾಲೇಜಿನಿಂದ ಪದವೀಧರರಾದರು. ಹೈಸ್ಕೂಲಿ ವಿದ್ಯಾರ್ಥಿನಿಯಾಗಿದ್ದಾಗಿನಿಂದಲೂ, ಸಾಹಿತ್ಯ ಸಂಗೀತ ಕ್ರೀಡೆಗಳಲ್ಲಿ ಆಸಕ್ತರು. ಸಂಗೀತದಲ್ಲಿ ಜ್ಯೂನಿಯರ ಪರೀಕ್ಷೆ ಮುಗಿಸಿದ್ದಾರೆ. ಹೆಣಿಕೆ ಹೊಲಿಗೆಯಲ್ಲಿ ಆಸ್ಥೆ, ಪಾಕಶಾಸ್ತ್ರ ಪ್ರವೀಣೆ,

ಎಂದೂ ಹಾಳು ಹರಟೆ ಹೊಡೆದವರಲ್ಲ, ಪರನಿಂದೆ ಮಾಡಿದವರಲ್ಲ. ಸದಾವೇಳೆಯನ್ನು ಸದುಪಯೋಗ ಪಡಿಸಿಕೊಳ್ಳುವ ಸುಸಂಸ್ಕೃತ ಗೃಹಿಣಿಯಾಗಿದ್ದಾರೆ.

ಬೆಚ್ಚನಾ ಮನೆಯಾಗಿ, ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನರಿವ ಸತಿಯಾಗಿ! ಸ್ವರ್ಗಕ್ಕೆ
ಕಿಚ್ಚು ಹಚ್ಚೆಂದ ಸರ್ವಜ್ಞ!!

ಈ ದಂಪತಿಗಳ ಸರಳ, ಸುಂದರ ದಾಂಪತ್ಯ ಜೀವನ ಕಂಡು ಸರ್ವಜ್ಞನ ವಚನ ನೆನಪಾಯಿತು. ಗೃಹಿಣಿ ಮನೆಯ ಆಧಾರ ಸ್ತಂಭ. ಆಕೆಯಲ್ಲಿ ಪ್ರೀತಿ, ಅಂತಃಕರುಣೆ, ಮಮತೆ, ಸಹನಶೀಲತೆ, ಸತತ ಪರಿಶ್ರಮ ಪಡುವ ಮನೋಭಾವವಿದ್ದರೆ ಸ್ವರ್ಗಕ್ಕೆ ಆಸೆ ಪಡದಂಥ ಜೀವನ ನಡೆಸುವುದು ಸಾಧ್ಯ ಎನ್ನುವ ಮಾತಿಗೆ ಸೋದರಿ ಸುಶೀಲಮ್ಮ ಸಾಕ್ಷಿಯಾಗಿದ್ದಾರೆ. ಯಾವ ವಾದದ ಗೊಡವೆಗೂ ಹೋಗದೆ, ದಂಪತಿಗಳು ಪರಸ್ಪರ ಪೂರಕ ಶಕ್ತಿಗಳಾಗಿ ಬಾಳುತ್ತಿದ್ದಾರೆ. ಪಾಕಶಾಸ್ತ್ರ ಪ್ರವೀಣೆ ಸುಶೀಲಮ್ಮ, ಬೆಳಗಿನ ಹೊತ್ತಿಗೆ ಪತಿಗೆ ನಿತ್ಯವೂ ಮೈಸೂರಿನ ಸ್ಪೆಶಲ್ ದೋಸೆ, ಇಡ್ಲಿ, ನಾನಾ ಬಗೆಯ ಉಪಹಾರ ಸಿದ್ಧಗೊಳಿಸಿ ಹೊಟ್ಟೆತುಂಬ ತಿನ್ನಲು ಕೊಡುತ್ತಾರೆ. ಮಧ್ಯಾಹ್ನ ಕಾಯಿಪಲ್ಯೆ ಹಾಕಿದ ಸಾರು(ಸಾಂಬಾರ) ಸಿದ್ಧಗೊಳಿಸಿ ಗ್ಯಾಸ ಒಲೆಯ ಮೇಲೆ ನೀರನ್ನಿಟ್ಟು ಪತಿಯ ಮಾರ್ಗ ನಿರೀಕ್ಷಣೆ ಮಾಡುತ್ತಾರೆ. ಆದಕ್ಕೇ ಪತ್ನಿ ಅನ್ನಪೂರ್ಣೆಯಾಗಿದ್ದಾರೆ ಪತಿಯ ಪಾಲಿಗೆ. ದೂರದಿಂದ ಕಾರಿನ ಹಾರ್ನ್ ಕೇಳಿದಾಕ್ಷಣ ಬಿಸಿ ರಾಗಿಮುದ್ದೆ ಸಿದ್ಧವಾಗುತ್ತದೆ. ಎಷ್ಟೇ ಕೆಲಸವಿದ್ದರೂ ಬಿಟ್ಟು ಮಧ್ಯಾಹ್ನ ಊಟದ ಹೊತ್ತಿಗೆ ಬಂದು, ಪತ್ನಿಯ ಕೈಯ ಮುದ್ದೆ ಸಾರು ಊಟಮಾಡಿದ ಮೇಲೆ ಕುಲಪತಿಗಳು ಮತ್ತೆ ಕೆಲಸಕ್ಕೆ ಸಿದ್ಧರಾಗಿ ವಿಶ್ವವಿದ್ಯಾಲಯಕ್ಕೆ ಹೋಗುತ್ತಾರೆ. ಪತಿಯನ್ನು ನಗುಮುಖದಿಂದ ಸ್ವಾಗತಿಸಿ, ಸತ್ವಯುತ ಆಹಾರವನ್ನೊದಗಿಸುವುದರಿಂದ ಡಾ. ಎಸ್. ರಾಮೇಗೌಡರು ದಿನಕ್ಕೆ ಹನ್ನೆರಡು ಗಂಟೆಗಿಂತ ಹೆಚ್ಚು ಕೆಲಸವನ್ನು, ದಣಿವು ಬೇಸರವಿಲ್ಲದೆ ಮಾಡುವರೆಂದು ತೋರುತ್ತದೆ.

ಈ ದಂಪತಿಗಳಿಗೆ ಮೂವರು ಮಕ್ಕಳು. ಹಿರಿಯ ಮಗ ಸುಧೀಂದ್ರ ಡಾಕ್ಟರ. ಎರಡನೆ ಮಗ ಚಂದ್ರಶೇಖರ ಇಂಜನೀಯರ್. ಮೂರನೆಯ ಮಗಳು ಧ್ಯಾನ ಶೋಭಾ. B.E. ಕಂಪ್ಯೂಟರ್ ಮಾಡಿದ್ದಾಳೆ. ಹೋದ ವರ್ಷ ಮದುವೆಯಾಯಿತು. ತಾಯಿಯಂತೆ ಸಂಗೀತ, ಲಲಿತ ಕಲೆಗಳಲ್ಲಿ ಪ್ರವೀಣೆ. ಆರವಿಂದಾಶ್ರಮದ ಬಗೆಗೆ ಹೆಚ್ಚಿನ ಆಸ್ಥೆಯುಳ್ಳವಳು. ಆಕೆ ತನ್ನ ಪತಿಯೊಂದಿಗೆ ಅಮೇರಿಕೆಯ ನ್ಯೂಜರ್ಸಿಯಲ್ಲಿದ್ದಾಳೆ. ಮೂವರು ಮಕ್ಕಳ ಶಿಕ್ಷಣ, ಮದುವೆ, ಉದ್ಯೋಗದ ಜವಾಬ್ದಾರಿಯನ್ನು ದಂಪತಿಗಳು ಮುಗಿಸಿದ್ದಾರೆ.'ಧ್ಯಾನ ಶೋಭಾ', ಹೊಸ ಹೆಸರು, ಕುವೆಂಪು ರಾಮಾಯಣ ದರ್ಶನದಲ್ಲಿ 'ಧ್ಯಾನ ಮಾಲಿನಿ' ಎಂಬ ಹೆಸರನ್ನು ಓದಿದ ನೆನಪು. ಸುಶೀಲಮ್ಮನವರ ಕಲಾ ಪ್ರತಿಭೆ, ಕುಲಪತಿ ನಿವಾಸದ ಹಾಲಿನ ಗೋಡೆಗಳನ್ನಲಂಕರಿಸಿದ 'ರಾಧಾಕೃಷ್ಣ', ಜಪಾನಿಗೊಂಬೆ, ಹುಡುಗ-ಹುಡುಗಿಯರ ಚಿತ್ರಗಳನ್ನು ನೋಡಿ ಅರಿಯಬಹುದಾಗಿದೆ. ಗಂಡುಮಕ್ಕಳ ಟ್ರೇನಿಂಗ್ ಕಾಲೇಜಿನಲ್ಲಿ, ಕನ್ನಡ ದೀಪ ಹಚ್ಚಿದ ಡೆಪ್ಯೂಟಿ ಚೆನ್ನಬಸಪ್ಪನವರ ೧೧೪ನೇ

ಪುಣ್ಯಸ್ಮರಣೆಯ ದಿನದಂದು, ಡೆಪ್ಯೂಟಿ ಚನ್ನಬಸಪ್ಪ ಸ್ಮಾರಕ ಸಮಿತಿಯವರು ಸುಂದರವಾದ ಕಾರ್ಯಕ್ರಮವನ್ನು ಡಾ. ಎಸ್. ರಾಮೇಗೌಡರ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡಿದ್ದರು. ಟ್ರೇನಿಂಗ್ ಕಾಲೇಜ ಸುತ್ತಲಿನ ಭಾಗಕ್ಕೆ ಡೆಪ್ಯೂಟಿ ಚೆನ್ನಬಸಪ್ಪನಗರ ಎಂದು ನಾಮಕರಣ ಮಾಡಲಾಯಿತು. ನಾನು ಮುಖ್ಯ ಅತಿಥಿಯಾಗಿದ್ದೆ. ಆ ದಿನ ಡಾ. ಎಸ್. ರಾಮೇಗೌಡರ ಭಾಷಣ ಕನ್ನಡ ಕೆಚ್ಚಿನಿಂದ ಕೂಡಿತ್ತು. "ನೀವೆಲ್ಲ ನಾಮಕರಣದಿಂದ ತೃಪ್ತರಾಗದೇ ಅವರ ಕನ್ನಡದ ಕೆಚ್ಚು, ಆದರ್ಶ ತತ್ವಗಳನ್ನು ಬೆಳೆಸಿಕೊಳ್ಳಬೇಕು. ಪೂರ್ವ ಪ್ರಾಥಮಿಕ ಹಂತದಿಂದಲೇ ಕನ್ನಡವನ್ನು ಮಕ್ಕಳಿಗೆ ಕಡ್ಡಾಯವಾಗಿ ಕಲಿಸಬೇಕು" ಎನ್ನುವ ಮಾತುಗಳು ಕೇಳುಗರ ಹೃದಯ ತಟ್ಟುವಂತಿದ್ದವು. ಹಾಗೂ ವಿಶ್ವವಿದ್ಯಾಲಯದ ಬಸವ ಜಯಂತಿ, ಡಾ. ಕಲಬುರ್ಗಿಯವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನು ಅವರ ಮನೆಯಲ್ಲಿ ಕೊಟ್ಟ ಸಂದರ್ಭದಲ್ಲಿ, ಡಾ. ಮಹೇಶ್ವರಯ್ಯನವರ ಪುಸ್ತಕ ಬಿಡುಗಡೆ ಅವರ ಮನೆಯಲ್ಲಿ ನಡೆದಾಗ, ಕಿತ್ತೂರ ಚೆನ್ನಮ್ಮ ವಿದ್ಯಾರ್ಥಿನಿಯರ ವಸತಿಗೃಹ, ವಿಶ್ವಚೇತನ ಸಾಂಸ್ಕೃತಿಕ ಕಾರ್ಯಕ್ರಮದ ಉದ್ಘಾಟನಾ ಸಮಾರಂಭಗಳಲ್ಲಿ ಅತಿಥಿಯಾಗಿ, ಮಾನ್ಯ ಕುಲಪತಿ ಡಾ. ಎಸ್. ರಾಮೇಗೌಡರ ಸ್ಫೂರ್ತಿದಾಯಕ ಭಾಷಣಗಳನ್ನು ಕೇಳಿದ್ದೇನೆ. ಅವರಿಗೆ ಸ್ವಾಮಿ ಪ್ರಣವಾನಂದ ಪ್ರಶಸ್ತಿ ದೊರೆತಾಗ ಶ್ರೀ ಅರವಿಂದೊ ಸೆಂಟರಿನ ಪರವಾಗಿ ನಮ್ಮ ಮನೆಯಲ್ಲಿ ದಂಪತಿಗಳಿಗೆ ಸತ್ಕಾರ ಮಾಡಿದಾಗ ವಿದ್ವತ್‌ಪೂರ್ಣ ಭಾಷಣ ಮಾಡಿದರು. ಕೊನೆಗೆ ನನಗೆ ಶಾಂತಕ್ಕ ಒಬ್ಬ ಅಕ್ಕನಂತಿದ್ದಾರೆ ಎಂದರು. ಅವರು ಕುಲಪತಿ ಹುದ್ದೆಯಿಂದ, ಧಾರವಾಡದಿಂದ ನಿರ್ಗಮಿಸುವುದನ್ನು ಕೇಳಿದಾಗಿನಿಂದ, ನಮ್ಮ ಅರವಿಂದೊ ಸೆಂಟರಿನವರಿಗೆ ನಮ್ಮ ಬಳಗದವರೊಬ್ಬರು ದೂರದ ಊರಿಗೆ ಹೊರಟಂತೆ, ಭಣ ಭಣ ಅನ್ನಿಸಿದೆ. ಅವರು ಎಲ್ಲಿ ಹೋದರೂ ಇದಕ್ಕೂ ಹೆಚ್ಚಿನ ಸ್ಥಾನ ದೊರೆಯಲಿ ಎಲ್ಲಾದರೂ ಇರಲಿ, ದಂಪತಿಗಳು ಸುಖವಾಗಿರಲಿ.

❊ ❊ ❊

ಧರ್ಮಪತ್ನಿಯಾಗಿ ನನ್ನ ಕೆಲವು ಅನಿಸಿಕೆಗಳು

ಸುಶೀಲಮ್ಮ ರಾಮೇಗೌಡ

ಖೋ. ಖೋ, ಥ್ರೊಬಾಲ್ ಮ್ಯಾಚ್ ಇತ್ತು. ಮುಗಿಸಿ ಬರುವದು ತಡವಾಯಿತು. 'ಯಾಕೆ ಇಷ್ಟು ಹೊತ್ತು?' ಎಂದು ಅಮ್ಮ ಗೇಟಿನಲ್ಲಿ ಕೇಳುತ್ತಿದ್ದಾಗಲೇ ಅಜ್ಜಿಯ ಸೋದರ ಮಾವನ ಮಗ ಬಂದರು. 'ಮೈಸೂರಿನಲ್ಲಿ ಕೆಲಸವಿತ್ತು, ಹಾಗೇ ನಿಮ್ಮನ್ನೆಲ್ಲ ನೋಡಿ ಹೋಗುವ ಎಂದು ಬಂದೆ' ಅಂದರು. ನಾನು ಮುಖ ತೊಳೆದು ಬಂದೆ, ಜಡೆ ಹಾಕುತ್ತ ಅಮ್ಮ ಅವರ ಹತ್ತಿರ ಮಾತಾಡುತ್ತ ಇದ್ದರು. ಆಗ ಅಮ್ಮನನ್ನು ಕೇಳಿದರು. 'ಮದುವೆ ಮಾಡುತ್ತೀರಾ?' ಆದಕ್ಕೆ ಅಮ್ಮ 'ಇನ್ನೂ ೧೬ ವರುಷ ಕೂಡಾ ಆಗಿಲ್ಲ ಆ ಕಡೆ ನಾವಿಬ್ಬರೂ ಯೋಚಿಸಿಲ್ಲ. ಮನೆಯವರನ್ನು ಕೇಳಬೇಕು' ಅಂದರು. ನಾನು ಸಂಗೀತಕ್ಕೆ ಹೊರಟೆ, ಮೂರನೆ ದಿನದ ನಂತರ ಮತ್ತೆ ಬಂದರು. 'ಹುಡುಗ ಇಂಜನೀಯರ್. ಈಗ ಕೋಲಾರದಲ್ಲಿ ಕೆಲಸಕ್ಕೆ ಇದ್ದಾನೆ. ಮೂರನೇ ವರುಷ ಇಂಜನೀಯರಿಂಗ್ ಓದುವಾಗಲೇ ಕಾರು, ಮನೆ, ಕೊಡುತ್ತೇವೆ ಎಂದು ಬಲವಂತ ಮಾಡುತ್ತಿದ್ದಾರೆ. ಹುಡುಗ ನನಗೆ ಅದೆಲ್ಲ ಬೇಡ. ನಾನು ಇನ್ನೂ ಹೆಚ್ಚಿನ ವ್ಯಾಸಂಗ ಮಾಡಬೇಕು. ಈಗ ಮದುವೆ ಬೇಡವೆಂದೂ ಹೇಳುತ್ತಿದ್ದಾನೆ. ಆದರೆ ಅವರ ಅಜ್ಜಿ ಮದುವೆ ಮಾಡಬೇಕು ಎಂದು ಹಠ ಹಿಡಿದಿದ್ದಾರೆ. ಹುಡುಗ ತುಂಬಾ ಬುದ್ಧಿವಂತ, ನೋಡಿ' ಎಂದು ಅಪ್ಪನಿಗೆ ಹೇಳಿದರು. ಅಪ್ಪ ಆದಕ್ಕೆ 'ಅವರ ಮನೆಯಲ್ಲಿ ದೊಡ್ಡವರು ಬಂದು ನೋಡಲಿ, ಆ ಮೇಲೆ ನೋಡುವಾ' ಎಂದರು. ಮಾವಯ್ಯನವರು ಅವರ ಸಂಬಂಧಿಗಳೂ ಬಂದು ನೋಡಿದರು.

ಆ ದಿನ ೫.೬.೧೯೬೧ ಸೋಮವಾರ ಸಂಜೆ ನೋಡಿದರು. ತಿಂಡಿ, ಕಾಫಿ ಆಯಿತು. ಹೂವು ಇಡುತ್ತೇವೆ ಎಂದರು. ಮತ್ತೆ ಬಂದೆ. ಅಜ್ಜಿ ಹೂವು ಇಟ್ಟರು. ಮತ್ತೆ ೫-೬ ಸಲ ಓಡಾಡಿಸಿದರು. ನಾನು ಬೇಸರವಾಗಿ ನನ್ನ ಅಜ್ಜಿ ಕೇಳಿದೆ. ಅದಕ್ಕೆ ಅಜ್ಜಿ ಹೇಳಿದರು ಹುಡುಗಿಯ ಕಾಲು ನೋಡುವುದಕ್ಕೆ ಎಂದು. ಅಂತೂ ವಧುವಿನ ಪರೀಕ್ಷೆ ಮುಗಿಯಿತು. ರಾತ್ರಿ ಊಟವಾದ ನಂತರ ಮತ್ತೆ ಮಾವಯ್ಯನವರೂ ಅವರ ಗೆಳೆಯರಾದ ತಲಕಾಡು ಮಾಯಣ್ಣನವರೂ ಇಬ್ಬರೂ ಮತ್ತೆ ಎಲೆ, ಅಡಿಕೆ, ತರುವುದಕ್ಕೆ ಹೇಳಿದರು. ಅಷ್ಟು ಹೊತ್ತಿಗೆ ಸಮಯ ೧೧-೩೦ ಗಂಟೆ, ಇಪ್ಪತ್ತು ನಿಮಿಷ ಏನೇನೊ ಕೇಳಿದ್ದರು. ಧೈರ್ಯದಿಂದ

ಮಾತಾಡಮ್ಮ ಎಂದರು. ಬೆಳಿಗ್ಗೆ ಹೊತ್ತಿಗೆ ಎಲ್ಲರೂ 'ಒಪ್ಪಿಗೆ ಶಾಸ್ತ್ರ ಮಾಡುವ. ಇನ್ನು ಎರಡು ದಿನವಾದರೆ ಆಷಾಢ ಬರುತ್ತದೆ' ಎಂದರು. ಆ ದಿನ ಮಂಗಳವಾರ ೬.೬.೧೯೬೨ ನಿಶ್ಚಿತಾರ್ಥವಾಯಿತು.

ಒಬ್ಬರಿಗೊಬ್ಬರು ಭೇಟಿ ಇಲ್ಲ. ಇವರು ಡಿಗ್ರಿ ತೆಗೆದುಕೊಳ್ಳುವುದಕ್ಕೆ ಕೋಲಾರದಿಂದ ಜುಲೈ ಕೊನೆಯಲ್ಲಿ ಬಂದರು. ಅಣ್ಣನನ್ನು 'ನಿನ್ನ ತಂಗಿಗೆ ಪುಸ್ತಕ ಓದುವ ಅಭ್ಯಾಸವಿದೆಯೊ' ಎಂದು ಕೇಳಿದರಂತೆ. ಅಣ್ಣ ಸಮಯ ಸಿಕ್ಕಿದಾಗ ಓದುತ್ತಾಳೆ ಎಂದನಂತೆ. ಕೆಲವು ಪುಸ್ತಕಗಳನ್ನು ಕೊಟ್ಟು ಕಳುಹಿಸಿದರು. ಮೊದಲನೆಯದು ಶ್ರೀ ಶಾರದಾದೇವಿ. ಸರ್ವಮಂಗಳಾ, ಕರುಳಿನ ಕರೆ, ಹುಚ್ಚು ಮನಸ್ಸಿನ ಹತ್ತು ಮುಖಗಳು. ಕೆಲವು ದಿನದ ನಂತರ ಮೈಸೂರು ಮಲ್ಲಿಗೆಯಲ್ಲಿ ಇರುವುದನ್ನೆಲ್ಲಾ ಕಲಿಯಬೇಕೆಂಬ ಆರ್ಡರ್ ಮಾಡಿದರು. ಅವರು ಕೊಟ್ಟ ಪುಸ್ತಕವನ್ನು ಸಮಯಕ್ಕೆ ಸರಿಯಾಗಿ ಓದಿ ಮುಗಿಸಬೇಕು. ಆ ಪುಸ್ತಕದ ಮುಖ್ಯಾಂಶವನ್ನು ಬರೆದು ಕಳುಹಿಸಬೇಕು. ಈಗಿನ ಹಾಗೇ ಫೋನು ಇಲ್ಲ. ನಾನು ಹೆಚ್ಚಿಗೆ ಬರೆಯುತ್ತಿರಲಿಲ್ಲ. ಇವರ ಪತ್ರ ಬಂದರೆ ಭಯವಾಗುತ್ತಿತ್ತು. ಏನು ಬರೆಯಬೇಕೆಂಬುದು ತೋಚುತ್ತಿರಲಿಲ್ಲ. ನನ್ನ ಅಣ್ಣ ಯಾವಾಗಲೂ ರೇಗಿಸುವದು. ಅವರಿಂದ ಮೂರು ನಾಲ್ಕು ಪತ್ರ ಬಂದ ನಂತರ ನೀನೂ ಉತ್ತರ ಬರೆಯುತ್ತೀಯಾ ಎಂದರು. ನನಗೆ ಸಮಯವಿಲ್ಲ ಎಂಬ್ರಾಯ್ಡರಿ ಮಾಡುವದು, ಟೀಚರ ಹೇಳಿ ಕೊಟ್ಟ ದಿನವೆ ಅದನ್ನು ಮುಗಿಸುವ ಆಸೆ, ಜೊತೆಗೆ ಟೇಲರಿಂಗ ಕಲಿಯುತ್ತಿದ್ದೆ; ಸಾಯಂಕಾಲ ಸಂಗೀತಕ್ಕೆ ಹೋಗುತ್ತಿದ್ದೆ. ಈ ಸಮಯದಲ್ಲಿ ಇವರು ಕೊಟ್ಟ ಪುಸ್ತಕಗಳನ್ನು ಬೇರೆ ಓದಬೇಕು.

ನನ್ನ ತಂದೆ ವಿಷಕಂಠಯ್ಯ, ತಾಯಿ ಲಕ್ಷ್ಮಮ್ಮ. ಯಾವಾಗಲೂ ತಾಯಿ ಸೋಮವಾರ, ಶುಕ್ರವಾರ ವೃತ ಆಚರಿಸುವರು. ಬಹಳ ಮಡಿವಂತಿಕೆ. ನನ್ನ ಅಜ್ಜಿ ಎಲ್ಲ ಮೊಮ್ಮಕ್ಕಳಿಗೆ ದೇವರ ಪೂಜೆ ಮಾಡಿ ಎಂದು ಹೇಳುವರು. ಅದರಲ್ಲಿ ಮಲ್ಲಿಗೆ ಪಾರಿಜಾತ ಹೂವುಗಳನ್ನು ದೇವರಿಗೆ ಇಟ್ಟು ಪೂಜೆ ಮಾಡಿ, ಒಳ್ಳೆಯ ವಿದ್ಯಾ ಬುದ್ಧಿ ಇರುವಂಥ ಗಂಡನನ್ನು ಕೊಡು ದೇವರೆ ಎಂದೂ ಬೇಡಿಕೊಳ್ಳಿ ಎಂದು ಎನ್ನುವರು. ನನ್ನ ತಂದೆಯವರು ತುಂಬಾ ನಿಧಾನ ಸ್ವಭಾವದವರು. ಯಾರನ್ನು ನೋಯಿಸಿ ಮಾತಾಡುತ್ತಿರಲಿಲ್ಲ. ನನ್ನ ತಂದೆಯವರಿಗೂ ನನ್ನ ಪತಿಯವರಿಗೂ ಬಹಳ ಪ್ರೀತಿ ವಿಶ್ವಾಸ. ಮಾವ ಅಳಿಯ ಕೂತರೆ ರಾತ್ರಿ ೧-೨ ಗಂಟೆಯವರೆಗೂ ಟೆಕ್ನಿಕಲ್ ವಿಷಯ ಮಾತಾನಾಡುತ್ತ ಕುಳಿತುಕೊಳ್ಳುವರು. ನನ್ನ ತಂದೆಯವರು ಇವರ ಬಗ್ಗೆ ಬಹಳ ಹೆಮ್ಮೆ ಪಡುವರು. ಬಂದವರ ಜೊತೆಯಲ್ಲಿ ತುಂಬಾ ಹೇಳಿಕೊಳ್ಳುವರು. ಒಳಗೆ ಅಮ್ಮನಿಗೆ ಸಿಟ್ಟು. ಯಾಕೆಂದರೆ ಇಷ್ಟು ಹೊತ್ತು ಮಾತನಾಡುತ್ತ ಕುಳಿತರೆ ಅವರು ಬೆಳಿಗ್ಗೆ ಕಾಲೇಜಿಗೆ ಹೋಗುವದು ಹೇಗೆ? ಆಗ ಇವರು N-I-E ಮೈಸೂರಿನಲ್ಲಿ ಲೆಕ್ಚರರ್ ಆಗಿದ್ದರು.

ನನ್ನ ತಂದೆಯವರನ್ನು ಒಮ್ಮೆ ಭೆಟ್ಟಿಯಾದಾಗ 'ನನ್ನ ಸ್ನೇಹಿತರು ನೀನು ಮದುವೆಯಾಗುವ ಹುಡುಗಿಯನ್ನು ತೋರಿಸು ಅಂತಾರೆ' ಎಂದು ಹೇಳಿದರಂತೆ. ಆದಕ್ಕೆ ತಂದೆಯವರು ಎಲ್ಲರನ್ನೂ ಊಟಕ್ಕೆ ಕರೆದುಕೊಂಡು ಬರಲು ತಿಳಿಸಿದರು. ಒಂದು ದಿನ ಸ್ನೇಹಿತರನ್ನು ಕರೆದುಕೊಂಡು ಬಂದರು. ನನ್ನ ಚಿಕ್ಕಮ್ಮ ಊಟ ಬಡಿಸಿದರು. ಚಿಕ್ಕಮ್ಮನಿಗೆ

ಕೇಳಿಸುವ ಹಾಗೇ ಇವರ ಗೆಳೆಯರು ಚೇಷ್ಟೆ ಮಾಡಿದರು. 'ಏನೋ ಹುಡುಗೀನೆ ಬರಲಿಲ್ಲ!' ನನ್ನ ಚಿಕ್ಕಮ್ಮ ಬೇಕಂತಲೆ ನೀರು ಇಟ್ಟಿರಲಿಲ್ಲ. ನೀರು ಇಡು ಎಂದು ಅಣ್ಣ, ಅಮ್ಮನ ಬಲವಂತ, ತುಂಬಾ ಭಯ. ಯಾರಾದರೂ ಮಾತನಾಡಿಸಿದರೆ ಉತ್ತರಿಸುವುದು ಹೇಗೆ ಎಂದೂ ಯೋಚನೆ. ಜೊತೆಯಲ್ಲಿ ಚಿಕ್ಕಮ್ಮ ಬಂದರು. ನೀರು ಇಡಲು ಬಂದರೆ ೨೫ ಜನರವರೆಗೆ ಕುಳಿತಿದ್ದಾರೆ. ಯಾರು ಏನು ತಮಾಷೆ ಮಾಡುತ್ತಾರೊ ಅನ್ನುವ ಭಯ. ಯಾರೂ ಮಾತನಾಡಿಸಲಿಲ್ಲ. ಆಗ ಸ್ವಲ್ಪ ಧೈರ್ಯ ಬಂತು. ಆದರೆ ಯಾರೋ ಒಬ್ಬರು, 'ಏನೊ ಮಾತನಾಡಲಿಲ್ಲ, ಮೂಗಿನಾ'ಯೆಂದು ಕೇಳಿದರು. ಆದಕ್ಕೆ ಇವರ ಉತ್ತರ, 'ನಾನು ಮಾತನಾಡಿಸಿದ್ದರೆ ತಾನೆ ಮೂಗಿನೊ, ಇಲ್ಲವೋ ಎಂದು ಗೊತ್ತಾಗುತ್ತಿತ್ತು' ಅಂದರು. ಒಳಗಡೆ ನಾನು ಬಂದೆ. ಅಮ್ಮ, ಚಿಕ್ಕಮ್ಮ, ಅಣ್ಣ ಇವರುಗಳು ನನಗೆ ಸಿಟ್ಟು ಮಾಡಿದರು. ಅವರಿಗೆ ಸ್ನೇಹಿತರ ಮುಂದೆ ಅವಮಾನ ಮಾಡುತ್ತೀಯಾ ಎಂದು ಎಲ್ಲರೂ ಎಂದರು. ನಂತರ ಎಲ್ಲರೂ ಹಣ್ಣು, ಎಲೆ, ಅಡಿಕೆ ತಿಂದು ಅಣ್ಣನಿಗೆ ಹೇಳಿ ಹೊರಟರು. ಅಮ್ಮ ಅಳಿಯಂದಿರ ಹತ್ತಿರ ಮಾತನಾಡುತ್ತಿರಲಿಲ್ಲ. ಗೆಳೆಯರು ತಮಾಷೆ ಮಾಡಿದರಂತೆ. 'ಏನೋ ನಿನಗಿಂತ ಹುಡಗಿ'ನೇ ಉದ್ದ ಅಂತ ಕಾಣುತ್ತೆ ಎಂದು ಅಂದರಂತೆ. ನನ್ನ ಅಣ್ಣನಿಗೆ ಹೇಳಿ ನನ್ನ ಎತ್ತರ ಅಳತೆ ಮಾಡಿಸಿದರು. ನಿಮಗಿಂತ ೧ ಇಂಚು ಕಡಿಮೆ ಇದ್ದಾಳೆ ಎಂದು ಅಣ್ಣ ಹೇಳಿದರಂತೆ. ಆಗ ಇವರಿಗೆ ಸಮಾಧಾನವಾಯಿತು.

ಮದುವೆ ೧೬.೫.೧೯೬೨ ಭಾನುವಾರ ಆಯಿತು. ಆ ದಿನ ಒಬ್ಬರ ಮುಖ ಒಬ್ಬರು ನೋಡಿದ್ದು. ಸಂಜೆ ಆರತಕ್ಷತೆಯಲ್ಲಿ ಗೆಳೆಯರ, ಸಂಬಂಧಿಕರ ಪರಿಚಯ ಮಾಡುವರು. ನಮಸ್ಕಾರ ಎಂದು ಹೇಳುವದಷ್ಟೆ,ಇವರನ್ನು ನೋಡಿದರೆ ಅಷ್ಟು ಭಯ, ಆದರೆ ನಮ್ಮ ದಾಂಪತ್ಯ ಜೀವನದಲ್ಲಿ ಎಂದೂ ಒಬ್ಬರಿಗೊಬ್ಬರಿಗೆ ಅಸಮಾಧಾನವಿಲ್ಲ. ಸಂಸಾರದಲ್ಲಿ ಹೆಣ್ಣಿಗೆ ಮುಖ್ಯವಾಗಿ ಬೇಕಾದದ್ದು ಸಹನೆ.

ಇವರದ್ದು ಸುಸಂಸ್ಕೃತ ಮನೆತನ. ಮೂರು ಜನ ಸಹೋದರರು, ಎರಡು ಜನ ಸಹೋದರಿಯರು, ಅಜ್ಜಿ, ತಂದೆ ಇವರೆಲ್ಲ ಇದ್ದ ಒಟ್ಟುಕುಟುಂಬ. ನಾನು ಮೊದಲ ಸಲ ಬಾವಿಯನ್ನು ನೋಡಿದ್ದು, ಹೊಂಡರಬಾಳಿನಲ್ಲಿಯೇ. ಯಾರೊಂದಿಗೂ ಹೆಚ್ಚು ಮಾತನಾಡದ ಸಂಕುಚಿತ ಸ್ವಭಾವದ ನಾನು ಆ ದೊಡ್ಡ ಮನೆಯಲ್ಲಿ ಹೊಂದಿಕೊಳ್ಳುತ್ತೇನೋ ಇಲ್ಲವೋ ಎಂದು ನನ್ನ ತಂದೆಗೆ ಆತಂಕವಾಗಿತ್ತಂತೆ. ನಾನು ಆ ಮನೆ ಸೇರಿದ ಎಂಟ್ಹತ್ತು ದಿನಕ್ಕೇ ತಂದೆ ನನ್ನನ್ನು ನೋಡುವ ಸಲುವಾಗಿ ಅಲ್ಲಿಗೆ ಬಂದರು. ಎಲ್ಲರೊಂದಿಗೆ ನಾನು ಮಾತನಾಡುವುದನ್ನು, ಸಂತೋಷದಿಂದಿರುವುದನ್ನು ಕಂಡು ಖುಷಿ ಪಟ್ಟರು.

ಮಂಡ್ಯದಲ್ಲಿ ನಾವು ಮನೆ ಮಾಡಿದಾಗ ಜೊತೆಗೆ ಕಲಿಯುವುದಕ್ಕಾಗಿ ಮೈದುನ ನಾದಿನಿಯರು ನಮ್ಮೊಂದಿಗೆ ಇದ್ದರು. ಅಜ್ಜಿಯೂ ಇದ್ದರು. ೧೯೬೬ ಸೆಪ್ಟೆಂಬರ್ ೯ ರಂದು ಇವರು ಟ್ರಿನಿಡಾಡ್‌ಗೆ ಹೋದಾಗ ನನ್ನೊಂದಿಗೆ ಮಂಡ್ಯದಲ್ಲಿ ಅವರೆಲ್ಲ ಇದ್ದರು. ನಾನು ೧೯೬೮ ನವಂಬರ್ ೧೧ರಂದು ಇಬ್ಬರು ಮಕ್ಕಳನ್ನು ಕರೆದುಕೊಂಡು ಟ್ರಿನಿಡಾಡ್‌ಗೆ ಹೋದೆ. ೧೯೭೨ರ ವರೆಗೂ ಅಲ್ಲೇ ಇದ್ದೆವು. ಇಂಗ್ಲಂಡ್, ವಾಷಿಂಗ್ಟನ್‌ಗಳಿಗೂ ಹೋಗಿದ್ದೆವು. ಮಗಳು ಧ್ಯಾನಶೋಭಾ ಹುಟ್ಟಿದ್ದು, ಟ್ರಿನಿಡಾಡ್‌ನಲ್ಲಿಯೇ. ೧೯೭೨ರಲ್ಲಿ ಮತ್ತೆ ಮಂಡ್ಯಕ್ಕೆ ಹಿಂತಿರುಗಿದೆವು. ೧೯೭೯ ಅಕ್ಟೋಬರ್‌ದವರೆಗೂ ಅಲ್ಲೇ ಇದ್ದೆವು. ೧೯೭೯ ರಿಂದ ೧೯೮೪

ಅಗಸ್ಟ ವರೆಗೆ ಬೆಂಗಳೂರು ವಾಸವಾಯಿತು. ಅಲ್ಲಿ, ಜಯನಗರದ ಮನೆಯೊಂದರಲ್ಲಿದ್ದೆವು. ೧೯೮೪ರಿಂದ ೧೯೯೦ರ ವರೆಗೆ ಪಾಂಡಿಚೇರಿಯಲ್ಲಿದ್ದೆವು. ೧೯೯೦ರಲ್ಲಿ ಇವರು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳೆಂದು ನೇಮಕಗೊಂಡ ಮೇಲೆ ಇಲ್ಲಿಗೆ ಬಂದೆವು. ಇಲ್ಲಿ ಈಗ ಆರು ವರ್ಷಗಳನ್ನು ಕಳೆದಿದ್ದೇವೆ. ಭಾರತಕ್ಕೆ ಹೋಲಿಸಿದರೆ ವಿದೇಶದ ಜೀವನ ಯಾಂತ್ರಿಕವೆನ್ನಿಸುತ್ತದೆ.

ಮಂಡ್ಯದಲ್ಲಿರುವಾಗ ಊರಿಂದ ಜನಗಳು ಬರೋರು. ಪರಿಚಿತರು ತಮ್ಮ ಕೆಲಸಗಳಿಗಾಗಿ, ರೋಗಿಗಳು ಆಸ್ಪತ್ರೆಗಾಗಿ ಬರುತ್ತಿದ್ದರು. ಅವರೆಲ್ಲರ ಊಟೋಪಚಾರಗಳಲ್ಲಿ ನನ್ನ ಹೆಚ್ಚಿನ ಸಮಯ ಕಳೆಯುತ್ತಿತ್ತು. ೧೯೭೫ರಿಂದ ಮಾವನವರೂ ನಮ್ಮ ಜೊತೆಗಿದ್ದರು. ಹಾರ್ಟ್‌ಪೇಷಂಟ್ ಆಗಿದ್ದ ಅವರ ಆರೈಕೆಯೂ ನನ್ನ ಜವಾಬ್ದಾರಿಯಾಗಿತ್ತು. ೧೯೮೭ ರ ವರೆಗೂ ಅವರು ನಮ್ಮೊಂದಿಗಿದ್ದು ಪಾಂಡಿಚೇರಿಯಲ್ಲಿದ್ದಾಗ ತೀರಿಕೊಂಡರು. ಮಂಡ್ಯದಲ್ಲಿದ್ದಾಗಲೇ ಲೇಡಿಸ್‌ಕ್ಲಬ್‌ಗಳಲ್ಲಿ ನಾನು ಭಾಗವಹಿಸುತ್ತಿದ್ದೆ. ಒಳ್ಳೆಯ ಕಾರ್ಯಕ್ರಮಗಳನ್ನು ಮಾಡುತ್ತಿದ್ದೆವು. ವಿದೇಶದಲ್ಲಿದ್ದಾಗಲೂ ಅದರಲ್ಲೂ ವೆಸ್ಟ್ ಇಂಡೀಸ್‌ನಲ್ಲಿದ್ದಾಗ ಇಂಡಿಯನ್ ಅಲುಮ್ನಿ ಅಸೋಸಿಯೇಷನ್‌ನಲ್ಲಿ ಭಾಗವಹಿಸುತ್ತಿದ್ದೆವು. ಜನರೊಂದಿಗೆ ಹೆಚ್ಚು ಬೆರೆಯಲು ಸಾಧ್ಯವಾದದ್ದು ನನಗಲ್ಲಿಯೇ. ಎಲ್ಲ ದೇಶಗಳ ಜನರೂ ಅಲ್ಲಿ ಸೇರಿರುತ್ತಿದ್ದರು. ಪಾಂಡಿಚೇರಿಯಲ್ಲಿ ಇವರು ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದರು. ಅಲ್ಲಿ ಅದ್ದೂರಿಯಾದ ಸಮಾರಂಭಗಳು ನಡೆಯುತ್ತಿದ್ದವು. ಕನ್ನಡ ಸಾಹಿತಿಗಳನ್ನೂ, ಕಲಾವಿದರನ್ನೂ ಬರಮಾಡಿಕೊಂಡು, ಸನ್ಮಾನಿಸಿ ಅವರಿಂದ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸುತ್ತಿದ್ದೆವು. ಇವರು ಜಾನಪದ ಹಾಡುಗಳನ್ನು ತುಂಬ ಚೆನ್ನಾಗಿ ಹಾಡುತ್ತಿದ್ದರು. ವೆಸ್ಟ್ ಇಂಡೀಸ್‌ನಲ್ಲೂ ಸಮೂಹಗೀತೆಗಳನ್ನು ಹಾಡುತ್ತಿದ್ದರು. ಪಾಂಡಿಚೇರಿಯ ಕರ್ನಾಟಕ ಸಂಘದಲ್ಲೂ ಹಾಡುತ್ತಿದ್ದರು. ಎಂಟನೆಯ ತರಗತಿಯಲ್ಲಿದ್ದಾಗಲೇ ಭಾಮಿನಿ ಷಟ್ಪದಿಯಲ್ಲಿ ಹಾಡುಗಳನ್ನು ಬರೆದಿದ್ದರಂತೆ.

ಇವರು ನಾಟಕದಲ್ಲಿಯೂ ಭಾಗವಹಿಸುತ್ತಿದ್ದರು. ಮಂಡ್ಯದಲ್ಲಿ ಕುವೆಂಪು ನಾಟಕ ಚಕ್ರ ಪ್ರದರ್ಶಿಸಿದಾಗ ಪಾತ್ರವನ್ನು ಹಾಕಿದ್ದರು. ಇಂಜನಿಯರ್ ಓದುತ್ತಿರುವಾಗಲೂ 'ಪಂಚಭೂತ' ನಾಟಕದಲ್ಲಿ ಸ್ಕೂಲ್ ಮಾಸ್ಟರ್ ರೋಲ್ ಮಾಡಿದ್ದರಂತೆ. 'ಅಂಗುಲಿಮಾಲಾ'ದಲ್ಲೂ ಪಾತ್ರ ವಹಿಸಿದ್ದರಂತೆ. ಈಗಲೂ ಕೂಡ ಇವರಿಗೆ ನಾಟಕ, ಮತ್ತಿತರ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತುಂಬ ಆಸಕ್ತಿ ಇದೆ. ಆದರೆ ಹೆಚ್ಚು ಬಿಡುವು ದೊರೆಯುವುದಿಲ್ಲ.

ಮಕ್ಕಳು, ಮೊದಲಿನಿಂದಲೂ ತಂದೆಯನ್ನು ಹೆಚ್ಚು ಹಚ್ಚಿಕೊಂಡಿದ್ದಾರೆ. ಮಂಡ್ಯದಲ್ಲಿ ಇವರಿಗೆ ಸಮಯ ಸಿಗುವುದು ಸ್ವಲ್ಪ ಕಷ್ಟವೇ ಆಗಿದ್ದರೂ ಸಿಕ್ಕ ಸಮಯದಲ್ಲಿ ಅವರ ವಿದ್ಯಾಭ್ಯಾಸದ ಬಗ್ಗೆ ಗಮನ ಕೊಡುತ್ತಿದ್ದರು. ಮಧ್ಯದಲ್ಲಿಯೇ ಮನೆಗೆ ಬಂದ ಅತಿಥಿಗಳನ್ನು, ಸಂಬಂಧಿಕರನ್ನು ಮಾತನಾಡಿಸಿ, ಅವರ ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಿದ್ದರು. ಮಂಡ್ಯದಲ್ಲಿ ಬೆಳಿಗ್ಗೆ ಏಳು ಗಂಟೆಗೆ ಮನೆ ಬಿಟ್ಟರೆ, ಸಂಜೆಗೇ ಹಿಂತಿರುಗಿ ಬರುವುದಾಗಿತ್ತು. ಪಾಂಡಿಚೇರಿಯಲ್ಲಿಯೂ ಎಂಟು ಗಂಟೆಗೆ ಹೋಗಬೇಕಾಗುತ್ತಿತ್ತು. ಆದರೆ ಮಧ್ಯಾಹ್ನಕ್ಕೆ ನಾನು ಊಟ ಕಳಿಸಿಕೊಡುತ್ತಿದ್ದೆ. ಅಲ್ಲಿ ಅವರ

ಆರೋಗ್ಯ ತುಂಬ ಚೆನ್ನಾಗಿ ಉಳಿದಿತ್ತು. ಮಕ್ಕಳೆಲ್ಲ ಸ್ವಂತ ಓದಿಕೊಂಡು, ಪರೀಕ್ಷೆಗಳಲ್ಲಿ ಚೆನ್ನಾಗಿ ಮಾಡುತ್ತಿದ್ದರೇ ಹೊರತು ಟ್ಯೂಷನ್‌ಗೆ ಯಾರನ್ನೂ ಕಳಿಸುತ್ತಿರಲಿಲ್ಲ. ಮೆಡಿಕಲ್ ಓದುತ್ತಿದ್ದ ಹಿರಿಯ ಮಗ ತಮ್ಮನಿಗೆ ಗಣಿತವನ್ನು ಹೇಳಿಕೊಡುತ್ತಿದ್ದ. ಅವನ ಗಣಿತ ಅಷ್ಟು ಚೆನ್ನಾಗಿತ್ತು.

ಇವರ ಸೋದರ ಮಾವ ಇಂದವಾಡಿಯ ಮಠದಲ್ಲಿ ಸನ್ಯಾಸಿಯಾಗಿದ್ದರು. ಐದು ವರುಷದ ಮಗುವಾಗಿದ್ದಾಗ ಇವರನ್ನು ಅವರು ಮಠಕ್ಕೆ ಒಯ್ದಿದ್ದರಂತೆ. ಸುಮಾರು ಮೂರುವರ್ಷ ಇವರು ಮಠದಲ್ಲಿದ್ದಿರಬೇಕು. ಸೋದರಮಾವ ಖಾಯಿಲೆಯಿಂದ ಸಾಯುತ್ತಲೇ ಹಿಂತಿರುಗಿ ಮನೆಗೆ ಬಂದರಂತೆ. ಹೀಗೆ ಸನ್ಯಾಸಿಯಾಗಬೇಕಿದ್ದವರು ದೈವಕೃಪೆಯಿಂದ ಮುಂದೆ ಸಂಸಾರಿಯಾದರು - ವಿಶಿಷ್ಟ ರೀತಿಯ ತಪಸ್ವಿಯಾದರು; ಕೆಲಸಮಾಡಿದಲ್ಲೆಲ್ಲ ಒಳ್ಳೆಯ ಹೆಸರನ್ನು ಪಡೆದರು. ಸಣ್ಣ ವಯಸ್ಸಿನವರಿದ್ದಾಗಲೇ ಶನಿವಾರ ರಾಮನ ಭಜನೆ ಮನೆಯಲ್ಲಿ ನಡೆಯುತ್ತಿತ್ತು. ಇವರೂ ಬಹಳ ಶ್ರದ್ಧೆಯಿಂದಲೇ ಮಾಡುತ್ತಿದ್ದರು. ಅಜ್ಜಿ ಅದನ್ನು ಬಹಳೇ ನೆನೆಸಿಕೊಳ್ಳುತ್ತಾರೆ. ಈಗಲೂ ಪ್ರತಿದಿನ ಸ್ನಾನವಾದ ಕೂಡಲೇ ದೇವರಪೂಜೆ ಮಾಡಿ, ಆಮೇಲೆ ಆಹಾರ ತೆಗೆದುಕೊಳ್ಳುತ್ತಾರೆ. ಸಮಯವಿಲ್ಲದಿದ್ದರೂ ಐದು ನಿಮಿಷವಾದರೂ ದೇವರಮುಂದೆ ಕೂತಿರಬೇಕು. ಪಾಂಡಿಚೇರಿಯಲ್ಲಿದ್ದಾಗ ಪ್ರತಿ ಶುಕ್ರವಾರ ಮಗಳೊಂದಿಗೆ ಅರವಿಂದಾಶ್ರಮಕ್ಕೆ ಹೋಗುತ್ತಿದ್ದರು. ಅಲ್ಲಿ ಅವರಿಗೆ ಮನಸ್ಸಿಗೆ ಶಾಂತಿ ದೊರೆಯುತ್ತಿತ್ತು. ಈಗಲೂ ಮನಸ್ಸಿಗೆ ತೀರ ಬೇಸರವಾದಾಗ ದೇವಸ್ಥಾನಕ್ಕೆ ಹೋಗುತ್ತಾರೆ. ಪಾಂಡಿಚೇರಿಯಲ್ಲಿದ್ದಾಗ ಹಳೆಯ ದ್ರೌಪದಿಯ ಗುಡಿಯ ಜೀರ್ಣೋದ್ಧಾರ ಮಾಡಿಸಿದ್ದಾರೆ. ಹೀಗೆ ದೇವರ ಮೇಲೆ ಇವರಿಗೆ ಮೊದಲಿನಿಂದಲೂ ಶ್ರದ್ಧೆ ಇದೆ.

ವಿದ್ಯಾರ್ಥಿ ದೆಸೆಯಿಂದಲೂ ಬಹಳ ಚುರುಕಾಗಿರುವ ಇವರಿಗೆ ಯಾವುದೇ ಕೆಲಸವಾದರೂ ತತ್‌ಕ್ಷಣ ಈಡೇರಬೇಕು. ಪಾಂಡಿಚೇರಿಯಲ್ಲಿ ಹನ್ನೊಂದು ತಿಂಗಳಿನಲ್ಲಿ ಬೃಹದಾಕಾರದ ವರ್ಕ್‌ಶಾಪ್ ಕಟ್ಟಿಸಿದ್ದು ಎಲ್ಲರಿಗೂ ಅಚ್ಚರಿ. ಬೆಂಗಳೂರಿನಲ್ಲಿ ಬಿ.ಐ.ಟಿ ಕಟ್ಟಿಸಿದ್ದೂ ಹಾಗೆಯೇ. ಇವರು ಶೀಘ್ರ ಕೋಪಿಗಳು. ಆದರೆ ಬೇಗನೇ ಸಿಟ್ಟು ಇಳಿದು ಹೋಗುತ್ತದೆ. ಏನೇ ಇದ್ದರೂ ಮನಸ್ಸಿನಲ್ಲಿ ಇಟ್ಟುಕೊಳ್ಳುವುದಿಲ್ಲ. ಎಲ್ಲ ಮರೆತು ಮಕ್ಕಳಂತಾಗಿ ಬಿಡುತ್ತಾರೆ. ಜನಗಳೊಂದಿಗೆ ಬಹುಬೇಗ ಬೆರೆತು ಬಿಡುತ್ತಾರೆ. ಎಂಥವರಿದ್ದರೂ ಒಂದು ಕ್ಷಣದಲ್ಲಿ ಪರಿಚಯ ಮಾಡಿಕೊಂಡು ಮಾತನಾಡತೊಡಗುತ್ತಾರೆ. ಅಪರಿಚಿತರೊಂದಿಗೆ ಅಷ್ಟು ಬೇಗ ಬೆರೆಯಲು ನನಗೆ ಸಾಧ್ಯವಿಲ್ಲ. ಜೊತೆಗೆ ಸಾಧ್ಯವಾದಷ್ಟು ಎಲ್ಲರಿಗೂ ಸಹಾಯ ಮಾಡಲು ಪ್ರಯತ್ನಿಸುತ್ತಾರೆ. ಮಂಡ್ಯದಲ್ಲಿದ್ದಾಗ ರೋಟರಿ ಕ್ಲಬ್‌ನ ಮೂಲಕ ಬಡ ಹುಡುಗರಿಗೆ ಪುಸ್ತಕ, ಫೀಜು, ಸಹಾಯ ಮಾಡಿದ್ದಾರೆ, ಕಣ್ಣು ಆಪರೇಷನ್ ಕ್ಯಾಂಪ್ ಮುಂತಾದವನ್ನು ಮಾಡಿಸಿದ್ದಾರೆ. ಪಾಂಡಿಚೇರಿಯಲ್ಲಿ ಸಿಬ್ಬಂದಿಯೊಬ್ಬ ಅಪಘಾತದಲ್ಲಿ ಕಾಲು ಕಳೆದುಕೊಂಡಾಗ ಆಪರೇಷನ್‌ಗೆ ಹದಿನೇಳು ಸಾವಿರ ಕೂಡಿಸಿಕೊಟ್ಟಿದ್ದಾರೆ. ರೋಟರಿ ಕ್ಲಬ್‌ನಿಂದ ವ್ಹೀಲ್‌ಚೇರ್ ಕೊಡಿಸಿದ್ದಾರೆ. ಇಂಥ ಉದಾಹರಣೆಗಳು ಬೇಕಷ್ಟಿವೆ. ಈ ವಿಶ್ವವಿದ್ಯಾಲಯದಲ್ಲಿ ಮಹಿಳಾ ವೇದಿಕೆಗೆ ಹೆಚ್ಚಿನ ಧನ

ಸಹಾಯ ನೀಡಿ ವೇದಿಕೆಯ ಚಟುವಟಿಕೆಗಳನ್ನು ಪ್ರೋತ್ಸಾಹಿಸಿದ್ದಾರೆ. ವೇದಿಕೆಯ ಗೌರವಾಧ್ಯಕ್ಷೆಯಾಗಿರುವ ನಾನು ಅದನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ. ಸದ್ಯದಲ್ಲಿಯೇ ವೇದಿಕೆಗೆ ಒಂದು ರೂಮು ಕೂಡ ದೊರೆಯಲಿದೆ.

ಇವರು ಮೊದಲಿನಿಂದಲೂ ಚರ್ಚಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನಗಳನ್ನು ಪಡೆಯುತ್ತ ಬಂದವರು. ಮಕ್ಕಳೂ ಅಷ್ಟೇ. ತಂದೆಯಂತೆಯೇ ಮೂವರೂ ಚರ್ಚಾಸ್ಪರ್ಧೆಗಳಲ್ಲಿ ಗೆದ್ದು ಬರುವಂಥವರೇ. ಧ್ಯಾನಶೋಭಾ, ತಮಿಳುನಾಡಿನಲ್ಲಿ ರಾಜ್ಯಮಟ್ಟದ ಚರ್ಚಾಪಟುವಾಗಿದ್ದಳು. ತಮಿಳುನಾಡನ್ನು ಪ್ರತಿನಿಧಿಸಿ, ಕೇರಳ ಮತ್ತಿತರ ಕಡೆ ಸ್ಪರ್ಧೆಯಲ್ಲಿ ಭಾಗವಹಿಸುತ್ತಿದ್ದಳು. ಚಂದ್ರಶೇಖರ ಕೂಡ ಅಂತಾರಾಜ್ಯ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದು ಟೈಂಸ್‌ನವರು ಏರ್ಪಡಿಸಿದ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದಿದ್ದು 'ಮ್ಯಾನ್ ಆಫ್ ಜೇಸಿಯಾನಾ' ಆಗಿದ್ದ.

ಇವರಿಗೆ ೧೯೯೩ರಲ್ಲಿ ರಾಜ್ಯಪ್ರಶಸ್ತಿ, ೧೯೯೪ರಲ್ಲಿ ಸ್ವಾಮಿ ಪ್ರಣವಾನಂದ ಪ್ರಶಸ್ತಿಗಳು ಬಂದಾಗ ಸಂತೋಷಪಟ್ಟೆವು. ಪ್ರಣವಾನಂದ ಪ್ರಶಸ್ತಿ ಕರ್ನಾಟಕದಲ್ಲಿ ಪ್ರಥಮವಾಗಿ ಇವರಿಗೇ ಬಂದಿದ್ದು. ನಮ್ಮ ಬಂಧುಗಳಿಗೆಲ್ಲ ಬಹಳೇ ಸಂತೋಷವಾಯಿತು. ಅನೇಕ ಕಡೆ, ಸ್ನೇಹಿತರೆಲ್ಲ ಖುಷಿಯಿಂದ ಸಮಾರಂಭಗಳನ್ನು ಏರ್ಪಡಿಸಿದ್ದರು. ನಾವು ಪಾಂಡಿಚೇರಿ ಬಿಟ್ಟ ಮೇಲೆ ಅಲ್ಲಿಯ ಜನರೆಲ್ಲ ಸೇರಿ ಅದ್ದೂರಿಯ ಬೀಳ್ಕೊಡುಗೆಯ ಸಮಾರಂಭ ಮಾಡಿದರು. ಅದಕ್ಕೆ ಒಂದು ವಿಶೇಷ ಮಹತ್ವ ಇದೆ. ಪಾಂಡಿಚೇರಿಗೆ ಮೊದಲು ಹೋದಾಗ ಅಲ್ಲಿಯ ರೈತರು ತಮ್ಮ ಭೂಮಿಯನ್ನು ಇಂಜನಿಯರಿಂಗ್ ಸಂಸ್ಥೆ ಕಟ್ಟಲು ಕೊಡಲು ತಯಾರಾಗಲಿಲ್ಲ.ಇವರು ಹೇಗೋ ಆ ರೈತರ ಮನವೊಲಿಸಿ ಭೂಮಿ ನೀಡುವ ಪ್ರತಿಯೊಂದು ರೈತ ಕುಟುಂಬದ ಒಬ್ಬ ಸದಸ್ಯನಿಗೆ ಕೆಲಸ ಕೊಡಿಸಿ, ಭೂಮಿಯನ್ನು ಪಡೆದಿದ್ದರು. ಮೊದಲು ವಿರೋಧಿಸಿದ್ದ ಜನರೇ ಆರು ವರ್ಷಗಳ ನಂತರ, ಇಂಜನೀಯರಿಂಗ್ ಸಂಸ್ಥೆ ಬೆಳೆದ ಪರಿಯನ್ನು ನೋಡಿ ಸಂತೋಷಗೊಂಡರು. ಹೀಗೆ ಅದ್ದೂರಿಯ ಸನ್ಮಾನ ಮಾಡಿ ಬೀಳ್ಕೊಡುವಷ್ಟು ತಯಾರಾದರು. ನಮ್ಮನ್ನು ಕಳಿಸುವ ಇಷ್ಟವೇ ಅವರ್‍ಯಾರಿಗೂ ಇರಲಿಲ್ಲ. ಅವರೆಲ್ಲರ ಪ್ರೀತಿ ವಿಶ್ವಾಸ ಮರೆಯದಂತಹುದು.

ಇವರ ಧರ್ಮಪತ್ನಿಯಾಗಿ ಮೂವತ್ನಾಲ್ಕು ವರ್ಷಗಳ ದಾಂಪತ್ಯ ಜೀವನದಲ್ಲಿ ದೇಶದಲ್ಲಿ ಹಾಗೂ ವಿದೇಶ ಜೀವನದಲ್ಲಿ ಪಡೆದ ಅನುಭವ ಅಪಾರ. ಈ ಚಿಕ್ಕ ಲೇಖನದಲ್ಲಿ ಕೆಲವನ್ನು ಮಾತ್ರ ಹೇಳಿದ್ದೇನೆ. ನಾವು ಬಯಸಿದ ಹಾಗೆಯೇ ಜೀವನವೆಲ್ಲ ಘಟಿಸುತ್ತ ಬಂದಿದೆ. ದಾಂಪತ್ಯ ಜೀವನ ಸುಖ ಸಂತೋಷದಿಂದ ತುಂಬಿದೆ. ಮಕ್ಕಳು, ಸೊಸೆಯರು, ಅಳಿಯ ಎಲ್ಲರೂ ಬಹಳ ಪ್ರೀತಿ ವಿಶ್ವಾಸದಿಂದ ಇದ್ದೇವೆ. ಪ್ರತಿಭೆ, ಸಾಮರ್ಥ್ಯವಿರುವ ಇವರು ಇನ್ನೂ ಉನ್ನತ ಮಟ್ಟಕ್ಕೆ ಏರಲೆಂಬುದೇ ನನ್ನ ಆಸೆ.

* * *

ವಿಸ್ಮಯ ಮೂರ್ತಿ

ಪ್ರಭುಶಂಕರ

ಮಿತ್ರರಾದ ಡಾ. ರಾಮೇಗೌಡರನ್ನು ನೆನೆದಾಗಲೆಲ್ಲ ನನ್ನ ಮನಸ್ಸಿನಲ್ಲಿ ಬಹಳ ಕಾಲ ಸ್ಥಾಯಿಯಾಗಿ ನಿಲ್ಲುವ ಭಾವ-ವಿಸ್ಮಯ. ಕನ್ನಡ ನಾಡಿನ ಕೆಲವು ಪ್ರಬುದ್ಧ ವ್ಯಕ್ತಿಗಳನ್ನು-ಡಿ. ವಿ. ಜಿ., ಶಿವರಾಮ ಕಾರಂತರು, ಪಾಡಿಗಾರು ವೆಂಕಟರಮಣಾಚಾರ್ಯರು- ನೆನೆದಾಗ ನನಗೆ ಉಂಟಾಗುವ ವಿಸ್ಮಯ ಭಾವವೇ ರಾಮೇಗೌಡರನ್ನು ನೆನೆದಾಗಲೂ ನನಗೆ ಮೂಡುತ್ತದೆ. ನಾನು ಈಗಷ್ಟೆ ಸ್ಮರಿಸಿಕೊಂಡ ಮಹನೀಯರು ಬಹುಮುಖ ಪ್ರತಿಭೆಯನ್ನು ಪಡೆದವರು, ನಮ್ಮ ನಾಡಿನ ಸಾರ್ವಜನಿಕ ಜೀವನದಲ್ಲಿ ದೊಡ್ಡ, ಸಣ್ಣ ಪ್ರಮಾಣದಲ್ಲಿ ಭಾಗವಹಿಸಿದವರು, ಜನರಿಗೆ ಚಿಂತನೆಯ ಸವಿಯನ್ನು ಹಚ್ಚಿದವರು, ಒಂದಲ್ಲ ಒಂದು ರೂಪದಲ್ಲಿ ಸಂತೋಷವನ್ನು ಹಂಚಿದವರು. ಅವರಂಥವರು ಯಾವ ಕಾಲಕ್ಕೂ ವಿರಳ. ಆದರೆ ಅವರಿಲ್ಲದ ಸಮಾಜವನ್ನು ಕಲ್ಪಿಸಿಕೊಳ್ಳುವುದು ನನ್ನಂತಹವರಿಗೆ ಸಾಧ್ಯವಿಲ್ಲದ ಮಾತು.

ಸುಮಾರು ಇಪ್ಪತ್ತು, ಇಪ್ಪತ್ತೈದು ವರ್ಷಗಳ ಹಿಂದೆ ರಾಮೇಗೌಡರ ಕೀರ್ತಿ ನನ್ನ ಕಿವಿಗೆ ಬಿದ್ದದ್ದು ಅವರು ತಾವು ಆರಿಸಿಕೊಂಡಿದ್ದ ಎಂಜನಿಯರಿಂಗ್ ಕ್ಷೇತ್ರದಲ್ಲಿ ಅಸಾಧಾರಣ ವಿದ್ವಾಂಸರು, ಅಷ್ಟೇ ಅಲ್ಲ, ತುಂಬ ಪ್ರತಿಭಾಶಾಲಿಗಳು ಎಂದು. ತಾವಾಗಿ ಆರಿಸಿಕೊಂಡ ಅಥವಾ ಪರಿಸ್ಥಿತಿಯು ಅಲ್ಲಿಗೆ ತಂದು ನೂಕಿದ ಕ್ಷೇತ್ರದಲ್ಲಿ ಸೀಮಾ ಪುರುಷರು ಎನ್ನಿಸಿಕೊಂಡವರ ವಿಷಯದಲ್ಲಿ ನನಗೆ ತುಂಬ ಗೌರವ.

ಹಾಗೆ ಸೀಮಾಪುರುಷರು ಎನ್ನಿಸಿಕೊಂಡವರು ರಾಮೇಗೌಡರು. ಆಳವಾದ ಅಧ್ಯಯನ, ಸೊಗಸಾದ ಬೋಧನ ಕ್ರಮ ಅವರನ್ನು ಜಿಲ್ಲೆಯ ಕಾಲೇಜಿನಿಂದ ರಾಜ್ಯದ ಕಾಲೇಜಿಗೆ, ಅಲ್ಲಿಂದ ಕೇಂದ್ರ ಸರ್ಕಾರದ ವಿದ್ಯಾಕೇಂದ್ರಕ್ಕೆ ಕರೆದೊಯ್ದಾಗ, ಅಧ್ಯಾಪಕನಾಗಿ, ಕನ್ನಡಿಗನಾಗಿ ಹೆಮ್ಮೆಪಟ್ಟವನು ನಾನು. ಅಲ್ಲಿಂದ ಕರ್ನಾಟಕ ವಿಶ್ವವಿದ್ಯಾನಿಲಯವು ಅವರನ್ನು ತನ್ನ ಕುಲಪತಿಯಾಗಿ ಆಹ್ವಾನಿಸಿದಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಇಷ್ಟು ದೊಡ್ಡ

ಸಿದ್ಧಿಯ ಕೀರ್ತಿಯ ಶಿಖರದಲ್ಲಿರುವ ವ್ಯಕ್ತಿಯೊಬ್ಬರ ಸೇವೆ ನನಗೆ ತುಂಬ ಪ್ರಿಯವಾಗಿರುವ ವಿಶ್ವವಿದ್ಯಾನಿಲಯ ಒಂದಕ್ಕೆ ದಕ್ಕಿತಲ್ಲ ಎಂಬುದೇ ನನ್ನ ಸಂತೋಷಕ್ಕೆ ಕಾರಣ.

ಇಷ್ಟೆಲ್ಲ ಆದರೂ ರಾಮೇಗೌಡರ ಪರಿಚಯ ಲಾಭ ನನಗೆ ದೊರಕೇ ಇರಲಿಲ್ಲ! ಅವರ ಪರಿಚಯಕ್ಕಾಗಿ ನಾನು ಹಾತೊರೆದದ್ದು, ಅದನ್ನು ಸಂಪಾದಿಸಿಕೊಂಡದ್ದು ನನ್ನ ಅವರ ಆರಾಧ್ಯಮೂರ್ತಿ ಒಂದೇ ಎಂಬುದನ್ನು ನಾನು ಅರಿತಾಗ ಅದು ಕುವೆಂಪು. ಕುವೆಂಪುರವರ ವ್ಯಕ್ತಿತ್ವದ ಮಹಿಮೆಯನ್ನೂ, ಅವರ ಸಾಹಿತ್ಯದ ಅನನ್ಯ ಮಹತ್ವವನ್ನೂ ಸಂಪೂರ್ಣವಾಗಿ ಅರಿತು ಅವರನ್ನು ಆರಾಧಿಸುವವರು ತೀರ ವಿರಳ ಎಂಬುದು ನನ್ನ ಅನುಭವಕ್ಕೆ ಬಂದಿದೆ. ಆ ವಿರಳರ ಪಂಕ್ತಿಯಲ್ಲಿರುವವರು ರಾಮೇಗೌಡರು.

ಅದು ನನಗೆ ತಿಳಿದದ್ದು ಹೀಗೆ: ಗೌಡರು ಇಂಗ್ಲೀಷ್ ಕನ್ನಡಗಳೆರಡರಲ್ಲೂ ತುಂಬ ಚೆನ್ನಾಗಿ ಮಾತಾಡುತ್ತಾರೆ, ಅವರು ಒಳ್ಳೆಯ ವಾಗ್ಮಿ ಎಂದೆಲ್ಲ ಕೇಳಿದ್ದೆ. ಶ್ರೀ ಕುವೆಂಪು ಅವರು ತೀರಿಕೊಂಡ ಮೊದಲಲ್ಲಿ, ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಕುವೆಂಪು ಅವರನ್ನು ಕುರಿತಂತೆ ಉಪನ್ಯಾಸ ಮಾಡಲು ನನ್ನನ್ನು ಕರೆಸಿದ್ದರು. ಅಂದು ಕುಲಪತಿಗಳಾದ ರಾಮೇಗೌಡರು ಅಧ್ಯಕ್ಷತೆ ವಹಿಸಿದ್ದರು. ಅದಾದ ಕೆಲವು ವಾರಗಳಲ್ಲೋ ಏನೋ ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕುವೆಂಪು ಅವರನ್ನು ಕುರಿತ ಒಂದು ವಿಚಾರ ಗೋಷ್ಠಿಯನ್ನು ಉದ್ಘಾಟಿಸಿ ಉಪನ್ಯಾಸ ನೀಡಿದರು. ಎರಡೂ ಸ್ಮರಣೀಯವಾದ ಉಪನ್ಯಾಸಗಳು. ಕುವೆಂಪು ಸಾಹಿತ್ಯದ ವಿವಿಧ ಮುಖಗಳ ಆತ್ಮೀಯವಾದ ಪರಿಚಯ, ಅವರ ವೈಚಾರಿಕತೆಯ ಪ್ರಖರತೆಯ ಪ್ರತಿಫಲನ. ಇವು ರಾಮೇಗೌಡರ, ಅಸೂಯೆ ಹುಟ್ಟಿಸುವ ವಾಗ್ ವೈಖರಿಯ ಆ ಎರಡೂ ದಿನಗಳ ನನ್ನ ಅನುಭವ.

ರಾಮೇಗೌಡರದು ಪಾರದರ್ಶಕ ವ್ಯಕ್ತಿತ್ವ. ಅವರು ಹುಟ್ಟಿದ್ದು, ಬೆಳೆದದ್ದು ಸಣ್ಣ ಹಳ್ಳಿಯಲ್ಲಷ್ಟೆ. ಗ್ರಾಮೀಣತೆ, ತಂದೆ ತಾಯಿಗಳು ನೀಡಿದ ಸಂಸ್ಕಾರ ಇವುಗಳಿಂದ ಮೂಡಿದ್ದು ಅವರ ವ್ಯಕ್ತಿತ್ವದ ಪಾರದರ್ಶಕ ಗುಣ. ನಡೆ, ನುಡಿ, ನೇರ. ಆ ಕಾರಣಕ್ಕೂ ಅವರು ನನಗೆ ಪ್ರಿಯರಾದರು.

ಗೌಡರು ದಕ್ಷ ಆಡಳಿತಗಾರರು ಎಂಬುದನ್ನು, ಅವರನ್ನು ಅವರು ವಹಿಸಿಕೊಂಡಿದ್ದ ವಿವಿಧ ಆಡಳಿತಗಳಲ್ಲಿ ಹತ್ತಿರದಿಂದ ಬಲ್ಲವರು ವರದಿಮಾಡಿದ್ದಾರೆ. ಆಡಳಿತದಲ್ಲಿ ದಕ್ಷತೆಗೆ ಮಾನವೀಯತೆ, ಮತ್ತೆ ಕೆಂಪುಪಟ್ಟಿಯನ್ನು ಕತ್ತರಿಸಿ ಎಸೆಯುವ ಸಮಯ ಪ್ರಜ್ಞೆ- ಇವು ಮೆರುಗನ್ನು ನೀಡುತ್ತವೆ. ರಾಮೇಗೌಡರಲ್ಲಿ ಇವು ಯಥೇಚ್ಛವಾಗಿ ಇದ್ದುವು ಎಂದು ಕೇಳಿದ್ದೆ. ನನ್ನ ಮಿತ್ರರೊಬ್ಬರ ಅನುಭವ ಅದಕ್ಕೆ ಸಾಕ್ಷ್ಯ ನೀಡಿತು.

ಆ ಮಿತ್ರರು ಕನ್ನಡದ ಪ್ರಸಿದ್ಧ ಕವಿಗಳಾದ ಡಾ. ಜಿ. ಎಸ್. ಶಿವರುದ್ರಪ್ಪನವರು. ಅವರ ಮಗ ವೈದ್ಯರು. ಅವರು ತಮ್ಮ ಸತಿಯೊಡನೆ ಇಂಗ್ಲೆಂಡಿನಲ್ಲಿ ಹೆಚ್ಚಿನ ವ್ಯಾಸಂಗ ನಡೆಸುವುದಕ್ಕೆಂದು ಹೋಗಿದ್ದಾರೆ, ಇತ್ತೀಚೆಗೆ. ಅವರು ವ್ಯಾಸಂಗಕ್ಕೆ ಆರಿಸಿಕೊಂಡಿದ್ದ ಆಸ್ಪತ್ರೆಯಲ್ಲಿ ವರದಿ ಮಾಡಿಕೊಳ್ಳುವ ದಿನ ಒಂದು ಸಮಸ್ಯೆ ಧಿಡೀರನೆ ಉದ್ಭವವಾಯಿತು. ಅವರ ಪಾಸ್‌ಪೋರ್ಟಿನಲ್ಲಿ ಜಿ. ಎಸ್. ಪ್ರಸಾದ್ ಎಂಬುದರ ವಿಸ್ತೃತ ರೂಪ ಬರೆದಿತ್ತು.

ಆದರೆ ವಿಶ್ವವಿದ್ಯಾನಿಲಯವು ನೀಡಿದ್ದ ಸರ್ಟಿಫಿಕೇಟಿನಲ್ಲಿ ಜಿ. ಎಸ್. ಎಂಬ ಸಂಕ್ಷಿಪ್ತ ರೂಪವಷ್ಟೇ ಇತ್ತು. ಇಂಗ್ಲೆಂಡಿನ ಆಸ್ಪತ್ರೆಯವರು, ತೀರ ಅಸಮಂಜಸವಾಗಿ, ಪಾಸ್‌ಪೋರ್ಟಿನಲ್ಲಿ ನಿರ್ದೇಶಿಸಿರುವ ವ್ಯಕ್ತಿಯೂ ವಿಶ್ವವಿದ್ಯಾನಿಲಯದ ಸರ್ಟಿಫಿಕೇಟಿನಲ್ಲಿ ನಿರ್ದೇಶಿತವಾಗಿರುವ ವ್ಯಕ್ತಿಯೂ ನೀವೇ ಎಂಬುದನ್ನು ಸಿದ್ಧಾಂತ ಮಾಡಬೇಕಾದ ಹೊಣೆ ನಿಮ್ಮದೇ ಎಂದು ಪ್ರಸಾದರಿಗೆ ಹೇಳಿದರು. ಹಾಗೆ ಮಾಡಿ ತೋರಿಸಲು ಅವರಿಗೆ ಆಸ್ಪತ್ರೆಯವರು ಕೊಟ್ಟ ಅವಧಿ ಎರಡೇ ದಿನಗಳು. ಡಾ. ಪ್ರಸಾದ್ ಫ್ಯಾಕ್ಸ್ ಮೂಲಕ ತಮ್ಮ ತಂದೆಯವರಿಗೆ ಕಷ್ಟಗಳನ್ನು ನಿವೇದಿಸಿದರು. ಡಾ. ಶಿವರುದ್ರಪ್ಪನವರು ಕರ್ನಾಟಕ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೆ ವಿಷಯವನ್ನು ವಿವರಿಸಿ ತಕ್ಷಣ ಸಹಾಯ ಮಾಡುವಂತೆ ಕೋರಿದರು. ಜಿ. ಎಸ್. ಪ್ರಸಾದ್ ಎಂಬುವನು ತಮ್ಮ ಮಗನೆಂದೂ, ಅವನ ಹೆಸರಿನ ಹಿಂದೆ ಇರುವ ಜಿ. ಎಸ್. ಎಂಬುದರ ವಿಸ್ತರಣೆ ಇಂಥದೆಂದೂ ತಿಳಿಸಿದರು. ಆದರೆ ಮತ್ತು ಆ ಅರ್ಥಕ್ಕೆ ಒಂದು ಪತ್ರ ನೀಡಬೇಕೆಂದೂ ಕೋರಿದರು. ಆದರೆ ಆ ವಿಶ್ವವಿದ್ಯಾನಿಲಯದ ಪರೀಕ್ಷಾ ವಿಭಾಗದ ಅಧಿಕಾರಿಗಳು ತಮ್ಮ ಸರ್ಟಿಫಿಕೇಟಿನಲ್ಲಿರುವುದಕ್ಕೆ ಮಾತ್ರ ತಾವು ಜವಾಬ್ದಾರರೆಂದು ಪಾಸ್‌ಪೋರ್ಟ್‌ನಲ್ಲಿರುವ ಹೆಸರಿನ ವ್ಯಕ್ತಿಯೂ ತಮ್ಮಿಂದ ಸರ್ಟಿಫಿಕೇಟ್ ಪಡೆದ ವ್ಯಕ್ತಿಯೂ ಒಬ್ಬರೇ ಎಂದು ತಾವು ಲಿಖಿತ ರೂಪದಲ್ಲಿ ಕೊಡಲು ಸಾಧ್ಯವಿಲ್ಲವೆಂದೂ ಹೇಳಿಬಿಟ್ಟರು!

ಡಾ. ಶಿವರುದ್ರಪ್ಪನವರು, ಅವರ ಮಗನಂತೆಯೇ ಹತಾಶ ಸ್ಥಿತಿಯಲ್ಲಿ ಮುಂದೇನು ಮಾಡಬೇಕೆಂದು ತಿಳಿಯದೆ ಕೈಚೆಲ್ಲಿ ಕುಳಿತರು. ಅವರಿಗೆ ಆ ಕ್ಷಣಕ್ಕೆ ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಪತಿಗಳು ಡಾ. ರಾಮೇಗೌಡರು ಎಂದು ಹೊಳೆಯಿತು. ತತ್‌ಕ್ಷಣ ಅವರು ರಾಮೇಗೌಡರಿಗೆ ಫೋನ್ ಮಾಡಿದರು. ದೇಶ ವಿದೇಶಗಳ ಹತ್ತಾರು ವಿಶ್ವವಿದ್ಯಾನಿಲಯಗಳಲ್ಲೂ, ಇತರ ಸಂಸ್ಥೆಗಳಲ್ಲೂ ಸೆಮಿನಾರುಗಳು, ವಿಶ್ವವಿದ್ಯಾನಿಲಯಗಳ ಕುಲಪತಿಗಳ ಆಯ್ಕೆ, ಪ್ರಾಧ್ಯಾಪಕರ ಆಯ್ಕೆ ಮುಂತಾದ ಕಾರಣಗಳಿಂದ ಹೆಚ್ಚಾಗಿ ಸಂಚಾರದಲ್ಲಿರುತ್ತಿರುವುದು ತೀರ ಅವಶ್ಯಕವಾಗಿದ್ದರೂ ಅಂದು ಅದೃಷ್ಟವಶಾತ್ ರಾಮೇಗೌಡರು ಊರಿನಲ್ಲಿದ್ದರು. ತಕ್ಷಣ ಅವರು ಪರೀಕ್ಷಾ ವಿಭಾಗದ ಅಧಿಕಾರಿಗಳನ್ನು ಕರೆದು ಈ ಕ್ಷಣ ಅಂಥ ಒಂದು ಸರ್ಟಿಫಿಕೇಟ್ ಕೊಡಲು ಹೇಳಿದರು. ಅಧಿಕಾರಿಗಳು "ಅಫಿಡೇವಿಟ್ ಇತ್ಯಾದಿ . . . . ." ಎಂದು ಕೆಂಪು ಪಟ್ಟಿಯ ಸುರುಳಿಯನ್ನೇ ಉರುಳಿಸುತ್ತಾ ಹೋದರು. ಡಾ. ರಾಮೇಗೌಡರು ಖಚಿತವಾದ, ಅಧಿಕಾರವಾಣಿಯಲ್ಲಿ ಹೇಳಿದರು: "ನೋಡಿ, ಕೇಳುತ್ತಿರುವವರು ಕನ್ನಡದ ಖ್ಯಾತ ಸಾಹಿತಿ ಡಾ. ಜಿ. ಎಸ್. ಶಿವರುದ್ರಪ್ಪನವರು. ಇದು ಅವರ ಮಗನ ಭವಿಷ್ಯದ ಪ್ರಶ್ನೆ. ಅವನು ಓದಿರುವುದು ನಮ್ಮ ವಿಶ್ವವಿದ್ಯಾನಿಲಯದಲ್ಲಿ. ಈ ಕಾರಣಕ್ಕೆ ಅವನಿಗೆ ತೊಂದರೆಯಾಗಬಾರದು. ಶಿವರುದ್ರಪ್ಪನವರ ಮಾತೇ ಅಫಿಡೇವಿಟ್. ತನ್ನಿ ಕಾಗದಕ್ಕೆ ನಾನೇ ಸಹಿ ಹಾಕುತ್ತೇನೆ!" ಮರುದಿನವೇ ಇಂಗ್ಲೆಂಡಿನಲ್ಲಿ ಪ್ರಸಾದರಿಗೆ ಫ್ಯಾಕ್ಸ್ ತಲುಪಿತು. ಪ್ರವೇಶ ದೊರೆಯಿತು.

ಒಂದು ಸುಸಂಸ್ಕೃತ ಮನಸ್ಸು, ಇತರರ ಕಷ್ಟಕ್ಕೆ ಮಿಡಿಯಬಲ್ಲ ಮನಸ್ಸು, ಕಾನೂನಿನ ಚೌಕಟ್ಟಿನೊಳಗೇ ಇತರರಿಗೆ ಸಹಾಯ ಮಾಡುವುದು ಸಾಧ್ಯ ಎಂಬುದನ್ನು ಅರಿತು, ಕೂಡಲೇ

ಕಾರ್ಯೋನ್ಮುಖವಾಗುವ ವ್ಯಕ್ತಿಗಳು ಅಪರೂಪ. ಈ ಘಟನೆಯನ್ನು, ತಮ್ಮ ಸಹಜವಾದ, ವಿಶಿಷ್ಟವಾದ ಶೈಲಿಯಲ್ಲಿ ನಿರೂಪಿಸಿದ ಕವಿ ಶಿವರುದ್ರಪ್ಪನವರು ಕೃತಜ್ಞತಾ ಭಾರದಿಂದ, ಸಗದ್ಗದರಾದ ರಾಮೇಗೌಡರ ನೆರವನ್ನು ನೆನೆದರು. " ರಾಮೇಗೌಡರು ನನ್ನ ಮಿತ್ರರು" ಎಂದು ಹೆಮ್ಮೆಯಿಂದ ಸಂತೋಷದಿಂದ ಹೇಳಿಕೊಂಡೆ.

ತಮ್ಮ ಮಿತ್ರರಿಗೆ ಇಂಥ ಹೆಮ್ಮೆ ಸಂತೋಷಗಳನ್ನು ತರುವ ಇನ್ನೂ ಎಷ್ಟೋ ಸಹಾಯಗಳನ್ನು ರಾಮೇಗೌಡರು ಮಾಡಿರಬಹುದು. ದುಃಖಮಯವಾದ ಈ ಬದುಕನ್ನು ಇಂಥ ನೆರವುಗಳ ಸರಮಾಲೆಯಿಂದ ಸಂತೋಷಮಯವನ್ನಾಗಿ ಮಾಡುವ ನಮ್ಮ ಈ ಮಿತ್ರರು ಇನ್ನೂ ದೊಡ್ಡ ಹುದ್ದೆಗಳನ್ನು ಅಲಂಕರಿಸಲಿ, ಅವರ ವಿದ್ವತ್ತು, ಪ್ರತಿಭೆ, ಸಾಹಿತ್ಯಾಭ್ಯಾಸ, ದಕ್ಷತೆಗಳ ವಿದ್ಯುತ್‌ಸ್ಪರ್ಶ ಇನ್ನೂ ಹೆಚ್ಚಿನ ವಲಯಗಳಿಗೆ ದೊರೆಯುವಂತಾಗಲಿ ಎಂಬುದು ನಮ್ಮಂತಹವರ ಹಾರೈಕೆ.

* * *

ಪ್ರಸನ್ನ ಮುಖದ ಕರ್ತೃತ್ವಶಾಲಿ

ಜಿ. ವೆಂಕಟಸುಬ್ಬಯ್ಯ

ಕೆಲವರು ಚರಿತ್ರೆಯನ್ನು ಓದುತ್ತಾರೆ. ಮತ್ತೆ ಕೆಲವರು ಚರಿತ್ರೆಯನ್ನು ರಚಿಸುತ್ತಾರೆ. ಇನ್ನೂ ಕೆಲವರು ಚರಿತ್ರೆಯನ್ನು ಸೃಷ್ಟಿಸುತ್ತಾರೆ. ಈ ಮೂರನೆಯ ವರ್ಗಕ್ಕೆ ಸೇರಿದವರು ಡಾ. ಎಸ್. ರಾಮೇಗೌಡರು.

ನನ್ನ ತರುಣ ಮಿತ್ರರಾದ ಪ್ರೊ. ನಂಜುಂಡಸ್ವಾಮಿಯವರು ಅವರ ಅಧ್ಯಾಪಕ ಜೀವನದ ಕಥೆಯನ್ನು ಬರೆದಿದ್ದಾರೆ. ಅವರು ಒಳ್ಳೆಯ ಉಪಾಧ್ಯಾಯರಾಗಿ ಹೆಸರು ಮಾಡಿದವರು. ಆ ಕಥೆಯಲ್ಲಿ ಅವರು ಕೊಳ್ಳೇಗಾಲದಲ್ಲಿ ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿದ್ದಾಗ ನಡೆದ ಅನೇಕ ವಿಷಯಗಳ ನಿರೂಪಣೆಯ ಮಧ್ಯದಲ್ಲಿ ಒಬ್ಬ ವಿದ್ಯಾರ್ಥಿ ಅತ್ಯಪೂರ್ವವಾದ ಜ್ಞಾನದಾಹವನ್ನು ಪಡೆದಿದ್ದುದನ್ನು ಗುರುತಿಸಿದ ವಿಷಯವನ್ನು ಹೇಳುತ್ತಾರೆ. ನೂರಾರು ವಿದ್ಯಾರ್ಥಿಗಳ ಸಮುದಾಯದಲ್ಲಿ ಒಳ್ಳೆ ಅಧ್ಯಾಪಕರ ಗಮನವನ್ನು ಜ್ಞಾನದಾಹ ಗುಣದಿಂದ ಆಕರ್ಷಿಸಿದ ಏಕೈಕ ವಿದ್ಯಾರ್ಥಿ ಎಂಬುದನ್ನು ಅವರು ವಿವರಿಸಿದ್ದಾರೆ. ಅಂಥ ಜ್ಞಾನದ ದಾಹದಿಂದಲೇ ಇಂದು ಡಾ. ಎಸ್.ರಾಮೇಗೌಡರು ಕರ್ನಾಟಕ ವಿಶ್ವವಿದ್ಯಾಲಯದ ನೇತಾರರಾಗಿ ಒಟ್ಟು ರಾಷ್ಟ್ರದ ಗೌರವವನ್ನು ಪಡೆದು ಪ್ರಸಿದ್ಧರಾಗಿದ್ದಾರೆ.

ಪ್ರಸಿದ್ಧಿ ಬೇರೆ ಬೇರೆ ರೀತಿಯಲ್ಲಿ ಬರಬಹುದು. ಆದರೆ ಕಾರ್ಯದ ಲೌಕಿಕಪ್ರಯೋಜನದ ಪರಿಣಾಮವಾಗಿದ್ದರೆ ಅದು ದೇಶಕ್ಕೆ ಪರಮ ಭಾಗ್ಯವಾಗುತ್ತಾರೆ. ಡಾ.ರಾಮೇಗೌಡರು ವಿದ್ಯಾರ್ಥಿ ದೆಸೆಯಲ್ಲಿಯೂ, ಅಧ್ಯಾಪಕರ ಉದ್ಯೋಗದಲ್ಲಿಯೂ, ಕಾಲೇಜಿನ ಪ್ರಿನ್ಸಿಪಾಲರಾಗಿಯೂ, ನೂತನ ಸಂಸ್ಥೆಗಳನ್ನು ಸ್ಥಾಪಿಸಿ ಅವಕ್ಕೆ ಸ್ಥಾನಮಾನಗಳನ್ನು ದಕ್ಕಿಸುವುದರಲ್ಲಿಯೂ ಎತ್ತಿದ ಕೈಯಾಗಿ ನಮಗೆ ಗೌರವಾರ್ಹರಾಗಿದ್ದಾರೆ. ಅವರ ಸಹೋದ್ಯೋಗಿ ಕೆಲವರು ನನ್ನ ತರುಣ ಮಿತ್ರರಿದ್ದಾರೆ. ಅವರೆಲ್ಲರೂ ಏಕಕಂಠದಿಂದ ಗೌಡರ ಸ್ನೇಹಾಸಕ್ತಿಯನ್ನೂ ಕಾರ್ಯಶ್ರದ್ಧೆಯನ್ನೂ ಹೊಗಳುತ್ತಾರೆ.

ಪಾಂಡಿಚೇರಿಯಲ್ಲಿ ತಾಂತ್ರಿಕ ವಿದ್ಯಾಲಯದ ಸ್ಥಾಪನೆ ಮತ್ತು ಅದರ ಅಭಿವೃದ್ಧಿಗೆ ದುಡಿದ ಡಾ. ರಾಮೇಗೌಡರ ಸತ್ವವನ್ನು ಅಲ್ಲಿಗೆ ಹೋದವರೆಲ್ಲ ಕಣ್ಣಾರೆ ಕಾಣಬಹುದು. ಅದೇ ಒಂದು ಅಧಿಕಾರಾವಧಿಯ ಪೂರ್ಣ ಪ್ರಮಾಣದ ಕಾರ್ಯ.

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪಕವಾದ ಬೆಳವಣಿಗೆಗೆ ಬೇರೆ ಒಂದು ಅಧ್ಯಾಯವನ್ನೇ ಮೀಸಲಾಗಿಡಬೇಕು. ಶಿಕ್ಷಣದ ವಿವಿಧ ಕ್ಷೇತ್ರಗಳನ್ನು ವಿಸ್ತಾರಗೊಳಿಸುವುದು, ಬೇಕಾದ ಕಟ್ಟಡಗಳ ನಿರ್ಮಾಣ, ತಜ್ಞರ ಆಯ್ಕೆ, ಪುಸ್ತಕ ಭಂಡಾರದ ಬೆಳವಣಿಗೆ, ಶಿಕ್ಷಕವರ್ಗದ ಒಳಿತಿನ ಸಾಧನೆ ಮುಂತಾಗಿ ಶಿಕ್ಷಣದ ಎಲ್ಲ ಮುಖದ ಹೊಂದಾಣಿಕೆಯ ಅಭಿವೃದ್ಧಿ ಇವು ಕೆಲವು ನನ್ನ ಗಮನಕ್ಕೆ ಬಂದಿವೆ.

ಧಾರವಾಡದ ನನ್ನ ಮಿತ್ರರು ಹೇಳುವುದರ ಜೊತೆಗೆ ನಾನೇ ಈ ಸಾಧನೆಗಳನ್ನೆಲ್ಲ ಎದುರಿಗೆ ನೋಡಿದ್ದೇನೆ. ಇವೆಲ್ಲಕ್ಕಿಂತ ಹೆಚ್ಚಾಗಿ ನಾನು ಮೆಚ್ಚುವುದು ರಾಮೇಗೌಡರ ವ್ಯಕ್ತಿತ್ವವನ್ನು.

ಅದನ್ನು ನಾನು ಹೀಗೆ ವಿಶ್ಲೇಷಿಸಿದ್ದೇನೆ. ವಿನಯ, ವ್ಯಕ್ತಿತ್ವ, ಕರ್ತೃತ್ವಗಳ ಸಮಾನ ಪ್ರಮಾಣದ ರಮ್ಯ ಐಕ್ಯ- ಅದು ದೂರದೃಷ್ಟಿಯ ಸಂಕೇತ. ಇಂಥ ವ್ಯಕ್ತಿತ್ವಕ್ಕೆ ದೇಶದ ಮನ್ನಣೆ ಸಲ್ಲಬೇಕಾದುದು ಅಗತ್ಯ. ನಾನು ಆ ವ್ಯಕ್ತಿತ್ವವನ್ನು ತುಂಬು ಮನಸ್ಸಿನಿಂದ ಅಭಿನಂದಿಸುತ್ತೇನೆ.

❋ ❋ ❋

ಡಾ. ಎಸ್. ರಾಮೇಗೌಡ ಮತ್ತು ಸ್ನೇಹಸಂಪರ್ಕ

ವಾಮನ ಬೇಂದ್ರೆ

"Friendship is the marriage of the soul; and this marriage is subject to divorce. It is tacit contract between two sensitive and virtuous persons. I say 'sensitive', because a monk, a recluse can not be wicked and live without knowing what friendship is. I say "virtuous" because the wicked have only accomplices; voluptuaries have companions in debauch, self seekers have partners, politicians get partisans; the generality of idle men have attachments; princes have courtiers. Virtuous men alone have friends".Voltaire-philosophical Dictionary.

ಈ ಅವತರಣಿಕೆ ಡಾ.ಎಸ್.ರಾಮೇಗೌಡ ಅವರ ವ್ಯಕ್ತಿತ್ವದ ಜೀವಾಳವನ್ನು ಸಾರುತ್ತಿದೆ. ಡಾ.ಎಸ್.ರಾಮೇಗೌಡ ಮತ್ತು ಸ್ನೇಹ ಎರಡಲ್ಲ , ಒಂದೇ. ಕರ್ನಾಟಕ ವಿಶ್ವವಿದ್ಯಾಲಯದ ಸಂಪರ್ಕದಲ್ಲಿ ಡಾ.ಎಸ್.ರಾಮೇಗೌಡರ ಸಂಪರ್ಕದಲ್ಲಿ ಬಂದವರಿಗೆಲ್ಲ ಅನುಭವಕ್ಕೆ ಬಂದಂಥ ವಿಷಯ ಇದು. ಯಾರಿಗಾದರೂ ಇದಕ್ಕಿಂತ ಬೇರೆ ಅನುಭವ ಬಂದಿದ್ದರೆ, ಅದು ನಿಯಮಕ್ಕೆ ಇರುವ ಅಪವಾದ ಮಾತು.

ಡಾ.ಎಸ್.ರಾಮೇಗೌಡ ಉತ್ತರ ಕರ್ನಾಟಕದವರಲ್ಲ. ಮೈಸೂರು ಜಿಲ್ಲೆಯ ಹೊಂಡರಬಾಳೀನಲ್ಲಿ ಜನಿಸಿದವರು. ಕೊಳ್ಳೇಗಾಲ, ಮೈಸೂರು, ಬೆಂಗಳೂರುಗಳಲ್ಲಿ ಬೆಳೆದವರು, ಯಂತ್ರಶಾಸ್ತ್ರ ವಿಜ್ಞಾನದಲ್ಲಿ ಪಿಎಚ್.ಡಿ. ಪದವಿ ಪಡೆದವರು; ಕೋಲಾರ, ಮೈಸೂರು, ಮಂಡ್ಯ, ವೆಸ್ಟ್ ಇಂಡೀಜ್, ಬೆಂಗಳೂರು, ಪಾಂಡಿಚೇರಿಗಳಲ್ಲಿ ಅತ್ಯುತ್ತಮ ಸೇವೆಸಲ್ಲಿಸಿ ೧೯೮೦ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕುಲಪತಿಗಳಾಗಿ ನಿಯುಕ್ತರಾಗಿ ಬಂದವರು. ಇವರ ಸಂಸ್ಥೆ ಕಟ್ಟುವ ಕೌಶಲ್ಯ, ಸಂಶೋಧಕ ವಿದ್ವತ್ತು, ತಾಂತ್ರಿಕ ಉಪನ್ಯಾಸ ಪ್ರಾವಿಣ್ಯ, ಮಾರ್ಗದರ್ಶಕ ಶಕ್ತಿ, ಅನೇಕ ಸಮಿತಿಗಳ ಅಧ್ಯಕ್ಷ ಹಾಗೂ ಸದಸ್ಯತ್ವ, ಆಕಾಶವಾಣಿ ಮತ್ತು ದೂರದರ್ಶನದ ವೈಚಾರಿಕ ಚರ್ಚೆ, ಪರದೇಶ ಪ್ರವಾಸ, ಚರ್ಚಾಸ್ಪರ್ಧೆ

ಮತ್ತು ನಾಟಕ ಅಭಿನಯ ಮತ್ತು ಇತರ ಚಟುವಟಿಕೆಗಳನ್ನು ಕುರಿತು ನಾವು ಏನನ್ನೂ ಹೇಳಲಾರೆ. ಆ ಆ ಸಂಪರ್ಕದ ವ್ಯಕ್ತಿಗಳಾಡುವ ಮಾತಿನಲ್ಲಿ ಒಂದೇ ಧ್ವನಿ ನಾವು ಕೇಳಲು ಸಾಧ್ಯ. ಅದೆಂದರೆ ಡಾ.ಎಸ್.ರಾಮೇಗೌಡ ಇವರು ಗುಣಿಗಳು, ಗುಣಪೂಜಕರು, ಆದರ್ಶ ಸ್ನೇಹಿತರು. ಇವರು ಏಕಾಂತವಾಸಿಗಳಲ್ಲ, ಪಾಪ ಭಾಗಿಗಳಲ್ಲ, ದುರ್ಮಾರ್ಗ ಪ್ರೇರಕರಲ್ಲ, ಪಕ್ಷ- ಪಕ್ಷಾಂತರ ಪ್ರಿಯರಲ್ಲ.

ಡಾ.ಎಸ್.ರಾಮೇಗೌಡ ಇವರು ಕಳೆದ ಐದಾರು ವರ್ಷಗಳಲ್ಲಿ ಮಾಡಿದ ವಿವಿಧ ಉಪನ್ಯಾಸಗಳ 'ಮೆಲುಕು' ಸಂಪುಟಗಳನ್ನು ಓದಿದರೆ ಸಾಕು, ಅವರ ಬಹುಮುಖ ವ್ಯಕ್ತಿತ್ವದ ಪರಿಚಯವಾಗುತ್ತದೆ. ಉಪನ್ಯಾಸದ ಸಂದರ್ಭಕ್ಕೆ ತಕ್ಕಂತೆ, ಅದರ ಮೌಲ್ಯ ಜನಕ್ಕೆ ತಲುಪುವಂತೆ ಜೀವಾಳವನ್ನು ಅರಳಿಸಿ ತೋರಿಸುವ ಕೌಶಲ್ಯ ಡಾ.ಎಸ್.ರಾಮೇಗೌಡರ ಸ್ವಭಾವ. ವಿಷಯಗಳನ್ನು ತಿಳಿದುಕೊಳ್ಳುವ ಜಿಜ್ಞಾಸೆ ಜೀವಂತವಾಗಿದೆ.

ಇವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕುಲಪತಿಯಾಗಿ ಅಧಿಕಾರ ಸ್ವೀಕರಿಸಿದ ದಿವಸ, ಆಡಿದ ಮಾತುಗಳಲ್ಲಿ ರಾಷ್ಟ್ರಕವಿ ಕುವೆಂಪು ಮತ್ತು ವರಕವಿ ದ.ರಾ.ಬೇಂದ್ರೆಯವರ ಬಗ್ಗೆ ಇರುವ ಅಭಿಮಾನವನ್ನು ವ್ಯಕ್ತಪಡಿಸಿದರು. ಇವರ ಹಾಗೂ ನನ್ನ ಮೊದಲ ಭೇಟ್ಟಿ ೧೯೯೧ ಆಗಸ್ಟ್ ೨. ಡಾ. ಡಿ.ಸಿ. ಪಾವಟೆಯವರ ಜನ್ಮದಿನದ ಸ್ಮರಣೆಯಾಗಿ ಆಚರಿಸುತ್ತ ಬಂದ ಶಿಕ್ಷಣತಜ್ಞರ ದಿನ. ಅಂಬಿಕಾತನಯದತ್ತ ವೇದಿಕೆಯ ಕೆಲವು ಪ್ರಕಟಣೆಗಳನ್ನು ಕೊಟ್ಟು ಪರಿಚಯ ಮಾಡಿಕೊಂಡೆ. ಮರುದಿವಸ ಸಾಯಂಕಾಲ ಪತ್ನಿಸಮೇತರಾಗಿ ವೇದಿಕೆಗೆ ಭೆಟ್ಟಿಕೊಟ್ಟರು. ೧೯೮೧ ರಿಂದ ೧೯೯೧ರ ವರೆಗೆ ನಾವು ಮಾಡಿದ ಕಾರ್ಯವನ್ನು ಅವಲೋಕಿಸಿ "ಬೇಂದ್ರೆ ಮೊದಲಿನಿಂದಲೂ ಶೋಷಣೆಗೆ ಒಳಗಾದ, ದುರ್ಲಕ್ಷ್ಯಕ್ಕೆ ಗುರಿಯಾದ ವ್ಯಕ್ತಿ. ಅವನತ್ತ ಎಲ್ಲರ ಲಕ್ಷ್ಯ ಹೋಗುವಂತೆ ವೇದಿಕೆ ಚಟುವಟಿಕೆ ಹಬ್ಬಿಸಬೇಕು" ಎಂಬ ಪ್ರಥಮ ಮಾರ್ಗದರ್ಶನ ಮಾಡಿದರು.

೨೬-೧೦-೧೯೯೧ ಬೇಂದ್ರೆಯವರ ಹತ್ತನೆಯ ಪುಣ್ಯತಿಥಿ. ಆ ದಿವಸ ವೇದಿಕೆ "ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಕಟ್ಟಡದ" ಬಗ್ಗೆ ಮಾಡಿದ ಪ್ರಯತ್ನ, ಕಟ್ಟಡದ ನಕ್ಷೆ ತೋರಿಸಲು ನನಗೆ ಕರೆ ಕೊಟ್ಟರು. ನಕ್ಷೆಯಲ್ಲಿ ಯಾವ ರೀತಿಯ ಬದಲಾವಣೆ ಬೇಕು. ಇದಕ್ಕೆ ಸರ್ಕಾರದ ಒಪ್ಪಿಗೆ ಪಡೆಯಲು ಮಾಡಬೇಕಾದ ಪ್ರಯತ್ನಗಳನ್ನು ಸೂಚಿಸಿದರು. ಡಾ.ಎಸ್.ರಾಮೇಗೌಡರೊಂದಿಗೆ ನಾನು ದೂರವಾಣಿ ಸಂಪರ್ಕ ಎಂದೇ ಮಾಡಿದರೂ, ಅದು ಬೆಳಗು ೬-೧೫, ಅವರು ವಾಯುಸಂಚಾರಕ್ಕೆ ಹೊರಡುವ ಮೊದಲು. ಅನಂತರ ಅವರು ಕೊಡುವ ಸಮಯಕ್ಕೆ ವಿವರವಾದ ಚರ್ಚೆ.

೧೯೯೧ರ ಬೇಂದ್ರೆ ಜನ್ಮದಿನವನ್ನು ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರ ಜನ್ಮಶತಮಾನೋತ್ಸವದ ಸಮಾರಂಭವಾಗಿ ಆಚರಿಸುವ ವಿಷಯ ಡಾ.ಎಸ್.ರಾಮೇಗೌಡರಿಗೆ ನಾನು ತಿಳಿಸಿದಾಗ ಅವರು "ವಿಶ್ವವಿದ್ಯಾಲಯದ ಕವಿದಿನಕ್ಕೆ ಡಾ. ಸಿ. ಆರ್. ನಾರಾಯಣರೆಡ್ಡಿ, ತೆಲುಗು ವಿಶ್ವವಿದ್ಯಾಲಯದ ಕುಲಪತಿಗಳನ್ನು ಆಮಂತ್ರಿಸುವೆ. ಅವರನ್ನೆ ಅತಿಥಿಯಾಗಿ ವೇದಿಕೆಗೆ ಕರೆಯಿರಿ. ಅವರೂ ಜ್ಞಾನಪೀಠ ಪ್ರಶಸ್ತಿ ವಿಜೇತರು. ಮೂವರೂ

ಜ್ಞಾನಪೀಠ ಪ್ರಶಸ್ತಿ ವಿಜೇತರ ಸಂಗಮವಾಗಲಿ" ಎಂದು ಹೇಳಿ ಅದರಂತೆ ಏರ್ಪಾಡು ಮಾಡಿದರು. ನಾರಾಯಣ ರೆಡ್ಡಿಯವರು ಬೇಂದ್ರೆಯವರ ಕೆಲವು ಕವನಗಳ ತೆಲುಗು ಅನುವಾದಗಳನ್ನು ಮಾಡಿ ಸಭೆಯಲ್ಲಿ ಸುಶ್ರಾವ್ಯವಾಗಿ ಹಾಡಿದ್ದು ಸಂಸ್ಮರಣೀಯ ಪ್ರಸಂಗ.

ಡಾ. ಜಿ. ಎಂ. ಹೆಗಡೆಯವರ ಪಿಎಚ್. ಡಿ. ಮಹಾಪ್ರಬಂಧ "ಮಾಸ್ತಿಯವರ ವಿಮರ್ಶೆ- ಒಂದು ಅಧ್ಯಯನ" ಬಿಡುಗಡೆಯ ಸಂದರ್ಭದಲ್ಲಿ ನಾವು ಡಾ.ಎಸ್.ರಾಮೇಗೌಡರನ್ನು ಅತಿಥಿಯಾಗಿ ಆಮಂತ್ರಿಸಲು ಹೋದೆವು. ಆಗ ಅವರು ನಮ್ಮೊಂದಿಗೆ ಸುಮಾರು ಎರಡು ತಾಸು ವಿವಿಧ ವಿಷಯಗಳನ್ನು ಕುರಿತು ಚರ್ಚಿಸಿದರು. ಕುಲಪತಿ, ಅಧೀನ ಕಾಲೇಜಿನ ಪ್ರಾಧ್ಯಾಪಕರೊಂದಿಗೆ ಇಟ್ಟುಕೊಳ್ಳಬೇಕಾದ ಸಂಪರ್ಕದ ಆದರ್ಶ ರೀತಿ ಡಾ.ಎಸ್.ರಾಮೇಗೌಡರದು. ಈ ಭೇಟಿಯ ಮೂಲಕ ಅನಂತರದ ಅನೇಕ ಭೇಟಿಗಳಿಗೆ ಉತ್ತೇಜನ ಲಭಿಸಿತು. ನಾವು ನಿಕಟವರ್ತಿಗಳಾದೆವು.

"ಶಾಲೆಶಾಲೆಗಳಲ್ಲಿ ಅಂಬಿಕಾತನಯದತ್ತ ವೇದಿಕೆಯ ಶಾಖೆಗಳು ಪ್ರಾರಂಭವಾಗಬೇಕು" ಎಂಬ ಒಂದು ಸೂಚನೆ ಡಾ.ಎಸ್.ರಾಮೇಗೌಡರಿಂದ ಬಂತು. ಆ ದಿಕ್ಕಿನಲ್ಲಿ ಕಾರ್ಯ ಪ್ರಾರಂಭಿಸಿದೆ. ಶ್ರೀ ರಾಘವೇಂದ್ರ ವಿದ್ಯಾಪೀಠ ಪ್ರೌಢಶಾಲೆ ಜಯಪುರ-ಮೈಸೂರು, ಲಾಲ್‌ಬಹಾದ್ದೂರ ಶಾಸ್ತ್ರಿ ಪ್ರೌಢಶಾಲೆ ಹಿರೇಕೊಡಿಗೆ-ಚಿಕ್ಕಮಗಳೂರು, ಕೆ.ಇ. ಬೋರ್ಡ ಉಚ್ಚ ಪ್ರಾಥಮಿಕ ಶಾಲೆ ಧಾರವಾಡ ಮತ್ತು ಸಾಧನಕೇರಿ ಪ್ರಾಥಮಿಕ ಶಾಲೆಗಳಲ್ಲಿ, ಅಲ್ಲಿಯ ಮುಖ್ಯಾಧ್ಯಾಪಕರಾದ ಶ್ರೀ ಸುಧೀಂದ್ರ, ಶ್ರೀ ಸುಬ್ರಹ್ಮಣ್ಯ ಅಡಿಗ, ಶ್ರೀ ಸುರೇಶ ಕುಲಕರ್ಣಿ ಮತ್ತು ಶ್ರೀ ಗುರುನಾಥ ಇನಾಮದಾರ ಅವರ ಮೂಲಕ ಅಂಬಿಕಾತನಯದತ್ತ ವೇದಿಕೆಯ ಶಾಖೆಗಳು ಪ್ರಾರಂಭವಾದವು.

೧೯೯೧ರಿಂದ ವೇದಿಕೆಯ ಪ್ರತಿಯೊಂದು ಕಾರ್ಯಕ್ರಮದಲ್ಲಿ ಡಾ.ಎಸ್.ರಾಮೇಗೌಡರು ಭಾಗವಹಿಸುತ್ತಲೇ ಬಂದರು. ಕರ್ನಾಟಕ ಮತ್ತು ಮಹಾರಾಷ್ಟ್ರದ ಅಭಿಮಾನಿಗಳ ಮೂಲಕ ೧.೧೧.೧೯೯೨ರಂದು ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಂಗಾರಪ್ಪನವರು "ವರಕವಿ ಡಾ. ದ.ರಾ.ಬೇಂದ್ರೆ ರಾಷ್ಟ್ರೀಯ ಸ್ಮಾರಕ ಟ್ರಸ್ಟ"ನ್ನು ರಚಿಸುವ ಘೋಷಣೆಯನ್ನು ಪ್ರಕಟಪಡಿಸುವಂತೆ ಆಯಿತು. ಮಾಜಿ ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರಪ್ಪ ಮೊಯಿಲಿಯವರಿಗೆ ಅಂಬಿಕಾತನಯದತ್ತ ವೇದಿಕೆಯ ಆದರ್ಶಗಳನ್ನು ತಿಳಿಸಿಕೊಡುವ ಭೂಮಿಕೆಯನ್ನು ಡಾ.ಎಸ್.ರಾಮೇಗೌಡ ಇವರು ಸಿದ್ಧಪಡಿಸಿದ್ದರಿಂದ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಎಚ್.ವಿಶ್ವನಾಥ ಅವರ ದ್ರುತವಾದ ಕಾರ್ಯಾಚರಣೆಯ ಮೂಲಕ, ರಾಷ್ಟ್ರೀಯ ಸ್ಮಾರಕದ ನೋಂದಣಿ ೨೩.೨. ೧೯೯೩ರಂದು ಆಯಿತು. ಅನಂತರದಲ್ಲಿ ಮತ್ತೆ ಯಾವುದೇ ಪ್ರಗತಿ ಇಲ್ಲದಾಗ, ಡಾ.ಎಸ್.ರಾಮೇಗೌಡರು ಮತ್ತೊಮ್ಮೆ ಶ್ರೀ ವೀರಪ್ಪ ಮೊಯಿಲಿಯವರೊಂದಿಗೆ ಮಾತನಾಡಿ ೮ ಡಿಸೆಂಬರ ೧೯೯೪ರಂದು ಸ್ಮಾರಕ ಕಟ್ಟಡದ ಶಿಲಾನ್ಯಾಸವಾಗುವಂತೆ ಏರ್ಪಾಡು ಮಾಡಿದರು.

೧.೮.೧೯೯೩ರಂದು ನಾನು ಪ್ರಾಧ್ಯಾಪಕ ವೃತ್ತಿಯಿಂದ ನಿವೃತ್ತಿ ಹೊಂದಿದೆ. ಅದೇ ದಿವಸ ಸಾಯಂಕಾಲ ಆತ್ಮೀಯ ಮಿತ್ರರು ಅಭಿನಂದನೆಯ ಕಾರ್ಯಕ್ರಮವನ್ನು

ಹಮ್ಮಿಕೊಂಡಿದ್ದರು. ಆ ಕಾರ್ಯಕ್ರಮದ ಅಧ್ಯಕ್ಷ ಸ್ಥಾನದಿಂದ ಡಾ.ಎಸ್.ರಾಮೇಗೌಡರು ನನ್ನ ಬಗ್ಗೆ ಆಡಿದ ಮಾತು ನನಗೆ ಹೆಚ್ಚಿನ ಪುಷ್ಟಿಯನ್ನು ಕೊಟ್ಟಿತು.

೧೯೯೫-೯೬ ದ.ರಾ.ಬೇಂದ್ರೆ ಜನ್ಮಶತಮಾನೋತ್ಸವ ಸಮಿತಿಯನ್ನು ರಾಜ್ಯಮಟ್ಟದಲ್ಲಿ ಏರ್ಪಡಿಸಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಎಚ್. ಡಿ.ದೇವೇಗೌಡ ಅವರಿಂದ ಸಭೆಯ ದಿನಾಂಕ ಲಭಿಸದಂಥ ಜಟಿಲ ಪರಿಸ್ಥಿತಿ ನಿರ್ಮಾಣವಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾಗಿದ್ದ ಶ್ರೀ ವ.ರಾ. ಕುಲಕರ್ಣಿಯವರ ಆದೇಶದ ಮೇರೆಗೆ, ನಾನು ಡಾ.ಎಸ್.ರಾಮೇಗೌಡ ಅವರೊಂದಿಗೆ ವಿಶೇಷ ಚರ್ಚೆ ನಡೆಸಿದೆ. ಕೇವಲ ಎಂಟೇ ದಿನಗಳಲ್ಲಿ ಸಭೆಯ ದಿನಾಂಕವನ್ನು ದೇವೇಗೌಡರಿಂದ ಪಡೆದುಕೊಂಡು ಬಂದರು. ಸಭೆಯನ್ನು ದೇವೇಗೌಡ ಅವರು ನಡೆಸದೆ, ಇಂದಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾದ (ಆಗಿನ ಗ್ರಾಮೀಣಾಭಿವೃದ್ಧಿ ಸಚಿವರು) ಶ್ರೀ ಎಂ.ಪಿ. ಪ್ರಕಾಶ ಅವರ ಅಧ್ಯಕ್ಷತೆಯಲ್ಲಿ ೨೩.೬.೯೫ರಂದು ನಡೆಯಿತು. ೨೪.೬.೯೫ ರ ಬೆಳಗು ದೇವೇಗೌಡ ಅವರು ದ.ರಾ. ಬೇಂದ್ರೆಯವರ ನಿವಾಸಕ್ಕೆ ಭೆಟ್ಟಿಕೊಡುವ ನಿರ್ಣಯ ತಿಳಿಯಿತು.

ವೇದಿಕೆ ಹಮ್ಮಿಕೊಂಡ ದ.ರಾ.ಬೇಂದ್ರೆ ಜನ್ಮಶತಮಾನೋತ್ಸವದ ಅಧ್ಯಕ್ಷರಾದ ಡಾ.ಎಸ್.ರಾಮೇಗೌಡ ಅವರು ನಮ್ಮ ಪರವಾಗಿ ದೇವೇಗೌಡ ಅವರನ್ನು ೨೪ರಂದು ಸಂಪರ್ಕಿಸಿದರು, ಸ್ಮಾರಕ ಕಟ್ಟಡದ ಕೆಲಸಕ್ಕೆ ದ್ರುತವಾದ ಚಾಲನೆ ಕೊಡಲು ವಿನಂತಿಸಿದರು. ಈ ವಿನಂತಿಗೆ ಫಲ ಸಿಕ್ಕಿತು. ದೇವೇಗೌಡರ ಆದೇಶದಂತೆ ಸ್ಮಾರಕ ಕಟ್ಟಡದ ಕಾರ್ಯ ಪ್ರಗತಿ ಪಥದಲ್ಲಿ ಸಾಗಿದೆ.

ಈ ಮಧ್ಯೆ ಡಾ. ವಿ.ಕೃ.ಗೋಕಾಕ ಅವರಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದಾಗ, ಕರ್ನಾಟಕ ವಿಶ್ವವಿದ್ಯಾಲಯವು ಅವಿಸ್ಮರಣೀಯವಾದ ಸನ್ಮಾನ ಸಭೆಯನ್ನು ಏರ್ಪಡಿಸಿತು. ಡಾ. ವಿ. ಕೃ. ಗೋಕಾಕ ಗ್ರಂಥಾಲಯ ಎಂಬ ನಾಮಕರಣವನ್ನು, ಕರ್ನಾಟಕ ಮಹಾವಿದ್ಯಾಲಯದ ಗ್ರಂಥಾಲಯಕ್ಕೆ ನಿಶ್ಚಯಿಸಿ, ಕಾರ್ಯರೂಪಕ್ಕೆ ತಂದದ್ದು ಗೋಕಾಕರ ಜೀವನದ ಒಂದು ಅಮೃತಕ್ಷಣ. ಗೋಕಾಕರು ಆನಂದ ಪಟ್ಟು ಎರಡು ತಾಸಿನ ಉಪನ್ಯಾಸ ಕೊಟ್ಟದ್ದು ಧಾರವಾಡದ ನಾಗರಿಕರಿಗೆ ಗೊತ್ತಿದ್ದ ವಿಷಯ. ಈ ಸಂದರ್ಭದಲ್ಲಿ ಗೋಕಾಕರು ನನಗೆ ಒಂದು ಪತ್ರ ಬರೆದರು "ಧಾರವಾಡದ ಭೂಮಿ ಸ್ಪರ್ಶವಾದೊಡನೆ ಮೊದಲನೆಯ ಭೆಟ್ಟಿ ದ.ರಾ.ಬೇಂದ್ರೆ ನಿವಾಸ-ಕಾವ್ಯಗುರು ಮನೆ" ಈ ಪತ್ರವನ್ನು ಡಾ.ಎಸ್.ರಾಮೇಗೌಡರಿಗೆ ತೋರಿಸಿದೆ. ಈ ಭೆಟ್ಟಿ ವಿಶ್ವವಿದ್ಯಾಲಯದ ಸನ್ಮಾನಕ್ಕೆ ಪೂರ್ವಭಾವಿಯಾಗಿತ್ತು. ಆದುದರಿಂದ ಇದಕ್ಕೆ ಒಂದು ಔಚಿತ್ಯವಿರುವ ದೃಷ್ಟಿಯಿಂದ ಕಾವ್ಯ ಗುರುನಿವಾಸದಲ್ಲಿ ವಿಶ್ವವಿದ್ಯಾಲಯದ ಕುಲಪತಿಗಳಿಂದ ಸ್ವಾಗತ ಸಮಾರಂಭ ಎಂಬುದಾಗಿ ಏರ್ಪಡಿಸಿದೆ. ಅಂದು ಡಾ.ಎಸ್.ರಾಮೇಗೌಡರು ಇಬ್ಬರು ಜ್ಞಾನಪೀಠ ಪ್ರಶಸ್ತಿ ಪಡೆದ ಲೇಖಕರ ಆತ್ಮೀಯ ಹೃದ್ಯ ಸಂಬಂಧವನ್ನು ಕುರಿತು ಮಾತನಾಡಿದರು. ಧಾರವಾಡದ ಮಹತ್ವದ ಸಾಹಿತಿಗಳು, ಪ್ರಾಧ್ಯಾಪಕರು, ಅಧಿಕಾರಿಗಳು ಪಾಲುಗೊಂಡಿದ್ದರು.

ಅಂಬಿಕಾತನಯದತ್ತ ವೇದಿಕೆಗೆ ಧನ ಸಂಗ್ರಹ ಮಾಡಬೇಕು ಎಂಬುದು ಡಾ.ಎಸ್.ರಾಮೇಗೌಡರ ಅಭಿಪ್ರಾಯವಾಗಿತ್ತು. "ದಾನ ಐಚ್ಛಿಕವಾಗಬೇಕು, ಕಡ್ಡಾಯಬೇಡ" ಎಂದೆ. ಈ ವಾಕ್ಯ ಡಾ.ಎಸ್.ರಾಮೇಗೌಡರ ಹೃದಯದಲ್ಲಿ ಕಾರ್ಯ ಪ್ರಾರಂಭಿಸಿತು. ಇದರ ಪರಿಣಾಮವಾಗಿ ೩೧.೧.೧೯೯೫ ದ.ರಾ.ಬೇಂದ್ರೆ ಜನ್ಮಶತಮಾನೋತ್ಸವ ವರ್ಷದ ಪ್ರಾರಂಭೋತ್ಸವದ ಸಂದರ್ಭದಲ್ಲಿ ಡಾ.ಎಸ್.ರಾಮೇಗೌಡ ಅವರು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯಾಗಿ ಹತ್ತುಸಾವಿರ ರೂಪಾಯಿಗಳನ್ನು ದ.ರಾ.ಬೇಂದ್ರೆ ಟ್ರಸ್ಟಿನ ಧಾರವಾಡದ ಕಾರ್ಯಕಾರಿ ಸಮಿತಿಯ ಅಧ್ಯಕ್ಷರಾದ ಶ್ರೀ ಅರವಿಂದ ಜಾಧವ ಅವರಿಗೆ ಒಪ್ಪಿಸಿದರು. ಟ್ರಸ್ಟಿಗೆ ಕಾಣಿಕೆಯ ಧನವಾಗಿ ಇಂದಿನವರೆಗೆ ಬಂದದ್ದು ಇದೊಂದೆ. " ಕರ್ನಾಟಕದ ವ್ಯಕ್ತಿ ಹಾಗೂ ಸಂಸ್ಥೆಗಳು ತಾವಾಗಿ ಧನವನ್ನು ಟ್ರಸ್ಟಿಗೆ ನೀಡಬೇಕಾಗಿ" ಕರೆಕೊಟ್ಟರು. ಈ ಕರೆಗೆ ಯಾರೂ ಕಿವಿಗೊಟ್ಟಿಲ್ಲ. ದಾನಗುಣ ಅನುಕರಣವಲ್ಲ; ಅದು ಸ್ವಭಾವದಲ್ಲಿರಬೇಕಾದ ಹೃದಯ ಶ್ರೀಮಂತಿಕೆ. ಡಾ.ಎಸ್.ರಾಮೇಗೌಡರಲ್ಲಿ ಈ ಹೃದಯ ಶ್ರೀಮಂತಿಕೆ ಇದೆ.

"ವ್ಯಕ್ತಿ ವ್ಯಕ್ತಿಗಳಲ್ಲಿ ವೈಚಾರಿಕ ಭೇದ ಇರುವುದು ಸ್ವಾಭಾವಿಕ. ಸಾಹಿತಿಗಳಲ್ಲಿಯೂ ಹಾಗೆ ಭೇದ ಇರುತ್ತವೆ. ಭೇದಗಳನ್ನು ಪ್ರಮುಖಮಾಡದೆ ಅವರಲ್ಲಿಯ ಗುಣ ಸಾಮ್ಯಗಳತ್ತ ಓದುಗರ ಮನಸ್ಸನ್ನು ಸೆಳೆಯಬೇಕು. ಕುವೆಂಪು ಮತ್ತು ಬೇಂದ್ರೆ ವಿರಸದ ಪ್ರಚಾರ ಮಾಡುವವರಿಗೆ ಯಾವ ಸ್ಥಾನವೂ ಇರಬಾರದು. ಸಾಮರಸ್ಯ ಸಾಹಿತ್ಯದ ನಿಜವಾದ ಹಾದಿ. ಆದುದರಿಂದ ನಾವು ತರುಣ ವಾಚಕರ ಮನೋಲೋಕವನ್ನು ದೂಷಿತಗೊಳಿಸದೆ ಅದು ಸದಭಿರುಚಿಯ ಮಹತಿಯನ್ನು ತಲುಪುವಂತೆ ಮಾಡಬೇಕು" ಎಂಬ ಡಾ.ಎಸ್.ರಾಮೇಗೌಡರ ವಿಚಾರ ನನಗೆ ಅತ್ಯಂತ ಯುಕ್ತವೆನಿಸಿತು. ಆ ದೃಷ್ಟಿಯಿಂದ ಅಂಬಿಕಾತನಯದತ್ತ ವೇದಿಕೆ ಕುವೆಂಪು ಶ್ರದ್ಧಾಂಜಲಿಯ ಸಭೆಯನ್ನು ಏರ್ಪಡಿಸಿ, ತರುಣ ಕವಿಗಳು ಕುವೆಂಪು ಮಹತಿಯನ್ನು ವರ್ಣಿಸುವ ಕವನಗಳನ್ನು ರಚಿಸಲು ಪ್ರೇರಣೆ ಕೊಟ್ಟರು ಮತ್ತು ಶ್ರೀ ಜಿ. ಕೃಷ್ಣಪ್ಪ ಅವರು ರಚಿಸಿದ 'ಹಾಡುಹಕ್ಕಿ ಅಂಬಿಕಾತನಯದತ್ತ' ದಲ್ಲಿ ಕುವೆಂಪು ಬೇಂದ್ರೆ ಸ್ನೇಹ ಪ್ರತಿಪಾದಿಸುವಂತೆ ಸೂಚಿಸಿತು.

೧೦ ಮತ್ತು ೧೧.೨.೧೯೯೬ ರಂದು ವೇದಿಕೆ ಹಾಗೂ ಕರ್ನಾಟಕ ರಾಜ್ಯ ಸರ್ಕಾರಿ ದಿನಗೂಲಿ ನೌಕರರ ಮಹಾಮಂಡಲ ಸಂಯುಕ್ತವಾಗಿ ಹುಬ್ಬಳ್ಳಿಯ ವಿಶ್ವಶ್ರಮ ಚೇತನದಲ್ಲಿ ಬೇಂದ್ರೆ ಜನ್ಮಶತಮಾನೋತ್ಸವ ವರ್ಷ ಸಮಾಪ್ತಿಯ–ನೂರು ತುಂಬಿದ ಬೇಂದ್ರೆ–ಸಮರಸ ಮನ್ವಂತರದ ಸಮರಸವೇ ಜೀವನ ಎಂಬ ಸಂದೇಶ ಸಾರಿದ ಕಾರ್ಯಕ್ರಮದ ಸಮಾರೋಪದ ಅಧ್ಯಕ್ಷತೆಯನ್ನು ವಹಿಸಿ ಡಾ.ಎಸ್.ರಾಮೇಗೌಡರು ಬೇಂದ್ರೆ ಒಲವಿನ ಮಹತಿಯನ್ನು ವರ್ಣಿಸಿದರು. ಇದಲ್ಲದೆ ೧೯೯೬ರಿಂದ ೯೯ರ ವರರೆಗೆ ಬಿ.ಎ., ಬಿಎಸ್.ಸಿ, ಬಿ.ಕಾಂ., ಭಾಗ ೧ರ ವಿದ್ಯಾರ್ಥಿಗಳು ಬೇಂದ್ರೆಯವರ 'ಸಮರಸವೇ ಜೀವನ' ಸಂದೇಶ ಅರಿಯುವಂತೆ ಒಂದು ಆಯ್ದ ಕವನಗಳ ಸಂಗ್ರಹ ಸಿದ್ಧಪಡಿಸುವ ಆದೇಶವನ್ನು ಡಾ. ಎಂ. ಎಂ. ಕಲಬುರ್ಗಿಯವರ ಮುಖಾಂತರ ಕಳಿಸಿದರು. ಡಾ.ಎಸ್.ರಾಮೇಗೌಡರಿಗೆ ಬಾಯಿಮಾತಿನ ಪೌರುಷ ಬೇಕಾಗಿಲ್ಲ. ಆಡಿದ್ದನ್ನು ಮಾಡಿ ತೋರಿಸುವ ಛಲ ಅವರಲ್ಲಿದೆ.

ಬೇಂದ್ರೆಯವರ ಸಂಖ್ಯಾಶಾಸ್ತ್ರ ಜನರು ಆಡಿಕೊಳ್ಳುವ ವಿಷಯವಾಗಿತ್ತು. "ನಿಮ್ಮ ಅಪ್ಪನ ಸಂಖ್ಯಾಶಾಸ್ತ್ರ ನಿನಗರೆ ತಿಳಿತಿತ್ತೇನು"ಎಂಬ ಲೇವಡಿಯನ್ನು ಅನೇಕರು ಮಾಡಿದ್ದರು."ತಿಳಿದುಕೊಳ್ಳುವ ಪ್ರಯತ್ನ ಮಾಡಿದ್ದೇನೆ" ಎಂದು ನಾನು ಕೊಟ್ಟ ಉತ್ತರಕ್ಕೆ ತಳಬುಡವಿಲ್ಲದ ತ್ರಿಶಂಕು ಸ್ವರ್ಗದ ಮಾತಾಗಿತ್ತು. ಡಾ.ಎಸ್.ರಾಮೇಗೌಡ ಅವರು ೯೫ನೇ ಜನ್ಮ ದಿನದ ವಿಶೇಷ ಉಪನ್ಯಾಸಕನಾಗಿ ನನ್ನನ್ನು ಆಹ್ವಾನಿಸಿ "ಬೇಂದ್ರೆ ಸಾಂಖ್ಯ ವಿಜ್ಞಾನ ಸಿದ್ಧಾಂತ" ಎಂಬ ವಿಷಯ ಕೊಟ್ಟರು. ಅವರ ಅಪೇಕ್ಷೆಯಂತೆ ಉಪನ್ಯಾಸ ಸಿದ್ಧಪಡಿಸಿದೆ. ಉಪನ್ಯಾಸದ ಮೊದಲು ವಿಷಯವನ್ನು ವಿವರಿಸಲು ಕರೆ ಕಳಿಸಿದರು. ಈ ಚರ್ಚೆಯಿಂದ , ಅವರು ಯಾವುದೇ ಕಾರ್ಯ ಹಮ್ಮಿಕೊಂಡಾಗ ಅದರಲ್ಲಿ ದೋಷ ಉಳಿಯಬಾರದು, ದೂಷಣೆಗೆ ಆಸ್ಪದವಾಗಬಾರದು ಎಂಬುದರ ಬಗ್ಗೆ ವಹಿಸಬೇಕಾದ ಕಾಳಜಿಯ ಕಲ್ಪನೆ ಬಂತು. ಪುಸ್ತಿಕೆಯನ್ನು ಬರೆದು ಹಸ್ತಪ್ರತಿ ಒಪ್ಪಿಸಿದಾಗ ಸಂಪೂರ್ಣವಾಗಿ ಅವಲೋಕಿಸಿ ಆನಂದಪಟ್ಟರು. ನನ್ನ ಪ್ರಯತ್ನಕ್ಕೆ ಮೂರ್ತರೂಪಕೊಡುವ ಶಿಲ್ಪಿ ಡಾ.ಎಸ್.ರಾಮೇಗೌಡ ಎಂಬುದಾಗಿ ಹೇಳಬಹುದು.

"ನಮ್ಮ ನಾಡಿನ ಪ್ರಾಚೀನ ಜ್ಞಾನ ಮತ್ತು ಆಧುನಿಕ ವಿಜ್ಞಾನ ಸಮನ್ವಯಗೊಂಡು ಅದು ನಮ್ಮ ಜೀವನ ಸಾಫಲ್ಯಕ್ಕೆ ನೆರವಾಗಬೇಕೆಂದು ಬೇಂದ್ರೆಯವರ ಸದಿಚ್ಛೆಯಾಗಿತ್ತು. ಸಾಮರಸ್ಯದ ಐಕ್ಯವನ್ನು ಸಾಂಖ್ಯ ಸಿದ್ಧಾಂತ ಸೂತ್ರಗಳ ಮೂಲಕ ವಿವರಿಸಿದ ಕೀರ್ತಿ ಬೇಂದ್ರೆಯವರಿಗೆ ಸಲ್ಲುತ್ತದೆ. ಇದು ಕನ್ನಡ ಸಾಹಿತ್ಯದ ಸಂದರ್ಭದಲ್ಲೂ ಏಕಮೇವಾದ್ವಿತೀಯ ಹೊಸ ಹುಟ್ಟು ಎಂದರೂ ತಪ್ಪಲ್ಲ. ಜಾಗತಿಕ ಶಾಂತಿಗಾಗಿ ತಾವು ಕಂಡುಕೊಂಡ ಸಾಂಖ್ಯದರ್ಶನವನ್ನು ಸೂತ್ರ ಬದ್ಧವಾಗಿ ಹಾಗೂ ಒಂದು ತಾತ್ವಿಕ ಸಿದ್ಧಾಂತವಾಗಿ ಬೇಂದ್ರೆಯವರು ನಿರೂಪಿಸಿದರು. ಇದು ಅವರು ಸಾಂಖ್ಯಶಾಸ್ತ್ರಕ್ಕೆ ನೀಡಿದ ಒಂದು ಅಮೋಘವಾದ ಕೊಡುಗೆಯಾಗಿದೆ. ಇದರ ಚಿಂತನ ಹಾಗೂ ಮೌಲ್ಯಮಾಪನ ಇನ್ನೂ ಅಧಿಕೃತವಾಗಿ ಆಗಬೇಕಾಗಿದೆ" ಎಂಬುದಾಗಿ ಡಾ.ಎಸ್.ರಾಮೇಗೌಡರು ಕೊಟ್ಟ ಸೂಚನೆಯ ದಿಕ್ಕಿನಲ್ಲಿ ಸ್ಮಾರಕ ಟ್ರಸ್ಟು ಕಾರ್ಯಮಾಡಬೇಕಾಗಿದೆ. ಜನ್ಮಶತಮಾನೋತ್ಸವದ ಸಂದರ್ಭದಲ್ಲಿ ಡಾ.ಎಸ್.ರಾಮೇಗೌಡರು ಮಾಡಿದ ಈ ಕಾರ್ಯ ನಿಜವಾದ ಸ್ಮಾರಕ. ವ್ಯಕ್ತಿಯ ಚಿಂತನೆಗಳಿಗೆ, ಕಾರ್ಯಕ್ಕೆ ಪ್ರವಾಹಿರೂಪ ಕೊಡುವುದೆ ನಿಜವಾದ ಶತಮಾನೋತ್ಸವ. ಇದು ಜಂಗಮ ಸ್ವರೂಪಿ ಕಾರ್ಯ. ಸ್ಥಾವರಕ್ಕೆ ಅಳಿವುಂಟು, ಜಂಗಮಕ್ಕೆ ಅಳಿವು ಇಲ್ಲ. ವೈಚಾರಿಕ ಚಿಂತನೆಯೆ ಜಂಗಮ ಸ್ವರೂಪ. ಇದನ್ನು ಪಾಲಿಸುವುದು ಕಷ್ಟಕರ. ಆದುದರಿಂದ ಜನರಿಗೆ ವ್ಯಕ್ತಿಗಳ ಮೂರ್ತಿ ಸ್ಥಾಪನೆಯಲ್ಲಿ ಉತ್ಸಾಹ ಹೆಚ್ಚು. ಆ ವ್ಯಕ್ತಿಗಳ ತತ್ವಪಾಲನೆಯಲ್ಲಿ ಮತ್ತು ತತ್ವ ಪ್ರಚಾರದಲ್ಲಿ ಹಿಂದೇಟು.

ಅಂಬಿಕಾತನಯದತ್ತ ವೇದಿಕೆಗಾಗಿ ಇಷ್ಟೆಲ್ಲ ಕಾರ್ಯ ಮಾಡಿದ ಡಾ.ಎಸ್.ರಾಮೇಗೌಡ ಅವರು ಎಲ್ಲೆ ಇರಲಿ, ಅಂಬಿಕಾತನಯದತ್ತ ವೇದಿಕೆಯ ಶ್ರೇಯಸ್ಸನ್ನು ಬಯಸುತ್ತಾರೆ ಮತ್ತು ಸ್ಮಾರಕ ಟ್ರಸ್ಟಿನ ಚಟುವಟಿಕೆಗಳ ಮೇಲೆ ಕಣ್ಣಿಟ್ಟು ಅದು ಪ್ರಗತಿ ಪಥದಲ್ಲಿ ಇರುವಂತೆ ಎಲ್ಲ ರೀತಿಯ ಸಹಾಯ ಮಾಡುತ್ತಾರೆ ಎಂಬುದರ

ಬಗ್ಗೆ ನನಗೆ ಸಂಪೂರ್ಣ ವಿಶ್ವಾಸ ಉಂಟು. ಇಂಥ ಈ ಡಾ.ಎಸ್.ರಾಮೇಗೌಡರಿಗೆ ಉನ್ನತ ಸ್ಥಾನ, ಉನ್ನತ ಮಾನ, ಉತ್ತಮ ಆರೋಗ್ಯ ಲಭಿಸಲಿ ಎಂಬುದೆ ಹಾರೈಕೆ.

"ಒಂದು ಜನ್ಮದ್ದಲ್ಲಾ ಗೆಳೆತನ ಸಾಧನೆ
ಜನ್ಮ ಜನ್ಮಕ್ಕುಂಟು ಹೊಸತು ತನು"

ಎಂಬುದಾಗಿ ಅಂಬಿಕಾತನಯದತ್ತರು ಹಾಡಿದಂತೆ ದ.ರಾ.ಬೇಂದ್ರೆ ಮತ್ತು ಡಾ.ಎಸ್.ರಾಮೇಗೌಡ ಗೆಳೆತನ ಯಾವ ಜನ್ಮದ್ದೋ ಯಾರಿಗೆ ಗೊತ್ತು. ಜನ್ಮ ಜನ್ಮಾಂತರದ ಸಂಬಂಧ ಎಂಬ ಮಾತು ಸುಳ್ಳಲ್ಲ. ಬೇಂದ್ರೆ ಕವಿತ್ವದ ಬಗ್ಗೆ ಇರುವ ಡಾ.ಎಸ್.ರಾಮೇಗೌಡರ ಒಲವು, ಎಲ್ಲ ಕಾರ್ಯ ಮಾಡಿಸಿದೆ. ಡಾ.ಎಸ್.ರಾಮೇಗೌಡರ ಸ್ನೇಹಿತರ ಸಂಖ್ಯೆ ಅಪಾರ. ಅದು ದಿನದಿನಕ್ಕೆ ಬೆಳೆಯುವ ಕಾಮಧೇನು. ಗುಣಿಗಳಿಗೆ, ಗುಣಗ್ರಾಹಿಗಳಿಗೆ ಗೆಳೆತನ ಎಂಬ ಕಾಮಧೇನು ಒಲಿಯುತ್ತಾಳೆ. ಇದನ್ನು ಒಲಿಸಿಕೊಂಡ ಡಾ.ಎಸ್.ರಾಮೇಗೌಡರು ಧನ್ಯರು. ಇವರ ಜೀವನ ಮಂಗಲಮಯವಾಗಲಿ, ಆನಂದನಿಧಿಯಾಗಲಿ.

❊ ❊ ❊

ಅಂಜಿಕೆ ಅರಿಯದ ಡಾ.ಎಸ್.ರಾಮೇಗೌಡರು

"ವೈಶಂಪಾಯನ"

ಹರಗಿರಿಯ ತುದಿಯಿಂದ ಧರೆಗಿಳಿದ ಕಿರುಮೋಡದಂತೆ ಲಾಸ್ಯಮಯ ವ್ಯಕ್ತಿತ್ವ ಪಡೆದ ಕುಲಪತಿ ಡಾ.ಎಸ್.ರಾಮೇಗೌಡರು ಅಂಜಿಕೆ ಅರಿಯದವರು. ವಜ್ರದಂತೆ ಕಠೋರವಾದರೂ ಕುಸುಮದಂತೆ ಮೃದು ಮನದವರು. ಹಾಲು ಜೇನಿನಂತೆ ಎಲ್ಲರೊಡನೆ ಬೆರೆತು ಬಾಳುವವರು. ಇದಕ್ಕೆ ಅವರು ಬೆಳೆದು ಬಂದ ಮಣ್ಣಿನ ಗುಣ ಕಾರಣವಿರಬೇಕು.

ಮೈಸೂರು ಮಲ್ಲಿಗೆ ತನ್ನ ಸುವಾಸನೆಯನ್ನು ಶತಶತಮಾನಗಳಿಂದ ಉಳಿಸಿಕೊಂಡು ಬಂದಿದೆ. ಮೈಸೂರ ಜಿಲ್ಲೆಯ ಕೊಳ್ಳೇಗಾಲ ತಾಲೂಕ ಕಿರುಗ್ರಾಮ ಹೊಂಡರಬಾಳು ಗೌಡರ ಜನ್ಮಸ್ಥಳ. ಅವರು ಶತಶತಮಾನಗಳಿಂದ ಕಡೆಗಣಿಸಲ್ಪಟ್ಟಿರುವ ರೈತ ಕುಟುಂಬದವರು. ತಂದೆಯವರು ಒಳ್ಳೆ ಗಮಕಿಗಳು. ೧೯೩೯ನೇ ಇಸವಿ ಜನೇವರಿ ಹದಿನಾಲ್ಕು ಮಕರ ಸಂಕ್ರಾಂತಿಯ ಪುಣ್ಯ ಕಾಲ. ರವಿ ಮಕರ ರಾಶಿಗೆ ಪ್ರವೇಶ ಮಾಡಿದ ದಿನ ಗೌಡರ ಜನ್ಮ ದಿನ. ಬಾಲ್ಯದ ಹಳ್ಳಿಗಾಡಿನ ಪರಿಸರ. ಆ ಮಣ್ಣಿನ ವಾಸನೆ, ಹಳ್ಳಿಗರ ಮುಗ್ಧತೆ, ಕೆಚ್ಚು ಇವರ ಜೀವನದಲ್ಲಿ ಅಚ್ಚಳಿಯದೆ ನಿಂತಿದೆ. ಅಂದಿನ ದಿನದಲ್ಲಿ ಹೆಚ್ಚಿನ ವಿದ್ಯೆ ಸಂಪಾದಿಸುವುದು ಅಷ್ಟೇನೂ ಸುಲಭವಿರಲಿಲ್ಲ. ಊರಿಂದ ಮೂರು ಮೈಲು ನಡೆದು ಕೊಳ್ಳೇಗಾಲದಲ್ಲಿ ಮಾಧ್ಯಮಿಕ ಶಿಕ್ಷಣ ಪಡೆಯಬೇಕಾಯಿತು. ಮಳೆಗಾಲದಲ್ಲಿ ಹೊಂಡಗಳಲ್ಲಿ ಈಜಿದ ನೆನಹು, ದಾರಿಯ ಪಕ್ಕದ ಕಾರಿ ಕವಳಿ ಹಣ್ಣಿನ ರುಚಿ ಇನ್ನೂ ಅವರ ನೆನಹಿನಲ್ಲಿ ನಿಂತಿದೆ. ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿರುವಾಗ ಅಮೇರಿಕೆಗೆ ಹೋಗಿ ಬಂದವರೊಬ್ಬರ ಉಪನ್ಯಾಸ ಅವರ ಮೇಲೆ ಅಚ್ಚಳಿಯದ ಪ್ರಭಾವ ಬೀರಿತು. ಅಮೇರಿಕೆಗೆ ಹೋಗಿ ಬಂದ ಅವರನ್ನು ಅಪಾದಮಸ್ತಕ ನೋಡಿದ್ದೆ ನೋಡಿದ್ದು. ಹಿಂದು ಮುಂದೆ ಸುತ್ತ ಅವರನ್ನು ನೋಡಿದ, ಅವರ ಮಾತು ಕೇಳಿದ ಗೌಡರು ಒಂದು ದಿನ ತಾವೂ ಅವರಂತೆ ಪರದೇಶ ಪಯಣ ಮಾಡುವ ಸಂಕಲ್ಪ ಮಾಡಿದರು.

ಕಾಲಾಂತರದಲ್ಲಿ ಆ ಸಂಕಲ್ಪ ಫಲಿಸಿ ಪರದೇಶಗಳು ಇಂದು ಅವರಿಗೆ ನೆರೆಮನೆಗಳಾಗಿವೆ. ಪದವಿ ಪೂರ್ವ ಶಿಕ್ಷಣ ಮೈಸೂರಲ್ಲಿ ಪೂರೈಸಿ ಬೆಂಗಳೂರ ವಿಶ್ವವಿದ್ಯಾಲಯದಿಂದ ವಿದ್ಯುಚ್ಛಕ್ತಿ ವಿಷಯದಲ್ಲಿ ಅಭಿಯಂತರ ಪದವಿ ಪಡೆದರು. ಚಿನ್ನದ

ನಾಡಾದ ಕೋಲಾರದಲ್ಲಿ ಕಿರಿ ಅಭಿಯಂತರರಾಗಿ ವೃತ್ತಿ ಜೀವನ ಪ್ರಾರಂಭಿಸಿದಾಗ ಮನೆಯವರಿಗೆ ಹಿಡಿಸಲಾರದ ಹಿಗ್ಗು. ಆದರೆ ವಿಧಿನಿಯಮ ಅವರನ್ನು ಶಿಕ್ಷಣ ರಂಗದತ್ತ ಎಳೆಯಿತು. ತಂದೆಯವರಿಗೆ ಅಸಮಾಧಾನ. ತಮ್ಮ ಮಗ ಮುಖ್ಯ ಅಭಿಯಂತರರಾಗುವ ಕನಸು ಕಂಡ ಅವರಿಗೆ ಶಿಕ್ಷಕರಾಗಿದ್ದು ರುಚಿಸಲಿಲ್ಲ. ಆದರೆ ಶಿಕ್ಷಕವೃತ್ತಿಯ ಪಾವಿತ್ರ್ಯತೆ, ಹಿರಿಮೆ, ಕಲಿಸುವಿಕೆಯಲ್ಲಿಯ ಅಪಾರ ಆನಂದ ಅವರನ್ನು ಅಲ್ಪಾವಧಿಯಲ್ಲಿಯೇ ವಿದ್ಯಾರ್ಥಿಗಳ ಕಣ್ಮಣಿಯನ್ನಾಗಿಸಿತು. ಮುಂದೆ ಹೆಚ್ಚಿನ ವಿದ್ಯಾಭ್ಯಾಸಕ್ಕೆ ಪರದೇಶಕ್ಕೆ ತೆರಳಿ ವಾಷಿಂಗ್ಟನ್ ಪ್ರಾಂತೀಯ ವಿಶ್ವವಿದ್ಯಾಲಯದ ಗೌರವಾನ್ವಿತ ಪ್ರಖ್ಯಾತ ಪ್ರಾಧ್ಯಾಪಕರಾದ ಪ್ರೊ. ಸಾಂಬ್ಲಿಯವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಕೊಂಡು ಡಾಕ್ಟರೇಟ ಪದವಿ ಪಡೆದರು. ವೆಸ್ಟ್ಇಂಡೀಜದಲ್ಲಿ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಮಂಡ್ಯ ಮೈಸೂರ ತಾಂತ್ರಿಕ ಕಾಲೇಜದಲ್ಲಿ ಪ್ರಾಧ್ಯಾಪಕರಾಗಿ ಬೆಂಗಳೂರ ತಾಂತ್ರಿಕ ಸಂಸ್ಥೆಯ ಸ್ಥಾಪಕ ಪ್ರಾಚಾರ್ಯರಾಗಿ ಹೆಸರುಗಳಿಸಿದರು. ಇವರ ಪ್ರತಿಭೆಯನ್ನು ಗುರುತಿಸಿ ಕೇಂದ್ರ ಸರ್ಕಾರ ಪಾಂಡಿಚೇರಿಯಲ್ಲಿ ತಾಂತ್ರಿಕ ಮಹಾವಿದ್ಯಾಲಯ ಕಟ್ಟುವ ಹೊಣೆಹೊರಿಸಿತು. ಆ ಸಂಸ್ಥೆಯ ಸಂಸ್ಥಾಪಕ ಪ್ರಾಚಾರ್ಯರಾಗಿ ಅವರು ಸಲ್ಲಿಸಿದ ಸೇವೆ ಚಿರಸ್ಮರಣೀಯ. ಆ ಭಾಗದಲ್ಲಿ ಇಂದಿಗೂ ಗೌಡರ ಹೆಸರನ್ನು ಕೃತಜ್ಞತೆಯಿಂದ ನೆನೆಯುತ್ತಾರೆ. ಅಲ್ಲಿರುವಾಗಲೇ ಕರ್ನಾಟಕ ಸರ್ಕಾರ ಅವರ ಸೇವೆಯನ್ನು ಗುರುತಿಸಿ, ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯನ್ನಾಗಿ ನೇಮಿಸಿತು.

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯಾಗಿ

ಆರುವರ್ಷ ಇಲ್ಲಿ ಕುಲಪತಿಯಾಗಿ ಯಶಸ್ವಿಯಾಗಿ ಸೇವೆ ಪೂರೈಸಿದ್ದು ಒಂದು ರೀತಿಯ ಪವಾಡವೇ ಸರಿ! ಈ ವಿಶ್ವವಿದ್ಯಾಲಯದ ಹತ್ತನೆಯ ಕುಲಪತಿಯವರು ಕರ್ನಾಟಕ ವಿಶ್ವವಿದ್ಯಾಲಯ ಕಾಯ್ದೆಯಾದ ನಂತರ ಕಳೆದ ಇಪ್ಪತ್ತು ವರುಷಗಳಲ್ಲಿ ಎರಡನೆಯ ಅವಧಿಗೆ ಕುಲಪತಿ ಹುದ್ದೆಯಲ್ಲಿ ಮುಂದುವರೆದ ಪ್ರಥಮರಿವರು. ಇಲ್ಲಿ ಒಂದು ಅವಧಿ ಪೂರೈಸುವದೇ, ಅದೂ ಯಶಸ್ವಿಯಾಗಿ ಪೂರೈಸುವುದು, ಹನುಮಂತ ಸಮುದ್ರ ಜಿಗಿದ ಸಾಹಸ ಮಾಡಿದಂತೆ. ಈ ವಿಶ್ವವಿದ್ಯಾಲಯದ ಕುಲಪತಿಯ ಹುದ್ದೆ ಹೂವಿನ ಹಾಸಿಗೆಯೇನೂ ಅಲ್ಲ. ಹೀಗಿದ್ದು ಈ ಆರುವರ್ಷದ ಅವರ ಯಶಸ್ಸಿನ ಗುಟ್ಟೇನು? ಬಹುಶಃ ಇವರು ಯಾವುದೇ ಸಮಸ್ಯೆಯನ್ನು ತಾವಾಗಿ ಸೃಷ್ಟಿಸದೆ, ಯಾವುದೇ ಪಕ್ಷಕ್ಕೆ ಅಂಟಿಕೊಳ್ಳದೆ, ಅಸೂಯೆಯಿಂದ ಮೈದಾಳಿದ ಸಮಸ್ಯೆಗಳನ್ನು ನಿಷ್ಣಾತ ಶಸ್ತ್ರಚಿಕಿತ್ಸಕನಂತೆ, ನೋವಾಗದಂತೆ ಚಿಕಿತ್ಸೆ ಮಾಡಿದ್ದು ಅವರ ಯಶಸ್ಸಿನ ಗುಟ್ಟಾಗಿರಬಹುದು. ಇವರ ದಕ್ಷ ಆಡಳಿತದ ಫಲವಾಗಿ, ವಿಶ್ವವಿದ್ಯಾಲಯದಲ್ಲಿ ಶಾಂತಿ ನೆಲಸಿದೆ. ಆಡಳಿತಾತ್ಮಕ ಬಿಗಿಯಿಂದಾಗಿ ಶೈಕ್ಷಣಿಕ ಉನ್ನತಿ ಸಾಧಿಸಿದೆ. ಕೋಟಿಗಟ್ಟಲೆ ಹಣ ಹರಿದು ಬಂದಿದೆ. ವಿಶ್ವವಿದ್ಯಾಲಯದ ಆರ್ಥಿಕ ಭದ್ರತೆ, ಇವರ ಸಾಧನೆಗಳಲ್ಲೊಂದು. ಇಲ್ಲಿ ಹಣದ ಮುಗ್ಗಟ್ಟು ಕಳೆದ ಆರುವರ್ಷಗಳಲ್ಲಿ ಎಂದೂ ಬಂದಿಲ್ಲ.

ಶಿಕ್ಷಣ ರಂಗದ ಸೇವೆ

ಶಿಕ್ಷಣ ರಂಗದ ಇವರ ಕೊಡುಗೆ ಅಪಾರ. ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ. ಕೇವಲ ಪುಸ್ತಕದ ವಿದ್ಯೆಗಿಂತ ಯುವಕರನ್ನು ಸ್ವಾವಲಂಬಿಗಳನ್ನಾಗಿ

ಮಾಡುವ ಎರಡು ವರ್ಷದ ತಾಂತ್ರಿಕ ಶಿಕ್ಷಣ ರೂಪಿಸಿದ ರೂವಾರಿಗಳಿವರು. ಬಂಗಾಲ ತಾಂತ್ರಿಕ ಶಿಕ್ಷಣ ಸಂಸ್ಥೆಯನ್ನು ವಿಶ್ವವಿದ್ಯಾಲಯದ ಮಟ್ಟಕ್ಕೆ ಎತ್ತರಿಸಲು ಸಾಧ್ಯವೇ ಎಂಬುದನ್ನು ಕಂಡು ಹಿಡಿಯಲು ನೇಮಿತವಾದ ತಜ್ಞರ ಸಮಿತಿಯ ಸದಸ್ಯರಿವರು. ಕರ್ನಾಟಕದಲ್ಲಿ ತಾಂತ್ರಿಕ ವಿಶ್ವವಿದ್ಯಾಲಯ ಸ್ಥಾಪಿಸುವುದು ಸಾಧುವೇ ಸಾಧ್ಯವೇ ಎಂಬ ವಿಷಯದ ತಜ್ಞ ಸಮಿತಿಯ ಸದಸ್ಯರಾಗಿದ್ದಾರೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಆಯ್ಕೆ ಮಾಡುವ ಸಂದರ್ಶಕ ಪ್ರಾಧ್ಯಾಪಕರ ಆಯ್ಕೆ ಸಮಿತಿಯ ಸದಸ್ಯರಾಗಿದ್ದಾರೆ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಮ್ಮ ವಿದ್ಯಾರ್ಥಿಗಳೇಕೆ ಹೆಚ್ಚಾಗಿ ಆಯ್ಕೆಯಾಗುತ್ತಿಲ್ಲವೆಂಬ ಕಾರಣ ಕಂಡು ಹಿಡಿಯುವ ಸಮಿತಿಯ ಸದಸ್ಯರಿವರು. ಹಿಂದುಳಿದ ವಿದ್ಯಾರ್ಥಿಗಳಿಗೆ ಉಚ್ಚ ವಿದ್ಯಾರ್ಥಿವೇತನ ನೀಡುವ ಸಮಿತಿಯ ಸದಸ್ಯರಾಗಿದ್ದಾರೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗ ಪರದೇಶದಲ್ಲಿ ಹೆಚ್ಚಾಗಿ ಶಿಕ್ಷಣ ಪಡೆಯಲು ಆಯ್ಕೆಮಾಡುವ ಸಮಿತಿಯ ಸದಸ್ಯರಾಗಿದ್ದಾರೆ. ಒಂದು ಮಾತಲ್ಲಿ ಹೇಳಬೇಕೆಂದರೆ ಸುಮಾರು ಹದಿನೇಳು ಪ್ರತಿಷ್ಠಿತ ಸಂಸ್ಥೆಗಳಿಗೆ ತಮ್ಮ ಅನುಭವ ಧಾರೆಯೆರೆಯುತ್ತಿದ್ದಾರೆ. ಸುಮಾರು ಇಪ್ಪತ್ತೊಂದು ಸಂಶೋಧನಾತ್ಮಕ ವಿದ್ವತ್ಪೂರ್ಣ ಸ್ವತಂತ್ರ ಪ್ರಬಂಧಗಳನ್ನೂ ಮಂಡಿಸಿ ಪಂಡಿತರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ. ಭೂಮಂಡಲದ ಅನೇಕ ಅಂದರೆ ಅಮೇರಿಕಾ, ಇಂಗ್ಲಂಡ, ಸಿಂಗಾಪೂರ, ಮಲೇಶಿಯಾ, ವೆಸ್ಟ ಇಂಡೀಜ, ಬ್ರಾಝಿಲ್, ಗಯಾನಾ, ಮಾಲ್ಟಾ ವಿಶ್ವವಿದ್ಯಾಲಯಗಳಲ್ಲಿ ಅಲ್ಲದೆ ಭಾರತದ ಅನೇಕ ವಿಶ್ವವಿದ್ಯಾಲಯಗಳಲ್ಲಿ ತಾಂತ್ರಿಕ ವಿಷಯಗಳ ಮೇಲೆ ವ್ಯಾಖ್ಯಾನ ನೀಡಿದ್ದಾರೆ. ಆಕಾಶವಾಣಿ ದೂರದರ್ಶನಗಳಲ್ಲಿ ಮಹತ್ವಪೂರ್ಣ ವ್ಯಾಖ್ಯಾನ ನೀಡಿದ್ದಾರೆ. ಅನೇಕ ಭಾಷೆಗಳಲ್ಲಿ ಪ್ರಸಿದ್ಧ ವಾಗ್ಮಿಗಳೆನಿಸಿದ್ದಾರೆ.

ಸಾಂಸ್ಕೃತಿಕ ರಂಗಕ್ಕೆ ಇವರ ಕೊಡುಗೆ

ಸಾಂಸ್ಕೃತಿಕ ರಂಗದಲ್ಲಿಯ ಇವರ ಕೊಡುಗೆ ಉಲ್ಲೇಖನೀಯ. ಕನ್ನಡ ಆಂಗ್ಲ ಭಾಷೆಗಳಲ್ಲಿ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಕೆಲವೊಮ್ಮೆ ಅಭಿನಯಿಸಿದ್ದಾರೆ. ಇವುಗಳಲ್ಲಿ "ಅಂಗುಲಿಮಾಲಾ" ಎಂಬ ನಾಟಕವನ್ನು ಉದಾಹರಿಸಬಹುದು. ಹುಟ್ಟಾ ಜಾನಪದ ಕಲಾವಿದರಿವರು. ಇವರ ಭಾಷಣ ರಸದೌತಣ. ಆಡು ಮುಟ್ಟದ ಗಿಡವಿಲ್ಲ, ಗೌಡರು ಕೈಯಾಡಿಸದೇ ಇರುವ ರಂಗಗಳಿಲ್ಲ ಎಂದು ಹೇಳಬಹುದು. ಯಾವದೇ ವಿಷಯದಲ್ಲಿ ಅಧಿಕಾರ ವಾಣಿಯಿಂದ ಮಾತಾಡುವ ಹಿರಿಮೆ ಇವರದು. ನಿರರ್ಗಳ, ಸೋನೆಯಂತೆ ಸುರಿವ ಇವರ ಮಾತು ಕೇಳುವದೇ ಆನಂದ. ಒಂದು ರೀತಿಯಿಂದ ಇವರು ಭಾರತೀಯ ಸಂಸ್ಕೃತಿಯ ಸಂಚಾರಿ ರಾಯಭಾರಿಯೆಂದರೂ ಸಲ್ಲುವುದು.

ಬಡವರ ಬಂಧು

ಗೌಡರ ಎಲ್ಲ ಶೈಕ್ಷಣಿಕ ಸಾಧನೆಗಳಿಗಿಂತ ಬಡವರ ವಿಷಯವಾಗಿ - ಅದರಲ್ಲೂ ತುಳಿತಕ್ಕೆ ಒಳಗಾದವರ ವಿಷಯವಾಗಿ - ಇವರಲ್ಲಿರುವ ಕಳಕಳಿ ಮೆಚ್ಚುವಂತಹದು. ಇವರ ಕಾಲಾವಧಿಯಲ್ಲಿ ಈ ಜನಾಂಗಗಳಿಗೆ ಅವರಿಗೆ ಸಲ್ಲಬೇಕಾದ ಕಾಯಿದೆಬದ್ಧ ಮಿತಿಯನ್ನು ಮೀರಿಯೂ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಇವರ ಕೊಡುಗೆ

ದಶಕದಿಂದ ಬೆಳಗಾವಿಯಲ್ಲಿ ಭೂಮಿ ಸಂಪಾದಿಸಲು ಶಕ್ತವಾಗದೆ ಇದ್ದಾಗ ಇವರ ಕಾಲಾವಧಿಯಲ್ಲಿ ಬೆಳಗಾವಿಯ ವ್ಯಾಸಂಗ ವಿಸ್ತರಣಾಯೋಜನೆಗೆ ಸುಮಾರು ಐದುನೂರು ಎಕರೆ ಭೂಮಿ ದೊರಕಿಸಿ ಅದು ಕೆಲವೇ ಅವಧಿಯಲ್ಲಿ ವಿಶ್ವವಿದ್ಯಾಲಯದ ಮಟ್ಟ ತಲುಪುವ ಕಾರ್ಯ ಸಾಧಿಸಿದ್ದಾರೆ. ವಿಜಾಪುರದಲ್ಲಿ ಅಲ್ಪಬೆಲೆಗೆ ಎರಡುನೂರು ಎಕರೆ ಭೂಮಿ ದೊರಕಿಸಿ ಅಲ್ಲಿಯ ವಿಸ್ತರಣಾ ಯೋಜನೆಯ ರೂವಾರಿಗಳಾಗಿದ್ದಾರೆ. ಇಡೀ ಏಶಿಯಾದಲ್ಲಿಯೇ ಪ್ರಥಮವೆನಿಸುವ ಸುತ್ತು ಮೈದಾನದ ಕ್ರೀಡಾಂಗಣ ಕಟ್ಟಲು (ಅತ್ತಿಕೊಳ್ಳದಲ್ಲಿ) ಹಣ ದೊರಕಿಸಿ ಕಾರ್ಯಗತಗೊಳಿಸಲು ಅಸ್ತಿಭಾರ ಹಾಕಿದ್ದಾರೆ. ಸುಸಜ್ಜಿತ ಅತಿಥಿಗೃಹ, ಸಭಾಗೃಹ ನಿರ್ಮಿಸಿ, ಅಂತರವಿಶ್ವವಿದ್ಯಾಲಯಗಳು ತಮ್ಮ ಸಮ್ಮೇಲನಗಳನ್ನು ಯಶಸ್ವಿಯಾಗಿ ನಡೆಸಲು ಅನುಕೂಲ ಕಲ್ಪಿಸಿದ್ದಾರೆ. ವೇಮನ ಪೀಠಕ್ಕೆ ಚಾಲನೆ ಇತ್ತಿದ್ದಾರೆ. ಕನಕಪೀಠ ಇವರ ಕಾಲದಲ್ಲಾಗಿದೆ. ಪ್ರಸಾರಾಂಗ ಹಾಗೂ ಮುದ್ರಣ ವಿಭಾಗ ನವೀಕರಿಸಿದ್ದಾರೆ. ಇತ್ತೀಚೆಗೆ ಕುಲಪತಿಗಳ ಸೇವಾ ಅವಧಿಯನ್ನು ಐದು ವರುಷಗಳ ಒಂದು ಸರತಿಗೆ ನಿಗದಿಪಡಿಸುವ ಆವಶ್ಯಕತೆ ಬಗೆಗೆ ಇರುವ ಸಮಿತಿಯ ವರದಿ ಸಲ್ಲಿಸುವ ಹೊಣೆ ಹೊತ್ತಿದ್ದಾರೆ.

ಈ ಎಲ್ಲ ಸಾಧನೆಗಳ ಫಲವಾಗಿ ಪ್ರಶಸ್ತಿಗಳು ಇವರನ್ನು ಹುಡುಕಿಕೊಂಡು ಬರುತ್ತಲಿವೆ. ಕರ್ನಾಟಕ ಸರ್ಕಾರ ಇವರಿಗೆ ಶಿಕ್ಷಣ ರಂಗಕ್ಕೆ ಇವರು ಸಲ್ಲಿಸಿದ ಸೇವೆಯನ್ನು ಗುರುತಿಸಿ ರಾಜ್ಯೋತ್ಸವ ಪ್ರಶಸ್ತಿಯನ್ನಿತ್ತು ಗೌರವಿಸಿದೆ. ಅಲ್ಲದೆ ಇಡೀ ನಾಡಿನಲ್ಲಿ ಪ್ರತಿಷ್ಠಿತ ಪ್ರಶಸ್ತಿಯಾದ "ಪ್ರಣವಾನಂದ ಪ್ರಶಸ್ತಿ'' ಇವರಿಗೆ ಲಭಿಸಿರುವದು ಇವರ ಸೇವೆಯ ಹೆಗ್ಗುರುತಾಗಿದೆ.

ಕೊನೆಯದಾಗಿ ಇವರ ವ್ಯಕ್ತಿತ್ವವನ್ನು ಪಲ್ಮಿಡಿಯ ಶಾಸನದ ಸಾಲುಗಳನ್ನು ಅಲ್ಪ ಬದಲಾವಣೆಯೊಂದಿಗೆ ಹೀಗೆ ವರ್ಣಿಸಬಹುದು. ಇವರು:

ಸಾಧುಂಗೆ ಸಾಧು
ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯೀತನ್
ಕಲಿಯುಗ ವಿಪರೀತನ್
ಪೆರರಾರುಂ ಅಲ್ಲ ಡಾ. ರಾಮೇಗೌಡಂ

ಅಂಜಿಕೆ ಅರಿಯದ ಗೌಡರು ಇನ್ನೂ ಎತ್ತರಕ್ಕೇರಲಿ, ದೀರ್ಘಾಯುಗಳಾಗಲಿ, ಈ ದಂಪತಿಗಳು ನಡೆವ ದಾರಿಯಲ್ಲಿ ಹೂ ಹಾಸಿರಲಿ ಎಂಬ ಹಾರೈಕೆಯೊಂದಿಗೆ ಈ ನನ್ನ ನುಡಿಗೆ ಮಂಗಳ ಹಾಡುವೆ.

❋ ❋ ❋

ಅಪರೂಪ ವ್ಯಕ್ತಿತ್ವದ ಡಾ. ಎಸ್. ರಾಮೇಗೌಡರು

ಸೋಮಶೇಖರ ಇಮ್ರಾಪುರ

ಸಂಚಾರಿ ಜ್ಞಾನ ಭಾಂಡಾರವೆಂದೇ ಹೆಸರಾಗಿರುವ ಡಾ. ಎಸ್. ರಾಮೇಗೌಡರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕುಲಪತಿಯಾಗಿ ಬಂದ ಪ್ರಥಮದಲ್ಲೇ ಒಬ್ಬ ಕವಿ ಸಾಹಿತಿ ಎಂಬ ನಾತೆಯಿಂದ ಅವರ ಪರಿಚಯವಾಗಿ ಆರು ವರ್ಷಗಳು ಕಳೆದಿವೆ. ಈ ಹಿಂದಿನ ಯಾವ ಕುಲಪತಿಗಳಲ್ಲಿಯೂ ಇರದ ಕೆಲವೊಂದು ಗುಣ ವಿಶೇಷಗಳಿದ್ದು ಆಕರ್ಷಿತನಾದುದರಿಂದಲೇ ಡಾ. ಎಸ್. ರಾಮೇಗೌಡರು ನನ್ನ ದೃಷ್ಟಿಯಲ್ಲಿ ಒಬ್ಬ ಸ್ನಿಗ್ಧ-ಸ್ನೇಹಪರ ವ್ಯಕ್ತಿತ್ವದ ಅಗಾಧ ಸಿದ್ಧಿಯೆನಿಸಿದ್ದಾರೆ. ಆ ಕಾರಣದಿಂದಲೋ ಏನೋ ಸತ್ಯಮುಖಿಯಾದ ನನ್ನ ಗುದ್ದಾಟದ ಕೆಲವು ಗುದ್ದಲಿಗಳು ಜಂಗು ತಿಂದವು. ಅದೀಗ ನೆನಪು ಮಾತ್ರ.

ಡಾ. ಎಸ್. ರಾಮೇಗೌಡರು ತಮ್ಮ ಶಿಕ್ಷಣ ಕ್ಷೇತ್ರದಲ್ಲಿ ಸಾಧಿಸಿದ ಪಾಂಡಿತ್ಯ ಪ್ರತಿಭೆಗಳು, ಮತ್ತು ಅವರ ಹುಟ್ಟುಗುಣವಾದ ಸ್ನೇಹಪರತೆ ಹಾಗೂ ತಮ್ಮ ಅಖಂಡ ವ್ಯಕ್ತಿತ್ವದೊಂದಿಗೇ ರಕ್ತಗತವಾಗಿ ರೂಢಿಸಿಕೊಂಡು ಬಂದಿರುವ ಮೇಲು-ಕೀಳಿಲ್ಲದ ಮಾನವೀಯ ಮೌಲ್ಯ ಸಂಪನ್ನತೆ, ಸದಾ ಹಸನ್ಮುಖವಾದ ಪಾರದರ್ಶಕ ವ್ಯಕ್ತಿತ್ವ, ಹುದ್ದೆಯ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳದೇ ಸಾದಾ-ಸೀದಾ ಉತ್ಸಾಹಭರಿತ ನಡೆ ನುಡಿಗಳಿಂದ ಸ್ನೇಹ-ಪ್ರೀತಿ ಸಮಾನತೆಗಳನ್ನು ಮೆರೆಯುತ್ತ ಬಂದ ಡಾ. ಎಸ್. ರಾಮೇಗೌಡರು ತಾವು ನಡೆದುಬಂದ ಮುಳ್ಳಿನ ಹಾದಿಯ ನೋವನ್ನು ಮರೆತಿಲ್ಲವಾದ್ದರಿಂದಲೇ ದುರ್ಬಲರು ಅಸಹಾಯಕರ ಮನದಲ್ಲಿ ಚಿರಸ್ಥಾಯಿಯಾಗಿದ್ದಲ್ಲಿ ಉತ್ಪ್ರೇಕ್ಷೆಯಿಲ್ಲ.

ಸದಾ ಸಂಚಾರ ಹಾಗೂ ಸದಾ ಮಾತುಗಾರಿಕೆಯಲ್ಲಿ ಔನ್ನತ್ಯವನ್ನೇ ಸಾಧಿಸಿದ ಕುಲಪತಿ ಡಾ. ಎಸ್. ರಾಮೇಗೌಡರು ಆಡಳಿತಗಾರರಾಗಿ ಶಿಕ್ಷಣವೇತ್ತರಾಗಿ ತಮ್ಮ ಗಾರುಡಿಗ ವ್ಯಕ್ತಿತ್ವದಿಂದ ಅಂಥ ಯಾವ ಗೊಂದಲ ರಾದ್ಧಾಂತಗಳಿಗೂ ಆಸ್ಪದವಿಲ್ಲದಂತೆ ಆಡಳಿತ ಚುಕ್ಕಾಣಿ ಹಿಡಿದದ್ದು ನಿಜಕ್ಕೂ ಅವರ ಕರ್ತೃತ್ವಶಕ್ತಿಯ ಪವಾಡವೆಂದೇ ಹೇಳಬೇಕಾಗುತ್ತದೆ.

ಪ್ರಸಂಗ, ಸಂದರ್ಭಾನುಸಾರವಾಗಿ ಅವರಲ್ಲಿ ಪುಟಿದೇಳುವ ರಭಸ, ಸಿಟ್ಟು, ಗಂಭೀರತೆ, ಛಲ ವಿಷಣ್ಣತೆಗಳೆಲ್ಲವೂ ಭೋರ್ಗರೆವ ನದಿ ತಕ್ಷಣವೇ ಸಮಪಾತಳಿಗಿಳಿದು ಪ್ರಶಾಂತವಾದಂತೆ ಕ್ಷಣಮಾತ್ರದಲ್ಲೇ ಅವೆಲ್ಲವೂ ಪ್ರೀತಿ, ವಿಶ್ವಾಸ, ಸ್ನೇಹ, ಆತ್ಮೀಯತೆ, ಅನುಕಂಪ, ವಿನೋದ, ಹಾಸ್ಯಾದಿಗಳಲ್ಲಿ ಪರ್ಯಾವಸಾನಗೊಳಿಸಬಲ್ಲ ಸ್ಥಿತಿಸ್ಥಾಪಕತ್ವ ಭಾವಗುಣವೇ ಡಾ. ಎಸ್. ರಾಮೇಗೌಡರನ್ನು ಮೆಚ್ಚದವರೂ ಮೆಚ್ಚುವಂತೆ ಮಾಡಿದೆ. ಅಷ್ಟೇ ಅಲ್ಲ ಪ್ರೀತಿಜನ್ಯ ಗೌರವವನ್ನೂ ಕುದುರಿಸಿದೆ.

ಯಾವುದೇ ವಿಭಾಗಕ್ಕೆ ಭೇಟಿಕೊಟ್ಟಾಗ ಕುಲಪತಿಗಳಾದವರು ನೆಟ್ಟಗೇ ಆ ವಿಭಾಗದ ಮುಖ್ಯಸ್ಥರ ಕುರ್ಚಿಗೇ ಕುಕ್ಕರಿಸಿದ ಕುಲಪತಿಗಳನ್ನು ಕಂಡ ನನಗೆ ಡಾ. ಎಸ್. ರಾಮೇಗೌಡರು ಅದಕ್ಕೆ ಅಪವಾದವಾಗಿದ್ದಾರೆ. ಅವರವರ ಸ್ಥಾನ ಗೌರವಕ್ಕಾಗುವ ಬೆಲೆಯನ್ನರಿತ ಮೇಲಾಧಿಕಾರಿಗಳು ಬಹಳೇ ಅಪರೂಪ.

ಡಾ. ಎಸ್. ರಾಮೇಗೌಡರದು ಒಂದರ್ಥದಲ್ಲಿ ಸಂಕೀರ್ಣ ವ್ಯಕ್ತಿತ್ವ. ಅವರ ಅಭಿರುಚಿಗಳು ಸಾಹಿತ್ಯ, ಕಾವ್ಯ, ನಾಟಕದಿಂದ ಹಿಡಿದು ಸಂಗೀತ, ನೃತ್ಯ - ಅಷ್ಟೇ ಅಲ್ಲ ಪಾಕಶಾಸ್ತ್ರದವರೆಗೂ ತಬ್ಬಿಕೊಳ್ಳುತ್ತವೆ. ಕುಲಪತಿಯಾಗಿದ್ದರೂ ಸಾಮಾನ್ಯರಲ್ಲಿ ಸಾಮಾನ್ಯರಂತೆ ಬೆರೆತುಕೊಳ್ಳುವ ಅಪೂರ್ವ ಗುಣಹೊಂದಿದ ಡಾ. ಎಸ್. ರಾಮೇಗೌಡರು ಈ ದೇಶದ ಎಂಥ ಉನ್ನತ ಹುದ್ದೆಗೇರಿದರೂ ಅವರ ಹೆಸರನ್ನೂ ಹಸಿರಾಗಿಸುವ ಗುಣವೊಂದೇ ಅದು ಸ್ನೇಹಪರತೆ.

ಅನೇಕರು ಪರಿಭಾವಿಸಿದಂತೆ ಹೊಗಳಿಕೆಗೆ ಹಸನ್ಮುಖರಾಗುತ್ತಾರೆಂಬ ಡಾ. ಎಸ್. ರಾಮೇಗೌಡರು ದೇವರೇನೂ ಅಲ್ಲ. ಅವರು 'ಸತ್ಯ-ಶಿವಂ-ಸುಂದರಂ' ಆರಾಧಕರು ಚಿಂತಕರು ಅಂತೆಯೇ ಸಹಜವೋ ಎಂಬಂತೆ ದೈವಮೂಲ, ಕೆಲವು ಉದಾತ್ತ ಮಾನವೀಯ ಗುಣಗಳು ಅವರ ಧೀಮಂತ ವ್ಯಕ್ತಿತ್ವಕ್ಕೆ ಜೇನುಗಟ್ಟಿವೆ. ಅವರಿಗೆ ಸರ್ವಂದದ ಯಶ ಕೋರುತ್ತೇನೆ.

❊ ❊ ❊

ಡಾ. ರಾಮೇಗೌಡರು ನಾ ಕಂಡಂತೆ

ಸತೀಶ ತಗರಪುರ

ಡಾ. ರಾಮೇಗೌಡ ಎರಡು ಅವಧಿಗಳ ಸಾರ್ಥಕ ಸೇವೆಯ ನಂತರ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪದವಿಯಿಂದ ಈ ತಿಂಗಳ ಕೊನೆಯಲ್ಲಿ ನಿವೃತ್ತಿಯಾಗಲಿದ್ದಾರೆ. ಕಳೆದ ಐದು ವರ್ಷಗಳಿಂದ ಅವರನ್ನು ಬಲ್ಲ ನನಗೆ, ಈಗ ಅಧಿಕಾರ ಬಿಡುವಾಗ ಅವರ ಬಗ್ಗೆ ನನ್ನಲ್ಲಿರುವಂಥ ಅನಿಸಿಕೆಗಳನ್ನು ಯಾವ ಸಂಕೋಚವೂ ಇಲ್ಲದೆ ಹೇಳಬಹುದೆನಿಸುತ್ತದೆ.

ಡಾ. ರಾಮೇಗೌಡರು ಒಬ್ಬ ವರ್ಣಮಯ ವ್ಯಕ್ತಿ. ಸಮಗ್ರ ಜೀವನದ ಬಗ್ಗೆ ಪ್ರೇಮ ಅವರ ನಿಲುವನ್ನು ಎತ್ತರಿಸಿದೆ. ಸಾಹಿತ್ಯಪ್ರೇಮ, ಶೈಕ್ಷಣಿಕಚಿಂತನ, ಪರಿಸರದ ಬಗ್ಗೆ ಒಲವು, ಮಾನವೀಯ ಮೌಲ್ಯಗಳ ಬಗ್ಗೆ ಸ್ಪಂದನ, ವೈಜ್ಞಾನಿಕ ಸಂಶೋಧನೆ, ಸಮತೋಲ ಆಡಳಿತ ಹೀಗೆ ಹಲವಾರು ಹರವುಗಳಲ್ಲಿ ತಮ್ಮನ್ನು ಜ್ವಲಂತವಾಗಿ ತೊಡಗಿಸಿಕೊಂಡ ರೀತಿಗಳಿಂದ ನಾನು ಪ್ರಭಾವಿತನಾಗಿದ್ದೇನೆ. ಒಬ್ಬ ಕುಲಪತಿ ತನ್ನ ವಿಶ್ವವಿದ್ಯಾಲಯದ ಬಗ್ಗೆ ಚಿಂತಿಸುವುದು, ಅದರ ಸರ್ವಾಂಗೀಣ ಪ್ರಗತಿಗಾಗಿ ಹಂಬಲಿಸುವದು, ವಿದ್ಯಾರ್ಥಿ ಸಮೂಹದ ಏಳಿಗೆಗಾಗಿ ಪ್ರಯತ್ನಿಸುವುದು, ಸಾಮಾನ್ಯ ನಮ್ಮ ಈ ಪರಿಕಲ್ಪನೆಯನ್ನೂ ಮೀರಿನಿಂತವರು ಡಾ. ರಾಮೇಗೌಡರು. ಕಾವ್ಯವನ್ನು ಪ್ರೀತಿಸಿ, ನಿಸರ್ಗಪ್ರೇಮವನ್ನು ಬೆಳೆಯಿಸಿಕೊಂಡು, ವಿಶ್ವದ ಸಕಲರನ್ನೂ ಸಹೃದಯತೆಯಿಂದ, ಆತ್ಮೀಯವಾಗಿ ಕಂಡವರು. ತನ್ಮೂಲಕ ತಮ್ಮ ವಾತ್ಸಲ್ಯ ಬಾಹುಗಳನ್ನು ಚಾಚಿ ಜೀವನಕ್ಕೆ ಒಂದು ಸೊಗಸನ್ನು ತಂದುಕೊಂಡವರು. ಪ್ರಾಯಶಃ ಅವರ ಈ ಜನಪ್ರಿಯ ಬೆಳವಣಿಗೆಯನ್ನು ಕಂಡು ಕರುಬಿದವರೂ ಇರಬಹುದು. ಯಾವುದೇ ವ್ಯಕ್ತಿ ತನ್ನ ಸ್ಥಾನಕ್ಕೆ ಮಾತ್ರ ಅಂಟಿಕೊಂಡು ಕಾರ್ಯನಿರ್ವಹಿಸಿದರೆ ಮಾತ್ರ ಆತನ ಸಂಸ್ಥೆಗೆ ಬಲಕೊಡಬಲ್ಲನೆಂಬ ಮಾತನ್ನು ಹುಸಿಗೊಳಿಸಿದ್ದಾರೆ ನಮ್ಮ ಪ್ರೀತಿಯ ಗೌಡರು. ಬೆಂಗಳೂರಿನಲ್ಲಿರಲಿ, ದಿಲ್ಲಿಯಲ್ಲಿರಲಿ ಅಥವಾ ವಿದೇಶ ಪ್ರವಾಸದಲ್ಲಿರಲಿ ವಿಶ್ವವಿದ್ಯಾಲಯದ ವಿಕಾಸ, ಹೊಸನೋಟದ ಚಿಂತಕರಾಗಿ, ೬ ವರ್ಷಗಳ ಸಮೃದ್ಧ ಕಾಯಕ ಮಾಡಿದ್ದಾರೆ. ಈ ಬಗ್ಗೆ ಪ್ರತಿಯೊಬ್ಬ ಕನ್ನಡಿಗ ಅವರನ್ನು ಅಭಿನಂದಿಸಲೇಬೇಕು.

ಹಳ್ಳಿಯ ಹೈದನಾಗಿ ಬೆಳೆದು, ವಿಶ್ವದಾದ್ಯಂತ ಪರ್ಯಟನೆ ಮಾಡಿ, ಕಲಿತು, ಬೋಧಿಸಿ, ಸಂಶೋಧನೆ ಕೈಗೊಂಡು, ರಚನಾತ್ಮಕ ಕಾಯಕ ವಿಧಾಯಕರಾಗಿ, ಗೌರವಿಸಲ್ಪಟ್ಟು ಔನ್ನತ್ಯ ಪಡೆದರೂ ಹಳ್ಳಿಗನ ಮುಗ್ಧತೆಯನ್ನೂ ಸಹಜ ಜೀವನ ಪ್ರೇಮವನ್ನು ಉಳಿಸಿಕೊಂಡು ಬಂದವರು. ಸೊಗಸಾದ ಊಟ, ನಿರ್ಮಲ ವಾತಾವರಣ, ಉತ್ತಮರ ಸ್ನೇಹ, ಸದಾ ಡಾ. ರಾಮೇಗೌಡರಿಗೆ ಪ್ರಿಯ. ಅದನ್ನೇ ಅವರು ಇತರರಿಗೂ ಉಣಬಡಿಸಿದ್ದಾರೆ. ಕಷ್ಟಪಟ್ಟು, ಪ್ರಯತ್ನಿಸಿ ಪಡೆದ ಶೈಕ್ಷಣಿಕ ಪದವಿಗಳು ಹಲವಾರು. ಗಳಿಸಿದ ಜ್ಞಾನ ಅಪಾರ. ಅವರತ್ತ ಧಾವಿಸಿಬಂದ ಪ್ರಶಸ್ತಿಗಳು ಬಹುಮುಖವಾದುವು. ಅನೇಕ ಶೈಕ್ಷಣಿಕ ರೂಪು ನೀತಿಗಳ ಸಮಿತಿಗಳ ನೇತಾರರಾಗಿ, ರಾಜ್ಯೋತ್ಸವ ಪ್ರಶಸ್ತಿ ವಿಜೇತರಾಗಿ, ಪ್ರಣವಾನಂದ ಪ್ರಶಸ್ತಿಯ ಹಿರಿಮೆಗೆ ಪಾತ್ರರಾಗಿ ಡಾ. ರಾಮೇಗೌಡರು ನಮ್ಮೆಲ್ಲರ ಹೆಮ್ಮೆಯ ವ್ಯಕ್ತಿಯಾಗಿದ್ದಾರೆ.

ಕ್ರೀಡೆಗಳ ಬಗ್ಗೆ ಅವರಿಗಿರುವ ಆಸಕ್ತಿ ಹಾಗೂ ಕಳಕಳಿ ನನ್ನನ್ನು ಅವರ ತೀರ ಹತ್ತಿರಕ್ಕೆ ಕರೆದುಕೊಂಡು ಹೋಗಿದೆ. ಈ ನಿಟ್ಟಿನಲ್ಲಿ ನನ್ನೊಡನೆ ಆತ್ಮೀಯವಾಗಿ ಸಹಕರಿಸಿ, ಮಾರ್ಗದರ್ಶನ ನೀಡಿ ವಿಶ್ವವಿದ್ಯಾಲಯದ ಹಲವಾರು ಕ್ರೀಡಾನೀತಿಗಳಿಗೆ ಹಾಗೂ ಹಿರಿಮೆಗಳಿಗೆ ಕಾಯಕಲ್ಪ ನೀಡಿದವರು ಡಾ. ರಾಮೇಗೌಡರು. ಕ್ರೀಡಾಪ್ರೇಮಿ ಶಾಸಕ ಶ್ರೀ ಬಸವರಾಜ ಹೊರಟ್ಟಿ ಹಾಗೂ ಡಾ. ರಾಮೇಗೌಡರ ನೇತೃತ್ವದಲ್ಲಿ ಕಳೆದೆರಡು ಮೂರು ವರ್ಷಗಳಲ್ಲಿ ವಿಶ್ವವಿದ್ಯಾಲಯದ ಕ್ರೀಡಾಪಟುಗಳು ಹೊಸ ಎತ್ತರವನ್ನು ತಲುಪಿದ್ದಾರೆ. ಇತ್ತೀಚಿನ ದಕ್ಷಿಣವಲಯ ಅಂತರವಿಶ್ವವಿದ್ಯಾಲಯ ಕ್ರಿಕೆಟ್ ಹಾಗೂ ವಾಲಿಬಾಲ್ ಪ್ರಶಸ್ತಿಗಳು ನಮ್ಮ ಕ್ರೀಡಾ ಘನತೆಯ ಕುರುಹುಗಳು. ಇವೆಲ್ಲವುಗಳಿಗೆ ತಿಲಕಪ್ರಾಯ ನಮ್ಮ ಯೋಜಿತ ನವೀನ ಕ್ರೀಡಾಂಗಣ - ಅಪರೂಪ ವಿನ್ಯಾಸದ ಕ್ರೀಡಾಂಗಣದ ಕನಸುಗಾರ ನಮ್ಮ ಕುಲಪತಿಗಳು. ನಿಸರ್ಗದತ್ತವಾದ ಪರಿಸರವನ್ನು ನಮಗೆ ಅನುಕೂಲವಾಗುವಂತೆ ಬಳಸಿಕೊಂಡು, ಡಾ. ರಾಮೇಗೌಡರು ಹೊಸ ತಿರುವು ನೀಡಿದ್ದಾರೆ. ಅದು ಪೂರ್ಣಗೊಂಡಾಗ ನಮ್ಮ ಕ್ರೀಡಾ ಶಕ್ತಿಯ ಹೊಸ ಅಧ್ಯಾಯವೊಂದು ಮೂಡಿಬರಲಿದೆ. ಹಾಗೂ ಈ ಭಾಗದ ಕ್ರೀಡಾಸಕ್ತರ, ಜನತೆಯ ಆಶೋತ್ತರಗಳ ದೀಪವಾಗಿ ಪ್ರಜ್ವಲಿಸಲಿದೆ. ಕ್ರೀಡಾ ಮನೋಭಾವ ಪ್ರತಿಯೊಬ್ಬನ ಜೀವಿತದ ಅವಿಭಾಜ್ಯ ಅಂಗವಾಗಬೇಕೆನ್ನುವ ಅವರ ಹಂಬಲ ನನಸಾದರೆ ನಮ್ಮ ಯುವ ಪೀಳಿಗೆಯ ಭವಿಷ್ಯ ಸುಭದ್ರ. ಈ ದಿಶೆಯಲ್ಲಿ ಡಾ. ರಾಮೇಗೌಡರು ಸಕಲ ಕ್ರೀಡಾ ಪ್ರೇಮಿಗಳ ಹೃದಯದಲ್ಲಿ ಚಿರಸ್ಥಾಯಿ.

ಚಿಕ್ಕಂದಿನಿಂದಲೂ ಭಾಷಣ ಸ್ಪರ್ಧೆಗಳ ಗೀಳು ಹತ್ತಿಸಿಕೊಂಡ, ಹಲವಾರು ಗೌರವಗಳನ್ನು ಗಳಿಸಿದ ಡಾ. ರಾಮೇಗೌಡರ ಮಾತು ಸಂಮೋಹಿನಿ ಇದ್ದಂತೆ. ಅವರ ಅಸ್ಖಲಿತ ವಾಣಿ, ಮಾತಿನ ಓಘ, ಮಾತಿನ ಕೌಶಲ್ಯ, ಪ್ರಶಂಸಾರ್ಹ. ಯಾವುದೇ ವಿಷಯ ಇರಲಿ, ಅದನ್ನು ಸಮರ್ಥವಾಗಿ ಪ್ರತಿಪಾದಿಸುವಾಗ ಡಾ. ರಾಮೇಗೌಡರು ತಲ್ಲೀನತೆಯ ಸಾಗರದಲ್ಲಿ ಮುಳುಗಿ ವಿಶಿಷ್ಟಶೈಲಿಯೊಂದಿಗೆ ನಮ್ಮನ್ನೆಲ್ಲ ಮಂತ್ರ ಮುಗ್ಧರನ್ನಾಗಿ ಮಾಡುತ್ತಾರೆ.

ಜ್ಞಾನ ಜಿಜ್ಞಾಸು ವಿದ್ಯಾರ್ಥಿ - ಶಿಕ್ಷಕ - ಸಂಶೋಧಕ - ಶಿಕ್ಷಣ ತಜ್ಞ - ಕುಲಪತಿ ಧೀಮಂತರೊಡನೆ ಒಡನಾಟ - ಜೀವನದ ಹಲವಾರು ವಿಸ್ತಾರಗಳನ್ನು ಮೇಳವಿಸಿಕೊಂಡು ಡಾ. ರಾಮೇಗೌಡರು ತಮ್ಮದೇ ಆದ ಒಂದು ವಿಶಿಷ್ಟ ವ್ಯಕ್ತಿತ್ವವನ್ನು ರೂಪಿಸಿಕೊಂಡಿದ್ದಾರೆ. ಆದರೆ ಇವೆಲ್ಲವನ್ನೂ ಮೀರಿಸಿದ ಅವರ ಸ್ನೇಹವನ್ನು ಅವರನ್ನು ಎಲ್ಲರ ಹತ್ತಿರಕ್ಕೂ ತಂದಿದೆ. ತಮ್ಮದೇ ಆದ ದಂತಗೋಪುರದಲ್ಲಿ ವಾಸಿಸುವ ಅನೇಕ ದೊಡ್ಡವರನ್ನು ನಾವು ಕಾಣುತ್ತೇವೆ. ಆದರೆ ಡಾ. ರಾಮೇಗೌಡರು ತಮ್ಮ ಹೃದಯ ವೈಶಾಲ್ಯದಿಂದ ಜನಸಾಮಾನ್ಯರನ್ನು, ಬಡವರನ್ನು ಪ್ರೀತಿಸಿ, ಸ್ನೇಹಜೀವಿಯಾಗಿ ಬದುಕಿದ್ದಾರೆ. ಅದು ಅವರ ಅತ್ಯಂತ ಶ್ರೇಷ್ಠ ಸಾಧನೆ ಎಂದು ನಾನು ಭಾವಿಸಿಕೊಂಡಿದ್ದೇನೆ.

ಅವರು ಇನ್ನೂ ಹೊಸದಿಗಂತಗಳನ್ನು ದಾಟಬಲ್ಲ, ನಾಡಿಗೇ ಭೂಷಣ ಪ್ರಿಯರಾಗಬಲ್ಲ ವ್ಯಕ್ತಿ ಕ್ರೀಡಾಪ್ರೇಮಿಯಾಗಿ ನಾನು ಬಯಸುವುದಿಷ್ಟೆ "Dr Ramegowda is a jolly good fellow a many splendoured personality May his 'Tribe' increase, so that the world will be a beautiful place to live in, in the years to follow'

ಡಾ. ರಾಮೇಗೌಡರ ವ್ಯಕ್ತಿತ್ವ ಇನ್ನೂ ಬಹುಮುಖವಾಗಿ ಬೆಳೆದು ಸಾಗರದ ವಿಸ್ತಾರವನ್ನು, ಹಿಮಾಲಯದ ಔನ್ನತ್ಯವನ್ನೂ ಪಡೆಯಲಿ.

ಅವರ ಸ್ನೇಹಕ್ಕೆ ನಾನು ಚಿರಋಣಿ

* * *

ವಿಶ್ವಚೇತನ : ಕುಲಪತಿ ಕಂಡ ಕನಸು

ಚಂದ್ರಶೇಖರ ಪಾಟೀಲ

"ಏನ್ರೀ ಸಾಹೇಬ್ರೆ, ಧಾರವಾಡ ಸಾಂಸ್ಕೃತಿಕ ರಾಜಧಾನಿ ಅಂತ ಕರೀತೀರಿ. ಇಲ್ಲಿಯ ಸಾಹಿತ್ಯ, ಸಂಗೀತ, ಕಲಾ ಎಲ್ಲಾ ಜಗತ್ಪ್ರಸಿದ್ಧ ಆಗಿವೆ. ಆದರೆ ಇಲ್ಲಿ ಬಂದು ನೋಡಿದ ಮ್ಯಾಲೆ ಆದರ ಒಂದು ಲಕ್ಷಣವೂ ಕಾಣುತ್ತಿಲ್ಲವಲ್ಲ! ನೀವೆಲ್ಲಾ ನಮ್ಮ ಯೂನಿವರ್ಸಿಟಿಯ ಸಾಹಿತಿಗಳು, ಕಲಾವಿದರು ಏನು ಮಾಡುತ್ತಿದ್ದೀರಿ?"

ಹೀಗೆಂದು ನಮ್ಮನ್ನು ಆತ್ಮೀಯತೆಯಿಂದಲೇ ಝಾಡಿಸಿದವರು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕುಲಪತಿಗಳೆಂದು ನೇಮಕವಾಗಿ ಧಾರವಾಡಕ್ಕೆ ಬಂದ ಡಾ. ರಾಮೇಗೌಡರು. ಮೈಸೂರಿನ ಕೊಳ್ಳೇಗಾಲ ತಾಲ್ಲೂಕಿನ ಗೌಡರು ಈ ಹೊತ್ತಿಗಾಗಲೇ ಧಾರವಾಡದ 'ಸಾಹೇಬ್ರೇ-ಗೀಹೇಬ್ರೇ' ಎಂಬ ಕನ್ನಡವನ್ನು ಕರಗತ ಮಾಡಿಕೊಂಡಿದ್ದರು. ಮೂಲತಃ ಎಂಜಿನಿಯರ್ ಆದ ಡಾ. ರಾಮೇಗೌಡರು ಸಾಹಿತ್ಯ, ಕಲೆಗಳ ಬಗ್ಗೆ ಆಳವಾದ ಅಭಿರುಚಿ ಹೊಂದಿದವರೆಂದು ಒಂದು ವರ್ಷದ ಅವಧಿಯಲ್ಲಿ ನಮಗೆಲ್ಲ ಖಾತ್ರಿಯಾಗಿತ್ತು.

ಅವರು ಹೇಳಿದ್ದು ಖರೇ ಸಂಗತಿಯೇ ಆಗಿತ್ತು. ಧಾರವಾಡ 'ನಗರ'ದಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳು ನಿರಂತರವಾಗಿ ನಡೆಯುತ್ತಿದ್ದರೂ, ಯುನಿವರ್ಸಿಟಿ ಕ್ಯಾಂಪಸ್ಸಿನಲ್ಲಿ ಮಾತ್ರ ಅಂಥವು ಅಪರೂಪವೇ. ರಾಮೇಗೌಡರ ಕಳಕಳಿ ಅಲ್ಲಿಗೇ ಮುಗಿಯಲಿಲ್ಲ. ತಾಬಡ ತೋಬಡ ಎಂಬಂತೆ ಯುನಿವರ್ಸಿಟಿಯ ಮತ್ತು ಸ್ಥಳೀಯ ಕಾಲೇಜುಗಳ ಪ್ರಾಧ್ಯಾಪಕ ಸಾಹಿತಿಗಳೆಲ್ಲ ಸಮಾಲೋಚನೆ ಮಾಡಿ, ಕೆಲಸ ಹಂಚಿಕೊಂಡು ಒಂದು ವೇದಿಕೆ ಸುರುಮಾಡಿಯೇ ಬಿಟ್ಟರು.

ಕಳೆದ ಐದು ವರ್ಷಗಳಿಂದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿಗಳ, ಶಿಕ್ಷಕ ಮತ್ತು ಶಿಕ್ಷಕೇತರ ಸಮುದಾಯದ ನಿರಂತರ ಕ್ರಿಯಾಶೀಲ ಸಾಂಸ್ಕೃತಿಕ ವೇದಿಕೆಯಾಗಿ "ವಿಶ್ವಚೇತನ" ಅಸ್ತಿತ್ವಕ್ಕೆ ಬಂದದ್ದು ಈ ರೀತಿಯಲ್ಲಿ. ಡಾ. ರಾಮೇಗೌಡರು ತಮ್ಮ ಅವಧಿಯ ಪ್ರಾರಂಭದಲ್ಲಿ ಕುಲಪತಿಯಾಗಿ ಕಂಡ ಕನಸು ನನಸಾಗಿ ಅವರ ಅವಧಿಯ

ಇಂದಿನ ಕೊನೆಯ ಹಂತದಲ್ಲಿ ತನ್ನ ವಿಶಾಲ ಭಿತ್ತಿಯ ವೈವಿಧ್ಯಮಯ ಬದುಕನ್ನು ಪಡೆದುಕೊಂಡಿದೆ.

೧೨ ಡಿಸೆಂಬರ್ ೧೯೯೧ರಂದು 'ವಿಶ್ವಚೇತನ'ವನ್ನು ಉದ್ಘಾಟಿಸಿದವರು. ಅಂತಾರಾಷ್ಟ್ರೀಯ ಖ್ಯಾತಿಯ ಧಾರವಾಡದ ಪಂಡಿತ ಮಲ್ಲಿಕಾರ್ಜುನ ಮನಸೂರ ಅವರು. ಸಾವಿರ ರಾಗಗಳ ಸಾಮ್ರಾಟ ಮನಸೂರರ ಜೊತೆಗೆ ಅಂದು ವೇದಿಕೆಯಲ್ಲಿ ರಾರಾಜಿಸಿದವರು ಸಾವಿರ ಹಾಡಿನ ಸರದಾರ ಬಾಳಪ್ಪ ಹುಕ್ಕೇರಿ. ಉತ್ತರ ಕರ್ನಾಟಕದ ಈ ಇಬ್ಬರು ಕಲಾವಿದರ ಅಂದಿನ 'ಜುಗಲಬಂದಿ' ನೋಡುವದಾಗಿತ್ತು, ಕೇಳುವ ಹಾಗಿತ್ತು. ಕರ್ನಾಟಕದ ಈ ಸೀಮೆಯ ಪ್ರಖ್ಯಾತ ಸಾಹಿತಿಗಳನ್ನು, ಕಲಾವಿದರನ್ನು ಆಮಂತ್ರಿಸಿ ಸನ್ಮಾನಿಸುವ ಪರಂಪರೆಯನ್ನು ಹಾಕಿಕೊಂಡು ವಿಶ್ವಚೇತನ ಈವರೆಗೆ ಬರಮಾಡಿಕೊಂಡವರು: ಗಂಗುಬಾಯಿ ಹಾನಗಲ್ಲ, ಏಣಗಿ ಬಾಳಪ್ಪ, ಎನ್ಕೆ ಕುಲಕರ್ಣಿ, ಶಾಂತಾದೇವಿ ಮಾಳವಾಡ, ಪಂಚಾಕ್ಷರಿಸ್ವಾಮಿ ಮತ್ತಿಗಟ್ಟಿ, ಮರಿಯಮ್ಮನ ಹಳ್ಳಿಯ ರಂಗಕಲಾವಿದ ಡಿ. ದುರ್ಗಾದಾಸ ಮುಂತಾದವರು. ಸಾಹಿತ್ಯ, ವಿಮರ್ಶೆ, ನಾಟಕ-ರಂಗಭೂಮಿ, ನೃತ್ಯ, ಸಂಗೀತ, ಜಾನಪದ ಕಲೆ, ಚಿತ್ರಕಲೆ ಹೀಗೆ ಎಲ್ಲ ಕಲಾ ಪ್ರಕಾರಗಳಿಗೂ ಅವಕಾಶವಾಗುವಂತೆ ಕಾರ್ಯಕ್ರಮಗಳು ನಿಯೋಜಿತವಾಗಿವೆ. ಧಾರವಾಡದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಭಾರತ ಜ್ಞಾನ ವಿಜ್ಞಾನ ಸಮಿತಿ, ಸಾಕ್ಷರತಾ ಸಮಿತಿಗಳ ಸಹಯೋಗದಲ್ಲಿ ತೊಗಲುಗೊಂಬೆಯಾಟ, ಬೀದಿನಾಟಕ, ಕೋಲಾಟದ ಹಾಡುಗಳು ಒಂದೇ ಎರಡೇ! ಸ್ಥಳೀಯ ಕಾಲೇಜುಗಳಾದ ಕ.ವಿ.ವಿ. ಸಂಗೀತ ಕಾಲೇಜು, ಕಿಟೆಲ್ ಕಾಲೇಜು, ಜೆ. ಎಸ್.ಎಸ್. ಕಾಲೇಜುಗಳ ವಿದ್ಯಾರ್ಥಿ ಕಲಾವಿದರು ರಂಗುರಂಗಿನ ಸಂಜೆಗಳನ್ನು ನೀಡಿದ್ದಾರೆ. ಸಂಗೀತ ಕಲಾವಿದರಾದ ಎಂ. ವೆಂಕಟೇಶಕುಮಾರ, ಡಿ. ಕುಮಾರದಾಸ, ಬಸವಲಿಂಗಯ್ಯ ಹಿರೇಮಠ ಮುಂತಾದವರು ಗಾನಲಹರಿ ತೇಲಿಸಿದ್ದಾರೆ.

'ವಿಶ್ವಚೇತನ' ಎಂದೂ ಮರೆಯಲಾಗದ ಗಳಿಗೆ, ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಕವಿ ವಿ.ಕೃ.ಗೋಕಾಕರು ಉಪಸ್ಥಿತರಿದ್ದ ಕಾರ್ಯಕ್ರಮ. ಧಾರವಾಡದ ಕವಿಗಳಿಗೆ ಕಾವ್ಯದೀಕ್ಷೆ ಕೊಟ್ಟ ಗುರು ವಿನಾಯಕರು. ಅಂದು ವಿನಾಯಕರ ಬೇರೆಬೇರೆ ಕವಿತೆಗಳನ್ನು ಬೇರೆಬೇರೆ ಕವಿಗಳು ಓದಿದರು. ಸ್ವತಃ ಗೋಕಾಕರು ಭಾರತ ಸಿಂಧುರಶ್ಮಿಯ ಕೆಲವು ಭಾಗ ವಾಚಿಸಿದರು. ಮನದುಂಬಿ ಮಾತಾಡಿದರು.

ಧಾರವಾಡಕ್ಕೆ ಗೋಕಾಕರಿತ್ತ 'ಕೊನೆಯ ಭೆಟ್ಟಿ, ಆಗಿತ್ತದು! ಧಾರವಾಡದ ನೆಲದ 'ಕೊನೆಯ 'ದರ್ಶನಕ್ಕೇ ಅವರು ಬಂದಂತಿತ್ತು.

ಪ್ರತಿ ವರ್ಷ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ಕಾವ್ಯಸ್ಪರ್ಧೆ, 'ವಿಶ್ವಚೇತನ' ಏರ್ಪಡಿಸುತ್ತಿರುವ ವಿಶೇಷ ಕಾರ್ಯಕ್ರಮ. ಮತ್ತೆ ಕವಿಗಳ ಬೀಡೇ ಆಗಿರುವ ಧಾರವಾಡದಲ್ಲಿ ಕವಿಗೋಷ್ಠಿಗಳಿಗೇನು ಬರ? ಹಾಸ್ಯ ಕವಿಗೋಷ್ಠಿ, ಕೋಮು ಸೌಹಾರ್ದ ಕವಿಗೋಷ್ಠಿ ನಡೆದಿದೆ. ಖ್ಯಾತ ಕವಿಗಳಾದ ಚೆನ್ನವೀರ ಕಣವಿ, ನಿಸಾರ ಅಹಮದ್ ಮುಂತಾದವರು ಪ್ರೀತಿಯಿಂದ ಪಾಲುಗೊಂಡಿದ್ದಾರೆ. ಬಿ. ಮಾರುತಿ, ಶಿವಾನಂದ ಬಂಟನೂರ, ಗೀತಾ ವಾಡಪ್ಪಿ ಅವರ ಕಲಾಕೃತಿಗಳ ಪ್ರದರ್ಶನಗಳನ್ನು ಹಮ್ಮಿಕೊಂಡಿದೆ ವಿಶ್ವಚೇತನ.

ವಿಶ್ವಚೇತನದ ಹೆಚ್ಚಿನ ಒತ್ತು ಇರುವುದು 'ನಾಟಕ'ಗಳ ಮೇಲೆ. ಡಾ. ರಾಮೇಗೌಡರು ಖ್ಯಾತ ರಂಗನಟ ನಟರಾಜ ಏಣಗಿಯವರನ್ನು ವಿಶ್ವಚೇತನದ ರಂಗಸಂಯೋಜಕರನ್ನಾಗಿ ತಂದಮೇಲಂತೂ ರಂಗಭೂಮಿಗೆ ರಂಗೇರಿದೆ. ಕರ್ನಾಟಕ ನಾಟಕ ಅಕಾಡೆಮಿಯ ಸಹಕಾರದೊಂದಿಗೆ ಪ್ರತಿವರ್ಷ ಅಂತರಕಾಲೇಜು ಏಕಾಂಕ ನಾಟಕ ಸ್ಪರ್ಧೆಗಳು ನಡೆದೇ ಇವೆ. ೧೯೯೫ರ ಅಕ್ಟೋಬರ್ ನವಂಬರ್ ತಿಂಗಳಲ್ಲಿ ಎನ್.ಎಸ್. ಡಿ ಪದವೀಧರ ಸಾಂಬಶಿವ ದಳವಾಯಿ ಅವರ ನಿರ್ದೇಶನದಲ್ಲಿ ಕ್ಯಾಂಪಸ್ಸಿನಲ್ಲಿ ವಿದ್ಯಾರ್ಥಿಗಳಿಗಾಗಿ ಮೂರು ವಾರಗಳ ರಂಗ ತರಬೇತಿ ಶಿಬಿರ ಯಶಸ್ವಿಯಾಗಿ ನಡೆದದ್ದು ಈ ವರ್ಷದ ವಿಶೇಷ. ತರಬೇತಿಯ ಕೊನೆಗೆ ಶಿಬಿರಾರ್ಥಿಗಳು, ಬ್ರೆಕ್ಟನ ಕೃತಿಯನ್ನು ಬೆಳಗಾವಿ ಕನ್ನಡದಲ್ಲಿ 'ರಂಶಾ' ಅವರು ರೂಪಾಂತರಿಸಿದ "ಸಂಕಾನಟ್ಟಿಯ ಚಂದ್ರಿ" ನಾಟಕವನ್ನು ಸಮರ್ಥವಾಗಿ ಪ್ರಯೋಗಿಸಿದರು. ೧೯೯೨ರ ಫೆಬ್ರುವರಿಯಲ್ಲಿ ಬೆಂಗಳೂರಿನ 'ಪ್ರಯೋಗರಂಗ' ತಂಡವು ಶಿವಪ್ರಕಾಶರ 'ಮಂಟೇಸ್ವಾಮಿ ಕಥಾಪ್ರಸಂಗ'ವನ್ನು ಅಭಿನಯಿಸಿತ್ತು. ಶಿರಸಿಯ ಸಹ್ಯಾದ್ರಿ ಮಹಿಳಾ ಯಕ್ಷಗಾನ ಸಮೂಹದ 'ಕಂಸವಧೆ' ಮತ್ತು ಶಿಗ್ಗಾವಿಯ ಧಾರವಾಡ ಜಿಲ್ಲಾ ದೊಡ್ಡಾಟ ಗುಂಪಿನ 'ಏಕಲವ್ಯ' ಪ್ರಯೋಗಗಳಲ್ಲದೆ, ಧಾರವಾಡದ'ಮ್ಯಾಳ' ತಂಡದ 'ಬೂರ್ಜ್ವಾ ಜಂಟಲ್‌ಮನ್' (ಮೋಲಿಯೇರ್), 'ಜಾತ್ರೆ' (ಬೇಂದ್ರೆ) ಮತ್ತು ಕುಂಟಾ ಕುಂಟಾ ಕುರವತ್ತಿ (ಚಂಪಾ) ಪ್ರಯೋಗಗಳೂ ರಂಗಾಸಕ್ತರ ನೆನಪಿನಲ್ಲಿ ಉಳಿಯುವಂಥವು. ಸ್ಥಳೀಯ ಕಲಾದರ್ಶಿ ತಂಡ, ಶ್ರೀಮತಿ ಶಕುಂತಲಾ ಬಿ. ತಂಡ, ಇಪ್ಟಾ, ಸಮುದಾಯಗಳೆಲ್ಲ ವಿಶ್ವಚೇತನದ ಆತಿಥ್ಯದಲ್ಲಿ ನಾಟಕಗಳನ್ನಾಡಿವೆ.

ನವೆಂಬರ್ ೧೯೯೪ರಲ್ಲಿ ಡಾ. ಪ್ರಭುಶಂಕರ ಅವರು 'ಕುವೆಂಪು ನೆನಪು' ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು. ಆಗಸ್ಟ್ ೧೯೯೫ರಲ್ಲಿ ನಟರಾಜ ಏಣಗಿ ನಿರ್ದೇಶನದಲ್ಲಿ ಪ್ರಯೋಗಗೊಂಡ ಕುವೆಂಪು ಗೀತನಾಟಕ 'ಮಹಾರಾತ್ರಿ' ರಂಗ ಪ್ರಯೋಗ ಶೀಲತೆಗೊಂದು ಉತ್ತಮ ಉದಾಹರಣೆಯಾಗಿತ್ತು.

ಉತ್ತರ ಕರ್ನಾಟಕ ವೃತ್ತಿರಂಗಭೂಮಿಯ ಕರ್ಮಕ್ಷೇತ್ರ. ಅನೇಕ ಹೆಸರಾಂತ ಕಲಾವಿದರು ಬಾಳಿಗಾಸರೆಯಿಲ್ಲದೆ ಬದುಕುತ್ತಿದ್ದಾರೆ. ಫೆಬ್ರುವರಿ ೧೯೯೫ರಲ್ಲಿ ವಿಶ್ವಚೇತನವು ಪಂ. ಪಂಚಾಕ್ಷರಿ ಸ್ವಾಮಿ ಮತ್ತಿಗಟ್ಟಿ ಅವರ ಹಿರಿತನದಲ್ಲಿ ಹಮ್ಮಿಕೊಂಡ 'ರಂಗಸಂಗೀತ' ಕಾರ್ಯಕ್ರಮದಲ್ಲಿ ತಮ್ಮ ಕಲಾಪ್ರೌಢಿಮೆಯಿಂದ ಮಿಂಚಿದವರು ಜಂಪಣ್ಣ ವಂದಗನೂರ, ಬಿ.ಕೆ.ಹೆಬ್ಬಾಳಮಠ, ಪುಷ್ಪಮಾಲಾ ಅಣ್ಣಿಗೇರಿ, ಗಂಗಯ್ಯ ಶಿರಹಟ್ಟಿಮಠ ಮತ್ತು ಎಂ.ಸೈಯದ್ ಮಾಸ್ತರ್. ಕಳೆದು ಹೋದ ಕಾಲವೊಂದರ ಕನವರಿಕೆಯಾಗಿ ಆ ಕಾರ್ಯಕ್ರಮ ಇಂದಿಗೂ ನನ್ನ ಕಿವಿಯಲ್ಲಿ ಗುಂಯ್ ಗುಡುತ್ತಿದೆ.

ಕುಲಪತಿ ಡಾ. ರಾಮೇಗೌಡರು ಅಧ್ಯಕ್ಷರಾಗಿ, ಕುಲಸಚಿವ ರಜನೀಶ ಗೋಯಲ ಅವರು ಉಪಾಧ್ಯಕ್ಷರಾಗಿ, ಅಶೋಕ ಚೊಳಚಗುಡ್ಡ ಕಾರ್ಯದರ್ಶಿಯಾಗಿ ಇರುವ ವಿಶ್ವಚೇತನಕ್ಕೆ ಕನ್ನಡ ಅಧ್ಯಯನ ಪೀಠದ ನಿರ್ದೇಶಕರೊಂದಿಗೆ ನಿಯೋಜಕನಾಗಿ ಕೆಲಸ ಮಾಡುವ ಅವಕಾಶ ನನ್ನದು. ಹೆಚ್ಚೂ ಕಡಿಮೆ ಪ್ರತಿ ಶನಿವಾರ ಸಂಜೆ ಏನಾದರೂ

ಕಾರ್ಯಕ್ರಮ. ಈ ವೇದಿಕೆಯ ಸಾರ್ಥಕ್ಯಕ್ಕಾಗಿ ದುಡಿಯುತ್ತಿರುವವರು ಯುನಿವರ್ಸಿಟಿಯ ಪ್ರಾಧ್ಯಾಪಕ ಸಾಹಿತಿ ಕಲಾವಿದರು.

ಒಂದು ವಿಶ್ವವಿದ್ಯಾಲಯ ಕೇವಲ ಹೆಚ್ಚಿನ ಮಟ್ಟದ ಜ್ಞಾನದ ಮಾಹಿತಿ ಪೂರೈಸುವ ತಾಣವಾಗದೆ ಅದು ವ್ಯಕ್ತಿತ್ವದ ವಿಕಸನಕ್ಕೆ ಹಾದಿ ಮಾಡಿ ಕೊಡುವ ಸಾಂಸ್ಕೃತಿಕ ಮಾಧ್ಯಮವೂ ಆಗಬೇಕು. ಈ ನಿಟ್ಟಿನಲ್ಲಿ ಒಂದು ದಿಟ್ಟ ಪ್ರಯತ್ನ ಕರ್ನಾಟಕ ವಿಶ್ವವಿದ್ಯಾಲಯದ ಸಾಂಸ್ಕೃತಿಕ ವೇದಿಕೆ: 'ವಿಶ್ವಚೇತನ'.

ಹಿರಿಯರೊಬ್ಬರು ಜ್ಯೋತಿ ಬೆಳಗಿಸಿ, "ವಿಶ್ವಚೇತನದ ಈ ಜ್ಯೋತಿ ನಿರಂತರ ಉರಿಯುತ್ತಿರಲಿ" ಎಂದು ಹಾರೈಸಿದ್ದರು. ಆ ಜ್ಯೋತಿಗೆ ಎಣ್ಣೆ ಪೂರೈಸುವ ಎಣ್ಣೆಯ ಡಬ್ಬಿಯಾಗಿದ್ದರು ಕುಲಪತಿಗಳು. ಈಗ ಯೂನಿವರ್ಸಿಟಿಯ ವಾರ್ಷಿಕ ಬಜೆಟ್ಟಿನಲ್ಲಿಯೇ ಆರ್ಥಿಕ ಅನುಕೂಲ ಮಾಡಿಕೊಟ್ಟು ಖಾಯಂ ಆದ ಗ್ಯಾಸ್ ಸಿಲೆಂಡರನ್ನೇ ಒದಗಿಸಿದ್ದಾರೆ ಡಾ. ರಾಮೇಗೌಡರು. ಅವರ ಸಾಹಿತ್ಯಾಸಕ್ತಿ ಮತ್ತು ಕ್ರಿಯಾಶೀಲತೆಯ ಅಮೂಲ್ಯ ಬಳುವಳಿಯಾಗಿ ಮುಂದುವರೆಯಲಿದೆ ನಮ್ಮ ವಿಶ್ವವಿದ್ಯಾಲಯದ ಈ 'ವಿಶ್ವಚೇತನ'.

❊ ❊ ❊

ಆತ್ಮೀಯ ಸ್ನೇಹಿತ

ಕೆ.ಎಂ. ಉಡುಪ

೧೯೯೧ನೇ ಇಸ್ವಿಯ ಮಧ್ಯಭಾಗದಲ್ಲಿ ನನ್ನ ಸ್ನೇಹಿತ ಮತ್ತು ಪ್ರಸಿದ್ಧ ಭತ್ತದ ತಳಿವಿಜ್ಞಾನಿ (ಸದ್ಯ ಧಾರವಾಡ ಕೃಷಿ ವಿಶ್ವವಿದ್ಯಾನಿಲಯದ ಉಪಕುಲಪತಿಗಳು) ಡಾ.ಮಹಾದೇವಪ್ಪನವರ ಮನೆಯಲ್ಲಿ ಅವರ ಮಗಳು ಮತ್ತು ಅಳಿಯ ಅಮೇರಿಕದೇಶಕ್ಕೆ ವ್ಯಾಸಂಗಕ್ಕಾಗಿ ತೆರಳುವ ಸಂದರ್ಭದ ಒಂದು ಸಂತೋಷ ಕೂಟದಲ್ಲಿ ಭಾಗವಹಿಸಲು ಹೋಗಿದ್ದೆ. ಹೆಬ್ಬಾಳಿನಲ್ಲಿರುವ ಕೃಷಿವಿಶ್ವವಿದ್ಯಾನಿಲಯದ ವಸತಿಗೃಹದಲ್ಲಿ ನಡೆದ ಈ ಸಮಾರಂಭಕ್ಕೆ ಅನೇಕ ಗಣ್ಯರು ಬಂದಿದ್ದರು. ೩೩ ವರುಷಗಳ ಅನಂತರ ಮೊದಲ ಬಾರಿಗೆ ಡಾ. ರಾಮೇಗೌಡರ ಭೇಟಿಯ ಅವಕಾಶ ಅಲ್ಲಿ ಸಿಕ್ಕಿತು. ಡಾ. ಮಹಾದೇವಪ್ಪನವರು ಸದ್ಯ ಕರ್ಣಾಟಕ ವಿಶ್ವವಿದ್ಯಾನಿಲಯದ ಉಪಕುಲಪತಿಗಳೆಂದು ಅವರನ್ನು ಪರಿಚಯಿಸಿದರು. ಡಾ. ರಾಮೇಗೌಡರು ಭಾಗವಹಿಸುತ್ತಿದ್ದ ಸಮಾರಂಭಗಳ ವರದಿಯನ್ನು, ಅವರ ಭಾಷಣಗಳ ತಾತ್ಪರ್ಯವನ್ನು ಪತ್ರಿಕೆಗಳಲ್ಲಿ ಓದುತ್ತಿದ್ದೆ. ಆದರೆ ಅವರು ೧೯೫೭ರಿಂದ ೧೯೫೯ರವರೆಗೆ, ಬೆಂಗಳೂರಿನಲ್ಲಿ ಜರುಗುತ್ತಿದ್ದ ಅಂತರ ಕಾಲೇಜು ಭಾಷಣ ಸ್ಪರ್ಧೆಗಳಲ್ಲಿ ಭಾಗವಹಿಸುತ್ತಿದ್ದ ಡಾ. ರಾಮೇಗೌಡರೆಂದು ತಿಳಿದಾಗ ಬಹಳ ಸಂತೋಷವಾಯಿತು. ಈ ಎರಡು ವರುಷಗಳಲ್ಲಿ ನಾನು ಹೆಬ್ಬಾಳ ಕೃಷಿ ಕಾಲೇಜನ್ನು ಪ್ರತಿನಿಧೀಕರಿಸಿ ಈ ಚರ್ಚಾಕೂಟಗಳಲ್ಲಿ ಭಾಗವಹಿಸುತ್ತಿದ್ದೆ. ಡಾ. ರಾಮೇಗೌಡರು ಸರ್ಕಾರಿ ಇಂಜನಿಯರಿಂಗ್ ಕಾಲೇಜನ್ನು ಪ್ರತಿನಿಧೀಕರಿಸುತ್ತಿದ್ದರು.

ಈ ಎರಡು ವರ್ಷಗಳ ಅವಧಿಯಲ್ಲಿ ನಾವು ನಮ್ಮ ನಮ್ಮ ವಿದ್ಯಾ ಸಂಸ್ಥೆಗಳಿಗೆ, ಅನೇಕ ಪರ್ಯಾಯ ಫಲಕಗಳನ್ನು ಗೆಲ್ಲುವುದರೊಂದಿಗೆ ವೈಯಕ್ತಿಕ ಬಹುಮಾನಗಳನ್ನು ಪಡೆದಿದ್ದೆವು. ಭಾಷಣ ಸ್ಪರ್ಧೆಯಲ್ಲಿ ಎದುರಾಳಿಗಳಾಗಿ ಗೆದ್ದಾಗ ಒಬ್ಬರನ್ನೊಬ್ಬರು ಅಭಿನಂದಿಸಿಕೊಂಡು ಕಳೆದ ಆ ಎರಡು ವರ್ಷಗಳು ನಿಜವಾಗಿಯೂ ಸ್ಮರಣೀಯ ದಿನಗಳು. ಅವರೇ ಇಂದಿನ ಕುಲಪತಿ ಡಾ. ರಾಮೇಗೌಡರೆಂದು ತಿಳಿದಾಗ, ನನಗಾದ ಸಂತೋಷ ಅವಿಸ್ಮರಣೀಯವಾದುದಾಗಿತ್ತು. ೩೩ ವರುಷಗಳ ನಂತರ ಭೇಟಿಯಾಗಿ ಒಬ್ಬರನ್ನೊಬ್ಬರು

ಅರಿತು ಕುಶಲೋಪರಿ ನಡೆಸಿದಾಗ, ಅಂದಿನ ಅದೇ ಆತ್ಮೀಯತೆ ಮರುಕಳಿಸಿತ್ತು. ಅವರು ಒಬ್ಬ ದೊಡ್ಡ ವಿಶ್ವವಿದ್ಯಾನಿಲಯದ ಮುಖ್ಯಸ್ಥನೆಂಬ ಯಾವ ಅಹಂಭಾವವೂ ಇಲ್ಲದೆ, ಕಾಲೇಜು ವಿದ್ಯಾರ್ಥಿಯಂತೆ ಆತ್ಮೀಯವಾಗಿ ಮಾತನಾಡಿದರು. ಪುನಃ ಭೇಟಿಯಾಗುವ ಹಾರೈಕೆಗಳೊಂದಿಗೆ ಒಬ್ಬರನ್ನೊಬ್ಬರು ಬೀಳ್ಕೊಟ್ಟೆವು.

೧೯೯೨ನೇ ಇಸ್ವಿಯ ಸಪ್ಟಂಬರ ತಿಂಗಳ ಮಧ್ಯದಲ್ಲಿ ನನಗೆ ಧಾರವಾಡದ ಮಲಪ್ರಭಾ ಗ್ರಾಮೀಣ ಬ್ಯಾಂಕಿನ ಅಧ್ಯಕ್ಷನಾಗಿ ವರ್ಗವಾಯಿತು. ಅಲ್ಲಿಗೆ ಬಂದು ಅಧಿಕಾರವಹಿಸಿಕೊಂಡನಂತರ ಪ್ರಥಮವಾಗಿ ನೆನಪಾದುದು ಡಾ. ರಾಮೇಗೌಡರದ್ದು. ಉಪಕುಲಪತಿಗಳ ಮನೆಗೆ ದೂರವಾಣಿಯಲ್ಲಿ ಮಾತನಾಡಿ ಅವರನ್ನು ಭೇಟಿ ಮಾಡಲು ಸಮಯ ಕೇಳಿ ಸಂಜೆಯ ಹೊತ್ತು ಸಹೋದ್ಯೋಗಿ ನಾಗರಾಜರೊಡನೆ ಅವರ ಮನೆಗೆ ಹೋದೆ. ಉಪಕುಲಪತಿಗಳ ಬಂಗ್ಲೆಯ ಭವ್ಯತೆ ಮತ್ತು ಸ್ಥಾನದ ಮಹತ್ವ ನನ್ನಲ್ಲಿ ಸ್ವಲ್ಪ ಅಳುಕನ್ನು ತಂದಿತ್ತು. ಯಾವ ರೀತಿಯ ಸ್ವಾಗತ ಕಾದಿದೆಯೋ ಎಂದು ಕಾತರಗೊಂಡಿದ್ದೆ. ದ್ವಾರಪಾಲಕರಿಂದ ಅನುಮತಿ ಪಡೆದು ಅವರ ನಿವಾಸಕ್ಕೆ ತೆರಳಿ ಪರಿಚಾರಕರೊಂದಿಗೆ ನನ್ನ ಆಗಮನದ ವಿಷಯ ತಿಳಿಸಿದೆ. ಕೆಲವೇ ನಿಮಿಷಗಳಲ್ಲಿ ಉಪಕುಲಪತಿ ಡಾ. ರಾಮೇಗೌಡರು ಹಜಾರಕ್ಕೆ ಬಂದು ನನ್ನನ್ನು ಸ್ವಾಗತಿಸಿದ ಆ ಆತ್ಮೀಯ ಸಂದರ್ಭ ಇಂದಿಗೂ ಕಣ್ಣಿಗೆ ಕಟ್ಟಿದಂತಿದೆ. ಕೆಲವೇ ನಿಮಿಷಗಳಲ್ಲಿ ನಮ್ಮ ಸ್ಥಾನ ಮಾನಗಳ ಗೊಡವೆಯಿಲ್ಲದೆ ಆತ್ಮೀಯ ಸ್ನೇಹಿತನಾಗಿ ಮಾತುಕತೆ ಪ್ರಾರಂಭಿಸಿದೆವು. ೩ ದಶಕಗಳ ಹಿಂದಿನ ಆ ಎರಡು ವರ್ಷಗಳ ಒಡನಾಟ, ಡಾ. ರಾಮೇಗೌಡರು ನನ್ನ ವಸತಿ ನಿಲಯಕ್ಕೆ ವಿಶೇಷ ಔತಣಗಳಿಗೆ ಬರುತ್ತಿದ್ದು, ವಿವಿಧ ಕಾಲೇಜು, ಹಾಗೂ ವಸತಿ ನಿಲಯ(Hostel) ಗಳ ಅಂತರ್‌ಕಾಲೇಜು ಚರ್ಚಾ ಕೂಟಗಳ ಸವಿನೆನಪುಗಳು, ಅನಂತರ ನಮ್ಮ ನಮ್ಮ ವೃತ್ತಿಗಳಲ್ಲಿ ಸಾಧಿಸಿದ ಪ್ರಗತಿಯ ಬಗೆಗೆ ವಿವರವಾಗಿ ಚರ್ಚಿಸಿ ಸಂತೋಷಪಟ್ಟೆವು. ಅಷ್ಟರಲ್ಲಿಯೇ ಶ್ರೀಮತಿ ರಾಮೇಗೌಡರಿಂದ ಪಕೋಡ ಮತ್ತು ಕಾಫಿಗಳ ಸಮಾರಾಧನೆಯಾಯಿತು. ಪ್ರಸಿದ್ಧ ವಿಶ್ವವಿದ್ಯಾಲಯವೊಂದರ ಉಪಕುಲಪತಿಗಳ ಮನೆಯಲ್ಲಿ ದೊರಕಿದ ಈ ಆತ್ಮೀಯ ಸ್ವಾಗತ ನನ್ನನ್ನು ಮೂಕನನ್ನಾಗಿಸಿತ್ತು.

ಸ್ನೇಹದ ಸಲುಗೆಯಿಂದಾಗಿ ಸಪ್ಟೆಂಬರ ತಿಂಗಳ ಅಂತ್ಯದಲ್ಲಿ ನಡೆಯುವ ಮಲಪ್ರಭಾ ಬ್ಯಾಂಕಿನ ವಾರ್ಷಿಕೋತ್ಸವಕ್ಕೆ ಮುಖ್ಯ ಅತಿಥಿಯಾಗಿ ಬರಲು ಆಮಂತ್ರಿಸಿದೆ. ವಿಶ್ವಾಸಕ್ಕೆ ಕಟ್ಟುಬಿದ್ದು ಡಾ.ಗೌಡರು ಕೂಡಲೇ ಒಪ್ಪಿಕೊಂಡರು. ಕೃತಾರ್ಥ ಭಾವನೆಯಿಂದ ಅಂದು ಮನೆಗೆ ಹಿಂದುರುಗಿದೆ. ಅದಾದ ಒಂದೆರಡು ದಿನಗಳಲ್ಲಿ ಅವರ ಆಪ್ತಕಾರ್ಯದರ್ಶಿಯವರಿಂದ ದೂರವಾಣಿಯ ಕರೆ ಬಂತು. ನಮ್ಮ ಸಮಾರಂಭದ ಮೂರನೆಯ ದಿನ ಉಪಕುಲಪತಿಗಳಿಗೆ ಬೆಂಗಳೂರಿನಲ್ಲಿ ಒಂದು ತುರ್ತಾದ ಸಭೆಗೆ ಹೋಗಲಿರುವುದರಿಂದ ಮುಂಚಿನ ದಿನವೇ ಅವರು ಕಾರಿನಲ್ಲಿ ಹೋಗಬೇಕಾಗುತ್ತದೆ, ಆದುದರಿಂದ ನಮ್ಮ ಕಾರ್ಯಕ್ರಮಕ್ಕೆ ಬರಲು ಅನುಕೂಲವಾಗಲಿಕ್ಕಿಲ್ಲವೆಂದು ತಿಳಿಸಿದರು. ಇಷ್ಟರಲ್ಲಿಯೇ ಉಪಕುಲಪತಿಗಳು ನನ್ನ ಸ್ನೇಹಿತರು ಎನ್ನುವ ವಿಷಯ ಬ್ಯಾಂಕಿನಲ್ಲಿ ಎಲ್ಲರಿಗೂ ಗೊತ್ತಾಗಿತ್ತು. ಅವರು ಬರದೇ ಇದ್ದರೆ ನನಗೆ ಒಂದು ರೀತಿಯ

ಮುಜುಗರವಾಗುತ್ತಿತ್ತು. ಹಾಗಾಗಿ ನಾನೇ ಫೋನ್‌ನಲ್ಲಿ ಅವರನ್ನು ಸಂಪರ್ಕಿಸಿದೆ. ಹೇಗಾದರೂ ಮಾಡಿ ಸಮಾರಂಭಕ್ಕೆ ಬರಲೇಬೇಕೆಂದು ಆಗ್ರಹಿಸಿದೆ. ಮಾರನೆಯ ದಿನ ಗೆಳೆಯ ಗೌಡರ ಕರೆ ಬಂತು. ನಮ್ಮ ಸಮಾರಂಭ ಮುಗಿಸಿ, ಮಾರನೆಯ ದಿನ ಬೆಳಿಗ್ಗೆ ಬೇಗ ಹೊರಟು ಬೆಂಗಳೂರು ತಲುಪಿ ಸಭೆಯಲ್ಲಿ ಭಾಗವಹಿಸುವ ವ್ಯವಸ್ಥೆ ಮಾಡುವುದಾಗಿ ತಿಳಿಸಿದರು. ನನಗಾದ ಸಂತೋಷಕ್ಕೆ ಪಾರವೇ ಇರಲಿಲ್ಲ. ಒಬ್ಬ ಸ್ನೇಹಿತನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ವೈಯಕ್ತಿಕವಾಗಿ ತೊಂದರೆ ಪಟ್ಟು, ಸ್ನೇಹತ್ವವನ್ನು ಮೆರೆದು ಆತ್ಮೀಯತೆಯನ್ನು ಹೆಚ್ಚಿಸಿದ ಹಿರಿಮೆ ಶ್ರೀ ಗೌಡರದು.

ಡಾ. ಗೌಡರು ಒಬ್ಬ ಉತ್ತಮ ವಾಗ್ಮಿ. ಯಾವುದೇ ವಿಷಯವಿರಲಿ ಅತ್ಯಂತ ಪರಿಣಾಮಕಾರಿಯಾಗಿ ವಿಷಯವನ್ನು ಪ್ರತಿಪಾದಿಸುತ್ತಿದ್ದರು. ಇಂಜಿನಿಯರಿಂಗ್ ಓದಿ, ಅದರಲ್ಲಿ ಸ್ನಾತಕೋತ್ತರ ಪದವಿ ಪಡೆದು, ಇಂಗ್ಲಿಷನ್ನೇ ನೆಚ್ಚಿಕೊಂಡವರಲ್ಲ. ಕನ್ನಡದಲ್ಲಿ ಒಬ್ಬ ಉದ್ದಾಮ ಸಾಹಿತಿಯಂತೆ ಮಾತನಾಡಬಲ್ಲರು. ತಾಂತ್ರಿಕ ಜ್ಞಾನದ ಉನ್ನತಿಗೆ, ಸಾಹಿತ್ಯ, ವೇದಾಂತಗಳನ್ನು ಅಭ್ಯಸಿಸಿ ಉತ್ತಮ ಪಾಂಡಿತ್ಯ ಪಡೆದವರು. ಧಾರವಾಡದ ಅನೇಕ ಕಾರ್ಯಕ್ರಮಗಳಲ್ಲಿ ಅವರ ಭಾಷಣಗಳನ್ನು ಕೇಳಿದ್ದೆ. ಒಮ್ಮೆ ಅವರು ರಾಮಕೃಷ್ಣಾಶ್ರಮದ ಸಮಾರಂಭದಲ್ಲಿ ಸ್ವಾಮಿ ವಿವೇಕಾನಂದರ ಬಗ್ಗೆ, ಪೂಜ್ಯ ಪುರುಷೋತ್ತಮಾನಂದಜಿಯವರ ಸಮ್ಮುಖದಲ್ಲಿ ಮಾಡಿದ ಭಾಷಣ ಇಂದಿಗೂ ನನ್ನ ಸ್ಮೃತಿಪಟಲದಲ್ಲಿ ಅಚ್ಚಳಿಯದೆ ಉಳಿದಿದೆ.

ಧಾರವಾಡದಲ್ಲಿ ನನ್ನ ಎರಡು ವರ್ಷ ಮೂರು ತಿಂಗಳು ಸೇವಾವಧಿಯಲ್ಲಿ ರಾಮೇಗೌಡರೊಂದಿಗೆ ಅನೇಕ ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶ ದೊರಕಿತ್ತು. ಆ ಎಲ್ಲ ಸಂದರ್ಭಗಳಲ್ಲಿ ನಮ್ಮ ಮಿತ್ರತ್ವವನ್ನು ಮೆರೆದ ಅವಕಾಶಗಳಾದುವು. ಆಗಾಗ ಅವರ ಕಛೇರಿಗೆ ಭೇಟಿ ಕೊಡುತ್ತಿದ್ದೆ. ಪೂರ್ವ ನಿಯೋಜಿತವಾಗದೆ ಹೋದಾಗಲೂ ಆತ್ಮೀಯತೆಯಿಂದ ಬರಮಾಡಿಕೊಂಡು ತಮ್ಮ ಹಿಂದಿನ ಕೋಣೆಯಲ್ಲಿ ಕೂರಿಸಿ ಮಾತನಾಡಿಸುತ್ತಿದ್ದರು. ಇದರ ಫಲವಾಗಿ ಮಲಪ್ರಭಾ ಬ್ಯಾಂಕು ಮತ್ತು ಕರ್ಣಾಟಕ ವಿಶ್ವವಿದ್ಯಾಲಯಗಳೊಡನೆ ಒಂದು ಆತ್ಮೀಯ ಸಂಬಂಧ ಬೆಳೆಯಿತು. ಪರಿಣಾಮವಾಗಿ University ಮತ್ತು Industryಗಳೊಳಗಣ ಸಹಯೋಗದ ಒಂದು ವಿಶಿಷ್ಟ ಪ್ರಯೋಗದಲ್ಲಿ ಮಲಪ್ರಭಾ ಗ್ರಾಮೀಣ ಬ್ಯಾಂಕಿಗೂ ಅವಕಾಶ ದೊರೆಯಿತು. ಕೊನೆಯ ವರ್ಷದ ಪದವಿ ಕ್ಲಾಸಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಸ್ವಂತ ಉದ್ಯೋಗದಲ್ಲಿ ಆಸಕ್ತಿ ಬರುವಂತೆ ಮಾಡುವ ಒಂದು ಕಾರ್ಯಕ್ರಮವನ್ನು ರೂಪಿಸಿದೆವು. ಹೀಗೆ ವೈಯಕ್ತಿಕ ಮಿತ್ರತ್ವದಿಂದ ಎರಡೂ ಸಂಸ್ಥೆಗಳು ಹತ್ತಿರ ಬಂದು ಅನೇಕ ರಚನಾತ್ಮಕ ಕೆಲಸಗಳು ನಡೆದವು.

ಮಲಪ್ರಭಾ ಗ್ರಾಮೀಣ ಬ್ಯಾಂಕು ವಿಶಿಷ್ಟವಾದ ತನ್ನ ಪ್ರಧಾನ ಕಛೇರಿಯ ಸ್ವಂತ ಕಟ್ಟಡವನ್ನು ಕಟ್ಟಿ, ಉದ್ಘಾಟಿಸಿದಾಗ ಮುಖ್ಯ ಅತಿಥಿಯಾಗಿ ಭಾಗವಹಿಸಿ ಹರಸಿದರು. ಜತೆಗೆ ಅಂದು ಹಮ್ಮಿಕೊಂಡ ಸೂರ್ಯಶಕ್ತಿಯಿಂದ ದೀಪ ಕೊಡುವ ಯೋಜನೆಯನ್ನು

ವಿಧ್ಯುಕ್ತವಾಗಿ ಉದ್ಘಾಟಿಸಿದರು. ಅಂದು ಅವರು ಗ್ರಾಮೀಣ ಬದುಕಿನ ಬಗ್ಗೆ ಮಾಡಿದ ಭಾಷಣ ಅದ್ಭುತವಾಗಿತ್ತು. ಮಣ್ಣಿನ ಮಗನಾಗಿ ಬೆಳೆದ ಅವರು ಜೀವನದಲ್ಲಿ ಅತ್ಯುಚ್ಚ ಸ್ಥಾನವನ್ನು ಗಳಿಸಿದ್ದರೂ, ಹಳ್ಳಿಗಳ ಬಗೆಗೆ, ರೈತರ ಬಗೆಗೆ ಎಷ್ಟು ಆಸಕ್ತಿ ವಹಿಸಿದ್ದರೆಂಬುದನ್ನು, ಅಂದು ನೆರೆದ ಸಾವಿರಾರು ಮಂದಿ ಹಳ್ಳಿಗರು ಕೇಳಿ ಆನಂದಿಸಿದರು.

೧೯೮೪ನೇ ನವಂಬರ ತಿಂಗಳಿನಲ್ಲಿ ನನಗೆ ಧಾರವಾಡದಿಂದ ಹೈದ್ರಾಬಾದಿಗೆ ವರ್ಗವಾಯಿತು. ಇದೇ ಸಮಯದಲ್ಲಿ ಡಾ ಎಮ್. ಮಹಾದೇವಪ್ಪನವರು ಧಾರವಾಡ ಕೃಷಿ ವಿಶ್ವವಿದ್ಯಾನಿಲಯಕ್ಕೆ ಉಪಕುಲಪತಿಗಳಾಗಿ ನೇಮಕಗೊಂಡರು. ನಾವು ಮೂರು ಮಂದಿ ಹಳೆಯ ಸ್ನೇಹಿತರು ಒಟ್ಟಾಗಿ ಅನೇಕ ರಚನಾತ್ಮಕ ಕೆಲಸಗಳನ್ನು ಮಾಡುವ ಗುರಿ ಹೊಂದಿದ್ದೆವು. ಕರ್ತವ್ಯದ ಕರೆಯಿಂದ ನಾನೂ ಅವರಿಂದ ದೂರ ಸರಿಯಬೇಕಾಯಿತು. ಆದೊಂದು ದಿನ ಬೆಳಿಗ್ಗೆ ಡಾ ಗೌಡರ ಆಪ್ತಕಾರ್ಯದರ್ಶಿಯವರ ದೂರವಾಣಿ ಕರೆ ಬಂತು. ಉಪಕುಲಪತಿಗಳು ನನಗೆ ವಿಶ್ವವಿದ್ಯಾನಿಲಯದಲ್ಲಿ ಒಂದು ಬೀಳ್ಕೊಡುಗೆಯ ಸಮಾರಂಭ ಏರ್ಪಡಿಸಿದುದಾಗಿ ಹೇಳಿದರು.

ಮಾರನೆಯ ದಿನ ಆ ಜ್ಞಾನದೇಗುಲಗಲ್ಲಿ, ವಿವಿಧ ಪ್ರಾಚಾರ್ಯರುಗಳ ನಡುವೆ ರಾಮೇಗೌಡರು ನನಗೆ ನೀಡಿದ ಗೌರವ ನನ್ನ ಜೀವನದಲ್ಲಿ ಒಂದು ಮಹತ್ವದ ಘಟನೆ. ಪ್ರಾಯಶಃ ಯಾವ ಸಂಸ್ಥೆಯ ಅಧಿಕಾರಿಗೂ ವಿಶ್ವವಿದ್ಯಾನಿಲಯದ ಆವರಣದಲ್ಲಿ ಇಂತಹ ಗೌರವ ದೊರಕಿರಲಾರದು. ಇದು ಉಪಕುಲಪತಿಗಳು ಬಾಲ್ಯ ಸ್ನೇಹಿತನೊಬ್ಬನ ಬಗ್ಗೆ ತೋರಿದ ಹೃದಯ ವೈಶಾಲ್ಯ.

ಆರು ವರ್ಷಗಳ ಕಾಲ ವಿಶ್ವವಿದ್ಯಾಲಯದ ಉಪಕುಲಪತಿಯಾಗಿ ಯಶಸ್ವಿ ಕಾರ್ಯನಿರ್ವಹಣೆ ಮಾಡಿದುದೇ ಒಂದು ಅದ್ಭುತ. ಅದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿ. ಜತೆಗೆ ಭೂತರಾಮನ ಹಟ್ಟಿಯಲ್ಲಿ ನಿರ್ಮಾಣಗೊಂಡ ಸ್ನಾತಕೋತ್ತರ ಕೇಂದ್ರ ಅವರ ಸಾಧನೆಗಳಿಗೆ ಕಳಶಪ್ರಾಯ. ವಿಶ್ವವಿದ್ಯಾಲಯದಿಂದ ನಿವೃತ್ತಿಯಾದ ಬಳಿಕ ಸಾಮಾಜಿಕ ಜೀವನದಲ್ಲಿ ಪ್ರವೃತ್ತರಾಗಿ ಅನೇಕ ಕೆಲಸಗಳು ಅವರಿಂದ ನಡೆಯಲಿ. ಅವರ ಪತ್ನಿ ಮತ್ತು ಮಕ್ಕಳಿಗೆ ದೇವರು ಒಳ್ಳೆಯದನ್ನು ಮಾಡಲಿ.

❊ ❊ ❊

ನಾನು ಕಂಡ ಬಹುಮುಖ ಪ್ರತಿಭೆ

ಕೆ. ಚಿದಾನಂದ ಗೌಡ

ವಾಗ್ಮಿ

೧೯೫೫ನೇ ವರ್ಷದ ಒಂದು ಸಂಜೆ. ಬೆಂಗಳೂರಿನ ಯುನಿವರ್ಸಿಟಿ ಎಂಜಿನಿಯರಿಂಗ್ ಕಾಲೇಜ್ ಹಾಸ್ಟೆಲಿನ ಊಟದ ಮನೆಯಲ್ಲಿ ವಿದ್ಯಾರ್ಥಿಗಳೆಲ್ಲಾ ಸೇರಿದ್ದರು. ಅದೇ ವರ್ಷ ಎಂಜಿನಿಯರಿಂಗಿಗೆ ಸೇರಿದ್ದ ನಾನೂ ಆ ಗುಂಪಿನಲ್ಲಿದ್ದೆ. ಬೆಂಗಳೂರಿನಲ್ಲಿ ನಡೆಯುವ ಅಂತರ-ವಿದ್ಯಾರ್ಥಿನಿಲಯಗಳ ಭಾಷಣ ಸ್ಪರ್ಧೆಗಳಲ್ಲಿ ನಮ್ಮ ಹಾಸ್ಟೆಲನ್ನು ಪ್ರತಿನಿಧಿಸುವ ವಿದ್ಯಾರ್ಥಿಗಳನ್ನು ಆಯ್ಕೆಮಾಡುವ ಉದ್ದೇಶದಿಂದ ಏರ್ಪಡಿಸಿದ್ದ ಭಾಷಣ ಸ್ಪರ್ಧೆ ಅಲ್ಲಿ ನಡೆಯುತ್ತಿತ್ತು. ಸಾಧಾರಣ ಎತ್ತರದ, ದುಂಡು ಮುಖದ, ತೇಜಸ್ಸಿನಿಂದ ಕೂಡಿದ ಮುಖಭಾವವನ್ನು ಹೊಂದಿದ್ದ ಒಬ್ಬ ವಿದ್ಯಾರ್ಥಿ ಸಭಿಕರೆದುರು ಧೈರ್ಯವಾಗಿ ನಿಂತು ಶುದ್ಧವಾದ ಕನ್ನಡದಲ್ಲಿ, ಏನೂ ಅಡೆತಡೆಗಳಿಲ್ಲದೆ ನಿರರ್ಗಳವಾಗಿ ಮಾತಾಡಿ, ತನ್ನ ವಿಚಾರಧಾರೆಯಿಂದ ಸಭಿಕರು ತಲೆದೂಗುವಂತೆ ಮಾಡಿ ಸಭಾಂಗಣದಿಂದ ಹೊರಬಂದರು. ಆಗ ಸಭಾಧ್ಯಕ್ಷರು ಎದ್ದು ನಿಂತು, ಆಗತಾನೇ ಮಾತಾಡಿದ ಹಿರಿಯ ವಿದ್ಯಾರ್ಥಿ ಎಸ್. ರಾಮೇಗೌಡರು ಉತ್ತಮ ವಾಗ್ಮಿಯೆಂದು ಹೆಸರು ಗಳಿಸಿರುವುದರಿಂದ ಅವರು ಸ್ಪರ್ಧಿಯಾಗಿ ಮಾತಾಡಿಲ್ಲವೆಂದೂ, ಕಿರಿಯ ವಿದ್ಯಾರ್ಥಿಗಳನ್ನು ಮಾತ್ರ ಸ್ಪರ್ಧಿಗಳಾಗಿ ಪರಿಗಣಿಸಲಾಗುವುದೆಂದೂ ಸ್ಪಷ್ಟ ಪಡಿಸಿದರು.

ಅದು ನಾನು ಕೇಳಿದ ಡಾ. ಎಸ್. ರಾಮೇಗೌಡರ ಪ್ರಥಮ ಭಾಷಣ. ಆ ಬಳಿಕ ಅವರ ಅನೇಕ ಉತ್ತಮ ಭಾಷಣಗಳನ್ನು ನಾನು ಕೇಳಿದ್ದೇನೆ. ಅವರು ವಿದ್ಯಾರ್ಥಿಯಾಗಿದ್ದಾಗ ಯಾವುದಾದರೂ ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿದರು ಎಂದರೆ ಒಂದು ಬಹುಮಾನ ಕಟ್ಟಿಟ್ಟ ಬುತ್ತಿ. ಮಾತುಗಾರಿಕೆಯ ಸರಸ್ವತಿ ಅವರಿಗೆ ಚಿಕ್ಕಂದಿನಿಂದಲೂ ಒಲಿದಿದ್ದಳು. ಗ್ರೀಸ್‌ದೇಶದ ಪ್ರಚಂಡ ವಾಗ್ಮಿ ಡಿಮೋಸ್ತನೀಸನ ಮಾತಿನ ವೈಖರಿಗೆ ಮತ್ತು ಮೋಡಿಗೆ ಮರುಳಾದ ಗ್ರೀಕ್ ಮಹಾರಾಜ, "ವೈರಿಗಳ ಖಡ್ಗದ ಹೊಡೆತವನ್ನು ನಿರಾತಂಕವಾಗಿ ಎದುರಿಸಬಹುದು; ಆದರೆ ಡಿಮೋಸ್ತನೀಸನ ಹರಿತವಾದ ಮಾತಿನ ಪ್ರಹಾರವನ್ನು

ಎದುರಿಸುವುದು ಕಷ್ಟ" ಎಂದು ಉದ್ಗರಿಸಿದ್ದನಂತೆ. ಅದೇ ರೀತಿ ಡಾ. ರಾಮೇಗೌಡರ ಮಾತುಗಾರಿಕೆಯ ಶಕ್ತಿಯು ಅವರು ಹೋದಲ್ಲೆಲ್ಲಾ ಪರಿಮಳದಂತೆ ಹರಡಿಕೊಳ್ಳುತ್ತಿತ್ತು. ಅವರು ಎಲೆಕ್ಟ್ರಿಕಲ್ ವಿಭಾಗದಲ್ಲಿ ಪದವಿಯನ್ನು ಪಡೆದ ಬಳಿಕ ಒಂದೆರಡು ವರ್ಷ ಮೈಸೂರಿನ ನೇಶನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್‌ನಲ್ಲಿ ಉಪನ್ಯಾಸಕರಾಗಿ ಕೆಲಸಮಾಡಿ, ಅಲ್ಲಿಂದ ಮಂಡ್ಯದ ಎಂಜಿನಯರಿಂಗ್ ಕಾಲೇಜಿಗೆ ಹೋದರು. ನಾನು ಮೈಸೂರಿನ ಎಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕನಾಗಿ ಸೇರಿದಾಗ, ರಾಮೇಗೌಡರು ಮಂಡ್ಯದಲ್ಲಿದ್ದರು. ಆದರೆ ಅವರ ಮಾತುಗಾರಿಕೆಯ ಪರಿಮಳ ಮೈಸೂರಿನಲ್ಲಿ ಉಳಿದಿತ್ತು ಮತ್ತು ಇನ್ನೂ ಹರಡಿತ್ತು. ಎಷ್ಟೋ ಮಂದಿ ಸಹೋದ್ಯೋಗಿಗಳು ನನ್ನೊಡನೆ, "ರಾಮೇಗೌಡರು ಇಲ್ಲಿ ಉಪನ್ಯಾಸಕರಾಗಿದ್ದರು. ಅವರ ಮಾತಿನ ಸೊಗಸನ್ನು ಕೇಳುವುದೇ ಒಂದು ಆನಂದ. ವಿದ್ಯಾರ್ಥಿಗಳಿಗೆಲ್ಲಾ ಅವರು ಅಚ್ಚುಮೆಚ್ಚಾಗಿದ್ದರು" ಎಂದು ರಾಮೇಗೌಡರ ಗುಣಗಾನ ಮಾಡುತ್ತಿದ್ದರು.

೧೯೮೦ರ ದಶಕದಲ್ಲಿ ಅವರ ಒಂದು ಅತ್ಯುತ್ತಮ ಭಾಷಣವನ್ನು ಕೇಳುವ ಅವಕಾಶ ನನಗೆ ಲಭಿಸಿತು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿ ಅಧಿಕಾರ ವಹಿಸಿಕೊಂಡ ಡಾ. ಕೆ.ಎಸ್. ಹೆಗಡೆಯವರನ್ನು ಅಭಿನಂದಿಸಲು ಮೈಸೂರಿನ ಇನ್‌ಸ್ಟಿಟ್ಯೂಶನ್ ಆಫ್ ಎಂಜಿನಿಯರ್ಸ ಸಭಾಂಗಣದಲ್ಲಿ ಒಂದು ಸಮಾರಂಭ ಏರ್ಪಾಡಾಗಿತ್ತು. ಡಾ. ರಾಮೇಗೌಡರು ಆ ದಿನ ಅಭಿನಂದನಾ ಭಾಷಣವನ್ನು ಕನ್ನಡದಲ್ಲಿ ಮಾಡಿದರು. ವಿಷಯದ ನಿರೂಪಣೆ, ತಕ್ಕುದಾದ ಶಬ್ದಗಳ ಪ್ರಯೋಗ, ನಿರರ್ಗಳವಾದ ವಾಗ್ಧಾರೆ, ಮಾತಿನ ವೈಖರಿ ಇವುಗಳೆಲ್ಲಾ ಒಂದರೊಡನೊಂದು ಹೊಂದಿಕೊಂಡು ಬಂದ ಆ ಭಾಷಣವು ಸಭಿಕರಿಗೆ ರಸದೌತಣವನ್ನಿತ್ತಿತು. ಸಾಮಾನ್ಯವಾಗಿ ಇಂಗ್ಲೀಷಿನಲ್ಲೇ ಮಾತನಾಡುವ ಅಭ್ಯಾಸವನ್ನು ಹೊಂದಿದ್ದ ಅಂದಿನ ಸಭಾಧ್ಯಕ್ಷರು ಆ ದಿನ ಡಾ. ರಾಮೇಗೌಡರ ಕನ್ನಡ ಭಾಷಣದ ಮೋಡಿಗೆ ಮರುಳಾಗಿ ಕನ್ನಡದಲ್ಲೇ ಮಾತನಾಡುತ್ತಾ "ಡಾ. ರಾಮೇಗೌಡರೇ, ನೀವು ಇಂದಿನ ಸಭೆಯಲ್ಲಿ ಕನ್ನಡದಲ್ಲಿ ಬಹಳ ಸೊಗಸಾಗಿ ಮಾತಾಡಿ ಈ ಸಮಾರಂಭದ ಘನತೆಯನ್ನು ಎತ್ತರಿಸಿದ್ದೀರಿ" ಎಂದು ಅಭಿನಂದನೆಗಳ ಸುರಿಮಳೆಯನ್ನೇ ಸುರಿಸಿದರು.

ನಾನು ಡಾ. ರಾಮೇಗೌಡರ ಇನ್ನೊಂದು ಸೊಗಸಾದ ಭಾಷಣ ಕೇಳಿದ್ದು ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ. ಅದು ಸ್ವಾಮಿ ವಿವೇಕಾನಂದರ ಮೈಸೂರು ಭೇಟಿಯ ಶತಮಾನೋತ್ಸವದ ಕಾಲ. ರಾಮಕೃಷ್ಣ ವಿದ್ಯಾಶಾಲೆಯ ಬಯಲು ರಂಗಮಂದಿರದಲ್ಲಿ ಜನರು ಕಿಕ್ಕಿರಿದು ನೆರೆದಿದ್ದರು. ಮುಂದಿನ ಸಾಲುಗಳಲ್ಲಿ ಶ್ರೀ ರಾಮಕೃಷ್ಣ ಮಠದ ಯತಿವರ್ಯರುಗಳು ಮತ್ತು ರಾಮಕೃಷ್ಣ ವಿವೇಕಾನಂದ ಸಾಹಿತ್ಯವನ್ನು ಆಳವಾಗಿ ಅಭ್ಯಾಸಮಾಡಿದ ಅನೇಕ ವಿದ್ವಾಂಸರು ಆಸೀನರಾಗಿದ್ದರು. ಅಂತಹ ಗಣ್ಯವಿದ್ವಜ್ಜನರ ಸಭೆಯ ವೇದಿಕೆಯನ್ನೇರಿ ಸ್ವಾಮಿ ವಿವೇಕಾನಂದರ ಕುರಿತು ಮಾತಾಡುವುದು ಸಾಮಾನ್ಯ ವಿಷಯವೇನಲ್ಲ. ಯಾವುದೇ ಸಭೆಯಲ್ಲಿ ಸಮಯೋಚಿತವಾಗಿ ಮಾತಾಡುವ ಕಲೆ ಡಾ. ರಾಮೇಗೌಡರಿಗೆ ಸಿದ್ಧಿಸಿತ್ತು. ಅವರ ಅಂದಿನ ಭಾಷಣ ಎಂದಿನಂತೆ ಬಹಳ ಅರ್ಥವತ್ತಾಗಿ

ಮತ್ತು ಸೊಗಸಾಗಿ ಬಂತು. ನೆರೆದ ಜನಸಮೂಹ ತಲೆದೂಗಿ ಚಪ್ಪಾಳೆತಟ್ಟಿ ತನ್ನ ಸಂತೋಷವನ್ನು ವ್ಯಕ್ತಪಡಿಸಿತು.

ಬರೆದು ಸಿದ್ಧಗೊಳಿಸಿದ ಭಾಷಣವನ್ನು ಓದಿಯೋ ಅಥವಾ ಅದನ್ನು ಆಧಾರವಾಗಿಟ್ಟುಕೊಂಡೋ ಮಾತಾಡಿ ಸಭಿಕರನ್ನು ಮೆಚ್ಚಿಸುವ ಅನೇಕರನ್ನು ನಾನು ಕಂಡಿದ್ದೇನೆ. ಮೊದಲೇ ಬರೆದು ಸಿದ್ಧಪಡಿಸದೆ ಅಥವಾ ಭಾಷಣದ ಮುಖ್ಯಾಂಶಗಳನ್ನು ಬರೆದ ಚೀಟಿಯತ್ತ ಕಣ್ಣು ಹಾಯಿಸದೆ ಮಾತಾಡಿ ಜನಮೆಚ್ಚುಗೆಯನ್ನು ಗಳಿಸುವುದು ತುಂಬಾ ಕಷ್ಟ. ಅಂತಹವರ ಬಲುವಿರಳ ಗುಂಪಿಗೆ ಡಾ. ರಾಮೇಗೌಡರು ಸೇರುತ್ತಾರೆ. ಭಾಷಣವನ್ನು ಬರೆದು, ಸಿದ್ಧಗೊಳಿಸಲು, ಬಳಿಕ ಮಾತನಾಡುವುದು ತನಗೆ ಸರಿಹೋಗುವುದಿಲ್ಲ ಎನ್ನುತ್ತಾರೆ. ಡಾ. ರಾಮೇಗೌಡರು. ಬರೆದು ಸಿದ್ಧತೆ ಮಾಡಿಕೊಳ್ಳದಿದ್ದರೂ ಅವರ ಮಾತುಗಳು ನಿರರ್ಗಳವಾಗಿ ಪುಂಖಾನುಪುಂಖವಾಗಿ ಬರುತ್ತವೆ. ಮಾತಿನ ಮಧ್ಯೆ ಎಂದೂ ಅವರು ಸರಿಯಾದ ಶಬ್ದಗಳು ಸಿಗದೆ ಅಥವಾ ವಿಷಯದ ಕೊಂಡಿಗಳು ಒಂದಕ್ಕೊಂದು ಸೇರಿಕೊಳ್ಳದೆ ತಡವರಿಸುವುದಿಲ್ಲ. ಮಾತುಗಾರಿಕೆಯ ಕಲೆ ಅವರಿಗೆ ಸಿದ್ಧಿಸಿದೆ ಎಂಬುದಕ್ಕೆ ಇದು ಸಾಕ್ಷಿ.

ಸಂಸ್ಥಾಶಿಲ್ಪಿ

ಮಾತಿನ ಇಟ್ಟಿಗೆಗಳನ್ನು ಬಳಸಿ ವಿಚಾರದ ಭವನಗಳನ್ನು ಕಟ್ಟುವಲ್ಲಿ ಅವರು ಎಷ್ಟು ಶಕ್ತರೋ ಅದೇ ರೀತಿ ಸಂಸ್ಥೆಗಳನ್ನು ಕಟ್ಟುವುದರಲ್ಲೂ ತಾನು ಸಿದ್ಧಹಸ್ತ ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ.

ಅವರ ಕರ್ಮಕ್ಷೇತ್ರ ಪ್ರಾರಂಭವಾದದ್ದು ಮಂಡ್ಯದ ಎಂಜಿನಿಯರಿಂಗ್ ಕಾಲೇಜಿನಿಂದ. ವಿದ್ಯುತ್ ವಿಭಾಗದ ಮುಖ್ಯಸ್ಥರಾದ ಅವರು ತಮ್ಮ ವಿಭಾಗವನ್ನು ಸಶಕ್ತಗೊಳಿಸಿ ಸ್ನಾತಕೋತ್ತರ ತರಗತಿಗಳನ್ನು ಪ್ರಾರಂಭಿಸಿದರು.

ಅವರ ಸಂಘಟನಾಶಕ್ತಿ ಮತ್ತು ಸಂಸ್ಥಾನಿರ್ಮಾಣ ಶಕ್ತಿ ಸಂಪೂರ್ಣವಾಗಿ ಅರಳಿದ್ದು ಅವರು ಬೆಂಗಳೂರು ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಗೆ (ಬಿ.ಐ.ಟಿ.) ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡ ಬಳಿಕ. ಬೆಂಗಳೂರಿನಲ್ಲಿ ಆಗಲೇ ಯುನಿವರ್ಸಿಟಿ ವಿಶ್ವೇಶ್ವರಯ್ಯ ಮತ್ತು ಬಿ.ಎಂ.ಎಸ್. ಎಂಜಿನಿಯರಿಂಗ್ ಕಾಲೇಜುಗಳು ಅಸ್ತಿತ್ವದಲ್ಲಿದ್ದು ಹಲವಾರು ವರ್ಷಗಳಿಂದ ಉತ್ತಮ ಕಾಲೇಜುಗಳೆಂದು ಪ್ರಸಿದ್ಧಿಯನ್ನು ಪಡೆದಿದ್ದುವು. ಆ ಪ್ರಸಿದ್ಧವಾದ ಹಳೆಯ ಕಾಲೇಜುಗಳ ಎದುರು ಹೊಸ ಕಾಲೇಜೊಂದು ಬೆಳೆದು ಮೇಲೆ ಬರುವುದು ಸುಲಭ ವಿಷಯವೇನಲ್ಲ. ಡಾ. ರಾಮೇಗೌಡರ ಕರ್ತೃತ್ವ ಶಕ್ತಿಯು ಪ್ರಕಾಶಕ್ಕೆ ಬಂದದ್ದು ಅವರು ಬಿ.ಐ.ಟಿ. ಯನ್ನು ಒಂದು ಉತ್ತಮ ಕಾಲೇಜಾಗಿ ಕಟ್ಟಿ ಬೆಳೆಸಿದಾಗ. ಕರ್ನಾಟಕದ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರಪ್ರಥಮವಾಗಿ ಕಂಪ್ಯೂಟರ್ ವಿಜ್ಞಾನ ವಿಭಾಗವನ್ನು ಪ್ರಾರಂಭಿಸಿದ ಕೀರ್ತಿ ಡಾ. ರಾಮೇಗೌಡರಿಗೆ ಸಲ್ಲುತ್ತದೆ.

ಅವರು ತಮ್ಮ ಕಾರ್ಯಕ್ಷೇತ್ರವನ್ನು ಬೆಂಗಳೂರಿನಿಂದ ಪಾಂಡಿಚೇರಿಗೆ ಬದಲಾಯಿಸಲು ನಿರ್ಧರಿಸಿದ್ದು ಬಿ.ಐ.ಟಿ. ಗೆ ತುಂಬಲಾರದ ನಷ್ಟವಾಗಿ ಪರಿಣಮಿಸಿತ್ತು

ಆದರೆ ಪಾಂಡಿಚೇರಿ ಎಂಜಿನಿಯರಿಂಗ್ ಕಾಲೇಜಿಗೆ ಅದು ವರವಾಗಿ ಪರಿಣಮಿಸಿತು. ಬೆಂಗಳೂರಿನ ಬಿ.ಐ.ಟಿ.ಯನ್ನು ಕಟ್ಟಿ ಬೆಳೆಸಿದಾಗ ಪಡೆದ ಅನುಭವದ ಸದುಪಯೋಗ ಮಾಡಿಕೊಂಡ ಅವರು ಪಾಂಡಿಚೇರಿ ಎಂಜಿನಿಯರಿಂಗ್ ಕಾಲೇಜನ್ನು ಒಂದು ಮಹಾಸಂಸ್ಥೆಯಾಗಿ ಬೆಳೆಸಿದರು. ಇಂದು ಅದು ರಾಷ್ಟ್ರಮಟ್ಟದಲ್ಲಿ ಖ್ಯಾತಿಯನ್ನು ಪಡೆದಿದೆ.

ವಿದ್ವಾಂಸರಾಗಿ, ವಿದ್ಯಾನೇತಾರರಾಗಿ, ವಾಗ್ಮಿಯಾಗಿ, ಸಂಸ್ಥಾಶಿಲ್ಪಿಯಾಗಿ ಮತ್ತು ಸಹೃದಯಿಯಾಗಿ ಹೆಸರು ಪಡೆದ ಡಾ. ರಾಮೇಗೌಡರನ್ನು ೧೯೮೦ರಲ್ಲಿ ಕುಲಪತಿ ಪದವಿ ಅರಸಿಬಂದುದರಲ್ಲಿ ಆಶ್ಚರ್ಯವಿಲ್ಲ. ಉನ್ನತ ಮಟ್ಟದ ಸಂಸ್ಥಾಶಿಲ್ಪಿ ಮತ್ತು ವಿದ್ಯಾನೇತಾರನೆಂಬುದನ್ನು ಅವರು ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ತೋರಿಸಿಕೊಟ್ಟರು. ವಿಶ್ವವಿದ್ಯಾನಿಲಯದಲ್ಲಿ ನಿರ್ಜೀವವಾಗಿದ್ದ ಕೆಲವು ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸಿದರು. ಹಲವು ಹೊಸ ಯೋಜನೆಗಳನ್ನು ಕಾರ್ಯಗತಗೊಳಿಸಿದರು ಎಂದು ವಿಶ್ವವಿದ್ಯಾನಿಲಯದ ವರ್ತುಲಗಳಲ್ಲಿ ಅವರ ಕುರಿತು ಮೆಚ್ಚುಗೆಯ ನುಡಿಗಳನ್ನು ಹೇಳುತ್ತಾರೆ. ಕರ್ನಾಟಕ ಪ್ರಾಂತ್ಯದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿ ಒಂದೇ ರೀತಿಯ ಎಂಜಿನಿಯರಿಂಗ್ ಪಠ್ಯಕ್ರಮಗಳು ಜಾರಿಗೆ ಬರುವಂತೆ ಮಾಡಿದ ಸಮಿತಿಯ ನೇತಾರರು ಡಾ. ರಾಮೇಗೌಡರಾಗಿದ್ದರು.

ಸಾಹಿತ್ಯ ಕಲಾಭಿಮಾನಿ

ಡಾ. ರಾಮೇಗೌಡರು ಕನ್ನಡ ನಾಡು ಮತ್ತು ನುಡಿಯ ಮೇಲೆ ಅತೀವ ಅಭಿಮಾನವನ್ನು ಹೊಂದಿದವರು. ಅವರ ಭಾಷಣಗಳಲ್ಲಿ ಸಾಹಿತಿಗಳ ಮತ್ತು ಶ್ರೇಷ್ಠ ವ್ಯಕ್ತಿಗಳ ಸುಭಾಷಿತಗಳು ಹೇರಳವಾಗಿ ಬರುತ್ತಿರುತ್ತವೆ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಓದುತ್ತಿದ್ದಾಗ ಅವರಿಗೆ ಭಾಷಣ ಕಲೆಯಲ್ಲಿ ಮಾತ್ರವಲ್ಲದೆ ನಾಟಕ ಕಲೆಯಲ್ಲೂ ತುಂಬಾ ಆಸಕ್ತಿಯಿತ್ತು. ಅವರು ನಿರ್ದೇಶಿಸಿದ ಒಂದು ನಾಟಕದಲ್ಲಿ ಅಭಿನಯಿಸುವ ಅವಕಾಶ ನನಗೂ ಲಭಿಸಿತ್ತು.

ಅವರು ಮಂಡ್ಯದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗ ಕುವೆಂಪು ಅವರ ಎಲ್ಲ ನಾಟಕಗಳನ್ನೂ ರಂಗದ ಮೇಲೆ ತರುವ ಉದ್ದೇಶದಿಂದ ಕುವೆಂಪು ನಾಟಕ ಚಕ್ರ ಎಂಬ ಒಂದು ವಾರದ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಅದು ಮಂಡ್ಯ ನಗರದ ಹೆಮ್ಮೆಯ ಕಾರ್ಯಕ್ರಮವೆನಿಸಿತು. ನಾಟಕ ಚಕ್ರದ ಒಂದು ದಿನದ ಸಮಾರಂಭಕ್ಕೆ ಬರುವಂತೆ ಕುವೆಂಪು ಅವರನ್ನು ಆಮಂತ್ರಿಸಲು ರಾಮೇಗೌಡರು 'ಉದಯರವಿ' ಗೆ ಬಂದಾಗ ನಾನು ಅಲ್ಲೇ ಇದ್ದೆ. ಸಾಮಾನ್ಯವಾಗಿ ಕುವೆಂಪು ಅವರು 'ಉದಯ ರವಿ'ಯಿಂದ ಹೊರಬಂದು ಮೈಸೂರಿನಲ್ಲಿ ಯಾರದಾದರೂ ಸಮಾರಂಭದಲ್ಲಿ ಭಾಗವಹಿಸಲು ಒಪ್ಪಿಕೊಳ್ಳುವುದು ಅಪರೂಪ. ಸಮಾರಂಭದಲ್ಲಿ ಭಾಗವಹಿಸಲು ಮೈಸೂರು ಬಿಟ್ಟು ಹೊರಹೋಗುವುದಂತೂ ತುಂಬಾ ಅಪರೂಪ. ಆದರೆ ಡಾ. ರಾಮೇಗೌಡರು ಸುಲಭದಲ್ಲಿ ಬಿಡುವವರಲ್ಲ. ತನ್ನ ಮಾತಿನ ಮೋಡಿಯಿಂದ ಮಂಡ್ಯದ ಆಮಂತ್ರಣವನ್ನು ಸ್ವೀಕರಿಸುವಂತೆ ಕುವೆಂಪು ಅವರ

ಮನವೊಲಿಸಿದರು. ತನ್ನ ಒಂದು ದೊಡ್ಡ ಭಾವಚಿತ್ರವನ್ನು ಅವರಿಗೆ ಕೊಡುವುದರ ಮೂಲಕ ಕುವೆಂಪು ಅವರು ಡಾ. ರಾಮೇಗೌಡರ ಕಲಾಸೇವೆಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಸಾಹಿತ್ಯಚಿಂತನೆಯ ಆಳ ಮತ್ತು ವಿಸ್ತಾರಗಳಲ್ಲಿ ಎಂಜಿನಿಯರಿಂಗ್ ತಜ್ಞ ಡಾ. ರಾಮೇಗೌಡರು ಸಾಹಿತಿಗಳಿಗೆ ಸರಿಸಮರು. ಕುವೆಂಪು ಸಾಹಿತ್ಯವನ್ನಂತೂ ಅವರು ಆಳವಾಗಿ ಅಭ್ಯಸಿಸಿದ್ದಾರೆ. ಕುವೆಂಪು ಅವರು ಕೀರ್ತಿಶೇಷರಾದ ವರ್ಷ ೧೯೯೪ ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕುವೆಂಪು ಸಾಹಿತ್ಯ ಮತ್ತು ಜೀವನದ ವಿಚಾರ ಸಂಕಿರಣದ ಉದ್ಘಾಟನೆಯನ್ನು ಡಾ. ರಾಮೇಗೌಡರು ಮಾಡಿದರು. ಅವರ ಉದ್ಘಾಟನಾಭಾಷಣ ಅಪೂರ್ವವಾಗಿತ್ತೆಂದು ವಿದ್ವಜ್ಜನರು ಅಭಿಪ್ರಾಯಪಟ್ಟರು. ಅನ್ಯಕಾರ್ಯದ ಒತ್ತಡದಿಂದಾಗಿ ಅಂದು ನನಗೆ ಡಾ. ರಾಮೇಗೌಡರ ಭಾಷಣವನ್ನು ಕೇಳುವ ಸದವಕಾಶ ಸಿಕ್ಕಿರಲಿಲ್ಲ. ಸುಮಾರು ಒಂದೂ ಕಾಲು ಗಂಟೆಗಳ ಕಾಲ ಕುವೆಂಪು ಅವರ ಸಾಹಿತ್ಯ ಮತ್ತು ವಿಚಾರಗಳ ಕುರಿತು ಅವರು ಅರ್ಥವತ್ತಾಗಿ ಮತ್ತು ನಿರರ್ಗಳವಾಗಿ ಮಾತಾಡಿ ತಮ್ಮನ್ನು ತಾವೇ ಮೀರಿಸಿದ್ದರು ಎಂದು ಅನೇಕರು ಹೇಳಿದರು.

"ನೀವು ಮಾತನಾಡುವುದರ ಜತೆಗೇನೇ ಬರೆಯುವುದನ್ನು ಪ್ರಾರಂಭಿಸಿ" ಎಂದು ಹಿರಿಯರೊಬ್ಬರು ಸಲಹೆಕೊಟ್ಟರೆಂದು ಡಾ. ರಾಮೇಗೌಡರು ಒಮ್ಮೆ ನನ್ನೊಡನೆ ಹೇಳಿದರು. ಬರೆಯುವ ಸಾಮರ್ಥ್ಯವಿದ್ದರೂ ಅವರು ಬರವಣಿಗೆಗೆ ತೊಡಗಲಿಲ್ಲ. ಬರೆಯಲು ಪ್ರಾರಂಭಿಸಿದ್ದರೆ ಅವರು ಒಬ್ಬ ಉತ್ತಮ ಸಾಹಿತಿಯಾಗುವುದರಲ್ಲಿ ಸಂದೇಹವೇ ಇರುತ್ತಿರಲಿಲ್ಲ. ಅವರು ಕುಲಪತಿಯಾಗಿ ಮಾಡಿದ ಅನೇಕ ಭಾಷಣಗಳನ್ನು ಅವರ ಅಭಿಮಾನಿಗಳೊಬ್ಬರು ಶೀಘ್ರ ಲಿಪಿಯಲ್ಲಿ ಬರೆದುಕೊಂಡು ಅವುಗಳ ಪ್ರತಿಗಳನ್ನು ತಯಾರಿಸಿದರು. ಭಾಷಣಗಳ ಆಧಾರದಿಂದ ಮೂಡಿಬಂದ ಈ ಲೇಖನಗಳನ್ನು ಒಳಗೊಂಡ ಪುಸ್ತಕವೊಂದು ಪ್ರಕಟವಾಗಿದೆ. ಅವರ ಜ್ಞಾನದ ಆಳ ಮತ್ತು ವಿಸ್ತಾರಗಳು ಈ ಲೇಖನಗಳಿಂದ ವೇದ್ಯವಾಗುತ್ತವೆ.

ಮೈತ್ರಿಭಾವನೆಯ ಸಹೃದಯಿ

ಪ್ರತಿಯೊಬ್ಬ ವ್ಯಕ್ತಿಯೂ ಮುಂಜಾನೆ ಧ್ಯಾನಸ್ಥನಾಗಿ ಸ್ವಲ್ಪ ಹೊತ್ತು ಕುಳಿತು ಮೈತ್ರಿಭಾವನೆಯ ತರಂಗಗಳನ್ನು ವಿಶ್ವದ ಎಲ್ಲೆಡೆಗೆ ಬಿತ್ತರಿಸಬೇಕೆಂದು ಪತಂಜಲಿ ಮಹರ್ಷಿಯು ತನ್ನ ಯೋಗ ಸೂತ್ರದಲ್ಲಿ ಹೇಳಿದ್ದಾನೆ. ಪ್ರಾಯಶಃ ಡಾ. ರಾಮೇಗೌಡರು ಮೈತ್ರಿಭಾವನೆಯನ್ನು ಆ ರೀತಿ ಬಿತ್ತರಿಸುತ್ತಿರಬೇಕು. ಯಾಕೆಂದರೆ ಅವರತ್ತ ಮೈತ್ರಿಭಾವನೆಯನ್ನು ಕಳಿಸುತ್ತಿರುವವರು ನೂರಾರು ಮಂದಿ.

ಕೆಲವು ವರ್ಷಗಳ ಹಿಂದೆ ಎಂಜಿನಿಯರಿಂಗ್ ಕಾಲೇಜುಗಳ ಅಧ್ಯಾಪಕರ ಸಂಬಳದಲ್ಲಿ ಹೆಚ್ಚುವರಿ ಮಾಡಿಸಲು ಸಂಘದ ಪದಾಧಿಕಾರಿಗಳಾದ ಡಾ. ರಾಮೇಗೌಡರು ಮತ್ತು ಪ್ರೊ. ಎಂ.ಹೆಚ್. ಧನಂಜಯರವರು ಕರ್ನಾಟಕ ಸರ್ಕಾರದ ಹಲವು ಉನ್ನತ ಅಧಿಕಾರಿಗಳನ್ನು ಭೇಟಿಯಾಗುತ್ತಿದ್ದರು. ಆ ಸಂದರ್ಭದಲ್ಲಿ ಒಮ್ಮೆ, ಪ್ರೊ. ಧನಂಜಯರವರು, " ನಾವು

ಹೋದಲ್ಲೆಲ್ಲಾ ಅಧಿಕಾರಿಗಳು ಡಾ. ರಾಮೇಗೌಡರ ವಿಷಯ ಮೈತ್ರಿಭಾವನೆಯನ್ನು ಹೊಂದಿದವರಾಗಿರುತ್ತಿದ್ದರು. ಅದರ ಲಾಭವನ್ನು ಪಡೆದುಕೊಂಡು ಮಾತುಕತೆಯನ್ನು ಮುಂದುವರಿಸುವುದು ಸುಲಭವಾಗುತ್ತಿತ್ತು" ಎಂದು ಮೆಚ್ಚುಗೆಯಿಂದ ಹೇಳುತ್ತಿದ್ದರು.

ತುಂಬಿದ ಕೊಡ ತುಳುಕುವುದಿಲ್ಲ ಎನ್ನುವುದಕ್ಕೆ ಅವರು ಯೋಗ್ಯ ಉದಾಹರಣೆ. ಹಳೆಯ ಪರಿಚಯಸ್ಥರನ್ನು ಅವರು ಭೇಟಿಯಾದಾಗ ತಾನಿರುವ ಹಿರಿಯ ಸ್ಥಾನದ ದೊಡ್ಡಸ್ತಿಕೆಯನ್ನು ಒಂದಿಷ್ಟು ತೋರಿಸಿಕೊಳ್ಳದೆ ಹಿಂದಿನ ಪ್ರೀತಿ ಮೈತ್ರಿಗಳನ್ನೇ ತೋರಿಸಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಕಿರಿಯರಿಗೆಲ್ಲಾ ಅವರೊಂದು ಉಜ್ವಲ ದಾರಿದೀಪ. ಆ ದೀಪದ ಪ್ರಕಾಶ ಇನ್ನೂ ಹೆಚ್ಚಾಗಲಿ, ಮತ್ತು ಇನ್ನೂ ಎತ್ತರದ ಸ್ಥಾನದಿಂದ ಬೆಳಕು ಬೀರುತ್ತಿರಲಿ.

* * *

ಡಾ. ಎಸ್. ರಾಮೇಗೌಡರು ಮತ್ತು ಬೆಳಗಾವಿಯ ಸ್ನಾತಕೋತ್ತರ ಕೇಂದ್ರ

ಎಂ. ಬಿ. ನೇಗಿನಹಾಳ

ಡಾ. ಡಿ.ಸಿ. ಪಾವಟೆಯವರ ತರುವಾಯ ಕರ್ನಾಟಕ ವಿಶ್ವವಿದ್ಯಾಲಯದ ಪ್ರಗತಿ ಕುಂಠಿತಗೊಂಡು ಅದರ ಉನ್ನತ ಕೀರ್ತಿ ದಿನದಿಂದ ದಿನಕ್ಕೆ ಮಸುಳಿಸುವಂತೆ ತೋರುತ್ತಿತ್ತು. ಆರ್ಥಿಕ ಸ್ಥಿತಿ ತುಂಬ ಕಠಿಣವಾಗಿತ್ತು. ಇಂಥ ಸನ್ನಿವೇಶದಲ್ಲಿ ಅಧಿಕಾರವಹಿಸಿಕೊಂಡ ಡಾ. ಡಿ. ನಂಜುಂಡಪ್ಪನವರು ವಿಶ್ವವಿದ್ಯಾಲಯಕ್ಕೆ ಕಾಯಕಲ್ಪ ಮಾಡಿದರು. ಜತೆಗೆ ಹೆಚ್ಚಿನ ಉನ್ನತಿಗೂ ಶ್ರಮಿಸಿದರು. ಶಿಕ್ಷಣ ಪ್ರಸಾರಕ್ಕೆ ಆದ್ಯ ಗಮನವಿತ್ತ ಅವರು ೧೯೬೨ರಲ್ಲಿ ಬೆಳಗಾವಿಯ ಸ್ನಾತಕೋತ್ತರ ಕೇಂದ್ರವನ್ನು ದೃಢಸಂಕಲ್ಪದಿಂದ ಪ್ರಾರಂಭಿಸಿಯೇ ಬಿಟ್ಟರು. ಲಿಂಗರಾಜ ಕಾಲೇಜು, ಗೋಗಟೆ ಕಾಮರ್ಸ ಮತ್ತು ಆರ್.ಪಿ.ಡಿ. ಕಾಲೇಜುಗಳ ಸಕ್ರಿಯ ನೆರವಿನಿಂದ ಏಳು ಸ್ನಾತಕೋತ್ತರ ವರ್ಗಗಳು ಆಗ ಪ್ರಾರಂಭಗೊಂಡವು.

ಅವರು ಇನ್ನೂ ಮುಂದುವರಿದು ಈ ಕೇಂದ್ರಕ್ಕಾಗಿ ಶಾಶ್ವತ ಆವರಣ ಮತ್ತು ಬೇಕಾದ ಕಟ್ಟಡಗಳನ್ನು ಅನುಗೊಳಿಸುವ ದಿಶೆಯಲ್ಲಿ ಸಾಕಷ್ಟು ಪ್ರಯತ್ನ ಮಾಡಿದರೂ ಅವರ ಕಾಲಾವಧಿಯಲ್ಲಿ ಅದು ಕೈಗೂಡಲೇ ಇಲ್ಲ. ಬೆಳಗಾವಿಯ ಸೈನಿಕ ಕೇಂದ್ರ, ಮಹಾನಗರ ಸಭೆ, ಕರ್ನಾಟಕ ಸರ್ಕಾರದ ಕಂದಾಯ ಇಲಾಖೆ, ಶಿಕ್ಷಣ ಇಲಾಖೆ, ಅರಣ್ಯ ಇಲಾಖೆ ಮೊದಲಾದ ಸರ್ಕಾರದ ಬೇರೆ ವಿಭಾಗಗಳು ಒಟ್ಟು ಸಹಕಾರದಿಂದ ಕೈಗೂಡಬೇಕಾಗಿದ್ದ ಕೆಲಸ ಯಾವ ಪ್ರಗತಿಯನ್ನೂ ಸಾಧಿಸಲಿಲ್ಲ. ಬಹುಶಃ ಇನ್ನೊಬ್ಬ ಸಮರ್ಥ ಕುಲಪತಿಯನ್ನು ನಿರೀಕ್ಷಿಸಿಕೊಂಡು ಈ ಅಭಿವೃದ್ಧಿ ಕಾರ್ಯ ಹಾಗೇ ನಿಂತುಕೊಂಡಿತ್ತು.

ನಾನು ಕೆಎಲ್ಇ ಸಂಸ್ಥೆಯ ಶ್ರೀ ಕಾಡಸಿದ್ಧೇಶ್ವರ ಮಹಾವಿದ್ಯಾಲಯದಿಂದ ಬೆಳಗಾವಿಯ ಈ ಸ್ನಾತಕೋತ್ತರ ಕೇಂದ್ರಕ್ಕೆ ೧೯೬೮ರಲ್ಲಿ ಬಂದೆ. ಆಗ ಕೇಂದ್ರಕ್ಕೆ ಕೊಡಲ್ಪಟ್ಟ ಸ್ಥಳಾವಕಾಶ ತೀರ ಕಡಿಮೆ. ಮೂರು ಬೇರೆ ಬೇರೆ ಆವರಣಗಳಲ್ಲಿ ನಮ್ಮ ನಿತ್ಯ ಪಾಠಪ್ರವಚನಗಳು ನಡೆಯಬೇಕು. ಅಧ್ಯಾಪಕರಿಗೆ ಕುಳಿತುಕೊಳ್ಳಲು ಕೂಡ ಸರಿಯಾದ

ಸ್ಥಳವಿಲ್ಲ. ಗ್ರಂಥಾಲಯವಿಲ್ಲ. ಹೆಚ್ಚೇನು? ಕುರ್ಚಿ, ಮೇಜು, ಪ್ರಯೋಗಾಲಯದಂಥ ಪ್ರಾಥಮಿಕ ಆವಶ್ಯಕತೆಗಳು ಕೂಡ ಇರಲಿಲ್ಲ. ಇಂಥದರಲ್ಲಿ ಅಧ್ಯಾಪನ ಕಾರ್ಯ ನಡೆಯುತ್ತಿದ್ದುದೇ ಒಂದು ಮಹಾಸಾಧನೆಯಾಗಿತ್ತು. ಇನ್ನು ನಮ್ಮ ಸಂಶೋಧನೆ, ಗ್ರಂಥ ರಚನೆ, ವಿದ್ವಾಂಸರ ಉಪನ್ಯಾಸಗಳ ಏರ್ಪಾಡು ಮೊದಲಾದ ಕಾರ್ಯಗಳಿಗೆ ಯಾವ ಅನುಕೂಲವೂ ಇಲ್ಲ. ಹೆಚ್ಚು ಓದುವ, ಬರೆಯುವ ಆಶೆಯಿಟ್ಟುಕೊಂಡು ಸ್ನಾತಕೋತ್ತರ ಕೇಂದ್ರಕ್ಕೆ ಬಂದ ನನಗೆ ತುಂಬ ನಿರಾಶೆಯಾಗಿತ್ತು. ಒಂದು ಸಾಧಾರಣ ಲೇಖನ ಬರೆಯುವದಿದ್ದರೂ ಧಾರವಾಡದ ಗ್ರಂಥಾಲಯಗಳಿಗೆ ಹೋಗಬೇಕು, ಇಂಥ ಸ್ಥಿತಿಯಲ್ಲಿಯೆ ಆರು ವರ್ಷಗಳು ಕಳೆದುಹೋದವು.

೧೯೯೦ ಜೂನ್ ತಿಂಗಳಲ್ಲಿ ಅಂದಿನ ಕುಲಪತಿಗಳಾಗಿದ್ದ ಡಾ. ನಾರಾಯಣರೆಡ್ಡಿಯವರ ಅಧಿಕಾರಾವಧಿ ಮುಗಿಯುವದರಲ್ಲಿತ್ತು. ಅವರ ಅಧಿಕಾರಾವಧಿಯ ತೀರ ಕೊನೆಯ ಹಂತದಲ್ಲಿ ಬೆಳಗಾವಿಯ ಸ್ನಾತಕೋತ್ತರ ಕೇಂದ್ರಕ್ಕೆ ಸಮೀಪದ ಭೂತರಾಮನಹಟ್ಟಿಯ ನೂರೆಂಬತ್ತು ಎಕರೆ ಜಾಗ ದೊರಕಿತ್ತು. ಇನ್ನೇನು ಅವರು ಕುಲಪತಿ ಹುದ್ದೆಯಿಂದ ಬಿಡುಗಡೆ ಹೊಂದಿ ತಮ್ಮ ಮಾತೃ ಸಂಸ್ಥೆಯಾದ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಮರಳಬೇಕು. ಅಷ್ಟರಲ್ಲಿ ಬೆಳಗಾವಿ ಕೇಂದ್ರದ ಆಡಳಿತಾಧಿಕಾರಿಯ ಹುದ್ದೆಯನ್ನು ನನಗೆ ವಹಿಸಿಕೊಟ್ಟರು. ಇಂಥ ಪರಿಸ್ಥಿತಿಯಲ್ಲಿ ಅಧ್ಯಾಪಕ ವರ್ಗ, ಕಾರ್ಯಾಲಯ ಸಿಬ್ಬಂದಿ ಮತ್ತು ವಿದ್ಯಾರ್ಥಿಸಮುದಾಯ ಇವರೆಲ್ಲರಿಗೂ ಹೆಜ್ಜೆ ಹೆಜ್ಜೆಗೆ ಉಂಟಾಗುತ್ತಿದ್ದ ತೊಂದರೆಗಳನ್ನು ನಿವಾರಿಸಬೇಕಾದ ಹೊಣೆ ನನ್ನ ಮೇಲಿತ್ತು. ಸ್ಥಳಾವಕಾಶದ ತೊಂದರೆಯಿಂದ ಆಗುತ್ತಿದ್ದ ಕಿರುಕುಳ ವರ್ಷವರ್ಷಕ್ಕೂ ಹೆಚ್ಚುತ್ತಿತ್ತು. ವರ್ಷಂಪ್ರತಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚುತ್ತ ನಡೆದುದರಿಂದ ಅವರ ನಿತ್ಯಪಾಠಗಳ ವ್ಯವಸ್ಥೆ ಕ್ರೀಡಾವ್ಯವಸ್ಥೆ ಮುಂತಾದವು ತಲೆನೋವಿನ ಸಮಸ್ಯೆಯಾಗಿ ನನ್ನನ್ನು ಚಿಂತೆಗೀಡು ಮಾಡಿದ್ದವು.

ಇಂಥ ಸನ್ನಿವೇಶದಲ್ಲಿ ಪಾಂಡಿಚೇರಿಯಲ್ಲಿದ್ದ ಡಾ. ಎಸ್. ರಾಮೇಗೌಡ ಅವರು ನಮ್ಮ ವಿಶ್ವವಿದ್ಯಾಲಯಕ್ಕೆ ಕುಲಪತಿಗಳಾಗಿ ಬಂದರು. ಅಧಿಕಾರವಹಿಸಿಕೊಂಡ ಕೂಡಲೇ ಬೆಳಗಾವಿ ಕೇಂದ್ರವನ್ನು ಹೊಸ ಕುಲಪತಿಗಳು ಸಂದರ್ಶಿಸಲಿರುವರೆಂಬ ಸಂಗತಿಯನ್ನು ದೂರವಾಣಿ ಮುಖಾಂತರ ನನಗೆ ತಿಳಿಸಲಾಯಿತು. ಹೊಸದಾಗಿ ಬಂದ ಕುಲಪತಿಗಳು ಬೆಳಗಾವಿ ಸ್ನಾತಕೋತ್ತರ ಕೇಂದ್ರವನ್ನು ಅಧಿಕಾರವಹಿಸಿಕೊಂಡ ಒಂದು ವಾರದಲ್ಲಿ ಸಂದರ್ಶಿಸಲಿರುವ ಸುದ್ದಿ ತಿಳಿದು ಬೆಳಗಾವಿಯ ಸರ್ಕಾರಿ ಅತಿಥಿಗೃಹ('ಸರ್ಕಿಟ ಹೌಸ') ದಲ್ಲಿಯೇ ಅವರ ತಾತ್ಪೂರ್ತಿಕ ವಿಶ್ರಾಂತಿಗಾಗಿ ವ್ಯವಸ್ಥೆ ಮಾಡಿ ಅವರ ಕಾರ್ಯಾಲಯಕ್ಕೆ ಮಾಹಿತಿ ತಿಳಿಸಿದೆ.

ಇದು ನಡೆದದ್ದು ೧೯೯೦ ಜುಲೈ ೧೨ರ ಸುಮಾರಿಗೆ. ಡಾ. ಎಸ್. ರಾಮೇಗೌಡರು ಅಧಿಕಾರವಹಿಸಿಕೊಂಡು ಒಂದು ವಾರದಷ್ಟು ಅವಧಿ ಮಾತ್ರ ಕಳೆದಿತ್ತು. ಈ ಸನ್ನಿವೇಶದಿಂದ ಬೆಳಗಾವಿ ಅಭಿವೃದ್ಧಿಗೆ ಡಾ. ಎಸ್. ರಾಮೇಗೌಡರು ಮನಸ್ಸು ಮಾಡಬಹುದೆಂಬ ಆಶೆ

ನನ್ನಲ್ಲಿ ಮೇಲಿಂದ ಮೇಲೆ ಮೂಡತೊಡಗಿದವು. ಆದರೆ ಅಪಾರವಾದ ಹಣಕಾಸು ಇದಕ್ಕೆ ಬೇಕೆಂಬ ಅರಿವು ನನಗಿದ್ದುದರಿಂದ ಮನಸ್ಸಿನಲ್ಲಿ ಅಳಕು ಮಾತ್ರ ಇದ್ದೇ ಇತ್ತು. ಏನಾದರೂ ಕುಲಪತಿಗಳ ಮುಂದೆ ಈ ಸಮಸ್ಯೆಯನ್ನು ವಿಸ್ತಾರವಾಗಿ ಚರ್ಚಿಸಬೇಕೆಂಬ ತೀವ್ರ ಅಪೇಕ್ಷೆ ನನ್ನ ಮನಸ್ಸಿನಲ್ಲಿ ತುಂಬಿಕೊಂಡಿತ್ತು.

ಅಂದು ಬೆಳಗಿನ ಜಾವ ಒಂಬತ್ತುಕಾಲುಗಂಟೆಯ ಸಮಯ ಹೆಚ್ಚು ಮಳೆಯ ತೊಂದರೆ ಇರಲಿಲ್ಲ. ನಾನು ಹೋಗಿ ಸರ್ಕಿಟಹೌಸನಲ್ಲಿ ಆ ಕುಲಪತಿಗಳ ಆಗಮನಕ್ಕಾಗಿ ಕಾಯುತ್ತ ನಾಲ್ಕಾರು ನಿಮಿಷಗಳನ್ನು ಕಳೆದಿರಬೇಕು. ಅಷ್ಟರಲ್ಲಿಯೇ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್. ರಾಮೇಗೌಡರು ಕಾರಿನಿಂದಿಳಿದು ಬಂದರು. ಅತ್ಯಂತ ಹರ್ಷೋಲ್ಲಾಸದಿಂದ ತುಂಬಿದ ಅವರ ಭಾವವನ್ನು ಕಂಡಕೂಡಲೇ ನನಗೆ ಸಹಜವಾಗಿಯೇ ಮನಬಿಚ್ಚಿ ಮಾತನಾಡಲು, ಹಲವಾರು ವಿಷಯಗಳನ್ನು ಚರ್ಚಿಸಲು ಯಾವುದೇ ಸಂಕೋಚ ಉಂಟಾಗಲಿಲ್ಲ. ವಿಶ್ರಾಂತಿ ಕೋಣೆ ಪ್ರವೇಶಿಸುವದೇ ತಡ, ಬೆಳಗಾವಿ ಕೇಂದ್ರದ ಹಲವಾರು ವಿವರಗಳನ್ನು ಕುರಿತು ಪ್ರಶ್ನಿಸತೊಡಗಿದರು. ಒಂದೆರಡು ತಿಂಗಳು ಹಿಂದೆ ಮಾತ್ರ ದೊರೆತಿದ್ದ ಭೂತರಾಮಹಟ್ಟಿಯ ೧೭೮-೧೪ ಎಕರೆ ಜಮೀನಿನ ಸಂಗತಿಯನ್ನು ಅವರ ಗಮನಕ್ಕೆ ತಂದು ಈಗಲೆ ಈ ಸ್ಥಳವನ್ನು ಪರೀಕ್ಷಿಸಿಕೊಂಡು ಬರುವುದು ಒಳ್ಳೆಯದು; ಆಮೇಲೆ ನಗರದಲ್ಲಿರುವ ಸದ್ಯದ ಕಾರ್ಯಾಲಯವನ್ನು ಸಂದರ್ಶಿಸಬಹುದು' ಎಂಬ ನನ್ನ ವಿನಂತಿಯನ್ನು ಮನ್ನಿಸಿ ಭೂತರಾಮನಹಟ್ಟಿಗೆ ಹೊರಟೇಬಿಟ್ಟರು. ಭೂತರಾಮನ ಹಟ್ಟಿಯ ಪ್ರದೇಶವನ್ನು ನೋಡಿದ ಕೂಡಲೇ ಅದರ ನೈಸರ್ಗಿಕ ಸೌಂದರ್ಯ ಕಂಡು ಮಾರುಹೋದರು. ವಿಶ್ವವಿದ್ಯಾಲಯ ಸ್ನಾತಕೋತ್ತರ ಕೇಂದ್ರವೊಂದಕ್ಕೆ ಅದೊಂದು ಆದರ್ಶಪ್ರಾಯವಾದ ಆವರಣ ಎಂಬ ಅಂಶ ಅವರ ಮನಸ್ಸಿಗೆ ಹಿಡಿಸಿತು.

ಅಲ್ಲಿಂದ ಮರಳಿ ಬರುತ್ತ ಬೆಳಗಾವಿ ಸ್ನಾತಕೋತ್ತರ ಕೇಂದ್ರಕ್ಕೆ ಸಂಬಂಧಪಟ್ಟ ಹಲವಾರು ವಿಚಾರಗಳನ್ನು ಕುರಿತು ನನ್ನೊಡನೆ ಚರ್ಚಿಸಿದರು. ಮಾತನಾಡುತ್ತಲೇ ಲಿಂಗರಾಜ ಕಾಲೇಜಿನ ಆವರಣದಲ್ಲಿದ್ದ ನಮ್ಮ ಹಳೆಯ ಕಾರ್ಯಾಲಯಕ್ಕೆ ಬಂದೆವು. ಅಲ್ಲಿದ್ದ ಅನುಕೂಲ-ಅನಾನುಕೂಲಗಳನ್ನೆಲ್ಲ ಅವರು ತಕ್ಷಣ ಗ್ರಹಿಸಿದರು. ನನ್ನನ್ನು ತೀಕ್ಷ್ಣವಾಗಿ ನೋಡುತ್ತ 'ನೇಗಿನಹಾಳ ಅವರೆ, ಬೆಳಗಾವಿಯ ಸ್ನಾತಕೋತ್ತರ ಕೇಂದ್ರದ ಅಭಿವೃದ್ಧಿಗೆ ಮೂಲಭೂತವಾಗಿ ಬೇಕಾದುದು ಸ್ವಂತ ಕಟ್ಟಡಗಳು. ಈ ಎಂಟು ವರ್ಷಗಳ ಅವಧಿಯಲ್ಲಿ ಏನೂ ಆಗಿಲ್ಲ, ಹೊಸ ಆವರಣವನ್ನು ಕಟ್ಟಿಬೆಳೆಸಬೇಕಾದರೆ ತುಂಬಾ ಕಷ್ಟಪಡಬೇಕಾಗುತ್ತದೆ. ನಿಮ್ಮ ಮೇಲೆ ತುಂಬಾ ಕೆಲಸ ಬೀಳುತ್ತದೆ. ನಿಮ್ಮಿಂದ ಇದು ಸಾಧ್ಯವೇ?' ಎಂದರು. 'ಸರ್ ತಾವು ಹೇಳುವ ಕೆಲಸಗಳನ್ನು ನಾನು ಚಾಚು ತಪ್ಪದೇ ಮಾಡಬಲ್ಲೆ. ಆದರೆ ಆವರಣದ ಅಭಿವೃದ್ಧಿಯ ಗತಿ ತೀವ್ರಗೊಳ್ಳಬೇಕಾದರೆ, ತುರ್ತಾಗಿ ನನಗೆ ವಾಹನ ಸೌಕರ್ಯ ಒದಗಿಸಿ ಕೊಡಬೇಕು' ಎಂದು ವಿನಂತಿಸಿಕೊಂಡಾಗ ಕೂಡಲೆ ಅದಕ್ಕೆ ವ್ಯವಸ್ಥೆ ಮಾಡುವ ಭರವಸೆಯಿತ್ತರು. ಒಂದೆರಡು ತಿಂಗಳಲ್ಲಿಯೇ ಧಾರವಾಡ ಆವರಣದಿಂದ ಬೆಳಗಾವಿಗೆ ಉತ್ತಮ ಸ್ಥಿತಿಯಲ್ಲಿದ್ದ ಜೀಪೊಂದನ್ನು ಕಳುಹಿಸಿಕೊಟ್ಟರು. ಇದರಿಂದ ನನ್ನ ಆತ್ಮ ವಿಶ್ವಾಸ

ಹೆಚ್ಚಿತು. ನನ್ನ ಅಧ್ಯಯನದ ಕಡೆಗೆ ಸ್ವಲ್ಪ ಅಲಕ್ಷ್ಯವಾದರೂ ಪರವಾಯಿಲ್ಲ, ಬೆಳಗಾವಿಯ ನಗರಕ್ಕೆ ಸ್ವತಂತ್ರ ಸ್ನಾತಕೋತ್ತರ ಕೇಂದ್ರವೊಂದನ್ನು ಒದಗಿಸಿಕೊಟ್ಟ ಕಾರ್ಯದಲ್ಲಿ ನಾನು ಅಳಿಲು ಸೇವೆ ಸಲ್ಲಿಸುವ ಭಾಗ್ಯ ದೊರೆಯುತ್ತದೆ ಎಂಬ ವಿಶ್ವಾಸ ನನಗುಂಟಾಯಿತು. ಅದಕ್ಕಿಂತಲೂ ಹೆಚ್ಚಾಗಿ ಡಾ. ಎಸ್. ರಾಮೇಗೌಡರ ಕರ್ತೃತ್ವ ಶಕ್ತಿಯಲ್ಲಿ ನನಗೆ ವಿಶ್ವಾಸ ಉಂಟಾಯಿತು. ಡಾ. ಎಸ್. ರಾಮೇಗೌಡರು ಎಂಥದೇ ಚಿಕ್ಕ ಅಥವಾ ದೊಡ್ಡ ಕೆಲಸವಿರಲಿ, ಮಾಡುವುದಾಗಿ ಒಮ್ಮೆ ಹೇಳಿದರೆ ಅದನ್ನು ಮಾಡಿಯೇ ತೀರುತ್ತಾರೆ ಎನ್ನುವ ನಂಬಿಕೆ ನನಗೆ ಪ್ರಾರಂಭದ ಹಂತದಲ್ಲಿಯೇ ಉಂಟಾದುದರಿಂದ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಪೂರ್ಣ ಶ್ರದ್ಧೆ ಇಟ್ಟು ಕೆಲಸ ಮಾಡುವುದು ಸಾಧ್ಯವಾಯಿತು.

ಈ ರೀತಿ ಭೂತರಾಮನಹಟ್ಟಿಯ ಆವರಣದ ಅಭಿವೃದ್ಧಿ ಕಾರ್ಯ ಪ್ರಾರಂಭವಾಗುತ್ತಲೇ ಒಂದೊಂದಾಗಿ ಕೆಲಸಗಳು, ಅವುಗಳ ಜತೆಗೆ ಹತ್ತಾರು ಸಮಸ್ಯೆಗಳು ಹುಟ್ಟಿಕೊಳ್ಳತೊಡಗಿದವು. ಕರ್ನಾಟಕ ಸರ್ಕಾರವು ನಮ್ಮ ವಿಶ್ವವಿದ್ಯಾಲಯಕ್ಕೆ ಕೊಡಮಾಡಿದ ಜಮೀನು ಎಷ್ಟೆಂಬುದು ಖಚಿತವಾಗಿತ್ತಾದರೂ ಅದರ ಮೇರೆಗಳು ಖಚಿತವಾಗಿರಲಿಲ್ಲ. ಅದಕ್ಕಾಗಿ ಸರ್ವೆವಿಭಾಗದವರ ಮೊರೆ ಹೋಗಬೇಕಾಯಿತು. ನಮ್ಮ ಸರ್ಕಾರಿ ಕಚೇರಿಗಳಂತೆ ಈ ವಿಭಾಗದ ಕಚೇರಿಗಳು ಪ್ರಾರಂಭದಲ್ಲಿ ಕೊಂಚ ಮಟ್ಟಿಗೆ ವಿಳಂಬವೆಂಬಂತೆ ಕಂಡುಬಂದ ಕೂಡಲೇ ರಾಮೇಗೌಡರು ಬೆಳಗಾವಿಗೆ ಬಂದು ಆಗಿನ ವಿಭಾಗಾಧಿಕಾರಿಗಳಾಗಿದ್ದ ಮಾನ್ಯ ಶ್ರೀ ಶಿವಾನಂದರವರನ್ನು ಸಂಪರ್ಕಿಸಿದರು. ಶ್ರೀ ಶಿವಾನಂದ ಅವರು ಕೂಡಾ ಅಭಿವೃದ್ಧಿ ಚಟುವಟಿಕೆಗಳಲ್ಲಿ ತುಂಬಾ ಆಸಕ್ತಿ ಉಳ್ಳವರಾಗಿದ್ದರಿಂದ ಆಗಲೇ ಅಧಿಕಾರಿಗಳ ಸಭೆಕರೆದು ನಮ್ಮ ಆವರಣದ ಸರ್ವೆಕಾರ್ಯವನ್ನು ಮಾಡಿಕೊಡಬೇಕೆಂದು ತಿಳಿಸಿದರು.

ಸರ್ವೆ ವಿಭಾಗದ ಅಧಿಕಾರಿಗಳು ಕೂಡ ತುಂಬಾ ಮುತುವರ್ಜಿಯಿಂದ ಸಂಬಂಧಪಟ್ಟ ಹಳೆಯ ದಾಖಲೆಗಳನ್ನು ನಕಾಶೆಗಳನ್ನು ಹುಡುಕಿ, ಅಧಿಕಾರಿಗಳೇ ಸ್ವತಃ ಗುಡ್ಡದ ತುಂಬ ಸಂಚರಿಸಿ ೧೮೮೮ರಷ್ಟು ಹಿಂದಿನ ಭೂಮಾಪನ ಸೀಮಾರೇಖೆಗಳನ್ನೆಲ್ಲ ಗುರ್ತಿಸಿ ಕೊಟ್ಟರು. ಹಲವಾರು ಸಲ ಭೂಮಾಪನ ಇಲಾಖೆಯ ಮೇಲಾಧಿಕಾರಿಗಳೇ ನಮ್ಮ ಕ್ಷೇತ್ರಕ್ಕೆ ಭೇಟ್ಟಿ ನೀಡಿ ತೊಂದರೆಗಳನ್ನು ನಿವಾರಿಸಿ ನಮಗೆ ಸರ್ಕಾರ ಕೊಡಮಾಡಿದ್ದ ಜಾಗೆಯನ್ನು ಸಮಗ್ರವಾಗಿ ನಮ್ಮ ವಶಕ್ಕೆ ಕೊಟ್ಟಿದ್ದರಿಂದ ಮುಂದಿನ ಹಂತದ ಕಾರ್ಯಕೈಕೊಳ್ಳಲು ಮಾರ್ಗ ಸುಲಭವಾಯಿತು.

ಒಂದು ವಿಸ್ತಾರವಾದ ಪ್ರದೇಶದಲ್ಲಿ ಒಳ್ಳೆಯ ರಸ್ತೆಗಳು, ಕಟ್ಟಡಗಳು, ನೀರು ಸರಬರಾಜು, ವಿದ್ಯುತ್-ಅನುಕೂಲ, ಚರಂಡಿ ವ್ಯವಸ್ಥೆ ಇವೆಲ್ಲ ಅಚ್ಚುಕಟ್ಟಾಗಿ ಬೆಳೆದು ಬರಬೇಕಾದರೆ, ಇನ್ನೊಂದು ರೀತಿಯ ಸರ್ವೆ ಆವಶ್ಯವಾಗಿತ್ತು. ಇದು ತುಂಬಾ ವಿಳಂಬದ ಕೆಲಸ. ಜಾಹಿರಾತಿನ ಮೂಲಕ ಖಾಸಗಿಯವರಿಗೆ ಕೊಟ್ಟು ಅವರಿಂದ ಮಾಡಿಸಬೇಕಾದರೆ ಲಕ್ಷದ ಮೇಲೆ ಅದಕ್ಕೆ ಹಣಖರ್ಚಾಗುತ್ತಿದ್ದುದಲ್ಲದೆ ಸುಮಾರು ಒಂದು ವರ್ಷ ಕಾಲದಷ್ಟು ಸಮಯ ಬೇಕಾಗಿತ್ತು. ಇಂತ ಕೆಲಸಗಳಲ್ಲಿ ತುಂಬಾ ಅನುಭವಶಾಲಿಗಳಾಗಿದ್ದ ಡಾ. ಎಸ್. ರಾಮೇಗೌಡರು ತಮ್ಮದೇ ಆದ ವಿಶಿಷ್ಟ ಕಾರ್ಯ ಯೋಜನೆಯನ್ನು ಇದಕ್ಕಾಗಿ ರೂಪಿಸಿಕೊಂಡು

ಬೆಳಗಾವಿಗೆ ಬಂದರು. ಬೆಳಗಾವಿಯಲ್ಲಿನ ಕೆ. ಎಲ್. ಇ ಸಂಸ್ಥೆಯ ಇಂಜನಿಯರಿಂಗ್ ಕಾಲೇಜಿನ ಪ್ರಾಚಾರ್ಯರಾಗಿದ್ದ ಪ್ರೊ. ಬಬಲಾದಿಯವರನ್ನು ಸಂಪರ್ಕಿಸಿದರು. ಅವರು ತಮ್ಮ ಪ್ರಾಧ್ಯಾಪಕರು ಮತ್ತು ವಿದ್ಯಾರ್ಥಿಗಳ ಜೊತೆಗೆ ಈ ಜಮೀನಿನ ಕಾಂಟೊರ ಸರ್ವೆ ಕಾರ್ಯ ಮಾಡಿಕೊಡಲು ಕೇಳಿಕೊಂಡಾಗ ಅವರು ಸಂತೋಷದಿಂದ ಒಪ್ಪಿ ಅತ್ಯಂತ ಕಡಿಮೆ ಖರ್ಚಿನಲ್ಲಿ ಮತ್ತು ಸುಮಾರು ಎರಡೇ ತಿಂಗಳ ಅವಧಿಯಲ್ಲಿ ಮುಗಿಸಿ ನಕಾಶೆಗಳನ್ನು ಸಿದ್ಧಪಡಿಸಿಯೇ ಬಿಟ್ಟರು. ಇದರಿಂದ ನೇರವಾದ ಅಭಿವೃದ್ಧಿ ಕಾರ್ಯಗಳಿಗೆ ಮುಂದಡಿ ಇಡಲು ಸಾಧ್ಯವಾಯಿತು.

ಇದಾದ ಮೇಲೆ ನೀರಿಗಾಗಿ ಕೊಳವೆ ಬಾವಿಗಳನ್ನು ತೋಡಿಸಿದಾಗ ಎರಡು ಬಾವಿಗಳಲ್ಲಿ ಸಾಕಷ್ಟು ನೀರು ದೊರೆತದ್ದು ಬೆಳಗಾವಿ ಆವರಣದ ಭಾಗ್ಯವೇ ಸರಿ. ನೀರಿಗಾಗಿ ಯಾವ ತೊಂದರೆಯೂ ಉಂಟಾಗದಂತೆ ಜಲದೇವತೆ ಪ್ರಸನ್ನಳಾದುದರಿಂದ ಮುಂದಿನ ಎಲ್ಲ ಕಾರ್ಯಗಳಿಗೆ ಸಿದ್ಧತೆ ಮಾಡಿಕೊಳ್ಳುವದು ಸುಲಭವಾಯಿತು.

ಕರ್ನಾಟಕ ನಿರ್ಮಾಣ ನಿಗಮದವರಿಗೆ ಆವರಣದ ರಸ್ತೆಗಳನ್ನು ನಿರ್ಮಿಸುವ ಕಾರ್ಯ ಒಪ್ಪಿಸಿ ಕೊಡಲಾಯಿತು. ಈ ಸರ್ಕಾರಿ ಸಂಸ್ಥೆಯ ಕಾರ್ಯ ವೈಖರಿ ಅನೇಕ ವೇಳೆ ಅಸಹನೀಯ ಎನ್ನುವಷ್ಟು ನಿಧಾನವಾಗಿತ್ತು. ಸರ್ಕಾರದ ಕೆಂಪುಪಟ್ಟಿ ಎಂದರೇನು ಎನ್ನುವದರ ಕಲ್ಪನೆ ನನಗೆ ಬಹಳ ಚೆನ್ನಾಗಿ ಮನದಟ್ಟಾದುದು ಆ ಕೆಲಸದಿಂದಲೆ. ನಾಲ್ಕೈದು ತಿಂಗಳಲ್ಲಿ ರಸ್ತೆ ನಿರ್ಮಾಣ ಕಾರ್ಯ ಮುಗಿದು ಹೋಗುತ್ತದೆ ಎಂದು ಕಾದಿದ್ದೆ. ನಮಗೆಲ್ಲ ತೀರ ನಿರಾಶೆ ಎದುರಾಗಿತ್ತು. ಈ ಕಾರ್ಯ ಪೂರೈಕೆಗಾಗಿ ನಾವು ಮೂರು ವರ್ಷಗಳನ್ನೆ ವ್ಯಯಿಸಬೇಕಾಗಿಬಂತು. ಕುಲಪತಿಗಳಾದ ರಾಮೇಗೌಡರು ಈ ದಡ್ಡ ಎತ್ತಿನ ಬಾಲ ಎಷ್ಟು ಮುರಿದರೂ ಈ ಎತ್ತು ಓಡುತ್ತಲೇ ಇರಲಿಲ್ಲ. ಅವರ ನಿಧಾನ ಪ್ರವೃತ್ತಿಗಾಗಿ ಡಾ. ಎಸ್. ರಾಮೇಗೌಡರು ದಂಡಹಾಕುವ ಅನಿವಾರ್ಯ ಕ್ರಮವನ್ನು ಕೈಕೊಳ್ಳಬೇಕಾಯಿತು. ಅಂತು ೬೪ರ ಫೆಬ್ರುವರಿಯ ವೇಳೆಗೆ ಎಂದರೆ ಸಮಗ್ರ ಆವರಣದ ಉದ್ಘಾಟನೆಯ ವೇಳೆಗೆ ೨ ಕಿ.ಮಿ.ನಷ್ಟು ಉತ್ತಮ ಡಾಂಬರುರಸ್ತೆ ಸಿದ್ಧಗೊಂಡಿತು.

ನೀರು ಸರಬರಾಜು, ರಸ್ತೆ ನಿರ್ಮಾಣ ಮುಂತಾದ ಕಾರ್ಯಗಳು ಅತ್ತ ಸಾಗುತ್ತಿದ್ದಂತೆಯೇ ಇತ್ತ ಮೂರು ಭವ್ಯ ಕಟ್ಟಡಗಳ ನಿರ್ಮಾಣ ಕಾರ್ಯ ಪ್ರಾರಂಭವಾಗಿತ್ತು. ೨೪ ಕೋಣೆಗಳ ಎರಡಂತಸ್ತಿನ ಭವ್ಯ ಕಟ್ಟಡ, ಏಳು ಕೋಣೆಗಳ ಅತಿಥಿಗೃಹ, ನೂರು ವಿದ್ಯಾರ್ಥಿಗಳ ವಿದ್ಯಾರ್ಥಿನಿಲಯ, ಇವುಗಳ ನಿರ್ಮಾಣ ಕಾರ್ಯ ಏಕಕಾಲಕ್ಕೆ ಪ್ರಾರಂಭಗೊಂಡಿದ್ದವು. ನಿರ್ಮಾಣ ಕಾರ್ಯದ ವಿವಿಧ ಹಂತದ ಕಾರ್ಯಗಳೆಲ್ಲ ಚುರುಕಾಗಿ ನಡೆಯುತ್ತಲಿದ್ದವು. ನನ್ನ ಲೆಕ್ಕದಲ್ಲಿ ದೊಡ್ಡದಾದ ಮುಖ್ಯ ಕಟ್ಟಡವಾದರೂ ೧೯೬೫ ಜೂನ ಹೊತ್ತಿಗೆ ಮುಗಿದರೆ ಸಾಕಾಗಿತ್ತು. ಇಂದಿನ ದಿನಗಳಲ್ಲಿ ಅನುಕೂಲ ಇರದ ಗುಡ್ಡದಲ್ಲಿ ಸುಮಾರು ೭ ಕೋಟಿ ರೂಪಾಯಿಗಳ ವೆಚ್ಚದ ಮೂರುದೊಡ್ಡ ಕಟ್ಟಡಗಳನ್ನು ಇಷ್ಟು ಕಡಿಮೆ ಅವಧಿಯಲ್ಲಿ ನಿರ್ಮಿಸುವುದೆಂದರೆ ಅಸಾಧ್ಯವೇ ಸೈ. ಮೂರು ಕಟ್ಟಡಗಳು ಪೂರ್ಣವಾದಾವೆಂಬ ಭರವಸೆ ನನಗಂತೂ ಇರಲೇ ಇಲ್ಲ. ಯೋಗ್ಯ ನಿರ್ಮಾಣ

ಇಂಜಿನಿಯರರನ್ನು ಹಿಡಿಯಬೇಕು, ಗುತ್ತಿಗೆದಾರರು ಮುಂದೆ ಬರಬೇಕು, ನಮ್ಮ ವಿ. ವಿ. ಕಟ್ಟಡವಿಭಾಗ ಸಿಬ್ಬಂದಿಯೆಲ್ಲ ಬೇಸರವಿಲ್ಲದೆ ದುಡಿಯಬೇಕು, ಪ್ರಮಾದಗಳಾಗದಂತೆ ಯಾವತ್ತೂ ಎಚ್ಚರವಹಿಸಬೇಕು. ನನಗಂತೂ ಯಾವತ್ತೂ ಪ್ರಮಾದಗಳದ್ದೇ ಭಯ. ಇವೆಲ್ಲ ಕಾರ್ಯಗಳು ಸರ್ಕಾರ ಮತ್ತು ವಿಶ್ವವಿದ್ಯಾಲಯದ ನಿಯಮಾವಳಿಗಳ ಪ್ರಕಾರವೇ ಮುಂದೆ ಸಾಗಬೇಕು. ಇಷ್ಟು ದೊಡ್ಡದಾದ, ಸಮಗ್ರಯೋಜನೆಯನ್ನು ಧಾರವಾಡದಲ್ಲಿ ಕುಳಿತುಕೊಂಡೆ ಮುಖ್ಯ ಅಧಿಕಾರಿಗಳೆಲ್ಲ ನಿಯಂತ್ರಿಸಬೇಕು. ಇವನ್ನೆಲ್ಲ ಕುರಿತು ಒಮ್ಮೊಮ್ಮೆ ಚಿಂತಿಸತೊಡಗಿದಾಗ ನಾನು ಏನೂ ತಿಳಿಯದೆ ದಿಙ್ಮೂಢನಾಗುತ್ತಿದ್ದೆ. ಈಗ ದೂರವಾಣಿಯಲ್ಲಿ ಕುಲಪತಿಗಳನ್ನು ಸಂಪರ್ಕಿಸುವದೊಂದೆ ನನಗೆ ತೋಚುತ್ತಿದ್ದುದು. ಹಾಗೆ ಸಂಪರ್ಕಿಸಿದಾಗ ತುಂಬಾ ಆತ್ಮವಿಶ್ವಾಸದ ಸಲಹೆಗಳು ಡಾ. ಎಸ್. ರಾಮೇಗೌಡರಿಂದ ಬರುತ್ತಿದ್ದವು. ಇಷ್ಟಲ್ಲದೆ ಅವರು ಮೇಲಿಂದ ಮೇಲೆ ಆವರಣಕ್ಕೆ ಭೇಟಿ ಕೊಡುತ್ತಿದ್ದರು. ಅವರೊಡನೆ ಆಗ ಚರ್ಚಿಸಿದಾಗ ನನಗೆ ಬೆಟ್ಟದಂತೆ ತೋರುತ್ತಿದ್ದ ಸಮಸ್ಯೆಗಳು ಅವರಿಗೆ ಅಡಿಕೆಯ ಬೆಟ್ಟಗಳಾಗಿ ಕಾಣುತ್ತಿದ್ದವು. ತಕ್ಷಣ ಪರಿಹಾರೋಪಾಯಗಳನ್ನು ಕಂಡು ಹಿಡಿಯುವ ಅಸಾಧಾರಣ ಚಾಕಚಕ್ಯತೆ, ಅವರಲ್ಲಿರುವುದು ನನ್ನನ್ನು ಮೂಕವಿಸ್ಮಿತನನ್ನಾಗಿ ಮಾಡುತ್ತಿತ್ತು.

ಹೀಗೆ ಭರದಿಂದ ಅಭಿವೃದ್ಧಿ ಕೆಲಸಗಳು ಸಾಗುತ್ತಿರುವಾಗ, ಇನ್ನೊಂದು ಭೂತಾಕಾರದ ಸಮಸ್ಯೆಯನ್ನು ಎದುರಿಸಬೇಕಾಗಿ ಬಂತು. ಅಲ್ಲಿಯವರೆಗೆ ಯಾವ ಗಲಾಟೆಯೂ ಇಲ್ಲದೆ ದಿನನಿತ್ಯ ನಮ್ಮ ಅಭಿವೃದ್ಧಿ ಚಟುವಟಿಕೆಗಳನ್ನು ಗಮನಿಸುತ್ತಿದ್ದ ಅರಣ್ಯ ಇಲಾಖೆಯವರು ೯೧ರ ಮಧ್ಯಾವಧಿಯಲ್ಲಿ ನಮ್ಮ ಆವರಣದ ಜಮೀನೆಲ್ಲ ತಮ್ಮದೆಂದು ಸಾಧಿಸ ತೊಡಗಿದರು. ಕೇಂದ್ರ ಸರ್ಕಾರದ ಪರಿಸರ ಇಲಾಖೆಯಿಂದ ತುಂಬಾ ಉಗ್ರ ಪತ್ರಗಳು ಬರತೊಡಗಿದವು. ಕೆಲವೊಮ್ಮೆ ಅರಣ್ಯ ಇಲಾಖೆಯ ಅಧಿಕಾರಿಗಳು ನಿಮ್ಮ ಕಟ್ಟಡಗಳನ್ನೆಲ್ಲ ಬುಲ್‌ಡೋಜರ ಹಚ್ಚಿ ನೆಲಸಮ ಮಾಡುತ್ತೇವೆ. ನೀವು ಜೈಲಿಗೆ ಹೋಗಬೇಕಾಗುತ್ತದೆ ಎಂಬ ಗಂಭೀರ ಎಚ್ಚರಿಕೆಗಳನ್ನು ಕೊಡುತ್ತಿದ್ದರು. ಸುಮಾರು ೮-೧೦ ತಿಂಗಳುಗಳ ಕಾಲ ಕೆಲಸಗಳನ್ನು ನಿಲ್ಲಿಸಿಯೇ ಬಿಡಬೇಕಾಗಿ ಬಂತು. ಬೆಳಗಾವಿಯಲ್ಲಿ ಅಷ್ಟೇ ಏಕೆ, ಧಾರವಾಡದಲ್ಲಿ ಕೂಡ ಎಲ್ಲರೂ ಹೊಸ ಆವರಣದ ಅಭಿವೃದ್ಧಿ ನಿಂತಿತೆಂದು ಭಾವಿಸಿದರು. ಆದರೆ, ಡಾ. ಎಸ್. ರಾಮೇಗೌಡರು ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಬಂಗಾರಪ್ಪನವರು, ಶಿಕ್ಷಣ ಮಂತ್ರಿಗಳಾಗಿದ್ದು, ತರುವಾಯ ಮುಖ್ಯಮಂತ್ರಿಗಳಾಗಿದ್ದ ವೀರಪ್ಪಮೊಯ್ಲಿಯವರಿಂದ ಬೆಂಬಲ ಪಡೆಯುವಲ್ಲಿ ಯಶಸ್ಸು ಗಳಿಸಿದರು. ಎರಡು ಸಲ ನಮ್ಮ ಆವರಣದ ಜಮೀನಿನ ವಿಷಯ ಮಂತ್ರಿ ಮಂಡಳದ ಸಭೆಯ ಮುಂದೆ ಬಂತು. ಎರಡೂ ಸಂದರ್ಭ ಕ.ವಿ.ವಿ.ಗೆ ಬೆಳಗಾವಿಯಲ್ಲಿ ಕೊಡಮಾಡಿದ ಪ್ರದೇಶ ನ್ಯಾಯವಾಗಿ ವಿಶ್ವವಿದ್ಯಾಲಯಕ್ಕೆ ಸೇರಿದ್ದು ಅದನ್ನು ಅರಣ್ಯ ಇಲಾಖೆಗೆ ಒಪ್ಪಿಸುವ ಪ್ರಮೇಯವೇ ಇಲ್ಲವೆಂದು ಅಂದಿನ ಎಲ್ಲ ಅಧಿಕಾರಿಗಳಿಗೂ ಮಂತ್ರಿಗಳಿಗೂ ಮನವರಿಕೆ ಮಾಡಿಕೊಡುವಲ್ಲಿ ಡಾ. ಎಸ್. ರಾಮೇಗೌಡರು ಯಶಸ್ವಿಯಾದರು. ಎರಡನೆಯ ಬಾರಿ ಕರ್ನಾಟಕ ಸರ್ಕಾರ ಈ ವಿಷಯಕ್ಕೆ ತಮ್ಮ ತೀರ್ಮಾನವನ್ನು ಕೇಂದ್ರ ಸರ್ಕಾರಕ್ಕೆ ತಿಳಿಸಿ ವಿಶ್ವವಿದ್ಯಾಲಯದ ಹಕ್ಕನ್ನು

ಎತ್ತಿ ಹಿಡಿಯಿತು. ಇಷ್ಟೆಲ್ಲ ಆದ ಮೇಲೆ ಎಂದರೆ ೧೯೮೨ರ ಬೇಸಿಗೆಯಿಂದ ಕಟ್ಟಡ ನಿರ್ಮಾಣ ಕೆಲಸ ಕಾರ್ಯಗಳು ಹುರುಪಿನಿಂದ ಮುಂದುವರೆದವು. ೧೯೮೩ರ ಜೂನದಷ್ಟೊತ್ತಿಗೆ ಮೂರು ಕಟ್ಟಡಗಳು ಪೂರ್ಣಗೊಂಡವು.

ಅತಿಥಿಗಳ ಆಗಮನದ ಅನಿಶ್ಚಿತತೆಯಿಂದಾಗಿ ಉದ್ಘಾಟನಾ ಸಮಾರಂಭ ಸ್ವಲ್ಪ ಮುಂದೆ ಹೋದರೂ, ೧೯೮೪ರ ಫೆಬ್ರುವರಿಯಲ್ಲಿ ಅದು ಕೂಡ ಒಳ್ಳೆಯ ವಿಜೃಂಭಣೆಯಿಂದ ನೆರವೇರಿತು. ಮೊದಲಿನಿಂದಲೂ ಅದರ ಬೆಳವಣಿಗೆಯ ಬಗ್ಗೆ ಆಸಕ್ತಿ ವಹಿಸಿದ್ದ ಅಂದಿನ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯಿಲಿಯವರು ಬೆಳಗಾವಿಗೆ ಬಂದು ಆವರಣದ ಉದ್ಘಾಟನಾ ಸಮಾರಂಭ ನಡೆಸಿಕೊಟ್ಟರು. ಕೇಂದ್ರಮಂತ್ರಿಗಳಾಗಿದ್ದ ಶ್ರೀ. ಬಿ. ಶಂಕರಾನಂದ ಅವರು ಕಾರ್ಯಕ್ರಮದ ಅತಿಥಿಗಳಲ್ಲಿ ಒಬ್ಬರಾಗಿ ಬಂದರು. ಬೆಳಗಾವಿ ವಿಭಾಗದ ಹಲವಾರು ಸಂಸದರು, ಬೆಳಗಾವಿ ಜಿಲ್ಲೆಯ ಎಲ್ಲ ಶಾಸಕರೂ ಅತ್ಯಂತ ಸಂತೋಷದಿಂದ ಅದರಲ್ಲಿ ಪಾಲ್ಗೊಂಡರು. ಆವರಣದ ಅಭಿವೃದ್ಧಿಯನ್ನು ಕಂಡ ಎಲ್ಲರೂ ಕ.ವಿ.ವಿ. ಆಡಳಿತ ಮಂಡಳಿಯವರನ್ನು ಮತ್ತು ಅಧಿಕಾರಿ ವರ್ಗದವರನ್ನು ಮುಖ್ಯವಾಗಿ ಕುಲಪತಿಗಳಾದ ಡಾ. ಎಸ್. ರಾಮೇಗೌಡರನ್ನು ಹೃತ್ಪೂರ್ವಕವಾಗಿ ಶ್ಲಾಘಿಸಿದರು.

ಹೀಗೆ ಬೆಳಗಾವಿ ಆವರಣಕ್ಕೆ ಬೇಕಾದ ಮುಖ್ಯ ಅನುಕೂಲಗಳನ್ನೆಲ್ಲಾ ಒಳಗೊಂಡ ಈ ದೊಡ್ಡ ಯೋಜನೆ ಮೂರೇ ವರ್ಷದಷ್ಟು ಕಡಿಮೆ ಅವಧಿಯಲ್ಲಿ ಪೂರ್ಣಗೊಂಡುದು ಪವಾಡವೇ ಸೈ.

ಹಣಕಾಸಿನ ಬಿಕ್ಕಟ್ಟಿನ ಈ ದಿನಗಳಲ್ಲಿ ಡಾ. ಎಸ್. ರಾಮೇಗೌಡ ತುಂಬ ಶ್ರಮವಹಿಸಿ ಎರಡು ಕೋಟಿ ರೂಗಳಿಗಿಂತಲೂ ಹೆಚ್ಚು ಹಣ ಕ್ರೋಢೀಕರಿಸಿ ತಂದರು. ವಿ.ವಿ. ಧನ ಸಹಾಯ ಆಯೋಗದ ಸದಸ್ಯರು ಕೂಡ ಕಟ್ಟಡಗಳನ್ನು ಪ್ರತ್ಯಕ್ಷ ಪರಿಶೀಲಿಸಿ ತಮ್ಮ ಮೆಚ್ಚುಗೆ ವ್ಯಕ್ತ ಪಡಿಸಿದರು. ರಾಜ್ಯದ ಮಂತ್ರಿವರ್ಯರೂ, ಅಧಿಕಾರಿಗಳು, ಕೇಂದ್ರದ ಮಂತ್ರಿ ಮಹೋದಯರು, ನಾನಾ ಇಲಾಖೆಯ ಅಧಿಕಾರಿಗಳು, ವಿ.ವಿ ಧನಸಹಾಯ ಆಯೋಗದ ಅಧಿಕಾರಿಗಳು ಮುಂತಾದವರು ಮೆಚ್ಚುವಂತೆ ಈ ಮಹಾಕಾರ್ಯ ಪೂರೈಸಿತು. ಭೂತರಾಮನ ಹಟ್ಟಿ ಗ್ರಾಮದ ನಾಗರಿಕರು ನಮ್ಮ ಈ ಚಟುವಟಿಕೆಗಳಿಗೆ ಪ್ರಾರಂಭದಿಂದಲೂ ಸಹಾಯ ಸಲ್ಲಿಸುತ್ತ ಬಂದರು. ಅಂತಹ ಆತ್ಮೀಯ ಮಾತುಗಾರಿಕೆ ಡಾ. ಎಸ್. ರಾಮೇಗೌಡರಲ್ಲಿದೆ. ಅವರು ಒಳ್ಳೆಯ ವಾಗ್ಮಿಗಳೆಂಬುದು ಎಲ್ಲರಿಗೂ ಗೊತ್ತು. ಜೊತೆಗೆ ಅಖಿಲ ಕರ್ನಾಟಕ ಏಕೀಕರಣಕ್ಕಾಗಿ ದುಡಿದವರು ಎಂದು ಗೊತ್ತಾದಾಗ ಉತ್ತರದ ಗಡಿಯ ಬೆಳಗಾವಿಯಲ್ಲಿ ಕನ್ನಡವನ್ನು ಕಟ್ಟುವ ಧೀಮಂತಿಕೆ ಅವರಲ್ಲಿದೆ ಎಂದು ನಾನು ಅಂದುಕೊಂಡಿದ್ದೆ. ನನ್ನ ಅನಿಸಿಕೆ ಸತ್ಯವೆನ್ನುವಂತೆ - ೧೯೮೩ರ ಆಗಸ್ಟದಷ್ಟೊತ್ತಿಗೆ ಅದು ಸಾಕಾರಗೊಂಡಿತು. ಬೆಳಗಾವಿ ಜಿಲ್ಲೆಗೆ ಎಂದೂ ಮರೆಯಲಾರದ ಕೊಡುಗೆಯನ್ನು ಕೊಟ್ಟ ಡಾ. ಎಸ್. ರಾಮೇಗೌಡರು ಪುಣ್ಯವಂತರೇ ಸೈ.

❊ ❊ ❊

ಮನ ಮುದಗೊಳಿಸುವ ಮಾತುಗಾರ !

ಅಶೋಕ ಚೋಳಚಗುಡ್ಡ

"ನುಡಿದರೆ ಮುತ್ತಿನ ಹಾರದಂತಿರಬೇಕು ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು . . . . ". ಹೌದು, ಈ ಮಾತನಾಡುವ ಕಲೆ ಎಲ್ಲರಿಗೂ ವಶವಾಗಿಲ್ಲ. ವಶವಾಗಿರುವವರೆಲ್ಲ ಮಾತನಾಡಿ ಮಿಂಚುವುದಿಲ್ಲ. ಆದರಲ್ಲಿ ಕೆಲವರು ಮಾತ್ರ ಜನಮನ ರಂಜಿಸಿ ಮಿಂಚಿ ನಮ್ಮ ನೆನಪಿನ ಅಂಗಳದಲ್ಲಿ ಉಳಿಯುತ್ತಾರೆ. ಇಂಥವರ ಸಾಲಿಗೆ ಸೇರುವವರಲ್ಲಿ ಡಾ. ಎಸ್. ರಾಮೇಗೌಡರು ಒಬ್ಬರು.

ಕ.ವಿ.ವಿ. ಸಾಂಸ್ಕೃತಿಕ ವೇದಿಕೆ "ವಿಶ್ವಚೇತನ"ದ ಸದಸ್ಯ, ಕಾರ್ಯದರ್ಶಿಯಾಗಿ ಹಾಗೂ ವಿಶ್ವವಿದ್ಯಾಲಯದ ಸ್ವಾತಂತ್ರ್ಯೋತ್ಸವ, ರಾಜ್ಯೋತ್ಸವ ಮತ್ತು ಡಾ. ಪಾವಟೆ ಅವರ ಜನ್ಮದಿನಾಚರಣೆಯಂಥ ಸಮಾರಂಭಗಳ ನಿರ್ವಹಣಕಾರನಾಗಿ ನಾನು ಕೆಲವು ವರ್ಷ ಅವರ ಸನಿಹಕ್ಕೆ ಬಂದವನು. ಅವರ ಹಲವಾರು ಸಭೆ ಸಮಾರಂಭಗಳಲ್ಲಿಯ ಭಾಷಣಗಳನ್ನು ಕೇಳಿ ತೃಪ್ತಿಪಟ್ಟವನು.

ವಿಶ್ವವಿದ್ಯಾಲಯ ಆವರಣದಲ್ಲಿ ಸಾಂಸ್ಕೃತಿಕ ಚಟುವಟಿಕೆಗಳು ಚುರುಕುಗೊಳ್ಳಲು, ವಿದ್ಯಾರ್ಥಿ ಶಿಕ್ಷಕ ಶಿಕ್ಷಕೇತರ ಮಧ್ಯ ಕಲೆ ಸಾಹಿತ್ಯ ಸಾಂಸ್ಕೃತಿಕ ನಂಟು ಬೆಸೆಯಲು "ವಿಶ್ವಚೇತನ" ಸಾಂಸ್ಕೃತಿಕ ವೇದಿಕೆಗೆ ಜನ್ಮಕೊಟ್ಟವರು ಡಾ. ಎಸ್ ರಾಮೇಗೌಡ ಅವರು. ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿಯ ವಿದ್ಯಾರ್ಥಿಗಳು ಈ ವೇದಿಕೆಯ ಅಡಿಯಲ್ಲಿ ಪಾಲ್ಗೊಳ್ಳಬೇಕು, ಅವರ ಪಠ್ಯೇತರ ಬಹುಮುಖ ಚಟುವಟಿಕೆಗಳು ಹೂವಿನಂತೆ ಅರಳಿ ವಿದ್ಯಾರ್ಥಿಗಳ ಭಾವೀ ಬದುಕಿಗೆ ಪುನಶ್ಚೇತನ ನೀಡಬೇಕು ಅನ್ನುವ ಕಲ್ಪನೆ ಮೊದಲು ಮೂಡಿದ್ದು ಡಾ. ರಾಮೇಗೌಡರ ಮನದಲ್ಲಿಯೇ. ಹೀಗಾಗಿ, ಅವರ ಕಲ್ಪನೆಯ ಈ ಕೂಸು ಕ್ಯಾಂಪಸ್ಸಿನಲ್ಲಿ ಕಣ್ತೆರೆದು "ವಿಶ್ವಚೇತನ" ನಾಮಕರಣ ಪಡೆದು ವರ್ಷವರ್ಷವೂ ವಿಧವಿಧ ವಾದ ಉಪಯುಕ್ತ ಕಾರ್ಯಕ್ರಮಗಳನ್ನು ನೀಡುತ್ತಿದೆ.

ಈ ಸಾಂಸ್ಕೃತಿಕ ವೇದಿಕೆಯ ಸೃಷ್ಟಿಯಿಂದಾಗಿಯೇ ನಾಡಿನ ವಿವಿಧ ಖ್ಯಾತ ಕಲಾವಿದರು, ಗಾಯಕರು, ರಂಗಕಲಾವಿದರು, ಕವಿಗಳು ವಿಶ್ವಚೇತನ ಕಾರ್ಯಕ್ರಮಗಳಿಗೆ ಆಗಮಿಸುತ್ತಿದ್ದಾರೆ. ತಮ್ಮ ಅನುಭವ ಕಲಾಪ್ರದರ್ಶನ ವಿದ್ಯಾರ್ಥಿ ಶಿಕ್ಷಕ ಶಿಕ್ಷಕೇತರ ಸಮುದಾಯಕ್ಕೆ ಉಣಬಡಿಸುತ್ತಿದ್ದಾರೆ. ಪ್ರತಿ ವರ್ಷವೂ ಜರುಗುತ್ತಿರುವ ಕವಿಗೋಷ್ಠಿ ಕಾವ್ಯಾಸಕ್ತರಿಗೆ ಕಾವ್ಯದ ರಸಾನುಭವ ಹಂಚಿದರೆ ಹಾಸ್ಯ ಕವಿಗೋಷ್ಠಿ, ಶ್ರೋತೃಗಳನ್ನು ರಂಜಿಸಿ ನಕ್ಕುನಲಿಯುವಂತೆ ಮಾಡುತ್ತಿವೆ. "ವಿದ್ಯಾರ್ಥಿ ಕವಿಗೋಷ್ಠಿ" ವಿದ್ಯಾರ್ಥಿಗಳ ಕಾವ್ಯ ರಚನೆಗೆ ಪ್ರೋತ್ಸಾಹ ಪ್ರೇರಣೆ ನೀಡುತ್ತಿವೆ.

ವೇದಿಕೆಯ ಅಧ್ಯಕ್ಷರಾದ ಡಾ. ರಾಮೇಗೌಡರು ಪ್ರತಿವರ್ಷ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭ ಮುಕ್ತಾಯ ಸಮಾರಂಭದಲ್ಲಿ ಪಾಲ್ಗೊಂಡು, ಹಾಗೆಯೇ ಪ್ರತಿ ಶನಿವಾರ ಜರುಗುವ ಯಾವುದಾದರೂ ಮಹತ್ವದ ಕಾರ್ಯಕ್ರಮಗಳಿಗೆ ಸಮಯ ಸಿಕ್ಕಾಗ ನಮ್ಮೊಂದಿಗೆ ಸೇರಿ ಸಭೆಯಲ್ಲಿ ಔಚಿತ್ಯಪೂರ್ಣವಾಗಿ ಮಾತನಾಡಿ ಈ ಕಾರ್ಯಕ್ರಮಗಳಿಗೆ ಶೋಭೆ, ರಂಗು, ಹಬ್ಬದ ವಾತಾವರಣ ತಂದು ಕೊಡುತ್ತಾರೆ.

ಇಲ್ಲಿ ನನಗೆ ಅತಿ ಅಚ್ಚರಿ ಅಭಿಮಾನ ಸಂತೋಷ ನೀಡಿದ ಸಂಗತಿ ಅಂದರೆ ಇಂಜನೀಯರಿಂಗ್ ಪ್ರಾಧ್ಯಾಪಕರಾಗಿಯೂ ಡಾ. ರಾಮೇಗೌಡರು ಕನ್ನಡ ಭಾಷೆ, ಸಾಹಿತ್ಯ ಸಂಸ್ಕೃತಿ, ಕಲೆಯ ಮೇಲೆ ಅವರು ಸಾಧಿಸಿರುವ ಪ್ರಭುತ್ವ, ಸನ್ನಿವೇಶಕ್ಕೆ ತಕ್ಕ ಹಾಗೆ ವಿಷಯ ಮನ ಮುಟ್ಟುವಂತೆ ಮಾತನಾಡುವ ಅವರ ಮಾತಿನ ಮೋಡಿ!

ತಮ್ಮ ಮಾತಿನ ಹಾರದ ಮಧ್ಯ ಮಧ್ಯ ಅವರು ಪೋಣಿಸುವ ನಲ್ನುಡಿ, ಕವಿಯುಕ್ತಿ, ಸುಭಾಷಿತ, ಹಲವು ಹತ್ತು ಹಾಸ್ಯ ಪ್ರಸಂಗ, ತಮ್ಮ ಬದುಕಿನಲ್ಲಿ ಘಟಿಸಿದ ವರ್ಣಮಯ ರಸಪ್ರಸಂಗ ಒಂದೆ, ಎರಡೆ "ಬಿಲ್ಲುಗಾರ ಬತ್ತಳಿಕೆಯಿಂದ ಒಂದೊಂದಾಗಿ ಬಾಣ ಹಿರಿದು ಬಿಲ್ಲಿಗೆ ಹಾಕಿ ಪ್ರಯೋಗಿಸುವಂತೆ" ಅವರು ಅವನ್ನೆಲ್ಲ ಸಮಯ ಅರಿತು ಬಳಸುವುದನ್ನೂ ನೋಡಿದಾಗ ಸಂತೋಷ ಉಕ್ಕಿ ಬರುತ್ತದೆ.

ಅವರೆಂದೂ ಬರೆದು ಭಾಷಣಿಸಿದವರಲ್ಲ ಎಂಬುದು ಎಲ್ಲರಿಗೂ ಗೊತ್ತು. ವಿಷಯದ ಹರವನ್ನು ಮನನಮಾಡಿ ಮಥಿಸಿ ವಿಚಾರಧಾರೆಯನ್ನು ಎಳೆಎಳೆಯಾಗಿ ಹಾವಭಾವಪೂರ್ಣವಾಗಿ (ಅವರು ನಾಟಕಕಾರರು ಕೂಡ) ಸಭಿಕರ ಎದುರು ಮಂಡಿಸುವುದನ್ನು ಕಂಡಾಗ ಅವರ ಜ್ಞಾಪಕ ಶಕ್ತಿಗೆ ತಲೆದೂಗುವೆವು! ಇಂಥವರ ಮಾತು ಕೇಳಿ ಕೇಳಿ ನಿಜವಾಗಿಯೂ ನಾವು ನಮ್ಮ ಮಾತನಾಡುವ ಕಲೆಯನ್ನೂ ಬೆಳೆಸಿಕೊಳ್ಳಬಹುದಾಗಿದೆ. ಹಾಗೆಂದೆ ಅವರ ಹಲವು ಭಾಷಣಗಳನ್ನು ವಿಶ್ವವಿದ್ಯಾಲಯದ ಪ್ರಸಾರಾಂಗ "ಮೆಲುಕು" ಸಂಪುಟಗಳಲ್ಲಿ ಸೆರೆ ಹಿಡಿದಿದೆ. ಅವು ನನ್ನ ದೃಷ್ಟಿಯಲ್ಲಿ ನಿಜವಾಗಿಯೂ 'ಭಾಷಣ ಕಲೆ' ಅಭ್ಯಾಸಿಗಳಿಗೆ ದಿಕ್ಸೂಚಿ!

❊ ❊ ❊

ಡಾ. ಎಸ್. ರಾಮೇಗೌಡರನ್ನು ನಾನು ಕಂಡಂತೆ

ಹರಿಲಾಲ ಪವಾರ

ಕರ್ನಾಟಕ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ಪೀಠದಲ್ಲಿ ನಾನು ಸಂಶೋಧನ ವಿದ್ಯಾರ್ಥಿ ಆಗಿ ಅಧ್ಯಯನ ಮಾಡುತ್ತಿದ್ದಾಗಿನಿಂದಲೂ ಡಾ. ಎಸ್. ರಾಮೇಗೌಡರು ಪರಿಚಿತರು. ವಿದ್ಯಾರ್ಥಿ ದಿಶೆಯಲ್ಲಿ ನಮ್ಮ ಕೆಲವು ಸಮಸ್ಯೆಗಳ ಬಗೆಗೆ ಅವರನ್ನು ಕಂಡಾಗ, ಸಂಬಂಧಪಟ್ಟ ಅಧಿಕಾರಿಗಳ ಜೊತೆಗೆ ಸಮಾಲೋಚಿಸಿ ತಕ್ಷಣವೇ ಮಾರ್ಗೋಪಾಯ ಒದಗಿಸುತ್ತಿದ್ದರು.

ಕಳೆದ ಜುಲೈ ೧೯೯೪ರಿಂದ ನಾನು ಕರ್ನಾಟಕ ವಿಶ್ವವಿದ್ಯಾಲಯ ಪ್ರಸಾರಾಂಗ ವಿಭಾಗದಲ್ಲಿ ಸಹಾಯಕ ನಿರ್ದೇಶಕರಾಗಿ ಆಯ್ಕೆಗೊಂಡು ಕಾರ್ಯನಿರ್ವಹಿಸುತ್ತಿದ್ದೇನೆ. ಪ್ರಸಾರಾಂಗ ವಿಭಾಗದ ಪ್ರಕಟನಾ ಸಮಿತಿ ಸಭೆ, ವಿಶೇಷೋಪನ್ಯಾಸ ಕಾರ್ಯಕ್ರಮ, ಆಡಳಿತಾತ್ಮಕ ವಿಷಯಗಳ ಸಂಬಂಧ ಕುಲಪತಿ ಡಾ. ಎಸ್. ರಾಮೇಗೌಡರನ್ನು ಅನೇಕ ಸಲ ಭೇಟ್ಟಿಯಾಗಿದ್ದೇನೆ. ಆ ಸಂದರ್ಭದಲ್ಲಿ ಅವರು ನನ್ನನ್ನು ಪ್ರೀತಿಯಿಂದ ಕಂಡು, ನಮ್ಮ ಕಾರ್ಯ ಚಟುವಟಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಒದಗಿಸಿದ್ದಾರೆ. ಪ್ರಸಾರಾಂಗ ವಿಭಾಗವು ಮಾಡುತ್ತಿರುವ ಕಾರ್ಯಕ್ರಮಗಳ ಬಗೆಗೆ ತುಂಬ ಹೃದಯದಿಂದ ಶ್ಲಾಘಿಸಿದ್ದಾರೆ.

ಡಾ. ಪಾವಟೆ ಅವರು ಕರ್ನಾಟಕ ವಿಶ್ವವಿದ್ಯಾಲಯದ ಶಿಲ್ಪಿಯಾದರೆ ಡಾ. ಎಸ್. ರಾಮೇಗೌಡರು ಬಿಜಾಪುರ ಕಲಾ ಇತಿಹಾಸ ಸ್ನಾತಕೋತ್ತರ ವಿಭಾಗದ ರೂವಾರಿ ಆಗಿದ್ದಾರೆ. ಬೆಳಗಾವಿ ಭೂತರಾಮನಹಟ್ಟಿ ಸ್ನಾತಕೋತ್ತರ ಆವರಣದಲ್ಲಿ ಅತ್ಯಂತ ಭವ್ಯ ಹಾಗೂ ಸುಂದರವಾದ ಸುಮಾರು ಒಂದೂವರೆ ಕೋಟಿ ರೂಪಾಯಿಗಳ ಖರ್ಚಿನಿಂದ ಆಡಳಿತ ಭವನ, ವಿದ್ಯಾರ್ಥಿನಿಲಯ ಮತ್ತು ಅತಿಥಿಗೃಹ ನಿರ್ಮಾಣಗೊಂಡಿವೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ಎಂ.ಸಿ.ಎ ತರಗತಿ, ರೇಷ್ಮೆ ಬೆಳೆಗೆ ಸಂಬಂಧಪಟ್ಟ ಎಂ.ಎಸ್‌ಸಿ ತರಗತಿ, ಮಹಿಳೆ, ಮಕ್ಕಳುಗಳಿಗೆ ಸಂಬಂಧಪಟ್ಟ ಸ್ನಾತಕೋತ್ತರ ಡಿಪ್ಲೋಮಾ, ಯೋಗಾಭ್ಯಾಸದಲ್ಲಿ ಪದವಿ ತರಗತಿಗಳು, ಮೈಕ್ರೋ ಇಲೆಕ್ಟ್ರಾನಿಕ್‌ದಲ್ಲಿ ಸಂಶೋಧನಾ

ಕೇಂದ್ರ, ಪರಿಸರ ಸಂಶೋಧನಾ ಕೇಂದ್ರ, ಕಾರವಾರದಲ್ಲಿ ಸಾಗರಜೀವಿ ಅಧ್ಯಯನ ಸಂಸ್ಥೆ ಹೀಗೆ ಹಲವಾರು ಸ್ನಾತಕೋತ್ತರ ತರಗತಿಗಳನ್ನು ಆರಂಭಿಸಿದ್ದಾರೆ.

ಪ್ರಪಂಚದ ಅನೇಕ ದೇಶಗಳಿಗೆ ಭೆಟ್ಟಿ ನೀಡಿದವರು. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯಮಟ್ಟದ ಹಲವಾರು ವಿಶ್ವವಿದ್ಯಾಲಯಗಳೊಡನೆ ನೇರ ಸಂಬಂಧ ಹೊಂದಿದವರು. ಶಿಕ್ಷಣ ತಜ್ಞರು, ಹೆಸರಾಂತ ವಿಜ್ಞಾನಿ, ಒಳ್ಳೆಯ ಭಾಷಣಕಾರರು. ಕನ್ನಡನಾಡು-ನುಡಿ-ಕಲೆ-ಸಾಹಿತ್ಯ-ಸಂಸ್ಕೃತಿಗಳ ಬಗೆಗೆ ಅಪಾರ ಕಳಕಳಿ ಹೊಂದಿದವರು.

ಕುಲಪತಿಗಳಾಗಿ ಅಧಿಕಾರ ವಹಿಸಿಕೊಂಡಂದಿನಿಂದ ಅನೇಕ ಉಪಯುಕ್ತ ಕಾರ್ಯಗಳನ್ನು ಡಾ. ಎಸ್. ರಾಮೇಗೌಡರು ಮಾಡಿದ್ದಾರೆ. ಇವರ ಒಳ್ಳೆಯ ಸೇವೆಯನ್ನು ಗುರುತಿಸಿ ಹಲವಾರು ಸಂಘ ಸಂಸ್ಥೆಗಳು, ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳು ಪ್ರತಿಷ್ಠಿತ ಪ್ರಶಸ್ತಿಗಳನ್ನು ನೀಡಿ ಗೌರವಿಸಿದ್ದಾರೆ. ಇಂಥ ಹೆಸರಾಂತ ಶಿಕ್ಷಣ ಪ್ರೇಮಿಗಳು ಯಾವುದೇ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸಿದರೂ, ಆ ಸಂಸ್ಥೆಗೆ ಅಪಾರ ಗೌರವ ತರಬಲ್ಲರು ಎಂಬುದರಲ್ಲಿ ಸಂಶಯವೇ ಇಲ್ಲ.

* * *

ಶ್ರೀಮದ್ ರಾಮೇಗೌಡ ಪ್ರಶಸ್ತಿಃ

ಡಾ| ಎಮ್. ಜಿ. ಶಾಸ್ತ್ರೀಮಠ

ಶ್ರೀ ಕರ್ನಾಟಕ ವಿಶ್ವವಿದ್ಯಾನಿಲಯಾಧಿಪಂ ಪ್ರಕೀರ್ತಿತ ಚರಿತಂ
ವಿಖ್ಯಾತಂ ಸರ್ವಕಲಾಕುಶಲಂ ತಂತ್ರಜ್ಞನಖಿಳ ಭಾಷಾ ತಜ್ಞಂ||

ರಾರಾಜಿಪ ವಾಗ್ವೈಖರಿಯಾಂಗ್ಲ ತಮಿಳ್‌ವಿನುತ ಕನ್ನಡಂ ಹಿಂದೀ ಭಾ-
ಷಾರಾಧನೆಯಿಂ ಪೆರ್ಚಿಹ ಕೋವಿದನತ್ಯಧಿಕಮಾನ ಸಮ್ಮಾನ ಧನಂ||

ಮೇದಿನಿಯೊಳಗೆನಿತೋ ದೇಶಾಟನ ವಿಶೇಷ ವಿಕ್ರಮದಿಂ ಸಂ-
ವೇದನ ಶೀಲಂ ಬಹುಶ್ರುತನತ್ಯಗಾಧ ಕಾರ್ಯ ನಿಪುಣಂ ವಿಪುಳಂ||

ಗೌರವ ಪೂರ್ಣಾಕಾರಂ ಶ್ರೇಯಸ್ಕರ ಸುಚಾರು ವಸ್ತ್ರ ವಿಭೂಷಂ
ಗೌರಸ್ಮಿತನಪ್ರತಿಮಂ ಸರ್ವಸ್ತುತ ಧೈರ್ಯ ಶೌರ್ಯಸಾಹಸಕೋಶಂ||

ಡಾಕ್ಟೋರೇಟೆನಿಪುತ್ತಮ ಪಾಶ್ಚಾತ್ಯ ಪರಮ ಪದವಿಗಳಂ ಸೌ-
ಖ್ಯಂ ಮಿಗೆ ಸಂಪ್ರಾಪ್ತಂ ನಿಶ್ಚಿಂತಂ ಕರ್ತವ್ಯನಿಷ್ಠನತುಲ ವರಿಷ್ಠಂ||

ಕುಶಲಂ ಯಂತ್ರೋದ್ಯಮದೋಳ್ ತಂತ್ರಜ್ಞಾನಾದಿ ವಿಷಯ ವಿದ್ಯಾ ಶಾಲಾ
ಯಶಮಂ ಸಂಸ್ಥಾಪನದಿಂ ಮೆರೆದಂ ಭಾರತದ ಭಾಗ್ಯಮೆಂಬಗ್ಗಳದಿಂ||

ಲಘುವೆಂಬೆನಿತೋ ಸಂಸ್ಥೆಗಳದ್ಭುತ ಬೆಳ್ ಜಸವನಾಂತು ವರ್ಧಿಪ ಪರಿಯೇಂ
ವಿಘಟನ ಶಕ್ತಿವಿನಾಶಂ ದಕ್ಷತೆಯರ್ಹತೆಗಳಲ್ತೆ ಗೆಲ್ಗುಂ ಸತತಂ||

ಪಶ್ಚಿಮ ಸಂಸ್ಕೃತಿ ಸೌರಭಮಕ್ಷಯ ಪೌರ್ವಾತ್ಯ ಸ್ತುತ್ಯ ಶ್ರೀಸಂಸ್ಕೃತಿಯಂ
ನಿಶ್ಚಿತಮಭ್ಯುದಯ ರಸಾಯನಮೆಂಬವೊಲಲ್ತೆ ನಿತ್ಯ ವಿಸ್ತರಿಸಿರ್ಪಂ||

ತಿಂಗಳ್ ಬೆಳಗಿರ್ಪಂದದಿ ಶೈಶವದಿಂ ಪೂರ್ಣಗೊಂಡ ಭಾಸುರ ಚಂದ್ರಂ
ಮಂಗಳಮೆನೆ ಕಂಗೊಳಿಪುದು ವಿಸ್ತೃತ ಶಿಕ್ಷಣದನಂತನೀಲಾಕಾಶಂ||

ನವವರ್ಷೋದಯದೊಳ್ ಸದ್ಭಾವಂಮಿಗೆ ರೂಪಗೊಂಡ ಕಾವ್ಯ ವಿಹಾರಂ
ನವಹರ್ಷೋದಯಮಾವಗಮೈಶ್ವರ್ಯ ಭಾಗ್ಯಮಾರೋಗ್ಯಕರಂ||

ಮಾನವಕುಲ ಮೌಲ್ಯಂಗಳನತ್ಯುಜ್ವಲ ಬೋಧೆಗೈದು ಸುಳಿದಂ ಬೆಳೆದಂ
ಜ್ಞಾನಾಮೃತ ಪಾನದ ಪರಿಣಾಮಂಗಳ ಮೆರೆದು ತಿಮಿರವಳಿದಂ ಹೊಳೆದಂ||

ಮಿತಿಯರಿಯದ ಯಶಮುಂ ಚಿರಸ್ವಾಸ್ಥ್ಯ ಮೈಹಿಕಾಮುಷ್ಮಿಕ ಸ-
ದ್ಗತಿಗಳ್ ದೊರಕುಗೆ ಶೋಭನಮಿಷ್ಟಾರ್ಥ ಋದ್ಧಿ ಸಿದ್ಧಿಗಳಕ್ಕುಂ||

ದಿನಾಂಕ ೨೨.೫.೧೯೯೫ ರಂದು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ|| ಎಸ್. ರಾಮೇಗೌಡ ಅವರಿಗೆ ಬೆಂಗಳೂರಲ್ಲಿ ಸರ್ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಸತ್ಕಾರ ಸಮಾರಂಭವಿದ್ದಿತು. ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶ್ರೀ ಈ.ಎಸ್. ವೆಂಕಟರಾಮಯ್ಯ ಅಧ್ಯಕ್ಷತೆ ವಹಿಸಿದ್ದರು. ಸನ್ಮಾನ್ಯ ಶ್ರೀ ಎಚ್.ಡಿ. ದೇವೇಗೌಡ, ಮುಖ್ಯಮಂತ್ರಿಗಳು, ಮುಖ್ಯ ಅತಿಥಿಗಳು. ಈ ಪದ್ಯದ ಪ್ರತಿ ಎರಡನೆಯ ಚರಣದ ಮೊದಲನೆಯ ಅಕ್ಷರ ಜೋಡಿಸಿದರೆ 'ಶ್ರೀ ರಾಮೇಗೌಡಾಖ್ಯಂ ಕುಲಪತಿಂ ನಮಾಮಿ' ಎಂದಾಗುವುದು.

✻ ✻ ✻

ಕಾಯಕನಿಷ್ಠ ಕುಲಪತಿ

ಕಲಾಶೇಖರ

ಹಸುರಿನ ಬಸಿರಲಿ ಮೆರೆಯುವುದು ಕುಸುರೆಳೆದಂತೆಯೆ ಕಾಣುವುದು
ಆಗಸದೆತ್ತರ ಹೊಳೆಯುವುದು "ಅರಿವೇ ಗುರು"ವೆಂದರುಹುವುದು ||೧||

ಜ್ಞಾನ ಶಿಖರವನ್ನೇರಿಹ ದಾದಾ ಪಾವಟೆ "ಬಾ ಬಾ" ಎಂದಿಹರು
ಓಗೊಟ್ಟು ಬಂದಿರುವ ರಾಮೇಗೌಡರು ಒಪ್ಪವಾಗಿ ಮುನ್ನಡೆದಿಹರು ||೨||

ಹಾಲಿನಂಥ ಮನ, ಜೇನಿನಂಥ ಗುಣ, ಭವ್ಯ ಕನಸುಗಳ ಕಂಡವರು
ಹೆಮ್ಮೆಯ ಕುಲಪತಿ ರಾಮೇಗೌಡರು ಕನಸನು ಕೃತಿಯಲಿ ಇಳಿಸಿಹರು ||೩||

ಕೊಳ್ಳೇಗಾಲದ ಮಣ್ಣಿನ ಮಕ್ಕಳು ಒಳ್ಳೆಯದನ್ನೇ ಮಾಡುವರು
ಎಲ್ಲದರೊಳಗಿನ ಒಳ್ಳೆಯದನ್ನು ಅರಗಿಸಿಕೊಂಡೇ ಬೆಳೆದವರು ||೪||

ಪುಟ ಪುಟನೇ ಓಡಾಡುವರು ಸ್ಫುಟವಾಗಿಯೆ ಮಾತಾಡುವರು
ಚೇತನ ಚಿಲುಮೆಯ ರಾಮೇಗೌಡರು ಕಾಯಕ ನಿಷ್ಠೆಯ ಮೆರೆದವರು ||೫||

ವಿದ್ಯೆಯ ಸಾಧನೆ ಹೊಸ ಸಂಶೋಧನೆ ತಂತ್ರಜ್ಞಾನದ ಸಾರವನು
ಹೀರಿಕೊಂಡಿರುವ ಬಲ್ಲಿದರಿವರು ಹರುಷವನೆಲ್ಲೆಡೆ ಚೆಲ್ಲಿಹರು ||೬||

ಕಂಪ್ಯೂಟರುಗಳ ತರಿಸಿಹರು ಪದವಿಗೂ ಪಾಠವ ಕಲಿಸಿಹರು
"ಕಂಪ್ಯೂಟರ್ ಬ್ರೇನ್" ಎನಿಸಿಹರು ಚಿಂತನ ಮಂಥನ ಮಾಡಿಹರು ||೭||

ರೇಶಿಮೆ ಶಾಸ್ತ್ರದ ಅಭಿವೃದ್ಧಿ ಸಸ್ಯೋದ್ಯಾನದ ಸಮೃದ್ಧಿ
ಸ್ವಯಂ ವೃತ್ತಿ ಸಂಜೀವನವು ನಿರುದ್ಯೋಗ ನಿರ್ಮೂಲನವು ||೮||

ಮುದ್ರಣಾಲಯದ ನವ ವ್ಯವಧಾನ ಮುದ್ದಾಗಿ ದುಡಿಯುವರು ನಮ್ಮ ಜನ
ಅಜ್ಞಾನವನಳಿಯಲು ಅಕ್ಷರವು ಕಳೆಗಟ್ಟಿತು ಸರಿ ವ್ಯವಹಾರ ||೯||

ಕಾರ್ಯಾಗಾರದ ಕಾರ್ಯವದೆಲ್ಲ ಕಾಯಕಲ್ಪದಿಂದೊಪ್ಪಿದೆಯಲ್ಲ
ಸ್ವಹಸ್ತ ಸಹಾಯವು ಮಿಗಿಲಪ್ಪ ಹೊಡೆ ಮೊಸರಿನ ಜತೆಗೆ ತುಪ್ಪ ||೧೦||

ದೃಶ್ಯ ಶ್ರವಣ ಸಂಶೋಧನೆಯು ವಿದ್ಯುನ್ಮಾನದ ಯೋಜನೆಯು
ಪಡೆಯಲಿ ಜನ ನವ ನವೀನ ಜ್ಞಾನ ಹೊಂದಿದೆ ಸಮೂಹ ಸಂವಹನ ||೧೧||

ಮೀನ ಮೇಷ ಬೇಡೆನ್ನುವರು ಮೀನ ಉದ್ದಿಮೆಯ ಬೆಳಸಿಹರು
ಹಸಿರು ಕ್ರಾಂತಿ, ಸುಕ್ಷೀರ ಕ್ರಾಂತಿ ಈ ನೀಲ ಕ್ರಾಂತಿಯನು ತಂದಿಹರು ||೧೨||

ಅಬಲೆಯರೆಲ್ಲರು ಸಬಲೆಯರಾಗಲು ಬೆಳೆದಿದೆ ಮಹಿಳೆಯರಧ್ಯಯನ
ಪ್ರವಾಸೋದ್ಯಮಕೆ ಬೆಲೆಯಣ್ಣ ಗೌಡರ ಕಾಲದ ಕೀರ್ತಿ ಕಣಾ ||೧೩||

ವಿಜಾಪುರದ ವಿದ್ಯಾಕೇಂದ್ರದೊಳು ಕಲೆ ಇತಿಹಾಸದಿ ಪದವಿಗಳು
ದಕ್ಷಿಣ ಭಾರತ ಶಿಕ್ಷಣ ಕ್ಷೇತ್ರದಿ ಮೊದಲೆನಿಸಿದೆ ಪಠ್ಯ ಜ್ಞಾನ ||೧೪||

ಬೆಳೆಯುವ ಕೇಂದ್ರವು ಅಪರೂಪ ವೃತ್ತಿ ಶಿಕ್ಷಣದ ಪ್ರತಿರೂಪ
ಕಲಿಕೆಯು ಹಣ್ಣಿನ ಸಂಸ್ಕರಣ ದುಡಿದುಣ್ಣುವ ಆಶಾ ಕಿರಣ ||೧೫||

ಹಳ್ಳಿಗಳಲ್ಲಿಗೆ ವಿಸ್ತೃತ ಜ್ಞಾನ ವಿದ್ಯಾಲಯಕಿದು ಸನ್ಮಾನ
ಮುಗ್ಧರ ಬಾಳಿನ ಬೆಳಕು ಕಣಾ ಉದ್ಧಾರವು ಈ ದೀನ ಜನ ||೧೬||

ಕಲ್ಲು ಮಣ್ಣುಗಳ ಹೊತ್ತಿಹರು ಬೆಳಗಾಂವಿಯ ಕೇಂದ್ರವ ಕಟ್ಟಿಹರು
ಬಂಧುರ ಮಂದಿರ ವಿಸ್ತರಣ ನಿಂತಿದೆ ಸ್ಫೂರ್ತಿಯ ಸಂಕೀರ್ಣ ||೧೭||

ದೇಶ ವಿದೇಶದ ವಿನಿಮಯ ಜ್ಞಾನ ವಿದ್ಯಾಲಯಗಳ ತೂರ್ಯ ಸ್ಥಾನ
ಎತ್ತರಕೇರಲಿ ನಾಡಿನ ಶ್ರೇಯ ಉತ್ತರವಾಗಲಿ ನಮ್ಮಯ ಕಾರ್ಯ ||೧೮||

ಕುಶಾಗ್ರಬುದ್ಧಿಯ ರಾಮೇಗೌಡರು ಅಪಾರ ಕೀರ್ತಿಯ ಪಡೆದಿಹರು
ರಾಜ್ಯ, ಕೇಂದ್ರ, ಯೂ.ಜಿ.ಸಿ. ಸಭೆಗಳ ಸಲಹೆಗೆ ವರಿಷ್ಠರೆನಿಸಿಹರು ||೧೯||

ಸಂಗೀತದ, ಸಾಹಿತ್ಯದ, ನೃತ್ಯದ ನಾಟಕ ಕಲೆಗಳ ಸಂಗಮವು
ವಿಶ್ವಚೇತನದ ಮಂಗಲ ದರ್ಶನ ನಮ್ಮಯ ಹೃನ್ಮನ ವಿಕಸನವು ||೨೦||

ಪರಿಸರ ಕ್ರೀಡಾಂಗಣರೂವಾರಿ । ಧರೆಯೊಳು ಮೆರೆಯಲಿ ಧಾರಾನಗರಿ
ಹಿಗ್ಗುತ, ನುಗ್ಗುತ ಸಾಗುವದೆ ಗುರಿ ತಂದರು ನಾಡಿಗೆ ಯಶದ ಗರಿ ||೨೧||

ಬಗೆಹರಿಯದ ಬಿಕ್ಕಟ್ಟುಗಳಿಲ್ಲ ಪ್ರಯತ್ನವೇ ಪರಮೇಶ್ವರನೆಲ್ಲ
ವೇದ ಸುಳ್ಳಾದರು ಗಾದೆ ಸುಳ್ಳಲ್ಲ ಪ್ರಸನ್ನ ಹೃದಯದಿ ಕಲ್ಮಷವಿಲ್ಲ ||೨೨||

"No evil in Cheerful Soul"

ಕೆರಳುವ ಜನರಿಗೆ ಕೆರಳಿದ ಕೇಸರಿ ಬಡವರ ಬಂಧುಗಳೆನಿಸಿಹರು
ವಜ್ರಕ್ಕಿಂತಲು ಕಠೋರ ಕಂಡರು ದಯಾ ಧರ್ಮ ನಿಧಿಯಾಗಿಹರು ||೨೩||

ಧಾರವಾಡವಿದು ವಿದ್ಯೆಯ ದೇಗುಲ ಕಲೆ ಸಂಸ್ಕೃತಿಗಳ ಸ್ವಸ್ಥಾನ
ಕವಿಗಳ ಕಲೆಗಾರರ ವಾಗ್ವಿಭುಗಳ ವೀರಗನ್ನಡದ ಸಂಸ್ಥಾನ ||೨೪||

ಪರಿಣತ ಮತಿ ಪ್ರತಿಭಾ ಸಂಪನ್ನರು ಈ ನೆಲದಲಿ ಪರಿಶೋಭಿಪರು
ಪ್ರಶಸ್ತಿ ಪುರಸ್ಕಾರಂಗಳ ಮಾಲೆಯ ಧರಿಸಿಹರೀಪುರುಷೋತ್ತಮರು ||೨೫||

ಕನ್ನಡಾಂಗ್ಲ ಬಹು ಭಾಷಾ ಸೌಷ್ಠವ ತುಂಬಿ ಪ್ರವಹಿಸುವ ವಾಗ್ಝರಿಯು
ವಿಶ್ವದ ಕವಿಗಳ ವೆಗ್ಗಳ ವೈಭವ ಅಳವಟ್ಟಿಹ ಕಡು ಗಟ್ಟಿಗರು ||೨೬||

ಶರಣ ಸಾಹಿತ್ಯದ ತಂಪೆರೆಯುವರು ಕುವೆಂಪು ಕಾವ್ಯದ ಕಂಪೆರೆಯುವರು
ಬೇಂದ್ರೆ ಭಾವದ ಇಂಪೆರೆಯುವರು ಜನಪದ ಜೀವನ ಸೊಗಡುಳ್ಳವರು ||೨೭||

ಕುಲಪತಿಗಳ ಸತಿಯತಿ ವಿನಯವತಿಯು ಸಾಧ್ವಿ ಸುಶೀಲಮ್ಮಾವರು
ಹಮ್ಮು ಬಿಮ್ಮುಗಳ ಸುಳಿವೇ ಇಲ್ಲದ ಶ್ರೀಮತಿ ಗುಣವತಿ ತೇಜಸ್ವಿನಿಯು ||೨೮||

ಕವಿ ಪುಂಗವ ಶ್ರೀ ಕಲಾಶೇಖರನು ಹರ್ಷದಿ ಹಾಡಿದ ಪದಗಳನು
ತಪ್ಪುಗಳಿದ್ದರೆ ತಿದ್ದಿಕೊಳ್ಳುವುದು ನೆನೆಯುವೆ ಕವಿ ಗಣ ಪದಗಳನು ||೨೯||

❊ ❊ ❊

ಅಪೂರ್ವ ವ್ಯಕ್ತಿತ್ವದ ಡಾ.ಎಸ್. ರಾಮೇಗೌಡರು

ಶಾಲಿನಿ ರಘುನಾಥ್

ಕೆಲವೊಮ್ಮೆ ಅಧಿಕಾರಸ್ಥಾನದಿಂದ ವ್ಯಕ್ತಿಗೆ ಗೌರವ ದೊರೆಯುತ್ತದೆ. ಮತ್ತೆ ಕೆಲವೊಮ್ಮೆ ವ್ಯಕ್ತಿಯಿಂದ ಆ ಸ್ಥಾನಕ್ಕೆ ಗೌರವ ಬರುತ್ತದೆ. ಕುಲಪತಿಯ ಸ್ಥಾನವೂ ದೊಡ್ಡದು, ಡಾ.ಎಸ್. ರಾಮೇಗೌಡರ ಕರ್ತೃತ್ವ ಶಕ್ತಿಯೂ ದೊಡ್ಡದು. ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯಾಗಿ ವಿಶ್ವವಿದ್ಯಾಲಯದ ಖ್ಯಾತಿಯನ್ನು ರಾಷ್ಟ್ರೀಯ ಅಂತರಾಷ್ಟ್ರೀಯ ಮಟ್ಟಕ್ಕೇರಿಸಿದ ಕೀರ್ತಿ ಡಾ.ಎಸ್. ರಾಮೇಗೌಡರಿಗೆ ಸಲ್ಲುತ್ತದೆ.

ಡಾ. ಎಸ್. ರಾಮೇಗೌಡರು ನೋಡಲು ಅಷ್ಟೇನೂ ಎತ್ತರದ ವ್ಯಕ್ತಿಯಲ್ಲ. ಎತ್ತರದ ವ್ಯಕ್ತಿತ್ವವುಳ್ಳವರು, ಸದಾಹಸನ್ಮುಖಿ. ಸರಳ ಸಜ್ಜನಿಕೆಯ ವ್ಯಕ್ತಿ. ಕುಲಪತಿ ಎಂಬ ಬಿಗುಮಾನ ತೋರದೆ, ಎಲ್ಲರೊಂದಿಗೂ ಬೆರೆತು ನಡೆಯುವವರು. ವ್ಯವಹಾರ ಚತುರರು. ಪ್ರಸಂಗಾವಧಾನಿಗಳು; ಒಳ್ಳೆಯ ಮಾತುಗಾರರು. ತ್ರಿವಿಕ್ರಮನಂತೆ ಪ್ರಗತಿಯ ದಾಪುಗಾಲು ಹಾಕುವವರು. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅವರ ಆಡಳಿತಾವಧಿಯಲ್ಲಿ ಅನೇಕ ವಿಕ್ರಮಗಳ ಸರಮಾಲೆಯೇ ಸುರಿಯಿತು. ವಿಶ್ವವಿದ್ಯಾಲಯ ಸರ್ವತೋಮುಖವಾದ ಪ್ರಗತಿಯನ್ನು ಸಾಧಿಸಿತು. ಹಿಡಿದ ಕೆಲಸವನ್ನು ಪಟ್ಟುಹಿಡಿದು ಸಾಧಿಸುವ ಛಲ ಡಾ.ಎಸ್. ರಾಮೇಗೌಡರದ್ದು. ಧ್ಯೇಯ ಸಂಪನ್ನ, ಸೃಜನಶೀಲ ವ್ಯಕ್ತಿಯೊಬ್ಬ ಕುಲಪತಿಯಾಗಿ ವಿಶ್ವವಿದ್ಯಾಲಯವನ್ನು ಮುನ್ನಡೆಸಿದ ರೀತಿ ಬಹುಕಾಲ ನೆನಪಿನಲ್ಲಿ ಉಳಿಯುವಂಥದ್ದು.

ಡಾ.ಎಸ್. ರಾಮೇಗೌಡರ ಆಡಳಿತಾವಧಿಯಲ್ಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ವಿಭಾಗಗಳಿಗೆ ಹೊಸ ಆಯಾಮಗಳು ಜೋಡಿಸಲ್ಪಟ್ಟವು. ಎಂ.ಸಿ.ಎ, ಎಂ.ಎಸ್ಸಿ (ರೇಷ್ಮೆ ಕೃಷಿಗೆ ಸಂಬಂಧಿಸಿದಂತೆ) ಜಾನಪದ ಯೋಗದಲ್ಲಿ ಸ್ನಾತಕ ವ್ಯಾಸಂಗ, ಮಹಿಳೆ ಮತ್ತು ಶಿಶುವಿಗೆ ಸಂಬಂಧಿಸಿದ, ಪ್ರಾಚ್ಯಲೇಖ ಡಿಪ್ಲೋಮಾಗಳು ಜಾರಿಯಲ್ಲಿಬಂದವು. ಮುದ್ರಣಾಲಯ ಆಫ್‌ಸೆಟ್ ಮತ್ತು ಕಂಪ್ಯೂಟರ್ ತಂತ್ರಜ್ಞಾನದಿಂದ ಅತ್ಯಾಧುನಿಕ ರೀತಿಯಲ್ಲಿ ಸುಸಜ್ಜಿತವಾಯಿತು. ಪಾವಟೆನಗರದಲ್ಲಿ ವಿಶಿಷ್ಟ ಕಲಾಸೌಂದರ್ಯದ, ಅನೇಕ ಸೌಲಭ್ಯಗಳನ್ನೊಳಗೊಂಡ ಟ್ರಾನ್ಸಿಟ್ ಹೌಸ್ ಕಣ್ಮನಗಳನ್ನು

ಸೆಳೆಯುವಂತಾಗಿದೆ. ಪ್ರಸಾರ ಮಾಧ್ಯಮದ ಆಧುನಿಕ ತಂತ್ರಜ್ಞಾನವನ್ನೊಳಗೊಂಡ ಪತ್ರಿಕೋದ್ಯಮ ವಿಭಾಗ, ವಿದ್ಯಾರ್ಥಿ ವಿದ್ಯಾರ್ಥಿನಿಯರ ವಸತಿಗೃಹದ ವಿಸ್ತರಣೆ ಮುಂತಾದವು ನಿರ್ಮಾಣಗೊಂಡವಲ್ಲದೆ, ಬೆಳಗಾಂವಿಯ ಭೂತರಾಯನ ಹಟ್ಟಿಯಲ್ಲಿ ಸ್ನಾತಕೋತ್ತರ ಕೇಂದ್ರದ ಕಾರ್ಯಾಲಯ, ವಿದ್ಯಾರ್ಥಿ ವಸತಿಗೃಹಗಳು, ಅತಿಥಿಗೃಹ ಮುಂತಾದವು ಭವ್ಯವಾಗಿ ತಲೆಎತ್ತಿದವು. ಅದರಂತೆ ಕಾರವಾರ, ವಿಜಾಪುರ ಕೇಂದ್ರಗಳೂ ಪ್ರಾದೇಶಿಕ ಅಗತ್ಯತೆಗನುಗುಣವಾಗಿ ಅಭಿವೃದ್ಧಿ ಹೊಂದಿದವು. ವಿಶ್ವವಿದ್ಯಾಲಯದ ಆವರಣದಲ್ಲಿಯೇ ಪರಿಸರಪೂರಕ ಬೃಹತ್ ಕ್ರೀಡಾಂಗಣವೊಂದು ತಯಾರಾಗುತ್ತಿದೆ. ಇಷ್ಟೆಲ್ಲ ಸಾಧನೆಗಳ ಹಿಂದೆ, ಡಾ.ಎಸ್. ರಾಮೇಗೌಡರ ಕರ್ತೃತ್ವ ಶಕ್ತಿ ಬಿರುಸಿನಿಂದ ಕಾರ್ಯ ಮಗ್ನವಾಗಿದೆ. ವಿಶ್ವವಿದ್ಯಾಲಯ ಆಧುನಿಕ ಸವಾಲುಗಳನ್ನೆದುರಿಸಲು ಸಹಾಯಕವಾಗುವಂತೆ ಅನೇಕ ವಿಭಾಗಗಳಲ್ಲಿ ಈಗಾಗಲೇ ಕಂಪ್ಯೂಟರ್ ಅಳವಡಿಸಿ, ಸಜ್ಜುಗೊಳಿಸುತ್ತಿರುವುದೂ ಕುಲಪತಿಗಳ ದೂರದರ್ಶಿತ್ವಕ್ಕೆ ಸಾಕ್ಷಿಯಾಗಿದೆ.

ವಿಜ್ಞಾನದ ವಿದ್ಯಾರ್ಥಿಯಾಗಿದ್ದರೂ ಸಾಹಿತ್ಯದಲ್ಲಿ ಅಷ್ಟೇ ಆಸಕ್ತಿಯನ್ನು ಹೊಂದಿರುವುದು ಡಾ.ಎಸ್. ರಾಮೇಗೌಡರ ವೈಶಿಷ್ಟ್ಯ. ಬಾಲ್ಯದಿಂದಲೂ ಶಾಲೆಯಲ್ಲಿ ಚರ್ಚಾಪಟುವಾಗಿ ಮಿಂಚಿದ ಅವರು ಒಳ್ಳೆಯ ವಾಗ್ಮಿಗಳೆನಿಸಿಕೊಂಡರು. ಸಾಹಿತ್ಯವನ್ನು ಕುರಿತಂತೆ ಅಪಾರ ಪ್ರೇಮವನ್ನು ಬೆಳೆಸಿಕೊಂಡರು. ಸಾಹಿತಿಗಳನ್ನು ಕುರಿತು ಅವರಿಗೆ ಗೌರವಭಾವವಿದೆ. ಬೇಂದ್ರೆ ಮತ್ತು ಕುವೆಂಪುರವರ ಆರಾಧಕರವರು. ಇವರೀರ್ವರ ಕಾವ್ಯದ ಕೆಲವು ಪಂಕ್ತಿಗಳನ್ನಾದರೂ ಉಲ್ಲೇಖಿಸದೇ ಡಾ.ಎಸ್. ರಾಮೇಗೌಡರ ಭಾಷಣ ಪೂರ್ಣವಾಗದು. ಇತ್ತೀಚೆಗೆ ಬಸವಣ್ಣನವರ ವಚನಗಳನ್ನು ಅವರು ಅಷ್ಟೇ ಸರಾಗವಾಗಿ ಉಲ್ಲೇಖಿಸಬಲ್ಲವರಾಗಿದ್ದಾರೆ. ಡಾ. ಎಸ್. ರಾಮೇಗೌಡರ ಭಾಷಣಗಳ ಸಂಗ್ರಹ 'ಮೆಲುಕು' ಹೊರಬಂದಿದೆ. ಭಾಷೆಯ ಮೇಲೆ ಅವರು ಸಾಧಿಸಿಕೊಂಡ ಹಿಡಿತ, ಪ್ರೌಢಿಮೆಗಳು ನಿಜಕ್ಕೂ ಅಚ್ಚರಿಯನ್ನುಂಟು ಮಾಡುತ್ತವೆ. ಡಾ. ಎಸ್. ರಾಮೇಗೌಡರು ಸ್ವತಃ ಕವಿಗಳೂ ಆಗಿದ್ದಾರೆಂಬುದು ಅನೇಕರಿಗೆ ತಿಳಿಯದು. ಹೈಸ್ಕೂಲಿನಲ್ಲಿ ಕಲಿಯುತ್ತಿರುವಾಗಲೇ ಅವರು ಷಟ್ಪದಿಯಲ್ಲಿ ಕಾವ್ಯ ಬರೆಯುತ್ತಿದ್ದರಂತೆ. ಅವರ ಕಾವ್ಯ ಸಾಮರ್ಥ್ಯವನ್ನು ಪ್ರೊ. ಎಸ್. ಎಫ್. ಪೂಜಾರವರ 'ಮುತ್ತು ಮಾಣಿಕ ಬೇಡ" ಕವನ ಸಂಕಲನದ 'ಬೆನ್ ಕವನ'ದಲ್ಲಿ ಕಾಣಬಹುದಾಗಿದೆ.

ಡಾ.ಎಸ್. ರಾಮೇಗೌಡರು ಇಂಜನಿಯರಿಂಗ್ ಪದವೀಧರರು; ವಿಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಸಂಶೋಧನೆಗಳನ್ನು ಮಾಡಿದವರು. ಅವರಿಗೆ ಪುರಾತನ ಭಾರತೀಯ ವಿದ್ಯೆಗಳನ್ನು ಕುರಿತು ಗೌರವವಿದೆ. ಪ್ರಾಚ್ಯ ಮತ್ತು ಪಾಶ್ಚಾತ್ಯ ಜ್ಞಾನಗಳ ಸಂಯೋಗದಿಂದಲೇ ಮಹತ್ತಾದುದನ್ನು ಸಾಧಿಸಬಹುದು ಎಂಬುದು ಅವರ ಅಭಿಪ್ರಾಯ. ಅವರ ವ್ಯಕ್ತಿತ್ವದಲ್ಲಿ ವಿಜ್ಞಾನ ಮತ್ತು ಧರ್ಮಗಳ ಅಪೂರ್ವ ಮೇಳವಿದೆ. ಈ ವಿಜ್ಞಾನಿಯ ಹೃದಯದಲ್ಲಿ ಅಪಾರ ದೈವೀಶ್ರದ್ಧೆ ಇದೆ. ಆದರೆ ಅದು ಸಂಘರ್ಷವನ್ನುಂಟುಮಾಡುವಂತಹುದಲ್ಲ. ಬದಲಾಗಿ ಮನಶ್ಶಾಂತಿಯನ್ನು ನೀಡುವಂತಹುದು. ಹೀಗಾಗಿ ಬೌದ್ಧಿಕತೆಯೊಂದಿಗೆ ಭಾವುಕತೆಯನ್ನು

ಉಳಿಸಿ, ಬೆಳೆಸಿಕೊಂಡು ಬಂದಿರುವದು ಡಾ.ಎಸ್. ರಾಮೇಗೌಡರ ವ್ಯಕ್ತಿತ್ವದ ವೈಶಿಷ್ಟ್ಯವೇ ಆಗಿದೆ.

ಕುಲಪತಿಯಾಗಿ ಹಾಗೂ ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟದ ಅನೇಕ ಸಮಿತಿಗಳ, ಸಂಘ-ಸಂಸ್ಥೆಗಳ ಅಧ್ಯಕ್ಷ / ಸದಸ್ಯರಾಗಿ ಕೆಲಸ ನಿರ್ವಹಿಸುತ್ತಿದ್ದು, ಅವುಗಳ ಸಭೆ ಸಮಾರಂಭಗಳಿಗಾಗಿ ಅವಿರತವಾಗಿ ತಿರುಗಾಡುತ್ತಿದ್ದರೂ ಈ ವ್ಯಕ್ತಿ ದಣಿವನ್ನು ಕಂಡರಿಯರು. ಸತತ ಪರಿಶ್ರಮಿ. ಸದೃಢ ದೇಹದಲ್ಲಿ ಸುಚಿತ್ತ! ಜೊತೆಗೆ, ಚಾಕಚಕ್ಯತೆಯಿಂದ ಎಂತಹ ಕಠಿಣ ಪ್ರಸಂಗವನ್ನಾದರೂ ಎದುರಿಸಿ, ಗೆದ್ದುಕೊಳ್ಳಬಲ್ಲ, ಶ್ರೇಷ್ಠ ಚರ್ಚಾಪಟುವಿನ ಗುಣ ಸ್ವಭಾವ. ಮಧ್ಯೆ ಹಾಸ್ಯ ಚಟಾಕಿ, ಮುದಗೊಳಿಸುವ ಮಾತಿನ ಮೋಡಿ!

ಡಾ.ಎಸ್. ರಾಮೇಗೌಡರ ಜ್ಞಾಪಕ ಶಕ್ತಿ ಅಗಾಧವಾದುದು. ಅವರ ಗ್ರಹಣ ಸಾಮರ್ಥ್ಯವೂ ಮಿಗಿಲಾದುದು. ಸಭೆ ಸಮಾರಂಭಗಳಲ್ಲಿ ಟಿಪ್ಪಣಿ ಇಲ್ಲದೆ, ಯಾವುದೇ ವಿಷಯದ ಮೇಲೆ ಗಂಟೆಗಟ್ಟಲೆ ಮಾತನಾಡಿ ಜನರನ್ನು ಮಂತ್ರಮುಗ್ಧರನ್ನಾಗಿಸಬಲ್ಲ ಸಾಮರ್ಥ್ಯ ಅವರಲ್ಲಿದೆ. ಸಭೆಗಳಲ್ಲಿ ಅತಿಥಿಗಳು ಎಷ್ಟೇ ಸುದೀರ್ಘವಾಗಿ ಮಾತನಾಡಿದರೂ ಅವೆಲ್ಲವನ್ನೂ ಗ್ರಹಿಸಿ ಸಾರಾಂಶದೊಂದಿಗೆ ತಮ್ಮ ಅಭಿಪ್ರಾಯವನ್ನೂ ಮಂಡಿಸುವ ಅವರ ಅಧ್ಯಕ್ಷೀಯ ಆಶುಭಾಷಣಗಳು ಅತ್ಯಂತ ಜನಪ್ರಿಯ. ಸಂದರ್ಭಕ್ಕೆ ಸರಿಯಾಗಿ, ಔಚಿತ್ಯಪೂರ್ಣವಾಗಿ ಮಾತನಾಡುವ ಕಲೆ ಅವರಿಗೆ ಕರಗತ. ವಿಜ್ಞಾನ, ಕಲೆ, ಸಾಹಿತ್ಯ, ಕ್ರೀಡೆ, ಆಧ್ಯಾತ್ಮ ಯಾವ ವಿಷಯವೇ ಆಗಿರಲಿ, ತಾಂತ್ರಿಕ ಜಟಿಲತೆಯಿಂದ ಕೂಡಿದ್ದೇ ಇರಲಿ. ಬಿಡಿಸಿ, ಜನಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ, ಆಕರ್ಷಕವಾಗುವಂತೆ ತಿಳಿಸಿಹೇಳುವಲ್ಲಿ ಅವರು ಸಿದ್ಧಹಸ್ತರು. ಕೆಲವೊಮ್ಮೆ ಮುಖ್ಯ ಅತಿಥಿಗಳ ಭಾಷಣ ಕಬ್ಬಿಣದ ಕಡಲೆಯಾಗಿದ್ದರೂ ಅದೇ ವಿಷಯದ ಅಧ್ಯಕ್ಷರ ಮಾತು ಸುಲಿದ ಬಾಳೆಯ ಹಣ್ಣಿನಂತಾಗಿ ರಸಿಕರ ಮನಸೂರೆಗೊಂಡದ್ದೂ ಉಂಟು. ಡಾ. ಎಸ್. ರಾಮೇಗೌಡರ ಜನಪ್ರಿಯತೆಯ ಮುಖ್ಯ ಕಾರಣಗಳಲ್ಲಿ ಇದೂ ಒಂದು.

ಕುಲಪತಿಗಳ ಸಮಯನಿಷ್ಠೆ, ಶಿಸ್ತು ಮುಂತಾದವು ಉಲ್ಲೇಖಾರ್ಹವಾದವು. ಯಾವುದೇ ಸಭೆಸಮಾರಂಭಗಳಿರಲಿ ಸಮಯಕ್ಕೆ ಸರಿಯಾಗಿ ಅಲ್ಲಿ ಉಪಸ್ಥಿತರಿರುತ್ತಾರೆ. ಪ್ರತಿಯೊಂದು ಕೆಲಸವೂ ನಿಗದಿತ ಸಮಯದಲ್ಲಿ ಮುಗಿಯಬೇಕೆನ್ನುವವರು. ಡಾ.ಎಸ್. ರಾಮೇಗೌಡರು ಕುಲಪತಿಗಳಾದ ಮೇಲೆ ವಿಶ್ವವಿದ್ಯಾಲಯದ ಪರೀಕ್ಷೆಗಳನ್ನು ಯಾವ ಕಾರಣಕ್ಕೂ ಮುಂದೆ ಹಾಕಿಲ್ಲ. ಪೂರ್ವ ನಿರ್ಧರಿತ ದಿನಾಂಕಗಳಂದೇ ನಡೆಸುತ್ತ ಬಂದಿದ್ದಾರೆ. ಕೇಂದ್ರ ಮೌಲ್ಯಮಾಪನ ಕಾರ್ಯವನ್ನು ಆರಂಭಿಸಿ, ಶೀಘ್ರ ಫಲಿತಾಂಶವನ್ನು ನೀಡುವ ಹೊಸ ಯೋಜನೆ ಕೈಕೊಂಡಿದ್ದಾರೆ. ಅದಕ್ಕಾಗಿ 'ವಿಶ್ವಚೇತನ' ಕಟ್ಟಡವನ್ನು ಪೂರ್ಣಪ್ರಮಾಣದ ಪರೀಕ್ಷಾ ವಿಭಾಗವನ್ನಾಗಿ ಪರಿವರ್ತಿಸಿದ್ದಾರೆ. ಇದರಿಂದ ವಿದ್ಯಾರ್ಥಿಗಳಿಗಾದ ಅನುಕೂಲ ಅಪಾರ.

ರಾಜ್ಯೋತ್ಸವ ಪ್ರಶಸ್ತಿ, ಪ್ರಣವಾನಂದ ಪ್ರಶಸ್ತಿಗಳಿಂದ ಶೋಭಿತರಾಗಿರುವ ಡಾ.ಎಸ್. ರಾಮೇಗೌಡರು ಸ್ವತಃ ನಾಡಿನ ಕಲಾವಿದರಿಗೆ, ಸಾಹಿತಿಗಳಿಗೆ ವಿಶ್ವವಿದ್ಯಾಲಯದ

ವತಿಯಿಂದ ಮಾಡಿರುವ ಸನ್ಮಾನ, ನೀಡಿರುವ ಪದವಿಗಳು ಮಹತ್ವದವೆನಿಸಿವೆ. ವಿ. ಕೃ ಗೋಕಾಕ, ಮಲ್ಲಿಕಾರ್ಜುನ ಮನ್ಸೂರ, ಹುಕ್ಕೇರಿ ಬಾಳಪ್ಪ, ಏಣಗಿ ಬಾಳಪ್ಪ ಮುಂತಾದವರು ಅವರಲ್ಲಿ ಕೆಲವರು. ಪ್ರೊ. ವಿ.ಕೃ. ಗೋಕಾಕರು ಸಾಯುವ ಕೆಲವೇ ತಿಂಗಳು ಮೊದಲು ವಿಶ್ವವಿದ್ಯಾಲಯದ ಗಾಂಧೀಭವನದಲ್ಲಿ ನಡೆದ ಅದ್ದೂರಿಯ ಸನ್ಮಾನ ಸಮಾರಂಭ ಭಾಗವಹಿಸಿದವರು ಯಾರೂ ಮರೆಯದಂತಹದು. ಅದೇ ರೀತಿ, ನಟ ಸಾರ್ವಭೌಮ ರಾಜಕುಮಾರರಿಗೆ ಮಾಡಿದ ಸನ್ಮಾನವೂ ವೈಭವೋಪೇತವಾದುದು. 'ವಿಶ್ವಚೇತನ ಸಾಂಸ್ಕೃತಿಕ ವೇದಿಕೆ'ಯ ಮೂಲಕ, ಕಲೆಯನ್ನು, ಕಲಾವಿದರನ್ನು, ಗೌರವಿಸುವುದರ ಮೂಲಕ ನೃತ್ಯ, ನಾಟಕ, ಸಾಹಿತ್ಯಗಳನ್ನು ಪ್ರೋತ್ಸಾಹಿಸುವುದರ ಮೂಲಕ ಡಾ.ಎಸ್. ರಾಮೇಗೌಡರು ಉತ್ತರ ಕರ್ನಾಟಕದ ಸಾಂಸ್ಕೃತಿಕ ವಲಯದಲ್ಲಿ ಮಹತ್ವದ ವ್ಯಕ್ತಿಯಾಗಿ ಪರಿಣಮಿಸಿದ್ದಾರೆ. ಇದರಿಂದಾಗಿ ವಿಶ್ವವಿದ್ಯಾಲಯದ ಆವರಣದಲ್ಲಿ ವಿದ್ಯಾರ್ಥಿಗಳಲ್ಲಿ ಸದಭಿರುಚಿ ಬೆಳೆಯಲು ಕಾರಣವಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಮಹಿಳಾ ಅಧ್ಯಯನಕ್ಕೆ ವಿಶೇಷ ಮಹತ್ವ ಬಂದಿದ್ದು ಡಾ.ಎಸ್. ರಾಮೇಗೌಡರ ಕಾಲಾವಧಿಯಲ್ಲಿಯೇ. ಮಹಿಳೆಯರ ಸಮಸ್ಯೆಗಳನ್ನು ಕುರಿತು ವಿಶೇಷ ಕಾಳಜಿ ತೋರಿಸುವ ಕುಲಪತಿಗಳು, ಮೊದಲೇ ಅಸ್ತಿತ್ವದಲ್ಲಿದ್ದ ಮಹಿಳಾ ಸಂಶೋಧನಾ ಕೇಂದ್ರ, ಮಹಿಳಾ ಅಧ್ಯಯನ ಸಮಿತಿ, ಮಹಿಳಾ ವೇದಿಕೆ, ಮತ್ತು ಮಹಿಳಾ ಕಲ್ಯಾಣ ಮಂಡಳಿಗಳನ್ನು ಚುರುಕುಗೊಳಿಸಿ, ಹೆಚ್ಚಿನ ಆರ್ಥಿಕ ನೆರವನ್ನು ನೀಡಿ ಅವು ಕಾರ್ಯಪ್ರವೃತ್ತವಾಗುವಂತೆ ಮಾಡಿದ್ದಾರೆ. ವಿಶ್ವವಿದ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳೆಯರು ತಮ್ಮ ಸಮಸ್ಯೆಗಳನ್ನು ತೋಡಿಕೊಳ್ಳಲು ಸಾಧ್ಯವಾದದ್ದು ಅವರೆಲ್ಲ ಒಂದುಗೂಡಿ ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸಿದ್ದು ಕುಲಪತಿ ಡಾ.ಎಸ್. ರಾಮೇಗೌಡರ ಪ್ರೋತ್ಸಾಹದಿಂದಾಗಿಯೇ. ಮಹಿಳಾ ವಸತಿಗೃಹಗಳಲ್ಲಿರುವ ವಿದ್ಯಾರ್ಥಿನಿಯರನ್ನು ಕುರಿತು ಅವರು ಹೆಚ್ಚಿನ ಕಾಳಜಿ ತೆಗೆದುಕೊಳ್ಳುತ್ತಿದ್ದುದನ್ನು ರಾಣಿ ಕಿತ್ತೂರ ಚೆನ್ನಮ್ಮ ವಸತಿಗೃಹದ ಪಾಲಕಿಯಾಗಿದ್ದ ನಾನು ಬಲ್ಲೆ. ಹೆಣ್ಣುಮಕ್ಕಳ ಬೌದ್ಧಿಕ ಬೆಳವಣಿಗೆಯೊಂದಿಗೆ ದೈಹಿಕ ಹಾಗೂ ಮಾನಸಿಕ ಬೆಳವಣಿಗೆಗೂ ಅವರು ಪ್ರೋತ್ಸಾಹಿಸುತ್ತಿದ್ದರು. ಯೋಗ ತರಬೇತಿ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಆಗಾಗ ವಸತಿಗೃಹದಲ್ಲಿ ನಡೆಸಲು ಅನುಮತಿ ನೀಡುವುದರೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮಗಳಿಗೂ ಆಗಮಿಸಿ, ವಿದ್ಯಾರ್ಥಿನಿಯರ ಪ್ರತಿಭೆಯನ್ನು ನೋಡಿ ಮೆಚ್ಚಿಕೊಳ್ಳುತ್ತಿದ್ದರು. ರಾಣಿ ಕಿತ್ತೂರ ಚೆನ್ನಮ್ಮ ವಸತಿಗೃಹದ ಪ್ರಥಮಮಹಡಿಯ ಉದ್ಘಾಟನೆಗೆ ಆಗಿನ ಉನ್ನತ ಶಿಕ್ಷಣ ಮಂತ್ರಿಗಳಾಗಿದ್ದ ಮಾನ್ಯ ಶ್ರೀ. ಎಸ್. ಎಮ್. ಯಾಹ್ಯಾರವರನ್ನು ಕರೆಯಿಸಿ, ಅದ್ಧೂರಿಯ ಸಮಾರಂಭ ಮಾಡಿಸಿದುದನ್ನು ವಿದ್ಯಾರ್ಥಿನಿಯರು ಮರೆಯಲು ಸಾಧ್ಯವಿಲ್ಲ. ಭಾರತೀಯ ಸಂಸ್ಕೃತಿಯ ಉತ್ತಮ ಗುಣಗಳನ್ನು ಉಳಿಸಿಕೊಂಡೇ ಮಹಿಳೆಯರು ಪ್ರಗತಿಯನ್ನು ಸಾಧಿಸಬೇಕು, ಆತ್ಮವಿಶ್ವಾಸ ಬೆಳೆಸಿಕೊಳ್ಳಬೇಕೆಂದು, ವಿದ್ಯಾರ್ಥಿನಿಯರಿಗೆ ಅವರು ಕರೆ ನೀಡಿದ್ದರು. ಮಹಿಳಾ ಕಲ್ಯಾಣ ಮಂಡಳಿಯ ಶಿಫಾರಸ್ಸುಗಳನ್ನು ಜಾರಿಗೆ ತರಲು ಆಸ್ಥೆ ವಹಿಸಿದ್ದಾರೆ.

ಡಾ.ಎಸ್. ರಾಮೇಗೌಡರಿಗೆ ರಾಜ್ಯೋತ್ಸವ ಪ್ರಶಸ್ತಿ ಬಂದು, ಒಂದೆರಡು ತಿಂಗಳಾಗಿತ್ತೆಂದು ತೋರುತ್ತದೆ. ಸ್ವಾಮಿ ಪ್ರಣವಾನಂದ ಪ್ರಶಸ್ತಿ ಇನ್ನೂ ಬಂದಿರಲಿಲ್ಲ. ವಸತಿಗೃಹದ ವಾರ್ಷಿಕೋತ್ಸವಕ್ಕೆ ಶ್ರೀಮತಿ ಶಾಂತಾದೇವಿ ಮಾಳವಾಡರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕುಲಪತಿಗಳನ್ನು ಅಧ್ಯಕ್ಷತೆ ವಹಿಸಲು ಕೇಳಿಕೊಂಡಿದ್ದೆವು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಒಬ್ಬ ವಿದ್ಯಾರ್ಥಿನಿ ಕಣಿ ಹೇಳುತ್ತ, ಅಧ್ಯಕ್ಷರನ್ನು ಕುರಿತು 'ಮುಖಾ ನೋಡಿದ್ರೆ ಗೊತ್ತಾಗತೈತಿ ದೊಡ್ಡ ಮನುಷ್ಯಾ ಆದೀಯ. ಪರಶಸ್ತಿಯ ಮ್ಯಾಲ ಪರಶಸ್ತಿ ಬರ್‍ತಾವ, ಇನ್ನೂ ದೊಡ್ಡ ಹುದ್ದೆಗೆ ಏರತೀಯಾ,' ಅಂತ ನುಡಿದಿದ್ದಳು. ಕುಲಪತಿಗಳು ಕಣಿಯಮ್ಮನ ಮಾತಿಗೆ ಸಂತೋಷಪಟ್ಟು ಕಾಸುಕೂಡ ಕೊಟ್ಟಿದ್ದರು. ಕಣಿಯಮ್ಮನ ಮಾತು ನಿಜವಾಗುತ್ತಲೇ ಬಂದಿದೆ. ಕುಲಪತಿ ಹುದ್ದೆಯನ್ನು ಬಿಟ್ಟರೂ ಅವರು ಅದಕ್ಕೂ ಉನ್ನತವಾದ ಹುದ್ದೆಯನ್ನು ಅಲಂಕರಿಸುವುದರಲ್ಲಿ ಸಂದೇಹವಿಲ್ಲ.

ಕುಲಪತಿಗಳಿಂದ ಇಷ್ಟೆಲ್ಲ ಕಾರ್ಯಸಾಧನೆಯಾಗಬೇಕಾದರೆ, ಹಿನ್ನೆಲೆಯಲ್ಲಿ ಸತತವಾಗಿ ದುಡಿಯುತ್ತಿರುವ ಅವರ ಧರ್ಮಪತ್ನಿ ಶ್ರೀಮತಿ ಸುಶೀಲಾ ರಾಮೇಗೌಡರ ಸಹಕಾರವನ್ನು ನಾವು ಗೌಣವಾಗಿಸುವಂತಿಲ್ಲ. ಡಾ.ಎಸ್. ರಾಮೇಗೌಡರು ಸದಾ ಚೈತನ್ಯದ ಚಿಲುಮೆಯಾಗಿರುವುದಕ್ಕೆ ಸುಸಂಸ್ಕೃತ ಗೃಹಿಣಿಯಾಗಿರುವ ಶ್ರೀಮತಿ ಸುಶೀಲಮ್ಮನವರೇ ಬಹುಮಟ್ಟಿಗೆ ಕಾರಣ. ಪತಿಯ ಆಹಾರ ಆರೋಗ್ಯಗಳ ಬಗ್ಗೆ ಅವರು ಯಾವಾಗಲೂ ಕಾಳಜಿ ವಹಿಸುತ್ತಾರೆ. ಸಹನೆ ಮತ್ತು ಸೌಜನ್ಯಗಳ ಶಾಂತಮೂರ್ತಿಯಾಗಿರುವ ಅವರು ಕುಟುಂಬದ ಜವಾಬ್ದಾರಿಯನ್ನು ಹೊತ್ತು, ಪತಿಯ ಆಸೆ ಆಕಾಂಕ್ಷೆಗಳೆಲ್ಲ ಈಡೇರುವುದಕ್ಕೆ ಜೀವನದುದ್ದಕ್ಕೂ ಪ್ರೋತ್ಸಾಹಿಸುತ್ತ, ಸಹಕರಿಸುತ್ತ ಬಂದಿದ್ದಾರೆ. ತಾವೂ ಬೆಳೆದಿದ್ದಾರೆ; ರಾಮೇಗೌಡರನ್ನೂ ಬೆಳೆಸಿದ್ದಾರೆ. ಪ್ರತಿಭಾವಂತ ಮಕ್ಕಳಾದ ಡಾ. ಸುಧೀಂದ್ರ, ಚಂದ್ರಶೇಖರ ಹಾಗೂ ಧ್ಯಾನಶೋಭಾ, ಅವರ ನಿರೀಕ್ಷೆಯಂತೆ ಜೀವನದಲ್ಲಿ ಪ್ರಗತಿಯನ್ನು ಸಾಧಿಸ ತೊಡಗಿದ್ದಾರೆ. ಡಾ.ಎಸ್. ರಾಮೇಗೌಡರ ಕುಟುಂಬಕ್ಕೆ ಆಯುರಾರೋಗ್ಯವನ್ನು ಕೋರುತ್ತ ಉತ್ತರೋತ್ತರ ಅಭಿವೃದ್ಧಿ ಹೊಂದಲೆಂದು ಆಶಿಸುತ್ತೇನೆ.

* * *

'ಮೆಲುಕು': ಒಂದು ಸಮೀಕ್ಷೆ

ಜಿ.ಎಂ. ಹೆಗಡೆ

ಕನ್ನಡ ನಾಡಿನ ಅದ್ಭುತ ವಾಗ್ಮಿಗಳಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಎಸ್. ರಾಮೇಗೌಡರದು ಪ್ರಮುಖ ಸ್ಥಾನ. ಅವರು ತಮ್ಮ ವಿದ್ಯಾರ್ಥಿ ಜೀವನದಿಂದಲೂ ಭಾಷಣ ಕಲೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ವಿಜ್ಞಾನ ತಂತ್ರಜ್ಞಾನದ ವ್ಯಾಸಂಗ ಮಾಡುವಾಗಲೂ ಅವರ ಮನಸ್ಸು ಜೀವಚೈತನ್ಯ ಭಾಷಣ ಮಾಡುವುದರಲ್ಲಿ ತೊಡಗಿತ್ತೆಂಬುದು ಪ್ರಮುಖವಾದ ಅಂಶ. ಉತ್ತಮ ಭಾಷಣಕಾರನಾಗುವವನಿಗೆ ವಿಶಾಲವಾದ ವ್ಯಾಸಂಗ, ಪ್ರಪಂಚಜ್ಞಾನ, ಮಾತಿನ ಕಲೆ ಮುಖ್ಯವಾದುದು. ಸಂದರ್ಭೋಚಿತವಾಗಿ, ಸಮಯಸ್ಫೂರ್ತಿಯಿಂದ ಲೀಲಾಜಾಲವಾಗಿ ಮಾತನಾಡಿ ಪ್ರೇಕ್ಷಕರನ್ನು ಸಮ್ಮೋಹನಗೊಳಿಸುವ ಅಪೂರ್ವಶಕ್ತಿ ಡಾ. ಎಸ್. ರಾಮೇಗೌಡರಲ್ಲಿ ಅಂತಸ್ಥವಾಗಿದೆ. ತಮ್ಮ ಪ್ರತಿಭೆ ಪಾಂಡಿತ್ಯಗಳನ್ನು ಭಾಷಣಕಲೆಗಾಗಿ ಧಾರೆಯೆರೆದ ಡಾ. ಎಸ್. ರಾಮೇಗೌಡರು ದಣಿವಿಲ್ಲದೆ ಹಲವು ಗಂಟೆಗಳ ಕಾಲ ಭಾಷಣ ಮಾಡುವ ಧೀಮಂತರು. ಕೇಳುಗರನ್ನು ಮಂತ್ರಮುಗ್ಧಗೊಳಿಸುವ ವಾಗ್‌ವೈಖರಿ ಡಾ. ಎಸ್. ರಾಮೇಗೌಡರದಾಗಿದೆ. ನಾಲ್ಕು ದಶಕಕ್ಕೂ ಹೆಚ್ಚು ಕಾಲದಿಂದ ಭಾಷಣ ಮಾಡುತ್ತಲಿರುವ ಡಾ. ಎಸ್. ರಾಮೇಗೌಡರು ಅಪರೂಪದ ವಾಗ್ಮಿಗಳು. ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯಾಗಿ ಅವರು ಧಾರವಾಡಕ್ಕೆ ಬಂದಾಗ ಎಲ್ಲರಿಗೂ ಆಶ್ಚರ್ಯವುಂಟಾಗುವಂತಾಯಿತು. ಮಿಂಚಿನ ಹೊಳೆ ಹರಿಸುವ ಮಾತಿನ ಪ್ರವಾಹದಿಂದ ಜನಮನಸ್ಸನ್ನು ಸೂರೆಗೊಂಡ ಅಪರೂಪದ ಕುಲಪತಿಗಳವರು. ಕುಲಪತಿಗಳಾದವರು ವಿದ್ವಾಂಸರಾಗಿರಬೇಕು. ವಿದ್ವತ್‌ಪೂರ್ಣ ಭಾಷಣಕಾರರೂ, ನುರಿತ ದಕ್ಷ, ಪ್ರಾಮಾಣಿಕ ಆಡಳಿತಗಾರರೂ ಆಗಿರಬೇಕು. ಕ್ರಿಯಾಶೀಲ ಚೈತನ್ಯ ಕುಲಪತಿಯ ಅರ್ಹತೆಗಳಲ್ಲೊಂದು. ಎಲ್ಲಕ್ಕಿಂತ ಮುಖ್ಯವಾದದ್ದು ಎಂದರೆ ಅವರಿಗೆ ಯಾವ ಸಭೆ ಸಮಾರಂಭಗಳಿರಲಿ ಅದರಲ್ಲಿ ಭಾಷಣ ಮಾಡುವ ಪ್ರತಿಭೆ, ಶಕ್ತಿ ಸಂಪನ್ನತೆ ಬಹಳ ಆವಶ್ಯಕ. ರಾಜಕೀಯ ಕಾರಣಗಳಿಂದ ಕುಲಪತಿಗಳಾದವರು ಸಭೆಗಳಲ್ಲಿ ಮಾತನಾಡಲಾಗದೆ ಯಾರೋ ಬರೆದುಕೊಟ್ಟ ಭಾಷಣಗಳನ್ನು ಓದುವ ಸಂದರ್ಭಗಳು

ಬರುತ್ತವೆ. ಡಾ. ಎಸ್. ರಾಮೇಗೌಡರು ಯಾವ ಟಿಪ್ಪಣಿ, ಭಾಷಣ ಬರೆದುಕೊಳ್ಳದೆ ಮಾತನಾಡುವವರು. ವಿಶ್ವವಿದ್ಯಾಲಯದ ಚರಿತ್ರೆಯಲ್ಲೇ ಅದ್ಭುತ ಭಾಷಣ ಪ್ರತಿಭೆಯ ಕುಲಪತಿಯಾಗಿ ಅವರು ಕೀರ್ತಿ ಸಂಪಾದಿಸಿದ್ದಾರೆ.

ಡಾ. ಎಸ್. ರಾಮೇಗೌಡರು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯಾಗಿ ಬಂದ ನಂತರ ಅವರ ಭಾಷಣಗಳನ್ನು ಪುಸ್ತಕರೂಪದಲ್ಲಿ ಪ್ರಕಟಿಸುವ ವಿಚಾರವನ್ನು ವಿಶ್ವವಿದ್ಯಾಲಯದ ಸಿಂಡಿಕೇಟ್ ನಿರ್ಧರಿಸಿತು. ಈ ರೀತಿ ಕುಲಪತಿಯ ಭಾಷಣಗಳನ್ನು ಕರ್ನಾಟಕ ವಿಶ್ವವಿದ್ಯಾಲಯ ಪ್ರಕಟಿಸುತ್ತಿರುವದು ಇದೇ ಪ್ರಥಮ. ಮೈಸೂರು ವಿಶ್ವವಿದ್ಯಾಲಯದ ಕುಲಪತಿಗಳಾಗಿದ್ದ ಕುವೆಂಪು, ದೇಜಗೌ ತಮ್ಮ ಭಾಷಣಗಳನ್ನು ಈ ಮೊದಲು ಪ್ರಕಟಿಸಿದ್ದಾರಾದರೂ ಅವರು ಕನ್ನಡ ಸಾಹಿತಿಗಳಾಗಿ ಕುಲಪತಿಗಳಾದವರಾಗಿದ್ದಾರೆ. ಡಾ. ಎಸ್. ರಾಮೇಗೌಡರು ಮೂಲತಃ ವಿಜ್ಞಾನ ತಂತ್ರಜ್ಞಾನದ ಪ್ರಾಚಾರ್ಯರಾಗಿ ಕುಲಪತಿಗಳಾಗಿದ್ದರೂ ಅವರ ಭಾಷಣಗಳಿಗೆ ಸಾಹಿತ್ಯದ ಸುಗಂಧವಿದೆ. ವಿಜ್ಞಾನ ಕಲೆಗಳ ಸಮರಸ, ಸಮನ್ವಯದಿಂದ ಬೆಳೆದ ವಿಚಾರ ಮನಸ್ಸು ಅವರದಾಗಿದೆ. ಹೀಗಾಗಿ ಡಾ. ಎಸ್. ರಾಮೇಗೌಡರ ಕುಲಪತಿಯ ಭಾಷಣ ಸಂಪುಟಕ್ಕೆ ವಿಶೇಷತೆ ಪ್ರಾಪ್ತವಾಗಿದೆ.

ಕುಲಪತಿ ಡಾ. ಎಸ್. ರಾಮೇಗೌಡರ ಭಾಷಣ ಸಂಪುಟ 'ಮೆಲುಕು' ೧೯೯೩ರಲ್ಲಿ ಪ್ರಕಟವಾದ ೪೪ ಭಾಷಣಗಳ ಮೊದಲ ಭಾಗವಾಗಿದೆ. ನಾಡಿನ ರಾಷ್ಟ್ರಕವಿ, ರಸಋಷಿಗಳಾದ ಕುವೆಂಪು ಅವರಿಗೆ ಅರ್ಪಿತವಾದ 'ಮೆಲಕು' ಅಂದವಾಗಿ ಪ್ರಕಟವಾಗಿದೆ. ಡಾ. ಎಸ್. ರಾಮೇಗೌಡರು ನವೋದಯ ಸಾಹಿತ್ಯದ ಆಳವಾದ ಅಭ್ಯಾಸದಿಂದ ಮುಖ್ಯವಾಗಿ ಕುವೆಂಪು ಸಾಹಿತ್ಯ ವ್ಯಕ್ತಿತ್ವದಿಂದ ಪ್ರಭಾವಿತರಾದವರು. ಆದ್ದರಿಂದಲೇ ಈ ಭಾಷಣಗಳಲ್ಲಿ ಸೌಂದರ್ಯೋಪಾಸನೆ, ವಿಚಾರ ಪ್ರಿಯತೆ, ಆದರ್ಶವಾದದ ವಾಕ್ ಶ್ರೀಮಂತಿಕೆ ಗರ್ಭೀಕೃತವಾಗಿದೆ. ಪ್ರತಿಯೊಂದು ಭಾಷಣದಲ್ಲೂ ವಸ್ತುವೈವಿಧ್ಯ, ವಿಶಿಷ್ಟ ಪ್ರತಿಭೆ ಪಾಂಡಿತ್ಯ ಪ್ರಕಟವಾಗಿದೆ. ಕುಲಪತಿಗಳಾದವರು ವಿವಿಧ ಸಮಾರಂಭ ವಿಚಾರ ಸಂಕಿರಣಗಳಲ್ಲಿ ಸಾರ್ವಜನಿಕರು, ಸಹೃದಯರು, ವಿದ್ಯಾರ್ಥಿಗಳು ಹೀಗೆ ವಿವಿಧ ಜನಸಮೂಹವನ್ನು ಉದ್ದೇಶಿಸಿ ಮಾತನಾಡುವಾಗ ತೋರುವ ವಿಷಯ ಪ್ರೌಢಿಮೆ, ಭಾವಪೂರ್ಣ ಶೈಲಿ ಇಲ್ಲಿ ಅರ್ಥಪೂರ್ಣ ಅಭಿವ್ಯಕ್ತಿ ಪಡೆಯುತ್ತದೆ.

'ಸ್ವಾತಂತ್ರ್ಯೋತ್ತರ ಸಾಧನೆ'ಯ ಸೋಲು ಗೆಲುವುಗಳನ್ನು ಡಾ. ಎಸ್. ರಾಮೇಗೌಡರು ವಿವೇಚಿಸುತ್ತ ದೇಶದ ಜೀವನ ಭವ್ಯ ಜೀವನವಾಗುವಂತೆ ಮಾಡಲು ಸ್ಫೂರ್ತಿ ತುಂಬುತ್ತಾರೆ. ಹಿರಿಯರು ಕಷ್ಟಪಟ್ಟು ತ್ಯಾಗಬಲಿದಾನದಿಂದ ಗಳಿಸಿದ ಸ್ವಾತಂತ್ರ್ಯವನ್ನು ರಕ್ಷಿಸುವುದಕ್ಕೆ ಮುಂದಾಗಬೇಕೆಂದು ಕರೆ ಕೊಡುತ್ತಾರೆ. ದೀನದಲಿತರ ಉದ್ಧಾರಕರಾದ ಮಹಾತ್ಮ ಫುಲೆ ಒಬ್ಬ 'ಉದಾತ್ತ ಮಾನವತಾವಾದಿ' ಎಂದು ಕರೆದು, ಅವರದು ಗಾಂಧೀಜಿಯವರಿಗೆ ಸಮಾನವಾದ ವ್ಯಕ್ತಿತ್ವ ಎಂದು ಹೇಳಿ ಅವರ ಶತಮಾನೋತ್ಸವ ಅರ್ಥಪೂರ್ಣವಾಗಿಸಲು ಫುಲೆ ಕುರಿತ ಗ್ರಂಥ ಕನ್ನಡದಲ್ಲಿ ಪ್ರಕಟವಾಗಲಿ ಎಂಬ ಸದಾಶಯ ವ್ಯಕ್ತಪಡಿಸಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಕ್ರೀಡೆಗಳಿಗೆ ಕೊಡುವ ಪ್ರಾಧಾನ್ಯ ನಮ್ಮ ಶಿಕ್ಷಣ

ಸಂಸ್ಥೆಗಳಲ್ಲೂ ಜಾರಿಗೆ ಬರಬೇಕು. ಭಾವೈಕ್ಯತೆ, ಭಾರತೀಯತೆ, ಮನೋಬಲ ಬೆಳಸುವಲ್ಲಿ ಕ್ರೀಡೆಗಳು ಕಾರಣವಾಗುವುದರಿಂದ 'ಕ್ರೀಡಾ ಮನೋಭಾವ ಬೆಳೆಸಿಕೊಳ್ಳಿ' ಎಂದು ಯುವ ಜನರಿಗೆ ಡಾ. ಎಸ್. ರಾಮೇಗೌಡರು ಕರೆ ಕೊಡುತ್ತಾರೆ. ಭಾರತೀಯ ಮಹಿಳೆಯರು ಬಾಲಿಕೆಯರ ಅಭ್ಯುದಯದ ಬಗ್ಗೆ ಗಂಭೀರವಾಗಿ ಚಿಂತಿಸಿ, ಅವರ ಭವಿಷ್ಯ ಉಜ್ವಲವಾಗುವಂತೆ ಕಾರ್ಯಕ್ರಮಗಳನ್ನು ರೂಪಿಸುವುದು ಅವಶ್ಯಕವೆಂಬುದನ್ನು 'ಬಾಲಿಕಾವರ್ಷ'ದ ಉದ್ಘಾಟನೆ ಸಮಾರಂಭದಲ್ಲಿ ಕುಲಪತಿಗಳು ಇನ್ನೊಂದು ಭಾಷಣದಲ್ಲಿ ಹೇಳುತ್ತಾರೆ. ಪರಿಸರ ಮಾಲಿನ್ಯದಿಂದ ದೇಶ ಹೇಗೆ ಅವನತಿಯ ಹಾದಿಯತ್ತ ಸಾಗುತ್ತಿದೆ ಎಂಬುದನ್ನು ವಿಸ್ತಾರವಾಗಿ ವಿದಿತ ಪಡಿಸುವ 'ಕಿತ್ತಿಕೋ, ಹಚ್ಚಿಕೋ, ಅರ್ಪಿಸಿಕೋ' ಭಾಷಣವು ದೇಶದ ಜ್ವಲಂತ ಸಮಸ್ಯೆಯತ್ತ ಕುಲಪತಿಗಳ ನೋವು ವ್ಯಥೆಯನ್ನು ಪ್ರಕಟಿಸಿದೆ. ವಿಶ್ವವಿದ್ಯಾಲಯದ ಯುವಜನೋತ್ಸವದ ಸಂದರ್ಭದಲ್ಲಿ 'ಸಹೃದಯತೆ, ರಸಿಕತೆ ಅನ್ನುವುದು ಮನುಷ್ಯ ಮಾತ್ರರಿಗೆ ಇದ್ದೇ ಇರುತ್ತದೆ. ನಾವು ಅದಕ್ಕೆ ಸ್ಪಂದಿಸುತ್ತೇವೆ. ಇನ್ನೊಬ್ಬರು ಸೃಷ್ಟಿಸಿದ ಕಲೆಯನ್ನು ಸಾಹಿತ್ಯವನ್ನು, ಇಲ್ಲವೇ ಇನ್ನೊಬ್ಬರು ಮಾಡಿದ ಒಳ್ಳೆಯ ಕೆಲಸಗಳನ್ನು ಅತ್ಯಂತ ಸಹೃದಯತೆಯಿಂದ, ತುಂಬ ಮಾನವತೆಯಿಂದ ನೋಡಿ, ಅದಕ್ಕೆ ನಮ್ಮ ಮನಸ್ಸು ಕರಗಿದರೆ ಹಾಗೆ ಮನಸ್ಸು ದ್ರವಿಸುವ ಶಕ್ತಿಯನ್ನು ನಾವು ಬೆಳಸಿಕೊಂಡರೆ ಖಂಡಿತವಾಗಿ ಉತ್ತಮರಾದ ಜನರಾಗುತ್ತೇವೆ (ಪು. ೩೭) ಆದ್ದರಿಂದ ಸಹೃದಯತೆ ಬೆಳಸಿಕೊಳ್ಳಿ' ಎಂದು ಯುವಜನರನ್ನು ಡಾ. ಎಸ್. ರಾಮೇಗೌಡರು ಪ್ರೇರಿಸುತ್ತಾರೆ. 'ಕನ್ನಡಕ್ಕೊಬ್ಬನೆ ಕೈಲಾಸಂ' ಎಂಬ ಭಾಷಣದಲ್ಲಿ ಕೈಲಾಸಂ ಅವರ ಸಾಹಿತ್ಯದ ಬಗೆಗೆ ಕನ್ನಡ ಪ್ರಜ್ಞೆಯ ಬಗೆಗೆ ಅವರು ವ್ಯಕ್ತ ಪಡಿಸುತ್ತಾರೆ.

'ಮಹಿಳೆಯರು ಮತ್ತು ಮಗುವಿನ ಸಮಸ್ಯೆ'ಯನ್ನು ಭಾರತೀಯ ಸಾಮಾಜಿಕ, ಸಾಹಿತ್ಯಿಕ ಸಂದರ್ಭದಲ್ಲಿ ವಿಶ್ಲೇಷಿಸಿ, ಆಧುನಿಕ ಮಹಿಳೆ ಶೈಕ್ಷಣಿಕವಾಗಿ ಅರ್ಹತೆಗಳನ್ನು ಪಡೆದುಕೊಳ್ಳುವ ಹಾಗೆ ಗುಣಸಂಪನ್ನಳೂ ಆಗಿ ಬೆಳೆಯಬೇಕೆಂಬುದನ್ನು ಡಾ. ಎಸ್. ರಾಮೇಗೌಡರು ಒತ್ತಿ ಹೇಳುತ್ತಾರೆ. ಅಂಬೇಡಕರ 'ದೀನದಲಿತರ ನಾಯಕ'ರಾಗಿ ದಲಿತ ಜನಾಂಗದ ಕಣ್ಮಣಿಯಾಗಿ, ಭಾರತದ ಸಂವಿಧಾನಶಿಲ್ಪಿಯಾಗಿ, ರಾಷ್ಟ್ರಪಿತ ಗಾಂಧೀಜಿಯ ಹಾಗೆ ರಾಷ್ಟ್ರ ನಾಯಕರಾಗಿರುವ ವ್ಯಕ್ತಿತ್ವದ ವಿವಿಧ ಮುಖಗಳನ್ನು ಅಂಬೇಡಕರ ಶತಮಾನೋತ್ಸವ ಭಾಷಣದಲ್ಲಿ ಹೇಳಿರುವದನ್ನು ನಾವು ಕಾಣುತ್ತೇವೆ. ಇಂತಹ ಭಾಷಣಗಳಲ್ಲಿ ಯಾವುದೇ ಆಕ್ರೋಶವಾಗಲೀ, ಭಾವೋನ್ಮಾದವಾಗಲೀ ಇರದೇ ವ್ಯಕ್ತಿ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಅರ್ಥೈಸುವ ವಿಧಾನ ಕಂಡುಬರುತ್ತದೆ.

'ರಾಷ್ಟ್ರೀಯ ಭಾವೈಕ್ಯ ಮತ್ತು ಧರ್ಮ ಸಮನ್ವಯ' ಎಂಬುದು ಭಾರತೀಯ ಸಂಸ್ಕೃತಿ ಪ್ರತಿಷ್ಠಾನದಲ್ಲಿ ಮಾಡಿದ ಮಹತ್ವದ ಭಾಷಣವಾಗಿದೆ. ವಿಜ್ಞಾನದ ಪ್ರಗತಿ ಬಹುಮುಖವಾಗಿ ಆಗುತ್ತಿರುವ ನಮ್ಮ ಜೀವನದಲ್ಲಿ ಮಾನವತೆಯ ಉದ್ದೀಪನವಾಗಬೇಕು. ಸರ್ವಧರ್ಮ ಸಮನ್ವಯ ಭಾವನೆಯಿಂದ, ಸೌಂದರ್ಯೋಪಾಸನೆಯಿಂದ, ಸಾಮಾಜಿಕ ಶಾಂತಿ ಸೌಹಾರ್ದತೆಯಿಂದ ಭಾರತೀಯ ಜೀವನ ಸಂಪನ್ನವಾಗುತ್ತದೆ ಎಂದು ಧ್ಯೇಯವಾದಿಯಾಗಿ ಡಾ. ಎಸ್. ರಾಮೇಗೌಡ ಅವರು ಸೂರ್ಯನ ರಶ್ಮಿಯಂತೆ ತಮ್ಮ ಚಿಂತನೆಯನ್ನು

ಪ್ರಕಟಿಸಿದ್ದಾರೆ. ಕುವೆಂಪು ಹಾಗೂ ಅಂಬೇಡಕರ ಸಾಹಿತ್ಯದಲ್ಲಿ ಕಾಣುವ ವೈಚಾರಿಕ ಸಾಮ್ಯತೆಯ ಅಂಶಗಳನ್ನು 'ಮಹಾಮಾನವತಾವಾದಿ' ಭಾಷಣದಲ್ಲಿ ಹೇಳಿದ್ದಾರೆ. ಸ್ವಾಮಿ ವಿವೇಕಾನಂದರು 'ಭಾರತೀಯ ಸಂಸ್ಕೃತಿಯ ರಕ್ಷಕ'ರಾಗಿ ಬೀರಿದ ಆಧ್ಯಾತ್ಮಿಕ ಪ್ರಭೆ ಯುವ ಚೇತನಗಳನ್ನು ಉದ್ದೀಪಿಸಲಿ ಎಂಬುದು ವಿವೇಕಾನಂದ ಜಯಂತಿಯ ಸಂದರ್ಭದಲ್ಲಿ ಡಾ. ಎಸ್. ರಾಮೇಗೌಡರ ಕರೆಯಾಗಿದೆ. ಯುವಜನರಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆದಾಗ ಮಾತ್ರ ಅವರ ಅಭ್ಯುದಯ ಸಾಧ್ಯವೆಂಬುದು ಇನ್ನೊಂದು ಭಾಷಣದ ಸಾರಾಂಶವಾಗಿದೆ.

ಗಣರಾಜ್ಯೋತ್ಸವದ ಸಂದರ್ಭದಲ್ಲಿ ಮಾಡಿದ 'ಭಾವೈಕ್ಯ ಸಂದೇಶ' ಭಾಷಣ ಪ್ರಚಲಿತ ಭಾರತೀಯ ಸಂದರ್ಭವನ್ನು ಅರ್ಥಪೂರ್ಣವಾಗಿ ಸಮೀಕ್ಷಿಸುತ್ತದೆ. ಅದರಲ್ಲಿ ಬರುವ ಮಾತುಗಳಿವು: "ಇಂದು ನಾವು ನಿಜವಾದ ವಿಶ್ವಮಾನವರಾಗಬೇಕಾಗಿದೆ. ನಮ್ಮ ನಮ್ಮಲ್ಲಿ ನೀರಿಗಾಗಿ, ಭಾಷೆಗಾಗಿ, ದೇವಾಲಯಕ್ಕಾಗಿ, ಗೋಪುರಕ್ಕಾಗಿ, ಮಸೀದೆಗಾಗಿ, ಚರ್ಚಿಗಾಗಿ ನೂರು ಕಾರಣಗಳಿಗಾಗಿ ನಡೆಯುತ್ತಿರುವ ಹೋರಾಟವನ್ನು ನಿಲ್ಲಿಸುವುದು ಅತ್ಯಾವಶ್ಯಕವಾಗಿದೆ. ಪುರಾತನವಾದ ಈ ದೇಶಕ್ಕೆ, ಭವ್ಯ ಸಂಸ್ಕೃತಿಯ ಆಗರವಾದಂಥ ಈ ಭಾರತಕ್ಕೆ ಉಜ್ವಲ ಭವಿಷ್ಯ ಪ್ರಾಪ್ತವಾಗುತ್ತದೆ" (ಪುಟ ೬೦-೬೨)

ಡಾ. ಎಸ್. ರಾಮೇಗೌಡರ ಭಾಷಣಗಳಲ್ಲಿ ವಿದ್ಯಾಕ್ಷೇತ್ರದ ಸಮಸ್ಯೆಗಳ ಚಿಂತನೆಯೂ ಪ್ರಮುಖವಾದದ್ದು. 'ಗುರುಶಿಷ್ಯರ ಆದರ್ಶ'ದ ಬಗೆಗೆ ಅವರ ವಿಚಾರಧಾರೆ ಗಮನಾರ್ಹವಾಗುತ್ತದೆ."ವಿದ್ಯಾರ್ಥಿಗಳ ಹೃದಯದಲ್ಲಿ ಏನಾದರೂ ಕೆಟ್ಟದ್ದು ಇರಬೇಕಾದರೆ ಕೆಲವು ವಿಷಯಗಳಲ್ಲಿ ರಾಜಕಾರಣಿಗಳು ಎಷ್ಟು ಮುಖ್ಯವೋ ಕೆಲವು ವಿಷಯಗಳಲ್ಲಿ ಉಪಾಧ್ಯಾಯರು ಮುಖ್ಯವಾಗಿ ಬಿಡುತ್ತಾರೆ. ಉಪಾಧ್ಯಾಯರೆನಿಸಿಕೊಂಡವರು ತೇಜಸ್ಸು, ಪ್ರಸನ್ನತೆ, ಭಾಷಾಪ್ರಭುತ್ವ ಮತ್ತು ಸ್ವಸ್ಥಾನ ಪರಿಜ್ಞಾನ ಇವುಗಳ ಬಗೆಗೆ ಜಾಗೃತರಾಗಿರಬೇಕು. ವಿದ್ಯಾರ್ಥಿಗಳು ಪದವಿಯನ್ನು ಪಡೆಯಲು ಮಾತ್ರ ಕಲಿಯಬೇಕೆಂದಿಲ್ಲ. ತಮ್ಮ ವ್ಯಕ್ತಿತ್ವವನ್ನು ಬೆಳೆಸತಕ್ಕ ಎಲ್ಲ ಸಂಗತಿಗಳನ್ನೂ ಅವರು ಅರಿತುಕೊಳ್ಳಬೇಕು. ಕುವೆಂಪು ಹೇಳಿದ ಹಾಗೆ ವಿದ್ಯಾರ್ಥಿ ಓರ್ವ ಗೌರವ ತಪಸ್ವಿಯಾಗಿದ್ದಾನೆ. ತಪಸ್ವಿಗೆ ಇರಬೇಕಾದ ಏಕಾಗ್ರತೆ, ಏಕಮನಸ್ಸು, ಹಿಡಿದ ಕೆಲಸವನ್ನು ಸಾಧಿಸಿಯೇ ತೀರುತ್ತೇನೆ ಎನ್ನುವ ಛಲ ಇರಬೇಕು" (ಪುಟ ೬೮) ವಿದ್ಯಾರ್ಥಿಗಳು ತರುತಳೆದ ಪುಷ್ಪ ಆಗಬೇಕು ಎಂಬ ಹಾರ್ದಿಕ ಭಾವವನ್ನು ಮಾರ್ಮಿಕವಾಗಿ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳಿಗೆ 'ಗೌರವ ತಪಸ್ವಿಗಳಾಗಿರಿ' ಎಂದು ಹೇಳಿ ಹುರಿದುಂಬಿಸಿ ಅವರ ಮನಸ್ಸು ಕಲುಷಿತಗೊಳ್ಳದಂತೆ ಎಚ್ಚರವಹಿಸಲು ಡಾ. ಎಸ್. ರಾಮೇಗೌಡರು ಕಳಕಳಿಯಿಂದ ಹೇಳುತ್ತ ಬಂದಿದ್ದಾರೆ.

ಡಾ. ಎಸ್. ರಾಮೇಗೌಡರಿಗೆ ಸಾಹಿತ್ಯ ಸಂಸ್ಕೃತಿಗಳಲ್ಲಿ ಅನನ್ಯ ಅಭಿಮಾನ. ನಾಡಿನ, ಭಾರತದ ಬೇರೆಬೇರೆ ಭಾಗಗಳ ಹೆಸರಾಂತ ಸಾಹಿತಿ, ವಿಜ್ಞಾನಿ, ಕಲಾವಿದರನ್ನು ವಿಶ್ವವಿದ್ಯಾಲಯಕ್ಕೆ ಆಮಂತ್ರಿಸಿ ಅವರ ಭಾಷಣಗಳನ್ನು ಏರ್ಪಡಿಸಿದ ಖ್ಯಾತಿಯೂ ಅವರಿಗಿದೆ. ತೆಲುಗು ಸಾಹಿತ್ಯದಲ್ಲಿ ಜ್ಞಾನಪೀಠ ಪ್ರಶಸ್ತಿ ಪಡೆದ ಕವಿ ಡಾ. ಸಿ. ನಾರಾಯಣರೆಡ್ಡಿ ಅವರನ್ನು 'ಕವಿ ದಿನ' ಕಾರ್ಯಕ್ರಮಕ್ಕೆ ಆಮಂತ್ರಿಸಿ ಅವರ ಕವಿತ್ವಶಕ್ತಿಯ

ಅನನ್ಯತೆಯನ್ನು ತಮ್ಮ ಭಾಷಣದಲ್ಲಿ ಕೊಂಡಾಡಿ, ಸಿ. ನಾರಾಯಣರೆಡ್ಡಿ 'ಸರಸ್ವತಿಯ ಕಂಠಾಭರಣ' ಆಗಿರುವುದನ್ನು ಧ್ವನಿಪೂರ್ಣವಾಗಿ ಹೇಳಿದ್ದಾರೆ. ಮೂರು ಸಾವಿರಕ್ಕೂ ಹೆಚ್ಚು ಹಾಡುಗಳನ್ನು ಬರೆದು ಜನಪ್ರಿಯರಾದ 'ಸಿನಾರೆ' ಅವರನ್ನು ವರಕವಿ ಬೇಂದ್ರೆ ನಿವಾಸಕ್ಕೆ ಕರೆದೊಯ್ದು ಅಲ್ಲಿ ಮಾಡಿದ ಭಾಷಣದಲ್ಲಿ ಕನ್ನಡಿಗರ ಹೃದಯ ಶ್ರೀಮಂತಿಕೆ, ನಿಸ್ಸೀಮ ಔದಾರ್ಯ, ಸಂಸ್ಕೃತಿಯ ಅನನ್ಯತೆಯನ್ನು, ವರಕವಿ ಬೇಂದ್ರೆಯವರ ಸಾಹಿತ್ಯದ ಸತ್ವಶ್ರೀಮಂತಿಕೆಗಳನ್ನು ಭಾವಶ್ರೀಮಂತಿಕೆಯಿಂದ ಡಾ. ಎಸ್. ರಾಮೇಗೌಡ ಪ್ರಕಟಿಸಿದ್ದಾರೆ.

ಸಂಗೀತ ಪ್ರಪಂಚದ ದಿಗ್ಗಜಗಳನ್ನು ಕಂಡಾಗ ಡಾ. ಎಸ್. ರಾಮೇಗೌಡರು ಭಾವಪರವಶರಾಗುತ್ತಾರೆ. ಗದುಗಿನ ಪಂಚಾಕ್ಷರಿ ಗವಾಯಿಗಳ ಶತಮಾನೋತ್ಸವ ಭಾಷಣದಲ್ಲಿ 'ಜ್ಞಾನ ಚಕ್ಷುವಿನ ಗಾನಭಾಸ್ಕರ' ಎಂದು ಅವರನ್ನು ಕೊಂಡಾಡಿದ್ದಾರೆ. ಅಂಧರಲ್ಲೂ, ಸ್ವಾಭಿಮಾನ, ಸೃಜನಶೀಲತೆ, ಕಲೆಯ ಅನನ್ಯತೆ ಹೇಗೆ ಸಂಪನ್ನವಾಗಿರುತ್ತದೆಂಬುದಕ್ಕೆ ಪಂಚಾಕ್ಷರಿ ಗವಾಯಿ ಸಾಕ್ಷಿಯೆಂದು ಅಭಿಮಾನಿಯಾಗಿ ಹೇಳಿದ್ದಾರೆ.

ಭಾರತದ ಜ್ವಲಂತ ಸಮಸ್ಯೆಗಳಲ್ಲೊಂದು 'ನಿರುದ್ಯೋಗ ಸಮಸ್ಯೆ'. ಅದರ ನಿವಾರಣೆಗಾಗಿ ಯುವ ಜನರು ವೃತ್ತಿ ಶಿಕ್ಷಣ ಪಡೆಯುವುದು, ತನ್ಮೂಲಕ ಸ್ವತಂತ್ರ ಉದ್ಯೋಗಗಳನ್ನು ಮಾಡುವತ್ತ ಮಾರ್ಗದರ್ಶನ ಮಾಡುವ ವಿಚಾರವನ್ನು ಡಾ. ಎಸ್. ರಾಮೇಗೌಡರು ಇನ್ನೊಂದು ಭಾಷಣದಲ್ಲಿ ಪ್ರಚುರ ಪಡಿಸಿದ್ದಾರೆ. ಅಂಬೇಡಕರ ಶತಮಾನೋತ್ಸವ ಅರ್ಥಪೂರ್ಣವಾಗಬೇಕಾದರೆ ದಲಿತರಲ್ಲಿ ಪ್ರಗತಿ ಸಾಧ್ಯವಾಗಬೇಕಾದರೆ ಅವರೆಲ್ಲ ವಿದ್ಯಾವಂತರಾಗುವುದು ಬಹಳ ಅವಶ್ಯಕ ಎಂದು ಹೇಳಿದ್ದಾರೆ. ವಜ್ರ ಎಲ್ಲಿದ್ದರೂ ಹೇಗೆ ಪ್ರಕಾಶಮಾನವಾಗಿರುತ್ತದೋ ಹಾಗೆ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ಪ್ರತಿಭೆ ಜ್ಞಾನದ ಕಡಲಿನ ಮುತ್ತುರತ್ನವಾಗಿ ಹೊಳೆಯುತ್ತದೆ. ಶಿವರಾಮ ಕಾರಂತರ ಹಾಗೆ ಮಹತ್ತರವಾದ ಸಾಧನೆಯಲ್ಲಿ ತಮ್ಮ ಬದುಕನ್ನು ತೊಡಗಿಸಿಕೊಳ್ಳಬೇಕು. ಸೃಜನಶೀಲಶಕ್ತಿ, ಆತ್ಮಾಭಿಮಾನ, ಜ್ಞಾಪಕಶಕ್ತಿಗಳಿಂದ ವಿದ್ಯಾರ್ಥಿ ಮನಸ್ಸು ಕ್ರಿಯಾಶೀಲವಾಗಿರುವಂತೆ ಡಾ. ಎಸ್. ರಾಮೇಗೌಡರು ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿ ಅವರು 'ಗುಣಗೌರವ'ವನ್ನು ಮಾಡಿರುವುದು ಇನ್ನೊಂದು ಭಾಷಣದಲ್ಲಿದೆ. ವಿದ್ಯಾರ್ಥಿ ವರ್ಗದ ಹಿತಚಿಂತನೆಯನ್ನು ಸುದೀರ್ಘವಾಗಿ ಮಾಡಿದ ಭಾಷಣಗಳಲ್ಲಿ ಸ್ವಂತ ಪ್ರತಿಭೆ ಸಾಹಸಗಳಿಂದ ಅವರು ತಮ್ಮ ಬಾಳಿನ ಮಹತ್ತರವಾದ ಗುರಿಯನ್ನು ಸಾಧಿಸಬೇಕೆಂದೂ, ಶಿಸ್ತು ವಿದ್ಯಾರ್ಥಿ ಪ್ರಪಂಚದ ಬಹುಮುಖ್ಯ ಗುಣವೆಂಬುದನ್ನೂ ಹೇಳಿ, ಗ್ರಾಮೀಣ ಪ್ರದೇಶದಿಂದ ಬಂದ ಬಡಮಕ್ಕಳು, ಮಾತೃಭಾಷೆಯ ಶಿಕ್ಷಣದಿಂದ ಆತ್ಮಾಭಿಮಾನಿಗಳಾಗಿ ಬೆಳೆಯಬೇಕೆಂಬ ಮಾರ್ಗದರ್ಶನವನ್ನೂ ಮಾಡಿದ್ದಾರೆ. ಡಾ. ಎಚ್. ನರಸಿಂಹಯ್ಯನವರು 'ಸರಳ ಜೀವನ ಉದಾತ್ತಚಿಂತನ' ಕ್ಕೆ ಪ್ರಸಿದ್ಧರಾದವರು. ವೈಜ್ಞಾನಿಕ ಮನೋಭಾವದಿಂದ ಮೂಢನಂಬಿಕೆ ಅಂಧಶ್ರದ್ಧೆಗಳನ್ನು ಹೊಡೆದೋಡಿಸಿ ಸಮಾಜ ಸುಧಾರಣೆ, ರಾಷ್ಟ್ರಸೇವೆಯಲ್ಲಿ, ತಮ್ಮ ಚೇತನವನ್ನು ತೊಡಗಿಸಿಕೊಂಡ ಡಾ. ನರಸಿಂಹಯ್ಯನಂಥವರ ಬಾಳು ನಮ್ಮ ವಿದ್ಯಾರ್ಥಿ ಪ್ರಪಂಚಕ್ಕೆ ಮಾರ್ಗದರ್ಶಿಯಾಗಿದೆ ಎಂದು ಹೇಳಿದ್ದಾರೆ. 'ವಿದ್ಯಾರ್ಥಿಗಳ ಆಶಿಸ್ತು,

ಅಶಾಂತಿಗಳಿಗೆ ಕಾರಣರಾರು?' ಎಂಬ ಪ್ರಶ್ನೆಯನ್ನು ಎತ್ತಿಕೊಂಡು ಮಾಡಿದ ಭಾಷಣದಲ್ಲಿ ನಮ್ಮ ಸುತ್ತಲಿನ ಪರಿಸರ, ಭ್ರಷ್ಟ ಸಮಾಜ, ರಾಜಕೀಯ ವ್ಯವಸ್ಥೆ, ಹದಗೆಡುತ್ತಿರುವ ಶೈಕ್ಷಣಿಕ ಜೀವನ ಇವೇ ಮೊದಲಾದ ಕಾರಣಗಳನ್ನು ಶೋಧಿಸುತ್ತ ವಿದ್ಯಾರ್ಥಿ ಲೋಕದಲ್ಲಿ 'ಪರ್ಸನಾಲಿಟಿ' ಅಥವಾ ಚಾರಿತ್ರ್ಯ ಶುದ್ಧಿ ಬೆಳಸುವ ಹೊಣೆ ಅಧ್ಯಾಪಕರ ಮತ್ತು ಸುತ್ತಲಿನ ಸಮಾಜದ ಮೇಲಿದೆ ಎಂಬ ವಿಚಾರವನ್ನು ಡಾ. ಎಸ್. ರಾಮೇಗೌಡರು ವ್ಯಕ್ತಪಡಿಸಿದ್ದಾರೆ.

ಹಾಗಿದ್ದರೆ 'ನಮಗೆ ಆಗತ್ಯವಾದ ಶಿಕ್ಷಣ ಪದ್ಧತಿ' ಯಾವುದು? ಎಂಬುದು ಮುಂದಿನ ಭಾಷಣದ ವಸ್ತುವಾಗಿದೆ. ಸ್ವಾತಂತ್ರ್ಯಾನಂತರದ ಭಾರತದಲ್ಲಿ ಶೈಕ್ಷಣಿಕ ಪ್ರಗತಿ ಆಗಿರುವುದು ದಿಟವಾದರೂ ಕಲಿತಂತ ವಿದ್ಯಾವಂತರಿಗೆ ಕೆಲಸ ಕೊಡುವ ವಾತಾವರಣ ಸೃಷ್ಟಿಯಾಗಲಿಲ್ಲ. ಇದರಿಂದ ವಿದ್ಯಾಕ್ಷೇತ್ರದಲ್ಲಿ ಹಿಂಸೆ, ಅಶಾಂತಿ, ತಳಮಳಕ್ಕೆ ಕಾರಣವಾಗಿದೆ. ರಾಜಕೀಯ ಶಕ್ತಿ ಕೈವಾಡಗಳಿಂದ ನಮ್ಮ ಶಿಕ್ಷಣ ಪ್ರಪಂಚ ಕಲುಷಿತಗೊಳ್ಳದಂತೆ ನೋಡಿಕೊಳ್ಳುವ ಜರೂರಿನತ್ತ ಡಾ. ಎಸ್. ರಾಮೇಗೌಡರು ಪುನಃ ಪುನಃ ಹೇಳುತ್ತ ಬಂದಿದ್ದಾರೆ. ಭಾರತೀಯ ವಿದ್ಯಾರ್ಥಿಗಳ ಪ್ರತಿಭೆ, ಮೇಧಾಶಕ್ತಿ ವಿಶ್ವದ ಯಾವ ದೇಶದ ವಿದ್ಯಾರ್ಥಿಗಿಂತ ಕಡಿಮೆಯಿಲ್ಲವಾದರೂ ಅವರಿಗೆ ಸಿಗುತ್ತಿರುವ ಸೀಮಿತ ಗ್ರಂಥಸ್ಥಜ್ಞಾನ ಹಾಗೂ ಸಾಧನ ಸೌಲಭ್ಯಗಳ ಕೊರತೆ 'ಶೈಕ್ಷಣಿಕ ಪ್ರಗತಿ'ಗೆ ಪೋಷಕವಾಗಿಲ್ಲ. ಆದ್ದರಿಂದ ನಮ್ಮ ಸಾಮಾಜಿಕ, ಆರ್ಥಿಕ, ರಾಜಕೀಯ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಶೈಕ್ಷಣಿಕ ಪ್ರಗತಿಯ ಚಿಂತನೆ ನಡೆಸುವದು ಅವಶ್ಯಕವೆಂಬುದನ್ನು ವಿದಿತಪಡಿಸಿದ್ದಾರೆ. ಅಜ್ಞಾನ, ಅವೈಜ್ಞಾನಿಕತೆಯ ವಿರುದ್ಧ ಸಮರಸಾರಿ 'ಆತ್ಮಾಭಿಮಾನ ಬೆಳೆಸಿಕೊಳ್ಳಿ' ಎಂದು ವಿದ್ಯಾರ್ಥಿಗಳ ಆತ್ಮಶ್ರೀಯ ಜಾಗೃತಿಗೆ ಡಾ. ಎಸ್. ರಾಮೇಗೌಡರು ಕರೆ ಕೊಟ್ಟಿದ್ದಾರೆ.

ಅಂಬೇಡಕರ ಭವನದ ಶಂಕುಸ್ಥಾಪನೆಯ 'ಆದರ್ಶಭವನದ ಕನಸು' ಉಪನ್ಯಾಸದಲ್ಲಿ ಅದು ರಾಮಕೃಷ್ಣ ಪರಮಹಂಸರವರ ಹೆಸರಿನಲ್ಲಿ ನಿರ್ಮಾಣವಾಗಿರುವ ಕಟ್ಟಡಗಳಂತೆ ಶಾಂತಿಧಾಮವಾಗಿ ನೆಮ್ಮದಿ ನೀಡುವಂತಾಗಬೇಕೆಂದು ಉದಾತ್ತವಿಚಾರ ವ್ಯಕ್ತ ಪಡಿಸಿದ್ದಾರೆ. 'ಕನ್ನಡ ಸಾಹಿತ್ಯಕ್ಕೆ ಮುಸ್ಲಿಮರ ಕೊಡುಗೆ' ಭಾಷಣದಲ್ಲಿ ಡಾ. ಎಸ್. ರಾಮೇಗೌಡರು ಈ ದೇಶದ ಸಮಗ್ರತೆ, ಏಕತೆಯ ಸಂದರ್ಭದಲ್ಲಿ ಕವಿಗಳಾದವರು ಸಣ್ಣ ಮಕ್ಕಳಿಗೆ ತಾಯಿಯಾದವಳು ದಾರಿಯನ್ನು ತೋರುವಂತೆ ಜನಸಾಮಾನ್ಯರಿಗೆ ಮಾರ್ಗದರ್ಶನ ಮಾಡಬೇಕು. ಮಾನವೀಯ ಮೌಲ್ಯಗಳಿಗೆ ಸ್ಪಂದಿಸುವ ಕಾವ್ಯ ಮೂಡಿ ಬರಬೇಕು ಎಂದು ಕವಿಗಳಿಗೆ ಕರೆ ಕೊಟ್ಟಿದ್ದಾರೆ. ಕನ್ನಡ ಭಾಷೆಯ ಉತ್ಕೃಷ್ಟತೆಯನ್ನು ಗಮನಿಸಿದ ವಿದ್ಯಾರ್ಥಿಗಳು ಕನ್ನಡ ಭಾಷೆಯ ಶ್ರೇಷ್ಠತೆಯ ಬಗೆಗೆ ಅಭಿಮಾನ, ಪ್ರೀತಿಯನ್ನು ಪಡೆಯುವಂತೆ ಮಾಡುವದು ಕನ್ನಡ ಅಧ್ಯಾಪಕರ ಗುರಿಯಾಗಿರಬೇಕು ಎಂದು 'ಕನ್ನಡ ಪುನರ್ನವೀಕರಣ' ಭಾಷಣದಲ್ಲಿ ಹೇಳಿದ್ದಾರೆ.

ಕರ್ನಾಟಕ ವಿಶ್ವವಿದ್ಯಾಲಯದ ರೂವಾರಿಗಳಾಗಿ ಖ್ಯಾತಿ ಪಡೆದ ಡಾ. ಡಿ. ಸಿ. ಪಾವಟೆಯವರ ನೆನಪು 'ದಿವ್ಯ ಸ್ಮರಣೆ'ಯಾಗಿ, ಸ್ಫೂರ್ತಿದಾಯಕವಾಗಿರುವುದನ್ನು ಅವರ ಜನ್ಮದಿನಾಚರಣೆಯ ಭಾಷಣದಲ್ಲಿ ನೆನೆದಿದ್ದಾರೆ. ಕನ್ನಡ ಸಾಹಿತ್ಯ ಪ್ರಪಂಚದಲ್ಲಿ

ಪ್ರಬಂಧಕಾರ, ಸಂಶೋಧಕ ಸಾಹಿತಿಗಳಾಗಿ 'ಆದರ್ಶ ಪ್ರಾಧ್ಯಾಪಕ' ರಾದ ಡಾ. ರಾ. ಯ ಧಾರವಾಡಕರ ಅವರ ಸಾಹಿತ್ಯ ಹಾಗೂ ವ್ಯಕ್ತಿತ್ವದ ವಿಭಿನ್ನ ಮುಖಗಳನ್ನು ಅವರ ಸ್ಮರಣೆಯ ವಿಚಾರ ಸಂಕಿರಣ ಉದ್ಘಾಟನ ಭಾಷಣದಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಸ್ವಾತಂತ್ರ್ಯೋತ್ಸವ ಭಾಷಣದಲ್ಲಿ ದೇಶ ಛಿದ್ರವಾಗುವ ಭಯ ಆವರಿಸಿರುವ ಸಂದರ್ಭದಲ್ಲಿ ಜನ ತಮ್ಮ ಪೈಶಾಚಿಕ ಪ್ರವೃತ್ತಿಯನ್ನು ಕಿತ್ತೊಗೆದು ರಾಷ್ಟ್ರದ ಕಲ್ಯಾಣಕ್ಕಾಗಿ, ಭಾರತೀಯತೆಯ ಭಾವನೆಯ ಬೆಳವಣಿಗೆಗಾಗಿ ಚಿಂತಿಸಬೇಕೆಂದೂ ಡಾ. ಎಸ್. ರಾಮೇಗೌಡರು ಕರೆ ಕೊಟ್ಟಿದ್ದಾರೆ. 'ಉಲಿಯುವ ಅಲೆಗಳು' ಪುಸ್ತಕ ಬಿಡುಗಡೆ ಮಾಡುತ್ತ ಹೇಳಿದ ಈ ಕೆಳಗಿನ ಮಾತುಗಳು ಮನನೀಯವಾಗಿವೆ. "ನಮ್ಮ ಜೀವನವನ್ನು ನಾವು ಉಲ್ಲಾಸಮಯವಾಗಿ ಮಾಡಿಕೊಳ್ಳಬೇಕಾದರೆ, ನಮ್ಮ ಸುತ್ತಮುತ್ತಲಿರುವ ಜೀವನ ಹಸನಾಗಬೇಕಾದರೆ, ಮೊದಲು ನಮ್ಮ ಮನಸ್ಸನ್ನು ಪ್ರಸನ್ನವಾಗಿಟ್ಟುಕೊಳ್ಳಬೇಕು. ಈ ಪ್ರಸನ್ನತೆ, ಪ್ರಫುಲ್ಲತೆ ಬರಬೇಕಾದರೆ ನಾವು ನಿಷ್ಠಾಪೂರ್ವಕವಾದ ಜೀವನವನ್ನು ಬದುಕಬೇಕು. ಅದಕ್ಕಾಗಿ ಅರ್ಥಪೂರ್ಣ ಸಾಹಿತ್ಯವನ್ನು ಓದಬೇಕು." (ಪು. ೨೭೩) ಸಂಘರ್ಷಮಯ ವಾತಾವರಣದಲ್ಲಿ ಬದುಕನ್ನು ಸುಂದರವಾಗಿಡಲು ನಾವು ಸದಾ ಹಂಬಲಿಸಬೇಕು ಎಂಬ ಡಾ. ಎಸ್. ರಾಮೇಗೌಡರ ಹಾರ್ದಿಕಭಾವ ಅವರ ಹೃದಯದ ವಾಣಿಯಾಗಿದೆ. 'ಉನ್ನತ ಶಿಕ್ಷಣದ ಸ್ಥಿತಿಗತಿ'ಯ ಭಾಷಣದಲ್ಲಿ ನಮ್ಮ ಶಿಕ್ಷಣದ ದುರವಸ್ಥೆಯನ್ನು ಡಾ. ಎಸ್. ರಾಮೇಗೌಡರು ಮಾರ್ಮಿಕವಾಗಿ ವಿಶ್ಲೇಷಿಸುವ ಮಾತುಗಳಿವು. "ಹಿಂದೆ ಪಾರಮಾರ್ಥಿಕ ಉನ್ನತಿಗಾಗಿ, ಆತ್ಮೋನ್ನತಿಗಾಗಿ ವಿದ್ಯೆಯನ್ನು ಕಲಿಯುತ್ತಿದ್ದರು. ಆದರೆ ಇಂದು ನಾವು ಕೊಡುವ ವಿದ್ಯೆಯು ಇಹದಲ್ಲಿ ಸುಖವನ್ನು ಕೊಡುವುದಿಲ್ಲ. ಪರದಲ್ಲಿ ಮೋಕ್ಷವನ್ನು ಈಯುವುದಿಲ್ಲ. ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರೆಂಬ ಬಸವಣ್ಣನವರ ಮಾತಿಗೆ ವಿರುದ್ಧವಾಗಿಯೋ ಎಂಬಂತೆ ನಮ್ಮ ಈ ವಿದ್ಯಾರ್ಥಿಗಳು ಇಲ್ಲಿಯೂ ಸಲ್ಲುವದಿಲ್ಲ. ಅಲ್ಲಿಯೂ ಸಲ್ಲುವದಿಲ್ಲ. ಇಂಥ ಶಿಕ್ಷಣದಲ್ಲಿ ನಾವು ಸಿಕ್ಕಿ ಬಿದ್ದಿದ್ದೇವೆ." (ಪು. ೨೭೯) ಬೌದ್ಧಿಕ ಸಾಮರ್ಥ್ಯ ಹಾಗೂ ತೀಕ್ಷ್ಣತೆಗಳ ಬೆಳವಣಿಗೆಯಿಂದ ಶಿಕ್ಷಕರು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಪ್ರಾಮಾಣಿಕ ಸಂಕಲ್ಪ ಮಾಡುವದೇ ಶಿಕ್ಷಕ ದಿನಾಚರಣೆಯ ಉದ್ದೇಶವಾಗಿದೆಯೆಂಬುದನ್ನು ಅದರ ಕುರಿತಾದ ಭಾಷಣದಲ್ಲಿ ಹೇಳಿದ್ದಾರೆ. 'ಸಾಕ್ಷರತಾ ದಿನಾಚರಣೆ'ಯ ವಿಶೇಷತೆಗಳನ್ನು ಆಕಾಶವಾಣಿಯ ಶ್ರೋತೃಗಳಿಗಾಗಿ ಡಾ. ಎಸ್. ರಾಮೇಗೌಡರೊಂದಿಗೆ ನಡೆಸಿದ ಸಂದರ್ಶನವೂ ಇದರಲ್ಲಿ ಸೇರಿದೆ. ವಿದ್ಯಾರ್ಥಿಗಳು ವಸತಿ ಗೃಹದಲ್ಲಿ ಕೂಡಿ ಇರುವಾಗ ಜಾತಿ, ಮತ, ಪಂಥವಿಲ್ಲದೆ ಪರಸ್ಪರ ಭಾವೈಕ್ಯಕ್ಕೆ, 'ಸಹಜೀವನ' ನಡೆಸುವುದರ ಮೂಲಕ ಭಾವನೆಯ ಉದಾತ್ತತೆ ಪಡೆಯುವದೂ ಸಾಧ್ಯವೆಂಬ ವಿಚಾರವನ್ನು ವಿದ್ಯಾರ್ಥಿ ವಸತಿಗೃಹ ಚಟುವಟಿಕೆಗಳ ಪ್ರಾರಂಭೋತ್ಸವ ಭಾಷಣದಲ್ಲಿ ಡಾ. ಎಸ್. ರಾಮೇಗೌಡರು ·ವ್ಯಕ್ತಪಡಿಸಿದ್ದಾರೆ. ಕನ್ನಡಿಗರೊಬ್ಬರು ಐ.ಎ.ಎಸ್. ಪಾಸಾದಾಗ ಅದು 'ಅಪೂರ್ವವಾದ ಸಾಧನೆ' ಎಂದು ಅಭಿಮಾನದಿಂದ ಅಭಿನಂದಿಸುವ ಹೃದಯವಂತಿಕೆಯ ಭಾಷಣವೂ ಈ ಸಂಪುಟದಲ್ಲಿದೆ. 'ತೀರ್ಥವಂದನೆ' ಭಾಷಣದಲ್ಲಿ ಸರ್ವಧರ್ಮ ಸಮನ್ವಯ, ಅಹಿಂಸೆ, ಪರಮತ ಸಹಿಷ್ಣುತೆ, ಶಾಂತಿ, ಸಹಬಾಳುವೆ ಇದೇ ಮೊದಲಾದ ಅಸ್ತಿವಾರ ಹೊಂದಿರುವ ಭಾರತೀಯ ಧರ್ಮಗಳು ಜನಸೇವೆಯೇ ಜನಾರ್ಧನನ ಸೇವೆ ಎಂಬ

ಆದರ್ಶವನ್ನು ಪ್ರತಿಪಾದಿಸುತ್ತವೆ. ಆತ್ಮೋನ್ನತಿ, ಆಧ್ಯಾತ್ಮದ ಹಾದಿಯಲ್ಲಿ ಮಾನವ ಜೀವನ ಪರಮಶಾಂತಿಯನ್ನು ಪಡೆಯುವ ಮಾರ್ಗವನ್ನು ಬೋಧಿಸುವ ಧರ್ಮ ಮಾರ್ಗದಲ್ಲಿ ಆಧುನಿಕ ಬದುಕು ಸಾಗಬೇಕೆಂಬ ಉದಾತ್ತ ಭಾವನೆಯು ಪ್ರಕಟವಾಗಿರುವುದು ಮಹತ್ವ ಪೂರ್ಣವಾಗಿದೆ.

'ಮೆಲುಕು' ಸಂಪುಟದ ೪೪ನೆಯ ಭಾಷಣ ಯೋಗ ಕಲ್ಯಾಣ ಸಾಧನೆಯ ಮೂಲಕ ದೈಹಿಕ ಸ್ವಾಸ್ಥ್ಯ, ಮಾನಸಿಕ ಸ್ಥೈರ್ಯ ಪಡೆದುಕೊಂಡು ಜೀವನವನ್ನು ಬೆಳಗಿಸಿಕೊಳ್ಳುವ ಮಹತ್ವದ ಸಂದೇಶದ ಮೂಲಕ ನಮ್ಮನ್ನು ಉದ್ದೀಪನಗೊಳಿಸುವಂತಹದಾಗಿದೆ.

೩೪೨ ಪುಟಗಳ ವ್ಯಾಪ್ತಿಯ ಈ 'ಮೆಲುಕು' ಭಾಷಣ ಮಾಲೆ ಡಾ. ಎಸ್. ರಾಮೇಗೌಡರ ವಾಕ್ ಶ್ರೀಮಂತಿಕೆಯ ವರ್ಣವೈಭವವನ್ನು ಸಾಕಾರಗೊಳಿಸಿದೆ. ಧ್ಯೇಯವಾದಿಯಾಗಿ, ಆದರ್ಶಮೌಲ್ಯಗಳ ಚಿಂತಕರಾಗಿ, ಮಾನವ ಕಲ್ಯಾಣದ ಕನಸುಗಾರರಾಗಿ, ಶೈಕ್ಷಣಿಕ ವಿಚಾರಗಳ ಚಿಂತಕರಾಗಿ, ಎಲ್ಲಕ್ಕಿಂತ ಹೆಚ್ಚಾಗಿ ಆದರ್ಶಮಾನವತೆಯ ಹರಿಕಾರರಾಗಿ ಡಾ. ಎಸ್. ರಾಮೇಗೌಡರ ವ್ಯಕ್ತಿತ್ವ ಈ ಭಾಷಣಗಳಲ್ಲಿ ಪ್ರತಿಫಲಿತವಾಗಿದೆ. ಮೆಲುಕು ಸಂಪುಟದಲ್ಲಿ ಹರಿತವಾದ ವಾಕ್‌ಧಾರೆಯನ್ನು ಕಾಣುತ್ತೇವೆ. ಇಲ್ಲಿ ನಾವು ಭಾವೋತ್ತೇಜಕ ಶೈಲಿಯಲ್ಲಿ ಜನಮನಸ್ಸನ್ನು ಸೂರೆಗೊಳ್ಳುವ ಮಾತಿನ ವೈಭವವನ್ನು ಕಂಡು ಬೆರಗಾಗುತ್ತೇವೆ. 'ಮೆಲುಕು' ಮುಖ್ಯವಾಗಿ ಶೈಕ್ಷಣಿಕ ವಿಚಾರಧಾರೆ, ಆದರ್ಶ ಕುಲಪತಿಯ ಕನಸು, ಸಾಹಿತ್ಯ ಸಂಸ್ಕೃತಿಯ ಅನನ್ಯ ಅಭಿಮಾನ, ಭಾರತೀಯತೆಯ ಅಪ್ಪಟ ಪ್ರೀತಿ ಆದರಭಾವಗಳಿಂದ ಕೂಡಿದ ಭಾಷಣಗಳ ಹೊತ್ತಿಗೆಯಾಗಿದೆ.

ಹಲವು ಸಭೆ ಸಮಾರಂಭಗಳಲ್ಲಿ ಭಾಷಣ ಮಾಡುವಾಗ ಅನೇಕ ವಿಷಯಗಳು ಪುನರುಕ್ತಿ ಹೊಂದುವದು ಸಹಜವಾಗಿರುವುದು ಇದರಲ್ಲಿಯೂ ಕಂಡು ಬರುತ್ತದೆ. ಭಾಷಣ ಕೇಳುವ ಪ್ರೇಕ್ಷಕರು ಬೇರೆಯಾಗಿದ್ದರೂ ಓದುವ ಸಹೃದಯರು ಒಬ್ಬರೇ ಆಗಿರುವುದರಿಂದ ಈ ತೊಡಕನ್ನು ಬಿಡಿಸಿಕೊಳ್ಳಬೇಕಾಗುತ್ತದೆ. ಡಾ. ಎಸ್. ರಾಮೇಗೌಡರ ಭಾಷಣದಲ್ಲಿ ಮನನ ಯೋಗ್ಯವಾದ ಮಾತುಗಳ ಪರಿಮಳವಿದೆ. ಜೀವನ ಪ್ರೀತಿ, ಸಾಹಿತ್ಯನುಸಂಧಾನದ ಸುಗಂಧವಿದೆ. ಕವಿ ಸಾಹಿತಿಗಳ ವಿಭೂತಿ ಪುರುಷರ ವಾಣಿಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡು ಕೇಳುಗರ ಹೃದಯವನ್ನು ಸೂರೆಗೊಳ್ಳುವ ಜಾಣ್ಮೆ ಅವರಲ್ಲಿದೆ. ಡಾ. ಎಸ್. ರಾಮೇಗೌಡರು ಹುಟ್ಟು ಭಾಷಣಕಾರರು. ಆದ್ದರಿಂದಲೇ ಅವರ ವಿಚಾರ ಧಾರೆ ಅಸ್ಖಲಿತವಾದ ವಾಣಿಯಲ್ಲಿ ತುಂಬಿ ಹರಿಯುವ ನದಿಯ ಪ್ರವಾಹದಂತೆ ಹರಿಯುತ್ತದೆ. ಡಾ. ಎಸ್. ರಾಮೇಗೌಡರ ಪ್ರತಿಭೆಯ ಅನನ್ಯತೆ ಇರುವುದು ಅವರ ಮಾತುಗಾರಿಕೆಯಲ್ಲಿ. ಆದ್ದರಿಂದಲೇ 'ಮೆಲುಕು' ಸಂಪುಟದಲ್ಲಿ ಒಂದೆಡೆ ಹೀಗೆ ಹೇಳಿದ್ದಾರೆ. "ಪ್ರಪಂಚದಲ್ಲಿ ದೊಡ್ಡ ದೊಡ್ಡ ಜನರು, ಪ್ರಧಾನಿಗಳು, ಚರ್ಚಿಲ್, ಹಿಟ್ಲರ್, ಮುಸಲೋನಿ ಮೊದಲಾದವರು ಪ್ರಸಿದ್ಧ ಭಾಷಣಕಾರರಾಗಿದ್ದರು. ಮಾತು ಅವರ ಬಂಡವಾಳವಾಗಿದ್ದು. 'ಮಾತು ಬಲ್ಲವ ಮಾಣಿಕ ತಂದ, ಮಾತರಿಯದವ ಜಗಳ ತಂದ'. ಮಾತೇ ಮುತ್ತು, ಮಾತೆಂಬುದು ಜ್ಯೋತಿರ್ಲಿಂಗ, ಮಾತುಗಳಿದ್ದರೆ ಏನು ಬೇಕಾದುದನ್ನು ಮಾಡಬಹುದು.

ಮೋಡಿ ಹಾಕಬಹುದು. ನಮ್ಮ ಮುಂದೆ ಕತ್ತಿಯನ್ನು ಹಿಡಿದು ಕೊಲ್ಲುತ್ತೇನೆ ಎಂದು ಬಂದವನೂ ಕೂಡ ನಮ್ಮ ಮಾತುಗಳ ಪರಿಣಾಮವಾಗಿ ಶಾಂತನಾಗಿ ಹಿಂದಿರುಗುತ್ತಾನೆ. ಮಾತುಗಳಲ್ಲಿ ದೈವೀ ಶಕ್ತಿ ತುಂಬಿರುವುದು!! (ಪು. ೨೧೬). ಡಾ. ಎಸ್. ರಾಮೇಗೌಡರು ಮಾತಿನ ಮೂಲವಾದ ದೈವೀಶಕ್ತಿಯನ್ನು ಪಡೆದಿರುವ ಅದ್ಭುತ ವಾಗ್ಮಿಗಳು. ಲೋಕಕಲ್ಯಾಣವನ್ನು ಬಯಸುವ ಅವರ ಚೇತನ ಕನ್ನಡ ಸಂಸ್ಕೃತಿಯ ಉದಾತ್ತ ಮೌಲ್ಯಗಳನ್ನು ಪ್ರಸಾರ ಮಾಡುವಲ್ಲಿ ನಿರತವಾಗಿರುವುದನ್ನು ಅವರ ಭಾಷಣ ಮಾಲೆಯಲ್ಲಿ ನಾವು ಅನುಭವಿಸುತ್ತೇವೆ. ನಿತ್ಯ ಹರಿದ್ವರ್ಣಗಳಿಂದ ಕೂಡಿರುವ ವನರಾಶಿಯಂತೆ ಇರುವ ಅವರ ಭಾಷಣಗಳಿಗೆ ಕನ್ನಡ ಭಾಷಣ ಸಾಹಿತ್ಯದಲ್ಲಿ ಮಹತ್ವದ ಸ್ಥಾನವಿದೆ.

❊ ❊ ❊

ಮೆಚ್ಚಿಗೆ ಮಾತು

ಎಂ. ಕೆ. ಹೆಗಡೆ

ಕುಲಪತಿ ಡಾ. ರಾಮೇಗೌಡ ಮತ್ತು ನಮ್ಮ ಸಂಪರ್ಕ ಇತ್ತೀಚಿನದಾಗಿದ್ದರೂ ಅದು ಸ್ನೇಹಪೂರ್ಣವಾಗಿ ಮತ್ತು ಅತ್ಯಂತ ಗೌರವಾದರ ಪೂರ್ವಕವಾಗಿ ಬೆಳೆದಿರುವುದು ಹೆಮ್ಮೆಯ ಸಂಗತಿ. ಸರಳತೆ ಮತ್ತು ಸಜ್ಜನಿಕೆಯಂತೆ ಅವರ ಅಪ್ಪಟ ಪ್ರಾಮಾಣಿಕತೆ ನನಗೆ ತುಂಬ ಮೆಚ್ಚಿಗೆಯಾಗಿದೆ. ಬೆಳಗಾವಿ ಬಳಿಯ ಭೂತರಾಮನ ಹಟ್ಟಿಯಲ್ಲಿ ಕಟ್ಟಿರುವ ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕೋತ್ತರಕೇಂದ್ರ ಕಟ್ಟಡಗಳ ಸಮುಚ್ಛಯ ನಿರ್ಮಾಣ ಸಮಯದಲ್ಲಿ ಅವರ ಸಂಪರ್ಕ ಇನ್ನೂ ನಿಕಟವಾಗಿತ್ತು. ಅವರನ್ನೂ ಹತ್ತಿರದಿಂದ ತಿಳಿಯಲು ಒಂದು ಸದವಕಾಶ ಒದಗಿ ಬಂತು. ಅಷ್ಟೇ ಅಲ್ಲ ಅವರ ತಾಂತ್ರಿಕ ನೈಪುಣ್ಯ, ಸಮಯಕ್ಕೆ ಸರಿಯಾಗಿ ಕೆಲಸ ಪೂರೈಸುವತ್ತ ನೀಡುವ ಗಮನ, ಸಗುಣಾತ್ಮಕ ಕೆಲಸ ಕಾರ್ಯಗಳ ಬಗ್ಗೆ ಹೆಚ್ಚಿನ ಕಾಳಜಿ ಇರುವಂತೆ ಈ ಅಪೇಕ್ಷಿತ ದೊಡ್ಡ ಕೆಲಸಕ್ಕೆ, ಸಂಪನ್ಮೂಲಗಳನ್ನು ತಪ್ಪದೆ ಒದಗಿಸಿ ಹಿಡಿದ ಕೆಲಸಗಳನ್ನು ಪೂರೈಸಲು ಅನುಕೂಲ ಮಾಡಿಕೊಟ್ಟಿದ್ದನ್ನು ನೋಡಿದರೆ ಬೆರಗುಂಟಾಗುತ್ತದೆ. ಇಂದು ಅಲ್ಲಿರುವ ಕಟ್ಟಡ ಸಮುಚ್ಛಯ ಎಲ್ಲರ ಗಮನ ಸೆಳೆಯುವಂತಾಗಿದ್ದರೆ, ಅದಕ್ಕೆ ನಮ್ಮ ಕೆಲಸದ ತಾಂತ್ರಿಕ ಗುಣಮಟ್ಟ ಹೇಗೋ ಅಷ್ಟೇ ಪ್ರಧಾನವಾದದ್ದು ಅವರ ನಿರಂತರ ಪ್ರೋತ್ಸಾಹ ಮತ್ತು ಕಾರ್ಯದಕ್ಷತೆಯೆಂಬುದು ನನ್ನ ಅನಿಸಿಕೆ. ಡಾ. ಗೌಡರಿಗೆ ಎಲ್ಲ ರೀತಿಯಿಂದಲೂ ಒಳ್ಳೆಯದಾಗಲಿ.

❊ ❊ ❊

ಡಾ. ರಾಮೇಗೌಡರಂಥವರು ಇನ್ನೊಬ್ಬರಿಲ್ಲ

ಎಸ್. ಕೆ. ಪಾಟೀಲ

ನಾನು ಕುಲಪತಿ ಕಚೇರಿಯಲ್ಲಿ ಈಗ ಆರು ವರ್ಷಗಳಿಂದ ಮಾನ್ಯ ಕುಲಪತಿಗಳ ಆಪ್ತ ಸಹಾಯಕನಾಗಿ ಕೆಲಸ ಮಾಡುತ್ತಿದ್ದೇನೆ. ನಾನು ಸನ್ಮಾನ್ಯ ಡಾ. ರಾಮೇಗೌಡರಂಥ ಇನ್ನೊಬ್ಬರನ್ನು ಕಂಡಿಲ್ಲ. ಎಂಥ ಹೂವಿನಂಥ ಮನಸ್ಸು! ಅವರ ಅಂತಃಕರಣ ದೊಡ್ಡದು. ನನ್ನನ್ನೂ ನಮ್ಮ ಕಚೇರಿಯ ಉಳಿದ ಸಿಬ್ಬಂದಿಯವರನ್ನೂ ಮಕ್ಕಳಂತೆ ಕಂಡುಕೊಂಡರು. ಅವರು ಸಿಟ್ಟು ಬಂದಾಗ ಗುಡುಗಿದ್ದು ಇದೆ. ಆದರೆ ಮರುಕ್ಷಣವೇ ಕರಗಿ ನಮ್ಮ ಮೇಲೆ ಪ್ರೀತಿಯ ಮಳೆಯನ್ನೇ ಕರೆದಿದ್ದಾರೆ. 'ಏನ್ರಿ ಇದೆಲ್ಲ?' 'ಯಾಕ್ರಿ ಹೀಗೆ?' ಎಂದರೆ ಅವರಿಗೆ ಸಿಟ್ಟು ಬಂದಿದೆಯೆಂದು ತಿಳಿಯಬೇಕು. ಆದರೂ ಆ ಸಿಟ್ಟಿನಲ್ಲಿ ನಂಜು ಇಲ್ಲ. ನಮ್ಮನ್ನು ತಿದ್ದಿಕೊಂಡು ಹೋಗುತ್ತಿದ್ದರು. ನಾನಾಗಲೇ ನಮ್ಮ ಕಚೇರಿಯವರಾಗಲೀ ಅವರ ಬಗ್ಗೆ ಒಂದು ಕೆಟ್ಟ ಶಬ್ದವನ್ನು ಬಳಸುವ ಸಂದರ್ಭ ಬರಲಿಲ್ಲ. ಅವರಿಗೆ ನಮ್ಮಲ್ಲಿ ವಿಶ್ವಾಸ ಬಹಳ. ನಾವೂ ಹಾಗೆ ಅವರ ವಿಶ್ವಾಸಕ್ಕೆ ತಕ್ಕಂತೆ ನಡೆದುಕೊಂಡೆವು. ನಾನಂತೂ ಅವರ ಪ್ರೀತಿಯನ್ನು, ಅವರ ಉಪಕಾರವನ್ನು ಸದಾ ಸ್ಮರಿಸುತ್ತೇನೆ.

ಅವರ ಬಗ್ಗೆ ಎಷ್ಟು ಹೇಳಿದರೂ ಕಡಿಮೆಯೇ ಸರಿ. ಆದರೆ ನನಗೆ ಬರವಣಿಗೆಯ ರೂಢಿ ಇಲ್ಲ. ನಾನು ಹೇಳುವುದೆಂದರೆ ಅವರಂಥ ಇನ್ನೊಬ್ಬರಿಲ್ಲ. ಅವರಿಗೆ ದೇವರು ಸದಾ ಒಳ್ಳೆಯದನ್ನೇ ಮಾಡಲಿ ಎಂದು ಹಾರೈಸುತ್ತೇನೆ.

❋ ❋ ❋

A TRIBUTE

U.R Rao

I am very glad to hear that the Karnataka University, Dharwad is organising a Felicitation function in honour of its beloved Vice Chancellor Dr Rame Gowda, an outstanding engineer by profession, a great teacher by choice, an excellent writer and an able administrator who had a profound influence on the development of Karnataka University. Dr Rame Gowda is an excellent communicator not only in English but also in Kannada.

Dr Rame Gowda belongs to the rare species of independent thinkers, not afraid of calling spade a spade. Yet he has somehow found the unique formula of conveying his frank opinions in a very constructive and pleasant manner, without compromising on the truth, however, unpleasant it is. While Karnataka University owes a great deal to Dr Gowda, I believe his impact on the university educational scene all over the state has been very significant.

I feel it a great privilege to join in the Felicitation function and offer my very best wishes for his continued involvement in the cause of higher education in the country.

* * *

DR. S. RAMEGOWDA - A CLOSER PERCEPTION

M. Mahadevappa

An astute administrator, a computer engineer and son of a sericulturist farmer, Dr. Ramegowda hails from a village called "Hondarabalu" in Kollegal Taluka which is not very far off from my village in adjoining taluka of Chamarajanagar in Mysore district.

I had an unique opportunity of following Dr. Ramegowda right from the High School days till the College days though the field of specialisation bifurcated us from 1957-60. While Dr. Ramegowda studied in UVCE - reputed Engineering College, at Bangalore I spent my college days at Hebbal Agri. College during the same period. During High School and College days no debate competition - either be it in Kannada or English - used to be without the participation of Ramegowda and because of the mastery over oratory he used to walk away with laurels in every competition.

Dr. Ramegowda had a distinction, early in his career of serving as Lecturer at the University of West Indies to which institute he was frequently called on special assignment during later years too.

When Dr. Ramegowda joined as Founder Professor and Head in P.E.S. College of Engineering, Mandya, again destiny brought us together as I got an opportunity to work as a Rice Scientist at VC Farm, Mandya. Dr. Ramegowda always used to

suggest to people around him to accept the challenges and help in building up action plan to face and win them. Later Dr. Ramegowda shifted himself to Bangalore to accept another assignment as Founder Principal of Bangalore Institute of Technology. It is at that time I also moved to Bangalore as Head of the Department of Seed Science and Technology at UAS, Bangalore. At Bangalore Dr. Ramegowda with his rich experience and high technical background strove hard to build up the institution. Later when he went to Pondichery as Founder Principal of Engineering College, though we were placed at distant places, we exchanged our experiences and thoughts on issues ranging from research to administration.

Later Dr. Ramegowda was appointed to the present position as Vice-Chancellor of Karnatak University, Dharwad during 1990 and again our meetings were more frequent at Bangalore at my residence or elsewhere. Dr. Ramegowda developed the Karnatak University Dharwad on sound technical footing and brought the University to the international standard as seen by some of the patents being accepted by USA. He has served as Chairman of many Commissions and Committees and has been instrumental in bringing about modern changes in education and training. When I also came to Dharwad as Vice-Chancellor of UAS during 1994, I thought we can meet more frequently, but it was not possible because of his multifarious activities while at Dharwad and also due to his commitments elsewhere in the country on several academic and Institute building activities.

All along from highschool days till the present days of development in the life of Dr. Ramegowda, I had an opportunity to have a closer look as we have almost grown simultaneously in our own fields of specialization. This has enabled me to say authoritatively some of the excellent qualities in him. Though he has risen to the new heights in his career, he has never forgotten his village, his people and love for rural community. It is this character that has enabled him to be most popular in the rural areas of Kollegal,all neighbouring and other taluks of Mysore, Mandya and other districts.

He addressed as Chief Guest the galaxy of Wheat Scientists of India at the Inaugural function of National Wheat Research Workshop and also at a similar occasion of All India Potato/Soyabean Team Research Workers meeting at University of Agricultural Sciences, Dharwad during the months of April and August 1995, respectively. He took the audience on both occasions to such a dizzy height in Agricultural Science that none believed him to be an Engineer by specialisation!

As an administrator, he is a great visionary and under his able leadership, wherever he has worked he has steered those institutions to new heights of accelerated development.

His magnanimity lies in freely extending helping hand with the wide contacts at various higher levels to build institutions not only headed by him but also others solely in the larger interest of social upliftment. He is endowed with great dynamism which has helped to come out successfully in any venture during the course of his career.

As a senior, he has always been a good counsel for me and has been a good friend, philosopher and a guide. He very freely mixes with children and common people. His exuberant participation in informal groups with lighter comments makes the situation more jovial and keeps him in a dominant position.

It is really a most timely gesture on the part of the citizens of Hubli-Dharwad twin city to honour and felicitate Dr. Ramegowda in a most befitting manner. I wish Dr. Ramegowda a long life and higher responsibilities in the national and international arena so that his rich experiences and high administrative capabilities are better utilised.

I am proud of being his intimate family friend from our college days and now I wish him and his family members all the success in his future endeavours.

* * *

'NAANU' DR. RAMEGOWDARA SHISHYA

PN Thriunarayana

I am a teacher. Writing about Dr. Ramegaoda is a rare opportunity for me to think about what it means to be a teacher and come to terms with a stripped-down self.

His lecture on 'Induction Motor' that I heard as an Engineering student in 1964 even now haunts me. I recall the atmosphere he created in less than three minutes: the buzz of expectation ("Ramegowdara class"), his entry, the energy; words honed to freeze the frame for the next fifty minutes; confidence, spontaneity, the immersion, and the total absence of mind-dulling jargon. In three minutes Dr. Ramegowda created a window of opportunity to take us to the heart of the subject.

As I begin to reconstruct the lecture itself my memory fails me. Two concepts comes to mind as I recall the impact of his lectures. Satyajit Ray's description of an authentic communicator: painstaking research, attention to detail and respect for the sensitivity and intelligence of the other person. And Vismaya in the students, leading to-"What an interesting subject. This is just the beginning. I need to study and understand hundred-fold more than what I know, maybe I should stop reading the examination guide and dig deep into the text itself". The beginning, the authentic middle and the total impact, leading to meta- learning. "To teach is to create a space in which obedience to truth is practiced"- his lectures are an elequent testimony of that statement.

All this still does not capture those magical moments of truth. I now recall Paul Valery's statement that " a blank paper by its very emptiness affirms that nothing is as beautiful as what does not exist". At this moment, my sister's grand-daughter Parinitha enters my study. I ask 'who is her best teacher'? She gives me a name. I probe 'why'? She laughs and says, 'I am his best student'. I now remember with gratitude that my teacher Dr. Ramegowda was not only a craftsman but also a Pygmalion inside the classroom and outside. He nurtured an enriching and everlasting relationship with all his students.

When I watched Dr. Ramegowda on Doordarshan, it occurred to me that he approached words with a Veena player's delicacy, a constant search for singular precision. His face registered a certain wariness: "Have I frozen the richness of reality? Maybe I have, maybe not". I wonder, is that the reason why the busy mind and the world is stilled when he lectures.

Whatever maybe the definition of excellence, we normally do not have any difficulty in recognizing it. Dr.Ramegowda's moments of truth in the classroom when he described with passion and great craft an Induction Motor, is one such model of excellence. His 'Ishtadevatha Murthy's at the Kempegowda Engineering College and the Regional Engineering College at Pondicherry (*Agevagge Koshavasthe Mannu*), once again brings excellence to my mind. In fact these achievements meet even Dr. Ramegowda's own standards of excellence. I even discovered excellence in the face of Dr. Ramegowda registering pure joy when he is describing what he is currently doing at Dharwad University and his vision of a stadium.

Visibility , right balance between empowerment and control (*'vakramum rujugolisi-volladuda nolme indolisi'*), a sense of excellence in vision and action, integrity, urgency in decision making, rootbinding in the community through celebrations of success, rich understanding of reality, attention to detail, constant freshness of ideas, networking, technical adeptness, a deep sense of commitment to Karnataka-I think these are some

of the contributing factors for his legendary reputation as an institution builder.

My mind is today preoccupied with Dr. Ramegowda. I switch off the television. I pick up Heinrich Zimmer's book on *Myths and Symbols* and I begin to read: "as the work progressed the demands of Indra became even more exacting and his unholding vision vaster . . . . . whenever Indra arrived to appraise the work he developed vision beyond vision of marvels remaining to be contrived . . . . ." I note that a great leader's vision and ambition forever outpaces resources. I have seen this in abundant measure in Dr. Ramegowda.

As a Kannadiga, there have been occasions where I have thought about Karnataka's future industrial competitiveness. In software, electronics, precision engineering, light engineering, etc. we have institutions, research laboratories, testing centres, craftsman and foreman training centres, institutions of higher learning, sophisticated customers, suppliers, capable of producing quality material and significant presence of multinationals. I was happy when the earlier Chief Minister Sri Veerappa Moily systematically studied practices in Gujarat and Maharastra and spent a number of hours with leading industry associations to craft Karnataka's Industrial Policy. The present Chief Minister Sri Deve Gowda is accelerating that process and driving good ideas into existence. I believe that Dr. Ramegowda is right now at the opening of what certainly would be the most productive period of his carrer. His legendary reputation, his integrity, his clear communication skills, energy and equally important, his understanding of information technology, electronics and engineering-must be used at the earliest opportunity for furthering the cause of Karnataka's industrial competitiveness. If this does not happen, I am sure, there will always be assignments of greater responsibility for Dr. Ramegowda at the all India level which will undoubtedly capture his imagination.

* * *

VICE-CHANCELLOR AS "FATHER OF THE UNIVERSITY"

Rajneesh Goel

Living together is beginning, keeping together is progress, working together is success.

It is my proud previlege and good, fortune to have worked together with prof. Ramegowda. A man of great calibre, endowed with qualities of head and heart, Prof. Ramegowda is a born leader. His organisational skills, computer like memory, methodical way of working, systematic approach to problem takling well diversified literary and intellectual accomplishments coupled with vision, initiative and device to achieve the operational goals with dedication and perseverance, put him on such a high pedestal that his stature as a leader is spontaneous. However, what makes prof. Ramegowda chick and inspire others is his anxiety to adopt a dynamic and creative social theory of public management based upon human motivation. Be it teaching/Non teaching/student community coming in contact with Prof Ramegowda automatically, becomes a willing performer, and under his leadership I have ever seen an excellent effort performance going unrecognised/unrewarded.

His crusading spirit for protecting the interests of weaker sections of society, at times against great odds posed by vested interests, his aversion to caste based and class based machinations and fair and impartial treatment rightly justify for him the epitaph that we so often refer to Vice Chancellor as "Father of the University".

* * *

DR. S. RAME GOWDA AS A MAN AND ADMINISTRATOR

Dr. T.M.Aminabhavi

I consider it as my great good fortune to have come in close contact with a rare personality like Dr. S.Rame Gowda. To me he appears as dynamism incarnate and a rare genius who has immense capacity to give all of himself to the work he undertakes. After many years in the history of Karnatak University we found in him, during his past six years in the office of the vice-chancellor, a motivated personality who understood the aspirations of talented and hardworking scientists and strove to get for them all the help he could muster to get from various sources.

I met him first in his office in 1990 when he had just taken charge as Vice-chancellor. I was immensely impressed by his cordial and receptive manner. It was only later that I had opportunites to come into close acquaintance with him and enjoy his affection and confidence. He could manifest much sympathy and personal involvement to the people close to him, inspite of his deeply absorbed official work. It is impossible for me to express in a few words all that he meant for young and aspiring scientists. As a noted researcher and scientist himself, he showed special soft corner for the scientific community. It was because of his many sided help and encouragement that I could undertake to conduct an international conference sponsored by Indo-french International Meet and Indian Membrane Society in February, 1995. This proved to be a great

success and put Karnatak University on the world map. This paved way to another successful conference on "Membrane Technology for Water Treatment, Recycling and Waste Management in Environmental Pollution Control" sponsored by the Government of Karnataka. This was possible for me again because of his active support and benevolent guidance. During these conferences one thing was clear to me that he could grasp the essentials of any scientific topic and speak fluently and convincingly suited to the occasion. He is also known for his oratorical magnificence in both Kannada and English literature. It may be recalled here that two volumes have been published under the title 'Meluku' which contain transcripts of his various talks delivered during the past six years. They make a very interesting and educative reading and provide a glimpse of the vast knowledge he has of various subjects.

His tenure in vice-chancellor's office has heralded many miraculous events. For the first time in the history of Karnatak University many professors received national and international awards. Amongst them was the most prestigious 'Shanti Swaroop Bhatnagar' award. For his valuable contribution to research, education and administration Dr.Ramegowda himself was awarded 'Rajyotsava award' by the Karnataka Government and the most prestigious 'Swamy Pranavananda' award by the UGC.

Growth in every direction has been the watch word under the able administration of Dr.S.Rame Gowda. Post Graduate Campus at Belgaum which was housed in a rented building got an attractive new campus of its own due to his relentless efforts. He is also responsible for establishing a new P.G.Campus at Bijapur and elevating the standard of the P.G.campus at Karwar. Our main campus saw significant improvement in administration. He took keen interest in resolving some long standing intractable problems of teaching and non-teaching staff. Several new departments were started. To name a few of them we may mention, the srarting of M.C.A. three year course which provides wide job opportunities, sericulture department, so on. Another significant contribution he has made is to establish liaison between science departments

and industries around Dharwad. While academic horizon widened considerably, sports activities also received an unprecedented boost as he succeded in getting sanction from the Karnataka Government for a large stadium on the campus. When it is fully completed it will be one of the most sophisticated stadium in the world.

Dr. Rame Gowda is a man of vast cultural background and was deeply attracted by the scientific community of the university. However, the basic thrust of his intellectual activity was always towards the upliftment of university progress in the field of science and technology. He had a special gift for selecting good workers from all departments and encourage them to his utmost capacity. His constant cheerfulness reflected his enviable ability to recall the good part of his life's experience while choosing to forget all unpleasantness.

When our beloved vice-chancellor leaves Karnatak University after his second term in the office, we all will miss him greatly, especially his ever smiling and encouraging figure. We pray God to give him many more befitting opportunities to serve our motherland with distinction, good health and prosperity.

* * *

AS I HAVE SEEN MY FATHER

Dhyana Shobha

My first memories are that of a small child of about 3yrs growing up in Mandya. My Dad was a source of confidence. I used to see him being the centre of focus in any discussion or meetings. People found him very comforting and would come to him for advice. They would pour out their sorrow to him. He did his best to help them out. These are the first pictures etched in the mind of a small child. These are no tell tales. Like every child's fantasy, I wanted to be like him.

My Dad is a very hardworking, pervasive man. He sets his priorities and goals; and then strives towards it. He always does his best and if things don't workout as expected, there would be no brooding whatsoever. He believes strongly in -No matter what - everything happens for good. It's hard to hold such a perception during difficult times; but he always did and does.

He is an old-fashioned man, always trying to cajole his children to look at matters the way he does. But, it seldom worked with his headstrong children. He is always open for discussion. All of us, put our cards on the table and come to a decision after long hours of discussion. It is very easy to express oneself to my Dad. He is a fun loving, easy going person; but he dosen't look it. Looks are deceptive. He is a very supportive, emotional father. He is a very knowledgeable person. He can spin yarns from any topic on the face of the Earth.

My father is a humble man. A believer in "You Reap What You Sow". Not to forget my mother. She is the pillar of support for the family. A very pretty, soft spoken, gentle person. She is always there ready to listen to us and to meet our needs. I have never seen my mother put a sorry face in front of us. Such is her personality. She's been a constant support to my father, during difficult times and during his fame. Today, her patience and gentleness has paid.

I am a proud daughter of those parents, who believe in simple living and high thinking. It might sound ostentatious or philosophical; but they believe in it and are the living examples of it.

* * *

THE VICE CHANCELLOR - AS I SAW HIM

S.B. Nargundkar

"He is a very humane person". A well-known literator and thinker of Kannada told me after having a brief talk with Dr. S. Rame Gowda, Vice Chancellor, Karnataka University, Dharwad.

From 1991 for a few years I had the rare opportunity and previlege of working as a Special Officer to the Respected Vice Chancellor,Dr. S. Rame Gowda. Earlier I had various opportunities of serving in various capacities a few eminent persons of proved achievements. All of them had vast experience of public life and couple of them were known for their learning and erudition in their respective fields.

Dr.S.Ramegowda is all this and more. In him I found a highly cultivated, cultured, sophisticated and as my literary friend has put it a "very humane person". As an official, by the very nature of the post, I had to be very close to Respected vice chancellor Dr.S.Ramegowda and his office. Within a week of joining the service I realised that the cultural and human values are parts of his personality moulded by the hoary cultural and human traditions India had left on even the remotest and most interior villages of the country. He comes from an agriculturist family of a small and obscure village on the border of Karnataka and Tamil Nadu [He speaks very fluent Tamil]. He still waxes nostalgic whenever the name of his village is

mentioned. This despite the fact that he stayed abroad in the Americas and is a widely travelled man, and that he has been exposed to the subtle nuances of modernism. He still has roots in the village of his childhood and, therefore, in the past of India.

I had occasions of seeing from very close quarters as a Chief Administrator of an old and reputed university like that of the Karnatak University as its Vice Chancellor and as an academician, as Chairman of the Senate and Academic Council meetings and as a negotiator with the representatives of teachers, non-teachers, students and other bodies. I have also seen him as a public speaker, as person deeply interested in literature and drama and as a visionary who has his own dreams of an ideal university. But, as Plato said ideals can never become actuals. Ideals are ideals, and actuals are actuals and the twins can never meet.

He is versatile and holds fast to his ground in all those fields. As an academic administrator, he has evolved a natural expertise in managing the decision making process. He is skillful in what decision to take and when and how to take it. His capacity to grasp a problem and catch the essence of it is remarkably quick and correct. He explains the problems better than the persons who have it and are unable to give it a precise expression. He is a pursuasive advocate of a cause he takes up because his arguments are logical and rational. He has the skill to make them appear to be so. He uses both Kannada and English languages colourfully and fluently both in their colloquial and classical forms. He has an abundant store of Kannada folk-proverbs that make his opponents feel amused and disarmed. Therefore, he very naturally monopolises all the talking in the Senate and Academic Council meetings. His fluency in English and Kannada colloqualism and classicism holds the members spell-bound. He is always uptodate with the latest informations and developments in other universities and with the other concerned affairs. On some occasions, I have seen him hold the floors of Senate and Academic meetings right

from 10 AM to 7PM and briskly move back to his Chamber in the mood and pride of a hero returning from a battle-field after vanquishing his opponents.

He reminds me of a character of a village headmen in one of the stories of Masti Venkatesh Iyyangar. It is "*UGRAPPANA YUGADI*". Critics view it as one of the great ones among Masti's stories. Here, Masti is at his height in his art of narration. The story is about a village and its chief, Ugrappa and one of the many Yugadi days that the village and chief have celebrated. Village headmanship was hereditary in the early decades of this century and even in princely state like Mysore - where the village in the story is located. Villages were far removed, administratively and otherwise, from the central, provincial and local governments and, therefore, the headman of the village was the government on the spot. The story reveals the charms and graces and deep sense of official and individual commitments and the great human cultural values nourished and nurtured by a glorious cultural heritage with its roots in the Vedas and Upanishads and Ramayan and Mahabharat. The story starts with early in the morning of Yugadi day and the whole village and Ugrappa's family composed of his old mother (Ajji), wife, daughter and sons get ready to celebrate one more Yugadi and, then a number of incidents each of them problematic start taking place. Ugrappa even without his morning bath and Puja of his family gods, goes round the village and goes on solving the problems one by one and comes back home late in the night where his family members are waiting for him to share their meals with him at least on Yugadi day. Ugrappa takes his food with them and being too tired to listen to certain problems raised by his mother, he spreads his bed and goes to a natural sleep of a person who had done his duty. Only an unblemished (*SUSAMSKRIT*) perception like that of Masti alone can visualise such a character in the set up of an Indian village. I am reminded of the story again and again when I think of our respected vice chancellor.

Dr. S. Ramegowda's stay abroad for a long number of years has acquianted him with the latest development in science and technology. He struggles hard to bring "Computer culture" on the campus of the Karnatak University. He has travelled far and wide but like a dove that flies long distances only to return to its abode, his mind again and again comes back to the cause of developing education in India.

I take this opportunity to pay my respects to him.

* * *

MY REMINISCENCES ABOUT THE OUTGOING VICE-CHANCELLOR

A. Sundara

A) Academic Appreciation.

1. The Department of Ancient Indian History & Epigraphy

It was really a very meagre financial support that each of the four teachers in the Dept. got an annual grant of Rs. 900 to 1000/- for his/her expensive village wise but valuable archaeological and epigraphical survey, from out of the Budget allocation of just Rs. 5,000/- since some years. In 1989 I as the Chairman of the Dept., in order to pursuade the authorities to increase the grant a little more, desired the Vice-Chancellor to visit the Dept., personally to have an idea about the important work that my colleagues were carrying out. He did visit, saw the well arranged explored materials, listened the teachers about their work and their future programmes for nearly two hours ! My colleagues and I were not only happy but also surprised indeed to see a strikingly substantial rise in the grant to Rs. 50,000/-.

B) Development in the neglect Discipline

2. The Department of Yoga Studies

By virtue of the Deanship, when I was the Chairman of the Department of Yoga studies that comparatively received

least attention over years, with the ungrudging co-operation and assistance of the teachers from the Departments of Philosophy, Sanskrit, psychology who were Guest-Lecturers in the Department, the syllabus was improved, making scope for P.G.Diploma in Yoga studies and M.A. besides certificate course on the pattern of the Department of Foreign languages, with emphasis more for practical training and a separate syllabus was prepared for introducing Yoga as one of the three equal subjects at the Under-Graduate level in the Karnatak University Arts College. Meanwhile the Department felt encouraged and began to carry out small programmes of training to the university people. And Dr.S.Rame Gowda was perhaps the only Vice-Chancellor who visited the Department frequently and participated in some of its programmes. And the new Syllabi and the subject were introduced respectively in the Department and the Karnatak College.

C) Resourceful Administration

3. The University Library

In administration, sometimes rules framed with good intentions considering all aspects of the matter, come in the way to do even justice to the deserving. There was such a situation sometime ago in the University Library. Many Library Assistants did not get due promotion over years, although deserving for the simple reason that they had not completed the Refresher/Orientation Course in the Library Science as per the U.G.C. norms for promotion. Neither, the University had such programmes in the subject in the Academy staff College nor the Library Assistants would get an opportunity to participate in such programmes in the Colleges of other Universities where the entrance for outside teachers/ Library Assistants etc., is extremely limited. It is in this way the Library Assistants were virtually denied promotion. But an able administrator would not find shelter on the rules for his helplessness to do the right to the deserving. Nor he would ignore the rules being highly sympathetic to do the right which is not correct in the larger interest of the University. The Vice-Chancellor succeeded at last in getting the Orientation

course in the subject to the University and the University Library officials did participate and got their due promotion.

D) Remarkable Contribution to Bijapur

22nd Sept. 1993 is a memorable day in the history of the University. A Post-graduate Centre long desired by the people of the district, was established in spite of some constraints in Bijapur with a budget of Rs. one lakh only, a Director and a Junior Assistant in a hall divided into three parts in the J.S.S College of Education by the courtesy of the local B.L.D.E. Association. Post-Graduate Diploma Courses in Art History and Tourism most appropriate to the region exceedingly rich in Art heritage attracting thousands of Tourists from all over the world, were started from 30th Sept. '93. To-day within less than three years the P.G. Centre has a fine library of its own having 1000 titles, teaching aids such as Slide and Over-Head Porjectors, colour Slides, Cassettes, now a T.V., V.C.P., one useful publication: Canons of Architecture and Jaina Monuments and another, Kitab-E.Narvas a rare work on Music by Ibrahim Adil Shah II of Bijapur Adil Shahi dynasty in the press; organised a National and two local seminars; is carrying out village-to-village survey of Archaeological and Historical Remains in Bijapur Taluk resulting already in the discovery of many Prehistoric and Protohistoric sites of importance which is in progress and is able to get Govt. land of 200 acres at a nominal rate of Rs. 100/- per acre. And very recently the Syndicate has approved the prospal of providing four Readers and Lectures and a good batch of Technical staff.

To start a Department or a centre or an Institute is no doubt great. But to develop it steadily on proper lines is far greater. The developing P.G.Centre indeed is a meaningful and remarkable contribution to the worthy people of the promising region, by the Vice-Chancellor within a short time in the latter part of the tenure of his office.

* * *

೨. ಮಾನ-ಸನ್ಮಾನ

|| ಓಂ ಶ್ರೀ ಮಂಜುನಾಥಾಯ ನಮಃ ||

ಅಸದೃಶ ಪ್ರತಿಭಾ ಸಂಪನ್ನರೂ, ಅಂತಾರಾಷ್ಟ್ರೀಯ ಖ್ಯಾತಿಯ ತಾಂತ್ರಿಕ ಪರಿಣತರೂ, ಸುವಿಖ್ಯಾತ ಶಿಕ್ಷಣ ತಜ್ಞರೂ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯವರೂ ಆದ

ಸನ್ಮಾನ್ಯ ಡಾ|| ಎಸ್. ರಾಮೇಗೌಡ, ಬಿ.ಇ., ಪಿಎಚ್.ಡಿ.

ಅವರ ದಿವ್ಯ ಸಮಕ್ಷದಲ್ಲಿ

ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯ ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ಸಮಾವೇಶಗೊಂಡಿರುವ ಸಾಹಿತ್ಯ ಸಮ್ಮೇಳನದ ಅರುವತ್ತೊಂದನೆಯ ಅಧಿವೇಶನದಲ್ಲಿ ಸ್ವಾಗತ ಮಂಡಳಿಯವರು ಗೌರವಪೂರ್ವಕವಾಗಿ ಸಮರ್ಪಿಸಿದ

ಸನ್ಮಾನ ಪತ್ರ

ಮಾನ್ಯ ಮಹಾಶಯರೆ,

ನಿರಂತರವೂ ಜ್ಞಾನ, ವಿಜ್ಞಾನ, ಪ್ರಯೋಗ, ಸಂಶೋಧನೆ, ಆಯೋಜನಾದಿ ರಾಷ್ಟ್ರ ನಿರ್ಮಾಣದ ವೈವಿಧ್ಯಪೂರ್ಣ ಕಾರ್ಯಕಲಾಪಗಳಲ್ಲಿ ಸದಾ ನಿಮಗ್ನರಾಗಿರುವ ಹಾಗೂ ಆಧುನಿಕ ಇಂಜಿನೀಯರಿಂಗ್ ಕ್ಷೇತ್ರದಲ್ಲಿ ತಲಸ್ಪರ್ಶಿಯಾದ ಪಾಂಡಿತ್ಯವನ್ನು ಸಂಪಾದಿಸಿ, ರಾಷ್ಟ್ರೀಯ ಅಂತಾರಾಷ್ಟ್ರೀಯ ಶಿಕ್ಷಣ ರಂಗದಲ್ಲಿ ಮಹೋನ್ನತ ಸಾಧನೆಗೈದಿರುವ ನೀವು ಶಿಕ್ಷಣ, ಸಂಸ್ಕೃತಿ, ಕಲೆ, ಸಾಹಿತ್ಯಗಳ ಪೋಷಣೆಯ ಪುಣ್ಯಕ್ಷೇತ್ರವಾದ ಶ್ರೀ ಧರ್ಮಸ್ಥಳಕ್ಕೆ ದಯಮಾಡಿಸಬೇಕೆಂಬ ನಮ್ಮ ವಿನಂತಿಯನ್ನು ಮನ್ನಿಸಿ, ಇಂದಿನ ಸಾಹಿತ್ಯ ಸಮ್ಮೇಳನದ ಅರುವತ್ತೊಂದನೆಯ ಅಧಿವೇಶನವನ್ನು ಉದ್ಘಾಟಿಸಲು ಸಮ್ಮತಿಸಿರುವುದಕ್ಕಾಗಿ ನಾವು ಅತ್ಯಂತ ಕೃತಜ್ಞರಾಗಿದ್ದೇವೆ.

ಅಪೂರ್ವ ಪ್ರತಿಭಾನ್ವಿತರೆ,

ಪ್ರಖರವಾದ ಬುದ್ಧಿಮತ್ತೆ, ದಣಿವರಿಯದ ಕ್ರಿಯಾಶೀಲತೆ ಹಾಗೂ ಸತತ ಅಧ್ಯಯನಶೀಲತೆಗೆ ಪ್ರಖ್ಯಾತರಾದ ನೀವು ಸನ್ ೧೯೩೯ನೇ ಜನವರಿ ೧೪ ರಂದು ಮೈಸೂರು ಜಿಲ್ಲೆಯ 'ಹೊಂಡರ ಬಾಳು' ಎಂಬಲ್ಲಿ ಖ್ಯಾತಗಮಕಿ ಶಿಕ್ಷಕರಾಗಿದ್ದ ಶ್ರೀ ಸಿದ್ಧೇಗೌಡ ಮತ್ತು ಶ್ರೀಮತಿ ಪುಟ್ಟಲಿಂಗಮ್ಮನವರ ಸುಪುತ್ರರಾಗಿ ಜನಿಸಿದಿರಿ. ಬಾಲ್ಯದಿಂದಲೇ ಕುವೆಂಪು ಸಾಹಿತ್ಯ ಮತ್ತು ಶರಣ ಸಾಹಿತ್ಯದ ಬಗ್ಗೆ ವಿಶೇಷ ಒಲವು ಹೊಂದಿದ್ದ ನೀವು ಕನ್ನಡ-ಇಂಗ್ಲಿಷ್‌ಗಳೆರಡರಲ್ಲೂ ಅಪೂರ್ವ ವಾಗ್ಮಿಗಳಾಗಿ ರೂಪುಗೊಂಡಿರಿ. ಕೊಳ್ಳೆಗಾಲ, ಮೈಸೂರು, ಬೆಂಗಳೂರು ನಗರಗಳಲ್ಲಿ ಶಿಕ್ಷಣ ಮುಗಿಸಿ ಇಲೆಕ್ಟ್ರಿಕಲ್-ಇಂಜಿನೀಯರಿಂಗ್ ವಿಜ್ಞಾನದಲ್ಲಿ ಬಿ.ಇ. ಪದವಿಯನ್ನು ಗಳಿಸಿದ ನೀವು ಟ್ರಿನಿಡಾಡ್‌ನ ವೆಸ್ಟ್‌ಇಂಡೀಸ್ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿರುವಾಗಲೇ ವಾಶಿಂಗ್‌ಟನ್ ವಿಶ್ವವಿದ್ಯಾಲಯದ

ಪ್ರಾಧ್ಯಾಪಕರ ಮಾರ್ಗದರ್ಶನದಲ್ಲಿ ಸಂಶೋಧನೆಗೈದು, ಡಾಕ್ಟರೇಟನ್ನು ಗಳಿಸಿದ ಅಸಮಾನ ಮೇಧಾವಿಗಳಾಗಿದ್ದೀರಿ.

ಪ್ರತಿಭಾನ್ವಿತ ಪ್ರಾಧ್ಯಾಪಕರೆ,

ಮೈಸೂರಿನ ನ್ಯಾಶನಲ್ ಇನ್ಸ್‌ಟಿಟ್ಯೂಟ್ ಆಫ್ ಇಂಜಿನೀಯರಿಂಗ್ ಸಂಸ್ಥೆಯಲ್ಲಿ ಉಪನ್ಯಾಸಕರಾಗಿ ಶಿಕ್ಷಣ ರಂಗಕ್ಕೆ ಹೆಜ್ಜೆಯಿರಿಸಿದ ನೀವು ಮತ್ತೆ ಹಿಂದಿರುಗಿ ನೋಡಲಿಲ್ಲ. ಮಂಡ್ಯ, ಟ್ರಿನಿಡಾಡ್, ಬೆಂಗಳೂರು-ಮೊದಲಾದೆಡೆಗಳ ಸಂಸ್ಥೆಗಳಲ್ಲಿ ಸಹಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸಂಪಾದಿಸಿದ ಅಗಾಧ ಅನುಭವ ಸಂಪತ್ತಿನ ಫಲವಾಗಿ ಕೇಂದ್ರ ಸರ್ಕಾರವು ಪಾಂಡಿಚೇರಿಯಲ್ಲಿ ಆರಂಭಿಸಿದ ನೂತನ ಇಂಜಿನೀಯರಿಂಗ್ ಕಾಲೇಜಿನ ಸ್ಥಾಪಕ ಪ್ರಾಂಶುಪಾಲರಾಗುವ ಭಾಗ್ಯವು ನಿಮ್ಮನ್ನು ಅರಸಿಕೊಂಡು ಬಂದುದು ನಿಮ್ಮ ಮೇರು ಸದೃಶ ಪ್ರತಿಭೆಗೆ ಸಂದ ಗೌರವವೇ ಆಗಿದೆಯೆಂಬುದರಲ್ಲಿ ಸಂದೇಹವಿಲ್ಲ.

ಅಸಮಾನ ತಾಂತ್ರಿಕ ಪರಿಣತರೆ,

ಮೈಸೂರು, ಮಂಡ್ಯ, ಬೆಂಗಳೂರುಗಳ ಇಂಜಿನೀಯರಿಂಗ್ ಕಾಲೇಜುಗಳಲ್ಲಿ ಪ್ರಯೋಗ ಶಾಲೆಗಳನ್ನು ರೂಪಿಸಿ, ಕಟ್ಟಿ ಬೆಳೆಸಿದ ನೀವು ಪಾಂಡಿಚೇರಿಯಲ್ಲಿ ರೂ. ೧೫ ಕೋಟಿ ವೆಚ್ಚದಲ್ಲಿ ಇಂಜಿನೀಯರಿಂಗ್ ಕಾಲೇಜಿನ ಆದರ್ಶ ಕ್ಯಾಂಪಸ್ಸನ್ನು ರೂಪಿಸಿ, ಅಪೂರ್ವಪರಿಣತಿಯನ್ನು ಮೆರೆದು ಸರ್ವರ ಗೌರವಕ್ಕೆ ಪಾತ್ರರಾದುದು ನಮಗೆಲ್ಲ ತಿಳಿದ ವಿಚಾರವಾಗಿದೆ. ಕರ್ನಾಟಕ ಸರ್ಕಾರ, ಮದ್ರಾಸು ವಿಶ್ವವಿದ್ಯಾಲಯ, ಗೋವಾ ಸರ್ಕಾರ, ವಿಶ್ವವಿದ್ಯಾಲಯ ಅನುದಾನ ಆಯೋಗ, ನವದೆಹಲಿ, ಹೈದರಾಬಾದ್-ಮೊದಲಾದೆಡೆಗಳ ಹಲವಾರು ಸಂಘಟನೆಗಳಿಗೆ ಶಿಕ್ಷಣ, ತಾಂತ್ರಿಕ ಶಿಕ್ಷಣ, ವೃತ್ತಿಪರ ಶಿಕ್ಷಣ, ತರಬೇತಿ, ತಾಂತ್ರಿಕ ಪರಿಣತಿಯಂತಹ ಅನೇಕ ಮುಖ್ಯ ವಿಷಯಗಳ ಬಗ್ಗೆ ರಚಿತವಾದ ಸಮಿತಿಗಳಲ್ಲಿ ಅಧ್ಯಕ್ಷರೋ, ಸದಸ್ಯರೋ ಆಗಿದ್ದು ನೀಡಿದ ಸಲಹೆಗಳು ಸಮಾಜದ ತಾಂತ್ರಿಕ ಉನ್ನತಿಯ ದಿಶೆಯಲ್ಲಿ ಅತ್ಯಂತ ಫಲಪ್ರದವೂ, ಬಹೂಪಯೋಗಿಯೂ ಆಗಿವೆ-ಎಂಬುದನ್ನು ಎಲ್ಲರೂ ಮನಗಂಡಿದ್ದಾರೆ.

ಸುವಿಖ್ಯಾತ ಶಿಕ್ಷಣ ತಜ್ಞರೆ,

ದೇಶ-ವಿದೇಶಗಳಲ್ಲಿ ವ್ಯಾಪಕವಾಗಿ ಪ್ರವಾಸಗೊಂಡಿರುವ ನೀವು ಲಂಡನ್, ಸರ್ರೇ, ವೆಸ್ಟ್ ಇಂಡೀಸ್, ನ್ಯೂಯಾರ್ಕ್, ಅಮೇರಿಕಾ - ಮೊದಲಾದ ವಿದೇಶದ ಹಾಗೂ ಸ್ವದೇಶದ ಕೆಲ ಸಂಸ್ಥೆಗಳು, ವಿಶ್ವವಿದ್ಯಾಲಯಗಳು. ತಾಂತ್ರಿಕ-ಶಿಕ್ಷಣ ಸಂಸ್ಥೆಗಳಲ್ಲಿ ಪರೀಕ್ಷಕರಾಗಿ, ಸಂದರ್ಶಕ ಪ್ರಾಧ್ಯಾಪಕರಾಗಿ, ಗಣ್ಯ ಸದಸ್ಯರಾಗಿ ಸೇವೆ ಸಲ್ಲಿಸಿರುವ ನಿಮ್ಮ ಹಿರಿಮೆ-ಗರಿಮೆಗಳನ್ನು ಗುರುತಿಸಿ, ಕರ್ನಾಟಕ ಸರ್ಕಾರವು 'ರಾಜ್ಯೋತ್ಸವಪ್ರಶಸ್ತಿ'ಯನ್ನೂ, ಬಿಜಾಪುರದ ಇಳಕಲ್‌ಮಠ ಸ್ವಾಮೀಜಿಯವರು 'ವಿದ್ಯಾ ವಾರಿಧಿ'ಯೆಂಬ ಬಿರುದನ್ನೂ ನೀಡಿ ಗೌರವಿಸಿದರು. ದೇಶ ವಿದೇಶಗಳ ತಾಂತ್ರಿಕ ಪತ್ರಿಕೆಗಳಲ್ಲಿ ೨೧ ಸಂಶೋಧನ

ಪ್ರಬಂಧಗಳನ್ನೂ, ೬ ವೈಜ್ಞಾನಿಕ ಗ್ರಂಥಗಳನ್ನೂ ಪ್ರಕಟಿಸಿ ಚರಮೋತ್ಕೃಷ್ಟ ಸಾಧನೆಗೈದಿರುವ ನೀವು ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯ ಸ್ಥಾನವನ್ನು ಅಲಂಕರಿಸಿರುವುದು ಅತ್ಯಂತ ಅಭಿಮಾನದ ವಿಚಾರವಾಗಿದೆ.

ಮಾನವತಾ ಪ್ರೇಮಿಗಳೆ,

೧೯೯೩ನೇ ಜುಲೈಯಲ್ಲಿ ದ್ವಿತೀಯ ಸರದಿಗೆ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯಾಗಿ ನೇಮಕ ಹೊಂದಿದ ನಿಮ್ಮ ಅಗಾಧವಾದ ಅನುಭವ ಸಂಪತ್ತು, ಪ್ರಚಂಡವಾದ ಪಾಂಡಿತ್ಯದ ಫಲವೆಲ್ಲವನ್ನು ನಾಡಿನ ಕಲ್ಯಾಣ ಕಾರ್ಯಗಳಲ್ಲಿ ಸಮರ್ಪಣ ಭಾವದಿಂದ ವಿನಿಯೋಗಿಸುತ್ತಿರುವ ನಿಮಗೂ ನಿಮ್ಮ ಕುಟುಂಬದವರಿಗೂ ಭಗವಾನ್ ಶ್ರೀ ಮಂಜುನಾಥ ಸ್ವಾಮಿಯೂ, ಭಗವಾನ್ ಶ್ರೀ ಚಂದ್ರನಾಥ ಸ್ವಾಮಿಯೂ, ಶ್ರೀ ಕ್ಷೇತ್ರದ ಧರ್ಮದೇವತೆಗಳೂ ಇತ್ಯೋಪತಿಶಯವಾದ ಸನ್ಮಂಗಳವನ್ನಿತ್ತು, ನಿಮ್ಮ ಶಿಕ್ಷಣ ರಂಗದ ಕಾರ್ಯಗಳು ನಿರಾತಂಕವಾಗಿ ಬಹುಕಾಲ ಮುಂದುವರಿಯುವಂತೆ ಆಯುರಾರೋಗ್ಯಾದಿ ಸುಖ-ಸಂಪತ್ತುಗಳನ್ನು ಅನುಗ್ರಹಿಸಲೆಂದು ಅನನ್ಯ ಭಕ್ತಿ ಭಾವದಿಂದ ಹಾರೈಸಿ, ನಿಮ್ಮ ಅಮೃತವಾಣಿಯಿಂದ ಈ ಅಧಿವೇಶನವನ್ನು ಉದ್ಘಾಟಿಸಬೇಕಾಗಿ ವಿನಂತಿಸುತ್ತೇವೆ.

ಶ್ರೀ ಕ್ಷೇತ್ರ ಧರ್ಮಸ್ಥಳ - ೫೭೪೨೧೬
ದಿನಾಂಕ ೧೨ನೇ ದಶಂಬರ ೧೯೯೩

ಇತಿ ತಮ್ಮ ವಿಶ್ವಾಸಿಗಳಾದ
ಸಾಹಿತ್ಯ ಸಮ್ಮೇಳನದ ಅರುವತ್ತೊಂದನೆಯ
ಅಧಿವೇಶನದ ಸ್ವಾಗತ ಮಂಡಳಿಯ ಪರವಾಗಿ

ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು
ಅಧ್ಯಕ್ಷರು.

ಶ್ರೀ ಗುರು ಬಸವ ಲಿಂಗಾಯ ನಮಃ

ಚಿತ್ತರಗಿ ಶಿವಾನುಭವ ಚರವರ್ಯರೂ, ಮಹಾಂತ ಜೋಳಿಗೆಯ ಶಿವಶಿಲ್ಪಿಗಳೂ ಆದ
ಪೂಜ್ಯ ಶ್ರೀ ನಿ.ಪ್ರ.ಮಹಾಂತ ಸ್ವಾಮಿಗಳವರ
ಅಮೃತ ಹಸ್ತದಿಂದ
ಖ್ಯಾತ ಶಿಕ್ಷಣ ತಜ್ಞರೂ, ತಾಂತ್ರಿಕ ಶಿಕ್ಷಣ ಕ್ಷೇತ್ರದ ವಿದ್ವಾಂಸರೂ ಆದ

ಸನ್ಮಾನ್ಯ ಡಾ. ಎಸ್. ರಾಮೇಗೌಡ

ಮಾನ್ಯ ಕುಲಪತಿಗಳು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ ಅವರಿಗೆ ಇಲಕಲ್
ಚಿತ್ತರಗಿ ಸಂಸ್ಥಾನ ಮಠದಲ್ಲಿ ಸತ್ಕರಿಸಿ, ಅನುಗ್ರಹಿಸಿದ

ಸನ್ಮಾನ ಪ್ರಶಸ್ತಿ ಪತ್ರ

ಸನ್ಮಾನ್ಯ ಡಾ. ಎಸ್. ರಾಮೇಗೌಡರೇ,

ಸಕಲ ಜೀವರಾಶಿಗೆ ಲೇಸ ಬಯಸುವ ಮಹಾ ಮಣಿಹ ಹೊತ್ತು ಮೈದಾಳಿದ ಶ್ರೀ ಚಿತ್ತರಗಿ ಸಂಸ್ಥಾನಪೀಠವು ಧರ್ಮ, ಸಾಹಿತ್ಯ, ಸಾಂಸ್ಕೃತಿಗಳ ವಿಕಾಸದಲ್ಲಿ ಮಹತ್ತರ ಪಾತ್ರ ವಹಿಸುತ್ತ ಬಂದಿದೆ. ಶರಣರು ಸಾರಿದ ಚಿರಂತನ ಮೌಲ್ಯಗಳ ಪುನರುಜ್ಜೀವನದ ಪ್ರಮುಖ ಕೇಂದ್ರವಾಗಿ ಪರಿಣಮಿಸಿದೆ. ವಿನೂತನವಾದ "ಮಹಾಂತ ಜೋಳಿಗೆ"ಯ ಸಂಚಾರದಿಂದ ಅಪೂರ್ವ ನೈತಿಕ ಕ್ರಾಂತಿ ಗೈದಿದೆ. ಅನೇಕ ಸಾಹಿತಿಗಳನ್ನು, ಸಂಗೀತಗಾರರನ್ನು, ವಿದ್ವಾಂಸರನ್ನು ಕಲಾವಿದರನ್ನು, ಕಾಯಕ ಯೋಗಿಗಳನ್ನು ಸತ್ಕರಿಸಿ ತನ್ನ ಅನುಪಮ ಔದಾರ್ಯವನ್ನು ಮೆರೆದಿದೆ. ಅವಿಚ್ಛಿನ್ನವಾಗಿ ನಡೆದು ಬಂದ ಈ ಸತ್ಪರಂಪರೆಯಲ್ಲಿ ಶಿಕ್ಷಣ ತಜ್ಞರೂ, ಮಹಾ ಮೇಧಾವಿಗಳೂ, ದಕ್ಷ ಆಡಳಿತಗಾರರೂ ವಿದ್ಯಾ-ವಿನಯ ಸಂಪನ್ನರೂ ಆಗಿ ಉಚ್ಚ ಶಿಕ್ಷಣ ಕ್ಷೇತ್ರದ ಉನ್ನತ ಸ್ಥಾನವನ್ನು ಅಲಂಕರಿಸಿ ಚಿರಸ್ಮರಣೀಯ ಸೇವೆ ಸಲ್ಲಿಸುತ್ತಿರುವ ತಮ್ಮನ್ನು ಇಲಕಲ್ಲಿನ ಚಿತ್ತರಗಿ ಸಂಸ್ಥಾನಪೀಠದ ಅಪಾರ ಭಕ್ತರ ಪರವಾಗಿ ಗೌರವಿಸಿ ಸತ್ಕರಿಸಲು ಅಭಿಮಾನವೂ, ಹರ್ಷವೂ ಎನಿಸುತ್ತದೆ.

ಪುಣ್ಯಭೂಮಿ ಸಂಜಾತರೇ,

ಕಾವೇರಿಯ ಪವಿತ್ರಜಲದಿಂದ ಪಾವನಗೊಂಡ ಪುಣ್ಯ ಭೂಮಿಯಾದ, ನಾಡಿನ ಸಾಂಸ್ಕೃತಿಕ ಪರಂಪರೆಯ ಪ್ರಗತಿಯ ಕೇಂದ್ರವಾದ ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಹೊಂಡರಬಾಳು ಗ್ರಾಮದ ಸುಸಂಸ್ಕೃತ ಮನೆತನದಲ್ಲಿ ಶರಣ ದಂಪತಿಗಳ ಮಗುವಾಗಿ ೧೯೩೩ರಲ್ಲಿ ತಾವು ಜನಿಸಿದಿರಿ. ಆರಂಭದಿಂದಲೂ ಪ್ರತಿಭಾವಂತ ವಿದ್ಯಾರ್ಥಿಗಳಾದ ತಾವು ಕೊಳ್ಳೇಗಾಲದಲ್ಲಿ ಮಾಧ್ಯಮಿಕ ಶಿಕ್ಷಣ ಪೂರೈಸಿ, ಬೆಂಗಳೂರು ವಿಶ್ವವಿದ್ಯಾಲಯದ ಇಂಜನಿಯರಿಂಗ್ ಕಾಲೇಜಿನಲ್ಲಿ ಅಧ್ಯಯನ ನಡೆಸಿ ಬಿ. ಇ. ಪದವೀಧರರಾದಿರಿ. ವಾಷಿಂಗ್‌ಟನ್ ಸ್ಟೇಟಿನ ಖ್ಯಾತ ಪಂಡಿತರಾದ ಪ್ರೊ. ಜಾಬಿಲ ಅವರ

ನೇತೃತ್ವ ಹಾಗೂ ಮಾರ್ಗದರ್ಶನಗಳಲ್ಲಿ ಆಳವಾದ ಅಧ್ಯಯನ ನಡೆಸಿ ತಾಂತ್ರಿಕ ಜ್ಞಾನ ಕ್ಷೇತ್ರದಲ್ಲಿ ತಾವು ಪಿ.ಎಚ್‌ಡಿ. ಪದವಿ ಸಂಪಾದಿಸಿದುದು ತಮ್ಮ ಕುಶಾಗ್ರಮತಿಗೆ ನಿದರ್ಶನವಾಗಿದೆ. ಇದರಿಂದಾಗಿ ಈ ಕ್ಷೇತ್ರದಲ್ಲಿ ತಮ್ಮದು ಅಪರೂಪದ ವ್ಯಕ್ತಿತ್ವವಾಗಿರುವುದು ನಮಗೆ ಅಭಿಮಾನವನ್ನುಂಟುಮಾಡಿದೆ.

ಮಹಾಮೇಧಾವಿಗಳೇ,

ಇಂಜನಿಯರಿಂಗ್ ಪದವಿ ಪೂರೈಸಿ ತಾವು ಕೆ.ಜಿ.ಎಫ್.ದ ಎನ್.ಆಯ್.ಇ. ಯಲ್ಲಿ ಸೇವೆ ಸಲ್ಲಿಸಿದ ನಂತರ ಮಂಡ್ಯದ ಪಿ.ಇ.ಎಸ್. ಕಾಲೇಜಿನಲ್ಲಿ ಇಲೆಕ್ಟ್ರಿಕಲ್ ವಿಭಾಗವನ್ನು ಮೊದಲಿನಿಂದಲೂ ಕಟ್ಟಿ ಬೆಳೆಯಿಸಿ ಆ ವಿಭಾಗದ ಮುಖ್ಯಸ್ಥರಾಗಿಯೂ ಸೇವೆ ಸಲ್ಲಿಸಿದಿರಿ. ಟ್ರಿನಿಡಾಡನಲ್ಲಿ ಪ್ರಾಧ್ಯಾಪಕ ವೃತ್ತಿಯನ್ನು ಕೈಕೊಂಡು ತಮ್ಮ ಪ್ರಬುದ್ಧ ಜ್ಞಾನದ ಪ್ರಯೋಜನವನ್ನು ಸಾಗರಗಳಾಚೆ ವಿದೇಶಗಳಿಗೂ ವಿಸ್ತರಿಸಿದಿರಿ. ಗಯಾನ, ಬ್ರಾಜಿಲ್, ಸೂರಿನಾಮ, ಮಲೇಶಿಯಾ, ಸಿಂಗಾಪೂರಗಳಲ್ಲಿ ತಾವು ತಾಂತ್ರಿಕ ವಿಷಯಗಳನ್ನು ಕುರಿತು ಪಾಂಡಿತ್ಯಪೂರ್ಣ ಉಪನ್ಯಾಸಗಳನ್ನು ನೀಡಿದ್ದೀರಿ. ಏಷ್ಯಾ, ಅಮೇರಿಕಾ ಹಾಗೂ ಯುರೋಪಿನ ಹೆಚ್ಚಿನ ದೇಶಗಳಲ್ಲಿ ಸಂಚರಿಸಿ ತಮ್ಮ ಜ್ಞಾನ ಕ್ಷಿತಿಜ ಹಾಗೂ ಅನುಭವ ಕ್ಷೇತ್ರಗಳನ್ನು ವಿಸ್ತರಿಸಿಕೊಂಡಿದ್ದೀರಿ. ತಮ್ಮ ವಿದ್ವತ್ತು ಕೇವಲ ಉಪನ್ಯಾಸಗಳಲ್ಲಿ ಮಾತ್ರವಲ್ಲ ಬರಹಗಳ ಮೂಲಕವೂ ಪರಿಣಾಮಕಾರಿಯಾಗಿ ಪ್ರಕಟಗೊಂಡಿದೆ. ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದ ಜರ್ನಲ್‌ಗಳಲ್ಲಿ ಪ್ರಕಟವಾದ ತಾಂತ್ರಿಕ ವಿಷಯಗಳ ತಮ್ಮ ಅಪರೂಪದ ಪ್ರಬಂಧಗಳು ತಮ್ಮ ಪ್ರತಿಭೆ, ಪಾಂಡಿತ್ಯಗಳಿಗೆ ದ್ಯೋತಕವಾಗಿದೆ. ಕಂಪ್ಯೂಟರ್ ಬಗ್ಗೆ ಆಕಾಶವಾಣಿಯ ಮೂಲಕ ತಾವು ಮಾಡಿದ ಹಲವಾರು ಭಾಷಣಗಳಿಂದ ಹಾಗೂ ದೂರದರ್ಶನದಲ್ಲಿ ತಾವು ನಡೆಸಿದ ತಾಂತ್ರಿಕ ವಿಷಯ ಪ್ರಸಾರಗಳಿಂದ ನಾಡಿನಾದ್ಯಂತ ಇರುವ ತಂತ್ರಜ್ಞರಿಗೆ, ಜಿಜ್ಞಾಸುಗಳಿಗೆ ತಮ್ಮ ಬಹುಮುಖ, ಪಾಂಡಿತ್ಯಪೂರ್ಣ ವ್ಯಕ್ತಿತ್ವ ಸುಪರಿಚಿತವಾಗಿದೆ.

ದಕ್ಷ ಆಡಳಿತಗಾರರೇ,

ತಾಂತ್ರಿಕ ಜ್ಞಾನಕ್ಷೇತ್ರದಲ್ಲಿ ತಮ್ಮ ಅನುಭವ ವ್ಯಾಪಕವಾಗಿರುವಂತೆ ಶಿಕ್ಷಣ ಸಂಸ್ಥೆಗಳ ಆಡಳಿತ ಕ್ಷೇತ್ರದಲ್ಲಿಯೂ ತಮ್ಮ ಅನುಭವ ಅಪಾರವಾಗಿದೆ; ಅಮೂಲ್ಯವಾಗಿದೆ. ಮಂಡ್ಯದ ಪಿ. ಇ. ಎಸ್. ಕಾಲೇಜಿನ ಇಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥರಾದಾಗಿನಿಂದ ಆರಂಭವಾದ ತಮ್ಮ ಆಡಳಿತದ ಅನುಭವ ತಮ್ಮನ್ನು ಬೆಂಗಳೂರಿನ ಬಿ. ಆಯ್. ಟಿ. ಸಂಸ್ಥೆಯ ಮೊದಲ ಪ್ರಾಚಾರ್ಯರನ್ನಾಗಿಸಿತು. ತಮ್ಮ ಆ ಅನುಭವ ವಿಕಾಸಗೊಂಡು ತಮ್ಮನ್ನು ಪಾಂಡಿಚೇರಿಯ ಇಂಜನಿಯರಿಂಗ್ ಕಾಲೇಜಿನ ಪ್ರಥಮಪ್ರಾಚಾರ್ಯ ಸ್ಥಾನಕ್ಕೇರಿಸಿತು. ಈಗ ಸರ್ವಾಂಗ ಸುಂದರವಾಗಿ ಬೆಳೆದು ತಾಂತ್ರಿಕ ಶಿಕ್ಷಣ ಕ್ಷೇತ್ರದಲ್ಲಿ ಪ್ರಖ್ಯಾತವಾಗಿರುವ ಪಾಂಡಿಚೇರಿಯ ಇಂಜನಿಯರಿಂಗ್ ಕಾಲೇಜು ತಮ್ಮ ಪ್ರತಿಭಾಪೂರ್ಣ ದಕ್ಷ ಆಡಳಿತಕ್ಕೆ ಸಾಕ್ಷಿಯಾಗಿ ನಿಂತಿದೆ. ಅಲ್ಲಿ ತಾವು ಸಲ್ಲಿಸಿದ ಅಮೂಲ್ಯ ಸೇವೆ, ಮಾಡಿದ

ಸಮರ್ಥ ಆಡಳಿತದ ಫಲವಾಗಿ ತಾವು ದಿನಾಂಕ ೨.೭.೧೯೯೦ ರಂದು ಕರ್ನಾಟಕ ವಿಶ್ವವಿದ್ಯಾಲಯ ಕುಲಪತಿ ಸ್ಥಾನವನ್ನು ಅಲಂಕರಿಸಿದಿರಿ. ಉನ್ನತ ಶಿಕ್ಷಣ ಕ್ಷೇತ್ರದ ಈ ಅತ್ಯುನ್ನತ ಸ್ಥಾನದಲ್ಲಿ ತಾವು ವಿರಾಜಮಾನರಾದಿರಿ. ಇದು ದಕ್ಷ, ಪ್ರಾಮಾಣಿಕ ಆಡಳಿತಕ್ಕೆ ಸಂದ ಗೌರವವಾಗಿದೆ.

ಆತ್ಮೀಯ ಕುಲಪತಿಗಳೇ,

ಕುಲಪತಿಗಳು ವಿಶ್ವವಿದ್ಯಾಲಯದ ಘನತೆ ಗೌರವಗಳ ಮತ್ತು ಅನೇಕ ಹೊಣೆಗಾರಿಕೆಗಳ ಕೇಂದ್ರಬಿಂದುವಾಗಿರುತ್ತಾರೆ. ಅವರು ವಿಶ್ವವಿದ್ಯಾಲಯದ ಶೈಕ್ಷಣಿಕ, ಆಡಳಿತಾತ್ಮಕ ಜವಾಬ್ದಾರಿಗಳನ್ನು ಹೊಂದಿರುವುದರ ಜೊತೆಗೆ ಇಡೀ ವ್ಯವಸ್ಥೆಯ ನೇತಾರರಾಗಿರುತ್ತಾರೆ. ವಿದ್ಯಾರ್ಥಿಗಳು, ಪ್ರಾಧ್ಯಾಪಕರು ತಮ್ಮ ದಿನ ನಿತ್ಯದ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಪೂರೈಸುವಂತೆ ಶೈಕ್ಷಣಿಕ ಪರಿಸರ ರೂಪಿಸುವ ರೂವಾರಿಗಳಾಗಿರುತ್ತಾರೆ. ಈ ಎಲ್ಲ ಅಂಶಗಳು, ಆದರ್ಶಗಳು ತಮ್ಮ ವ್ಯಕ್ತಿತ್ವದಲ್ಲಿ ಗಟ್ಟಿಗೊಂಡಿರುವುದಿಂದ ತಾವು ಅಧಿಕಾರ ವಹಿಸಿಕೊಂಡ ಅತ್ಯಲ್ಪ ಅವಧಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಮುಖಗಳಲ್ಲಿ ಹೊಸ ಚೈತನ್ಯ ಮೂಡಿದೆ. ತಮ್ಮ ಸಮರ್ಥ ಮಾರ್ಗದರ್ಶನದಲ್ಲಿ ವಿಶ್ವವಿದ್ಯಾಲಯವು ಸರ್ವತೋಮುಖವಾಗಿ ಬೆಳೆದು ನಾಡಿನ ಮಾದರಿಯ ವಿಶ್ವವಿದ್ಯಾಲಯವಾಗುವುದರಲ್ಲಿ ಸಂದೇಹವಿಲ್ಲವೆಂದು ನಾವು ಭಾವಿಸಿದ್ದೇವೆ. ಶ್ರೀ ಕುವೆಂಪುರವರ ವ್ಯಕ್ತಿತ್ವದಿಂದ ಪ್ರಭಾವಿತರಾದ ತಾವು ಬಸವಾದಿ ಶರಣರ ಸಾಹಿತ್ಯವನ್ನು ಅಂಗವಿಸಿಕೊಂಡು ವಚನ ಸಾಹಿತ್ಯದ ಬಗ್ಗೆ ಅಪಾರ ಪ್ರೀತಿಯನ್ನು ಬೆಳೆಸಿಕೊಂಡಿರುವುದು ಹೆಮ್ಮೆಯ ಸಂಗತಿ. ಕವಿ ಕುವೆಂಪು, ಬೇಂದ್ರೆಯವರ ಕಾವ್ಯಗಳನ್ನು ಅಸ್ವಾದಿಸಿದ ಸಹೃದಯತೆ ತಮ್ಮದಾಗಿದೆ.

ಪ್ರತಿಭಾವಂತ ಪ್ರಾಧ್ಯಾಪಕರಾಗಿ, ದಕ್ಷ ಆಡಳಿತಗಾರರಾಗಿ, ತಾಂತ್ರಿಕ ಕ್ಷೇತ್ರದ ಮಹಾಮೇಧಾವಿಗಳಾಗಿ ಹೆಸರಾಂತ ಬರಹಗಾರರಾಗಿ, ಶರಣ ಸಾಹಿತ್ಯಾಭಿಮಾನಿಗಳಾಗಿ, ಶ್ರೇಷ್ಠವಾಗ್ಮಿಗಳಾಗಿ ನಾಡು-ನುಡಿಗಳಿಗೆ ಬಹುಮುಖ ಸೇವೆ ಸಲ್ಲಿಸಿದ ತಮ್ಮನ್ನು ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಯಾತ್ರಾಮಹೋತ್ಸವದ ಅಂಗವಾಗಿ ಗೌರವಿಸಿ ಸತ್ಕರಿಸಲು ಅಭಿಮಾನವೆನಿಸುತ್ತದೆ. ಈ ಶುಭ ಸಂದರ್ಭದಲ್ಲಿ ತಮ್ಮ ವ್ಯಕ್ತಿತ್ವಕ್ಕೆ ಅಲಂಕಾರ ಪ್ರಾಯವಾದ "ವಿದ್ಯಾವಾರಿಧಿ" ಬಿರುದನ್ನಿತ್ತು ಸನ್ಮಾನಿಸಲು ನಮಗೆ ಹರ್ಷವೆನಿಸುತ್ತದೆ.

ತಮ್ಮ ಪಾಂಡಿತ್ಯಪೂರ್ಣ ಪರಿಪಕ್ವ ಜೀವನದ ಪ್ರತಿಫಲ ಸಮಾಜಕ್ಕೆ ಇನ್ನೂ ಲಭಿಸಲಿ, ಆದರ ಫಲವಾಗಿ ನಾಡು ಹಾಗೂ ದೇಶ ತಾಂತ್ರಿಕ ಕ್ಷೇತ್ರದಲ್ಲಿ ದಿವ್ಯ ಪ್ರಗತಿ ಸಾಧಿಸಿ, ೨೧ ನೆಯ ಶತಮಾನದ ಭವ್ಯ ಭವಿಷ್ಯದತ್ತ ಭರವಸೆಯ ಹೆಜ್ಜೆಗಳನ್ನಿಡಲಿ ಎಂದು ನಾವು ಹೃದಯಾರೆ ಹಾರೈಸುತ್ತೇವೆ.

ಇಲಕಲ್ಲ

ಶ್ರೀ ನಿ. ಪ್ರ. ಮಹಾಂತಸ್ವಾಮಿಗಳವರು
ಚಿತ್ತರಗಿ ಸಂಸ್ಥಾನಮಠ

ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ

ವಾಣಿಜ್ಯ ಸಂಘ

ದಿನಾಂಕ ೪.೧.೧೯೯೫ರಂದು

ರಾಷ್ಟ್ರಮಟ್ಟದ ಪ್ರಣವಾನಂದ ಪ್ರಶಸ್ತಿ ವಿಜೇತರಾದ

ಡಾ. ಎಸ್. ರಾಮೇಗೌಡ

ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಅವರಿಗೆ ಅರ್ಪಿಸಿದ

ಸನ್ಮಾನ ಪತ್ರ

ಮಾನ್ಯರೆ,

ಬಾಲ್ಯಾವಸ್ಥೆಯಲ್ಲಿರುವ ವಾಣಿಜ್ಯ ಸಂಘದ ಆದರರಣೀಯ ಅತಿಥಿಗಳನ್ನಾಗಿ ತಮ್ಮನ್ನು ಬರಮಾಡಿಕೊಳ್ಳುವ ಶುಭದಿನವು ಕರ್ನಾಟಕ ಕಲಾ ಮಹಾವಿದ್ಯಾಲಯದ ಇತಿಹಾಸ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆಯಲರ್ಹವಾದುದು.

ವಾಣಿಜ್ಯ ಸಂಘದ ಸನ್ಮಾನವನ್ನು ಸ್ವೀಕರಿಸಲು ತಾವು ದಯವಿಟ್ಟು ಒಪ್ಪಿಕೊಂಡಿರುವುದು ನಮ್ಮ ವಿದ್ಯಾರ್ಥಿಗಳ ಬಯಕೆಯನ್ನು ಈಡೇರಿಸಿದಂತೆಯಾಗಿದೆಯಲ್ಲದೆ ಸಮಗ್ರ ವಿದ್ಯಾರ್ಥಿ ವೃಂದವನ್ನೇ ತಾವು ಗೌರವಿಸಿದಂತಾಗಿರುತ್ತದೆ.

ತಾಂತ್ರಿಕ ಪರಿಣತರೆ,

ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಹೊಂಡರಬಾಳು ಗ್ರಾಮದಲ್ಲಿ ಜನಿಸಿದ ತಾವು ಬೆಂಗಳೂರು ವಿಶ್ವವಿದ್ಯಾಲಯದ ಇಂಜಿನಿಯರಿಂಗ ಮಹಾವಿದ್ಯಾಲಯದಿಂದ ತಾಂತ್ರಿಕ ಪದವಿಯನ್ನು ಪಡೆದಿರುವಿರಿ. ಕೆ.ಜಿ.ಎಫ್., ಎನ್.ಐ.ಇ. ಯಲ್ಲಿ ಸೇವೆ ಸಲ್ಲಿಸಿದ ನಂತರ ತಾವು ಮಂಡ್ಯದ ಪಿ.ಇ.ಎಸ್. ಕಾಲೇಜದಲ್ಲಿ ಇಲೆಕ್ಟ್ರಿಕಲ್ ವಿಭಾಗದ ಮುಖ್ಯಸ್ಥರಾಗಿಯೂ ಸೇವೆಯನ್ನು ಸಲ್ಲಿಸಿರುವಿರಿ. ವಾಷಿಂಗಟನ್ ಸ್ಟೇಟಿನ ಪ್ರೊ. ಜಾಬ್ಲಿಯವರ ಮೇಲ್ವಿಚಾರಣೆಯಲ್ಲಿ ಪಿ.ಎಚ್‌ಡಿ ಪದವಿಯನ್ನು ಪಡೆದಿರುವಿರಿ, ಅದಲ್ಲದೆ ಪಿ.ಇ.ಎಸ್. ಕಾಲೇಜಿನ ಇಲೆಕ್ಟ್ರಾನಿಕ್ಸ್ ವಿಭಾಗವನ್ನು ಕಟ್ಟಿದ ಮೊದಲಿಗರು ತಾವಾಗಿರುವಿರಿ.

ದಕ್ಷ ಪ್ರಾಚಾರ್ಯರೆ,

ಬೆಂಗಳೂರಿನ ಬಿ.ಐ.ಟಿ.ಯ ಮೊದಲ ಪ್ರಾಚಾರ್ಯರಾಗಿ ತಾವು ಸಲ್ಲಿಸಿದ ಸೇವೆಯು ಸ್ಮರಣೀಯವಾಗಿದೆ. ತಾವು ಪ್ರಾಚಾರ್ಯರಾಗಿದ್ದ ಕಾಲಾವಧಿಯಲ್ಲಿ ಬಿ.ಐ.ಟಿ. ಸಂಸ್ಥೆಯು ತಾಂತ್ರಿಕ ವಿಷಯಗಳಂತೆಯೇ ಕಂಪ್ಯೂಟರ ವಿಷಯಗಳನ್ನು ಪಠ್ಯಕ್ರಮದಲ್ಲಿ ಅಳವಡಿಸಿರುವುದರಿಂದ ಕಂಪ್ಯೂಟರ ವಿಜ್ಞಾನವು ಬೆಳವಣಿಗೆಯನ್ನು ಹೊಂದಿತು. ತಮ್ಮ ಆಡಳಿತಾತ್ಮಕ ಕಾರ್ಯ ಕೌಶಲ್ಯತೆ ಹಾಗೂ ಪ್ರಗತಿಪರ ಧೋರಣೆಯಿಂದಾಗಿ ತಮ್ಮ ಕಿರಿ ವಯಸ್ಸಿನಲ್ಲಿಯೇ ಪಾಂಡಿಚೇರಿಯ ಇಂಜಿನಿಯರಿಂಗ ಮಹಾವಿದ್ಯಾಲಯದ

ಪ್ರಾಚಾರ್ಯರಾಗಿ, ಅದನ್ನು ಕಟ್ಟಿ ಬೆಳೆಸಲು ಅವಕಾಶಗಳನ್ನು ಪಡೆದ ಭಾಗ್ಯಶಾಲಿಗಳಾಗಿರುವಿರಿ.

ಮಾನ್ಯ ಕ್ರಿಯಾಶೀಲ ಕುಲಪತಿಗಳೇ,

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯಾಗಿ ತಾವು ೨.೭.೧೯೯೦ರಂದು ಅಧಿಕಾರವನ್ನು ಸ್ವೀಕಾರ ಮಾಡಿ ಕುಲಪತಿಯ ಹುದ್ದೆಯನ್ನು ವಹಿಸಿಕೊಂಡ ನಂತರ ವಿಶ್ವವಿದ್ಯಾಲಯದ ಸರ್ವತೋಮುಖ ಬೆಳವಣಿಗೆಗೆ ತಾವು ಹಗಲಿರುಳೂ ದುಡಿಯುತ್ತಿರುವಿರಿ. ಕರ್ನಾಟಕ ಸರ್ಕಾರವು ಇದನ್ನು ಗಮನಿಸಿ ಎರಡನೆ ಅವಧಿಗೆ ತಮ್ಮನ್ನು ಕುಲಪತಿಗಳನ್ನಾಗಿ ನೇಮಿಸಿದ್ದುದು ತಮ್ಮ ಕಾರ್ಯತತ್ಪರತೆಗೆ ಸಂದ ಗೌರವವಾಗಿರುತ್ತದೆ. ತಮ್ಮ ಆಡಳಿತದ ಅವಧಿಯಲ್ಲಿ ಬೆಳಗಾಂವ ಆವರಣವು ಸ್ವತಂತ್ರವಾದ ಕಟ್ಟಡವನ್ನು ಪಡೆಯಿತು. ಬೇರೆ ಬೇರೆ ಸ್ನಾತಕೋತ್ತರ ವಿಭಾಗಗಳು ಪ್ರಾರಂಭವಾದವು. ಭವಿಷ್ಯತ್ತಿನಲ್ಲಿ ಅದೊಂದು ಸ್ವತಂತ್ರ ವಿಶ್ವವಿದ್ಯಾಲಯವಾಗುವುದಕ್ಕೆ ತಾವು ನೆಲೆಗಟ್ಟನ್ನು ಹಾಕಿಕೊಟ್ಟಂತಾಗಿದೆ. ಹೊಸದಾಗಿ ಪ್ರಾರಂಭಿಸಿದ ಬಿಜಾಪುರ ಸ್ನಾತಕೋತ್ತರ ಕೇಂದ್ರದಲ್ಲಿ ಪ್ರವಾಸೋದ್ಯಮ ಹಾಗೂ ಪ್ರಾಚೀನ ಕಲೆಯ ಇತಿಹಾಸದಂತಹ ನೂತನ ವಿಷಯಗಳ ಬೋಧನೆಗೆ ಅನುಕೂಲತೆಯನ್ನು ಮಾಡಿಕೊಟ್ಟು ವಿದ್ಯಾರ್ಥಿಗಳಿಗೆ ಹೊಸ ಅವಕಾಶವನ್ನು ಕಲ್ಪಿಸಿಕೊಟ್ಟಿರುವಿರಿ.

ಶಿಕ್ಷಣ ತಜ್ಞರೆ,

ತಾವು ಗಯಾನಾ, ಬ್ರಾಜಿಲ್, ಸೂರಿನಾಮ, ಮಲೇಶಿಯಾ, ಸಿಂಗಾಪೂರ ಮುಂತಾದ ಅಂತರಾಷ್ಟ್ರೀಯ ಮಟ್ಟದ ವಿಶ್ವವಿದ್ಯಾಲಯಗಳಿಗೆ ಸಂದರ್ಶನವನ್ನು ಕೊಟ್ಟು ವಿಜ್ಞಾನ ಮತ್ತು ತಾಂತ್ರಿಕ ವಿಷಯಗಳ ಮೇಲೆ ಉಪನ್ಯಾಸ ನೀಡಿ ಆಯಾ ವಿಷಯಗಳ ಮೇಲೆ ಹೊಸ ಬೆಳಕನ್ನು ಚೆಲ್ಲಿರುವಿರಿ.

ಏಷ್ಯಾ, ಅಮೇರಿಕಾ, ಯುರೋಪ್ ಮುಂತಾದ ದೇಶಗಳ ಪರ್ಯಟನವನ್ನು ಮಾಡಿ ಬೇರೆ ಬೇರೆ ವಿಷಯಗಳನ್ನು ಅಭ್ಯಸಿಸಿ ಶಿಕ್ಷಣ ತಜ್ಞರಾಗಿರುವಿರಿ.

ಸಾಹಿತ್ಯ ಪ್ರಿಯರೇ,

ತಮ್ಮ ಪ್ರತಿಯೊಂದು ಭಾಷಣದಲ್ಲಿ ಶರಣರ ವಚನಗಳನ್ನು ಉದಾಹರಣೆ ನೀಡಿ ಮಾತನಾಡುತ್ತಿರುವುದು 'ಶರಣ ಸಾಹಿತ್ಯ'ದ ಬಗೆಗಿನ ಇರುವ ತಮ್ಮ ಒಲವನ್ನು ತೋರಿಸುತ್ತಿದೆ. ತಮ್ಮ ಪ್ರವಚನಗಳ ಸಾರ ಸಂಗ್ರಹವನ್ನು ಒಳಗೊಂಡ 'ಮೆಲಕು' ಪುಸ್ತಕವು ಹೊರಹೊಮ್ಮಿರುತ್ತದೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಹೊಸದಾಗಿ ತಮ್ಮಿಂದ ರೂಪಿತವಾಗಿರುವ 'ವಿಶ್ವಚೇತನ' ವೇದಿಕೆಯು ಧಾರವಾಡದ ಸಾಂಸ್ಕೃತಿಕ ಬದುಕಿಗೆ ಹೊಸ ಚೇತನವನ್ನು ನೀಡಿದೆ.

ರಾಜ್ಯ ಪ್ರಶಸ್ತಿ ವಿಜೇತರೆ,

ತಾವು ಶಿಕ್ಷಣ ಕ್ಷೇತ್ರದಲ್ಲಿ ನೀಡಿದ ಕೊಡುಗೆಯನ್ನು ಕರ್ನಾಟಕ ರಾಜ್ಯ ಸರ್ಕಾರವು ಗುರುತಿಸಿದೆ, 'ವೃತ್ತಿಪರ ಶಿಕ್ಷಣ' ದ ಬಗೆಗೆ ನೇಮಿಸಿದ ಸಮಿತಿಯ ಅಧ್ಯಕ್ಷರಾಗಿ ಸಲ್ಲಿಸಿರುವ ವರದಿಯು ಐತಿಹಾಸಿಕ ದಾಖಲೆಯಾಗಿರುತ್ತದೆ. ಇವೆಲ್ಲವುಗಳನ್ನು ಗುರುತಿಸಿ ಕರ್ನಾಟಕ ರಾಜ್ಯ ಸರ್ಕಾರವು ೧೯೯೩ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಕೊಟ್ಟು ಸನ್ಮಾನಿಸಿದೆ.

ತಮ್ಮ ದುಡಿತದ ಪ್ರತಿಭೆಯನ್ನು ಗುರುತಿಸಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ತಮಗೆ ಪ್ರಣವಾನಂದ ಪ್ರಶಸ್ತಿ ಕೊಟ್ಟಿರುವುದು ಸೂಕ್ತವಾಗಿರುತ್ತದೆ.

ಕರ್ಮಯೋಗಿ ಡಾ. ಡಿ.ಸಿ. ಪಾವಟೆಯವರ ಚೇತನ ಶಕ್ತಿಯ, ಸ್ಫೂರ್ತಿಯ ನೆಲೆಯ ಆಶ್ರಯವನ್ನು ಪಡೆದು ಈ ವಿಶ್ವವಿದ್ಯಾಲಯವನ್ನು ಲೋಕಮಾನ್ಯವಾಗಿ ಮಾಡಬೇಕೆಂಬುದು ತಮ್ಮ ಹಂಬಲವಾಗಿದೆ. ಈ ಹಂಬಲದೊಂದಿಗೆ ತಾವು ನಿರಂತರ ಪರಿಶ್ರಮ ಪಡುತ್ತಿದ್ದುದನ್ನು ಕರ್ನಾಟಕ ವಿಶ್ವವಿದ್ಯಾಲಯದ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಗುರುತಿಸಿರುತ್ತಾರೆ ಹಾಗೂ ಮನಗಂಡಿರುತ್ತಾರೆ.

ಶಿಕ್ಷಣದ ಸಾರ್ಥಕ ಪ್ರಸಾರಗಳಿಗಾಗಿ ಶ್ರಮಿಸುತ್ತಿರುವ ತಮಗೆ ಸಕಲ ಆಯುರಾರೋಗ್ಯವನ್ನು, ಶ್ರೇಯೋಭಿವೃದ್ಧಿಯನ್ನು ಹಾಗೂ ತಮ್ಮ ಮನೋಕಾಮನೆಗಳನ್ನು ಪರಮಾತ್ಮನು ಕರುಣಿಸಲೆಂದು ವಾಣಿಜ್ಯ ಸಂಘದ ಪರವಾಗಿ, ವಾಣಿಜ್ಯ ವಿಭಾಗದ ಪರವಾಗಿ ಹಾಗೂ ಕರ್ನಾಟಕ ಕಲಾ ಮಹಾವಿದ್ಯಾಲಯದ ಪ್ರಾಚಾರ್ಯ, ಪ್ರಾಧ್ಯಾಪಕ ಹಾಗೂ ವಿದ್ಯಾರ್ಥಿ ವಿದ್ಯಾರ್ಥಿನಿಯರ ಪರವಾಗಿ ಪ್ರಾರ್ಥಿಸಿ ಈ ಸನ್ಮಾನ ಪತ್ರವನ್ನು ತಮಗೆ ಅರ್ಪಿಸುತ್ತಿದ್ದೇವೆ.

ಪ್ರೊ. ಎಮ್. ಸಿ. ಹಿಪ್ಪರಗಿ
ಮುಖ್ಯಸ್ಥರು, ವಾಣಿಜ್ಯ ವಿಭಾಗ

ಪ್ರೊ. ಎಸ್. ವಿ. ಶಿರೋಳ
ಚೇರಮನ್

ಪರಶುರಾಮ ಕಟ್ಟಿಮನಿ
ಕು. ಅನಿತಾ ಹಾಲಮತ
ಹಾಗೂ ವಿಭಾಗದ ವಿದ್ಯಾರ್ಥಿಗಳು

ಪ್ರಾ. ಉಷಾಮೂರ್ತಿ
ಅಧ್ಯಕ್ಷರು

"ಪರಿಪೂರ್ಣ ಜ್ಞಾನವೇ ಶಿಕ್ಷಣ"

ಶ್ರೀ ಜಗದ್ಗುರು ಮೂರುಸಾವಿರಮಠ ವಿದ್ಯಾವರ್ಧಕ ಸಂಘದ
ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ಹುಬ್ಬಳ್ಳಿ
ಬುಧವಾರ ದಿನಾಂಕ ೧.೩.೧೯೯೫ರಂದು ಜರುಗಿದ ವಾರ್ಷಿಕ ದಿನಾಚರಣೆಯ ಶುಭ
ಸಂದರ್ಭದಲ್ಲಿ
ಪರಮಪೂಜ್ಯ ಶ್ರೀಮದ್ ಮಹಾರಾಜ ನಿರಂಜನ ಜಗದ್ಗುರು ಡಾ. ಗಂಗಾಧರ
ರಾಜಯೋಗೀಂದ್ರ ಮಹಾಸ್ವಾಮಿಗಳು, ಮೂರುಸಾವಿರಮಠ
ಅವರ ದಿವ್ಯ ಸನ್ನಿಧಾನದಲ್ಲಿ ಹಾಗೂ ಶ್ರೀ ಜಗದ್ಗುರು ಮೂರುಸಾವಿರಮಠ
ವಿದ್ಯಾವರ್ಧಕ ಸಂಘದ ಗೌರವ ಕಾರ್ಯಾಧ್ಯಕ್ಷರಾದ
ಶ್ರೀ ವೀರಚಂದ ಸಾರಣಜಿ ಕಾನಜಿ ಅವರ ಘನ ಅಧ್ಯಕ್ಷತೆಯಲ್ಲಿ
ಮಹಾವಿದ್ಯಾಲಯದ ಸಮಸ್ತ ಶಿಕ್ಷಕ ಶಿಕ್ಷಕೇತರ ಸಿಬ್ಬಂದಿಯವರು
ರಾಷ್ಟ್ರಮಟ್ಟದ "ಪ್ರಣವಾನಂದ ಪ್ರಶಸ್ತಿ" ವಿಜೇತರಾದ

ಸನ್ಮಾನ್ಯ ಡಾ. ಎಸ್. ರಾಮೇಗೌಡ

ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ಇವರಿಗೆ ಆದರಾಭಿಮಾನದಿಂದ ಸಮರ್ಪಿಸಿದ

ಅಭಿನಂದನಾ ಪತ್ರ

ಸನ್ಮಾನ್ಯ ಶ್ರೀ ಡಾ|| ಎಸ್. ರಾಮೇಗೌಡ ಅವರೇ,

ತಾವು ಸಂಸ್ಕೃತಿ, ಕಲೆಗಳ ಬೀಡು, ಗಂಧದ ನೆಲೆವೀಡು ಆದ ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ಹೊಂಡರಬಾಳು ಗ್ರಾಮದಲ್ಲಿ ೧೯೩೯ರಲ್ಲಿ ಜನ್ಮ ತಾಳಿರುವಿರಿ. ಬೆಂಗಳೂರು ವಿಶ್ವವಿದ್ಯಾಲಯದ ಇಂಜನೀಯರಿಂಗ್ ಮಹಾವಿದ್ಯಾಲಯದಿಂದ ತಾಂತ್ರಿಕ ಪದವಿಯನ್ನು ಪಡೆದಿದ್ದೀರಿ. ವೆಸ್ಟ ಇಂಡೀಜ ವಿಶ್ವವಿದ್ಯಾಲಯದಲ್ಲಿ ಉಪನ್ಯಾಸಕರಾಗಿದ್ದ ಅವಧಿಯಲ್ಲಿ ಅಮೇರಿಕೆಯ ಪ್ರೊ. ಜಾಬ್ಲಿ ಇವರ ಮಾರ್ಗದರ್ಶನದಲ್ಲಿ ಡಾಕ್ಟರೇಟ ಪದವಿಯನ್ನು ಗಳಿಸಿದ್ದೀರಿ. ಗಂಧದ ನಾಡಿನಲ್ಲಿರುವ ತಾವು ಗಂಧದಂತೆ ತಮ್ಮ ಜ್ಞಾನಗಂಧವನ್ನು ಪ್ರಪಂಚದ ತುಂಬಾ ಪಸರಿಸಿದ್ದೀರಿ. ಪ್ರಾಧ್ಯಾಪಕರಾಗಿ, ಪ್ರಾಚಾರ್ಯರಾಗಿ ರಾಷ್ಟ್ರದ ತಾಂತ್ರಿಕ ವಿಜ್ಞಾನದ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಸದಸ್ಯರಾಗಿ, ಉಪಾಧ್ಯಕ್ಷರಾಗಿ ಹಾಗೂ ಯು.ಜಿ.ಸಿ. ಯಿಂದ ನಾಮಾಂಕಿತ ಸದಸ್ಯರಾಗಿ ಶಿಕ್ಷಣ ಪ್ರಸಾರದ ಉನ್ನತ ಧ್ಯೇಯಕ್ಕಾಗಿ ನಿಷ್ಠೆಯಿಂದ ತಮ್ಮನ್ನು ಸಮರ್ಪಿಸಿಕೊಂಡಿದ್ದೀರಿ. ರಾಜ್ಯಸರ್ಕಾರದ ರಾಜ್ಯೋತ್ಸವ ಪ್ರಶಸ್ತಿಯನ್ನು ಬಾಚಿಕೊಂಡಿದ್ದೀರಿ. ಶಿಕ್ಷಣ ಕ್ಷೇತ್ರದ ಅನುಪಮ ಸೇವೆಗಾಗಿ ಕಂಕಣಬದ್ಧರಾದ ತಮ್ಮ ಪ್ರತಿಭೆಯನ್ನು ಗುರುತಿಸಿ ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ತಮಗೆ "ಪ್ರಣವಾನಂದ" ಪ್ರಶಸ್ತಿಯನ್ನು ನೀಡಿರುವುದು ಅತ್ಯಂತ ಸೂಕ್ತ.

ಈ ಪ್ರಶಸ್ತಿಗಳಿಂದ ಹಿರಿಮೆ ನಿಮಗಷ್ಟೇ ಅಲ್ಲ, ಪ್ರಶಸ್ತಿಗೂ ಗರಿಮೆ ನಿಮ್ಮಿಂದ. ಇಂಥಹ ಪ್ರತಿಭಾನ್ವಿತರಾದ ತಮ್ಮನ್ನು ಗೌರವಿಸುವದೆಂದರೆ ಸರಸ್ವತಿಯನ್ನು ಗೌರವಿಸಿದಂತೆ.

ಚೈತನ್ಯಶೀಲ ಕುಲಪತಿಗಳೇ,

ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯಾಗಿ ದಿ. ೨.೭.೯೦ರಿಂದ ಅಧಿಕಾರವಹಿಸಿ ಇದರ ಸರ್ವತೋಮುಖ ಬೆಳವಣಿಗೆಗೆ ಅವಿರತ ಶ್ರಮಿಸುತ್ತಿರುವಿರಿ. ಸ್ನಾತಕೋತ್ತರ ವಿಭಾಗಗಳನ್ನು ಬೆಳಗಾವಿ, ವಿಜಾಪುರಗಳಲ್ಲೂ ಆರಂಭಿಸಿದ್ದೀರಿ. ಗಮನಾರ್ಹ ಕಾರ್ಯಗಳನ್ನು ಎಸಗಿ ಕರ್ನಾಟಕ ಸರ್ಕಾರದ ಗಮನ ಸೆಳೆದು ಎರಡನೇ ಬಾರಿ ಈ ಹುದ್ದೆಯಲ್ಲಿ ಮುಂದುವರೆದಿದ್ದೀರಿ. ರಚನಾತ್ಮಕ ಕೆಲಸಗಳನ್ನು ಕೈಕೊಳ್ಳಲು ತಮ್ಮಲ್ಲಿಯ ಶಿಸ್ತು, ಸಂಯಮ, ಅಪ್ರತಿಮ ಆಡಳಿತ ಕೌಶಲ್ಯ, ಅಚಲನಿಷ್ಠೆ, ಪ್ರಾಮಾಣಿಕತೆ ಹಾಗೂ ಪ್ರೌಢವಿದ್ಯಾರ್ಥಿಗಳ ಮನೋಭೂಮಿಕೆಯನ್ನು ಬಲ್ಲ ಅರಿವೇ ಕಾರಣ ಎಂದು ನಿಸ್ಸಂಶಯವಾಗಿ ಹೇಳಬಹುದು. ತಮ್ಮಲ್ಲಿ ದೂರದರ್ಶಿತ್ವ ಮತ್ತು ವಾಸ್ತವವಾದಿ ನಿಷ್ಠತೆ ಎರಡರ ಅಪರೂಪ ಸಂಗಮವಿದೆ.

ದಾಖಲೆ ನಿರ್ಮಾಪಕರೇ,

ತಾವು ಪ್ರಪ್ರಥಮ ವೃತ್ತಿ ಪ್ರಾರಂಭಿಸಿದ್ದು ಕೋಲಾರದ ಚಿನ್ನದ ಗಣಿಯಲ್ಲಿ ಸಹಾಯಕ ಇಂಜನಿಯರ್ ಆಗಿ ಅಲ್ಲಿಂದ ಚೊಕ್ಕ ಚಿನ್ನವಾಗಿ ಹೊರಬಂದಿದ್ದೀರಿ. ಮಂಡ್ಯದ ಪಿ.ಇ.ಎಸ್. ಕಾಲೇಜಿನಲ್ಲಿ ಇಲೆಕ್ಟ್ರಾನಿಕ್ಸ ವಿಭಾಗ ಪ್ರಾರಂಭಿಸಿದ ಪ್ರಪ್ರಥಮರು. ಬೆಂಗಳೂರು ಮತ್ತು ಪಾಂಡಿಚೇರಿ ತಾಂತ್ರಿಕ ಮಹಾವಿದ್ಯಾಲಯದ ಪ್ರಪ್ರಥಮ ಪ್ರಾಂಶುಪಾಲರು. ಕಿರಿಯ ವಯಸ್ಸಿನಲ್ಲೇ ತಮ್ಮ ಈ ಸಾಧನೆ ಸ್ತುತ್ಯಾರ್ಹ. ಕಂಪ್ಯೂಟರ ವಿಷಯದಲ್ಲಿ ಪ್ರಭುತ್ವ ಪಡೆದ ತಾವು ಸೇವೆ ಸಲ್ಲಿಸಿದ ಅನೇಕ ಎಡೆಗಳಲ್ಲಿ ಸುಧಾರಿತ ಉನ್ನತ ಪ್ರಯೋಗಶಾಲೆಗಳ ನಿರ್ಮಾಪಕರೂ ಆಗಿದ್ದೀರಿ.

ಉನ್ನತ ಶಿಕ್ಷಣ ಶಿಲ್ಪಿಗಳೇ,

ತಮ್ಮ ಜ್ಞಾನ ಸ್ವದೇಶಿಯರಿಗಷ್ಟೇ ಸೀಮಿತವಾಗಿಲ್ಲ. ಸಿಂಗಾಪುರ, ಮಲೇಶಿಯಾ, ಬ್ರಾಝಿಲ್, ಸೂರಿನಾಮ, ಗಯಾನಾ, ದಕ್ಷಿಣ ಅಮೇರಿಕೆ ಮುಂತಾದ ಅಂತರಾಷ್ಟ್ರೀಯ ಮಟ್ಟದ ವಿಶ್ವವಿದ್ಯಾಲಯಗಳಿಗೆ ತಾವು ಸಂದರ್ಶನ ಕೊಟ್ಟು ವಿಜ್ಞಾನ ಮತ್ತು ತಾಂತ್ರಿಕ ವಿಷಯಗಳ ಮೇಲೆ ಅತ್ಯುತ್ತಮ ಉಪನ್ಯಾಸ ನೀಡಿ ಜ್ಞಾನದಾಸೋಹಿ ಎನಿಸಿದ್ದೀರಿ. ಪ್ರಪಂಚ ಪರ್ಯಟನೆ ಮಾಡಿ ಹಲವಾರು ವಿಷಯಗಳನ್ನರಿತು ನುರಿತ ಶಿಕ್ಷಣ ಶಿಲ್ಪಿಗಳಾಗಿದ್ದೀರಿ.

ಕಲಾರಾಧಕರೇ,

ಶರಣ ಸಾಹಿತ್ಯಗ ಬಗೆಗೆ ಅಪಾರ ಒಲವು ತಮಗೆ. ತಮ್ಮ ಪ್ರವಚನಗಳ ಸಂಗ್ರಹ "ಮೆಲುಕು" ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಪ್ರಕಟಗೊಂಡು ಜ್ಞಾನ ಸೌರಭವನ್ನು ಎಲ್ಲೆಡೆಯಲ್ಲೂ ಸೂಸುತ್ತಿದೆ. ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ತಮ್ಮಿಂದ ಹೊಸದಾಗಿ ರೂಪಿತವಾಗಿರುವ "ವಿಶ್ವಚೇತನ ವೇದಿಕೆ"ಯು ಧಾರವಾಡದ ಸಾಂಸ್ಕೃತಿಕ ಬದುಕಿಗೆ ಹೊಸ ಚೇತನ ನೀಡಿದೆ.

ಕಂಪ್ಯೂಟರ್ ವಿಷಯದಲ್ಲಿ ೨೧ ಸಂಶೋಧನಾತ್ಮಕ ಬರಹಗಳನ್ನು ರಾಷ್ಟ್ರೀಯ, ಅಂತರಾಷ್ಟ್ರೀಯ ಪತ್ರಿಕೆಗಳಲ್ಲಿ ಪ್ರಕಟಿಸಿದ ಶ್ರೇಯಸ್ಸು ತಮ್ಮದು.

ಅತ್ಯುತ್ತಮ ಚರ್ಚಾಪಟು, ಅಭಿನಯ ಕಲೆಯಲ್ಲಿ ಕರಗತರೂ ಹೌದು. ಕಲೆಯಿಂದ ಕೂಡಿದುದು ಎಲ್ಲಿಯೇ ಇರಲಿ, ಯಾರಲ್ಲಿಯೇ ಇರಲಿ ಗೌರವಿಸುವ ಗುಣ ತಮ್ಮದು. ಸಾಹಿತ್ಯ ವಿಜ್ಞಾನಗಳೆರಡರ ಸುಂದರ ಸಂಗಮವಾಗಿದ್ದೀರಿ.

ನ್ಯಾಯನಿಷ್ಠುರರೇ,

ಅನಿಷ್ಟವಾದುದನ್ನು ಅಳಿಸಿ ಸಾರಸ್ವಲೋಕದಲ್ಲಿ ಶುಭವನ್ನು ತರಲು ಕಂಕಣ ಕಟ್ಟಿದ ಧೀಮಂತರು, ಸೋಲರಿಯದ ವೀರರು, ಗುರುತರ ಹೊಣೆಯನ್ನು ಕರ್ತವ್ಯನಿಷ್ಠರಾಗಿ, ಸಮಯ ನಿಷ್ಠರಾಗಿ ನಿರ್ವಹಿಸುತ್ತಿರುವಿರಿ. ನ್ಯಾಯನಿಷ್ಠುರರೇ ವಿನಃ ದಾಕ್ಷಿಣ್ಯಪರರಲ್ಲ. ಇದರಿಂದ ವಿರೋಧಿಗಳ ವಿರೋಧವನ್ನು ಎದುರಿಸುವಿರಿ. ಈ ಹೋರಾಟದಲ್ಲೇ ತಮ್ಮ ಗೆಲುವು ಅಡಗಿದೆ. ಇದು ತಮ್ಮ ಗೆಲುವಷ್ಟೇ ಅಲ್ಲ, ಕನ್ನಡ ನಾಡಿನ ಶೈಕ್ಷಣಿಕ ರಂಗದ ಗೆಲವು, ಸರಸ್ವತಿಯ ಗೆಲವು.

ರಾಷ್ಟ್ರಾಭಿಮಾನಿಗಳೇ,

ರಾಷ್ಟ್ರದ ನಿಜವಾದ ಸಂಪತ್ತು ಅಲ್ಲಿಯ ಗಿರಿ, ನದಿ, ಖನಿಜ, ಕಟ್ಟಡಗಳಲ್ಲ; ಅಲ್ಲಿ ವಾಸಿಸುವ ಯುವಜನ ಸಂಪತ್ತು. ಅಸಂಖ್ಯಾತ ಯುವಕರನ್ನು ತ್ರಿಕರಣ ಶುದ್ಧಿಯಿಂದ ಶಿಕ್ಷಣದ ಮೂಲಕ ಯೋಗ್ಯ ವ್ಯಕ್ತಿಯನ್ನಾಗಿ ರೂಪಿಸುತ್ತಿರುವುದು ರಾಷ್ಟ್ರಾಭಿಮಾನವನ್ನು ಎತ್ತಿ ತೋರಿಸುತ್ತದೆ.

ಕರ್ಮಯೋಗಿ ದಿ. ಡಾ. ಡಿ. ಸಿ. ಪಾವಟೆಯವರ ಸ್ಫೂರ್ತಿ, ಪ್ರೇರಣೆಯ ಆಶ್ರಯದಲ್ಲಿ ಈ ವಿಶ್ವವಿದ್ಯಾಲಯವನ್ನು ವಿಶ್ವದ ಗಮನ ಸೆಳೆಯುವಂತೆ ಮಾಡಬೇಕೆಂಬ ಸದಾಶಯ ಹೊತ್ತಿರುವ ತಾವು ನಿರಂತರ ಪರಿಶ್ರಮ ಪಡುತ್ತಿರುವ ಅರಿವು ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲರಿಗೂ ಇದೆ. ಅಚ್ಚುಕಟ್ಟಿನಿಂದ ಶಿಕ್ಷಣದ ಅಭಿವೃದ್ಧಿಗೆ ಹೋರಾಡುತ್ತಿರುವ ಅನುಪಮರೂ ಅನುಕರಣೀಯರೂ ಆದ ತಮಗೆ ಅನಂತಾನಂತ ಅಭಿವಂದನೆಗಳು.

ಭಾಗ್ಯೋದಯರೇ,

ಶಿಕ್ಷಣ ಪ್ರಸಾರದ ಕಾಯಕವನ್ನೇ ಪೂಜೆಯಾಗಿಸಿ ಹಸನ್ಮುಖಿಗಳಾಗಿ ಅವಿಶ್ರಾಂತ ಶ್ರಮಿಸುತ್ತಿರುವ ತಮಗೆ ಆಯುರಾರೋಗ್ಯ ಭಾಗ್ಯವನ್ನು, ಶ್ರೇಯೋಭಿವೃದ್ಧಿಯನ್ನು ಮತ್ತು ಮನದಾಸೆಗಳನ್ನೆಲ್ಲವನ್ನು ದಯಾಘನವಾದ ಕರ್ತೃ ಜಗದ್ಗುರು ಶ್ರೀ ಗುರುಸಿದ್ಧೇಶ್ವರನು ಕರುಣಿಸಲೆಂದು ನಮ್ಮ ಮಹಾವಿದ್ಯಾಲಯದ ಪರವಾಗಿ ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತ ಈ ಅಭಿನಂದನಾ ಪತ್ರವನ್ನು ತಮಗೆ ಸಮರ್ಪಿಸುತ್ತಿದ್ದೇವೆ.

ಸತ್ಯಂ ಶಿವಂ ಸುಂದರಂ

ಮಹಾವಿದ್ಯಾಲಯದ ಸಮಸ್ತ ಶಿಕ್ಷಕ,
ಶಿಕ್ಷಕೇತರ ಸಿಬ್ಬಂದಿ ಹಾಗೂ
ವಿದ್ಯಾರ್ಥಿ ವೃಂದ

ಪ್ರೊ. (ಶ್ರೀಮತಿ) ಹೆಚ್.ಕೆ. ಪಾರ್ವತಮ್ಮ
ಪ್ರಾಂಶುಪಾಲರು

ಕರ್ನಾಟಕ ಪ್ರಗತಿಶೀಲ ಶಿಕ್ಷಣ ಸಂಸ್ಥೆ, ಧಾರವಾಡ

ಸನ್ಮಾನ್ಯ ಡಾ. ಎಸ್. ರಾಮೇಗೌಡರು

ಕುಲಪತಿ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಅವರಿಗೆ
೧೯೯೩ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರೆತ ಸಂದರ್ಭದಲ್ಲಿ ಅರ್ಪಿಸಿದ

ಸನ್ಮಾನ ಪತ್ರ

ಇಂದಿನ ಈ ಸುಂದರ ಸಂಜೆಯ ಆತ್ಮೀಯ ಸರಳ ಸಮಾರಂಭದಲ್ಲಿ ಸನ್ಮಾನಿತರಾಗುತ್ತಿರುವ ಕರ್ನಾಟಕ ವಿಶ್ವವಿದ್ಯಾಲಯದ ಮೆಚ್ಚಿನ, ಸರಳ, ಸಜ್ಜನಿಕೆಯ ಪ್ರತಿರೂಪವಾಗಿರುವ ಡಾ. ಎಸ್. ರಾಮೇಗೌಡ ಅವರೆ, ವೇದಿಕೆಯ ಮೇಲೆ ಆಸೀನರಾಗಿರುವ ಗಣ್ಯರೇ, ಆಮಂತ್ರಿತ ಗಣ್ಯ ಅತಿಥಿಗಳೆ, ಪ್ರಾಧ್ಯಾಪಕವರ್ಗವೆ, ವಿದ್ಯಾರ್ಥಿ, ವಿದ್ಯಾರ್ಥಿನಿಯರೆ ಹಾಗೂ ಪತ್ರಿಕಾ ಪ್ರತಿನಿಧಿಗಳೆ,

ಈ ಕಿರುಸಂಸ್ಥೆಗೆ ದಯಮಾಡಿಸಿರುವ ನಮ್ಮ ನೆಚ್ಚಿನ ಕುಲಪತಿಗಳನ್ನು ಹಾಗೂ ತಮ್ಮೆಲ್ಲರನ್ನು ಆತ್ಮೀಯವಾಗಿ ಸ್ವಾಗತಿಸುತ್ತ ಸನ್ಮಾನ್ಯ ಡಾ. ರಾಮೇಗೌಡರಿಗೆ ಈ ಸನ್ಮಾನ ಪತ್ರವನ್ನು ಈ ಸಂಸ್ಥೆಯ ಹಾಗೂ ತಮ್ಮೆಲ್ಲರ ಪರವಾಗಿ ಅರ್ಪಿಸಲು ಅನುಮತಿ ಕೋರುತ್ತೇನೆ.

ಮಾನ್ಯ ಕುಲಪತಿಗಳ ಪರಿಚಯ ನಾಡಿನುದ್ದಕ್ಕೂ ಸುಪರಿಚಿತವಾಗಿದ್ದರೂ, ಸಭಾಮರ್ಯಾದೆಗನುಸಾರವಾಗಿ ಅವರ ಕಿರುಪರಿಚಯವನ್ನು ತಮ್ಮ ಮುಂದಿಡಲು ಅತಿ ಆನಂದ ಹಾಗೂ ಅಭಿಮಾನವೆನಿಸುತ್ತದೆ.

ಸನ್ಮಾನ್ಯರೇ,

ಮೈಸೂರು ಮಲ್ಲಿಗೆ ಸುವಾಸನೆಯನ್ನೂ ಸಂಸ್ಕೃತಿಯ ಹಿರಿಮೆಯನ್ನೂ ಶತ ಶತಮಾನಗಳಿಂದ ಬೆಳೆಸಿಕೊಂಡು ಉಳಿಸಿಕೊಂಡು ಬಂದಿದೆ. ಅಂಥ ಮೈಸೂರು ಜಿಲ್ಲೆಯ ಗ್ರಾಮ ಹೊಂಡರಬಾಳು ತಮ್ಮ ಜನ್ಮ ಸ್ಥಳ. ಶತಮಾನಗಳಿಂದ ಕಡೆಗಣಿಸಲ್ಪಟ್ಟ ರೈತ ಕುಟುಂಬದಲ್ಲಿ ಹುಟ್ಟಿದಿರಿ. ೧೯೩೯ನೇ ಇಸವಿ ಜನೇವರಿ ಹದಿನಾಲ್ಕು ಮಕರ ಸಂಕ್ರಾಂತಿಯ ಪುಣ್ಯ ದಿನದಂದು, ರವಿ ಮಕರರಾಶಿಗೆ ಪ್ರವೇಶ ಮಾಡಿದ ಉತ್ತರಾಯಣದ ದಿನ ತಮ್ಮ ಜನ್ಮ ದಿನ. ಬಾಲ್ಯದ ಹಳ್ಳಿಗಾಡಿನ ಜನಜೀವನ, ಆ ಮಣ್ಣಿನ ವಾಸನೆ, ತಮ್ಮ ಜೀವನದಲ್ಲಿ ಇನ್ನೂ ಅಚ್ಚಳಿಯದೆ ನಿಂತಿದೆ. ಮಾಧ್ಯಮಿಕ ಹಾಗೂ ಪದವಿಪೂರ್ವ ಶಿಕ್ಷಣವನ್ನು ಕೊಳ್ಳೆಗಾಲ ಹಾಗೂ ಮೈಸೂರಲ್ಲಿ ಪಡೆದು, ಬೆಂಗಳೂರು ವಿಶ್ವವಿದ್ಯಾಲಯದಿಂದ ವಿದ್ಯುಚ್ಛಕ್ತಿ ವಿಷಯದಲ್ಲಿ ಅಭಿಯಂತರ ಪದವಿ ಪಡೆದಿರಿ. ಮುಂದೆ ವಾಷಿಂಗ್ಟನ್ ಪ್ರಾಂತೀಯ ವಿಶ್ವವಿದ್ಯಾಲಯದ ಗೌರವಾನ್ವಿತ ಪ್ರಖ್ಯಾತ ಪ್ರಾಧ್ಯಾಪಕರಾದ ಸಾಬ್ನಿಯವರ ಮಾರ್ಗದರ್ಶನದಲ್ಲಿ ಸಂಶೋಧನೆ ಕೈಕೊಂಡು ಡಾಕ್ಟರೇಟ ಪದವಿ ಪಡೆದುಕೊಂಡಿರಿ.

ವರ್ಣಮಯ ವ್ಯಕ್ತಿತ್ವವನ್ನು ಪಡೆದ ನಿಮ್ಮ ಬಾಳಿನ ಮೆಟ್ಟಿಲುಗಳು ಅನೇಕ. ಕಾರ್ಯವ್ಯಾಪ್ತಿ ವಿಶಾಲ, ಅನುಭವ ಅಪಾರ. ನಾಡಿಗೆ ನೀಡಿದ ಕೊಡುಗೆ ಹಿರಿದು. ಹೀಗಿರುವಾಗ ಈ ಕಿರುಸನ್ಮಾನ ಪತ್ರದಲ್ಲಿ ಈ ಎಲ್ಲ ಸಾಧನೆಗಳನ್ನು ಉಲ್ಲೇಖಿಸಲು ಸಾಧ್ಯವಿಲ್ಲ.

ಚಿನ್ನದ ನಾಡಾದ ಕೋಲಾರದಲ್ಲಿ ಕಿರು ಅಭಿಯಂತರರಾಗಿ ಬಾಳನ್ನು ಆರಂಭಿಸಿದ ನೀವು ಶಿಕ್ಷಣ ರಂಗದತ್ತ ಹೊರಳಿದ್ದು ಈ ನಾಡಿನ ಪುಣ್ಯ. ಮಂಡ್ಯ, ಮೈಸೂರು, ವೆಸ್ಟ ಇಂಡೀಜದಲ್ಲಿ ಪ್ರಾಧ್ಯಾಪಕರಾಗಿ, ಬೆಂಗಳೂರ ತಾಂತ್ರಿಕ ಸಂಸ್ಥೆಯ ಸ್ಥಾಪಕ ಪ್ರಾಚಾರ್ಯರಾಗಿ, ಕೇಂದ್ರ ಸರ್ಕಾರದ ಪ್ರತಿಷ್ಠಿತ ಪಾಂಡಿಚೇರಿ ತಾಂತ್ರಿಕ ಮಹಾವಿದ್ಯಾಲಯದ ಸಂಸ್ಥಾಪಕ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿದ್ದೀರಿ. ಅಲ್ಲಿಯ ಜನ ಇಂದಿಗೂ ಕೃತಜ್ಞತೆಯಿಂದ ನಿಮ್ಮನ್ನು ನೆನೆಯುತ್ತಿದ್ದಾರೆ. ಪಾಂಡಿಚೇರಿಯಲ್ಲಿರುವಾಗಲೇ ಕರ್ನಾಟಕ ಸರ್ಕಾರ ನಿಮ್ಮ ಸೇವೆಯನ್ನು ಗುರುತಿಸಿ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿ ಕರೆತಂದಿತು. ಯಶಸ್ವಿಯಾಗಿ ಮೊದಲಿನ ಮೂರು ವರ್ಷದ ಅವಧಿಯನ್ನು ಮುಗಿಸಿದ ನಂತರ ಪುನಃ ಎರಡನೆಯ ಅವಧಿಗೆ ಮೂರು ವರ್ಷ ನೇಮಕಗೊಂಡದ್ದು ಈ ನಿಮ್ಮ ದಕ್ಷತೆ, ಪ್ರಾಮಾಣಿಕತೆ, ಹಾಗೂ ಜನಪ್ರಿಯತೆಗೆ ಸಾಕ್ಷಿಯಾಗಿದೆ. ನೀವು ನಮ್ಮಲ್ಲೊಬ್ಬರಾಗಿದ್ದೀರಿ. ನಿಮ್ಮ ಬಾಳು ಹಾಗೂ ಕೀರ್ತಿಯನ್ನು ನಮ್ಮೊಡನೆ ಹಂಚಿಕೊಂಡಿದ್ದೀರಿ.

ಶಿಕ್ಷಣ ಪ್ರೇಮಿಗಳೆ,

ಈ ಶಿಕ್ಷಣ ರಂಗದಲ್ಲಿ ಸಲ್ಲಿಸಿರುವ ನಿಮ್ಮ ಕೊಡುಗೆಯ ಕೆಲವು ಮಜಲುಗಳನ್ನು ಇಲ್ಲಿ ಹೇಳಬಯಸುತ್ತೇನೆ. ಕೇವಲ ಪುಸ್ತಕ ವಿದ್ಯೆಗಿಂತ ಕರಕುಶಲತೆಗೆ ಪ್ರಾಧಾನ್ಯ ನೀಡುವ ಎರಡು ವರ್ಷದ ತಾಂತ್ರಿಕ ಶಿಕ್ಷಣ ಪದ್ಧತಿಯ ರೂವಾರಿಗಳು ನೀವು. ಕಲಕತ್ತೆಯ ಬಂಗಾಲ ತಾಂತ್ರಿಕ ಶಿಕ್ಷಣ ಸಂಸ್ಥೆಯನ್ನು ವಿಶ್ವವಿದ್ಯಾಲಯದ ಮಟ್ಟಕ್ಕೆ ಎತ್ತರಿಸಲು ಸಾಧ್ಯವೇ ಎಂಬುದನ್ನು ಕಂಡು ಹಿಡಿಯಲು ನೇಮಿತವಾಗಿರುವ ತಜ್ಞ ಸಮಿತಿಯ ಸದಸ್ಯರಾಗಿದ್ದೀರಿ. ಕರ್ನಾಟಕದಲ್ಲಿ ತಾಂತ್ರಿಕ ಶಿಕ್ಷಣ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಅವಶ್ಯವೆ ಎಂಬ ತಜ್ಞ ಸಮಿತಿಯ ಸದಸ್ಯರಾಗಿರುವಿರಿ. ಇವಲ್ಲದೆ ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಆಯ್ಕೆ ಮಾಡುವ ಸಂದರ್ಶಕ, ಪ್ರಾಧ್ಯಾಪಕರ ಆಯ್ಕೆ ಸಮಿತಿಯ ಸದಸ್ಯರಾಗಿ, ಹೈದರಾಬಾದ ತೆಲಗು ವಿಶ್ವವಿದ್ಯಾಲಯದ ಸದಸ್ಯರಾಗಿ, ಆಡಳಿತ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ನಮ್ಮ ವಿದ್ಯಾರ್ಥಿಗಳು ಏಕೆ ಹೆಚ್ಚಾಗಿ ಉತ್ತೀರ್ಣರಾಗುತ್ತಿಲ್ಲವೆಂಬ ಕಾರಣ ಕಂಡು ಹಿಡಿಯಲು ನೇಮಕವಾಗಿರುವ ಸಮಿತಿಯ ಸದಸ್ಯರಾಗಿ, ಹಿಂದುಳಿದ ವಿದ್ಯಾರ್ಥಿಗಳಿಗೆ ಉಚ್ಚವಿದ್ಯಾರ್ಥಿವೇತನ ನೀಡುವ ಸಮಿತಿಯ ಸದಸ್ಯರಾಗಿ, ಇತ್ತೀಚೆಗೆ ವಿಶ್ವವಿದ್ಯಾಲಯ ಧನಸಹಾಯ ಆಯೋಗದವರು ಪರದೇಶದಲ್ಲಿ ಶಿಕ್ಷಣ ಪಡೆಯಲು ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ಸಮಿತಿಯ ಸದಸ್ಯರಾಗಿ ಹೊಣೆಗಾರಿಕೆಯ ಕಾರ್ಯ ನಿರ್ವಹಿಸುತ್ತಿದ್ದೀರಿ. ಒಟ್ಟಾರೆ ಹದಿನೆಂಟು ಪ್ರತಿಷ್ಠಿತ ಸಂಸ್ಥೆಗಳಲ್ಲಿ ತಮ್ಮ ಅನುಭವವನ್ನು ಧಾರೆಯೆರೆಯುತ್ತಿದ್ದೀರಿ.

ಇದಲ್ಲದೆ ದೇಶ ವಿದೇಶಗಳ ವಿಶ್ವವಿದ್ಯಾಲಯಗಳಲ್ಲಿ ಸುಮಾರು ಹದಿನಾಲ್ಕು ಸಮಿತಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದೀರಿ. ಸುಮಾರು ಇಪ್ಪತ್ತೊಂದು ಸಂಶೋಧನಾತ್ಮಕ ವಿದ್ವತ್ ಪೂರ್ಣ ಸ್ವತಂತ್ರ ಪ್ರಬಂಧಗಳನ್ನು ಮಂಡಿಸಿ ಪಂಡಿತರ ಮೆಚ್ಚುಗೆಗೆ ಪಾತ್ರರಾಗಿದ್ದೀರಿ. ವಿಶ್ವದ ಅನೇಕ ಅಂದರೆ, ಅಮೇರಿಕಾ, ಇಂಗ್ಲಂಡ, ಸಿಂಗಾಪುರ, ಮಲೇಶಿಯಾ, ವೆಸ್ಟ್ಇಂಡೀಜ, ಬ್ರಾಝಿಲ, ಗಯಾನಾ ವಿಶ್ವವಿದ್ಯಾಲಯಗಳಲ್ಲಿ ಹಾಗೂ ಅನೇಕ ದೇಶೀಯ ವಿಶ್ವವಿದ್ಯಾಲಯಗಳಲ್ಲಿ ತಾಂತ್ರಿಕ ವಿಷಯಗಳ ಮೇಲೆ ವ್ಯಾಖ್ಯಾನ ನೀಡಿದ್ದೀರಿ. ಆಕಾಶವಾಣಿ, ದೂರದರ್ಶನದಲ್ಲಿ ಮಹತ್ವಪೂರ್ಣ ವ್ಯಾಖ್ಯಾನ ನೀಡಿದ್ದೀರಿ. ಅಷ್ಟೇ ಏಕೆ ಇಡೀ ಪ್ರಪಂಚವನ್ನೆ ಸುತ್ತಿ ನಿಮ್ಮ ಜ್ಞಾನಭಂಡಾರವನ್ನು ವಿಸ್ತಾರ ಮಾಡಿಕೊಂಡಿದ್ದೀರಿ. ಅಲ್ಲದೆ ಅನೇಕ ಭಾಷೆಗಳಲ್ಲಿ ಪ್ರಸಿದ್ಧ ವಾಗ್ಮಿಗಳಾಗಿದ್ದೀರಿ.

ಸಾಂಸ್ಕೃತಿಕ ರಂಗದಲ್ಲಿ ನಿಮ್ಮ ಕೊಡುಗೆ ಉಲ್ಲೇಖನೀಯ. ಕನ್ನಡ, ಆಂಗ್ಲ ಭಾಷೆಗಳಲ್ಲಿ ನಾಟಕಗಳನ್ನು ನಿರ್ದೇಶಿಸಿದ್ದೀರಿ. ಅಲ್ಲದೆ ಕೆಲವೊಮ್ಮೆ ಅಭಿನಯಿಸಿದ್ದೀರಿ. ಇವುಗಳಲ್ಲಿ "ಅಂಗೂಲಿ ಮಾಲಾ" ಎಂಬ ನಾಟಕವನ್ನು ಉದಾಹರಿಸಬಹುದು.

ಬಡವರ ಬಂಧುಗಳೆ,

ನಿಮ್ಮ ಈ ಎಲ್ಲ ಸಾಧನೆಗಳಿಗಿಂತ, ಮಣ್ಣಿನ ಮಕ್ಕಳು, ಅದರಲ್ಲೂ ತುಳಿತಕ್ಕೆ ಒಳಗಾದ ಜನಾಂಗ, ಬಡವರ್ಗದಲ್ಲಿರುವ ನಿಮ್ಮ ಉದಾರ ಮನೋಭಾವ ಶ್ಲಾಘನೀಯ. ನೊಂದವರಿಗಾಗಿ ನಿಮ್ಮ ಬಾಗಿಲು ಯಾವಾಗಲೂ ತೆರೆದಿದೆ. ಮೂರು ವರ್ಷದ ನಿಮ್ಮ ಸೇವಾ ಅವಧಿಯ ಸಾಧನೆಯ ಪಟ್ಟಿ ಬಹು ದೊಡ್ಡದು. ಯಾವದೇ ಸಮಸ್ಯೆಯನ್ನು ಸೃಷ್ಟಿಸದೆ, ಯಾವದೇ ಪಕ್ಷಕ್ಕಂಟಿಕೊಳ್ಳದೆ, ಕಾಲ್ತೊಡಕಾಗಿರುವ ಅನೇಕ ಸೂಕ್ಷ್ಮ ವಿಷಯಗಳನ್ನು ನಿಷ್ಣಾತ ಶಸ್ತ್ರ ಚಿಕಿತ್ಸಕನಂತೆ ಬಗೆಹರಿಸುತ್ತಿರುವ ನಿಮ್ಮ ಜಾಣ್ಮೆ ಶ್ಲಾಘನೀಯ. ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಪದವಿ ಹೂವಿನ ಹಾಸಿಗೆಯೇನೂ ಅಲ್ಲ. ಹಾಗಿದ್ದರೂ ಮೂರುವರ್ಷದ ಅವಧಿಯಲ್ಲಿ ಇಲ್ಲಿ ಶಾಂತಿ, ಸುವ್ಯವಸ್ಥೆ, ಆಡಳಿತಾತ್ಮಕ ಬಿಗಿ, ಶೈಕ್ಷಣಿಕ ಉನ್ನತಿ ಸಾಧಿಸಿ ಅದರ ಕೀರ್ತಿಯನ್ನು ಹೆಚ್ಚಿಸಿದ್ದೀರಿ. ಕೋಟಿಗಟ್ಟಲೆ ಹಣ ದೊರಕಿಸಿ ಆರ್ಥಿಕ ಸುಭದ್ರತೆ ತಂದಿದ್ದೀರಿ. ಬೆಳಗಾವಿಯ ಸ್ನಾತಕೋತ್ತರ ವಿದ್ಯಾಸಂಸ್ಥೆಯ ಕಾಯಕಲ್ಪ ಮಾಡಿದ್ದೀರಿ.

ರಾಜ್ಯೋತ್ಸವ ಪ್ರಶಸ್ತಿ ವಿಜೇತರೆ,

ನಿಮ್ಮ ಶಿಕ್ಷಣ ರಂಗದ ಈ ಎಲ್ಲ ಸೇವೆಯನ್ನು ಗುರುತಿಸಿ, ಶಿಕ್ಷಣ ತಜ್ಞರೆಂದು ಕರ್ನಾಟಕ ಸರ್ಕಾರದವರು ೧೯೯೩ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ತಮಗೆ ದಯಪಾಲಿಸಿ ತನ್ನನ್ನು ತಾನು ಗೌರವಿಸಿಕೊಂಡಿದೆ. ನಾವೀಗ ತಮಗೆ ಅಭಿನಂದನೆ ಸಲ್ಲಿಸುತ್ತೇವೆ.

ಅಣ್ಣ ಬಸವಣ್ಣನವರು "ಎನ್ನವರೆನ್ನ ಹೊಗಳಿ ಹೊಗಳಿ ಹೊನ್ನ ಶೂಲದಲಿಕ್ಕಿದರಯ್ಯ" ಎಂದು ಎಚ್ಚರಿಸಿದ್ದಾರೆ. ಈ ಎಚ್ಚರಿಕೆಯನ್ನು ಮೀರದಂತೆ ನಾವಿಲ್ಲಿ ತಮ್ಮ ಸೇವೆಯ ಕಿರು ಪರಿಚಯವನ್ನು ಈ ಸಭೆಯ ಮುಂದೆ ಸಾದರ ಪಡಿಸಿದ್ದೇವೆ.

ತಮ್ಮ ವ್ಯಕ್ತಿತ್ವವನ್ನು ಸಂಕ್ಷಿಪ್ತವಾಗಿ ಚಿತ್ರಿಸಲು ಪಲ್ಮಿಡಿಯ ಶಾಸನದ ಕೆಲವು ಸಾಲುಗಳನ್ನು ಸ್ವಲ್ಪ ಬದಲಾವಣೆಯೊಂದಿಗೆ ಇಲ್ಲಿ ಉದ್ಧರಿಸುತ್ತೇವೆ. "ಸಾಧುಂಗೆ ಸಾಧು ಮಾಧುರ್ಯಂಗೆ ಮಾಧುರ್ಯಂ ಬಾಧಿಪ್ಪ ಕಲಿಗೆ ಕಲಿಯಿೀತನ್ ಕಲಿಯುಗ ವಿಪರೀತನ್ ಪೆರರಾರುಂ ಅಲ್ಲ ಡಾ. ರಾಮೇಗೌಡಂ"

ಕೊನೆಯದಾಗಿ ಈ ಸಂಸ್ಥೆಯ ಆರಾಧ್ಯ ದೇವತೆ ಕರವೀರಪುರದ ಮಹಾಲಕ್ಷ್ಮಿ ತಮಗೆ ಇನ್ನೂ ಹೆಚ್ಚಿನ ಶ್ರೇಯಾಭಿವೃದ್ಧಿಯನ್ನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಭದ್ರಂ ಶುಭಂ ಮಂಗಳಮ್

ಧಾರವಾಡ — ತಮ್ಮ ಶ್ರೇಯೋಭಿಲಾಷಿಗಳಾದ

೧೫.೧೨.೯೩ — ಅಧ್ಯಕ್ಷ, ಸದಸ್ಯರು, ಪ್ರಾಧ್ಯಾಪಕವರ್ಗ ಹಾಗೂ ವಿದ್ಯಾರ್ಥಿಗಳು

ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ೧೯೯೪ರ ಸಾಲಿನ ಸ್ವಾಮಿ ಪ್ರಣವಾನಂದ ಪ್ರಶಸ್ತಿಯನ್ನು ಪಡೆದ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್.ರಾಮೇಗೌಡರಿಗೆ ನ್ಯಾಯಮೂರ್ತಿ ಶ್ರೀ ಎ. ಜೆ. ಸದಾಶಿವ ಅವರ ಸಮ್ಮುಖದಲ್ಲಿ ಮಂಡ್ಯದ ಮಿತ್ರರು ಮತ್ತು ಅಭಿಮಾನಿಗಳು ಅರ್ಪಿಸಿದ

ಮಾನ ಪತ್ರ

ಸನ್ಮಾನ್ಯ ಡಾ. ಎಸ್. ರಾಮೇಗೌಡರೆ,

ಶಿಕ್ಷಣದ ಅದರಲ್ಲೂ ವಿಜ್ಞಾನ ಮತ್ತು ತಾಂತ್ರಿಕ ಶಿಕ್ಷಣದ ಕ್ಷೇತ್ರದಲ್ಲಿ ತಾವೊಂದು ಅದ್ಭುತವೆಂದರೆ ಅತ್ಯುಕ್ತಿಯಾಗಲಾರದು. ತಮ್ಮ ಸಿದ್ಧಿ, ಸಾಧನೆಗಳು ಅಸಂಖ್ಯ; ಅವುಗಳಲ್ಲಿ ಕೆಲವನ್ನು ಮಾತ್ರ ಇಲ್ಲಿ ಸ್ಮರಿಸಬಯಸುತ್ತೇವೆ.

ತಾವು ಹಳ್ಳಿಯಲ್ಲಿ ಹುಟ್ಟಿ ದಿಲ್ಲಿಯ ಗೌರವಕ್ಕೆ ಪಾತ್ರವಾದ ವಿರಳ ಚೇತನ. ಶ್ರೇಷ್ಠ ಶಿಕ್ಷಣತಜ್ಞರಾಗಿ, ಸಮರ್ಥ ಆಡಳಿತಗಾರರಾಗಿ, ಅನೇಕ ಸಂಸ್ಥೆಗಳ ನಿರ್ಮಾಪಕರಾಗಿ, ಉಜ್ವಲ ವಾಗ್ಮಿಯಾಗಿ, ಲೇಖಕರಾಗಿ ತಾವು ಬಹುಮುಖ ಪ್ರತಿಭಾನ್ವಿತ ವ್ಯಕ್ತಿತ್ವವನ್ನು ಪ್ರಕಟಿಸಿದ್ದೀರಿ.

ತಾವು ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕಿನ ಹೊಂಡರಬಾಳಿನ ಕೃಷಿಕ ಕುಟುಂಬವೊಂದರಲ್ಲಿ ೧೪.೧.೧೯೩೩ರಂದು ಜನಿಸಿದಿರಿ. ಪ್ರೌಢಶಾಲಾ ಶಿಕ್ಷಣವನ್ನು ಕೊಳ್ಳೇಗಾಲದಲ್ಲಿ ಮುಗಿಸಿ, ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನಲ್ಲಿ ಇಂಟರ್‌ಮೀಡಿಯಟ್ ವ್ಯಾಸಂಗ ಮಾಡಿ, ಅನಂತರ ಬೆಂಗಳೂರಿನ ವಿಶ್ವವಿದ್ಯಾನಿಲಯ ಎಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಿಕಲ್ ಎಂಜಿನಿಯರಿಂಗ್‌ನಲ್ಲಿ ಬಿ.ಇ. ಪದವಿ ಪಡೆದಿರಿ. ವೆಸ್ಟ್ ಇಂಡೀಸ್ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದಾಗ, ಪಿಎಚ್. ಡಿ. ಪದವಿಗಾಗಿ ಸಂಶೋಧನೆ ಕೈಕೊಂಡು, ಅನಂತರ ಡಾಕ್ಟರೇಟ್ ಪಡೆದಿರಿ.

ಕೋಲಾರದಲ್ಲಿ ಜೂನಿಯರ್ ಎಂಜಿನಿಯರ್ ಆಗಿ ತಮ್ಮ ವೃತ್ತಿಜೀವನವನ್ನು ಪ್ರಾರಂಭಿಸಿದಿರಿ. ಅನಂತರ, ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್‌ನಲ್ಲಿ ಅಧ್ಯಾಪಕರಾಗಿ ಕೆಲಸ ಮಾಡಿ, ಅಲ್ಲಿ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಪ್ರಯೋಗಾಲಯವನ್ನು ಸ್ಥಾಪಿಸಿದಿರಿ. ಆಮೇಲೆ, ಮಂಡ್ಯದ ಪೀಪಲ್ಸ್ ಎಜುಕೇಷನ್ ಸೊಸೈಟಿಯ ಎಂಜಿನಿಯರಿಂಗ್ ಕಾಲೇಜಿನ ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ವಿಭಾಗದ ಮುಖ್ಯಸ್ಥರಾಗಿ, ಅಲ್ಲಿ ಎಲೆಕ್ಟ್ರಾನಿಕ್ಸ್, ಇನ್‌ಸ್ಟ್ರುಮೆಂಟೇಷನ್ ಮತ್ತು ಡಿಜಿಟಲ್ ಕಂಪ್ಯೂಟರ್ ಪ್ರಯೋಗಾಲಯವನ್ನು ಸ್ಥಾಪಿಸಿದಿರಿ. ಮುಂದೆ, ಬೆಂಗಳೂರು, ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಸ್ಥಾಪಕ ಪ್ರಾಚಾರ್ಯರಾಗಿ ಸೇವೆ ಸಲ್ಲಿಸಿ, ಅದನ್ನೊಂದು ಮಾದರಿ ಎಂಜಿನಿಯರಿಂಗ್ ಮತ್ತು ತಾಂತ್ರಿಕ ಸಂಸ್ಥೆಯನ್ನಾಗಿ ರೂಪಿಸಿದಿರಿ; ಅಲ್ಲಿ, ದೇಶದಲ್ಲೇ ಮೊದಲ ಬಾರಿಗೆ, ಕಂಪ್ಯೂಟರ್ ವಿಜ್ಞಾನದಲ್ಲಿ ಬ್ಯಾಚೆಲರ್ ಪದವಿ ಶಿಕ್ಷಣವನ್ನು ಆರಂಭಿಸಿದಿರಿ. ಅನಂತರ ಪಾಂಡಿಚೇರಿಗೆ ಹೋಗಿ, ಅಲ್ಲಿ ಕೇಂದ್ರ ಸರ್ಕಾರದ ಮತ್ತು ಪಾಂಡಿಚೇರಿ ಸರ್ಕಾರದ ಆಶ್ರಯದಲ್ಲಿ ಎಂಜಿನಿಯರಿಂಗ್ ಕಾಲೇಜೊಂದನ್ನು ಸ್ಥಾಪಿಸಿದಿರಿ;

ಅದೊಂದು ಅತ್ಯಾಧುನಿಕ ತಾಂತ್ರಿಕ ಶಿಕ್ಷಣ ಸಂಸ್ಥೆಯಾಗಿ ಪರಿಣಮಿಸಿರುವುದು ತಮ್ಮ ದೂರದೃಷ್ಟಿಗೆ ಮತ್ತು ದಕ್ಷತೆಗೆ ಹಿಡಿದ ದರ್ಪಣವಾಗಿದೆ.

ಮುಂದೆ ತಾವು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾಗಿ, ಅದಕ್ಕೆ ಅನೇಕ ನೂತನ ಆಯಾಮಗಳನ್ನು ಜೋಡಿಸಿದಿರಿ. ಎಂ.ಸಿ.ಎ. ವ್ಯಾಸಂಗ, ರೇಷ್ಮೆ ಕೃಷಿಗೆ ಸಂಬಂಧಿಸಿದಂತೆ ಎಂ. ಎಸ್. ತರಗತಿ, ಯೋಗಾಭ್ಯಾಸದಲ್ಲಿ ಸ್ನಾತಕೋತ್ತರ ವ್ಯಾಸಂಗ, ಮೈಕ್ರೋಎಲೆಕ್ಟ್ರಾನಿಕ್ಸ್ ಸಂಶೋಧನಾಕೇಂದ್ರ, ಪರಿಸರ ಸಂಶೋಧನಾ ಕೇಂದ್ರ, ಬೆಳಗಾವಿ ಸ್ನಾತಕೋತ್ತರ ಕೇಂದ್ರಕ್ಕೆ ಹೊಸ ಕಟ್ಟಡ, ಕಾರವಾರದಲ್ಲಿ ಸಾಗರ ಅಧ್ಯಯನ- ಮುಂತಾದವು ಅಲ್ಲಿ ತಮ್ಮ ಕಿರೀಟಕ್ಕೆ ಸೇರಿದ ಹೊಸ ಗರಿಗಳು. ಕುಲಪತಿಯಾಗಿ ತಾವು ಈಗ ದ್ವಿತೀಯ ಅವಧಿಯಲ್ಲಿದ್ದೀರಿ ಎಂಬುದೇ ತಮ್ಮ ಆಡಳಿತ ಕ್ಷಮತೆಗೆ ಅಸ್ಖಲಿತ ಸಾಕ್ಷಿ.

ತಾವು ಆರು ವರ್ಷ ಕಾಲ ಸ್ವತಂತ್ರವಾಗಿ ಸಂಶೋಧನೆಯಲ್ಲಿ ತೊಡಗಿ, ಹತ್ತೆಂಟು ಸಂಶೋಧನ ಲೇಖನಗಳನ್ನು ಹಲವಾರು ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ವಿದ್ವತ್ ಪತ್ರಿಕೆಗಳಲ್ಲಿ ಕಾಣಿಸಿದ್ದೀರಿ. ಅನೇಕ ಭಾರತೀಯ ಮತ್ತು ವಿದೇಶೀಯ ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ಸಂಸ್ಥೆಗಳಲ್ಲಿ ಪ್ರಗಲ್ಭವಾದ ಉಪನ್ಯಾಸಗಳನ್ನು ನೀಡಿದ್ದೀರಿ. ಅನೇಕ ಸಲ ವಿದೇಶಗಳಿಗೆ ಶೈಕ್ಷಣಿಕ ಪ್ರವಾಸ ಕೈಗೊಂಡಿದ್ದೀರಿ. ದೇಶದ ಒಳಗಿನ ಹಾಗೂ ಹೊರಗಿನ ವಿವಿಧ ಪ್ರತಿಷ್ಠಿತ ಸಮಿತಿಗಳ ಮತ್ತು ಮಂಡಲಿಗಳ ಅಧ್ಯಕ್ಷರಾಗಿ, ಸದಸ್ಯರಾಗಿ ಉತ್ತಮವಾದ ಕೆಲಸ ಮಾಡಿದ್ದೀರಿ.

ತಾವು ಆಕಾಶವಾಣಿ, ದೂರದರ್ಶನಗಳ ಭಾಷಣಗಳ ಮೂಲಕ ಮತ್ತು ವಿಶ್ವವಿದ್ಯಾನಿಲಯ ಪ್ರಚಾರೋಪನ್ಯಾಸಗಳ ಮೂಲಕ ಗ್ರಾಮೀಣ ಮಂದಿಯಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವ ಕಾರ್ಯ ಮಾಡಿರುವದು ಎತ್ತಿ ಹೇಳಬೇಕಾದ ಸಂಗತಿ. ವಿಜ್ಞಾನ, ತಂತ್ರಜ್ಞಾನಗಳನ್ನು ಕನ್ನಡದಲ್ಲಿ ಸುಲಭವಾಗಿ ಸಂವಹನಗೊಳಿಸಬಹುದು ಎಂಬುದಕ್ಕೆ ತಾವೊಂದು ಉತ್ಕೃಷ್ಟವಾದ ದೃಷ್ಟಾಂತ.

ತಾವು ವಿದ್ಯಾರ್ಥಿ ದಿಶೆಯಲ್ಲೆ, ಕನ್ನಡ ಇಂಗ್ಲೀಷ್ ಎರಡರಲ್ಲೂ ಅಸಾಮಾನ್ಯ ಚರ್ಚಾಪಟುವಾಗಿದ್ದು, ಬೆಂಗಳೂರಿನ ವಿಶ್ವವಿದ್ಯಾನಿಲಯ ಎಂಜಿನಿಯರಿಂಗ್ ಕಾಲೇಜಿಗೆ ೩೬ ಫಲಕಗಳನ್ನು ಗೆದ್ದುಕೊಟ್ಟಿರಿ! ನಾಟಕಗಳಲ್ಲಿ ಅಭಿನಯಿಸುವುದು ಮತ್ತು ನಾಟಕ ನಿರ್ದೇಶನ ಕೂಡ ತಮಗೆ ಇಷ್ಟವಾದ ವಿಷಯಗಳು. ಎನ್.ಸಿ.ಸಿ. ಅಧಿಕಾರಿ ಮತ್ತು ಮಂಡ್ಯದ ಲಯನ್ಸ್ ಕ್ಲಬ್ ಅಧ್ಯಕ್ಷರಾಗಿಯೂ ತಾವು ಸೇವೆ ಸಲ್ಲಿಸಿದ್ದೀರಿ.

ತಮ್ಮ ಭಾಷಣಗಳ ಸಂಪುಟಗಳು ಕನ್ನಡದಲ್ಲಿ 'ಮೆಲುಕು' ಎಂಬ ಹೆಸರಿನಲ್ಲಿ ಮೂರು, ಮತ್ತು ಇಂಗ್ಲಿಷಿನಲ್ಲಿ ಒಂದು ಪ್ರಕಟವಾಗಿದೆ. ಶಿಕ್ಷಣ, ಸಾಹಿತ್ಯ, ಸಂಸ್ಕೃತಿಗಳ ಮೇಲೆ ಅವು ಅಮೂಲ್ಯವಾದ ಬೆಳಕು ಬೀರುತ್ತವೆ.

ಕರ್ನಾಟಕ ಸರ್ಕಾರದ ೧೯೯೩ರ ರಾಜ್ಯೋತ್ಸವ ಪ್ರಶಸ್ತಿಯನ್ನು ಗಳಿಸಿದ ತಾವು, ವಿಶ್ವವಿದ್ಯಾನಿಲಯ ಧನಸಹಾಯ ಆಯೋಗದ ೧೯೯೪ರ ಸ್ವಾಮಿ ಪ್ರಣವಾನಂದ ಪ್ರಶಸ್ತಿಗೆ

ಭಾಜನರಾಗಿದ್ದೀರಿ. ಮಾನವಿಕ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ನೀಡಲಾಗುವ ಈ ಮಹತ್ವದ ಪ್ರಣವಾನಂದ ಪ್ರಶಸ್ತಿಯನ್ನು ಪಡೆದ ಪ್ರಥಮ ಕುಲಪತಿ ಮಾತ್ರವಲ್ಲ, ಪ್ರಥಮ ಕನ್ನಡಿಗ ತಾವು ಎನ್ನುವುದು ಇಡೀ ಕರ್ನಾಟಕಕ್ಕೇ ಅಭಿಮಾನಾಸ್ಪದವಾದ ವಿಚಾರ; ನಮ್ಮ ಹೆಮ್ಮೆಗಂತೂ ಪಾರವಿಲ್ಲ.

ತಮ್ಮದು ಉದಾತ್ತವಾದ ಆದರ್ಶಗಳಿಂದ ಕೂಡಿದ ಬದುಕು, ಸ್ನೇಹ ಸೌಜನ್ಯಪರವಾದ ಆಕರ್ಷಕ ವ್ಯಕ್ತಿತ್ವ ಎಂಬುದನ್ನು ಇಲ್ಲಿ ಉಲ್ಲೇಖಿಸಬೇಕು.

ಪ್ರಿಯ ಡಾ. ರಾಮೇಗೌಡರೆ,

ತಾವು ಹೀಗೆಯೆ ಊರ್ಧ್ವಮುಖವಾಗಿ ಶಿಖರದಿಂದ ಶಿಖರಕ್ಕೆ ಸಾಗುತ್ತೀರಿ, ತಮ್ಮ ಕೀರ್ತಿ ದಿಗಂತ ವಿಶ್ರಾಂತವಾಗಲಿ, ತಮ್ಮ ಮೇಧಾಶಕ್ತಿ ಪ್ರತಿಭೆಗಳಿಂದ ರಾಷ್ಟ್ರಕ್ಕೆ ಇತೋಪ್ಯತಿಶಯವಾದ ಲಾಭವಾಗಲಿ, ತಮಗೂ ತಮ್ಮ ಕುಟುಂಬ ವರ್ಗಕ್ಕೂ ದೇವರು ಸಕಲ ಶುಭಗಳನ್ನೂ ಅನುಗ್ರಹಿಸಲಿ ಎಂದು ಹಾರ್ದಿಕವಾಗಿ ಹಾರೈಸುತ್ತ, ತಮ್ಮನ್ನು ಪ್ರೀತ್ಯಾದರಗಳಿಂದ ಅಭಿನಂದಿಸುತ್ತೇವೆ.

೩೦.೭.೧೯೯೫ ಮಿತ್ರರು ಮತ್ತು ಅಭಿಮಾನಿಗಳು

ಡಾ. ಎಸ್. ರಾಮೇಗೌಡ ಸನ್ಮಾನ ಸಮಿತಿ, ಮಂಡ್ಯ.

ಬನವಾಸಿ ವಲಯ ಅಭ್ಯುದಯ ಸಮಿತಿ ಬನವಾಸಿ

ಮಾನ್ಯ ಡಾ. ಎಸ್. ರಾಮೇಗೌಡರು

ಕುಲಪತಿಗಳು
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ.

ಸನ್ಮಾನ್ಯರೇ,

ಬಲಿಷ್ಠ ಪಲ್ಲವರಿಂದ ಅವಮಾನಿತವಾಗಿ, ಸ್ವಾಭಿಮಾನದಿಂದ ಸಿಡಿದೆದ್ದು ಕನ್ನಡಿಗರೆಲ್ಲರಲ್ಲಿ ಸ್ವಾಭಿಮಾನದ ಜಾಗೃತಿಯ ಪಂಜು ಹೊತ್ತಿಸಿ, ಪ್ರಪ್ರಥಮವಾಗಿ ಕನ್ನಡ ಸಾಮ್ರಾಜ್ಯ ಸ್ಥಾಪಿಸಿದ ಕದಂಬ ಮಯೂರವರ್ಮನ ನಾಡಾದ ಬನವಾಸಿಗೆ ಈಗೆರಡು ವರ್ಷಗಳ ಹಿಂದೆ ನಡೆದ ಕನ್ನಡ ರಾಜ್ಯೋತ್ಸವಕ್ಕೆ ಮುಖ್ಯ ಅತಿಥಿಗಳಾಗಿ ಮಿಂಚಿನಂತೆ ಬಂದು, ಬನವಾಸಿಗರ ಮನ ಗೆದ್ದು, ಮತ್ತೊಮ್ಮೆ ತಮ್ಮ ದರ್ಶನ ಮತ್ತು ಕನ್ನಡ ನುಡಿ ಮುತ್ತುಗಳನ್ನು ಕೇಳಬೇಕೆಂಬ ಮಹದಾಸೆ ಮೂಡಿಸಿದ ತಾವು, ಇದೀಗ ತಮ್ಮ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ಪ್ರಕಟಗೊಳ್ಳುತ್ತಿರುವ ಬನವಾಸಿ ಸಮಗ್ರ ಪರಿಚಯ ಪುಸ್ತಕ ಬಿಡುಗಡೆ ಸಮಾರಂಭಕ್ಕೆ ನಮ್ಮೆಲ್ಲರ ಕೋರಿಕೆಯ ಮೇರೆಗೆ ಆಗಮಿಸಿರುವ ತಮ್ಮನ್ನು ಈ ನಾಡ ಜನತೆಯ ಪರವಾಗಿ ತುಂಬು ಹೃದಯದಿಂದ ಸ್ವಾಗತಿಸುತ್ತೇವೆ. ಕನ್ನಡ ಸಾರಸ್ವತ ಲೋಕದ ಹೆಮ್ಮೆಯ ಕುವರರಾದ ತಾವು ತಮ್ಮ ಅಪರಿಮಿತ ಬೌದ್ಧಿಕ ಪ್ರತಿಭೆ ಹಾಗೂ ನಿರಂತರ ಕ್ರಿಯಾಶೀಲತೆ ಪ್ರತೀಕವಾಗಿ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಹಲವು ಪ್ರಶಸ್ತಿಗಳಿಗೆ ಪಾತ್ರರಾಗಿದ್ದು, ತಮ್ಮನ್ನು ಈ ಸುದಿನದಂದು ಸನ್ಮಾನಿಸಲು ಸಂತಸಪಡುತ್ತೇವೆ.

ಕನ್ನಡಿಗರ ಪ್ರಪ್ರಥಮ ರಾಜಧಾನಿ ಎಂದು ಇತಿಹಾಸ ಪ್ರಸಿದ್ಧಿ ಪಡೆದ ಈ ಬನವಾಸಿ ನಾಡು ಕಾಲನ ದವಡೆಗೆ ಸಿಕ್ಕು, ಸೊರಗಿ, ಸಾಧಾರಣ ಗ್ರಾಮವಾಗಿ "ಇದೇನಾ! ಆ ಬನವಾಸಿ" ಎಂದು ಪ್ರವಾಸಿಗರು ಪ್ರಶ್ನಿಸಿ, ಸಖೇದಾಶ್ಚರ್ಯ ಪಡುವಂತಾಗಿದೆ. ಕಾಲಗರ್ಭದ ಒಡಲಲ್ಲಿ ಹುದುಗಿದ ಈ ನಾಡ ಗತವೈಭವದ ಪುನರುತ್ಥಾನದ ಉತ್ಖನನವಾಗಿ ಮೊದಲಿನ ಬನವಾಸಿಯ ಇತಿಹಾಸ ಹೊಂಬೆಳಕು ಪ್ರಸಾರವಾಗಲು ತಾವು ತಮ್ಮ ವಿಶ್ವವಿದ್ಯಾಲಯದ ಮೂಲಕ ರಾಜ್ಯ ಮತ್ತು ಕೇಂದ್ರ ಸರ್ಕಾರಗಳ ಘನ ಚಿತ್ತವನ್ನು ಸೆಳೆಯಲು ಪ್ರಯತ್ನಿಸುತ್ತೀರೆಂದು ಆಶಿಸಿ, ತಮ್ಮಲ್ಲಿ ಕೆಲವು ಮುಖ್ಯ ಬೇಡಿಕೆಗಳನ್ನು ನಿವೇದಿಸ ಬಯಸುತ್ತೇವೆ.

೧. ಪುರಾಣ ಕಾಲದಿಂದಲೂ ಹೆಸರಾದ ಈ ಬನವಾಸಿ ನಾಡಿನ ಮಣ್ಣಲ್ಲಿ ಅಡಗಿರುವ ಗತ ಇತಿಹಾಸದ ಅವಶೇಷಗಳ ಶೋಧನೆಗೆ ವಿಶ್ವವಿದ್ಯಾಲಯ ಕೇಂದ್ರ-ರಾಜ್ಯ ಸರ್ಕಾರಗಳ ಪ್ರಾಚ್ಯ ವಸ್ತು ಸಂಶೋಧನಾಲಯದಿಂದ ಉತ್ಖನನ ಕಾರ್ಯವಾಗಬೇಕು.

೨. ಈಗ ದೊರೆತಿರುವ ಪ್ರಾಚ್ಯ ವಸ್ತು ವಾಸ್ತು ಶಿಲ್ಪಗಳ ಸಂರಕ್ಷಣೆಯಾಗಬೇಕಲ್ಲದೇ ಹೊಸದಾಗಿ ನಿರ್ಮಿತವಾಗಿರುವ ಪ್ರವಾಸಿ ಕೇಂದ್ರ ಕಟ್ಟಡದಲ್ಲಿ ಈ ಎಲ್ಲ ಪ್ರಾಚ್ಯ ವಸ್ತುಗಳನ್ನು ಪ್ರದರ್ಶನಕ್ಕೆ ಯೋಗ್ಯವಾಗಿ ಸಂರಕ್ಷಿಸುವುದು.

೩. ಶ್ರೀ ಮಧುಕೇಶ್ವರ ದೇವಸ್ಥಾನದ ಹಾಗೂ ದೇವಸ್ಥಾನದ ಸಮುಚ್ಛಯದ ಸಂರಕ್ಷಣೆ, ಆಕರ್ಷಣೆ ಹಾಗೂ ಹೊನಲು ಬೆಳಕಿನ ವ್ಯವಸ್ಥೆಯಾಗಬೇಕಾದ್ದು ಅತಿ ಅವಶ್ಯ.

೪. ರಾಷ್ಟ್ರಧರ್ಮ ದೃಷ್ಟಾರ, ಕರ್ನಾಟಕದ ಗಾಂಧಿ ಯೋಗಿ, ಸಾಹಿತಿ, ದಿ. ಹರ್ಡೇಕರ ಮಂಜಪ್ಪನವರು ಈ ಬನವಾಸಿಯ ವರಪುತ್ರರು. ಅವರ ಹೆಸರಿನ ಮನೆ ಈಗಾಗಲೇ ಸರ್ಕಾರಕ್ಕೆ ನೀಡಲಾಗಿದ್ದು, ಆ ಮನೆ ಸಾಹಿತ್ಯ ಹಾಗೂ ಲಲಿತಕಲೆಗಳ ಕೇಂದ್ರವಾಗಿ ಮಾರ್ಪಡಿಸಲು ರಾಜ್ಯ ಸರ್ಕಾರಕ್ಕೆ ಒತ್ತಾಯಿಸುವುದು. ಮಂಜಪ್ಪನವರ ಹೆಸರಿನ ಅಧ್ಯಯನ ಪೀಠವನ್ನು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪ್ರಾರಂಭಿಸುವುದು. ಅವರ ಜನ್ಮ ದಿನ (ಫೆಬ್ರುವರಿ ೧೮) ಪ್ರತಿವರ್ಷ ದತ್ತಿ ಉಪನ್ಯಾಸಗಳು ನಾಡಿನಾದ್ಯಂತ ನಡೆಯಲು ಪ್ರೇರೇಪಣೆ ನೀಡುವುದು.

೫. ಕನ್ನಡಿಗರ ಪ್ರಥಮ ರಾಜಧಾನಿ "ಕನ್ನಡ ಕಾಶಿ" ಎಂದು ಹೆಸರಾದ ಈ ಬನವಾಸಿಯಲ್ಲಿ ಪ್ರತಿವರ್ಷ ರಾಜ್ಯ ಸರ್ಕಾರದಿಂದ ವೈಭವದ ಕನ್ನಡ ರಾಜ್ಯೋತ್ಸವವನ್ನು ಆಚರಿಸುವಂತೆ ಆಗಬೇಕು. ಕದಂಬ ಲಾಂಛನ ನಮ್ಮ ರಾಜ್ಯ ಸರ್ಕಾರದ ಲಾಂಛನವಾಗಬೇಕು.

ಕನ್ನಡಿಗರ ಈ ಸ್ವತಂತ್ರ ರಾಜ್ಯ ಕರ್ನಾಟಕವೆಂದು ಹೆಸರಿಸಿಕೊಳ್ಳುವ ಪೂರ್ವದಲ್ಲಿಯೇ ಕರ್ನಾಟಕ ವಿಶ್ವವಿದ್ಯಾಲಯವು ನಾಡಿನ ಜನತೆಗೆ ಜ್ಞಾನ ದಾಸೋಹದ ಅಧ್ಯಯನದ ಮಹಾನ್ ಕೇಂದ್ರವಾಗಿ ಅರಿವೇ ಗುರುವಾಗಿದೆ. ಈ ಮಹಾನ್ ಸಂಸ್ಥೆಯ ಕುಲಪತಿಗಳಾದ ತಾವು ಸಂಸ್ಥೆಯ ಪರಂಪರಾಗತ ಘನತೆಗೆ ಮೆರುಗು ನೀಡಿದ್ದೀರೆನ್ನಲು ಹರ್ಷಿಸುತ್ತೇವೆ. ಈ ನಾಡ ಅಧೀಶ ಶ್ರೀ ಮಧುಕೇಶ್ವರ ತಮಗೆ ಸರ್ವಶಕ್ತಿ ನೀಡಿ ತಮ್ಮಿಂದ ಈ ಕನ್ನಡ ನಾಡಿಗೆ ಅಪರಿಮಿತ ಸೇವೆ ಲಭ್ಯವಾಗುವಂತೆ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಈ ಬನವಾಸಿ ತಮ್ಮ ಸ್ಮೃತಿ ಪಟಲದಲ್ಲಿ ಸದಾಕಾಲ ಹಚ್ಚ ಹಸುರಾಗಿರಲೆಂದು, ತಮ್ಮಿಂದ ಈ ನಾಡ ಭವಿಷ್ಯ ಉಜ್ವಲವಾಗಲೆಂದು ನಾವು ಆಶಿಸುತ್ತೇವೆ.

ಗೌರವಗಳೊಂದಿಗೆ ವಂದನೆಗಳು,

ತಮ್ಮ
ಬನವಾಸಿ ನಾಡಿನ ಜನತೆಯ ಪರವಾಗಿ,

ಬನವಾಸಿ
೨೪.೧.೧೯೯೫

ದ. ರಾ. ಭಟ್ಟ
ಅಧ್ಯಕ್ಷರು
ಬನವಾಸಿ ವಲಯ ಅಭ್ಯುದಯ ಸಮಿತಿ
ಬನವಾಸಿ

FELICITATION ADDRESS TO PROF. S.RAME GOWDA, VICE-CHANCELLOR, KARNATAK UNIVERSITY, DHARWAD, KARNATAK STATE

Respected Professor S.Rame Gowda,

It gives us great pleasure to honour you today and present this citation in the presence of Hon'ble Shri H.D.Deve Gowda, Chief Minister, Government of Karnataka, Hon'ble Minister for Education, Shri D. Manjunath, Hon'ble Mr.Justice K.S.Venkataramaiah, Dr.R.C.Hiremath (former Vice Chancellor, Karnatak University) and Prof. K.S. Nisar Ahmed, renowned Kannada poet. This citation merely reflects your achievements and contributions to the field of education. You are a doyen among academicians with an excellent academic background in Science and Technology and have been rightly acclaimed as 'an Institution Builder'.

Born on 14th January, 1939 at Hondarabalu, Mysore District, you had your school education up to S.S.L.C. at Kollegal, intermediate at St.Philomena's College, Mysore, completed B.E. Degree in Electrical Engineering from UVCE, Bangalore. During your tenure as Lecturer at the University of the West Indies, you worked for your Ph.D. degree under the guidance of renowned Prof. Szabila of Washington State University, USA. The impact of securing education from different seats of learning is transparent from your cosmopolitan nature and national outlook in your approach.

The wide span of your carrer is reflected in your achievements starting as Junior Engineer at Kolar Gold Fields, served as Lecturer, National Institute of Engineering, Mysore, Asst. Professor and Head, Department of Electrical Engineering, PES College of Engineering, Mandya, Lecturer, University of West Indies, Professor and Head, Department of Electrical and Electronics Engineering, PES College of Engineering, Mandya and Founder Principal of B.I.T., Bangalore and founder of Pondichery Engineering College, sponsored by the Ministry of Human Resources Development,

Government of India and rose to the position of Vice-Chancellor of Karnatak University since July 1990 and serving for the second term.

You are rightly called an Institution builder when one looks at the efforts made by you in building a number of institutions, more so in the field of Technical Education. The first among them is establishing the Electrical and Electronics Laboratory at the National Institute of Engineering, Mysore, PES Engineering College, Mandya, B.I..T., Bangalore, and Engineering College at Pondichery. You have also established School of Oceanic Sciences at Karwar, a P.G.Centre in the jurisdiction of Karnatak University, Dharwad, School of Micro Electronics, an extension of Dept. of Physics, Karnatak University, Dharwad and School of Environmental Sciences in Karnatak University, Dharwad. Government of Karnatak has rightly acknowledged your services as an outstanding Engineer and Technology by conferring Rajyothsava Award during 1993-1994. The University Industry-cell, which was established under your stewardship has been functioning actively. The Committee headed by you to suggest innovative and imaginative method to train unemployed youth for gainful of Universities/ Government agencies, American Society of Engineers, Member of Board of Management, USEFI, New Delhi (for 1994-95 and 95-96), member of Board of Studies, Member of Board of Examiners, Member of Board of appointment of a number of universities in the country.

You have to your credit a number of overseas special lectures delivered at Universities and Institutions in Singapore, Malaysia, West Indies, Rio de Janeiro-Brazil, Barbados, Guyana, South America, Surinam, Surry to work out Govt. of Karnataka to find out causes of dwindling number of passes in IAS and IPS examination etc. Your contribution to education at the national and international level is once again reflected in yout appointment as Chairman of the committees constituted by the UGC to inject vocationalisation into higher education, member of the committee constituted by AICTE to formulate the

structure for technical education in the country in the light of the Supreme Court judgement, member of Great Britain, New Castles, Great Britan, Bangalore, Mysore, Bharatiar, Madras and JIPMER-Pondichery.

The National Pranavananda Award is a national award instituted 20 years ago and each year it is awarded to a person who excels in the field of education and social activities. Some of the earlier receipients of this award include dignitaries like Shri Nurul Hassan, former Governor of West Bengal, Prof. G.Ram Reddy, former Chairman of U.G.C. and Prof. V.C.Kulandai Swamy, former Vice-Chancellor of IGNOU. We are delighted to know that for the year 1994-95, this award has been conferred on you in the field of education and you join a galaxy of awardees including Shri Raja Chellaiah, a noted economist.

We are further proud of you as you are the first Vice-Chancellor in Karnataka State and the first Kannadiga to receive this award. You are a man of charm and grace with warm and pleasing personality. You are a fountain of joy and spread fragrance of friendliness around. You are humane and noble. You are an eminent academician and administrator. We, the well wishers are happy to felicitate you as an academician par excellence. It is no wonder, therefore that the UGC has thought fit to confer on you the prestigious Pranavananda Award during 1994.

On this day, Monday the 22nd May, 1995 we assemble here, to honour you, and to wish you the best of public life and many more notable achievements in the days to come.

Justice E.S.Venkataramaiah
President

Dr. Venkateshaiah N.T.
Secretary

Shri C.S.Malliah, IAS (Retd.)
Dr. V.B. Coutinho
Dr. N.S. Ramegowda
Vice Presidents

Dr.A.M.Pathan
Treasurer

Shri Venkatesh
Shri Thammanna D.C.
Shri Muniyappa
Shri Subhash Bharani, IPS
Shri Sambashiva Reddy
Prof. K.R.Iqbal Ahmed
Shri Shivamadaiah
Shri Prasad
Shri Arvind Jadhav, IAS
Shri Krishnappa
Dr. Malathi Somaiah
Shri. C.L. Gowda
Members

೩. ಪತ್ರಗುಚ್ಛ

ಶಾಂತಾದೇವಿ ಸ. ಮಾಳವಾಡ

"ಪ್ರಶಾಂತ"
ಕಲ್ಯಾಣನಗರ,
ಧಾರವಾಡ - ೭
೭.೪.೧೯೯೪

ಕರ್ನಾಟಕ ವಿಶ್ವವಿದ್ಯಾಲಯದ ಜನಪ್ರಿಯ ಕುಲಪತಿಗಳೂ
ಆತ್ಮೀಯ ಸೋದರರೂ ಆದ ಡಾ. ಎಸ್. ರಾಮೇಗೌಡ ಅವರಿಗೆ ನಮಸ್ಕಾರ

ತಮ್ಮ ಅಪೂರ್ವ ಭಾಷಣಗಳ ಸಂಗ್ರಹ "ಮೆಲುಕು" ಬಿಡುಗಡೆಯಾದ ವರದಿ ಓದಿದಾಗಿನಿಂದ, ಆ ಗ್ರಂಥವನ್ನು ಓದಬೇಕು ಎಂದೆನಿಸಿತ್ತು. ತಾವು ಪ್ರಸಾರಾಂಗದ ಮೂಲಕ "ಮೆಲುಕು" ಗ್ರಂಥವನ್ನು ಕಳುಹಿಸಿದುದು ತಲುಪಿದೆ, ಅದಕ್ಕಾಗಿ ತಮಗೂ ಪ್ರಸಾರಾಂಗದವರಿಗೂ ಧನ್ಯವಾದಗಳು.

"ಮೆಲುಕು" ಒಳ-ಹೊರಗೆ ಸುಂದರವಾಗಿದೆ, ಮೇಲುಹೊದಿಕೆ ಹೆಸರು ಅರ್ಥವತ್ತಾಗಿದೆ. ಕುಲಪತಿಯ ಸ್ಥಾನದಲ್ಲಿದ್ದುಕೊಂಡು ಹಗಲಿರುಳು ಕೆಲಸ, ಸಮಸ್ಯೆಗಳು, ಸಾರ್ವಜನಿಕ ಕೆಲಸ, ಸಮಾರಂಭಗಳು, ಪ್ರವಾಸ ಈ ಎಲ್ಲದರ ಮಧ್ಯೆ ವೇಳೆಯನ್ನು ಉಳಿಸಿಕೊಂಡು ಮಾಡಿದ ಭಾಷಣಗಳು ಗಾಳಿಯಲ್ಲಿ ತೂರಿ ಹೋಗದೆ, ಪುಸ್ತಕ ರೂಪದಲ್ಲಿ ಬಂದುದು ಉಪಯುಕ್ತವಾಗಿದೆ. ವೈವಿಧ್ಯಮಯ ವಿಷಯ, ಜ್ಞಾನ, ವಿಜ್ಞಾನ, ಸಾಹಿತ್ಯ, ಆಧ್ಯಾತ್ಮವನ್ನೊಳಗೊಂಡ ಭಾಷಣಗಳ ಸಂಗ್ರಹ ಹಿರಿ, ಕಿರಿಯರು ಬಿಡುವಾದಾಗ'ಮೆಲುಕು' ಹಾಕುತ್ತ ಚಿಂತನ ಮಂಥನ ಮಾಡಲು ಸಾಧನವಾಗಬಲ್ಲ ಹಲವಾರು ಲೇಖನಗಳನ್ನೋದಿದಾಗ ಸಂತೋಷವಾಯಿತು. ಸರಳ ಸುಂದರ ಶೈಲಿಯಲ್ಲಿ ರಚಿತವಾದ ಗ್ರಂಥ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಚಿರಕಾಲ ಬಾಳಬಲ್ಲದ್ದಾಗಿದೆ. ಈ ಗ್ರಂಥವನ್ನು ಓದಿದಾಗ ನೀವು ಅಷ್ಟಾವಧಾನಿಗಳು ಎಂದೆನಿಸಿತು. ತಮಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು.

೧೧.೪.೯೩ ಯುಗಾದಿ ಹಬ್ಬ ತಮಗೂ, ಮಮತೆಯ ಸೋದರಿ ಸುಶೀಲಮ್ಮನವರಿಗೂ ಕುಟುಂಬದ ಎಲ್ಲರಿಗೂ ಹೊಸ ವರುಷ ಹರುಷದಾಯಕವಾಗಲಿ, ನಲಿವು ಗೆಲುವು ದೊರೆಯಲಿ, ಸುಖ-ಸಂತೃಪ್ತಿ- ದೇವರ ಕೃಪೆಯಿರಲಿ.

೧೮ ರಿಂದ ೨೪ ಪ್ರೊ. ನಾಡಕರ್ಣಿಯವರ ಭಾಷಣಗಳು ನಡೆಯಲಿರುವುದು ಈಗಾಗಲೆ ತಮಗೆ ತಿಳಿದಿರಬೇಕು. ೨೪ ಬೆಳಿಗ್ಗೆ ದರ್ಶನ ದಿನದ ಕಾರ್ಯಕ್ರಮ ನಮ್ಮ ಮನೆಯಲ್ಲಿ ನಡೆಯುತ್ತದೆ. ಆಗ ನೀವು, ಸುಶೀಲಮ್ಮ ಬರಬೇಕು. ನಿಮ್ಮ ಮಗಳು ಬಂದಾಗ ಭೆಟ್ಟಿ ಮಾಡಿಸಲು ಸುಶೀಲಮ್ಮನವರಿಗೆ ತಿಳಿಸಿರಿ. ನಮ್ಮ ಮನೆಗೆ ಫೋನ ಬಂದಿದೆ, ಮಗ ಸೊಸೆ ತೆಗೆದುಕೊಂಡಿದ್ದಾರೆ. ಫೋನ ನಂ [೪೬೦೭೩] ಎಂದಿದೆ, ಏನಾದರೂ ಹೇಳುವದಿದ್ದಾಗ ದಂಪತಿಗಳು ಫೋನ ಮಾಡಬಹುದು.

ನಿಮ್ಮಿಬ್ಬರಿಗೂ ಶುಭಾಶಯಗಳು

ನಿಮ್ಮ ಸೋದರಿ
ಶಾಂತಾದೇವಿ ಮಾಳವಾಡ

ಮುಂದಿನ ಸಂಪುಟಗಳು ಬೇಗನೆ ಬರಲಿ ಎಂದು ಹಾರೈಸುವೆ. ಶಾ. ಮಾ.

ಜಿ. ವೆಂಕಟಸುಬ್ಬಯ್ಯ

ಮಾಜಿ ಅಧ್ಯಕ್ಷ,
ಕನ್ನಡ ಸಾಹಿತ್ಯ ಪರಿಷತ್ತು
ಮಾಜಿ ಅಧ್ಯಕ್ಷ ಹಾಗೂ ಪ್ರಧಾನ ಸಂಪಾದಕ,
ಕನ್ನಡ-ಕನ್ನಡ ನಿಘಂಟು... ಬೆಂಗಳೂರು
೭.೧೨.೧೯೯೩

ಸನ್ಮಾನ್ಯ ರಾಮೇಗೌಡರಿಗೆ

ನಮಸ್ಕಾರಗಳು

ಧಾರವಾಡದಲ್ಲಿ ಮೂರುದಿನವಿದ್ದು ತಾವು ಕೈಕೊಂಡಿರುವ ಪ್ರಗತಿ ಕಾರ್ಯಗಳನ್ನು ನೋಡಿ ಆನಂದ ಪಡುವ ಸದವಕಾಶವನ್ನು ನೀಡಿದುದಕ್ಕೆ ನಾನು ತುಂಬ ಕೃತಜ್ಞನಾಗಿದ್ದೇನೆ. ವಿಶ್ವವಿದ್ಯಾನಿಲಯಕ್ಕೆ ದಕ್ಷರಾದ ಯುವಕ ಕುಲಪತಿಗಳು ದೊರೆತರೆ ಎಷ್ಟು ವ್ಯಾಪಕವಾದ ಪ್ರಯೋಜನವಿದೆ ಎಂಬುದನ್ನು ತಮ್ಮ ಕಾರ್ಯವಿಧಾನವು ಸ್ಪಷ್ಟ ಪಡಿಸುತ್ತದೆ.

ನಾನು ಬಂದು ಮಾಡಿದ ಉಪನ್ಯಾಸ ಎಂಬುದು ಒಂದು ನೆನಪಾಗಿ, ನನ್ನ ಪುಸ್ತಕದ ಪ್ರಕಟನೆ ಮಾಡಿ, ಕನ್ನಡ ಸಾಹಿತ್ಯದಲ್ಲಿಯೇ ನನ್ನ ಪ್ರಯತ್ನವು ಈ ಪ್ರಕಾರದಲ್ಲಿ ಪ್ರಥಮ ಗ್ರಂಥವಾಗಿ ಬೆಳಗುವಂತೆ ಮಾಡಿದ ತಮಗೆ ನಾನು ಮಾತುಗಳಲ್ಲಿ ಪ್ರತಿ ಹೇಳದಂತೆ ನನ್ನ ಹೃದಯ ತುಂಬಿ ಬಂದಿದೆ. ಮಾತು ಹೃದಯದ ಭಾವನೆಯನ್ನು ಸ್ಪಷ್ಟವಾಗಿ ತಿಳಿಸಲಾರದೆಂಬುದಕ್ಕೆ ಇದು ಮತ್ತೊಂದು ನಿದರ್ಶನ.

ತಾವು ಮಾಡಿದ ಭಾಷಣವು ನನ್ನ ಮನಸ್ಸಿನಲ್ಲಿ ಅನುರಣಿಸುತ್ತಿದೆ. ಕನ್ನಡವನ್ನು ಇಷ್ಟು ಸಮರ್ಥವಾಗಿ ಉಪಯೋಗಿಸುವ ವಿಜ್ಞಾನದ ವಿದ್ಯಾರ್ಥಿಗಳನ್ನು ನಾನಿನ್ನೂ ಕಂಡಿಲ್ಲ. ತಮ್ಮ ಕರ್ತೃತ್ವ ಶಕ್ತಿಗೆ ಈ ಮಾತುಗಾರಿಕೆ ಸರಿಸಾಟಿಯಾಗಿದೆ. ತಮ್ಮಿಂದ ದೇಶಕ್ಕೆ ಇನ್ನೂ ಅನೇಕ ಸೇವೆ ನಡೆಯುತ್ತದೆಂಬ ಭರವಸೆ ನನಗೆ.

ನಾನೂ ನನ್ನ ಮಡದಿಯೂ ತಮಗೂ ತಮ್ಮ ಮಡದಿಗೂ ನಮಸ್ಕಾರಗಳನ್ನು ಸಲ್ಲಿಸುತ್ತೇವೆ. ಹಿಂದಿನ ಬಾಂಧವ್ಯವನ್ನು ಮತ್ತೆ ನವೀಕರಿಸಿದ ಈ ಪ್ರವಾಸ ನಮ್ಮ ಮನಸ್ಸಿನಲ್ಲಿ ಸದಾ ಹಸಿರಾಗಿರುತ್ತದೆ. ಬೆಂಗಳೂರಿಗೆ ಬಂದಾಗ ದಯವಿಟ್ಟು ಮನೆಗೆ ಬನ್ನಿ.

ಇಂತು ತಮ್ಮವ
ಜಿ. ವೆಂಕಟಸುಬ್ಬಯ್ಯ

ಪ್ರೆಸ್ ಕಾರ್ನರ್
ಮಣಿಪಾಲ - ೫೭೬ ೧೧೯
ಏಪ್ರಿಲ್ ೪, ೧೯೯೪

ಪ್ರಿಯ ಡಾ. ಎಸ್. ರಾಮೇಗೌಡರಿಗೆ ವಂದನೆಗಳು

ಏಪ್ರಿಲ್ ೧ ರ ಸಂಜೆ ನಿಮ್ಮ ಮನೆಯಲ್ಲಿ ನಡೆದ ಭೇಟಿ ನನ್ನ ಮಟ್ಟಿಗಂತೂ ಬಹಳ ಮಹತ್ವದ್ದಾಯಿತು. ಈ ಭೇಟಿಯನ್ನು ಏರ್ಪಡಿಸಿದ ಮಿತ್ರರಾದ ಶ್ರೀ ಕೆ.ಎಂ. ಉಡುಪ ಅವರಿಗೆ ಏಷ್ಟು ಧನ್ಯವಾದವನ್ನು ಸಲ್ಲಿಸಿದರೂ ಕಡಿಮೆಯೆ. ಹಲವು ವಿಷಯಗಳಲ್ಲಿ ಇರುವ ನಿಮ್ಮ ಆಸಕ್ತಿ, ಅಧ್ಯಯನ ಶೀಲತೆ ಇವುಗಳನ್ನು ಕಂಡು ಆನಂದವಾಯಿತು. ತೂಕಡಿಸುತ್ತಿದ್ದ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ನೀವು ಖಂಡಿತವಾಗಿಯೂ ಹೊಸ ಚೇತನವನ್ನು ನೀಡಬಲ್ಲಿರಿ ಎಂಬ ಭರವಸೆ ನನ್ನಲ್ಲಿ ಉಂಟಾಗಿದೆ. ಈಗಾಗಲೇ ನಿಮ್ಮ ಹಲವು ಯೋಜನೆಗಳಿಂದ ಅದನ್ನು ನೀವು ಸಾಬೀತು ಪಡಿಸಿದ್ದೀರಿ. ಅದಕ್ಕಾಗಿ ಅಭಿನಂದನೆಗಳು.

ಬಹುಶಃ ಮುಂದಿನ ತಿಂಗಳು ನಿಮ್ಮ ಸ್ನಾತಕೋತ್ತರ ಕೇಂದ್ರವನ್ನು ಪ್ರತ್ಯಕ್ಷ ನೋಡುವುದಲ್ಲದೇ ನಿಮ್ಮ ಹಲವಾರು ಯೋಜನೆಗಳನ್ನು ಸ್ವತಃ ಕಂಡು ಈ ಕುರಿತು ಬರೆಯಲು ನಮ್ಮ 'ತರಂಗ'ದ ಟೀಮ್‌ನೊಟ್ಟಿಗೆ ಬರುತ್ತೇವೆ.

ನಿಮ್ಮ ಸರಳತನ ನೇರನುಡಿ ಹಾಗೂ ಆತ್ಮೀಯತೆಗಳು ನನಗೆ ತುಂಬಾ ಮೆಚ್ಚಿಕೆಯಾದವು.

ನಿಮಗೂ ನಿಮ್ಮ ಶ್ರೀಮತಿಯವರಿಗೂ ವಂದನೆಗಳು.

ನಿಮ್ಮ ವಿಶ್ವಾಸಿ,

ಸಂತೋಷಕುಮಾರ ಗುಲ್ವಾಡಿ
ಸಂಪಾದಕ

Ko. Chennabasappa
Advocate Supreme Court

No. 127, West of Chord Road
Basaveshwaranagar II stage
Bangalore - 560 086

May 31, 1995

ಡಾ. ಎಸ್. ರಾಮೇಗೌಡರಿಗೆ ವಂದನೆಗಳು

ನಿನ್ನೆ ತಾ. ೩೦.೫.೯೫ ರಾತ್ರಿ ದೂರದರ್ಶನದಲ್ಲಿ ನಿಮ್ಮ ಸಂದರ್ಶನ ನೋಡಿ ಅತ್ಯಂತ ಸಂತೋಷವಾಯಿತು. ಶುದ್ಧವಾಗಿ, ಸ್ಫುಟವಾಗಿ ಕನ್ನಡದಲ್ಲಿ ನೀವು ವಿಷಯ ನಿರೂಪಣೆ ಮಾಡಿದ್ದು ತುಂಬ ಮೆಚ್ಚಿಕೆ ಆಯಿತು. ನಿಮ್ಮನ್ನು ಅಭಿನಂದಿಸಲು ಈ ಪತ್ರ ಕೂಡಲೆ ಬರೆಯುತ್ತಿದ್ದೇನೆ.

ನಿಮ್ಮನ್ನು ನಾನು ಪ್ರತ್ಯಕ್ಷ ನೋಡಿದ್ದು ಒಂದೇ ಬಾರಿ ಗುಲ್ಬರ್ಗಾದಲ್ಲಿ ಶ್ರೀ ಅರವಿಂದರ ಸ್ವದೇಶಾಗಮನ ಶತಾಬ್ದಿಯ ಸಂದರ್ಭದಲ್ಲಿ. ಆ ಸಭೆಯಲ್ಲಿ ನೀವು ಮಾತನಾಡಿದಾಗ ಶ್ರೀ ಅರವಿಂದರ ಬಗ್ಗೆ ನಿಮಗಿರುವ ಭಕ್ತಿಯಿಂದ ನಾನು ಪ್ರಭಾವಿತನಾದೆ. ಶ್ರೀ ಅರವಿಂದರ ಇಂಗ್ಲೀಷ್ ಶಬ್ದ ಭಂಡಾರದಲ್ಲಿ ಕೆಲವು ವಿಶಿಷ್ಟ ಪದಗಳ ಅರ್ಥವನ್ನು ಕನ್ನಡದಲ್ಲಿ ಸರಿಯಾಗಿ ಅನುವಾದ ಆಗಿಲ್ಲ ಎಂಬ ಬಗ್ಗೆ ನಾನು ಸೂಚಿಸಿದ ಮಾತನ್ನು ನೀವು ಒಡನೆಯೇ ಗ್ರಹಿಸಿ ನಿಮ್ಮ ಉದಾರ ದೃಷ್ಟಿಯನ್ನು ತೋರಿಸಿದಿರಿ. ಇದು ವಿರಳ.

ಬೆಂಗಳೂರಿನಲ್ಲಿ ನಿಮಗೆ ಸನ್ಮಾನ ಸಮಾರಂಭ ಏರ್ಪಡಿಸಿದಾಗ ಬರಬೇಕೆಂಬ ಅಭಿಮಾನವಿತ್ತು. ಆದರೆ ಸಮಾರಂಭ ಕ್ಲುಪ್ತ ಕಾಲಕ್ಕೆ ನಡೆಯಲಾರದೆಂಬ ಸಂದೇಹವುಂಟಾಗಿ, ಈ ವಯಸ್ಸಿನಲ್ಲಿ (೭೩) ಸುಮ್ಮನೆ ಕಾಲಹರಣಮಾಡುವ ಇಚ್ಛೆಯಿಲ್ಲದೆ ಸಭೆಗೆ ಬರಲಿಲ್ಲ. ಆದರೂ ನಿಮಗೆ ಶುಭ ಹಾರೈಸುತ್ತೇನೆ. ನಿಮ್ಮ ಜ್ಞಾನ ಮತ್ತು ಅನುಭವದ ಪ್ರಯೋಜನವನ್ನು ನಮ್ಮ ನಾಡು ಮತ್ತು ದೇಶ ಸದುಪಯೋಗ ಪಡಿಸಿಕೊಳ್ಳಲೆಂದು ಹಾರೈಸುತ್ತೇನೆ.

ನೀವು ಬೆಂಗಳೂರಿಗೆ ಬಂದಾಗ ದಯವಿಟ್ಟು ತಿಳಿಸಿ. ಕೂಡಿ ಮಾತನಾಡೋಣ.

ಆದರದೊಂದಿಗೆ.

ಇತಿ ವಂದನೆಗಳು

ಕೋ ಚನ್ನಬಸಪ್ಪ

G.M. Patil
Secretary K.P.E. Society &
Principal, KPES Law College

'Shrinivas'
Shivanand Nagar
Dharwad - 580 001
3.11.1993

ಸನ್ಮಾನ್ಯರೆ,

೧೯೯೩ ರ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತರಾದ ತಮ್ಮನ್ನು ಅಭಿನಂದಿಸಲು ಅತೀವ ಆನಂದ ಹಾಗೂ ಹೆಮ್ಮೆಯೆನಿಸುತ್ತದೆ. ಈ ಸಂದರ್ಭದಲ್ಲಿ ನಾನು ತಮ್ಮನ್ನು ನನ್ನ ಹಾಗೂ ಈ ನಮ್ಮ ಶಿಕ್ಷಣ ಸಂಸ್ಥೆಗಳ ಯಾವತ್ತೂ ಪ್ರಾಧ್ಯಾಪಕ ವರ್ಗ, ಶಿಕ್ಷಕ ಶಿಕ್ಷಕಿಯರು ಮತ್ತು ವಿದ್ಯಾರ್ಥಿನಿಯರ ಪರವಾಗಿ ಅಭಿನಂದಿಸುತ್ತೇನೆ.

ಕಳೆದ ಮೂರುವರ್ಷ ನಾಲ್ಕು ತಿಂಗಳಿಂದ ತಾವು ನಮ್ಮ ಮಧ್ಯ ಇದ್ದು ನಮ್ಮವರೇ ಆಗಿ ಈ ಭಾಗದ ಕರ್ನಾಟಕದ ಜನರ ಹೃದಯದಲ್ಲಿ ಸ್ಥಾನ ಪಡೆದಿದ್ದೀರಿ. ಕೇವಲ ಶಿಕ್ಷಣ ತಜ್ಞರೆಂದಾಗಲೀ ಅಥವಾ ವಿಶ್ವವಿದ್ಯಾನಿಲಯದ ಕುಲಪತಿಗಳೆಂದಾಗಲಿ ತಮ್ಮನ್ನು ನಾನು ಅಭಿನಂದಿಸುತ್ತಿಲ್ಲ. "ದಯವೇ ಧರ್ಮದ ಮೂಲವಯ್ಯ" ಎಂಬ ಉಕ್ತಿಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಮಾನವೀಯ ಮೌಲ್ಯಗಳನ್ನು ತಾವು ಎತ್ತಿ ಹಿಡಿದಿದ್ದೀರಿ. ಈ ತಮ್ಮ ಉದಾತ್ತ ಮನೋವೃತ್ತಿಯಿಂದಾಗಿಯೇ ಯಾವುದೇ ತೊಂದರೆಯಿಲ್ಲದೆ ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಯೆಂಬ ಮುಳ್ಳಿನ ಹಾಸಿಗೆಯನ್ನು ತಾವು ಹೂವಿನ ಹಾಸಿಗೆಯನ್ನಾಗಿ ಮಾರ್ಪಾಡಿಸಿದ್ದೀರಿ. ಕರ್ನಾಟಕ ವಿಶ್ವವಿದ್ಯಾನಿಲಯದ ಕುಲಪತಿ ಹುದ್ದೆಯನ್ನು ನಿರ್ವಹಿಸುವುದು ನಿಜವಾಗಿಯೂ ಎದೆಗಾರಿಕೆಯ ವಿಷಯ. ಇಂತಹ ಕಠಿಣ ಪರಿಸ್ಥಿತಿಯಲ್ಲಿಯೂ ತಾವು ಯಾವುದೇ ವಿವಾದಗಳ ಸುಳಿಗೆ ಸಿಗದೇ ದಕ್ಷ ನೌಕಾಧಿಪತಿಯಂತೆ ಈ ಮಹಾಸಾಗರದಲ್ಲಿ ಈ ಮಹಾಹಡಗವನ್ನು ಮುನ್ನಡೆಸುತ್ತಿದ್ದೀರಿ. ಒಂದು ವಿಷಯ ನಮ್ಮೆಲ್ಲರಿಗೂ ಮೆಚ್ಚಿಗೆಯಾಗಿರುವುದೆಂದರೆ ಕೇವಲ ಕಾಯ್ದೆ ಮತ್ತು ನಿಯಮಗಳಿಂದ ಶಾಂತಿಯನ್ನು ಸ್ಥಾಪಿಸುವುದು ಸಾಧ್ಯವಿಲ್ಲ. ಅದು ಅಧಿಕಾರ ದರ್ಪದಿಂದಲೂ ಸಾಧ್ಯವಿಲ್ಲ. ಅದು ಪ್ರೀತಿಯಿಂದ ಮಾತ್ರ ಸಾಧ್ಯವೆಂದು ತಾವು ಮನಗಾಣಿಸಿಕೊಟ್ಟಿದ್ದೀರಿ. ದಕ್ಷ ಆಡಳಿತದೊಂದಿಗೆ ಉತ್ತಮ ವಾಗ್ಮಿಯಾಗಿ ಕೂಡಾ ಮೆರೆದಿದ್ದೀರಿ. ಆದರೆ ಆ ಮಾತುಗಳು ಕೇವಲ ಸಂದರ್ಭಕ್ಕನುಸಾರವಾಗಿ ಆಡಿದ ಮಾತುಗಳಲ್ಲ. "ನುಡಿದಂತೆ ನಡೆಯದಿರ್ದೊಡೆ ಮೆಚ್ಚನಾ ಕೂಡಲ ಸಂಗಮದೇವ" ಎಂಬ ಉಕ್ತಿಯಂತೆ ಆಡಿದ್ದನ್ನು ಮಾಡಿ ತೋರಿಸಿದ್ದೀರಿ. ನಡೆ ನುಡಿಗಳಲ್ಲಿ ವ್ಯತ್ಯಾಸವಿಲ್ಲದಂತೆ ನಡೆದಿದ್ದೀರಿ. ಇದೊಂದು ತಮ್ಮ ಅಮೋಘ ಸಾಧನೆ.

ರಾಜ್ಯ ಪ್ರಶಸ್ತಿ ವಿಜೇತರಾಗಿ ತಾವು ದೊಡ್ಡವರಾಗಿಲ್ಲ. ಈ ಪ್ರಶಸ್ತಿಯನ್ನು ತಮಗೆ ದಯಪಾಲಿಸಿ ಕರ್ನಾಟಕ ಸರ್ಕಾರ ತನ್ನನ್ನು ತಾನು ಗೌರವಿಸಿಕೊಂಡಿದೆ. ಪ್ರಶಸ್ತಿಗಳ ಮೌಲ್ಯವೇ ಕುಸಿಯುತ್ತಿದ್ದ ಕಾಲದಲ್ಲಿ ಯೋಗ್ಯ ವ್ಯಕ್ತಿಗಳನ್ನು ಗುರುತಿಸಿ ಸರ್ಕಾರ ತಮಗೆ ಈ ಪ್ರಶಸ್ತಿಯನ್ನಿತ್ತಿದೆ.

ದಯವಿಟ್ಟು ಮತ್ತೊಮ್ಮೆ ನಮ್ಮೆಲ್ಲರ ಹೃತ್ಪೂರ್ವಕ ಅಭಿನಂದನೆಗಳನ್ನು ಸ್ವೀಕರಿಸಬೇಕಾಗಿ ಪ್ರಾರ್ಥಿಸುವೆ. ಅಲ್ಲದೇ ನಮ್ಮ ಈ ಕಿರಿ ಸಂಸ್ಥೆಗೆ ತಾವು ಆಗಮಿಸಿ ನಮ್ಮ ಅಭಿನಂದನೆಗಳನ್ನು ಸ್ವೀಕರಿಸಿ ಕೃತಾರ್ಥರನ್ನಾಗಿ ಮಾಡಲು ಒಂದು ತಾಸು ಸಮಯವನ್ನು ಯಾವುದೇ ದಿನ ಸಂಜೆ ೬ ರಿಂದ ೮ ಘಂಟೆಯ ಒಳಗಾಗಿ ಕೊಡಬೇಕಾಗಿ ಪ್ರಾರ್ಥನೆ. ಮುಖತಃ ತಮ್ಮನ್ನು ಕಂಡು ಆಮಂತ್ರಿಸಲು ಐದು ನಿಮಿಷ ಅವಕಾಶ ಕಲ್ಪಿಸುವಿರಾಗಿ ನಂಬಿರುವೆ.

ಅನಂತ ಧನ್ಯವಾದಗಳೊಂದಿಗೆ,

ತಮ್ಮ ನಂಬುಗೆಯ
(ಜಿ. ಎಮ್. ಪಾಟೀಲ)
ಪ್ರಾಚಾರ್ಯರು
ಕೆ. ಪಿ.ಇ.ಎಸ್. ಲಾ ಕಾಲೇಜ
ಧಾರವಾಡ

ಪ್ರೊ. ಕೆ.ಎಸ್. ನಿಸಾರ್ ಅಹಮದ್

ಬೆಂಗಳೂರು
೩.೨.೧೯೯೨

ಮಾನ್ಯ ಡಾ. ಎಸ್. ರಾಮೇಗೌಡರಿಗೆ

ಆತ್ಮೀಯ ನಮಸ್ಕಾರಗಳು

ತಾವು ಕುಶಲವೆಂದು ಭಾವಿಸುವೆ. ನಾನು ಧಾರವಾಡವನ್ನು ೨.೨.೯೨ರ ಬೆಳಿಗ್ಗೆ ಬಿಟ್ಟು, ಆ ರಾತ್ರಿಯೇ ಬೆಂಗಳೂರು ತಲುಪಿದೆ. ತಮ್ಮ ಅಪೇಕ್ಷೆಯಂತೆ ಕ. ವಿ. ವಿ. ಅತಿಥಿಗೃಹದ ಬಾಣಸಿಗ ಪೂಜಾರ್ ಕೈಯಲ್ಲಿ ನನ್ನ ಎರಡು ಕೃತಿಗಳನ್ನು 'ಸಮಗ್ರ ಕವಿತೆಗಳು' 'ಮನದೊಂದಿಗೆ ಮಾತುಕತೆ' ಕಳಿಸಿದ್ದೇನೆ. ಈ ವೇಳೆಗೆ ಅವು ನಿಮಗೆ ತಲುಪಿರಬೇಕು. ಬಿಡುವಾದಾಗ ಓದಬೇಕಾಗಿ ವಿನಂತಿ.

ನಿಮ್ಮ ಪ್ರೀತ್ಯಾದರಗಳಿಗೆ ನಾನು ಮಾರು ಹೋಗಿದ್ದೇನೆ. ನಿಮ್ಮ ಸರಳವೂ, ನೇರವೂ ಆದ ನಡೆ ನುಡಿ, ಕ. ವಿ. ವಿ. ಮತ್ತು ಧಾರವಾಡದ ಸಾಂಸ್ಕೃತಿಕ ವಾತಾವರಣವನ್ನು ನೀವು ಜೀವಂತವಾಗಿ ಇಟ್ಟಿರುವುದಲ್ಲದೆ, ಸಕ್ರಿಯವಾಗಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು, ಹಿಂದಿನ ಬಹಳ ಜನ ಕುಲಪತಿಗಳು ಮಾಡದಿರುವ ಅಭೂತ ಪೂರ್ವ ಕೆಲಸಗಳನ್ನು ನೆರವೇರಿಸುತ್ತಿದ್ದೀರಿ. ಇದು ತುಂಬ ಶ್ಲಾಘನೀಯ ಹಾಗೂ ಸ್ತುತ್ಯವಾದ ಪರಿಶ್ರಮ ಪೂರ್ಣ ಕಾರ್ಯ. ನಿಮ್ಮ ಆರೋಗ್ಯವನ್ನು ಲೆಕ್ಕಿಸದೆ ನೀವು ಅಹರ್ನಿಶಿ ದುಡಿಯುತ್ತಿರುವುದರ ಮೂಲಕ, ನಿಮ್ಮ ಅಕ್ಕಪಕ್ಕದವರಿಗೆ ಒಂದು ಜ್ವಲಂತ ಮಾದರಿಯಾಗಿ, ಆದರ್ಶವಾಗಿ ರಾರಾಜಿಸಿದ್ದೀರಿ.

ಧಾರವಾಡ ಅನೇಕ ಸ್ನೇಹಿತರು, ಕ್ಯಾಂಪಸ್ಸಿನ ಹಲವು ಪ್ರಾಧ್ಯಾಪಕರು ನಿಮ್ಮ ನಿಸ್ಪೃಹ ಕಾರ್ಯಾವಳಿಯನ್ನು ಮೆಚ್ಚಿ ಹೊಗಳಿದ್ದನ್ನು ಸ್ವತಃ ತಿಳಿದು ನನಗಾದ ಸಂತಸ ಅಷ್ಟಿಷ್ಟಲ್ಲ.

ಧಾರವಾಡದಿಂದ 'ಹೊರಗಿನಿಂದ' ಬಂದು ಕೆಲಸ ಮಾಡುವವನಿಗೆ ಎಂಟೆದೆ ಬೇಕು. ಅದನ್ನು ನೀವು ಸಾಧಿಸಿದ್ದೀರಿ. ನನ್ನ ಹಾರ್ದವಾದ ಅಭಿನಂದನೆಗಳನ್ನು ಸ್ವೀಕರಿಸಿ. ನೀವೂ ನಾನು ಭಾಗವಹಿಸಿದ ಮೂರೂ ಕಾರ್ಯಕ್ರಮಗಳಲ್ಲಿ ಸೊಗಸಾಗಿ ಮಾತಾಡಿದಿರಿ. ನಿಮ್ಮ ಔಚಿತ್ಯ ಪ್ರಜ್ಞಾವಂತಿಕೆ ನನಗೆ ತುಂಬ ಹಿಡಿಸಿತು. 'ವಿಶ್ವ ಚೇತನ'ವನ್ನು ಕಟ್ಟಿ ಕ. ವಿ. ವಿ. ಯ ಸಾಂಸ್ಕೃತಿಕ ಸಾಹಿತ್ಯಕ ಚಹರೆಗೆ ಅತೀವ ಮೆರುಗನ್ನು ನೀಡುತ್ತಿದ್ದೀರಿ. ವಿದ್ಯಾರ್ಥಿಗಳನ್ನು ಸರಿಯಾದ ದಿಕ್ಕಿನಲ್ಲಿ ಕರೆದೊಯ್ಯುವ ನಿಮ್ಮ ಪ್ರಯತ್ನ ಸಫಲಗೊಳ್ಳಲೆಂದು ಹಾರೈಸುತ್ತೇನೆ.

ನಿಮ್ಮ ಪ್ರೀತಿ ವಿಶ್ವಾಸಗಳಿಗೆ ಮತ್ತೊಮ್ಮೆ ಧನ್ಯವಾದಗಳನ್ನು ಸಲ್ಲಿಸುತ್ತೇನೆ. ನನ್ನ ಜೊತೆ ಬಂದಿದ್ದ ನನ್ನ ಮಕ್ಕಳು ಮತ್ತು ಮಿತ್ರರಾದ ಶ್ರೀ. ಎಚ್.ಪಿ. ರಾಜಶೇಖರ ಶೆಟ್ಟಿ ಅವರು ತುಂಬಾ ಸಂತೋಷ ಪಟ್ಟರು. ಅವರೂ ನಿಮಗೆ ಗೌರವಪೂರ್ವಕ ನಮಸ್ಕಾರಗಳನ್ನು

ತಪ್ಪು

ತಿಳಿಸಿದ್ದಾರೆ. ನಮಗೆ ಎಳ್ಳಷ್ಟೂ ತೊಂದರೆಯಾಗದಂತೆ ವ್ಯವಸ್ಥೆ ಮಾಡಿಸಿದ್ದೀರಿ. ಬೆಂಗಳೂರಿಗೆ ಬಂದಾಗ, ಮನೆಗೆ 'ಫೋನ್' (೬೦೦೪೫೩) ಮಾಡಿದರೆ, ನಿಮ್ಮನ್ನು ಭೇಟಿಯಾಗುತ್ತೇನೆ.

ತಾವು ಅನ್ಯಥಾ ಭಾವಿಸದಿದ್ದರೆ, ಕಾರ್ಯಕ್ರಮದ ಕೆಲವು ಭಾವಚಿತ್ರಗಳನ್ನು ನೆನಪಿನ ಕುರುಹಾಗಿ ಕಳಿಸಿಕೊಡಬೇಕಾಗಿ ಕೋರಿಕೆ. ನಿಮ್ಮ ಸಹೋದ್ಯೋಗಿಗಳಿಗೆಲ್ಲ ನನ್ನ ನೆನಕೆಗಳು.

ಡಾ॥ ಕರಿಸಿದ್ದಪ್ಪನವರಿಗೆ ನನ್ನ ನಮಸ್ಕಾರಗಳು

ವಂದನೆಗಳೊಂದಿಗೆ

ಇತಿ, ತಮ್ಮ ವಿಶ್ವಾಸಿ

ಕೆ. ಎಸ್. ನಿಸಾರ್‌ಅಹಮದ್

Dr. R.C. Hiremath
Former Vice-Chancellor

62/1 Kelgeri Road
Dharwad
15.10.1994

ಸನ್ಮಾನ್ಯರಾದ ಡಾ. ಎಸ್. ರಾಮೇಗೌಡರು

ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಅವರ ಸನ್ನಿಧಿಗೆ ಅನೇಕ ವಂದನೆಗಳು

ಕಿಟೆಲ್ ಕನ್ನಡ-ಇಂಗ್ಲೀಷ್ ಕೋಶ ಶತಮಾನೋತ್ಸವವನ್ನು ನ ಭೂತೋ ನ ಭವಿಷ್ಯತಿ ಎಂಬ ರೀತಿಯಲ್ಲಿ ಅಂತರರಾಷ್ಟ್ರೀಯ ಸಮ್ಮೇಳನವನ್ನೇರ್ಪಡಿಸುವ ಮೂಲಕ ಆಚರಿಸಿದುದಕ್ಕೆ ಧನ್ಯವಾದಗಳನ್ನೂ ಕೃತಜ್ಞತೆಗಳನ್ನೂ ಅರ್ಪಿಸಲು ಈ ಓಲೆ ಬರೆಯುತ್ತಿದ್ದೇನೆ. ಇದರ ಸಂಪೂರ್ಣ ಯಶಸ್ಸು ಕುಲಪತಿ ಸ್ಥಾನದಲ್ಲಿದ್ದ ನಿಮಗೆ ಸಲ್ಲುತ್ತದೆಂಬುದನ್ನು ನಾನು ಬಲ್ಲೆ. ನಿಮ್ಮ ಪ್ರಭಾವ ಪೂರ್ಣ ಹಾಗೂ ಚಲನಶೀಲ ವ್ಯಕ್ತಿತ್ವದ ಮೂಲಕವೇ ಇಷ್ಟೊಂದು ದೊಡ್ಡ ಮೊತ್ತದ ನಿಧಿ ಸಂಗ್ರಹವಾಗಿದೆಯೆಂಬುದನ್ನು ನಾನು ಬಲ್ಲೆ. ಮಿಕ್ಕವರಾದರೆ ಈಗ ಮುಕ್ತ ಹಸ್ತದಿಂದ ಉದಾರ ದೇಣಿಗೆ ನೀಡಿದವರು ಯಾರೂ ಒಂದು ಕಾಸನ್ನೂ ಕೊಡುತ್ತಿರಲಿಲ್ಲ. ಅಲ್ಲದೆ ಅಧ್ಯಯನ ಸಂಸ್ಥೆಯ ಎಲ್ಲ ಹಿರಿ ಕಿರಿಯ ಅಧ್ಯಾಪಕರಲ್ಲಿ ಉತ್ಸಾಹ ತುಂಬಿ, ಚೈತನ್ಯ ನೀಡಿ ಮಾರ್ಗದರ್ಶನ ಮಾಡಿ ಅವರೆಲ್ಲ ಕ್ರಿಯಾಶೀಲರಾಗುವಂತೆ ಮಹಾತ್ಕಾರ್ಯವನ್ನೆಸಗಿರುವಿರಿ. ಎರಡು ದಿವಸ ನಾನು ಬಹುಸೂಕ್ಷ್ಮವಾಗಿ ಅವರನ್ನೆಲ್ಲ ನಿರೀಕ್ಷಣೆ ಮಾಡಿದ್ದೇನೆ. ಈಗ ಅವರೆಲ್ಲ ಉತ್ಸಾಹ ಭರಿತರಾಗಿದ್ದಾರೆ. ಕ್ರಿಯಾಶೀಲರಾಗಿದ್ದಾರೆ. ತಮಗೆ ನನ್ನ ಹಾರ್ದಿಕ ವಂದನೆಗಳು.

ಸಮ್ಮೇಲನಕ್ಕೆ ಆಗಮಿಸಿದ ವಿದೇಶೀಯ ಹಾಗೂ ಭಾರತೀಯ ವಿದ್ವಜ್ಜನರೆಲ್ಲ ನಮ್ಮ ವಿಶ್ವವಿದ್ಯಾಲಯವನ್ನೂ, ಕುಲಪತಿಗಳನ್ನೂ ಅಧ್ಯಯನ ಸಂಸ್ಥೆಯ ಅಧ್ಯಾಪಕರನ್ನೂ ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ. ಆ ಪ್ರಶಂಸೆಗೆ ಈ ವಿಶ್ವವಿದ್ಯಾಲಯ, ಕುಲಪತಿಗಳಾದ ತಾವು ಹಾಗೂ ಅಧ್ಯಾಪಕ ವರ್ಗ ನಿಜವಾಗಿ ಅರ್ಹರಾಗಿರುವಿರಿ. ನಿಮ್ಮಂತಹ ಚೈತನ್ಯಶೀಲ, ನಾಡು ನುಡಿಯ ಅಭಿಮಾನ ತುಂಬಿ ತುಳುಕುತ್ತಿರುವ ಕುಲಪತಿಗಳನ್ನು ಪಡೆದ ಕರ್ನಾಟಕ ವಿಶ್ವವಿದ್ಯಾಲಯ ನಿಜವಾಗಿಯೂ ಧನ್ಯವಾದುದೆಂದು ನನ್ನ ಭಾವನೆ.

ಇಂತು ವಂದನೆಗಳು

ತಮ್ಮ ನೇಹದ

ಆರ್. ಸಿ. ಹಿರೇಮಠ

V.K. Gokak

APO-17, 10th Floor
Surahi, Opposite Mantralaya
Bombay - 21
7.1.1992

ಪ್ರಿಯರಾದ ವೈಸ್‌ಚಾನ್ಸಲ್‌ರ ಡಾ. ಎಸ್. ರಾಮೇಗೌಡರಲ್ಲಿ ಸಪ್ರೇಮ ವಂದನೆಗಳು. ನಾನು ಇಲ್ಲಿ ಬಂದು ಒಂದೆರಡು ದಿನಗಳಲ್ಲಿ ಬರೆಯಬೇಕಿತ್ತು. ಆದರೆ ಅತಿಯಾದ ಶ್ರಮ ದಣಿವಿನಿಂದ ಇಲ್ಲಿಯ ಕಟ್ಟಡದ ಲಿಫ್ಟ್ ಪ್ರವೇಶಿಸಿದೊಡನೆ ಒಂದು ನಿಮಿಷ ಮೂರ್ಛೆ ಬಂದು ನನ್ನನ್ನು APOಗೆ ಎತ್ತಿ ಕರೆದುಕೊಂಡು ಹೋಗಲಾಯಿತು. ! ಇದೆಲ್ಲ ನಿಮ್ಮೊಡನೆ ಮಾತಾಡಿದಂತೆ ಮಿತಿಮೀರಿದ ಉತ್ಸಾಹದ ಫಲ! ಮುಂದೆ ಡಾಕ್ಟರು ಬಂದು ೩ ದಿನ ಹಾಸಿಗೆ ಬಿಟ್ಟು ಏಳಬಾರದೆಂದು ಅಪ್ಪಣೆಯಾಯಿತು. ಆ ಮೇಲೆ ಫೋನ್ ಮಾಡುವುದೆಂದು ಅಂದುಕೊಂಡೆ. ನನ್ನ ರೂಮು ಫೋನಿನಿಂದ ಕೊಂಚ ದೂರವಿದ್ದುದರಿಂದ ಒಂದೆರಡು ದಿನ ಆಲಸ್ಯದಲ್ಲಿ ಹೋದವು. ಅದೂ ಮುಂದುವರಿದು ಈಗ ಕಾಗದವನ್ನೇ ಬರೆಯಬೇಕು, ಅದೇ ಉತ್ತಮವೆಂದು ಇದನ್ನು ಬರೆಯುತ್ತಿದ್ದೇನೆ.!

ನನಗೆ ಅಂಥ Serious ಏನೂ ಆಗಿಲ್ಲ. ದಣಿವು, ಅದರ ಫಲವಾಗಿ Diabitesದ ಏರಿಕೆ, ಇದರಿಂದಲೇ ತೊಂದರೆ ಬಂದಿದೆ. ಇವತ್ತು ಮೊದಲಿನ ಹಾಗೆ ಸ್ವಲ್ಪ ತಿರುಗಾಡುತ್ತಿದ್ದೇನೆ. ೩-೪ ದಿನಗಳಲ್ಲಿ ಮತ್ತೆ ಮೊದಲಿನಂತಾಗಬಹುದು.

ಅಲ್ಲಿ ಧೈರ್ಯ ಮಾಡಿ ಬಂದುದು ನನ್ನ ಅದೃಷ್ಟ. ಧಾರವಾಡದಲ್ಲಿ ಆ ಮೂರು ದಿನ ನಾನು ಪಡೆದ ಅನುಭವ ಅಸ್ವಾದ್ಯಶವಾದುದು. ತಮ್ಮಂಥವರು ಶುದ್ಧ ಹಾಗೂ ಪ್ರೀತಿಪೂರಿತ ಹೃದಯದಿಂದ ನನ್ನನ್ನು ಬರಮಾಡಿಕೊಂಡ ಆನಂದ, ನನ್ನ ಮೆಚ್ಚಿನ ಧಾರವಾಡದಲ್ಲಿ ಇಷ್ಟೊಂದು ಅಂತಃಕರಣದ ಆದರದಿಂದ ನನಗಿತ್ತ ಸ್ವಾಗತ ಗೌರವಗಳು ನನ್ನನ್ನು ಒಂದು ಮಗುವಾಗಿ ಮಾಡಿದವು. ಯಾವ ಪುಣ್ಯ ನಾನು ಮಾಡಿದೆ? ನಮ್ಮ ತಾಯಿ, ನನ್ನ ತಾಯ್ನುಡಿ, ನನ್ನ ವಿದ್ಯಾಮಾತೆ, ಇಲ್ಲಿ ಎಲ್ಲರೂ ಪ್ರಕಟಗೊಂಡಿದ್ದಾರೆ. ನನ್ನೊಡನೆ ಯಾವಾಗಲೂ ಇರುತ್ತಾರೆ! ಇವತ್ತೆ (೮.೧.೯೨) ಪ್ರಕಟಗೊಂಡಿದ್ದಾರೆ!

ನಿಮ್ಮ ಮನೆಯಲ್ಲಿಯ ನಾಶ್ತಾ ನಮಗೆ ಹಿಗ್ಗು ತಂದಿತ್ತು. ಈ ಮೊದಲು ಧಾರವಾಡ ನನ್ನದಾಗಿತ್ತು. ಆ ನಾಲ್ಕು ದಿನ ಧಾರವಾಡವೇ ನಾನು ಆಗಿದ್ದೆ, ನಿಮ್ಮ ಅಂತಃಕರಣದಿಂದ, ಪ್ರೀತಿಯಿಂದ!

ನೀವು ಅದೇ USA ದಿಂದ ಬಂದಿದ್ದಿರಿ. ಬಿಡುವಿಲ್ಲದೆ ದುಡಿಯುತ್ತಿದ್ದ ನಿಮ್ಮ ಚಲನ-ವಲನಗಳನ್ನು ನೋಡಿ ಅಚ್ಚರಿಗೊಂಡೆ. ಭಗವಂತ ನಿಮಗೆ ಉತ್ತಮವಾದ ಆರೋಗ್ಯ ನೀಡಿದ್ದಾನೆ. ನೋಡಿ ಸಂತೋಷಗೊಂಡೆ. ಇದೇ ಆರೋಗ್ಯ ಶತಮಾನಾಯುವಾಗಿ ಮುಂದುವರೆಯಲಿ! ಇಂಥ ಹತ್ತು ಸಂಸ್ಥೆಗಳನ್ನು ಆಳಿ, ಕಟ್ಟಿ ಕಟ್ಟಿಸುವ ಮೇಲ್ಮೆಬಂದು ನಿಮ್ಮ ಕೀರ್ತಿ ಬೆಳೆಯಲಿ.

ಇಂಥ ಆಡಳಿತಗಾರರೇ ನಮ್ಮ ಕಣ್ಣು, ಕಿವಿ, ಎದೆ, ಕೈಯಾಗಬೇಕು. ಅಂದು ನಮ್ಮ ದೇಶ ತನ್ನ ಸಂಸ್ಕೃತಿ ಔನ್ನತ್ಯಗಳ ಹೊಸ ಅಧ್ಯಾಯಗಳನ್ನು ನಿರ್ಮಿಸೀತು! ಒಂದೊಂದು ವ್ಯಕ್ತಿ ಒಂದೊಂದು ಜ್ಯೋತಿ ಹೀಗೆ ಬೆಳಗಬೇಕು. ಅಂದು ಭಾರತ ಮತ್ತೆ ಭಾರತ ರಾಷ್ಟ್ರವಾದೀತು!

ನಾನು ಪ್ರೀತಿ ಉತ್ಸಾಹಗಳಿಂದ ಜೊತೆಯ ಅಧ್ಯಾಪಕ ವಿದ್ಯಾರ್ಥಿಗಳೊಡನೆ ನಿರ್ಮಿಸಿದ ಮಾರ್ಗಕ್ಕೆ ನನ್ನ ಹೆಸರಿಟ್ಟಿರಿ. ಇನ್ನು ಅಲ್ಲಿ ಬಂದಾಗ ಆ ರಸ್ತೆಯಲ್ಲಿ ತಿರುಗಾಡಲು ನನಗೆ ಸಂತಸ ಸ್ಫೂರ್ತಿಯಾಗುತ್ತದೆ! ಹೊಚ್ಚ ಹೊಸ ಪುಸ್ತಕಾಲಯಕ್ಕೆ ನನ್ನ ಹೆಸರಿಟ್ಟಿರಿ. ಅದು ನನ್ನ ಜ್ಞಾನಗಂಗೆಯ ಉಗಮಸ್ಥಾನ. ಜ್ಞಾನ ಅನಂತ. ಅದು ನನಗೊಂದು ಸಂತತ ಸ್ಫೂರ್ತಿಯಾಗುತ್ತದೆ. ಜ್ಞಾನ ಭಾರತಿಯ ಒಂದು ಸಂಚಿಕೆಯನ್ನು ನನಗಾಗಿ ಮೀಸಲಿಟ್ಟಿರಿ. ಅದನ್ನು ಓದುತ್ತಿದ್ದೇನೆ. ಅದೊಂದು ಹೊಸ ಬಗೆಯ ಹೊಸ ರುಚಿಯ, ಅನೇಕ ಉತ್ತಮ ವಿಮರ್ಶೆಗಳ ಕೃತಿಯಾಗಿದೆ. ಅದು ನನ್ನ ಹಿಗ್ಗನ್ನು ಹೆಚ್ಚಿಸುತ್ತದೆ. ಅಲ್ಲದೆ ಅತಿಥಿ ಗೃಹವನ್ನೇ ನಾಲ್ಕು ದಿನವೆಲ್ಲ ನಮ್ಮ ವಶಕ್ಕೆ ಕರುಣಿಸಿದಿರಿ. ಅಲ್ಲಿ ಸುಖದಿಂದಿದ್ದೆವು. ಈ ನಾಲ್ಕು ದಿನಗಳು ನಮ್ಮೆಲ್ಲರ ಮನದಲ್ಲಿ ನಕ್ಷತ್ರಗಳಂತೆ ಹೊಳೆಯುತ್ತವೆ.

ಕನವಳ್ಳಿಯವರು ಕಳಿಸಿದ ಫೋಟೋಗಳು (ರಂಜಿತ, ಕರಿ-ಬಿಳಿ) ನಿಮ್ಮೆಲ್ಲರ ನೆನಪು ಕೊಡಲು ಒಳ್ಳೆಯ ಸಾಧನಗಳಾಗುತ್ತವೆ. ಇದೊಂದು ದೈವಾಯತ್ತವಾದ ಕೊಡುಗೆ.

ಕಾಲೇಜಿನ ಮಾದರಿ ಕೆತ್ತನೆ ಕೆಲಸ ಅಖಂಡ ಸ್ಫೂರ್ತಿ ಈಯುವಂಥದ್ದು. ಈ ಗಂಧದ ಗುಡಿಯೊಳಗಿನ ಮಾತೆಯನ್ನು ಪ್ರತಿ ನಿತ್ಯ ವಂದಿಸುತ್ತೇನೆ.

ನಿಮ್ಮ ಮನೆಯವರಿಗೆ ಹಾಗೂ ಮಕ್ಕಳಿಗೆ ನಮ್ಮ ಅಂತಃಕರಣದ ವಂದನೆಗಳನ್ನೂ ಹೃತ್ಪೂರ್ವಕ ಆಶೀರ್ವಾದಗಳನ್ನೂ ಸಲ್ಲಿಸಿರಿ. ಅವರದೆಲ್ಲ ಸಾರ್ಥಕತೆ, ಯಶಸ್ಸು, ಆನಂದ ತುಂಬಿದ ಜೀವನವಾಗಲಿ. ಬೊಂಬೈಯ್ಯ ಕಡೆಗೆ ತಾವು ಸಮಸ್ತರೂ ಶುಭದ ಆಗಮನ ಮಾಡಬೇಕಾದ ಸಮಯಗಳೂ ಬರಬಹುದು. ಒಬ್ಬರೇ ಆಗಲಿ, ಇಬ್ಬರೇ ಆಗಲಿ, ಎಲ್ಲರೂ ಈ ಕಡೆಗೆ ಬಂದಾಗ ಇಲ್ಲಿ ಹೃತ್ಪೂರ್ವಕ ಸ್ವಾಗತ ಕಾದಿದೆಯೆಂದು ನೆನಪಿಟ್ಟು ನೇರವಾಗಿ ಬನ್ನಿ.

ಇತಿ ಎದೆ ತುಂಬಿದ ವಂದನೆಗಳು

ವಿ. ಕೃ. ಗೋಕಾಕ್

* ದೈವಾಧೀನರಾಗುವ ಮೊದಲು ಜೀವನದ ಕಟ್ಟ ಕಡೆಯ ಪತ್ರ.

CHURCH OF SOUTH INDIA
Karnataka Northern Discese

Dr. S. Ramegowda
Vice Chancellor
Karnataka University
Dharwad.

09.11.1994

Dear Dr. Ramegowda,

The words I put on this paper are insufficient to truly express the unbounded happiness and pride I feel on hearing of receiving the prestigious SWAMY PRANAVANANDA AWARD. I have always sensed the manifold qualities, academic, social, cultural and administrative etc, that abound in you and have expected laurels after laurels to keep coming your way. This is but one of them and I am certain that many, many more will follow in your illustrious future.

Last year at the same period of time you were honoured with the National Award as a worthy Educationist and this year it is for your yeoman service in the field of Education and humanities. I wish and I pray the Almighty God to honour you in the coming year with an International Award culminating in a hat trick!

Karnataka should indeed be proud of her illustrious son who is not only a shining star in Education but also one who sports with the greatest ease and acumen on any subject in this universe! and who has habituated himself to strive for laurels through his devotion to duty and discipline.

"Lives of Great men all remind us,
That we can make our lives sublime,
And departing leave behind us,
Foot prints on the sands of time".

Indeed these lines show how, worthy men like you can be exemplary star for future generation. With great conviction I can see you rising to greater and greater heights of fame. Be assured that I shall always be wishing you the best and praying

God Almighty to bless you with health, strength, and greater wisdom to achieve greater things.

Yours sincerely,

Most. Rev.Dr.Vasant P. Dandin
Bishop, KND-CSI & Moderator, CSI

INDIAN ARCHAEOLOGICAL SOCIETY
148, Vigyan Vihar, Delhi - 110 092

S.P. Gupta
Chairman

November 13, 1992

Dear Dr. Gowda,

May I kindly take this opportunity of thanking you very much for your kind consideration in sparing some of your valuable time in inaugurating the joint session of the four academic societies which met for their Annual Conferences in your University from the 6th to the 8th November 1992. Your erudite scholarship and your love for the Indian traditional scientific knowledge created a most memorable impact on each and every delegate who reached Dharwar to attend the conference. As I had observed, it was indeed amazing to find in you not only a great academic builder but also a great human being whose personality is multi-faceted.

May God help you in every possible manner to build up the academic credibility of the institution which you are heading.

With kind regards and warm greetings,

Yours sincerely,

(S.P. Gupta)

SRI AUROBINDO ASHRAM
Pondicherry - 605 002

M.P. Pandit
Sri Aurobindo Ashram
Pondicherry

Dear friend,

May I thank you for your warm greetings on the occasion of the new year. I heartily resiprocate.

We miss you very much. But we are glad you operate in a wider field. That is good for the country.

With love and regards,

Yours

M.P. Pandit

ಭಾಗ ೨: ವಿಷಯ

ಸಮಗ್ರ ಶಿಕ್ಷಣ : ಅರವಿಂದರ ಪರಿಕಲ್ಪನೆ

'ಎನ್ಕೆ'

ಪೂರ್ವದಿಂದ - ಎಂದರೆ ಬ್ರಿಟಿಷ್ ಕಾಲದಿಂದ ನಮ್ಮ ಸರ್ಕಾರಿ ಶಿಕ್ಷಣದ ಉದ್ದೇಶ 'Three Rs' ಎಂಬುದಾಗಿತ್ತು. ಎಂದರೆ Reading, Writing, and Arithmatic (ಇದನ್ನು ರಿಥ್‌ಮೆಟಿಕ್ ಎಂದು ಉಚ್ಚರಿಸುತ್ತಿದ್ದರು). ಆದರೆ ೨೧ ನೆಯ ಶತಮಾನವನ್ನು ಸಮೀಪಿಸುತ್ತಿರುವ ಇಂದಿನ ರಾಜಕೀಯ ಯುಗದಲ್ಲಿ ಈ 'Three Rs' ಸ್ವಲ್ಪ ಬದಲಾಗಿವೆ. ಅವು ಕ್ರಮವಾಗಿ ಕಾಲೇಜ್ ಮಟ್ಟದಲ್ಲಿ Ragging, ಚುನಾವಣಾಮಟ್ಟದಲ್ಲಿ Rigging, ಅಧಿಕಾರ ಮಟ್ಟದಲ್ಲಿ ಅಥವ ಉನ್ನತ ಮಟ್ಟದಲ್ಲಿ Raping. ಇದು ಶಿಕ್ಷಣ ಗುರಿಯ ಇಂದಿನ ನಿರ್ವಚನ.

ಒಂದು ದೇಶದ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣವೆ ಶಂಕುಶಿಲೆ, ಆದರೆ ನಮ್ಮ ದೇಶದಲ್ಲಿ ಶಿಕ್ಷಣವು ತ್ರಿಶಂಕು ಶಿಲಾಸ್ಥಾನ ಹೊಂದಿದೆ. ಇದಕ್ಕೆ ಕಾರಣ ಶಿಕ್ಷಣದಲ್ಲಿ ರಾಜಕೀಯ ಪ್ರವೇಶ. ರಾಜಕೀಯದಲ್ಲಿ ಶಿಕ್ಷಣ, ಅದರ ಆದರ್ಶಗಳು ಆಳವಡುವ ಬದಲು ಶಿಕ್ಷಣ, ಧರ್ಮಕ್ಷೇತ್ರಗಳಲ್ಲಿಯೆ ರಾಜಕಾರಣದ ವಿಷಮ ವಾತಾವರಣ ಹಬ್ಬಿಬಿಟ್ಟರೆ, 'ಸತ್ಯಂವದ ಧರ್ಮಂಚರ', ಹೋಗಿ 'ಸತ್ಯಂವಧ, ಧರ್ಮಂಛುರ' (ಛುರ= ಕತ್ತರಿಸು, ಚೂರಿಸು) ಆಗುತ್ತದೆ.

ಬ್ರಿಟಿಷರು ನಮ್ಮ ದೇಶದಲ್ಲಿ ಕಾಲಿಟ್ಟು ನೆಲೆಯೂರಿ ನಿಂತು ಆರು ಸಾವಿರ ಮೈಲಿನಾಚೆಯಿಂದ ಆಡಳಿತ ಸೂತ್ರ ವಹಿಸಿಕೊಂಡ ಮೇಲೆ ನಮ್ಮನ್ನು ಸುಶಿಕ್ಷಿತರನ್ನಾಗಿ ಮಾಡಲೋಸುಗ ಆಗಾಗ ಶೈಕ್ಷಣಿಕ ಕಮೀಶನ್‌ಗಳನ್ನು ನೇಮಿಸುತ್ತ ಬಂದರು. ಅವರ ಒಳ ಉದ್ದೇಶ ಇದ್ದುದು ತಮ್ಮ ಕ್ರೈಸ್ತ ಧರ್ಮ ಪ್ರಸಾರ, ಮತ್ತು ಆಡಳಿತ ಅನುಕೂಲತೆಗಾಗಿ ಕಾರಕೂನರನ್ನು ತಯಾರಿಸುವುದು, ಅಲ್ಲದೆ ತಮ್ಮ ವ್ಯಾಪಾರೀ ಉದ್ದೇಶವನ್ನು ಈಡೇರಿಸಿಕೊಳ್ಳುವುದು. ೧೬ನೆಯ ಶತಮಾನದಿಂದಲೇ ವ್ಯಾಪಾರೋದ್ದೇಶಕ್ಕಾಗಿ ಪೋರ್ಚುಗೀಸರು, ಫ್ರೆಂಚರು, ಸ್ಪ್ಯಾನಿಶ್‌ರು, ಡಚ್‌ರು, ಡೇನ್ಸರು, ಇತ್ತ ಬ್ರಿಟಿಷರು ಭಾರತದ ಮೇಲೆ ವಸಾಹತುಗಾರಿಕೆಯ ಆಕ್ರಮಣವನ್ನೇ ನಡೆಸಿದರು. ಭಾರತವನ್ನು ವಸಾಹತು ಮಾಡಿಕೊಳ್ಳ ತೊಡಗಿದರು.

೧೮೬೮ರಿಂದ ಬ್ರಿಟಿಷ್‌ರು ಇಂಡಿಯಾದಲ್ಲಿ ಇಂಗ್ಲಿಷ್ ಶಾಲೆಗಳನ್ನು ತೆರೆಯಲಾರಂಭಿಸಿದರು. ಶಿಕ್ಷಣ ಪ್ರಸಾರವೆಂಬ ಹೆಸರಿನಲ್ಲಿ ಬೈಬಲ್ ಪ್ರಾದೇಶಿಕ ಭಾಷೆಗಳಲ್ಲಿ ತರ್ಜುಮೆಗೊಳಿಸ ತೊಡಗಿದರು. ಮ್ಯಾಕ್ಸ್ ಮ್ಯೂಲರ್ ಋಗ್ವೇದವನ್ನು ಇಂಗ್ಲಿಷ್‌ಗೆ ಅನುವಾದಿಸಿದ ಒಳ ಉದ್ದೇಶ ಬೇರೆಯೆ ಆಗಿತ್ತೆಂದು ಹೇಳುತ್ತಾರೆ. ಆದರೂ ಆತನು ಮಾಡಿದ ವೇದದ ಶೋಧ ಬೋಧಗಳು ಸ್ಮರಣೀಯ.

ಸಾಧಾರಣ ಎರಡು ದಶಕಗಳಿಗೊಮ್ಮೆ ನೇಮಕಗೊಂಡ ಕಮೀಶನ್‌ಗಳಲ್ಲಿ ಮೊದಲನೆಯದು ೧೮೧೩ರ ಚಾರ್ಲ್ಸ್ ಗ್ರ್ಯಾಂಟ್‌ನ ನೇತೃತ್ವದ್ದು. ಈಸ್ಟ ಇಂಡಿಯಾ ಕಂಪನಿಯ ಉದ್ದೇಶ ಶಿಕ್ಷಣ ಪ್ರಸಾರವೆಂದು ಘೋಷಿಸಿ ಆದಕ್ಕಾಗಿ ಬ್ರಿಟಿಷ್ ರಾಜರು ಒಂದು ಲಕ್ಷ ರೂಪಾಯಿಗಳ ಹಣದ ಮಂಜೂರಿ ಮಾಡಿದರು. ಮುಂದೆ ೧೮೩೫ರ ಕಮೀಶನ್ ಅಧ್ಯಕ್ಷ, ಲಾರ್ಡ್ ಮೆಕಾಲೆ, 'I will Europeanise India' ಎಂದು ಸಾರಿದನು. ಇದಕ್ಕೆ ಗವರ್ನರ್ ಜನರಲ್ ಬೆಂಟಿಂಕ್‌ನ ಬೆಂಬಲ ದೊರಕಿತು. ೧೮೫೪ರ ವುಡ್ಸ್ ಡಿಸ್ಪ್ಯಾಚ್‌ನಲ್ಲಿ ಭಾರತದಲ್ಲಿ ಬೌದ್ಧಿಕ, ನೈತಿಕ ಮಟ್ಟವನ್ನು ಹೆಚ್ಚಿಸುವುದು ತಮ್ಮ ಗುರಿ ಎಂದು ಉಚ್ಚರಿಸಲಾಯಿತು. ೧೮೮೨ರ ಹಂಟರ್ ಕಮೀಶನ್ ಉಪೇಕ್ಷಿತವಾದ ಪ್ರಾಥಮಿಕ ಶಿಕ್ಷಣ ವಿಸ್ತಾರಕ್ಕೆ ಪ್ರಾಶಸ್ತ್ಯ ನೀಡಿತು. (D.P.I ಡಾ. ಪಾವಟೆ ಅವರೂ ಪ್ರಾಥಮಿಕ ಶಿಕ್ಷಣಕ್ಕೆ ಆದ್ಯ ಗಮನ ಕೊಟ್ಟುದನ್ನಿಲ್ಲಿ ನೆನೆಯಬೇಕು.)೧೯೧೯ರ ಸ್ಯಾಡ್ಲರ್ ಕಮೀಶನ್ ಮಾಧ್ಯಮಿಕ ಶಿಕ್ಷಣ ಹಾಗೂ ವಿಶ್ವವಿದ್ಯಾಲಯದ ಹಂತಗಳಿಗೆ ಹೆಚ್ಚು ಒತ್ತು ಕೊಟ್ಟುದು ಗಮನಾರ್ಹ. (ಮುಂದೆ ೧೯೪೮ರ ಡಾ. ರಾಧಾಕೃಷ್ಣನ್ ಕಮೀಶನ್, ೧೯೬೪ರ ಕೊಠಾರಿ ಕಮೀಶನ್‌ಗಳೂ ಹೈಸ್ಕೂಲ್ ಕಾಲೇಜ್ ಹಂತಗಳಿಗೇ ಹೆಚ್ಚು ಮಹತ್ವ ಕೊಟ್ಟವು.) ೧೯೨೯ರ ಹಾರ್ಟೋಗ್ ಕಮೀಶನ್ ಗ್ರಾಮಾಂತರಗಳಲ್ಲಿ ಶಿಕ್ಷಣವು ಹಬ್ಬಬೇಕೆಂದು ಒತ್ತಿ ಹೇಳಿತು.

೧೯೩೭ರ ಗಾಂಧೀಜಿ ವರ್ಧಾಶಿಕ್ಷಣ ಯೋಜನೆ 'ಮೂಲಭೂತ ಶಿಕ್ಷಣ'ವೆಂಬುದಾಗಿ ದುಡಿಮೆ ಮತ್ತು ಕಲಿಕೆಗಳನ್ನು ಸಮನ್ವಯಗೊಳಿಸುವ learning by doing ಎಂಬ ಸಿದ್ಧಾಂತವೆ ಹೊಸರೂಪದ ಒಂದು ಮೈಲುಗಲ್ಲು ಎನಿಸಿತು.

ಅದೇ ವರ್ಷದ ಹರಿಜನ ಪತ್ರಿಕೆಯಲ್ಲಿ ಗಾಂಧೀಜಿ ಹೀಗೆ ಹೇಳಿದರು.

"By Education I mean an all round education and drawing the best in the child and manning his body, mind and spirit(ಶ್ರೀ ಅರವಿಂದರ 'ಸಮಗ್ರ ಶಿಕ್ಷಣದ' ಮೂಲತತ್ವವೂ ಇದೇ). Literacy is not the end of education. Child education should start with handicrafts, (which could be made marketable to earn sufficient income to overcome financial shortage) and every school should be self supporting" (ಜುಲೈ31,1937)

ಶಿಕ್ಷಣವೆಂದರೆ ಸರ್ವತೋಮುಖವಾದ, ಮಗುವಿನ ಆಂತರಿಕ ಪ್ರತಿಭೆಯ ಬೆಳವಣಿಗೆ ಮತ್ತು ಆತನ ದೇಹ, ಮನ, ಆತ್ಮಗಳ ಸ್ಥಿರರಚನೆ. ಸಾಕ್ಷರತೆಯು ಶಿಕ್ಷಣದ ಅಂತಿಮ ಗುರಿಯಲ್ಲ. ಮಗುವಿನ ಶಿಕ್ಷಣ ಕುಶಲ ಕೈಗಾರಿಕೆಯಿಂದ ಮೊದಲಾಗಬೇಕು. (ಆ ಕರಕುಶಲ ತಯಾರಿಕೆಯ ವಸ್ತುಗಳನ್ನು ಮಾರುಕಟ್ಟೆಯ ಮೂಲಕ ವಿಕ್ರಯಿಸಿ ಆದಾಯವನ್ನುಂಟು ಮಾಡಿ ಆರ್ಥಿಕ ಕೊರತೆಯನ್ನು ನೀಗಿಕೊಳ್ಳಲು ಸಾಧ್ಯವಾಗಬೇಕು. ಹೀಗೆ ಪ್ರತಿಯೊಂದು ಶಾಲೆಯೂ ಆರ್ಥಿಕವಾಗಿ ತನ್ನ ಕಾಲಮೇಲೆ ತಾನು ನಿಲ್ಲುವಂತಾಗಬೇಕು.) ಆದರೆ ಮುಂದೆ ಗಾಂಧೀಜಿಯ ಮೂಲಭೂತ ಶಿಕ್ಷಣಕ್ಕೆ ಸಾಕಷ್ಟು ಚಾಲನೆ, ಗತಿ ದೊರಕಲಿಲ್ಲ. ೧೯೪೮ರ ಡಾ. ರಾಧಾಕೃಷ್ಣನ್‌ರ ಕಮೀಶನ್ ಸ್ವತಂತ್ರ ಭಾರತದ ಸವಾಲುಗಳನ್ನೆದುರಿಸುವ ಮುಖ್ಯ ಗುರಿಯನ್ನಿರಿಸಿಕೊಂಡಿತು. ತ್ರಿಭಾಷಾ ಸೂತ್ರ, ಜಾತ್ಯಾತೀತ ಶಿಕ್ಷಣಕ್ರಮಗಳತ್ತ ಗಮನ ಹರಿಸಲಾಯಿತು. ೧೯೬೪ರ ಕೊಠಾರಿ ಕಮೀಶನ್ ಶಿಕ್ಷಣ ಸ್ವರೂಪವನ್ನು ಹರಳುಗೊಳಿಸುವ ಕ್ರಮಕ್ಕೆ ಕಟಿಬದ್ಧವಾಯಿತು. ವೈಜ್ಞಾನಿಕ ತಾಂತ್ರಿಕ ಶಿಕ್ಷಣದ ಶಿಕ್ಷಣಾನಂತರ ಔದ್ಯೋಗಿಕ ವೃತ್ತಿಗೂ ಅವಕಾಶ ಕೊಡುವ ೧೦+೨+೩ ಎಂಬ ಹಂತದ ಸ್ನಾತಕದವರೆಗಿನ ೧೫ ವರ್ಷಗಳ ಶಿಕ್ಷಣ ಕ್ರಮವನ್ನೇ ಇದು ಸ್ವೀಕರಿಸಿತು. ೧೯೮೬ರ ನವೋದಯ ಶಿಕ್ಷಣವೆಂಬ ರಾಜೀವ ಗಾಂಧಿ ಅವರ ರಾಷ್ಟ್ರೀಯ ಶಿಕ್ಷಣ ಹುಚ್ಚಾಪಟ್ಟಾ ವೆಚ್ಚವನ್ನು ನುಂಗಿ ಸರ್ಕಾರಿ ಬೊಕ್ಕಸಕ್ಕೆ ಬೋರ್ ಹೊಡೆದಂತೆನಿಸಿತ್ತು. ಇದೊಂದು ಮತ್ತೊಂದು 'ಕಾನ್ವೆಂಟೀಕರಣ' ಎಂದೂ ಶೈಕ್ಷಣಿಕ ತಜ್ಞ ವಿಮರ್ಶಕರು ಕರೆದರು. ಮೂರು ಶಿಕ್ಷಕರಿಂದ ನಡೆಯಬಹುದಾದ ಒಂದು ಶಾಲೆಗೆ ೪೮ ಜನ ಶಿಕ್ಷಕರು! ಇಷ್ಟರ ಮೇಲಿಂದಲೆ ಇಂತಹ ನವೋದಯ ಶಾಖೆಗಳು ಮುಗಿಲ ಮಲ್ಲಿಗೆಗಳಂತೆ ಕೈಗೆಟಕದಂತಾದವು; ವ್ಯವಹಾರ್ಯ ದೂರವೆನಿಸಿದವು ಎಂದು ತಿಳಿಯಬಹುದು.

ಇತ್ತ ಬಡವರ ಕೈಗೋಲಿನಂತಿದ್ದ ಗಾಂಧೀಜಿ ಕೈಗೆಲಸದ ಮೂಲಶಿಕ್ಷಣ ಹಿಂದುಳಿಯಿತು. ಭಾರತೀಯ ಸಂಸ್ಕೃತಿಯಿಂದ ಭಾರತೀಯ ಶಿಕ್ಷಣ ದೂರಾಯಿತು. ವೇದಕಾಲೀನ ಗುರುಕುಲ ಪದ್ಧತಿಯಲ್ಲಿ ಹನ್ನೆರಡು ವರ್ಷಕಾಲ ಆ ಎಂಟು ವರ್ಷದ ವಟುಗಳಿಗೆ ವೇದಾಭ್ಯಾಸ, ವೇದಗಳ ಸಂಹಿತೆಗಳ ಪದಪಾಠ, ಕ್ರಮಪಾಠ, ಘನಪಾಠ, ಜಟಾಪಾಠಗಳ ಜೊತೆಗೆ ವೃತ್ತಿ ವಿಷಯಗಳಾದ ಕೃಷಿ, ವೈದ್ಯಕೀಯ (ಎಂದರೆ ಆಯುರ್ವೇದ, ವನಸ್ಪತ್ಯೌಷಧಿ ಇ.) ನ್ಯಾಯ್ಯ, ಶಿಲ್ಪ, ವಿಶ್ವಕರ್ಮೀಯ ಮುಂತಾದ ವಿಷಯಗಳನ್ನು ಪ್ರಾತ್ಯಕ್ಷಿಕೆಗಳೊಂದಿಗೆ ಸೂಕ್ತವಾಗಿ ಬೋಧಿಸಲಾಗುತ್ತಿತ್ತು. ಈ ದ್ವಾದಶ ವರ್ಷಗಳು ಗುರುಕುಲವಾಸದ ವಿದ್ಯೋಪಾಸನಾತಪದೊಂದಿಗೆ ವಿದ್ಯಾರ್ಥಿಗಳು ಸ್ನಾತಕರಾಗಿ ಕುಲಪತಿಯ ಉಪದೇಶ ಪಡೆದು ತಂತಮ್ಮ ಮನೆ ಮನೆಗೆ ಮರಳಿ ಬ್ರಹ್ಮಚರ್ಯಾಶ್ರಮ ಪೂರ್ತಿಗೊಳಿಸಿ ಗೃಹಸ್ಥಾಶ್ರಮ ಪ್ರವೇಶ ಮಾಡುತ್ತಿದ್ದರು.

ಈಗ ಪಾಶ್ಚಾತ್ಯರು ತಮ್ಮ ಭೌತಿಕ ದೃಷ್ಟಿಕೋನಕ್ಕೆ ಆಧ್ಯಾತ್ಮದ ಆಯಾಮವನ್ನು ಜೋಡಿಸುವ ಅವಶ್ಯಕತೆಯನ್ನು ಕಂಡು ಕೊಳ್ಳುತ್ತಿದ್ದಾರೆ. ಡೇವಿಡ್ ಫ್ರಾಲೇ ಎಂಬ ಅಮೇರಿಕೆಯ ವಿದ್ವಾಂಸ 'Religion in the West has generally collapsed' ಎಂದು ಉದ್ಗಾರತೆಗೆದಿರುವುದಲ್ಲದೆ ನಮ್ಮ ವೇದಗಳ ಸಮೂಲ ತಲಸ್ಪರ್ಶಿ ಅಧ್ಯಯನ

ನಡೆಸಿ 'ವಾಮದೇವ ಶಾಸ್ತ್ರಿ' ಎಂಬ ನಾಮಾಂತರ ತಾಳಿ ಇಂದು ಋಗ್ವೇದದ ಮೇಲೆ ಜಗತ್ಪ್ರಸಿದ್ಧ ವಿದ್ವಾಂಸರಲ್ಲಿ ಒಬ್ಬರು ಎನಿಸಿದ್ದಾರೆ.

ಭಾರತದಲ್ಲಿಯಾದರೋ ವೇದೋಪನಿಷತ್ತುಗಳ ಅಧ್ಯಯನ, ಆಧ್ಯಾತ್ಮಿಕ ಬೋಧೆಗಳು ಇನ್ನೂ ಶಿಕ್ಷಣ ಕ್ರಮದ ಒಂದು ಉತ್ತಮಾಂಗವಾಗಿ ಅಳವಡಿಸಲ್ಪಟ್ಟಿಲ್ಲ. ಈಗಿನ ಶಿಕ್ಷಣ ನಮ್ಮ ಮೂಲಸಂಸ್ಕೃತಿಯಿಂದ ವಿರುದ್ಧವಾದ ದಿಕ್ಕಿಗೇ ಹೊರಟಿದೆ. ಕೇವಲ ತಾಂತ್ರಿಕತೆ, ಎಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣ ಕ್ಷೇತ್ರಗಳಲ್ಲಿ ಒಂದು ಪ್ರವೇಶಕ್ಕಾಗಿ ಹಣದ ಹೊಳೆ ಹರಿಸಿಯೂ ಪ್ರವೇಶ ದೊರಕಿಸುವಲ್ಲಿ ಕುರಿಕೋಣ ಬಿದ್ದು ಹೋಗುವ ಪ್ರಸಂಗಗಳು. ಇತ್ತ ಉಪಗ್ರಹ ಶಿಕ್ಷಣ, ಓಪನ್ ಯುನಿವರ್ಸಿಟಿ ಶಿಕ್ಷಣಗಳ ಸೌಲಭ್ಯದ ಮಧ್ಯದಲ್ಲಿಯೂ ರಾಜಕೀಯ ಚದುರಂಗದಾಟದಲ್ಲಿ ಮತಗಳ ಬೇಟೆಯಾಡುವಲ್ಲಿ ಪ್ರತಿಭಾವಂತ, ಗುಣವಂತ ಯುವಕರ ಭವಿಷ್ಯತ್ತಿಗೇ ತಿಲಾಂಜಲಿ ಕೊಡುವಂತಹ ಶೋಚನೀಯ ಪರಿಸ್ಥಿತಿಯುಂಟಾಗಿದೆ. ಈ ಮೀಸಲಾತಿಯ ಸಮಸ್ಯೆ ಇತ್ಯರ್ಥವಾಗುವವರೆಗೆ ಗುಣವನ್ನು ಗುರುತಿಸುವ ಗೌರವಿಸುವ ಉದಾರ ಧೋರಣೆ ಅನುಸರಿಸಲ್ಪಡುವವರೆಗೆ ನಮ್ಮ ಶಿಕ್ಷಣ ರಂಗ ಬರಿ ಪ್ರಯೋಗ, ಪ್ರಯೋಗ, ಯೋಜನೆ, ಯೋಜನೆಗಳೆಂದು ಒಂದು ಬಗೆಯ ಜೂಜಾಟದ ಕಣವಾಗಿ ಪರಿವರ್ತಿತಗೊಳ್ಳುತ್ತಲಿದೆ.

ಕಳೆದ ಶತಮಾನದ ನಮ್ಮ ಸಂತ ಪ್ರತಿಭಾವಂತ ಉಜ್ವಲ ಮಹಾ ಪುರುಷರು ಜನ್ಮ ತಾಳಿ ಭಾರತದ ಧಾರ್ಮಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ಮೌಲ್ಯಗಳನ್ನು ಜಗತ್ತಿಗೇ ತಿಳಿಯಪಡಿಸಿದರು. ದೇವಮಾನವ ಶ್ರೀ ರಾಮಕೃಷ್ಣ ಪರಮಹಂಸರು(೧೮೩೬) ರಸ ಋಷಿ ರವೀಂದ್ರನಾಥ ಟಾಗೋರ್(೧೮೬೧) ಸತ್ಯದದೃಷ್ಟಾರ ಸ್ವಾಮಿ ವಿವೇಕಾನಂದರು(೧೮೬೩), ಸ್ವಾತಂತ್ರ್ಯಶಿಲ್ಪಿ, ಅನಾಸಕ್ತಯೋಗಿ, ಮೂಲಶಿಕ್ಷಣ ಪ್ರವರ್ತಕ ಗಾಂಧೀಜಿ(೧೮೬೯), ದಿವ್ಯ ಜೀವನಯೋಗಿ, ಸಮಗ್ರಶಿಕ್ಷಣ ವಿಧಾತ, ದಾರ್ಶನಿಕ ಕವಿ ಶ್ರೀ ಅರವಿಂದರು(೧೮೭೨) ಸ್ವತಂತ್ರ ಭಾರತದ ಸಂಸ್ಥಾನಗಳ ವಿಲೀನಿಕರ್ತೃ, ನವೀನಭಾರತ ನಕ್ಷೆಯ ಕರ್ತೃ ಸರದಾರ ಪಟೇಲ (೧೮೭೫) , ಶ್ರೀ ಅರವಿಂದಾನುಯಾಯಿ, ಸುಪ್ರಮಾನಸದರ್ಶಿನೀ ಪ್ಯಾರಿಸ್ ಜಾತೆ, ಪಾಂಡಿಚೆರಿ ಮಾತೆ(೧೮೭೮) ಭಾರತ ಪ್ರಥಮ ಪ್ರಧಾನಿ ಕವಿ ಹೃದಯದ ಪಂ. ನೆಹರೂ (೧೮೮೯), ಹುತಾತ್ಮಾ ನೇತಾಜಿ(೧೮೯೭) ಮೊದಲಾದ ಮಹಾಪುರುಷರು!

ಆದರೆ ಇಂದಿನ ಶತಮಾನದ ಚಿತ್ರ? ಈ ಶತಮಾನಾಂತ್ಯದಲ್ಲಿ ಭಾರತವೆತ್ತ? ಚಂದ್ರಶೇಖರ ಆಜಾದ್‌ರಂತಹ ಕೆಲವೆ ಹುತಾತ್ಮರು (ಭಗತ್‌ಸಿಂಗ್, ರಾಜಗುರು, ಸುಖದೇವ್‌ರಂತಹ) ಮತ್ತೆ ಏಕೆ ಹುಟ್ಟಿ ಬರಲಿಲ್ಲ? ನಮ್ಮ ಸ್ವತಂತ್ರ ಭಾರತದ ರಾಷ್ಟ್ರೀಯ ಶಿಕ್ಷಣದ ಭೂಮಿ ಅಂತಹ ಜೀವಗಳಿಗೆ ತೊಟ್ಟಿಲಾಗಲಿಲ್ಲ. ನಿಜ, ಅಂತಹ ರಾಷ್ಟ್ರೀಯ ಪ್ರಜ್ಞೆಯ ಶಿಕ್ಷಣ ದುರ್ಲಭವಾಗಿದೆ. ಕೆಲವೆ ವಿಜ್ಞಾನ ಶೋಧಕರು, ಶಿಕ್ಷಣ ಶಿಲ್ಪಿಗಳು, ಪ್ರತಿಭಾವಂತ ಕವಿಗಳು, ಲಾಲ್‌ಬಹಾದ್ದೂರರಂಥ ಮುತ್ಸದ್ದಿ ರಾಜನೀತಿಜ್ಞರು ಈ ಶತಮಾನದಲ್ಲಿ ಜನ್ಮ ತಾಳಿದ್ದಾರೆ. ಆದರೆ ಅವರ ತರುವಾಯ ಭಾರತೀಯ ಜೀವನ ಮೌಲ್ಯಗಳನ್ನು, ದಾರ್ಶನಿಕ ಶೈಕ್ಷಣಿಕ ಉದಾತ್ತತ್ವಗಳನ್ನು ಎತ್ತಿ ಹಿಡಿದಿರುವಂಥ ಉದಾತ್ತ

ಜೀವಗಳನ್ನು ದುರ್ದೈವೀ ಭಾರತ ಬಹುಶಃ ಕಾಣದೆ ಹೋಯಿತು! ಕಾರಣ? ನೀವೇ ನೋಡಿಕೊಳ್ಳಿರಿ.

ಶಿಕ್ಷಣ ಸಮಗ್ರ ಮಾನವನನ್ನು ನಿರ್ಮಿಸಬೇಕು. ಅದಕ್ಕೆ ಸಮಗ್ರಶಿಕ್ಷಣ ಬೇಕು. ಅದರಿಂದಲೆ ಸಮಗ್ರ ರಾಷ್ಟ್ರ, ಸಮಗ್ರಮಾನವತೆ ಅರಳಲು ಸಾಧ್ಯ. ಈ ಶತಮಾನದ ಅಂಚಿನಲ್ಲಿ ಇಂಚು ಇಂಚಿನ ಭಾರತದ ಆಗಿನ ಪುಣ್ಯ ಕ್ಷೇತ್ರದಲ್ಲಿ ಭ್ರಷ್ಟಾಚಾರ, ಭ್ರಷ್ಟತೆಗಳ ವಿಷವೃಕ್ಷ ಬೆಳೆಯುತ್ತಲಿರುವುದು ನಮ್ಮ ದೌರ್ಭಾಗ್ಯ. ಶ್ರೀ ಅರವಿಂದರು ತಮ್ಮ Indian Renaissance(ಭಾರತೀಯ ನವಜನ್ಮ!) ಎಂಬ ಗ್ರಂಥದಲ್ಲಿ ದೂರದೃಷ್ಟಿಯ ಒಂದು ಮಾತು ಹೇಳುತ್ತಾರೆ.

"ಭಾರತದಲ್ಲಿ ನವಜನ್ಮವೊಂದು ತಲೆಯೆತ್ತುತ್ತಿದೆ. ಅದೇ ಭಾರತದ ಭವಿಷ್ಯವನ್ನು ನಿರ್ಧರಿಸಬೇಕು. ಪ್ರಾಚೀನ, ಆಧ್ಯಾತ್ಮಿಕ ಜ್ಞಾನದ ಸಹೋದರರು ಮತ್ತು ಸರ್ವ ರೀತಿಯ ವೈಭವಗಳಿಂದ ಉಪೇತವಾದ ಪುನರುಜ್ಜೀವನ ನಡೆಯ ಬೇಕಾಗಿದೆ. ಈ ಆಧ್ಯಾತ್ಮಿಕ ಜ್ಞಾನ ಸರ್ವ ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅರಳಬೇಕಾಗಿದೆ. ಈ ಸಮಸ್ಯೆಗಳನ್ನು ಆಧ್ಯಾತ್ಮಿಕ ಬೆಳಕಿನಲ್ಲಿ ಬಿಡಿಸುವಂತಾಗಬೇಕು. ಇದರ ಸಮನ್ವಯ ಅಗತ್ಯ. ಭಾರತೀಯ ನವಜನ್ಮಕ್ಕೆ ಶಿಕ್ಷಣವು ಆಧ್ಯಾತ್ಮಿಕ ಮೂಲವಾದದ ಶಕ್ತಿಯುತ ಚಾಲನೆ ಬರುತ್ತದೆ!!

ಇದೇ ರೀತಿ ಶ್ರೀ ಅರವಿಂದರ 'Foundations of Indian Culture' (ಭಾರತೀಯ ಸಂಸ್ಕೃತಿಯ ಬುನಾದಿಗಳು) ಎಂಬ ಗ್ರಂಥವೂ ಭಾರತೀಯ ಪ್ರಾಚೀನ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಿದೆ. ಭಾರತೀಯ ಸಂಸ್ಕೃತಿಯೊಂದೇ ದೈಹಿಕ, ಮಾನಸಿಕ, ಆತ್ಮಿಕ ಸಮನ್ವಯ ಸಾಧಿಸಿ ರಾಷ್ಟ್ರೀಯತ್ವದ ಕಲ್ಪನೆಯನ್ನು ಬೋಧಿಸುತ್ತದೆ. ಆಗಿನ ಒಬ್ಬ ಋಷಿ ರಾಜಮಾನ್ಯ, ಜನತಾಮಾನ್ಯ ವ್ಯಕ್ತಿಯಾಗಿ ನಿರಾಡಂಬರ ನಿರ್ಮಲ ಜೀವನವನ್ನೂ ದೈವೀ ಜೀವನವನ್ನೂ ಬದುಕುತ್ತಿದ್ದ. "The Rishi was a peculiar figure for some time. He was the man of a higher experience and knowledge, born in any class, but excercising an authority by his spiritual personality over all and the king" ಎಂದು ಆ ಋಷಿಯ ಚಿತ್ರವನ್ನು ಈ ಶಬ್ದಗಳಲ್ಲಿ ಶ್ರೀ ಅರವಿಂದರು ಬರೆದಿದ್ದಾರೆ. ಋಷಿಯೆ ಸಂಸ್ಕೃತಿ ಪುರುಷ, ಸಂಸ್ಕೃತಿ ಕರ್ತಾರನಾಗಿದ್ದು, 'ಸರ್ವೇಜನಾಃ ಸುಖಿನೋಭವಂತು' ಎಂಬ ವಿಶ್ವಹಿತೈಷಿ ಸಂದೇಶ ಬೀರಿದ. ಸರ್ವರೂ ದೃಢದೇಹಿಗಳಾಗಿ, ದೃಢಚಿತ್ತರಾಗಿ, ಐಹಿಕದಲ್ಲಿ ಪರಮಾರ್ಥವನ್ನು ಸಂಗ್ರಹಿಸುವುದೇ ಭಾರತೀಯ ಸಂಸ್ಕೃತಿ ವೈಶಿಷ್ಟ್ಯ' ಎಂದು ಘೋಷಿಸಿದ ವಿಶಾಲ ದೃಷ್ಟಿ ಆತನದಾಗಿತ್ತು. ತನ್ನ ಸಾಂಸ್ಕೃತಿಕ ಮೂಲಗಳನ್ನುಳಿಸಿಕೊಂಡು ಬಂದ ದೇಶ ಭಾರತ. ಇದಕ್ಕೆ ಕಾರಣ ನಮ್ಮ ವೈದಿಕ ಋಷಿಕುಲ. ಭೌತಿಕ, ಆಧ್ಯಾತ್ಮಿಕಗಳು ಒಂದನ್ನೊಂದು ಬಿಟ್ಟಿಲ್ಲ. ಅವುಗಳ ಸಮನ್ವಯವೇ ವೇದದ ಗುರಿ.

ಶಿಕ್ಷಣವೆಂಬುದು ಯಾಂತ್ರಿಕ ಕ್ರಿಯೆಯಲ್ಲ. ವ್ಯಕ್ತಿಯ ಆಂತರಿಕ ಪ್ರಗತಿಗೆ ಚೇತನ ಶಕ್ತಿಯಾಗಿ ಕಾರ್ಯ ಮಾಡಬೇಕು ಶಿಕ್ಷಣ ಪ್ರಕ್ರಿಯೆ. ಇದು ಶ್ರೀ ಅರವಿಂದರ ವಿಚಾರ. ಅವರ ದೃಷ್ಟಿಯಲ್ಲಿ ರಾಷ್ಟ್ರೀಯ ಶಿಕ್ಷಣವೆಂದರೆ ಭಾರತೀಯ ತತ್ವಜ್ಞಾನ, ಭಾರತೀಯ ಸಂಸ್ಕೃತಿ, ಭಾರತೀಯ ಆಧ್ಯಾತ್ಮ, ಭಾರತೀಯ ಏಕತಾಭಾವ, ಭಾರತೀಯ ಯೋಗಗಳ ಸಮನ್ವಯ ಇವುಗಳನ್ನು ಆಧರಿಸಿದ ಪ್ರಜ್ಞಾವಿಕಾಸ.

ನಮ್ಮ ಪ್ರಾಚೀನರು ಪಾರಲೌಕಿಕತೆ ಎಂದು ಇಹಲೌಕಿಕತೆಯನ್ನು ಮರೆತರು. ಇದೆಲ್ಲಾ ನಶ್ವರ, 'ಹಿಗ್ಗುವಿಯಾಕೊ ಈ ದೇಹಕೆ . . . . . ನೆಗ್ಗುವ ಕುಗ್ಗುವ' ನೀರಗುಳ್ಳಿಯಂತಹ ಬಾಳು' ಎಂದೆಲ್ಲಾ ವೈರಾಗ್ಯ ನಿವೃತ್ತಿಗಳನ್ನೂ ಎತ್ತಿ ಹಿಡಿದರು. ಇತ್ತ ಪಾಶ್ಚಾತ್ಯರು ಐಹಿಕ ಭೋಗದಲ್ಲಿ ಉನ್ನತ ಮೌಲ್ಯಗಳನ್ನು ಮರೆತರು. ಶ್ರೀ ಅರವಿಂದರು ಮಾತ್ರ, 'ಈ ಭೌತಿಕತೆಯ ಜಡದ ತುದಿ, ಚೇತನದ ಬಾಲಕ್ಕೆ ಅಂಟಿಕೊಂಡು, ಸಂಪೂರ್ಣ, ಸಮಗ್ರ ಚೇತನಮಯ ಆಗಬೇಕೆಂದರು. ಶ್ರೀ ಮಾತೆಯವರು ಹೇಳುತ್ತಾರೆ. "An integral education which could with some variations be adapted to all Nations of the world, must bring back legitimate authority of the spirit over matter fully developed and utilised" ಎಂದು ಹೀಗೆ ಹೇಳಿ ಜಡ-ಚೇತನವಾದಿ ಪಶ್ಚಿಮ, ಪೂರ್ವಗಳ ಸಮನ್ವಯ ಶಿಕ್ಷಣದ ಗುರಿಯನರುಹಿದರು.

ಶ್ರೀ ಅರವಿಂದರೂ ಇದೇ ಧೋರಣೆಯನ್ನೇ ಸಮರ್ಥಿಸುತ್ತ ಶಿಕ್ಷಣದ ಆಧ್ಯಾತ್ಮೀಕರಣ(Spiritualization of Education)ವಾಗಬೇಕೆಂದು ಸಾರಿದರು."The building up of powers of human mind and spirit, the formation or the evoking of knowledge and will for the building up of character and culture", ಎಂದರೆ ಮಾನವನ ಮನೋಮಯ, ಚೇತನಮಯ ಶಕ್ತಿಗಳನ್ನೂ ಆತನ ಶೀಲ ಸಂಸ್ಕೃತಿಗಳನ್ನು ಬೆಳೆಸುವುದಕ್ಕಾಗಿ ಬಳಸಬೇಕು ಎಂದು ಶಿಕ್ಷಣಕ್ಕೆ ಆಧ್ಯಾತ್ಮದ ಆಯಾಮವನ್ನು ಜೋಡಿಸಿ ಅದನ್ನು ತಮ್ಮ ಹೊಸ ಕೊಡುಗೆಯಾಗಿ ನೀಡಿದರು.

ಶ್ರೀ ಅರವಿಂದರ ಸಮಕಾಲೀನ ಆಶ್ರಮವಾಸಿ ಸಂಗಡಿಗರಾಗಿದ್ದ ಶ್ರೀ ನಲಿನೀಕಾಂತ ಗುಪ್ತ ಅವರು ಸಮಗ್ರ ಶಿಕ್ಷಣದ ಒಂದು ಬೀಜಮಂತ್ರವನ್ನು ಸುರಿದ್ದಾರೆ: "Education is growth of consciousness" ಶಿಕ್ಷಣದ ಜೀವಾಳವೆ ಇದು–ಈ ಚಿತ್ ಅಥವ ಪ್ರಜ್ಞೆಯ ಬೆಳವಣಿಗೆಯೆಂಬುದು. 'Consciousness' ಎಂದರೆ ಅಸ್ತಿತ್ವದ ಅರಿವಿನ ಶಕ್ತಿ. ಚಿತ್‌ನ ಶಕ್ತಿಯೆಂದರೆ ಅದು ತನ್ನ ಬಗೆಗೆ, ತನ್ನ ಸುತ್ತಲಿನ ವಸ್ತುಗಳ ಬಗೆಗೆ ಎಚ್ಚರಿಕೆಯಿಂದ, ಅರಿವಿನಿಂದ ಇರುವುದು; ಅಲ್ಲದೆ ಅದು ಗತಿಶೀಲ ಹಾಗೂ ಸೃಜನಶೀಲ ಶಕ್ತಿ (energy) ಯಾಗಿದೆ. ಇದೇ ಚಿತ್ ಅಥವ ಪ್ರಜ್ಞೆ ನಿಮ್ನ ಭಾಗಗಳಾದ ದೇಹ ಪ್ರಾಣಗಳ ಅವಚೇತನ ಮಟ್ಟಗಳಿಗೂ ಇಳಿಯಬಲ್ಲದು; ಸುಪ್ರಮಾನಸದ ಉನ್ನತ ಮಟ್ಟಕ್ಕೂ ಏರಬಹುದು. ಬೀಜದಲ್ಲಿ ವೃಕ್ಷವು ಅಡಗಿರುತ್ತದೆ. ಮಣ್ಣಿನಲ್ಲಿ ಮುಚ್ಚಿ ಹಾಕಿದ ಬೀಜವು ನೀರು, ಗಾಳಿ,

ಬೆಳಕುಗಳಿಂದ ಎತ್ತರೆತ್ತರಕ್ಕೆ ಏರುತ್ತ ತೆಂಗಿನಮರವೊ, ತೇಗಿನಮರವೊ ಆಗಿ ಬೆಳೆಯುತ್ತದೆ. ಮಗುವಾಗಿ ಜನ್ಮಿಸುವ ಮರ್ತ್ಯಮಾನವನಲ್ಲಿ, ಅಷ್ಟೇ ಏಕೆ ನಿಮ್ಮ ಪ್ರಕೃತಿಯಲ್ಲಿ ಅಡಗಿದ ಚಿತ್ ಎಂಬ ಶಕ್ತಿಯು ವಿಕಸನ ಕ್ರಮದಲ್ಲಿ ಇಂದು ಮನುಷ್ಯ ಪ್ರಾಣಿಯಾಗಿ, mentalised being ಎನಿಸಿಕೊಂಡರೆ ಮನಸ್ಸಿನ ಹಂತಗಳನ್ನು ಮೀರಿ ಕೊನೆಗೆ ವಿಜ್ಞಾನದ ಮಟ್ಟವನ್ನು ಎಂದರೆ ಅತಿಮಾನಸ ಮಟ್ಟವನ್ನು ಮುಟ್ಟಬಹುದು. ಶಿಕ್ಷಣವು ಈ ಚಿತ್ ತತ್ವದ ವಿಕಸನವಾಗಿದೆ. 'Education is the growth of consciousness' ಎಂಬ ಸೂತ್ರ ವಾಕ್ಯವನ್ನು ವಿಸ್ತರಿಸುತ್ತ ಶ್ರೀ ಗುಪ್ತ ಅವರು "ಸರ್ವಜ್ಞಾನವು ನಿಮ್ಮೊಳಗೇ ಇರುತ್ತದೆ. ನೀವು ಹೊರಗಿನಿಂದ ಮಾಹಿತಿಯನ್ನೇನೋ ಪಡೆಯುತ್ತೀರಿ. ಆದರೆ ಅದು ನಿಮ್ಮ ತಿಳುವಳಿಕೆಯಾಗಿ, ನಿಮ್ಮ ಸಂಸ್ಕೃತಿಯಾಗಿ ಪರಿಣಮಿಸುವು ಹೇಗೆ? ಉಂಡ ಅನ್ನವು ರಕ್ತವಾಗುವ ಶಕ್ತಿಯು ನಿಮ್ಮಲ್ಲಿ ಸುಪ್ತವಾದ ಅಗ್ನಿಯಲ್ಲಿರುವಂತೆ ನಿಮ್ಮ ಒಳಗಿನ ಬೆಳಕು ಹೊರಗಿನ ನಿರ್ಜೀವ ದ್ರವ್ಯವಾದ ಮಾಹಿತಿ (information) ಯನ್ನೂ, ನಿಮ್ಮಮ್ಮ ತಿಳುವಳಿಕೆ, ನಿಮ್ಮ ಸಂಸ್ಕೃತಿಯನ್ನಾಗಿ ಪರಿವರ್ತಿಸುತ್ತದೆ. ಎಲ್ಲ ಶಿಕ್ಷಣವು ಈ ಒಳಗಿನ ಬೆಳಕು" ಎಂದು ವ್ಯಾಖ್ಯಾನಿಸಿದ್ದಾರೆ. ಈ ಒಳಗಿನ ಬೆಳಕೇ ಚಿತ್, ಸುಪ್ತಸತ್ಯ, ಗುಪ್ತವಾದ ಪರಮಸಾಧ್ಯತೆ" The true and full spiritual aim in society will regard man not as a mind, a life and a body but as a soul in carnated for a divine fulfilment". ಸಮಾಜದಲ್ಲಿ ನಿಜವಾದ, ಸಂಪೂರ್ಣವಾದ ಆಧ್ಯಾತ್ಮಿಕ ಉದ್ದೇಶವು ಒಬ್ಬ ಮನುಷ್ಯನೆಂದರೆ ಬರಿಮನಸ್ಸಲ್ಲ,ಬರಿ ಪ್ರಾಣವಲ್ಲ, ದೇಹವಲ್ಲ ಆದರೆ ದೈವೀಸಾಫಲ್ಯಕ್ಕಾಗಿ ಜನ್ಮಿಸಿ ಬಂದ ಒಂದು ಆತ್ಮ ಎಂದು ಬಗೆಯುವುದಾಗಿದೆ). ಶಿಕ್ಷಣದ ಮೂಲಕ ಇದನ್ನು ಸಾಧಿಸುವುದು.

ಈ ಸಂದರ್ಭದಲ್ಲಿ ಪೂಜ್ಯಮಾತೆಯವರೊಂದಿಗೆ ಸಾಧಕರೊಬ್ಬರು ನಡೆಸಿದ ಪ್ರಶ್ನೋತ್ತರಗಳು ತುಂಬ ಉಪಯುಕ್ತವಾಗಿವೆ:

ಪ್ರ. ಇಂದಿನ ಹಾಗೂ ನಾಳಿನ ರಾಷ್ಟ್ರೀಯ, ಅಂತಾರಾಷ್ಟ್ರೀಯ ಜೀವನ ಕ್ರಮವನ್ನು ಲಕ್ಷಿಸಿ ಭಾರತದ ಶಿಕ್ಷಣದ ಗುರಿ ಯಾವ ಸ್ವರೂಪದ್ದಿರಬೇಕು?

ಉ. ಭಾರತೀಯ ಮಕ್ಕಳು ಅಸತ್ಯವನ್ನು ತಳ್ಳಿ ಹಾಕಿ ಸತ್ಯವನ್ನು ಅಭಿವ್ಯಕ್ತಿಸುವಂತೆ ಅವರನ್ನು ಅಣಿಗೊಳಿಸಬೇಕು.

ಪ್ರ. ಈ ಉನ್ನತ ಧ್ಯೇಯವನ್ನು ಸಾಧಿಸಲು ದೇಶವು ಯಾವ ರೀತಿ ಹೆಜ್ಜೆ ಹಾಕಬೇಕು? ಈ ದಿಸೆಯಲ್ಲಿ ನಾವು ಉಪಕ್ರಮಿಸುವುದು ಹೇಗೆ?

ಉ. ಜಡವು ಚೇತನವನ್ನು ಅಭಿವ್ಯಕ್ತಿಸಲು ಅಣಿಯಾಗುವಂತೆ ಮಾಡಬೇಕು.

ಪ್ರ. ಭಾರತದ ನಿಜವಾದ ಶಕ್ತಿಯಾವುದು? ಆದರ ಗುರಿ ಯಾವುದು?

ಉ. ಈ ಜಗತ್ತಿನಲ್ಲಿ ಜಡವೆನ್ನುವುದು ಸುಳ್ಳು. (ಇಂದಿನ ಅಣುವಿಜ್ಞಾನವೂ ಇದನ್ನೇ ಸಿದ್ಧಮಾಡಿ ತೋರಿಸಿದೆ.) ಜಡವು ಚೇತನವನ್ನು ಪ್ರಕಟಿಸಲು ಸಮರ್ಥವಾಗದ ಹೊರತು ಆದರ ಜಡತನವೆ ನಿಷ್ಪ್ರಯೋಜಕ ನಿಸ್ಸತ್ವ.

ಪ್ರ. ಮಾತಾಜಿಯವರು ಭಾರತದ ವೈಜ್ಞಾನಿಕ, ತಾಂತ್ರಿಕ ಪ್ರಗತಿಯನ್ನು ಹೇಗೆ ಕಾಣುತ್ತಾರೆ? ಇದು ಮನುಷ್ಯನಲ್ಲಿಯ ಚೇತನ ಶಕ್ತಿಯ ಬೆಳವಣಿಗೆಗೆ ಏನು ಸಹಾಯ ನೀಡಬಲ್ಲದು?

ಉ. ಈ ವೈಜ್ಞಾನಿಕ, ತಾಂತ್ರಿಕತೆಯ ಉಪಯೋಗವೆಂದರೆ ಚೇತನವನ್ನು ಅಭಿವ್ಯಕ್ತಿಸಲು ಆದರ ಅಡಿಪಾಯವು ಭದ್ರವಾಗುವಂತೆ, ಪರಿಪೂರ್ಣವಾಗುವಂತೆ ಮತ್ತು ಹೆಚ್ಚು ಫಲಪ್ರದವಾಗುವಂತೆ ಮಾಡುವುದು, ಅಷ್ಟೇ.

ಪ್ರ. ರಾಷ್ಟ್ರೀಯ ಏಕತೆ ವಿಷಯದಲ್ಲಿ ದೇಶವು ವಿವಂಚಿತವಾಗಿದೆ. ಇದರಲ್ಲಿ ಭಾರತದ ಕರ್ತವ್ಯವೇನು? ಜಾಗತಿಕ ಏಕತೆಯ ಬಗ್ಗೆ ತಮಗೇನು ಕಂಡು ಬರುತ್ತದೆ.?

ಉ. ರಾಷ್ಟ್ರ ರಾಷ್ಟ್ರಗಳ ನಡುವಿನ ಏಕತೆ ಜಗತ್ತಿನ ಸದ್ಯದ ಆದ್ಯ ಕರ್ತವ್ಯವಾಗಿದೆ. ಆದರೆ ಈ ಜಗದ್ರಾಷ್ಟ್ರಗಳ ಏಕತೆಯನ್ನು ಸಾಧಿಸುವ ಮುನ್ನ ಪ್ರತಿಯೊಂದು ರಾಷ್ಟ್ರವು ತನ್ನ ಮಟ್ಟಿನ ಏಕತೆಯನ್ನು ಸಾಧಿಸುವುದು ಅವಶ್ಯವಾಗಿದೆ.

ಪ್ರ. ಭಾಷಾ ಸಮಸ್ಯೆಯು ಭಾರತದಲ್ಲಿ ಬಹಳಷ್ಟು ಬಾಧಿಸುತ್ತಿದೆ. ಈ ಬಗ್ಗೆ ಸರಿಯಾದ ನಿಲುವು ಯಾವುದು?

ಉ. ಏಕತೆಯೆಂಬುದು ಜೀವನದ ಸತ್ಯ ಸಂಗತಿಯಾಗಬೇಕು. ಯಾವುದೆ ಸರ್ವಾಧಿಕಾರದ ಶಾಸನ ಆದಾಗಬಾರದು. ಭಾರತವು ನಿಜವಾಗಿಯೂ ಒಂದಾದಾಗ ಅದು ತಂತಾನೆ, ಎಲ್ಲ ಭಾರತೀಯರೂ ಅರಿತು ವ್ಯವಹರಿಸುವಂತಹ ಒಂದು ಭಾಷೆಯನ್ನು ಪಡೆಯುತ್ತದೆ.

ಪ್ರ. ಶಿಕ್ಷಣವೆಂಬುದು ಸಾಕ್ಷರತೆಯೆಂದು ತಪ್ಪು ತಿಳಿಯಲ್ಪಟ್ಟಿದೆ. ಆದೊಂದು ಸಾಮಾಜಿಕ ಪ್ರತಿಷ್ಠೆ ಎನಿಸಿದೆ. ಇದು ಅನಾರೋಗ್ಯಕರ ಲಕ್ಷಣವಲ್ಲವೆ? ಆದರೆ ಶಿಕ್ಷಣಕ್ಕೆ ಅದರ ಆಂತರಿಕ ಮೌಲ್ಯವನ್ನೂ ಆಂತರಿಕ ಆನಂದವನ್ನೂ ತಂದು ಕೊಡುವುದು ಹೇಗೆ?

ಉ. ಸಂಪ್ರದಾಯಗಳ ಜಿಡ್ಡಿನಿಂದ ಹೊರಬನ್ನಿರಿ, ಮತ್ತು ಆತ್ಮೋನ್ನತಿಗಾಗಿ ಹತ್ತಿಬೀಳಿರಿ,

ಪ್ರ. ಇಂದಿನ ನಮ್ಮ ಶಿಕ್ಷಣದ ಸ್ವರೂಪಕ್ಕೆ ಅಂಟಿಕೊಂಡಿರುವ ಭ್ರಮೆ-ಮೋಸಗಳಾವುವು? ಅವುಗಳಿಂದ ಶಿಕ್ಷಣದ ನಿಜ ಸ್ವರೂಪವನ್ನು ತಿಳಿಗೊಳಿಸುವ ಬಗೆ ಹೇಗೆ?

ಉ. ಅ. ಪರೀಕ್ಷೆಯಲ್ಲಿ ತೇರ್ಗಡೆ, ಪದವಿಗಳ ಸಂಪಾದನೆ ಮತ್ತು ಗಳಿಕೆ ಇವುಗಳಿಗೆ ಕೊಟ್ಟಿರುವ ಸಂಪೂರ್ಣ ಮಹತ್ವ ಹೋಗಬೇಕು.
ಬ. ಚೇತನದ ಸಂಪರ್ಕ ಸಾಧನೆಗೆ ಮಹತ್ವ ಕೊಡಲು ಆಗ್ರಹ ಪಡಿಸಿರಿ. ಸತ್ತೆಯ ಸತ್ಯತೆಯ ಅಭಿವ್ಯಕ್ತಿ, ಅಭಿವೃದ್ಧಿಗೆ ಅತ್ಯಂತ ಮಹತ್ವ ಕೊಡಿರಿ.

ಶ್ರೀ ಅರವಿಂದರು ೧೯೦೮ರ ಹೊತ್ತಿಗೇನೆ ಬ್ರಿಟಿಷ್ ಆಡಳಿತದ ಶಿಕ್ಷಣದ ಗುರಿಯನ್ನು ಪೂರ್ಣ ತಿರಸ್ಕರಿಸಿದ್ದಲ್ಲದೆ, ಆ ಮೂರ್ಖತನದ ಶಿಕ್ಷಣಪದ್ಧತಿಯ ಶಾಸ್ತ್ರೀಯವಾಗಿರದೆ ಶಸ್ತ್ರಪ್ರಾಯವಾಗಿದ್ದು ಮಾನವನ ದೇಹವನ್ನು ಮಾತ್ರವನ್ನಲ್ಲ ಆತನ ಆತ್ಮವನ್ನೂ ಸಹ ಕೊಲೆ ಮಾಡುತ್ತದೆ ಎಂದರು. ಇದು ಮನುಷ್ಯ ವ್ಯಕ್ತಿತ್ವದ ಪವಿತ್ರಾಗ್ನಿ. ಅದು ಈ ಮರ್ತ್ಯ ಉಸಿರಾಟಕ್ಕಿಂತಲೂ ಹೆಚ್ಚು ಬೆಲೆಯುಳ್ಳದ್ದು, ಸಾರ್ವತರವಾದುದು. ಶ್ರೀ ಅರವಿಂದರೆ ಮುಂದೆ "ರಾಷ್ಟ್ರೀಯ ಶಿಕ್ಷಣ"ದ ಚಳುವಳಿಯ ಮುಂಚೂಣಿಯನ್ನು ವಹಿಸಿದರು. ಬಂಗಾಲದಿಂದ ಮೊದಲಾಗಿ ಎಲ್ಲ ಕಡೆಗೂ ಈ ಚಳುವಳಿಯನ್ನು ಹಬ್ಬಿಸಿದರು. ನಮ್ಮ ಪ್ರಾಚೀನ ಬ್ರಹ್ಮಚರ್ಯಾಶ್ರಮದ ಗುರುಕುಲಗಳ ಪುನರುತ್ಥಾನಕ್ಕಾಗಿ ಪ್ರಯತ್ನ ನಡೆಸಿದರು. ಯೋಗ ಪದ್ಧತಿಯನ್ನು ಈ ಶಿಕ್ಷಣ ಪದ್ಧತಿಯಲ್ಲಿ ಅಳವಡಿಸಿದರು. ಅದನ್ನು ಆಧುನೀಕರಣಗೊಳಿಸಿ, ನಿಜವಾದ ಮಾತೃಭೂಮಿಯ ಮಕ್ಕಳನ್ನು ತಯಾರಿಸಲು ತೊಡಗಿದರು. ಈ ಪೂಜ್ಯ ಮಾತೃಭೂಮಿಯ ಸೇವೆಗಾಗಿ ದುಡಿಯಲು ಅದಕ್ಕಾಗಿ ಕಷ್ಟಪಡಲು ಮಕ್ಕಳ ಮನಸ್ಸನ್ನು ಅಣಿಗೊಳಿಸಲು ಹವಣಿಸಿದರು.

೧೯೪೭ರಲ್ಲಿ ಭಾರತವು ಸ್ವತಂತ್ರವಾದ ಮೇಲೆ ರಚಿತವಾದ ನಮ್ಮ ರಾಷ್ಟ್ರೀಯ ಸರ್ಕಾರವು ಜನರ ಆಶೆಆಕಾಂಕ್ಷೆ, ಅಭೀಪ್ಸೆ ನಿರೀಕ್ಷೆಗಳನ್ನು ನಿಲುಕುವಂತಹ ಒಂದು ಶಿಕ್ಷಣ ಪದ್ಧತಿಯನ್ನು ರೂಪಿಸಲು ಒಲವನ್ನೇನೋ ತೋರಿಸಿತು. (ಅದೂ ಗಾಂಧೀಜಿಯವರು ಆಗ ಇದ್ದರೆಂದೊ ಏನೊ!). ಆದರೆ ನಮ್ಮ ಸ್ವತಂತ್ರಭಾರತದ ಆಗಿನ ಆಡಳಿತದ ಸೂತ್ರಧಾರಿಗಳು ಕೆಂಪುಪಟ್ಟಿಯಿಂದ ತಾನೇ ಬಂಧಿಸಿಕೊಂಡು, ಹಳೆಯ ಬ್ಯೂರಾಕ್ರಸಿ ಅಧಿಕಾರಿಶಾಹಿ ಮನೋಧೋರಣೆಗೆ ಮರುಳಾಗಿ ಹೋದರು! (But the received tradition weighed too much with the new rulers who too readily became willing prisoners of the old bcracy" ಎಂದು ಪ್ರೊ. ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಒಂದೆಡೆ ಹೇಳಿದ್ದಾರೆ.) ಬ್ರಿಟಿಷ್ ಕಾಲದಂತೆ ಇವರು ಕಮೀಶನ್ ತರುವಾಯ ಕಮೀಶನ್ ನೇಮಿಸತೊಡಗಿದರು. ರಾಧಾಕೃಷ್ಣನ್ ಕಮೀಶನ್, ಮುದಲಿಯಾರ್ ಕಮೀಶನ್, ಕೊಠಾರಿ ಕಮೀಶನ್‌ಗಳು ತಮ್ಮ ತಮ್ಮ ವೈಭವೀಕರಣದ ಪ್ರಸಿದ್ಧಿಯ ಗಳಿಗೆಗಳನ್ನು ಕಂಡವು. ಆದರೆ ಬ್ರಿಟಿಷ್ ಕಾಲದ ಪಾಶ್ಚಾತ್ಯೀಕರಣದ ಮೋಹದಿಂದ ಹೊರಬರುವುದು ಸಾಧ್ಯವಾಗದೆ ಅವೆಲ್ಲಾ ಪಿಸುಕು ಕವದಿಗೆ ತೇಪೆ ಹಚ್ಚುವ ಕೆಲಸಗಳನ್ನು ಮಾತ್ರ ಮಾಡಿದವೆಂದು ಅಯ್ಯಂಗಾರರೇ ಹೇಳಿದ್ದಾರೆ.

೧೯೪೭ ರ ಮುಂಚೆ ಬ್ರಿಟಿಷ್ ಪ್ರಭಾವ ಭಾರತೀಯ ಪುಢಾರಿಗಳನ್ನು ಸ್ಫೂರ್ತಿಸಿ, ಪ್ರೇರೇಪಿಸಿದ್ದರೆ ಈಗ ಅಮೇರಿಕೆ ರಶಿಯಾಗಳು ನಮ್ಮ ಆಡಳಿತಗಾರರ ಶೈಕ್ಷಣಿಕ ಗುರುಗಳಾದರು " Our educational system is now riddled with confusing and contradictory aims and means displaying a negative capability to accommate the co–existence of the old and new and all the colours of the spectrum" ಎಂದೂ ಶ್ರೀ ಅರವಿಂದರ ಖಟ್ಟಾ ಅನುಯಾಯಿ ಪ್ರೊ. ಕೆ. ಆರ್. ಶ್ರೀನಿವಾಸ ಅಯ್ಯಂಗಾರರು ಬಿಚ್ಚುಮನಸ್ಸಿನ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಎಂದರೆ ಸ್ವತಂತ್ರ ಭಾರತದ ಶಿಕ್ಷಣ ಸ್ವರೂಪವು ನಮ್ಮ ದೇಶದ ಸ್ವರೂಪ, ಪರಿಸ್ಥಿತಿ ಪ್ರಾಚೀನ ಪರಂಪರೆಗಳಿಗೆ ಒಗ್ಗದೆ ಇನ್ನಷ್ಟು ಗೊಂದಲಗೆಡಿಸುವ, ವಿರುದ್ಧ ನೀತಿಯ ಉದ್ದೇಶ-ಸಾಧನಗಳನ್ನು ಸ್ವೀಕರಿಸಿ, ನಮ್ಮ ಪ್ರಾಚೀನ ಆರ್ಷೇಯ ಪದ್ಧತಿ-ಆಧುನಿಕ ಪದ್ಧತಿಗಳು ಸಹಜೀವನ ನಡೆಸದಂತಹ ಒಂದು ಒಡಪಿನ ಸನ್ನಿವೇಶವನ್ನು ರಚಿಸಿದವು. ನಮ್ಮ ಆರ್ಷೇಯ ಗುರುಕುಲಗಳು ವೇದಾಧ್ಯಯನ, ಬ್ರಹ್ಮವಿದ್ಯೆಗಳೊಡನೆ ಸಹತ್ವದಿಂದ, ಸಹಕಾರಿತ್ವದಿಂದ, ಸಹಜೀವನವನ್ನು ನಡೆಸುವ ಏಕತಾಭಾವನೆ, ಪಾರಲೌಕಿಕ ಪರತತ್ವಗಳೊಡನೆ, ಆದರ್ಶ ನಿರ್ದುಷ್ಟ ನೈತಿಕ, ಧಾರ್ಮಿಕ ಕಲ್ಪನೆಗಳೊಡನೆ ಕೃಷಿವ್ಯವಸಾಯ, ಬಡಿಗತನ, ಶಿಲ್ಪ ಮೊದಲಾದ ವಿಶ್ವಕರ್ಮ ಕಲೋದ್ಯೋಗಗಳನ್ನೂ, ಯುದ್ಧ ಕಲೆಗಳನ್ನೂ ಕೂಡ ಬೋಧಿಸಿದವು ಎಂಬುದನ್ನು ಮರೆಯಬಾರದು. ಮುಂದಿನ ಬೌದ್ಧ, ಜೈನ ಪದ್ಧತಿಯ ವಿಶ್ವವಿದ್ಯಾಲಯಗಳೂ ತಮ್ಮ ಧರ್ಮ ತತ್ವಗಳ ಬೋಧೆಗಳೊಡನೆ ಮೇಲ್ಕಾಣಿಸಿ ಯುದ್ಧಕಲೆ, ವಿಶ್ವಕರ್ಮ ಕಲೆಗಳನ್ನೂ ಬೋಧಿಸಿದವು. ನಲಂದ ತಕ್ಷಶಿಲೆ ವಿಕ್ರಮಶಿಲೆಗಳು ಇದಕ್ಕಾಗಿ ಪ್ರಸಿದ್ಧಿ ಪಡೆದಿದ್ದವು.

ಪಾಂಡಿಚೇರಿಯ ಅಂತಾರಾಷ್ಟ್ರೀಯ ಶಿಕ್ಷಣ ಹಾಗೂ ಆರೊವಿಲ್‌ನ ಶೈಕ್ಷಣಿಕ ಅದ್ಭುತ ಸಾಹಸಗಳು ಹೊಸ ಹೊಸ ಶೈಕ್ಷಣಿಕ ಕ್ಷಿತಿಜಗಳನ್ನು ತೆರೆದಿವೆ. ಪ್ರಜ್ಞೆಯ ಬೆಳವಣಿಗೆಗಾಗಿ ಶಿಕ್ಷಣ, ನಾಳಿನ ಸ್ವತಂತ್ರ ಜಗತ್ತಿಗಾಗಿ ಶಿಕ್ಷಣ, ೨೧ನೆಯ ಶತಮಾನದ ಭವಿಷ್ಯವನ್ನು ಪೋಷಿಸುವ ಹೊಸಶಿಕ್ಷಣ, ವಿಶ್ವಬಂಧುತ್ವ, ಸಹಬಾಳ್ವೆಯ ಹೊಸಶಿಕ್ಷಣ ಮುಖ್ಯವಾಗಿ ಮನುಷ್ಯನ, ಮನುಕುಲದ ದೈವೀಜೀವನದತ್ತ ಪರಿವರ್ತನೆ ಸಾಧಿಸುವ ಶಿಕ್ಷಣ, ಜಾಗತಿಕ ಪರಿವರ್ತನೆಯನ್ನು ಸಾಧಿಸುವ ಭಾರತೀಯ ವಿದೇಶದ ಈ ಆಶ್ರಮವಾಸಿ ವಿದ್ಯಾರ್ಥಿಗಳ ನೈತಿಕ, ಮಾನಸಿಕ, ಆಧ್ಯಾತ್ಮಿಕ ಬೆಳವಣಿಗೆಯನ್ನು ಸಾಧಿಸುವ ಶಿಕ್ಷಣ ಇಲ್ಲಿ ಸಾಧ್ಯವಾಗಿದೆ. ಪರೀಕ್ಷೆಗಳಿಲ್ಲದ ಪ್ರವೇಶಕ್ಕಾಗಿ ಲಂಚ ದೇಣಿಗೆಗಳಿಲ್ಲದ, ವೈಯಕ್ತಿಕ ಅಂತರ್ವಿಕಾಸ, ಅಂತರಿಕ ಬೆಳವಣಿಗೆಯ ಮೇಲಿಂದ ತೇರ್ಗಡೆ ಹೊಂದುತ್ತ, ಶಿಕ್ಷಣ ಶಿಖರಾರೋಹಣ ಇಲ್ಲಿ ಯೋಜಿತವಾಗಿದೆ.

* * *

ನಮ್ಮ ಶಿಕ್ಷಣ ಪ್ರಪಂಚದಲ್ಲಿ ಆಮೂಲಾಗ್ರ ಕ್ರಾಂತಿಯನ್ನೆಸಗುವುದು ಈಗಿನ ಜರೂರಿಯ ಅವಶ್ಯಕತೆ. ಪಾಂಡಿಚೇರಿ ಆಶ್ರಮ ಮತ್ತು ಆರೋವಿಲ್‌ಗಳ ಶಿಕ್ಷಣ ಕೇಂದ್ರಗಳಂತೆ, ಶಾಲೆಯೆಂದರೆ ಹೇಗಿರಬೇಕು?

> 'School is not a place
> but a way of living'

ಎಂಬಂತೆ,

> ಶಾಲೆಯೆಂಬುದು ನಾಲ್ಕು ಗೋಡೆಗಳಲ್ಲ,
> ಅದು ಜೀವನದ ರೀತಿ,
> ಅಭೀಪ್ಸೆ ಮತ್ತು ಪ್ರಗತಿಗಳ ನೆಲೆ.

ಸಭೆ ಸಮ್ಮೇಲನ ವಿಚಾರವಿನಿಮಯ ವೇದಿಕೆಯು
ಆಸಕ್ತಿಯ ಆಪ್ತೇಷ್ಟರೊಡನೆ
ವಸ್ತು, ವಿವಿಧ ತತ್ತ್ವದೊಡ ಸಂಪರ್ಕವು
ಸುಲಭವಾಗಿಹುದಲ್ಲಿ
ಉಪಾಧ್ಯ ಪ್ರಾಧ್ಯಾಪಕರಿಲ್ಲದಕೆ
ಸಹಾಯಕರು ಮಾತ್ರ–ಬೇಕೆನಿಸಿದರಷ್ಟೆ

ಇದು ಶ್ರೀ ಮಾತಾರವಿಂದ ಕಲ್ಪನೆಯ ಶಿಕ್ಷಣಕೇಂದ್ರ. ವಿದ್ಯಾರ್ಥಿಗಳಲ್ಲಿ ಒಂದು ಮನೋವೈಜ್ಞಾನಿಕ ಕ್ರಾಂತಿ (psychlic revolution) ಉಂಟಾಗದ ಹೊರತು ಎಷ್ಟೇ ಬೋಧನೆ, ಗುರುಶಿಷ್ಯ ಸಂವಾದ ನಡೆದರೂ ಪ್ರಯೋಜನಕಾರಿಯಾಗದು. ಈ 'ಸೈಕಿಕ್ ರೆವೊಲ್ಯೂಶನ್'ನಿಂದಲೆ ಮಕ್ಕಳಲ್ಲಿ ಪ್ರಜ್ಞಾವಿಕಾಸಕ್ಕೆ ಅವಕಾಶವುಂಟಾಗುವುದು. ಇದು ನಿಜವಾದ ಯೋಗಸಾಧನೆಯಿಂದ ಮಾತ್ರ ಸಾಧ್ಯ. "Yoga alone will effect the ultimate break through and revolutionise our education and life" ಎಂದು ಶ್ರೀ ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ ಅವರು 'Education for Tomorrow' ಎಂಬ ತಮ್ಮ ಪ್ರಬಂಧದಲ್ಲಿ ಹೇಳಿದ್ದಾರೆ. ಶ್ರೀ ಅರವಿಂದರ ಮೇರೆಗೆ ಶಿಕ್ಷಣದ ಗುರಿ ಪ್ರಜ್ಞಾವಿಕಾಸ, ತನ್ಮೂಲಕ ಮಾನವನು ದಿವ್ಯತೆಯ ಎತ್ತರಕ್ಕೆ ಬೆಳೆಯುವುದು. ಇದರ ಸಾಧನಮಾರ್ಗವೂ ಕ್ರಾಂತಿಕಾರಿಯಾಗಿರಬೇಕು. ಮನುಷ್ಯನು ಈ ಸಮಗ್ರ ಶಿಕ್ಷಣದಿಂದ ಪುನರ್ರಚಿಸಲ್ಪಡಬೇಕು (Re-make man); ಸಮಾಜವೂ ಪುನರ್ರಚಿಸಲ್ಪಡಬೇಕು. ಜಾಗತಿಕ ಒಂದು ಕುಟುಂಬವಾಗಿ ಜಗತ್ತು ಪುನರ್ರಚಿಸಲ್ಪಡಬೇಕು. ಈ ಮೂಲಕ ಪೃಥ್ವಿಯ ಹೊಸ ಸ್ವರ್ಗವಾಗಿ ಪರಿವರ್ತಿತವಾಗಬೇಕು.

ಹೀಗೆ ನಾವು ಭಾರತವನ್ನು ಪುನಃ ಅದರ ಆರ್ಷೇಯ ಘನತೆಗೆ ಎತ್ತರಿಸಬೇಕು. ಅದಕ್ಕಾಗಿ ಶಿಕ್ಷಣದಲ್ಲಿ ಆಧ್ಯಾತ್ಮೀಕರಣವನ್ನು ತರಬೇಕು. ಇಂದು ನಾವು 'Secularising education' ಎನ್ನುತ್ತ ಏನೇನೋ ರಾಜಕೀಯ, ಜಾತೀಯ ಮೀಸಲಾತಿ ಆಟ-ಮೇಲಾಟ ನೋಡುತ್ತಿದ್ದೇವೆ. ಆದರೆ ಭಾರತ ಪುನರುಜ್ಜೀವನದ ಮುಂದಾಳುಗಳೆಲ್ಲ ಆಧ್ಯಾತ್ಮೀಕರಣವು ಬದುಕಿನ ಎಲ್ಲ ಕ್ಷೇತ್ರಗಳನ್ನು, ಒಳಗೊಳ್ಳಬೇಕು ಇದರಲ್ಲಿ ಶಿಕ್ಷಣ ಕ್ಷೇತ್ರವೆ ಮುಖ್ಯ ಎಂದು ಪ್ರತಿಪಾದಿಸಿದ್ದಾರೆ. ಶ್ರೀ ಅರವಿಂದರಂತೂ ತಮ್ಮ 'Indian Renaissance' (ಭಾರತೀಯ ನವಜನ್ಮ) ಎಂಬ ಕಣ್ತೆರೆಯಿಸುವ ಗ್ರಂಥದಲ್ಲಿ ಆಧ್ಯಾತ್ಮೀಕರಣವೆ ಪುನರುಜ್ಜೀವನದ ಬುನಾದಿ ಎಂದು ಸೂಚಿಸಿದ್ದಾರೆ.

ಆದರೆ ಆಧ್ಯಾತ್ಮೀಕರಣವನ್ನು ಜಾತ್ಯಾತೀತತೆಯೊಂದಿಗೆ ಸಮನ್ವಯಿಸುವುದು ಹೇಗೆ? ನಾವು ನೈತಿಕತೆ, ಧಾರ್ಮಿಕತೆಗಳನ್ನು, ಆಧ್ಯಾತ್ಮಿಕತೆಯೊಡನೆ ತಪ್ಪು ತಿಳಿವಳಿಕೆಯಾಗುವಂತೆ ಗೊಂದಲಗೆಡಿಸುತ್ತಿದ್ದೇವೆ. ಆಧ್ಯಾತ್ಮಿಕತೆಯು ಧಾರ್ಮಿಕತೆ, ನೈತಿಕತೆಗಳಿಗಿಂತ ಆಳವಾದದ್ದು, ಉನ್ನತವಾದದ್ದು. ಆಧ್ಯಾತ್ಮಿಕತೆಯು ಈ ಎಲ್ಲ ಸೃಷ್ಟಿಯ ಹಿಂದಿರುವ ಸತ್ಯವನ್ನು, ಯಥಾರ್ಥತೆಯನ್ನು, ಅನೇಕತೆಯ ಹಿಂದಿನ ಏಕತೆಯನ್ನು, ಕಂಡು ಹಿಡಿದು ಅದನ್ನು

ಅಭಿವ್ಯಕ್ತಿಸುವ ಅಭೀಪ್ಸೆ. ("spirituality is the aspiration to find and express the Reality behind all existence, the unity behind diversity of creation") ಆಧ್ಯಾತ್ಮಿಕತೆಯು ತನ್ನ ವ್ಯಾಪ್ತಿಯಲ್ಲಿ ಎಲ್ಲ ಧರ್ಮಗಳನ್ನು, ನೈತಿಕತೆಯನ್ನೂ ಮತ್ತು ನೀತಿಶಾಸ್ತ್ರವನ್ನೂ; ವಿಜ್ಞಾನ ಮತ್ತು ತಾಂತ್ರಿಕತೆಯನ್ನು ಸಹ ಒಳಗೊಂಡಿರುತ್ತದೆ.

ಜಾತ್ಯಾತೀತತೆ(secularily) ಮತ್ತು ಆಧ್ಯಾತ್ಮಿಕತೆ(spirituality)ಗಳಲ್ಲಿ ಅವಿರುದ್ಧ ಭಾವವನ್ನು ಕಂಡಿದ್ದಾರೆ ಡಾ||ರಾಧಾಕೃಷ್ಣನ್. ತಮ್ಮ ೧೯೪೮ರ ಶೈಕ್ಷಣಿಕ ಕಮೀಶನ್ ವರದಿಯಲ್ಲಿ ಅವರು ಹೀಗೆ ಹೇಳುತ್ತಾರೆ:

"To be a secular is not to be religiously illiterate. It is to be deeply spiritual and not narrowly religious" ಎಂದರೆ, ಜಾತ್ಯಾತೀತನಾಗಿರುವುದೆಂದರೆ ಧಾರ್ಮಿಕವಾಗಿ ಅಜ್ಞಾನಿಯಾಗಿರುವುದಲ್ಲ; ಸಂಕುಚಿತಾರ್ಥದಲ್ಲಿ ಧಾರ್ಮಿಕನಾಗಿರುವುದಲ್ಲ. ಡಾ. ರಾಧಾಕೃಷ್ಣನ್ ಅಭಿಪ್ರಾಯದಲ್ಲಿ ಸೆಕ್ಯೂಲರ್ ಆಗಿರುವುದೆಂದರೆ spiritual ಆಗಿರುವುದೇ ಸರಿ. ಏಕೆಂದರೆ ಆಧ್ಯಾತ್ಮಿಕತೆಯಲ್ಲಿ ಯಾವುದೇ ಧರ್ಮ, ಜಾತಿ ಅಡಕವಾಗಿರುವುದಿಲ್ಲ. 'ಆತ್ಮ ಆವ ಕುಲ?' ಎಂದು ಕನಕದಾಸರು ಪ್ರಶ್ನಿಸಿಲ್ಲವೆ? ಹಾಗೆ secularism ಗೂ ಯಾವ ಕುಲ, ಯಾವ ಜಾತಿ ಇಲ್ಲ. ಸರ್ವಜಾತಿ, ಸರ್ವಧರ್ಮಗಳಿಗೆ ಸಮಾನ ಗೌರವ ತೋರುವುದೆ 'ಸೆಕ್ಯೂಲ್ಯಾರಿಜಂ'. ಋಷಿಗಳ ಗುರುಕುಲದಲ್ಲಿ ಇಂತಹ 'ಸೆಕ್ಯೂಲರ್, ಸ್ಪಿರಿಚ್ಯೂಯಾಲಿಜಂ' ಅನುಷ್ಠಾನದಲ್ಲಿದ್ದಿತು. ರಾಜ ಕುಮಾರರೊಡನೆ ಕೃಷಿಕರ, ಶ್ರಮಿಕರ ಮಕ್ಕಳೂ ಸಮಾನವಾಗಿ ವಿದ್ಯಾಭ್ಯಾಸ ಮಾಡುತ್ತಿದ್ದರು. ಉಭಯತರಿಗೂ ಚತುರ್ವೇದ ಬೋಧೆಯೊಂದಿಗೆ ಅವರವರ ಸ್ವಧರ್ಮವಿಶಿಷ್ಟ ಕೃಷಿ, ಯೋಧಕರ್ಮ, ವಿಶ್ವಕರ್ಮಗಳು ಪ್ರಾತ್ಯಕ್ಷಿಕೆಯೊಂದಿಗೆ ಅಭ್ಯಸಿಸಲ್ಪಡುತ್ತಿದ್ದವು. ಈ ವಿಭಿನ್ನ ಸ್ವಧರ್ಮ, ಸ್ವಕರ್ಮ, ವ್ಯವಸಾಯಾಧ್ಯಯನಗಳಿಗಿಂತ ಬ್ರಹ್ಮವಿದ್ಯಾಧ್ಯಯನ, ಆತ್ಮ ವಿದ್ಯಾಭ್ಯಾಸ, ಸತ್ಯಜ್ಞಾನ ವಿಪಕ್ಷೆ ಇವು ಮುಖ್ಯ ಲಕ್ಷ್ಯಗಳಾಗಿರುತ್ತಿದ್ದವು. ಇದಲ್ಲದೆ ಉಳಿದ ಜ್ಞಾನವಿಷಯಗಳು ಗೌಣವೆಂದು ಭಾವಿಸಲ್ಪಡುತ್ತಿದ್ದವು. ಹೀಗೆ ಲೌಕಿಕ, ಆಧ್ಯಾತ್ಮಿಕವಾದ ಎಲ್ಲಾ ವಿಷಯಗಳು ಸರಿಸಮನಾಗಿ ಸಮನ್ವಯ ರೂಪದಲ್ಲಿ ಬೋಧಿಸಲ್ಪಡುತ್ತಿದ್ದವು.

ಈಗ ಶ್ರೀ ಅರವಿಂದರ ಪರಿಕಲ್ಪನೆಯ 'ಸಮಗ್ರಶಿಕ್ಷಣ' ಎಂದರೇನು–ಸ್ವಲ್ಪ ಆಲೋಚಿಸಬಹುದಾಗಿದೆ. ಪಾಂಡಿಚೇರಿ ಆಶ್ರಮ ಮತ್ತೂ ಆರೋವಿಲ್‌ನಲ್ಲಿ ಈ ಶಿಕ್ಷಣ ಕ್ರಮವೆ ಅನುಷ್ಠಾನಿಸಲ್ಪಡುತ್ತಿದ್ದು, ಅದು ಮುಖ್ಯವಾಗಿ ಐದು ಅಂಗಗಳ ಸಮಾನ ಸಮರಸಪೂರ್ಣ ಬೆಳವಣಿಗೆಯತ್ತ ಗಮನವಿತ್ತಿದೆ. ಈ ಸಮಗ್ರಶಿಕ್ಷಣದಲ್ಲಿ ಮೊದಲು ಶಾರೀರಿಕ ಶಿಕ್ಷಣ, ಆಮೇಲೆ ಪ್ರಾಣಿಕ ಶಿಕ್ಷಣ ಇದಕ್ಕೆ 'education of the vital' ಎನ್ನುತ್ತಾರೆ. ಮೂರನೆಯದಾಗಿ ಮಾನಸಿಕ ಶಿಕ್ಷಣ (ಇದರಲ್ಲಿ higher mind, illumined mind, intuitive mind, overmind, supermind ಎಂದರೆ ಉನ್ನತಮನ, ಪ್ರದೀಪ್ತಮನ, ಅಂತಃಪ್ರಬುದ್ಧಮನ, ಅಧಿಮನ ಮತ್ತು ಸುಪ್ರಮನ ಎಂದು ಐದು ಸ್ತರಗಳು ತದನುಸಾರವಾಗಿ ಐದುಸ್ತರರ ಬೋಧನೆಗಳು) –ನಾಲ್ಕನೆಯದಾಗಿ ಚೈತ್ಯಾತ್ಮಕ.

(psychic) ಶಿಕ್ಷಣ ಹಾಗೂ ಕೊನೆಯದಾಗಿ ಆಧ್ಯಾತ್ಮಿಕ ಶಿಕ್ಷಣ. ಈ ಐದೂ ಅಂಗಗಳನ್ನು ಒಳಗೊಂಡಿರುವುದೇ ಸಮಗ್ರ ಶಿಕ್ಷಣ. ಸಮಗ್ರ ಶಿಕ್ಷಣವನ್ನು ಪಡೆದ ವ್ಯಕ್ತಿ ಸಮಗ್ರ ಅಥವಾ ಪರಿಪೂರ್ಣ (integral) ಮನುಷ್ಯನಾಗುತ್ತಾನೆ.

ಇದರಲ್ಲಿ ಪ್ರತಿಯೊಂದು ಅಂಗಕ್ಕೂ ಒಂದು ವಿಶಿಷ್ಟ ಬೆಳವಣಿಗೆ ಇದೆ. ಆಧ್ಯಾತ್ಮಿಕ ಶಿಕ್ಷಣವೆಂದರೆ spiritual (ಇದೇ ನಿಜವಾಗಿ (Secular) ಎಂದು ಗಮನಿಸಿದ್ದೇವೆ.) ಅದು ಆತ್ಮಕ್ಕೆ ಸಂಬಂಧಿಸಿದ್ದು, ಅದನ್ನು ಆತ್ಮ, ಬ್ರಹ್ಮ, ಸತ್ಯ, ಯಥಾರ್ಥ ಅವ್ಯಯ ಏನೂ ಅನ್ನಬಹುದು. ಅದು ಸಚ್ಚಿದಾನಂದ. ಅವ್ಯಯವು ಬದಲಾಗದೆ (unchanged) ಉಳಿಯುವಂತಹದು. ಸತ್ಯವು (ಅಥವ ಸಚ್ಚಿದಾನಂದವು) ಪ್ರೇಮ, ಜ್ಞಾನ, ಶಕ್ತಿ, ಸೌಂದರ್ಯ ತತ್ವಗಳಿಂದ ಕೂಡಿರುತ್ತದೆ. ದೈಹಿಕದಿಂದ ಆರಂಭವಾಗುವ ಈ ಸಮಗ್ರ ಶಿಕ್ಷಣದ ಮೊದಲನೆಯ ಮೆಟ್ಟಿಲೆ ದೈಹಿಕ(ಶಾರೀರಿಕ)ಶಿಕ್ಷಣ. ದೈಹಿಕ ಶಿಕ್ಷಣವೆಂದರೆ ಬರಿ ದೈಹಿಕವಾಗಿ ಬೆಳೆದು ಧಾಂಡಿಗ, ಧಡೂತಿ ಆಗುವುದು ಎಂದಲ್ಲ. ವ್ಯಾಯಾಮದಿಂದ 'ನ್ಯೂರೋ ಮಸ್ಕ್ಯೂಲರ್, ದೇಹ ರಚನೆ, ಯೋಗಾಸನ-ಧ್ಯಾನಗಳಿಂದ ಆಂತರಿಕದೊಡನೆ ದೇಹದ ಬಾಹ್ಯ ಆರೋಗ್ಯವಂತಿಕೆ, ಕ್ರೀಡೆ, ಆಟಪಾಠಗಳಿಂದ ಕ್ರೀಡಾಮನೋಭಾವನೆಗಳನ್ನು ಬೆಳೆಯಿಸುವುದು. ಈ ದೇಹ ದೈವೀ ಆವಾಸವಾಗುವ ಹಾಗೆ ಅದನ್ನು ಶಿಸ್ತು, ಸಾಮರಸ್ಯ, ನೈತಿಕತೆ, ಶೀಲ ಚಾರಿತ್ರ್ಯಗಳ ತಳಹದಿಯ ಮೇಲೆ ಬೆಳೆಯಿಸುವುದು. ಈ ದೈಹಿಕ ಬೆಳವಣಿಗೆಯು ಚೇತನದ ಬೆಳವಣಿಗೆಯೊಂದಿಗೇ ಸಾಗಬೇಕು. Consciousness ಎನ್ನುವುದು ಈ ಐದೂ ಅಂಗಗಳಲ್ಲಿ ಕ್ರಮವಾಗಿ, ಸಮಗ್ರವಾಗಿ ಬೆಳೆಯುತ್ತ ಬರುತ್ತದೆ. Change of body linked with change of consciousness ಎನ್ನುವ ರೀತಿಯಲ್ಲಿ, ದೈಹಿಕ ಬೆಳವಣಿಗೆ ನಡೆಯಬೇಕು. 'ಗುಡಿಯ ನೋಡಿರಣ್ಣ ದೇವರ ಗುಡಿಯ ನೋಡಿರಣ್ಣ' ಎಂದು ನಮ್ಮ ಶರೀಫ್ ಸಾಹೇಬರು ಹಾಡಿಲ್ಲವೆ? ಹಾಗೆ ಈ ದೇಹವು ಒಂದು ದೇವಾಲಯವಾಗಿ ಅಂತರ್ನೈರ್ಮಲ್ಯ, ಬಹಿರ್ನೈರ್ಮಲ್ಯಗಳಿಂದ ಕೂಡಿ ಬೆಳೆಯಬೇಕು.

ದೇಹದ ದೇವಾಲಯದ ಆಂತರ್ಯವು ಶುದ್ಧವಾಗಿದ್ದರೇನೆ ಅಲ್ಲಿ ದೇವತ್ವವು ನೆಲೆಸೀತು. ದೇಹದ ಪ್ರತಿಯೊಂದು ಕೋಶವೂ ಪ್ರಜ್ಞೆಯಿಂದ ಅರಳಬೇಕು. ಪರಿಪೂರ್ಣತೆಯ ದಿಸೆಯಲ್ಲಿ ಇದು ಮೊದಲ ಹೆಜ್ಜೆ. ಈ ದೇಹವು 'divinise' ಆಗಬೇಕೆಂದಿದ್ದಾರೆ ಶ್ರೀ ಅರವಿಂದರು. ಆಗಬೇಕೇನು, ವಿಕಾಸಕ್ರಮದಿಂದ ಅದು ಆಗೇ ತೀರುತ್ತದೆಂಬುದು ಅವರ ಸಿದ್ಧಾಂತ. ಈ ದೈಹಿಕ ಶಿಕ್ಷಣ ಮಗುವಿನ ಜನ್ಮದಿಂದಲೆ ಜೀವನುದದ್ದಕ್ಕೂ ನಡೆದೇ ಇರುತ್ತದೆ. ಇದರಿಂದಾಗಿ ಎಲ್ಲ ದೈಹಿಕ ಕಾರ್ಯಗಳ ಕ್ರಮಬದ್ಧತೆ ಶಿಸ್ತುಗಳನ್ನು ಸಾಧಿಸುವುದು, ಎಲ್ಲ ದೇಹಾಂಗಗಳ ಸಂಪೂರ್ಣ, ವ್ಯವಸ್ಥಿತ, ಸಮತೋಲನದ ಬೆಳವಣಿಗೆಯನ್ನು ಪಡೆಯುವುದು, ಯಾವುದೆ ಶಾರೀರಿಕ ಅಂಗಗಳ ದೋಷ, ವಿರೂಪಗಳಿದ್ದರೆ ಅವನ್ನು ತಿದ್ದುವುದು - ಈ ದೈಹಿಕ ಶಿಕ್ಷಣದ ಉದ್ದೇಶ. ಪ್ರಾಣಿಕ ಶಿಕ್ಷಣದಲ್ಲಿ ಮನುಷ್ಯ ಕಾಮನಾ ಪ್ರವೃತ್ತಿಗಳನ್ನು, ಸಂವೇದನೆಗಳನ್ನು, ಆಸೆ ಆಮಿಷಗಳನ್ನು ನಿಯಂತ್ರಿಸುವಂತೆ ಈ ದುಷ್ಟವೃತ್ತಿಗಳಿಗೆ ಕಡಿವಾಣ ಹಾಕುವುದು. "The vital, the seat of our impulses and desires of enthusiasm and violence, of dynamic energy,

passions and will". ಈ ಪ್ರಾಣಿಕವೆಂಬುದು ಕಾಮೇಚ್ಛೆಗಳಲ್ಲದೆ ಹಿಂಸೆ, ಹುಮ್ಮಸ್ಸು, ಗತಿಶೀಲವಾದ ಭಾರೀ ಉತ್ಸಾಹಗಳ ಆಗರ. ಈ ಪ್ರಾಣಿಕವು ಮನಬಂದಂತೆ, ಸಿಕ್ಕ ಹಾಗೆ ಸೊಕ್ಕಿನಿಂದ ಆಳಬೇಕು ಎನ್ನುವ ಕ್ರೂರ ರಾಜನಿದ್ದಂತೆ. ಈ ಪ್ರಾಣಿಕಕ್ಕೆ ಗೊತ್ತು ಗುರಿ ಎನ್ನುವುದೆ ಇರುವುದಿಲ್ಲ. ಇಂತಹ ಪ್ರಾಣಿಕ ಬದುಕು ವ್ಯರ್ಥವೆಂದು ಮಾತೆಯವರು ಹೇಳುತ್ತಾರೆ. 'An aimless life' (ಉದ್ದೇಶ ಹೀನ ಬದುಕಿಗಿಂತಲೂ) ಕೇವಲ ಪ್ರಾಣಿಕವಾದ ಜೀವನ ಶೋಚನೀಯ(miserable) ವಾದದ್ದು. ಇಂತಹ ಅನಿಷ್ಟಗಳಿಂದ ದೂರಿಡಲು ಮಕ್ಕಳನ್ನು ಸ್ಕೌಟ್ ಮತ್ತೂ ಗರ್ಲ್‌ಗೈಡ್‌ಗಳಂತಹ ಶಿಸ್ತಿನ ವ್ಯವಸ್ಥೆಗಳಿಗೆ ಒಳಪಡಿಸುವುದು ವಿಹಿತ. ಆದರ್ಶ ಚರಿತ್ರಗಳ ಅಭ್ಯಾಸ, ಉದಾತ್ತ ಧ್ಯೇಯ ಕಲ್ಪನೆಗಳ ಸಾಹಿತ್ಯ ವಾಚನ, ಧರ್ಮಗ್ರಂಥಗಳ ತತ್ವಾದರ್ಶಗಳ ಸಾರಗ್ರಹಣ - ಪ್ರಾಣಿಕ ಶಿಕ್ಷಣಕ್ಕೆ ಸಹಾಯಕ. ಇಂದ್ರಿಯಗಳನ್ನು ಚುರುಕುಗೊಳಿಸುವುದು, ಸೃಜನಶೀಲ ಕಲಾತ್ಮಕ ಸಾಮರ್ಥ್ಯಗಳನ್ನು ಬೆಳೆಸುವುದು, ಮತ್ತು ಎಲ್ಲಕ್ಕೂ ಮಿಗಿಲಾಗಿ ಆಂತರಿಕವಾಗಿ ಎಲ್ಲ ಚಲನವಲನಗಳು ಜಾಗೃತಗೊಳ್ಳುವಂತೆ ತರಬೇತಿ ನೀಡುವುದು. ಇದರಿಂದಾಗಿ ಮಕ್ಕಳ ಪ್ರಕೃತಿ ಜನ್ಯ ದೋಷಗಳನ್ನು ಸರಿಪಡಿಸಲು ಸಾಧ್ಯವಾಗುತ್ತದೆ. ಅಂತೆಯೆ ಇದು ಬಹಳ ಮಹತ್ವದ್ದಾಗಿದೆ. ಪ್ರಾಣಿಕ ಪ್ರಜ್ಞೆಯನ್ನೂ ಪರಿವರ್ತಿಸುವುದು ಸಾಧ್ಯವಿದೆ. ಈ ಪರಿವರ್ತನೆಯ ಆಂತರಿಕ ಸಾಹಸದ(inner adventure) ಜೀವಾಳವಾಗಿದೆ. ಪ್ರಾಣಿಕವು ಜೀವನೋತ್ಸಾಹ ಮೂಲಸೆಲೆಯಾದುದರಿಂದ ಅದನ್ನು ಶುಚಿಗೊಳಿಸಿ ಶುದ್ಧೀಕರಿಸುವುದು ಬಹಳ ಮಹತ್ವದ್ದಾಗಿದೆ. ಹೀಗೆ ಉದಾತ್ತಗೊಳಿಸಲ್ಪಟ್ಟ ಪ್ರಾಣಿಕವು ಒಂದು ಪರಿಪೂರ್ಣ ಉಪಕರಣವಾಗಿ ನಾವು ಈ ಭೌತಿಕ ಜಗತ್ತಿನಲ್ಲಿ ಸಾಧಿಸಬೇಕಾದುದಕ್ಕೆಲ್ಲಕ್ಕೂ ಸಮರ್ಥ ಸಾಧನ ಮಾತ್ರ. ಇದರ ವ್ಯಾಪಕ ಮತ್ತು ವ್ಯವಸ್ಥಿತ ರೀತಿಯ ಶಿಕ್ಷಣ ಆಗತ್ಯ. ಸಹನೆಯಿಂದ, ಸ್ಥಿರ ಪ್ರಯತ್ನದಿಂದ, ಅಚಲ ಸಂಕಲ್ಪದಿಂದ ಇಂದಿನ ಗೊಂದಲಮಯ ವಿಚಾರ ಸರಣಿಗಳನ್ನು ಸರಿಪಡಿಸುವುದು ಈ ಪ್ರಾಣಿಕ ಶಿಕ್ಷಣದ ಮಹತ್ವದ ಅವಶ್ಯಕ ಗುರಿಯಾಗಿದೆ.

ಇನ್ನು ಮೂರನೆಯದಾಗಿ, ಮಾನಸಿಕ ಶಿಕ್ಷಣ ಮಕ್ಕಳ ಮಾನಸಿಕ ಅಭ್ಯಾಸ ಎಲ್ಲ ಶಿಕ್ಷಣಕ್ಕೆ ಮೂಲಾಧಾರ. ಮಕ್ಕಳ 'ಸೈಕಾಲಜಿ' ಅಭ್ಯಸಿಸಿ ಶಿಕ್ಷಣ ನೀಡುವ ಕ್ರಮ ಇನ್ನೂ ಸಾರ್ವತ್ರಿಕವಾಗಿ ಕಂಡುಬರುವುದಿಲ್ಲ. ಮಕ್ಕಳ ಮೆದುಳೆಂದರೆ ಬರಿ ಮಾಹಿತಿ ತುರುಕುವ 'ಹೋಲ್ಡಾಲ್' ಅಲ್ಲ. ಮಕ್ಕಳು 'ರ್‍ಯಾಂಕ್' ಪಡೆಯಬೇಕೆಂಬ ಛಲ ಪಾಲಕರಿಗೂ ಶಾಲೆಯ ಶಿಕ್ಷಕರಿಗೂ ಬಡಿದುಕೊಂಡು ಆ ಉದ್ದೇಶ ಸಾಧನೆಗಾಗಿ ಮಕ್ಕಳಲ್ಲಿ 'ಘೋಂಕಪಟ್ಟಿ' ಮಾಡಿಸುವ ಈ ಮೂಲಕ ಅವರ ಸ್ಮರಣ ಶಕ್ತಿಯನ್ನು ಹೆಚ್ಚಿಸುವ ಪ್ರಯತ್ನಗಳು ನಡೆಯುತ್ತಿವೆ. ಸ್ಮರಣಶಕ್ತಿ ಸುಧಾರಿಸಬೇಕು ನಿಜ. ಅದರೊಂದಿಗೆ ಪ್ರಜ್ಞಾಶಕ್ತಿಯೂ ಬೆಳೆಯುವಂತಾಗಬೇಕು. ಮಕ್ಕಳ ಬುದ್ಧಿ ಪರೀಕ್ಷೆಯೆಂದರೆ ಅವರ ಸ್ಮರಣ ಶಕ್ತಿಯ ಪರೀಕ್ಷೆಯಾಗಬಾರದು. ನಿಜವಾದ ತಿಳುವಳಿಕೆಗೆ ವಿಷಯಗ್ರಹಣ ಶಕ್ತಿ ಬೇಕು. ಇದಕ್ಕೆ ಮನಸ್ಸನ್ನು ಏಕಾಗ್ರಗೊಳಿಸುವ, ಕೇಂದ್ರಿಕರಿಸುವ ಶಕ್ತಿ ಸಾಧನೆಬೇಕು. ಇದು ಸ್ವೀಕಾರ ಸಮರ್ಥ ನಿಶ್ಶಬ್ದತೆಯಲ್ಲಿ ನಡೆಯಬೇಕು 'Concentrated mind in a receptive silence' ಎಂಬಂತೆ. ಮಾನಸಿಕ ಶಿಕ್ಷಣವು ಮಕ್ಕಳ ಮನಸ್ಸಿನ ಆಳ, ಎತ್ತರ, ಸ್ಥಿತಿ-ಗತಿಗಳ

ಪೂರ್ವ ಕಲ್ಪನೆಯ ಮೂಲಕ ನಡೆದಾಗ ವ್ಯಕ್ತಿಯು ಅವಶ್ಯಕ ಸಂಸ್ಕಾರ ಪಡೆದು ಸಂಸ್ಕೃತಿವಂತನಾಗಿ ಬೆಳೆಯುತ್ತಾನೆ. ಮಗುವಿನ ಮನಸ್ಸು ಹೂವಿನ ಹಾಗೆ ಅರಳುವಂತೆ ಶಿಕ್ಷಣ ನೀಡಬೇಕಾಗುತ್ತದೆ. ಅಂತಹ ಶಿಕ್ಷಣದಿಂದ ಮಗುವಿನ ಮನಸ್ಸು ವಿಕಾಸಗೊಳ್ಳುತ್ತದೆ. 'Culture is not erudition' ಎಂದರೆ ಸಂಸ್ಕೃತಿಯು ಪುಸ್ತಕ ಪಾಂಡಿತ್ಯದಿಂದ ಬರುವುದಿಲ್ಲ. 'ಓದಿ ಮರುಳಾದ ಕೂಚುಭಟ್ಟ' ಎನ್ನುವಂತಾಗಬಾರದು. ಪುಸ್ತಕ ಪಠಿಸಿ ಪಠಿಸಿ ನಮ್ಮ ಮಕ್ಕಳು ಪುಸ್ತಕ ಪಿಶಾಚಿಗಳಾಗಬಾರದು.

ನಿಜವಾದ ಮಾನಸಿಕ ಶಿಕ್ಷಣವು ಮನುಷ್ಯನನ್ನು ಉನ್ನತ ಜೀವನಕ್ಕೆ ಸಿದ್ಧಗೊಳಿಸುವಂತೆ ಐದು ಹಂತಗಳಲ್ಲಿ ರೂಪಿತಗೊಳ್ಳಬೇಕು:

೧. ಮನಸ್ಸಿನ ಏಕಾಗ್ರತೆಯ ಶಕ್ತಿ ಅವಧಾನಗಳು ಬೆಳೆಯಬೇಕು

೨. ಮನಸ್ಸು ವಿಸ್ತಾರಗೊಳ್ಳಬೇಕು, ಸಂಕೀರ್ಣತೆ ಬೆಳೆಯಬೇಕು, ಶ್ರೀಮಂತಗೊಳ್ಳಬೇಕು.

೩. ಒಂದು ಕೇಂದ್ರ ಕಲ್ಪನೆ ಇಲ್ಲವೆ ಉನ್ನತ ಆದರ್ಶದ ಸುತ್ತಲೂ ವಿಚಾರಗಳನ್ನು ವ್ಯವಸ್ಥಿತಗೊಳಿಸುವುದು ಇದರಿಂದ ಜೀವನಕ್ಕೆ ಮಾರ್ಗದರ್ಶನವಾಗಬೇಕು.

೪. ವಿಚಾರನಿಯಂತ್ರಣ, ಅನಪೇಕ್ಷಿತ ವಿಚಾರಗಳ ನಿರಾಕರಣೆ, ಇದರಿಂದಾಗಿ ನಮಗೆ ಇಷ್ಟವಾದುದನ್ನೆ ವಿಚಾರಿಸುವುದು, ನಮಗೆ ಬೇಕಾದಾಗ ಸಾಧ್ಯವಾಗಬಹುದು.

೫. ಮಾನಸಿಕ ಸ್ತಬ್ಧತೆ, ಪರಿಪೂರ್ಣ ಶಾಂತ ನಿಶ್ಯಬ್ದತೆ, ಈ ಮೂಲಕ ಸತ್ತೆಯ ಎತ್ತರದ ಪ್ರದೇಶಗಳಿಂದ ಬರುವ ಸ್ಫೂರ್ತಿಯ ಅಲೆಗಳನ್ನೂ ಸ್ವೀಕರಿಸಲು ಸಾಧ್ಯವಾಗುವುದು.

ಮಕ್ಕಳ ಮನಸ್ಸು ಪಾತರಗಿತ್ತಿಗಳಂತೆ ಚಂಚಲವಾಗಿರುತ್ತದೆ. ಇದರಿಂದ ಆತನ ವಿಚಾರಗಳು ಚೆದುರಿ ಹೋಗುತ್ತವೆ. ಆದುದರಿಂದ ಮಗುವಿನ ಮನಸ್ಸು ಬೋಧ ವಿಷಯದಲ್ಲಿ ಆಸಕ್ತವಾಗಿರುವಂತೆ ಆಕರ್ಷಿಸಬೇಕು. ಇದು ಶಿಕ್ಷಣದ ಕೌಶಲ್ಯ ಮತ್ತು ಮಗುವಿನ ಮನಸ್ಸನ್ನರಿತು ಅರ್ಥಮಾಡಿಕೊಂಡು ವಿಷಯದತ್ತ ಒಲಿಸಿಕೊಳ್ಳುವ ಪ್ರತಿಭೆ, ಚತುರತೆಗಳನ್ನವಲಂಬಿಸಿರುತ್ತದೆ. ಮಗುವು ಜ್ಞಾನಾರ್ಜನೆಯನ್ನು ಪ್ರೀತಿಸುವಂತೆ ಆತನಲ್ಲಿ ಜಿಜ್ಞಾಸೆ ಜಾಗೃತವಾಗುವಂತೆ ಮಾಡುವ ಕಲೆಯು ಶಿಕ್ಷಕನಿಗಿರುವ ಒಂದು ಬೆಲೆಯುಳ್ಳ ದೇಣಿಗೆ ಎಂದೇ ಹೇಳಬೇಕು.

ಚೈತ್ಯಾತ್ಮಕ ಹಾಗೂ ಆಧ್ಯಾತ್ಮಿಕ ಶಿಕ್ಷಣ

ವಿಕಾಸ ಕ್ರಮದಲ್ಲಿ ಇದು ಮಹತ್ವದ ಘಟ್ಟ. ಆಧ್ಯಾತ್ಮಿಕ, ಮುಂದೆ ಸುಪ್ರಮಾನಸ ಬೆಳವಣಿಗೆಗಳಿಗೆಲ್ಲ ಚೈತ್ಯಾತ್ಮಕವು ತಿರುಗಣೆಯಂತಿದೆ. ವಿಕಾಸ ಕ್ರಮದ ಜೀವಾಳದ ಹಂತವಾದ ಈ ಚೈತ್ಯಾತ್ಮಕ ಎಂದರೆ'ಸೈಕಿಕ್' ಶಿಕ್ಷಣ ಅತ್ಯಂತ ಮಹತ್ವದ ಮೆಟ್ಟಿಲು. ಈ 'ಸೈಕಿಕ್' ಎಂಬುದು ಶ್ರೀ ಅರವಿಂದರ ಶೋಧತತ್ವ. ಅನ್ನಮಯ, ಪ್ರಾಣಮಯ, ಮನೋಮಯ, ವಿಜ್ಞಾನಮಯ, ಸತ್ ಚಿತ್ ಆನಂದಮಯಗಳ ಸಪ್ತಾಂಗ ಸೋಪಾನಕ್ಕೆ

ಶ್ರೀ ಅರವಿಂದರು ಚೈತ್ಯಾತ್ಮಕವೆಂಬ ಅಷ್ಟಮ ಸೋಪಾನವನ್ನು ಜೋಡಿಸಿದರು. ಇದು ವಿಜ್ಞಾನಮಯಕ್ಕೆ ಕೊಂಡೊಯ್ಯುವ ಕೊಂಡಿ. ಈ 'ಸೈಕಿ' ಎಂದರೆ 'evolving soul of the individual' (ವ್ಯಕ್ತಿಯ ವಿಕಸನಶೀಲ ಜೀವಾತ್ಮ) ಎಂದು ಶ್ರೀ ಅರವಿಂದರು ವರ್ಣಿಸಿದ್ದಾರೆ. ಇದೊಂದು ವ್ಯಕ್ತಿಯಲ್ಲಿರುವ ದೇವಾಂಶ. ಇದು ಜನ್ಮದಿಂದ ಜನ್ಮಾಂತರಗಳಿಗೆ ವಿಕಾಸ ಹೊಂದುತ್ತಲೆ ಇರುತ್ತದೆ. "From its place behind the heartcentre, the psychic being supports the mind, life and body, aiding their growth and development," ಎಂದರೆ ಈ ಚೈತ್ಯ ಪುರುಷನು ನಮ್ಮ ಹೃದಯ ಕೇಂದ್ರದ ಹಿಂಭಾಗದಲ್ಲಿದ್ದುಕೊಂಡು ಮನ, ಪ್ರಾಣ, ದೇಹಗಳಿಗೆ ಆಧಾರವಾಗಿ ಅವುಗಳ ವೃದ್ಧಿ-ಪೋಷಣೆಗಳನ್ನು ಮಾಡುತ್ತಾನೆ. ಚೈತ್ಯ ಪುರುಷನೆ ಆತ್ಮ ಎಂದೂ ಸರ್ವೇಸಾಮಾನ್ಯವಾಗಿ ತಿಳಿಯಬಹುದಾಗಿದೆ. ಆದರೂ ಆತ್ಮ ಮತ್ತು ಚೈತ್ಯಕ್ಕೂ ಸತ್ವಸಾರ (essence) ದಲ್ಲಿ ಅಂತರ ಇದ್ದೇ ಇದೆ. ಆತ್ಮವೆಂದರೆ ಚೈತ್ಯದ ಸಾರಸತ್ವ, ಚೈತ್ಯ ಸತ್ತೆಯು ಆತ್ಮ ಪುರುಷ. ಇದು ಚೈತ್ಯ ಸಾರದಿಂದಲೆ ಅಗ್ರಭಾಗದಲ್ಲಿ ಬಂದು ಅದರಿಂದ ಬೆಳೆಯುತ್ತದೆ. ವಿಕಾಸ ಕ್ರಮದಲ್ಲಿ ಅದು ಆತ್ಮವನ್ನು ಪ್ರತಿನಿಧಿಸುತ್ತದೆ.

ಚೈತ್ಯವು ಸಂಭೂತಿಯಲ್ಲಿಯ ಗುಪ್ತವಾಗಿರದ ಸುಪ್ತವಾಗಿರುವ ಆತ್ಮ ಸತ್ತೆಯೆ ಆಗಿದೆ. ಚೈತ್ಯ ಸತ್ತೆಯನ್ನು ಜಾಗೃತಗೊಳಿಸುವುದೆ ನಿಜವಾದ ಶಿಕ್ಷಣ. 'ತನ್ನರಿವೆ ತನಗೆ ಗುರು' ಎಂಬುದೆ ಇದರ ರಹಸ್ಯ. ನಮ್ಮ ವಿಶ್ವವಿದ್ಯಾಲಯದ ಧ್ಯೇಯವಾಕ್ಯವೂ ಇದೇ ಆಗಿದೆ. ಇದೇ ನಮ್ಮ ಮಾರ್ಗದರ್ಶಿ ಆಗಬೇಕು. ಚೈತ್ಯ ಶಕ್ತಿ ಜಾಗೃತವಾಗಿ ನಮ್ಮ ಜೀವನ ಯಾತ್ರೆಯ ನಾಯಕತ್ವ, ನೇತೃತ್ವ ವಹಿಸಿಕೊಂಡು ಬಿಟ್ಟರೆ ಸಾಕು, ರಾತ್ರಿ ಪ್ರಯಾಣದ ಹೊಣೆಯನ್ನು ಡ್ರೈವರನಿಗೆ ಒಪ್ಪಿಸಿ ನಾವು ಸುಖವಾಗಿ ನಮ್ಮ ಥಾಜೆ(destination) ತಲುಪಿದಂತೆ.

ಚೈತ್ಯಾತ್ಮಕ ಶಿಕ್ಷಣದಿಂದ ಈ ಬದುಕಿನ ಗುರಿ ಏನು? ನಮ್ಮ ಅಸ್ತಿತ್ವದ ಅರ್ಥ ಏನು? ಎಂಬ ಪ್ರಶ್ನೆಗಳಿಗೆ ಉತ್ತರ ಹುಡುಕಲು ಸಮರ್ಥರಾಗುತ್ತೇವೆ. ನಮ್ಮ ಅಸ್ತಿತ್ವದ ಅರ್ಥವನ್ನು ತಿಳಿಯುವುದೆಂದರೆ ಆತ್ಮಶೋಧವನ್ನೆ ಮಾಡಿಕೊಳ್ಳುವುದು. ಸೈಕಿಯ ಲಕ್ಷಣಗಳೆಂದರೆ ಶುದ್ಧಿ, ಪ್ರಕಾಶ, ಶಾಂತಿ, ಶಕ್ತಿ (purity, light, peace and power) ಇವೆಲ್ಲವೂ ದೈವಿಕದ ಕಡೆಗೆ ನಮ್ಮನ್ನು ನಡೆಸುತ್ತವೆ. ಈ ಸೈಕಿಯನ್ನು ಆತ್ಮದ ಆರೋಹಣಕ್ಕೆ ನಿಚ್ಚಣಿಕೆಯನ್ನಾಗಿ ಮಾಡಿಕೊಳ್ಳಬೇಕು. - Spiritualisation of education ಶೈಕ್ಷಣಿಕ ಆಧ್ಯಾತ್ಮೀಕರಣಗಳ ಸೈಕಿಯ ಸಾಧನ ಮಾರ್ಗವನ್ನೆ ಬಳಸಬೇಕು.

ಚೈತ್ಯಾತ್ಮಕ ಸಾಧನೆಗಾಗಿ ನಾವು ಮನಸ್ಸಿನ ಸ್ತಿಮಿತವನ್ನು ಪಡೆಯಬೇಕು. ಇದಕ್ಕೆ ಧ್ಯಾನಯೋಗವನ್ನು ಬೆಳೆಸಿಕೊಳ್ಳಬೇಕು, ಬಳಸಿಕೊಳ್ಳಬೇಕು. ಯಾವ ಕಾಲಕ್ಕೂ ಮನಸ್ಸನ್ನು ಉದ್ವಿಗ್ನವಾಗಲು ಕೊಡಬಾರದು. ಯಾವಾಗಲೂ ಶಾಂತಮನಸ್ಕರಾಗಿರಬೇಕು. ದಿನಾಲು ಸ್ವಲ್ಪ ಕಾಲ ಧ್ಯಾನ ಧಾರಣೆಗಳಿಂದ ಸದಾ ಕಾಲವೂ ಯೋಗಸ್ಥರಾಗಿರಲು ನಾವು ಕಲಿಯಬೇಕು. 'ಮಾಡುವಾತ ನಾನಲ್ಲಯ್ಯ' ಅಥವ 'ನಾಹಂಕರ್ತಾ' ಎಂಬ ಅನ್ಯಭಾವವನ್ನು ಬೆಳೆಸಿಕೊಳ್ಳಬೇಕು. ಕವಿ ಬೇಂದ್ರೆಯವರ 'ನಾಕುತಂತಿ' ಕಾವ್ಯ ಇದನ್ನೆ ಅಭಿವ್ಯಕ್ತಿಸುತ್ತದೆ. ನಮ್ಮ ಒಳಗಿನ 'ನಾನು' ಈ ದೇಹವನ್ನು ನೀನು ಎಂದು ಕರೆಯುತ್ತದೆ. ಆದ್ದರಿಂದ ಈ ದೇಹ

ಮಾಡುವುದಲ್ಲ ನಾನಲ್ಲ ಎಂದು ಆ ನಾಹಂಕರ್ತಾಭಾವ - ಅದೇ ನಾನು - ಹೇಳುತ್ತದೆ. ಈ ಒಂದು ನಿಲುವನ್ನು ಬೆಳಸಿಕೊಳ್ಳುವುದರಿಂದ 'ಆನು' ಎಂಬ ಒಂದು ಆಣಿಕೆ ಆಧಾರ ದೊರಕುತ್ತದೆ. ಆ ಆನಿನಿಂದ ಆನಿಕೆ ಎಂದು ತಾನು (ಆತ್ಮನ್) ಹಂತಕ್ಕೆ ಏರಬೇಕು. ದೇಹದಿಂದ ಭಿನ್ನವಾದದ್ದು, ಜೀವನ ಪರಿಸ್ಥಿತಿಗಳಿಗೆ ಸಿಲುಕದ್ದು, ಮನಸ್ಸಿಗಿಂತ ಬೇರೆಯಾಗಿ ಭಾಷೆಗೆ ನಿಲುಕದ್ದು - ಈ ವಸ್ತು ಎಲ್ಲಿ ಅಡಗಿದೆ ಹುಡುಕಬೇಕು. ಅದಕ್ಕಾಗಿ ಒಳಗೆ ಎಚ್ಚರಾಗಿರಬೇಕು. ಸಾಕ್ಷಿತ್ವಭಾವ ಬೆಳೆಯಿಸಿಕೊಳ್ಳಬೇಕು. 'ಮಾಡುವಾತ ನಾನಲ್ಲ' ಎಂಬ ಭಾವದಿಂದಲೆ ಸಾಕ್ಷಿತ್ವ ಭಾವ ಬೆಳೆಯುತ್ತದೆ. ಊಟದ ಮೊದಲ ತುತ್ತು ತೆಗೆದುಕೊಳ್ಳುವಾಗಲೂ ಈಶ್ವರಾರ್ಪಣ ಬುದ್ಧಿಯಿಂದ ನೈವೇದ್ಯವನ್ನು ಅರ್ಪಿಸಿ, ಪ್ರಸಾದ ಸ್ವರೂಪದಲ್ಲಿ ನೈವೇದ್ಯದ ಊಟ ಸ್ವೀಕರಿಸಬೇಕು. "ಅಹಂ ವೈಶ್ವಾನರೋ ಭೂತ್ವ ಪ್ರಸಿನಾಂ ದೇಹಮಾಶ್ರಿತಃ। ಪ್ರಾಣಾಪಾನ ಸಮಾಯುಕ್ತಃ ಪಚಾಮ್ಯನ್ನಂ ಚತುರ್ವಿಧಂ॥. ನಾನು ಊಟ ಮಾಡಿದರೂ ಪಚನ ಮಾಡುವ ಅಗ್ನಿ ಬ್ಯಾರೆ ಎಂಬ ಭಾವನೆ ಸಾಕ್ಷಿ ಭಾವ.

ರಾತ್ರಿ ನಿದ್ರೆಗೆ ಮೊದಲು ಕೆಲನಿಮಿಷ ನಿಮ್ಮ ಗುರಿ ಏನು, ಯಾವ ಮೈಲುಗಲ್ಲು ತಲುಪಿದಿರಿ, ಎಲ್ಲಿ ಎಡವಿದಿರಿ, ನಡೆದು ಹೋಗುವ ದಾರಿ ಇನ್ನೂ ಎಷ್ಟಿದೆ ಎಲ್ಲಾ ಕುರಿತು ನಿಮ್ಮ ಒಳಗಿನ ಮೀಟರ್ ರೀಡಿಂಗ್ ಮಾಡಿರಿ. ನಿಮ್ಮ ಕ್ಷುಬ್ಧ ಮನಸ್ಸು ಸ್ತಿಮಿತವಾಗುವಂತೆ ಧ್ಯಾನಸ್ಥರಾಗಿರಿ.

ಇದೇ ಚೈತ್ಯಾತ್ಮಕ ಶಿಕ್ಷಣ - ಚೈತ್ಯಪುರುಷನ ಜಾಗೃತಿಯಾಗುವುದು. ಹೀಗೆ ಜಾಗೃತಿ ಪಡೆದಾಗ ಯಾವ ಅಧ್ಯಯನವೂ ನೇರವಾಗಿ ನಿಮ್ಮ ಅಂತರಂಗವನ್ನು ಸೇರಿ ಒಳ ಬೆಳಕು ಪಡೆದು ಅದು ತಿಳುವಳಿಕೆಯಾಗಿ ನಮ್ಮ ಜ್ಞಾನಭಂಡಾರವನ್ನು ಸೇರುತ್ತದೆ. ಈ ಚೈತ್ಯಾತ್ಮಕ ಅಥವ ಆತ್ಮವು ನಮ್ಮ ಸತ್ತೆಯ ಕೇಂದ್ರ, ನಮ್ಮ ಅಸ್ತಿತ್ವದ ಅತ್ಯುಚ್ಚ ಸತ್ಯದ ಪೀಠವಾಗಿದೆ. ಇದರಿಂದ ನಾವು ಸತ್ಯವನ್ನರಿತು ಸತ್ಯವನ್ನು ಅಭಿವ್ಯಕ್ತಿಸಲು ಸಮರ್ಥರಾಗುತ್ತೇವೆ.

ಇದುವರೆಗೆ ನಮ್ಮ ಶಿಕ್ಷಣವು ನಮ್ಮ ಮಾನಸಿಕ ಸತ್ತೆಯ ಸ್ವಲ್ಪ ಭಾಗವನ್ನು ಮಾತ್ರ ಬೆಳೆಸುವಲ್ಲಿ ತೊಡಗಿಸಿಕೊಂಡಿದೆ. ಇತ್ತೀಚೆಗೆ ಕ್ರೀಡಾಸಕ್ತಿ ಬೆಳೆಯುತ್ತಿದ್ದು ದೈಹಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಬಂದಿದೆ. ಪ್ರಾಣಿಕ ಶಿಕ್ಷಣಕ್ಕಾಗಿ ಪ್ರಜ್ಞಾಪೂರ್ಣ ಶಿಕ್ಷಣ ಕಾರ್ಯವು ಬಹಳ ಸೀಮಿತವಾಗಿದ್ದು ಶಿಶುವಿಹಾರಗಳಿಗೆ ಮಾತ್ರ ಸೀಮಿತಗೊಂಡಿರುತ್ತದೆ. ಇನ್ನು ಶಾಲೆ-ಕಾಲೇಜುಗಳಲ್ಲಿ ಚೈತ್ಯಾತ್ಮಕ ಶಿಕ್ಷಣದ ಬಗ್ಗೆ ಶಿಕ್ಷಕರಲ್ಲಿ, ಜನತೆಯಲ್ಲಿ ಜಾಗೃತಿಯು ಕೂಡ ಮೂಡಿಲ್ಲ.

ನಮ್ಮ ಶಿಕ್ಷಣವು ಪೂರ್ಣವೂ ಸಮಗ್ರವೂ ಆಗಬೇಕಾದರೆ ನಮ್ಮ ವ್ಯಕ್ತಿತ್ವದ ನಾಲ್ಕು ಅಂಗಗಳು ಸಂಪೂರ್ಣ ಮಟ್ಟಕ್ಕೆ ಬೆಳೆಯಬೇಕು ಎಂದರೆ - ದೈಹಿಕ, ಪ್ರಾಣಿಕ, ಮಾನಸಿಕ, ಆಧ್ಯಾತ್ಮಿಕ ಮಟ್ಟದಲ್ಲಿ. ಇದಕ್ಕಾಗಿ ಹೊಸ ಹೊಸ ಪದ್ಧತಿಗಳು, ರೀತಿಗಳು ಬಳಸಲ್ಪಡಬೇಕು. ಅದರಿಂದ ನಮ್ಮ ವ್ಯಕ್ತಿತ್ವದ ಈ ನಾಲ್ಕೂ ಅಂಗಗಳ ಬಗ್ಗೆ ನಮ್ಮಲ್ಲಿ ಸರಿಯಾದ ಪ್ರಜ್ಞೆ ಬೆಳೆದು ಒಂದಕ್ಕೊಂದು ಅನ್ಯೋನ್ಯವಾಗಿ ಏಕತ್ರಗೊಳ್ಳಬೇಕು. ಆಗ ಶಿಕ್ಷಣಕ್ಕೆ ಒಂದು ಸಮಗ್ರ ಸ್ವರೂಪ ಬರುತ್ತದೆ.

ಇಂತಹ ಕಠಿಣವಾದ ದೈತ್ಯ ಕಾರ್ಯವು ಕೇವಲ ಶಿಕ್ಷಕರದಷ್ಟೆ ಹೊಣೆಯಾಗಬಾರದು. ಅಥವಾ ಕೆಲವೆ ಸಂಸ್ಥೆಗಳ ವ್ಯವಸ್ಥೆಗೊಳಪಡಬಾರದು. ಸಮಗ್ರ ಸಮಾಜವೆ ಈ ಶಿಕ್ಷಣ

ಕ್ರಮದಲ್ಲಿ ಸಮ ಪಾಲು ವಹಿಸಿಕೊಳ್ಳಬೇಕು. ಸಮಗ್ರ ಶಿಕ್ಷಣದ ರಚನೆಯು ಸಾಮಾಜಿಕ ಜೀವನದ ಪ್ರತಿಯೊಂದು ಅಂಗವನ್ನು ಕುರಿತು ಯೋಜಿಸಬೇಕು. ಇದರಿಂದಾಗಿ ಮಗುವಿನ ಪ್ರತಿಯೊಂದು ಅನುಭವವು ಸಮಗ್ರ ಶಿಕ್ಷಣದ, ಪ್ರಗತಿಯ ಸಾಧನವಾಗುತ್ತದೆ: ಅವಕಾಶವನ್ನು ಒದಗಿಸಿಕೊಡುತ್ತದೆ. ಸಮಗ್ರ ಶಿಕ್ಷಣದ ವ್ಯಾಪ್ತಿಯು ಮನೆಮನೆಗೂ, ಮನೆಯ ಹೊರಗೆ ಸಾಮಾಜಿಕ ಪರಿಸರಕ್ಕೂ ವ್ಯಾಪಿಸಬೇಕು. ಕ್ಲಾಸ್‌ರೂಂ ಶಿಕ್ಷಣವು ಕೇಂದ್ರೀಕೃತವಾದ ವ್ಯವಸ್ಥಿತವಾದ ಯಾವುದೆ ಒಂದು ವಿಷಯವಾಗಿ ಅಧ್ಯಯನ ಮಾಡಲು ಒಂದು ಅವಕಾಶವನ್ನೊದಗಿಸಬೇಕು.

ಅಂತಿಮವಾಗಿ ಕಲಿಕೆಯ ಮತ್ತು ಶಿಕ್ಷಣದ ಪ್ರಕ್ರಿಯೆಯು ಕೇವಲ ಅಲ್ಪಾವಧಿಯ ಕಾಲದ ಮಗುವಿನ ಪ್ರಾರಂಭಿಕ ತರಗತಿಗಳಿಗಷ್ಟೆ ಸೀಮಿತವಾಗಿರಬಾರದು. ಈ ಸಮಗ್ರಶಿಕ್ಷಣವು ವ್ಯಕ್ತಿಯ ಜೀವನದುದ್ದಕ್ಕೂ ನಡೆಯಬೇಕು. ಇಲ್ಲಿಯ ವಿದ್ಯಾರ್ಥಿಯು ತನ್ನ ಈ ಜ್ಞಾನಲಾಲಸೆಯನ್ನು, ಪರಿಪೂರ್ಣವಾಗುವ ಅಭಿಲಾಷೆಯನ್ನು ಬೆಳೆಸಿಕೊಳ್ಳುತ್ತಲೆ ಇರಬೇಕು, ಮತ್ತು ಇದಕ್ಕಾಗಿ ಸಮಾಜವು ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸಿ ಅವು ವಿದ್ಯಾರ್ಥಿಯ ಜೀವನದ ಪ್ರತಿಯೊಂದು ಘಟ್ಟದಲ್ಲೂ ಬೆಳವಣಿಗೆಗಳಲ್ಲೂ ವಿದ್ಯಾರ್ಥಿಗೆ ಸಹಾಯ ಮಾಡುತ್ತಿರಬೇಕು.

ಇಡಿಯ ಪ್ರಪಂಚದಲ್ಲಿಯೆ ಭಾರತವು ಶಿಕ್ಷಣದ ಅತ್ಯುನ್ನತ ಪೀಠಗಳಲ್ಲಿ ಒಂದಾಗಿತ್ತು. ನಲಂದಾ, ತಕ್ಷಶಿಲೆಗಳ ಖ್ಯಾತಿ ದೂರ ದೂರದವರೆಗೆ ಹಬ್ಬಿತ್ತು. ಪ್ರತಿಭಾವಂತ ವಿದ್ಯಾರ್ಥಿಗಳು, ಅನ್ವೇಷಕರು ದೂರದೂರ ದೇಶಗಳಿಂದ ಬಂದರು. ತಮ್ಮ ಗುರುಗಳಡಿಯಲ್ಲಿದ್ದುಕೊಂಡು ತಮ್ಮ ಪಂಡಿತ ಶಿಕ್ಷಕರ ಮೂಲಕ ಜ್ಞಾನವನ್ನು ಪ್ರಕಾಶವನ್ನು ಸಂಪಾದಿಸಿಕೊಂಡರು. ಈಗ ಪರಿಸ್ಥಿತಿ ಎಷ್ಟೊಂದು ಬದಲಾಗಿ ಹೋಗಿದೆಯಲ್ಲ! ನಾವು ನಮ್ಮ ದೇಶದ ಪ್ರತಿಭಾ ಪಲಾಯನವನ್ನು ತಡೆಗಟ್ಟಬೇಕು.

ಭಾರತವು ಮತ್ತೆ ತನ್ನ ಜ್ಞಾನ ದೀಪ್ತಿಯನ್ನು ಬೆಳಗಿಸಬೇಕು. ಭಾರತದ ನಕ್ಷೆಯು ಮತ್ತೆ ತನ್ನ ಪ್ರಾಚೀನ ಘನತೆ ವೈಭವಗಳಿಂದ ಬೆಳಗುವಂತೆ ಮಾಡಬೇಕು. ಶಿಕ್ಷಣದ ಆಧ್ಯಾತ್ಮೀಕರಣವೊಂದೆ ಇದಕ್ಕೆ ಯೋಗ್ಯ ಉಪಚಾರ. ಈ ಮೂಲಕವೆ ನಮ್ಮ ಮಾತೃಭೂಮಿಯ ಪ್ರೇಮ, ಭಕ್ತಿಗಳನ್ನು, ಅದರ (ದೇಶದ) ಸೈಕಿಯ ಮೂಲಕ (ಏಕೆಂದರೆ ಈ ಚೈತ್ಯವೆ ದೇಶದ ಆತ್ಮ ಮತ್ತು ರಾಷ್ಟ್ರೀಯ ಪ್ರತಿಭೆ, ಜನತೆಯ ಪ್ರಜ್ಞೆ, ರಾಷ್ಟ್ರೀಯ ಅಭೀಪ್ಸೆಯ ಕೇಂದ್ರ) ನಮ್ಮ ಆರ್ಷೇಯ ಸಂಸ್ಕೃತಿಯ, ಮೌಲ್ಯಗಳ ಅರ್ಥಮಾಡಿಕೊಳ್ಳಬಲ್ಲೆವು.

ನಮ್ಮ ರಾಷ್ಟ್ರೀಯತೆ, ಸಂಕುಚಿತ, ಅಂಧಶ್ರದ್ಧೆಯ ಅಹಂಭಾವವಲ್ಲ. ನಮ್ಮದು ಮನುಕುಲದ ಏಕತಾ ಭಾವಸಾಧನೆ! ಇದನ್ನೆ ನಾವು ಮಕ್ಕಳಲ್ಲಿ ಬಿತ್ತಿ ಬೆಳೆಸಬೇಕು. ಅಂದರೆ ಮಾತ್ರ ನಮ್ಮ ಮಕ್ಕಳ ರಾಷ್ಟ್ರಭಕ್ತಿ, ವಿಶ್ವವಿಸ್ತಾರ ಪಡೆದು ಜಾಗತಿಕ ಪ್ರೇಮ ಏಕತೆಗಳಾಗಿ ಅರಳಬಲ್ಲದು. ಪ್ರತಿಯೊಂದು ರಾಷ್ಟ್ರಕ್ಕಾಗಿ ಗೌರವ, ಅಖಿಲಮಾನವ ಕೋಟಿಗಾಗಿ

ಪ್ರೇಮವಾಗಿ, 'ಮನುಷ್ಯಜಾತಿ ತಾನೊಂದೆ ವಲಂ' ಎಂಬ ಪಂಪ ಮಹಾಕವಿಯ ವಿಶ್ವೋಕ್ತಿ, ವಿಶ್ವಬಂಧುತ್ವದತ್ತ ಮನುಷ್ಯಜಾತಿಯನ್ನು ಮುನ್ನಡೆಯಿಸಬಹುದು.

ಈ ಪೃಥ್ವಿಯ ಮೇಲೆ ಅತ್ಯುನ್ನತ ಸಾಧನೆ ಪಡೆಯುವುದು ಚೈತ್ಯಾತ್ಮಕ ಸಿದ್ಧಿಯಾದರೆ, ಈ ಜಗತ್ತಿನ ಜಂಜಡದಿಂದ ವಿಮೋಚನೆ ಪಡೆದು ಪೂರ್ಣಯೋಗ ಸಾಧನೆಯಿಂದ, ಸುಪ್ರಮಾನಸ ಸಿದ್ಧಿಯನ್ನು ಪಡೆಯುವುದು ಅಮರತ್ವದ ಸಾಧನೆಯ ಹಾದಿ. ಈ ನಮ್ಮ ಚೈತ್ಯಪುರುಷ ವಿಕಸನ ಕ್ರಮದ ಮಾರ್ಗದಲ್ಲಿ ಮೈಲುಗಲ್ಲುಗಳನ್ನು ತಲುಪುತ್ತವೆ. ಹಳೆಯ ಜೀರ್ಣ ದೇಹಗಳನ್ನು ಹಳೆಯ ಬಟ್ಟೆಗಳಂತೆ ಕಳಚಿ ಒಗೆದು ಸುಪ್ರಜ್ಞಾವಸ್ಥೆಯನ್ನು ತಲುಪಿ, ಸಚ್ಚಿದಾನಂದತ್ವವನ್ನು ಪಡೆಯುವುದು ಆಧ್ಯಾತ್ಮಿಕ ಯಾತ್ರೆಯ ಅಂತಿಮ ನಿಲ್ದಾಣ. ಅಲ್ಲಿಂದ ಬಹುಶಃ ಮತ್ತೆ devolution ಎಂದರೆ ಅವರೋಹಣ ಅಥವ descendance. 'ಪುರುಷ ಸೂಕ್ತ'ದಲ್ಲಿ ಪುರುಷೋತ್ತಮನ ಆತ್ಮ-ಯಜ್ಞ ನಡೆಯುತ್ತದೆ, ಎಂದರೆ 'incessant fragmentation and of spirit ! ಪುರುಷೋತ್ತಮ ಚೇತನ ತತ್ವವು ಅವರೋಹಣ ರೂಪದಲ್ಲಿ ಜಡದ ಒಡಲೊಳಗೆ ಸಿಲುಕುತ್ತದೆ. ಇದು ಆದರ ಅವರೋಹಣದ ಕೊನೆಯ ಹಂತ. ಅಲ್ಲಿಂದ ಮತ್ತೆ ವಿಕಾಸ ಕ್ರಮದಲ್ಲಿ ಆರೋಹಣ ಮಾಡುತ್ತ ಜಡ, ಪ್ರಾಣ, ಮನ, ಚೈತ್ಯ, ಆತ್ಮ ಮುಂದೆ ಸತ್-ಚಿತ್-ಆನಂದದ ಹಂತ ಮುಟ್ಟಿದ ಮೇಲೆ ಅದು ಆ ವಿಕಾಸ ಕ್ರಮದ ಶಿಖರಾರೋಹಣ. ಮುಂದೆ ಮತ್ತೆ ಅವರೋಹಣ. ಹೀಗೆ ಈ cosmos ವಿಶ್ವಸೃಷ್ಟಿ, ವಿಶ್ವಸಂಕೀರ್ಣ ಲೋಕಗಳು; 8 planes of consciousness ಸತ್, ಚಿತ್, ಆನಂದ, ವಿಜ್ಞಾನ, ಮನೋಮಯ, ಚೈತ್ಯಲೋಕ, ಪ್ರಾಣಮಯ, ಅನ್ನಮಯ ಎಂದು. ಈ ಚೈತ್ಯಲೋಕ ಇಲ್ಲವೆ ಚೈತ್ಯಪ್ರಜ್ಞೆ ಶ್ರೀ ಅರವಿಂದರ ಕೊಡುಗೆ. ಇದು ದೇವಾಂಶವೆಂದ ಮೇಲೆ ಮನೋಮಯದ ಎತ್ತರಕ್ಕೆ, ಎಂದರೆ ಸಾಮಾನ್ಯ ಮನೋಮಯದ ಎತ್ತರಕ್ಕೆ ಇರುತ್ತದೆ ಎನ್ನಬೇಕು. ಮನೋಮಯವು, ಉನ್ನತಮನ, ಪ್ರದೀಪ್ತಮನ, ಅಂತಃ ಪ್ರಬುದ್ಧಮನ, ವಿಜ್ಞಾನಮಯ ಇಲ್ಲವೆ ಸುಪ್ರಮನ - ಅದರಾಚೆಗೆ ಸತ್-ಚಿತ್-ಆನಂದ. ಈ ಪೈಕಿ ಸೈಕಿ ಇಲ್ಲವೆ ಸಾಕ್ಷಿತತ್ವವು ಎಂದರೆ ಚೈತ್ಯಪ್ರಜ್ಞೆಯು ಕೆಳಗಿನ ಮನ, ಪ್ರಾಣ, ದೇಹಸ್ತರಗಳನ್ನು, ಮನದ ಆಚೆಗಿನ ವಿಜ್ಞಾನ, ಸತ್, ಚಿತ್, ಆನಂದಗಳನ್ನು ಜೋಡಿಸುತ್ತದೆ.

ಮೇಲೆ ಹೇಳಿದ Devolution ಎಂಬುದು ಚಿತ್ ತತ್ವ, ಅಚಿತ್‌ತತ್ವ, ಜಡ, ಅಜ್ಞಾನಗಳಲ್ಲಿ ಚಿತ್‌ತತ್ವವು (Consciousness) ಇಳಿದು ಆಮೇಲೆ ಆರೋಹಣಕ್ಕೆ ತೊಡಗುವ ಈ ಕ್ರಮ ವೀರಶೈವ ಧರ್ಮದ ಷಟ್‌ಸ್ಥಲದ ಆರೋಹಣ ಅವರೋಹಣಕ್ಕೆ ಸರಿಸಮನಾಗುತ್ತದೆಂದು ಹೇಳಬಹುದು.

Densification and condensation of spirit into matter ಎಂಬ ತತ್ವಕ್ರಮದ ಮೇರೆಗೆ ಯಾವುದೆ ತತ್ವ involve ಆಗಿರದೆ evolve ಆಗೋದಿಲ್ಲ. ಒಳಗೆ ಹುದುಗಿದ ಸತ್ವವೆ ವಿಕಸನ ಹೊಂದುತ್ತದೆ. ಜಡದಲ್ಲಿ ಚೇತನ involve ಆಗಿರುತ್ತದೆಂದೇ ಅದು evolve ಆಗುತ್ತದೆ. Being ಅಂಬೋದು ಪರಮತತ್ವ. ಅದು ಅಜ್ಞಾನದ, ಜಡದ

ಆಳದೊಳಗೆ ಹುದುಗಿರುತ್ತದೆ. ಅಚಿತ್‌ದಲ್ಲಿದ್ದದ್ದು becoming (ಸಂಭೂತಿ)ಯಿಂದ ವಿಕಾಸ ಹೊಂದುತ್ತ ಚಿತ್‌ರೂಪ ತಾಳುತ್ತದೆ ಈ consciousness.

ಆಧ್ಯಾತ್ಮಿಕತೆ (spiritualisation) ಎಂದರೆ ಜಾತಿ, ಧರ್ಮ, ನೀತಿಬೋಧೆಗಳನ್ನು ಮೀರಿದ್ದು. ಅದು ಎಲ್ಲಾ ಕ್ಷೇತ್ರಗಳಂತೆ ಶಿಕ್ಷಣ, ವಿಜ್ಞಾನ, ತಾಂತ್ರಿಕ ಕ್ಷೇತ್ರಗಳಲ್ಲೂ ಇರಬಲ್ಲದು. ಈ ವೈವಿಧ್ಯಮಯ ಸೃಷ್ಟಿಯ ಹಿಂದಿರುವ ಏಕತೆಯನ್ನು ಗುರುತಿಸುವುದೆ ಆಧ್ಯಾತ್ಮಿಕತೆ. ಲೌಕಿಕತೆ ಅಲೌಕಿಕತೆಗಳಲ್ಲಿ ಒಂದು ಸಮನ್ವಯ, ಮಾನವತೆಯಲ್ಲಿ ದೇವತ್ವ, ವ್ಯಕ್ತಿಯಲ್ಲಿ ಆತ್ಮ ತತ್ವವನ್ನು ಕಾಣುವುದು ಆಧ್ಯಾತ್ಮ. ಅಧಿ+ ಆತ್ಮವೇ ಅಧ್ಯಾತ್ಮ. ಅಧ್ಯಾತ್ಮಕ್ಕೆ ಸಂಬಂಧಿಸಿದ್ದು ಆಧ್ಯಾತ್ಮಿಕ. ಆಧಿ ಭೌತಿಕ, ಆಧಿ ದೈವಕ, ಆಧ್ಯಾತ್ಮಿಕಗಳು ಕ್ಷರೋಭಾವ, ಪುರುಷ ಅಥವ ಹಿರಣ್ಯಗರ್ಭ, ಭಗವಂತರೇ ಆಗಿದ್ದಾರೆ. ಆಧ್ಯಾತ್ಮಿಕ ಎಂದರೆ spiritual ಎಂಬುದು ಅಧಿಯಜ್ಞನಿಗೆ ಸಂಬಂಧಿಸಿದ್ದು ಶೈಕ್ಷಣಿಕ ಆಧ್ಯಾತ್ಮೀಕರಣವು ಹೀಗೆ ಸಂಗ್ರಹಿಸಲ್ಪಡಬಹುದು.

"The study of each subject can be so directed that it leads ultimately to the discovery of the fundamental truths underlying the subject. These fundamental truths form, ultimately a unity, and at a higher stage a deeper study of this unity would itself contribute to the deepening of the sense of Truths, which directly helps in the maturity of the psychic and spiritual or yogic aspiration" - Sri Kireet Joshi (What is to be done for Education?')

ಸಮಗ್ರ ಶಿಕ್ಷಣ ಕ್ರಮದಲ್ಲಿ ಪ್ರತಿಯೊಂದು ವಿಷಯದ ಅಧ್ಯಯನವನ್ನು ಅದರ ಮೂಲಭೂತ ಸತ್ಯಗಳನ್ನು ಕಾಣುವ ದಾರಿಯನ್ನು ತೆರೆಯುವಂತೆ ಮಾಡಬೇಕು. ಈ ಮೂಲಭೂತ ಸತ್ಯಗಳೆ ಒಂದು ಘಟಕವಾಗಿ ಪರಿಣಮಿಸುತ್ತವೆ. ಇದೇ ಘಟಕವೆ ಮುಂದೆ ನಮ್ಮ ಸತ್ಯದ ಪ್ರಜ್ಞೆ ಬೇರೂರುವಂತೆ ಮಾಡುತ್ತದೆ. ಇದರಿಂದ ನಮ್ಮ ಚೈತ್ಯ ಪ್ರಜ್ಞೆ, ನಮ್ಮ ಆತ್ಮ ಪ್ರಜ್ಞೆ, ನಮ್ಮ ಯೋಗಾಭೀಪ್ಸೆ ಪರಿಪಕ್ವವಾಗಿ ಬೆಳೆಯುವಂತಾಗುತ್ತದೆ - ಎಂಬುದು ಶ್ರೀ ಕಿರೀಟ ಜೋಶಿ ಅವರ ಅಭಿಪ್ರಾಯ.

ಶ್ರೀ ಮಾತಾರವಿಂದರ ಸಮಗ್ರ ಶಿಕ್ಷಣದ ಕಲ್ಪನೆ ಎಂದರೆ ಚಿತ್-ಪ್ರಜ್ಞೆಯ ಬೆಳವಣಿಗೆ, ಸೈಕಿ(ಚೈತ್ಯ)ಯ ಮುಖಾಂತರ ಆಧ್ಯಾತ್ಮೀಕರಣವನ್ನು ಶಿಕ್ಷಣದಲ್ಲಿ ತರುವುದು.

ರಾಷ್ಟ್ರೀಯ ಶಿಕ್ಷಣ ಮತ್ತು ಪೂರ್ಣಜ್ಞಾನ

ಕೇವಲ ರಾಷ್ಟ್ರೀಯ ಶಿಕ್ಷಣ ಮಾತ್ರವಲ್ಲ, ಏಕರೂಪದ ಜಾಗತಿಕ ಶಿಕ್ಷಣದ ಅವಶ್ಯಕತೆ ಈಗ ಉಂಟಾಗಿದೆಯೆಂದು ಶ್ರೀ ಅರವಿಂದರು ೧೯೨೦ರ ಸುಮಾರಿಗೇ ಘಂಟಾಘೋಷವಾಗಿ ಹೇಳಿದ್ದಾರೆ.

ಇದೂ ರಾಷ್ಟ್ರದ ಅಗತ್ಯವೆಂಬುದನ್ನಂತೂ ಹೇಳಲೇಬೇಕಾಗಿಲ್ಲ. ಇದರ ಬಗ್ಗೆ ಶೈಕ್ಷಣಿಕ ಇಲಾಖೆಗಳು ಇನ್ನೂ ಮುನ್ನಡೆಯದಿದ್ದರೆ ನಮಗೆ ರಾಷ್ಟ್ರೀಯ ಶಿಕ್ಷಣದ ಅರಿವೇ ಇಲ್ಲ ಎನ್ನಬೇಕಾಗುತ್ತದೆ.

ಈಗ ವಿಜ್ಞಾನ ಪ್ರಪಂಚವನ್ನು ಲಕ್ಷ್ಯಕ್ಕೆ ತೆಗೆದುಕೊಂಡರೆ ಅದು ಜಾಗತಿಕ ವಿಶಾಲತೆಯನ್ನು ತನ್ನ ತಳಹದಿಯನ್ನಾಗಿ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ರಾಷ್ಟ್ರೀಯ ವಿಜ್ಞಾನವೆಂಬುದು ಭಾರತಕ್ಕೆ ಬೇರೆ, ಯುರೋಪಕ್ಕೊಂದು ಬೇರೆ, ಅಮೇರಿಕೆಗೆ ಬೇರೆ ಎಂದು ಸೀಮಿತಗೊಳ್ಳಲು ಸಾಧ್ಯವಿಲ್ಲ. ಸದ್ಯದ ಪರಿಸ್ಥಿತಿಗಳನ್ನು ಲಕ್ಷಿಸಿ ನಾನು ವೈಜ್ಞಾನಿಕವಾಗಿ ನಮ್ಮ ಶಿಕ್ಷಣ ಪದ್ಧತಿಯ ಕ್ರಮವನ್ನು ರೂಪಿಸಿಕೊಳ್ಳಬೇಕಾಗುತ್ತದೆ. "Our education must be therefore up to date in form and substance and modern in life and spirit" ಎಂದು ಶ್ರೀ ಅರವಿಂದರು ಅಭಿಪ್ರಾಯಿಸಿರುವ ಮೇರೆಗೆ ನಮ್ಮ ಶಿಕ್ಷಣ ಪದ್ಧತಿಯು ಅತ್ಯಾಧುನಿಕವಾದ ಸ್ವರೂಪ ಮತ್ತು ಸತ್ವವುಳ್ಳದ್ದಾಗಿರಬೇಕು. ಇಂದಿನ ಉಪಗ್ರಹ ಯುಗದಲ್ಲಿ ನಮ್ಮ ಶಿಕ್ಷಣ ಸಾಧನಗಳೂ ಸಮಕಾಲೀನವಾಗಿರಬೇಕಾಗುತ್ತದೆ. ಅದರಿಂದಲೆ ಪ್ರಗತಿ. ತ್ರೈಮಾಸಿಕ ಪ್ರವಾಸದ ಕಾಲದಲ್ಲಿ ಶಿಕ್ಷಣವು ಚಕ್ಕಡಿ ಪ್ರವಾಸ ಹೊರಡಲಾಗದು ಎಂಬ ಆಧುನಿಕತೆಯ ದೃಷ್ಟಿ ಅವರದಾಗಿತ್ತು.

ವೇದ, ಆಧ್ಯಾತ್ಮಗಳ ನಿಲುವನ್ನು ಎತ್ತಿ ಹಿಡಿದು ಶಿಕ್ಷಣವು ಆಧ್ಯಾತ್ಮೀಕರಣ ಹೊಂದಬೇಕೆಂದು ಹೇಳಿದ ಶ್ರೀ ಅರವಿಂದ ವಿಶ್ವವಿಶಾಲವಾದ ಸಮಕಾಲೀನ ವೈಜ್ಞಾನಿಕ ದೃಷ್ಟಿಯನ್ನು ಸಮರ್ಥಿಸಿದರು. ಹಾಗಾದರೆ ಶಿಕ್ಷಣದ ಗುರಿ ಏನಿರಬೇಕು? ಶ್ರೀ ಅರವಿಂದರೇ ಹೇಳುತ್ತಾರೆ. " Its central aim is the building of powers of human mind and spirit; it is the formation or, as I would prefer to view it, the evoking of knowledge and will and if the power to use knowledge, character, culture that at least if no more". ಎಂದರೆ ಶಿಕ್ಷಣದ ಕೇಂದ್ರ ಗುರಿ ಮಾನವ ಮನಸ್ಸಿನ, ಆತ್ಮಿಕ ಶಕ್ತಿಗಳನ್ನು ನಿರ್ಮಿಸುವುದು. ಅದು ಜ್ಞಾನೋಪಾಸನೆ, ಸಂಕಲ್ಪ ಸಾಧನೆ, ಜ್ಞಾನವನ್ನು ಶೀಲ ಸಂಸ್ಕೃತಿ ನಿರ್ಮಾಣಕ್ಕಾಗಿ ದುಡಿಸಿಕೊಳ್ಳುವುದು ಇಷ್ಟಾದರೂ ಇರಬೇಕು ಎಂಬುದು ಅವರ ಗುರಿಯಾಗಿತ್ತು.

❋ ❋ ❋

ಶಿಕ್ಷಣ ಸಂಸ್ಥೆಗಳು ನೌಕಾಘಾತಿಗಳ ನಡುಗಡ್ಡೆಗಳೆ ?

ಆ.ಇ. ಪುನೀತ ಮತ್ತು ಉ.ಆತ್ತಾರ

ಭಾರತದ ಶಿಕ್ಷಕ-ಶಿಕ್ಷಕಿಯರನ್ನು ಕುರಿತು ಕೆಲ ಸಲ ಲಘುವಾಗಿ, ಮತ್ತೊಂದು ಸಲ ವ್ಯಂಗ್ಯವಾಗಿ, ಮಗದೊಂದು ಸಲ ಅವಹೇಳನಕರವಾಗಿ ಆಡಿದ ಮಾತುಗಳನ್ನು ತಾವು ಓದಿ, ಕೇಳಿರಲು ಸಾಕು. "Indian teachers die at the age of thirty and are buried at the age of Sixty" "ಭಾರತೀಯ ಶಿಕ್ಷಕರ ಮರಣ ಮೂವತ್ತಕ್ಕೆ, ಮಣ್ಣು ಅರವತ್ತಕ್ಕೆ". "ಸ್ಟೇಶನ್ ಮಾಸ್ತರರಿಗೆ ನಿದ್ದೆ ಇಲ್ಲಾ, ಶಾಲಾ ಮಾಸ್ತರರಿಗೆ ಬುದ್ಧಿ ಇಲ್ಲಾ." "ತಾನು ಶಾಣ್ಯಾ ಆಗಿದ್ದರೆ ಹೆಡಮಾಸ್ತರ (ತಾ. ಶಾ. ಹೆ.ಮಾ) ಕೆಲಸ ಏಕೆ ಮಾಡುತ್ತಿದ್ದ?" ಇದೇ ದಾಟಿಯಲ್ಲಿರುವ ಅನೇಕ ವ್ಯಂಗ್ಯೋಕ್ತಿಗಳನ್ನು ಉದಾಹರಿಸಬಹುದು.

ಸಮಾಜದಲ್ಲಿನ ಯಾವುದೇ ವ್ಯಕ್ತಿಯ, ಗುಂಪಿನ ಇಲ್ಲವೆ ವೃತ್ತಿಯ ಬಗ್ಗೆ ವ್ಯಂಗೋಕ್ತಿಗಳು ವಿನಾಕಾರಣವಾಗಿ ಹುಟ್ಟಿಕೊಳ್ಳುವದಿಲ್ಲ. ಈ ವ್ಯಂಗೋಕ್ತಿಗಳ ಹುಟ್ಟು, ಬೆಳವಣಿಗೆಗೆ ಅನೇಕ ಸಲ ಮತ್ಸರ, ಅಸೂಯೆಗಳು ಕಾರಣವಾದರೂ ಅವು ಆ ವ್ಯಕ್ತಿಯ, ಗುಂಪಿನ ಇಲ್ಲವೆ ವೃತ್ತಿಯ ಬಗ್ಗೆ ಸಮಾಜದಲ್ಲಿ ಜನಸಾಮಾನ್ಯರು ಯಾವ ಭಾವನೆಯನ್ನು, ದೃಷ್ಟಿಕೋನವನ್ನು ಹೊಂದಿದ್ದಾರೆ ಎಂಬ ಬಗ್ಗೆ ಇಣುಕು ನೋಟವನ್ನು, (Key-hole View) ಒದಗಿಸುತ್ತವೆ. ಉದಾ: "ಅಕ್ಕಸಾಲಿಗ ಅಕ್ಕನ ಬಂಗಾರ ಬಿಡಲಿಲ್ಲ", "ಸುಂಕದವನ ಮುಂದೆ ಸಂಕಟ ತೋಡಿಕೊಂಡರೆ ಕಂಕುಳಲ್ಲಿ ಏನು ಅಂದನಂತೆ" "ಕಟುಕನಿಗೆ ಕಂಡೀತೇ ಕುರಿಯ ಕಣ್ಣೀರು?" ಮುಂತಾದವು ಆಯಾ ವೃತ್ತಿಯಲ್ಲಿರುವವರ ಬಗ್ಗೆ ಸಾಮಾನ್ಯ ಜನಾಭಿಪ್ರಾಯವನ್ನು ಬಿಂಬಿಸುತ್ತವೆ.

ಅದೇ ಪ್ರಕಾರ ಶಿಕ್ಷಕರ ಬಗ್ಗೆ ಬಳಕೆಯಲ್ಲಿದ್ದ ವ್ಯಂಗೋಕ್ತಿಗಳು ಜನಸಾಮಾನ್ಯರ ದೃಷ್ಟಿಯಲ್ಲಿ ಶಿಕ್ಷಕರ ಪ್ರತೀಕ ಎಂಥಹದು ಎಂಬುದನ್ನು ಸೂಚಿಸುತ್ತವೆ.

ಹೀಗೇಕಾಯಿತು? ಒಂದಾನೊಂದು ಕಾಲದಲ್ಲಿ ದೇವರ ಸಮಾನ ಎಂದು ಭಕ್ತಿಯಿಂದ ಕಾಣಲ್ಪಟ್ಟ ಶಿಕ್ಷಕರು ಈಗ ಇಂಥ ಅವಹೇಳನೆಗೆ ಗುರಿಯಾಗಲು ಅನೇಕ ಸಾಮಾಜಿಕ,

ಆರ್ಥಿಕ, ರಾಜಕೀಯ ಹಾಗೂ ಧಾರ್ಮಿಕ ಕಾರಣಗಳಿವೆಯಾದರೂ ಈ ಲೇಖನದಲ್ಲಿ ಈ ಅವನತಿಗೆ ಶಿಕ್ಷಕರದೇ ಹೊಣೆ ಎಷ್ಟು? ಇಂಥಹ ದುರ್ದೆಸೆಗೆ ಅವರನ್ನು ಸಾಗಿಸಲು ಅವರಲ್ಲಿ ಕಂಡು ಬರುವ ಕುಂದು ಕೊರತೆಗಳು ಹಾಗೂ ನ್ಯೂನ್ಯತೆಗಳು ಎಷ್ಟು ಕಾರಣವಾಗಿವೆ? ಎಂಬುದನ್ನು ವಿಶ್ಲೇಷಿಸಲಾಗಿದೆ.

ಅಧ್ಯಯನದಲ್ಲಿ ಬೆಳಕಿಗೆ ಬಂದ ಒಂದು ಮುಖ್ಯ ಅಂಶವೆಂದರೆ ಬೇರೆ ಬೇರೆ ಹಂತದ ಶಿಕ್ಷಣ ರಂಗಗಳಲ್ಲಿ - ಅಂದರೆ ಪ್ರಾಥಮಿಕ, ಮಾಧ್ಯಮಿಕ, ಉಚ್ಚ ಹಾಗೂ ಸ್ನಾತಕೋತ್ತರ ವಿದ್ಯಾ ಸಂಸ್ಥೆಗಳಲ್ಲಿ - ಸೇವೆ ಸಲ್ಲಿಸುತ್ತಿರುವ ಶಿಕ್ಷಕರ ಪೈಕಿ ಶೇಕಡ ೮೫ ರಷ್ಟು ಶಿಕ್ಷಕರು ತಾವು ಶಿಕ್ಷಕರಾಗಬೇಕು, ಶಿಕ್ಷಣ ರಂಗದಲ್ಲಿ ಸೇವೆ ಸಲ್ಲಿಸಬೇಕು ಎಂಬ ಧ್ಯೇಯದೊಂದಿಗೆ ತಮ್ಮ ವೃತ್ತಿಯನ್ನು ಪ್ರಾರಂಭಿಸಿದವರೇ ಅಲ್ಲ. ಈಗ ಶಿಕ್ಷಕರಾಗಿರುವ ಬಹುಪಾಲು ಜನರು ಡಾಕ್ಟರನಾಗಲಿ, ಇಂಜನಿಯರನಾಗಲಿ, ಆಯ್.ಎ.ಎಸ್ ಆಫೀಸರನಾಗಲಿ ಇಲ್ಲವೆ ಇನ್ನಾವುದೋ ಉಚ್ಚ ನೌಕರಿಯನ್ನು ಪಡೆಯಬೇಕೆಂಬ ಕನಸಿನ ದೋಣಿಯಲ್ಲಿ ಹೊರಟಾಗ ವಾಸ್ತವ್ಯದ ಬಂಡೆಗಲ್ಲಿಗಪ್ಪಳಿಸಿ, ದೋಣಿ ನುಚ್ಚು ನೂರಾಗಿ ಹಾಗೂ ಹೀಗೂ ಬದುಕಿ ಈಜಿ, ತೇಲಿ ಶಿಕ್ಷಣ ಸಂಸ್ಥೆಗಳಿಗೆ ಬಂದು ತಲುಪಿದ್ದಾರೆ.

ಏನೋ ಆದದ್ದು ಆಗಿ ಹೋಯಿತು ಎಂದು ತಿಳಿದು ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಕೈಕೊಂಡ ಇವರಲ್ಲಿ ವೃತ್ತಿ ಸಂತೃಪ್ತಿ (Job Satisfaction) ಹೊಂದಿದವರೆಷ್ಟು ಜನ? ತೀರಾ ಕಡಿಮೆ. ಶಿಕ್ಷಕರ ಧ್ಯೇಯಧೋರಣೆಗೆ ಸರಿ ಬೀಳುವಂತೆ ಕಾರ್ಯತತ್ಪರರಾದ ಶಿಕ್ಷಕರಂತೂ ಅತೀ ವಿರಳ. ಸಂದರ್ಶಿಸಿದ ೪೦೦ ಶಿಕ್ಷಕರಲ್ಲಿ ಶೇಕಡಾ ೭೫ ರಷ್ಟು ಶಿಕ್ಷಕರು ತಮ್ಮ ವೃತ್ತಿಯ ಬಗ್ಗೆ ಅನಾದರ, ಜಿಗುಪ್ಸೆ ಹೊಂದಿದ್ದಾರೆ. ಅಷ್ಟೇ ಅಲ್ಲ ಯಾವದೋ ನಡುಗಡ್ಡೆಯನ್ನು ಸೇರಿದ ನೌಕಾಘಾತಿಗಳು ತಮ್ಮನ್ನು ಆ ನಡುಗಡ್ಡೆಯ ಜೀವನದ ಬವಣೆಯಿಂದ ಪಾರು ಮಾಡಿ ಹೊರಜಗತ್ತಿಗೆ ಕೊಂಡೊಯ್ಯಬಹುದಾದ ಹಡಗಿನ ಬರುವನ್ನೇ ಹಾತೊರೆದು ನೋಡುತ್ತಿರುವಂತೆ ಅನೇಕ ಶಿಕ್ಷಕರು(ಶೇ. ೭೫) ಶಿಕ್ಷಣ ವೃತ್ತಿಯನ್ನು ತೊರೆದು ಇನ್ನಾವುದೇ ವೃತ್ತಿಗೆ ಕರೆದೊಯ್ಯುವ ಅವಕಾಶದ ಸತತ ನಿರೀಕ್ಷೆಯಲ್ಲಿರುತ್ತಾರೆ. ಆಶ್ಚರ್ಯವೆಂದರೆ ಶಿಕ್ಷಣರಂಗದ ಉತ್ತುಂಗಮಟ್ಟವಾದ ಸ್ನಾತಕೋತ್ತರ ವಿಭಾಗಗಳಲ್ಲಿ ಕೈತುಂಬ ಸಂಬಳ, ಪ್ರತಿಷ್ಠೆ, ಹಾಗೂ ಸಾಕಷ್ಟು ಅನುಕೂಲತೆಗಳನ್ನು ಹೊಂದಿ ಸೇವೆ ಸಲ್ಲಿಸುತ್ತಿರುವ ಶೇಕಡಾ ೭೫ರಷ್ಟು ಶಿಕ್ಷಕರು "ನಿಮಗೆ ಪೋಲಿಸ್ ಸಬ್ ಇನ್ಸಪೆಕ್ಟರ್, ತಹಶೀಲ್ದಾರ, ಎಕ್ಸಾಯಿಸ್ ಇನ್ಸಪೆಕ್ಟರ್ ಮುಂತಾದ ಕೆಲಸಗಳು ಸಿಕ್ಕರೆ ಈ ಶಿಕ್ಷಕ ವೃತ್ತಿಯನ್ನು ಬಿಡಲು ಇಚ್ಛಿಸುವಿರಾ?" ಎಂಬ ಪ್ರಶ್ನೆಗೆ "ಹೌದು" ಎಂದು ಉತ್ತರಿಸಿದರು.

ಆದರೆ ತಾವು ಹೊಂದಿದ ಶಿಕ್ಷಕ ವೃತ್ತಿಯ ಬಗ್ಗೆ ಇಂಥಹ ನಕಾರಾತ್ಮಕ(Negative) ಪ್ರವೃತ್ತಿಯನ್ನು ಹೊಂದಿದವರಲ್ಲಿ ಶಿಕ್ಷಕಿಯರಿಗಿಂತ ಶಿಕ್ಷಕರೇ ಹೆಚ್ಚು ಎಂಬುದು ನೆನಪಿಡಬೇಕಾದ ವಿಷಯ. ಶೇಕಡಾ ೯೫ರಷ್ಟು ಶಿಕ್ಷಕಿಯರು ತಾವು ಶಿಕ್ಷಣ ರಂಗವನ್ನೇ ಸೇರಬೇಕು, ಶಿಕ್ಷಕಿಯರಾಗಿಯೇ ಸೇವೆ ಸಲ್ಲಿಸಬೇಕು ಎಂಬ ಧ್ಯೇಯವನ್ನೇ ಇಟ್ಟುಕೊಂಡು ತಮ್ಮ ಶಿಕ್ಷಣವನ್ನು ಆರಂಭಗೊಳಿಸಿದವರು. ಶಿಕ್ಷಕಿಯರ ವೃತ್ತಿಯನ್ನು ಆಯ್ದುಕೊಳ್ಳಲು

ಅವರು ಕೊಟ್ಟ ಮುಖ್ಯ ಕಾರಣಗಳೆಂದರೆ ಶಿಕ್ಷಣರಂಗದಲ್ಲಿ ಮನೋಘಾತಗಳ (Mental tension) ಸನ್ನಿವೇಶಗಳು ಕಡಿಮೆ ಇರುವುದು, ನಿಯಮಿತ ವೇಳೆಯ ದುಡಿತ ಹಾಗೂ ಸಾಕಷ್ಟು ರಜಾ ದಿನಗಳ ಸೌಕರ್ಯ ಮುಂತಾದವುಗಳು.

ವಿದ್ಯಾರಂಗದ ಬಗ್ಗೆ ಶಿಕ್ಷಕರಲ್ಲಿ ಇದ್ದ ತ್ಯಾಜ್ಯ ಭಾವನೆಗೆ ಅವರು ತಮ್ಮ ಮಕ್ಕಳ ಭವಿಷತ್ತಿನ ಬಗ್ಗೆ ಇಟ್ಟುಕೊಂಡ ಆಕಾಂಕ್ಷೆಗಳೇ ಸಾಕ್ಷಿ. "ನಿಮ್ಮ ಮಕ್ಕಳನ್ನು ಶಿಕ್ಷಕ ವೃತ್ತಿಗೆ ಕಳುಹಿಸಲು ಇಚ್ಛಿಸುವಿರಾ?" ಎಂಬ ಪ್ರಶ್ನೆಗೆ ಶೇಕಡಾ ೬೫ರಷ್ಟು ಜನ ಶಿಕ್ಷಕರು "ಇಲ್ಲಾ" ಎಂದು ಉತ್ತರಿಸಿದರು. ಶಿಕ್ಷಣ ಕ್ಷೇತ್ರದಲ್ಲಿ ತಮ್ಮ ಮಕ್ಕಳು ಮುಂದುವರಿಯಬೇಕು ಎಂದು ಇಚ್ಛಿಸಿದ ಶೇಕಡಾ ೫ ರಷ್ಟು ಶಿಕ್ಷಕರು ತಮ್ಮ ಮಕ್ಕಳು ತಾವು ಹೊಂದಿದ ಸ್ಥಾನಕ್ಕಿಂತ ಹೆಚ್ಚಿನ ಸ್ಥಾನ ಅಂದರೆ ತಂದೆ ಪ್ರಾಥಮಿಕ ಶಾಲೆ ಶಿಕ್ಷಕನಾಗಿದ್ದರೆ ಮಗ ಮಾಧ್ಯಮಿಕ ಶಾಲೆಯಲ್ಲೊ, ಕಾಲೇಜಿನಲ್ಲಿಯೋ ಅಥವಾ ವಿಶ್ವವಿದ್ಯಾಲಯದಲ್ಲಿಯೋ ಶಿಕ್ಷಕನಾಗಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದರು.

ಇತ್ತೀಚೆಗೆ ವಿಶ್ವವಿದ್ಯಾಲಯ ಅನುದಾನ ಆಯೋಗದ ಮುಖ್ಯಸ್ಥರಾಗಿದ್ದ ಡಾ. ಮಾಧುರಿ ಶಹಾ ಅವರು ಶಿಕ್ಷಕರನ್ನುದ್ದೇಶಿಸಿ ಮಾಡಿದ ಒಂದು ಭಾಷಣದಲ್ಲಿ ಹೀಗೆ ಹೇಳಿದರು. "It was better to have learning Professors than learned Professors; the quantum of knowledge doubled every seven years and it was necessary to have teachers keeping abreast of progress in education." "ತಮ್ಮ ವಿದ್ಯಾರ್ಜನೆಯನ್ನು ಪೂರೈಸಿದ ಶಿಕ್ಷಕರಿಗಿಂತ ವಿದ್ಯಾರ್ಜನೆಯಲ್ಲಿ ನಿರತರಾದ ಶಿಕ್ಷಕರೇ ಲೇಸು ಏಳು ವರ್ಷದ ಅವಧಿಯಲ್ಲಿ ದ್ವಿಗುಣಗೊಳ್ಳುತ್ತಿರುವ ಜ್ಞಾನ ಭಂಡಾರದ "ಓಟಕ್ಕೆ ತಕ್ಕಂತೆ ಸರಿಸಮ ಹೆಜ್ಜೆ ಹಾಕುವ ಶಿಕ್ಷಕರಿಂದಲೇ ಶಿಕ್ಷಣರಂಗ ಉದ್ಧಾರವಾದೀತು". ಹೀಗೆ ದಿನದಿಂದ ದಿನಕ್ಕೆ ಅತ್ಯದ್ಭುತವಾಗಿ ವಿಕಾಸಗೊಳ್ಳುತ್ತಿರುವ ಜ್ಞಾನ ಭಾಂಡಾರದ ಈ ದಿನಗಳಲ್ಲಿ "ಕಲಿಯುವದನ್ನೆಲ್ಲಾ ಕಲಿತು ಪರಿಣಿತನಾಗಿದ್ದೇನೆ" ಎಂದು ಹೇಳುವದು ಹಾಸ್ಯಾಸ್ಪದ. ಪರಿಸ್ಥಿತಿಯು ಹೀಗಿರುವಾಗ ನಮ್ಮ ಶಿಕ್ಷಕರಲ್ಲಿ ಎಷ್ಟು ಜನ ಓದನ್ನು ಮುಂದುವರಿಸಿದ್ದಾರೆ? ಎಂಬ ಪ್ರಶ್ನೆಗೆ ಉತ್ತರ ಹುಡುಕುತ್ತಾ ಹೋದಾಗ ವಿಷಾದಕರವಾದ ಸಂಗತಿಗಳು ಬೆಳಕಿಗೆ ಬಂದವು. ಶೇಕಡಾ ೭೦ರಷ್ಟು ಶಿಕ್ಷಕರು ತಾವು ಕಲಿಸುವ ಕೆಲವು ಪಠ್ಯಪುಸ್ತಕಗಳನ್ನು ಬಿಟ್ಟು ಇನ್ನುಳಿದ ಯಾವುದೇ ಪುಸ್ತಕಗಳನ್ನಾಗಲಿ, ನಿಯತಕಾಲಿಕಗಳನ್ನಾಗಲಿ, ಕೊಂಡುಕೊಳ್ಳುವದಿರಲಿ ಓದುವದೂ ಕಡಿಮೆ. ಶೇಕಡಾ ೫೮ ಜನ ಶಿಕ್ಷಕರು ದಿನಪತ್ರಿಕೆಗಳನ್ನು ಕೂಡಾ ಕೊಂಡು ಓದುವುದಿಲ್ಲ ಎಂದು ಕಂಡು ಬಂದಿತು. ಸಾಧ್ಯವಾದಾಗ ಶಾಲೆ, ಕಾಲೇಜು ಗ್ರಂಥಾಲಯಗಳಲ್ಲಿ ಅಥವಾ ಚಹದಂಗಡಿಗಳಲ್ಲಿ ಆಕಸ್ಮಿಕವಾಗಿ ಸಿಕ್ಕ ಪತ್ರಿಕೆ, ನಿಯತಕಾಲಿಕಗಳ ಮೇಲೆ ಕಣ್ಣು ಹಾಯಿಸುವದರೊಂದಿಗೆ ಸಂತೃಪ್ತಿಗೊಳ್ಳುವದು ಇವರ ಚಟ.

ಬೆಳಕಿಗೆ ಬಂದ ಇನ್ನೊಂದು ವಿಷಯವೆಂದರೆ ಶಿಕ್ಷಕರು ತಮ್ಮ ಶಿಕ್ಷಕ ವೃತ್ತಿಯೊಂದಿಗೆ ಇನ್ನೊಂದು ವೃತ್ತಿಯನ್ನು ಅಂಟಿಸಿಕೊಂಡಿರುವುದು. ಈ ಪ್ರವೃತ್ತಿಯು

ಈಗೀಗ ಗ್ರಾಮೀಣ ಪ್ರದೇಶಗಳಲ್ಲಿ ಪ್ರಾರಂಭವಾದ ಮಾಧ್ಯಮಿಕ ಶಾಲೆ, ಜ್ಯೂನಿಯರ್ ಕಾಲೇಜು ಮತ್ತು ಸೀನಿಯರ್ ಕಾಲೇಜುಗಳಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕರಲ್ಲಿ ಹೆಚ್ಚಾಗಿ ಕಂಡು ಬಂದಿತು. ಇಂತಹ ಪ್ರದೇಶಗಳಲ್ಲಿಯ ಅನೇಕ ಶಿಕ್ಷಕರು ಜಮೀನುಗಳನ್ನು ಕೊಂಡು ಅವುಗಳ ಸಾಗುವಳಿಯಲ್ಲಿ ತೊಡಗಿದ್ದರೆ, ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿರುವ ಶಿಕ್ಷಕರು ಖಾಸಗಿ ಟ್ಯೂಶನ್ ಅಥವಾ ಇನ್ನಿತರ ವೃತ್ತಿಯಲ್ಲಿ ತೊಡಗಿರುತ್ತಾರೆ. ಈ ಹೆಚ್ಚುವರಿ ವೃತ್ತಿಯನ್ನು ಶಿಕ್ಷಕರು ಕೈಕೊಳ್ಳಲು ಎರಡು ಕಾರಣಗಳಿವೆ. ದಿನದಿಂದ ದಿನಕ್ಕೆ ಉರಿದೇಳುತ್ತಿರುವ ಬೆಲೆಯನ್ನು ಎದುರಿಸಲಾರದ ಅವರ ಆರ್ಥಿಕ ಬಲಹೀನತೆ ಒಂದಾದರೆ ದಿನಕ್ಕೆ ೫-೬ ತಾಸಿನಂತೆ ವರ್ಷದಲ್ಲಿ ೬-೭ ತಿಂಗಳು ದುಡಿಯುವ ಬೇರೆ ಸಹ ವೃತ್ತಿಗಳ ಕಡೆಗೆ ಸೆಳೆದೊಯ್ಯುವ ವಿರಾಮ ವೇಳೆಯೂ ಇನ್ನೊಂದು. ಹೀಗೆ ಶಿಕ್ಷಕರು ಹೆಚ್ಚುವರಿ ವೃತ್ತಿಯನ್ನು ಹೊಂದುವುದು ಅಪರಾಧವೂ ಅಲ್ಲ, ಆಕ್ಷೇಪಣೆಯವೂ ಅಲ್ಲ. ಆದರೆ ಇಂಥ ಶಿಕ್ಷಕರ ಬಗ್ಗೆ ಬೆಳಕಿಗೆ ಬಂದ ವಿಷಾದಕರ ಸಂಗತಿಯೆಂದರೆ 'ಆದ್ಯತೆಯ ಪಲ್ಲಟನೆ' (Shift of Priorities). ಹೆಚ್ಚುವರಿ ವೃತ್ತಿಯನ್ನು ಹೊಂದಿದ ಅನೇಕ ಶಿಕ್ಷಕರು ವಿದ್ಯಾಭ್ಯಾಸ ಮಾಡಿಸುವ ತಮ್ಮ ಮುಖ್ಯವೃತ್ತಿಯನ್ನೇ ಬದಿಗೊತ್ತಿ ತಾವು ಕೈಕೊಂಡ ಹೆಚ್ಚುವರಿ ವೃತ್ತಿಗಳಲ್ಲಿಯೇ ತಲ್ಲೀನರಾಗಿರುವದು.

ಇನ್ನುಳಿದ ರಂಗಗಳಿಗೆ ಸರಿ ಹೋಲಿಸಿ ನೋಡಿದಾಗ ಶಿಕ್ಷಣ ರಂಗದಲ್ಲಿ ಬಡ್ತಿಯ ಅವಕಾಶಗಳು (Promotional Opportunities) ಅತೀ ಕಡಿಮೆ ಎಂಬುದು ಎಲ್ಲರಿಗೂ ಗೊತ್ತಿದ್ದ ವಿಷಯ. ಪ್ರಾಥಮಿಕ, ಮಾಧ್ಯಮಿಕ ಹಾಗೂ ಕಾಲೇಜುಗಳಲ್ಲಿಯಂತೂ ಅವು ಇಲ್ಲವೆಂದೇ ಹೇಳುವಷ್ಟು ಕಡಿಮೆ. ತುಲನಾತ್ಮಕವಾಗಿ ನೋಡಿದಾಗ ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಬಡ್ತಿಯ ಅವಕಾಶಗಳು ಸ್ನಾತಕೋತ್ತರ ಹಂತದಲ್ಲಿ ಮಾತ್ರ. ಈ ಬಡ್ತಿಯ ಅವಕಾಶಗಳು ಸ್ನಾತಕೋತ್ತರ ಹಂತದಲ್ಲಿ ಸೇವೆ ಸಲ್ಲಿಸುತ್ತಿರುವ ಶಿಕ್ಷಕ ಶಿಕ್ಷಕಿಯರಿಗೆ ತಮ್ಮ ಅರ್ಹತೆಗಳನ್ನು ಹೆಚ್ಚಿಸಿಕೊಳ್ಳಲು ಪ್ರೋತ್ಸಾಹದ (Incentives) ಸೆಲೆಯಾಗಿವೆಯಾದರೂ ಅವು ಆಮಿಷ, ಕಚ್ಚಾಟಕ್ಕೆ ಎಡೆಮಾಡಿ ಕೊಟ್ಟಿವೆ. ಈಗೀಗ ವಿಶ್ವವಿದ್ಯಾಲಯಗಳ ಆವರಣಗಳಲ್ಲಿ ಪ್ರಚಲಿತವಿರುವ ಒಂದು ಹಾಸ್ಯಚಟಾಕಿ ಎಂದರೆ "Universities are like crab baskets, you donot have to close them with a lid". "ವಿಶ್ವವಿದ್ಯಾಲಯಗಳು ಏಡಿ ತುಂಬಿದ ಬುಟ್ಟಿಗಳು, ಅವುಗಳಿಗೆ ಮುಚ್ಚಳಗಳೇ ಬೇಕಿಲ್ಲ". ಈ ಹಾಸ್ಯ ಚಟಾಕಿಯ ಮರ್ಮವೇನು? ಜೀವಂತ ಮೀನುಗಳನ್ನು ತುಂಬಿದ ಬುಟ್ಟಿಗೆ ಮುಚ್ಚಳದ ಅವಶ್ಯಕತೆ ಇದೆ ಯಾಕೆಂದರೆ ಮೀನುಗಳು ನೆಗೆದು ಹೊರಗೆ ಹೋಗುವ ಭೀತಿ. ಆದರೆ ಜೀವಂತ ಏಡಿಗಳನ್ನು ತುಂಬಿದ ಬುಟ್ಟಿಗೆ ಮುಚ್ಚಳವೇ ಬೇಕಿಲ್ಲ ಯಾಕೆಂದರೆ ಒಂದು ಏಡಿ ಬುಟ್ಟಿಯ ಅಂಚನ್ನೇರಲು ಪ್ರಯತ್ನಿಸುವದೊಂದೆ ತಡ ಇನ್ನುಳಿದ ಏಡಿಗಳು ಅದಕ್ಕೆ ಜೋತು ಬಿದ್ದು ಅದನ್ನು ಕೆಳಗಿಳಿಸದೇ ಬಿಡವು. ತಮ್ಮ ಮುಂಬಡ್ತಿಯ(Promotion) ಪ್ರಯತ್ನದಲ್ಲಿದ್ದಾಗ ಅನೇಕ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದ ಸ್ನಾತಕೋತ್ತರ ಶಿಕ್ಷಕರಿಗೆ ಈ ಮಾತು ಹಾಸ್ಯ ಚಟಾಕಿಯಾಗುಳಿಯದೇ, ಬಾಸುಂಡೆಗಳ ನೆನಪನ್ನು ಮರುಕಳಿಸುವ ಮನೋವೇದನೆಯನ್ನು ಉಲ್ಬಣಗೊಳಿಸುವ ಕಟು ಸತ್ಯವಾಗಿದೆ.

ಹಾಗಾದರೆ ಮುಂದೇನು? ತಮ್ಮ ತಪ್ಪು ತಡೆಗಳನ್ನೂ ನ್ಯೂನತೆಗಳನ್ನೂ ಮನಗಂಡ ಶಿಕ್ಷಕ-ಶಿಕ್ಷಕಿಯರು ಕೀಳರಿಮೆಯ ಕುಲುಮೆಯಲ್ಲಿ ಕಮರಿ ಹೋಗಬೇಕೆ? ಇಲ್ಲ, ಹೀಗೆಂದೂ ಆಗಕೂಡದು. ಹಾಗೆ ಆಗಿದ್ದೆ ಆದರೆ ಅದು ಹೇಡಿತನದ ಕೆಲಸವಾಗೀತು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಶಿಕ್ಷಕರು ತಮ್ಮ ಆತ್ಮಶೋಧನೆಯನ್ನು ಕೈಗೊಂಡು ದೃಢ ಸಂಕಲ್ಪದಿಂದ, ಟೊಂಕಕಟ್ಟಿ ಸ್ವಯಂ ಸುಧಾರಣೆಯನ್ನು ಕೈಗೊಂಡದ್ದೇ ಆದರೆ, ಈ ನಿರ್ಧಾರದ ಎದುರು ಅವರ ಬಗ್ಗೆ ಈಗ ಸಮಾಜದಲ್ಲಿ ಚಾಲನೆಯಲ್ಲಿದ್ದ ಪ್ರತೀತಿ ನಿರ್ಮಲಗೊಳ್ಳುವುದಲ್ಲದೇ, ಅವರ ಬಗ್ಗೆ ಇದ್ದ ವ್ಯಂಗೋಕ್ತಿಗಳು ಅಳಿಸಿ ಹೋಗುವುದರಲ್ಲಿ ಸಂದೇಹವೇ ಇಲ್ಲ. ಈ ಕೆಲಸ ದುಸ್ಸಾಧ್ಯವೆನ್ನುವಿರಾ? ಇತಿಹಾಸದಿಂದ ಪಾಠ ಕಲಿಯೋಣ.

ಎರಡನೆಯ ಮಹಾಯುದ್ಧದ ಪೂರ್ವದಲ್ಲಿ ಜಪಾನಿನಲ್ಲಿ ತಯಾರಾದ ಯಾವುದೇ ವಸ್ತುವಿಗೆ ಕೀಳುಮಟ್ಟದ ನಕಲಿ ಮಾಲು ಎಂದೇ ಪ್ರತೀತಿ ಇತ್ತು. ಆದರೆ ಎರಡನೆಯ ಮಹಾಯುದ್ಧದ ನಂತರ ಇಡೀ ಜಪಾನ ದೇಶವೇ ತಮ್ಮ ಬಗೆಗಿದ್ದ ಈ ಪ್ರತೀತಿಯನ್ನೂ, ವ್ಯಂಗೋಕ್ತಿಯನ್ನೂ ಅಳಿಸಿ ಹಾಕಲು ಸನ್ನದ್ಧವಾಯಿತು. ಈ ಮಹತ್ಕಾರ್ಯಕ್ಕೆ ಕೈ ಹಾಕಿದ ಜಪಾನೀಯರು ನಾಲ್ಕೈದು ದಶಕಗಳ ವರೆಗೆ ಅಹೋರಾತ್ರಿ ಟೊಂಕ ಕಟ್ಟಿ ದುಡಿದರು, ಶ್ರಮಿಸಿದರು, ಬೆವರು ಸುರಿಸಿದರು. ಅವರ ಈ ಪರಿಶ್ರಮದ ಪರಿಣಾಮವಾಗಿ ಜಪಾನದಲ್ಲಿ ಒಂದು ಹೊಸ ಯುಗವೇ ಪ್ರಾರಂಭವಾಯಿತು. ನಾಲ್ಕು ದಶಕಗಳ ಹಿಂದೆಯಷ್ಟೇ "ನಕಲಿ ಜಪಾನೀಯರು" ಎಂದೆನಿಸಿಕೊಂಡ ಅವರು ಈಗ ಇಡೀ ಪ್ರಪಂಚದಲ್ಲಿಯೇ ನಿಸ್ಸೀಮ ತಂತ್ರಜ್ಞರೆಂದೂ, ಅವರು ತಯಾರಿಸಿದ ವಸ್ತುಗಳು ಉತ್ಕೃಷ್ಟ ಮಟ್ಟದವೆಂದೂ ಹೆಸರಾಗಿವೆ.

ಸ್ವಯಂ ಸುಧಾರಣೆಯ ಈ ಕೆಲಸದಲ್ಲಿ ತೊಡಗಿದಾಗ ನಮಗೆ ಸ್ಫೂರ್ತಿಯ ಬುಗ್ಗೆಗಳಾಗಬಹುದಾದ ಅನೇಕ ಉದಾಹರಣೆಗಳುಂಟು. ಜಾನ್ ಗಾಲ್ಬ್ರೈತ್, ಡಾನಿಯಲ್ ಮೊಯ್ನಿಹಾನ್, ಲಿಂಡನ್ ಜಾನ್‌ಸನ್, ಜಿಮ್ಮಿ ಕಾರ್ಟರ ಹೀಗೆ ಅನೇಕ ಜಗತ್ಪ್ರಸಿದ್ಧ ಮುತ್ಸದ್ದಿಗಳು ತಮ್ಮ ರಾಜಕೀಯ ಜೀವನದ ಅಂಚಿನಲ್ಲಿದ್ದಾಗ, "ರಾಜಕೀಯದಿಂದ ನಿವೃತ್ತರಾದ ಮೇಲೆ ಏನು ಮಾಡಬೇಕೆನ್ನುತ್ತೀರಿ?" ಎಂಬ ಪ್ರಶ್ನೆಗೆ, "ಶಿಕ್ಷಕ ವೃತ್ತಿಗೆ ತಿರುಗಿ ಹೋಗುತ್ತೇವೆ" ಎಂದು ಉತ್ತರಿಸಿದರು, ಮಾತ್ರವಲ್ಲ ಅಂದಂತೆ ನಡೆದುಕೊಂಡರೂ ಸಹ. ಹೀಗಿರುವಾಗ ಭಾರತೀಯ ಶಿಕ್ಷಕರಾದ ನಾವು ನಮ್ಮ ವೃತ್ತಿಯ ಬಗ್ಗೆ ಜಿಗುಪ್ಸೆಯನ್ನೂ, ಕೀಳರಿಮೆಯನ್ನೂ ತ್ಯಜಿಸಿ ಕಾರ್ಯ ಸನ್ನದ್ಧರಾಗೋಣ.

ಕೊನೆಗೆ ಒಂದು ಕಿರುಕಥೆ: ಪ್ರಾಥಮಿಕ ಶಾಲೆಯ ಶಿಕ್ಷಕರೊಬ್ಬರು ತಮ್ಮ ವರ್ಗದ ವಿದ್ಯಾರ್ಥಿಗಳಿಗೆ "The Best thing I Like In School" "ಶಾಲೆಯಲ್ಲಿ ನನಗೆ ಸೇರುವ ಅತ್ಯುತ್ತಮ ವಸ್ತು" ಎಂಬ ವಿಷಯದ ಬಗ್ಗೆ ಹತ್ತು ವಾಕ್ಯಗಳಲ್ಲಿ ಒಂದು ನಿಬಂಧವನ್ನು ಬರೆಯಲು ಹೇಳಿದರಂತೆ. ಆಗ ಒಬ್ಬ ವಿದ್ಯಾರ್ಥಿ ನನಗೆ ಶಾಲೆಯಲ್ಲಿ ಸೇರುವ ಅತ್ಯುತ್ತಮ ವಸ್ತು "ಶಾಲೆಯ ಕಟ್ಟಡ"ವೆಂದೂ, ಇನ್ನೊಬ್ಬ, "ಶಾಲೆಯ ಹೂದೋಟ"ವೆಂದೂ, ಮಗದೊಬ್ಬ "ಆಟದ ಬಯಲು" ಎಂದೂ - ಹೀಗೆ ಬೇರೆ ಬೇರೆ ವಿಷಯಗಳನ್ನು ಕುರಿತು ಇನ್ನುಳಿದ ವಿದ್ಯಾರ್ಥಿಗಳು ನಿಬಂಧಗಳನ್ನು ಬರೆದು ಓದಿದರು. ಆದರೆ ವರ್ಗದಲ್ಲಿದ್ದ ತುಂಟ

ಮರಿಯೊಬ್ಬ ಹತ್ತು ಸಾಲಿನ ನಿಬಂಧದ್ದ ಬದಲು ಒಂದೇ ಒಂದು ಸಾಲಿನ'ನಿಬಂಧ' ಬರೆದ. ಅದು ಹೀಗಿತ್ತು "The best thing I like in School is the last bell" "ಶಾಲೆಯಲ್ಲಿ ನನಗೆ ಸೇರುವ ಅತ್ಯುತ್ತಮ ವಸ್ತುವೆಂದರೆ ಕೊನೆಯ ಗಂಟೆ!"

ಮೇಲೆ ಸೂಚಿಸಿದಂತೆ ಶಿಕ್ಷಕರು ಸ್ವಯಂ ಸುಧಾರಣೆಗೆ ಕಂಕಣಬದ್ಧರಾದರೆ ಶಾಲೆ ಕಾಲೇಜುಗಳಲ್ಲಿ ವಿದ್ಯಾರ್ಥಿಗಳೆಲ್ಲರೂ ಒಕ್ಕೊರಲಿನಿಂದ "ಶಾಲೆ ಕಾಲೇಜುಗಳಲ್ಲಿ ನಮಗೆ ಸೇರುವ ಅತ್ಯುತ್ತಮ ವಿಷಯವೆಂದರೆ ನಮ್ಮ ಶಿಕ್ಷಕರು" ಎಂದು ಹೇಳುವ ದಿವಸಗಳು ಬಹಳ ದೂರವಿರಲಾರವು.

* * *

ದೂರಶಿಕ್ಷಣ : ಒಂದು ಸ್ಥೂಲ ಪರಿಚಯ

ಎಚ್.ವಿ. ನಾಗೇಶ್

1. ಪೀಠಿಕೆ

ಸರಳ ಮಾತಿನಲ್ಲಿ ಹೇಳುವುದಾದರೆ, ದೂರದಿಂದ ಕಲಿಯುವುದು ಹಾಗೂ ಕಲಿಸುವುದು ದೂರಶಿಕ್ಷಣ. ಗುರುವಿನ ಸಾನಿಧ್ಯದಲ್ಲಿ ಕಲಿಯದೆ, ಅವನ ಎದುರು ಕುಳಿತು ಪಾಠಪ್ರವಚನ ಕೇಳದೆ, ದೂರದಲ್ಲಿ ಇದ್ದು ದೂರದರ್ಶನ, ಆಕಾಶವಾಣಿ, ಅಂಚೆಬೋಧನೆ, ಸ್ವಯಂಬೋಧಿನಿ, ಟಿಪ್ಪಣಿ ಮುಂತಾದ ಮುದ್ರಿತ ಸಾಮಗ್ರಿ, ದೂರವಾಣಿ ಇತ್ಯಾದಿಗಳ ಮೂಲಕ ಕಲಿಯುವದಕ್ಕೆ ದೂರಶಿಕ್ಷಣ ಎಂಬ ಅರ್ಥ ಈಗ ಬಳಕೆಗೆ ಬಂದಿದೆ. ಶಿಕ್ಷಣದಲ್ಲಿ ಕಲಿಕೆ ಮಾತ್ರವಲ್ಲ, ಕಲಿಸುವಿಕೆಯೂ ಸೇರಿರುತ್ತದೆ. ಆದುದರಿಂದ ದೂರದಿಂದ ಕಲಿಸುವುದು ಕೂಡ ದೂರಶಿಕ್ಷಣ. ದೃಶ್ಯ-ಶ್ರಾವ್ಯ ಮತ್ತು ಮುದ್ರಿತ ಸಾಮಗ್ರಿ ಮುಂತಾದ ಬಹು ಮಾಧ್ಯಮಗಳನ್ನು ಬಳಸಿ, ಅಲ್ಲಿ-ಇಲ್ಲಿ ಚದುರಿಹೋಗಿರುವ ವಿದ್ಯಾರ್ಥಿಗಳಿಗೆ ಇಲ್ಲಿ ಶಿಕ್ಷಣ ಕೊಡಲಾಗುತ್ತದೆ. ಗುರು ಇಲ್ಲಿ ಹೆಚ್ಚು ಕಡಿಮೆ ಅದೃಶ್ಯ. ವಿದ್ಯಾರ್ಥಿಗಳು ಗುರುವಿನ ಎದುರು, ಅವನ ಮಾತು ಕೇಳುವಷ್ಟು ಹತ್ತಿರ, ಕಣ್ಣಳತೆಯ ದೂರದಲ್ಲಿ ಇರಬೇಕೆಂದಿಲ್ಲ.

ದೂರಶಿಕ್ಷಣದ ಒಂದು ಪ್ರಾಚೀನ ಉದಾಹರಣೆ ಬಹಳ ಪ್ರಖ್ಯಾತವಾಗಿದೆ. ಮಹಾಭಾರತ ಕಥೆಯಲ್ಲಿ ಬರುವ ದ್ರೋಣಾಚಾರ್ಯರು ಕುರುವಂಶದ ರಾಜಕುಮಾರರಿಗೆ ಬಿಲ್ಲುವಿದ್ಯೆ ಕಲಿಸುತ್ತಿದ್ದರು. ರಾಜಕುಮಾರರೆಲ್ಲ ಅವರ ಸುತ್ತಮುತ್ತ ಇದ್ದು ಗುರುವಿನ ಸಾನಿಧ್ಯದಲ್ಲಿ ಕಲಿಯುತ್ತಿದ್ದರು. ಇದು ಪರಂಪರೆಯಿಂದ ಬಂದ ಶಿಕ್ಷಣ ಪದ್ಧತಿ. ಆದರೆ ಏಕಲವ್ಯನು ರಾಜಕುಮಾರರ ಹಾಗೆ ದ್ರೋಣಾಚಾರ್ಯರಿಂದ ಧನುರ್ವಿದ್ಯೆಯ ಪಾಠ ಹೇಳಿಸಿಕೊಳ್ಳಲು ಆಗಲಿಲ್ಲ. ಬೇರೆ ಉಪಾಯ ಕಾಣದೆ ಆತ ತನ್ನ ಆಚಾರ್ಯರ ಮೂರ್ತಿಯೊಂದನ್ನು ಇಟ್ಟುಕೊಂಡು, ಪ್ರಾಯಶಃ ಅವರ ಕೆಲವು ವೈಶಿಷ್ಟ್ಯಗಳನ್ನು ಮನಸ್ಸಿನಲ್ಲಿಯೇ ಗುರುತು ಹಾಕಿಕೊಂಡು, ತಾನಿರುವ ಸ್ಥಳದಲ್ಲಿಯೇ ಬಿಲ್ಲುವಿದ್ಯೆ ಮುಂದುವರಿಸಿ ಅದರಲ್ಲಿ ಪಾರಂಗತನಾದ. ಅಂದರೆ ಗುರುವಿನಿಂದ ದೂರ ಇದ್ದು ವಿದ್ಯೆ ಕಲಿತ. ಇದು ದೂರ ಕಲಿಕೆ, ದೂರಶಿಕ್ಷಣ. ಇದನ್ನು ನೋಡಿದರೆ ಏಕಲವ್ಯನೇ ದೂರ

ಶಿಕ್ಷಣದ ಮೊದಲ ವಿದ್ಯಾರ್ಥಿಯೆಂದು ಕಾಣುತ್ತದೆ. ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯದವರು ಒಂದು ಮಾಸಿಕ ಪತ್ರಿಕೆ ಹೊರಡಿಸುತ್ತಿದ್ದಾರೆ. ಅದರ ಹೆಸರು 'ಏಕಲವ್ಯ'. ಅವರು ಹಾಗೆ ಹೆಸರಿಟ್ಟಿದ್ದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ ಹಿಂದೆ ಏಕಲವ್ಯನು ಬಳಸಿದ ದೂರಶಿಕ್ಷಣ ಪದ್ಧತಿಯನ್ನೇ ಆ ವಿಶ್ವವಿದ್ಯಾಲಯ ಬಳಸುತ್ತದೆ.

ಮಹಾಭಾರತದ ಕಥೆ ಹೇಳಿದ್ದರಿಂದ ದೂರಶಿಕ್ಷಣ ಬಹು ಪ್ರಾಚೀನ ಎಂದು ತಪ್ಪಾಗಿ ತಿಳಿಯಬಾರದು. ಅದು ಪ್ರಾಚೀನವಲ್ಲ; ತೀರ ಇತ್ತೀಚೆಗೆ ಬಂದದ್ದು. ಹಾಗೆ ನೋಡಿದರೆ, ಎಷ್ಟೋ ದೇಶಗಳಲ್ಲಿ ಅದು ಇನ್ನೂ ಅಪರಿಚಿತ. ನಮ್ಮ ದೇಶದಲ್ಲಿ ಇತ್ತೀಚೆಗೆ ದೂರಶಿಕ್ಷಣದ ಕೆಲವು ಪ್ರಯೋಗ ನಡೆದಿವೆ. ಜನರಿಗಿನ್ನೂ ಈ ಶಿಕ್ಷಣ ಪದ್ಧತಿಯ ವ್ಯಾಪ್ತಿ, ಉದ್ದೇಶ, ಉಪಯೋಗ ತಿಳಿದಿಲ್ಲ. ಸದ್ಯ ಇಲ್ಲಿ ಅದರ ಕಿರುಪರಿಚಯ ಮಾಡಿಕೊಳ್ಳೋಣ.

ಗುರು ಮತ್ತು ಶಿಷ್ಯ-ಅಂದರೆ ಕಲಿಸುವವನು ಮತ್ತು ಕಲಿಯುವವನು ದೂರ ಇದ್ದಾಗ ಕಲಿಕೆ ಸಾಧ್ಯ ಎಂಬುದು ನಮ್ಮ ಪ್ರಾಚೀನರಿಗೆ ಮನವರಿಕೆಯಾಗಿರಲಿಲ್ಲ. ಆದರೆ ಒಂದು ಅಪವಾದ ಇತ್ತೆಂದು ಕಾಣುತ್ತದೆ. ಗ್ರೀಕರ ಮತ್ತು ರೋಮನ್ನರ ಇತಿಹಾಸದಲ್ಲಿ ರೋಮನ್ ಕ್ಯಾಥೊಲಿಕ್ ಧರ್ಮಗುರುಗಳು ತಮ್ಮ ಶಿಷ್ಯರಿಗೆ ಪತ್ರಗಳ ಮೂಲಕ ಉಪದೇಶಮಾಡುತ್ತಿದ್ದುದು ದಾಖಲೆಯಾಗಿದೆ. ಈ ಪರಂಪರೆ ಸಂತ ಪಾಲನಿಂದ ಪ್ರಾರಂಭವಾಯಿತೆಂದು ಕಾಣುತ್ತದೆ. ಮುಂದಿನ ಕೆಲವು ಶತಮಾನಗಳ ಕಾಲ ಇಂಥ ಧರ್ಮೋಪದೇಶ ಪದ್ಧತಿ ಅಷ್ಟು-ಇಷ್ಟು ಪ್ರಚಲಿತವಾಗಿತ್ತೆಂದು ಹೇಳುತ್ತಾರೆ. ಏನಿದ್ದರೂ ನಾವು ಯಾವುದನ್ನು ಈಗ ದೂರಶಿಕ್ಷಣ ಪದ್ಧತಿ ಎಂದು ಕರೆಯುತ್ತೇವೆಯೋ ಅದನ್ನು ಹೋಲುವುದಿಲ್ಲ. ಅಂಚೆಮೂಲಕ ಶಿಕ್ಷಣ ಕೊಡುವ ಪದ್ಧತಿ ಪ್ರಾರಂಭವಾದುದು ೧೯ನೇ ಶತಮಾನದಲ್ಲಿ ಎನ್ನುತ್ತಾರೆ. ಅಂಥ ಮೊದಲ ಉದಾಹರಣೆ ಇಂಗ್ಲೆಂಡಿನಿಂದ ಬಂದಿದೆ. ೧೮೩೩ರ ಸುಮಾರಿಗೆ ಒಬ್ಬ ಖಾಸಗಿ ಇಂಗ್ಲೀಷ್ ಭಾಷಾ ಶಿಕ್ಷಕ ನಿಬಂಧ ಬರೆಯುವ ಕಲೆಯ ಬಗ್ಗೆ ಪಾಠ ತಯಾರಿಸಿ ಅಂಚೆಯಿಂದ ಕಳುಹಿಸುವುದನ್ನು ಪ್ರಾರಂಭಿಸಿದನಂತೆ. ಅವನ ಮಾದರಿ ಪ್ರಬಂಧ ಮತ್ತು ಟಿಪ್ಪಣಿಗಳನ್ನು ಓದಿ, ವಿದ್ಯಾರ್ಥಿಗಳು ತಾವು ಸ್ವತಃ ನಿಬಂಧ ರಚಿಸಿ ಆ ಶಿಕ್ಷಕನಿಗೆ ತಿರುಗಿ ಕಳುಹಿಸಿ ಅವನ ಸಲಹೆ ಪಡೆಯುತ್ತಿದ್ದರಂತೆ. ಇನ್ನೊಂದು ಉತ್ತಮ ಉದಾಹರಣೆಯೆಂದರೆ ಐಸಾಕ್ ಪಿಟಮನ್ ಪ್ರಾರಂಭಿಸಿದ 'ಶಾರ್ಟಹ್ಯಾಂಡ್' ಕಲಿಸುವ ಪದ್ಧತಿ. ಇದು ಪ್ರಾರಂಭವಾದದ್ದು ೧೮೪೦ರಲ್ಲಿ. ಆಗ ಇಂಗ್ಲೆಂಡಿನಲ್ಲಿ ಎಲ್ಲ ತರಹದ ಅಂಚೆಗೆ ಒಂದು ಪೆನ್ನಿ ಅಂಚೆಶುಲ್ಕ ವಿಧಿಸುವ ಪದ್ಧತಿ ಜಾರಿಗೆ ಬಂದಿತ್ತು. ಪಿಟಮನ್ ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಶಾರ್ಟಹ್ಯಾಂಡ್ ಪಾಠ ತಯಾರಿಸಿ ದೂರದೂರದಲ್ಲಿರುವ ತನ್ನ ವಿದ್ಯಾರ್ಥಿಗಳಿಗೆ ಪೆನ್ನಿ ಪೋಸ್ಟಿನಲ್ಲಿ ಕಳುಹಿಸುತ್ತಿದ್ದನಂತೆ. ಇದು ನಮಗೆ ತಿಳಿದಂತೆ ಮೊಟ್ಟ ಮೊದಲ ಅಂಚೆತೆರಪಿನ ಶಿಕ್ಷಣ. ಒಂದು ವೃತ್ತಿ ಅಥವಾ ಕೌಶಲ್ಯವನ್ನು ಅಂಚೆ ಮೂಲಕ ಕಲಿಸುವ ಪ್ರಥಮ ಉದಾಹರಣೆ ಎಂದರೆ ತಪ್ಪಿಲ್ಲ. ಇಂಥದೇ ಇನ್ನೊಂದು ಉದಾಹರಣೆ ಗಮನಕ್ಕೆ ಬಂದಿದೆ. ೧೮೫೬ರಲ್ಲಿ ಲ್ಯಾಂಗನ್ ಶೀಥ್ ಮತ್ತು ತೌಸಾಂತ್ ಎಂಬಿಬ್ಬರು ಅಂಚೆಮೂಲಕ ವಿದೇಶಿ ಭಾಷೆಗಳನ್ನು ಕಲಿಸುವ ಸಾಹಸ ಮಾಡಿದ್ದರು.

ಇವು ಇಂಗ್ಲೆಂಡಿನ ಉದಾಹರಣೆಗಳಾದರೆ, ಅಮೇರಿಕೆಯ ಸಂಯುಕ್ತ ಸಂಸ್ಥಾನದಲ್ಲಿ ಇಂಥ ಪ್ರಥಮ ಪ್ರಯತ್ನ ನಡೆದುದು ೧೮೭೩ರಲ್ಲಿ. ಮುಂದೆ ಅಲ್ಲಿ 'ಲ್ಯಾಂಡ್ ಗ್ರಾಂಟ್' ಕಾಲೇಜುಗಳು ಹುಟ್ಟಿ, ಅವು ದೂರದಲ್ಲಿರುವ ವಿದ್ಯಾರ್ಥಿಗಳಿಗೆ ಅಂಚೆ ಮೂಲಕ ಶಿಕ್ಷಣ ಕೊಡುವ ಪದ್ಧತಿ ಪ್ರಾರಂಭಿಸಿದವು. ಕಾಲೇಜು ಶಿಕ್ಷಣದಲ್ಲಿ ಅಥವಾ ವಿಶ್ವವಿದ್ಯಾಲಯ ಮಟ್ಟದಲ್ಲಿ ಅಥವಾ ಕೆಲವು ವಿಶೇಷ ತರಬೇತಿ ಕೊಡುವಲ್ಲಿ ಈ ದೂರ ಶಿಕ್ಷಣ ವಿಧಾನವನ್ನು ಅಲ್ಲಿ ಬಳಸಿದ್ದನ್ನು ಕಾಣುತ್ತೇವೆ. ಯುರೋಪಿನಲ್ಲಿ ಈ ವಿಷಯದಲ್ಲಿ ಅಗ್ರಗಾಮಿಗಳು ಜರ್ಮನಿ ಮತ್ತು ಸ್ವೀಡನ್ ದೇಶಗಳು. ೧೮೯೦ರ ಸುಮಾರಿಗೆ ಈ ದೇಶಗಳಲ್ಲಿ ಅಂಚೆ ಮೂಲಕ ಶಿಕ್ಷಣ ಕೊಡುವ ಸಂಸ್ಥೆಗಳು ಪ್ರಾರಂಭವಾದವು. ಈ ಶತಮಾನದ ಪ್ರಾರಂಭದ ಹೊತ್ತಿಗಾಗಲೇ ಯುರೋಪಿನ ಅನೇಕ ರಾಷ್ಟ್ರಗಳು ಒಂದಲ್ಲ ಒಂದು ವಿಧವಾದ ದೂರಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭ ಮಾಡಿದ್ದವು. ಈ ಶತಮಾನದ ಉತ್ತರಾರ್ಧದ ಹೊತ್ತಿಗೆ ದೂರಶಿಕ್ಷಣ ವಿಧಾನ ಯುರೋಪಿನ ಹೊರಗೆ ಆಸ್ಟ್ರೇಲಿಯಾ, ನ್ಯೂಜಿಲ್ಯಾಂಡ್, ಸೋವಿಯಟ್ ರಷ್ಯಾ ದೇಶಗಳಲ್ಲೂ ಚೀಣಾ, ಜಪಾನ್, ಥೈಲಂಡ್, ದಕ್ಷಿಣ ಕೋರಿಯಾ, ಫಿಲಿಫೈನ್ಸ್, ಭಾರತ, ಪಾಕಿಸ್ತಾನಗಳನ್ನೊಳಗೊಂಡಂತೆ ಏಶಿಯಾದ ಅನೇಕ ದೇಶಗಳಲ್ಲೂ ಬಳಕೆಗೆ ಬಂತು. ಅದು ಈಗ ಹೆಚ್ಚು ಹೆಚ್ಚು ಜನಪ್ರಿಯವಾಗುತ್ತಿದೆ.

ಇಷ್ಟೆಲ್ಲ ಪೀಠಿಕೆಯ ನಂತರ ಈಗ ದೂರ ಶಿಕ್ಷಣದ ಲಕ್ಷಣಗಳೇನು? ಅದು ಅಂಚೆಮೂಲಕ ಶಿಕ್ಷಣಕ್ಕಿಂತ ಭಿನ್ನವಾದದ್ದೆ? ಹೇಗೆ ಭಿನ್ನವಾಗಿದೆ? ಅದನ್ನು ಕೆಲವೊಮ್ಮೆ ಮುಕ್ತ ಶಿಕ್ಷಣ ಎಂದು ಕರೆಯುತ್ತಾರಲ್ಲಾ, ಹಾಗೇಕೆ? ದೂರಶಿಕ್ಷಣದ ಅವಶ್ಯಕತೆಯಾದರೂ ಏನು? ನಮ್ಮ ದೇಶದಲ್ಲಿ ದೂರಶಿಕ್ಷಣ ಪದ್ಧತಿ ಎಷ್ಟರಮಟ್ಟಿಗೆ ಉಪಯೋಗಕ್ಕೆ ಬಂದೀತು? ಶಾಲಾ ಶಿಕ್ಷಕರನ್ನು ತರಬೇತುಗೊಳಿಸುವುದರಲ್ಲಿ ಈ ವಿಧಾನ ಬಳಸಬಹುದೆ? ಈ ಎಲ್ಲ ಪ್ರಶ್ನೆಗಳನ್ನು ಒಂದೊಂದಾಗಿ ಎತ್ತಿಕೊಳ್ಳಬಹುದು.

ii. ಏಳು ಪ್ರಮುಖ ಲಕ್ಷಣಗಳು

ದೂರಶಿಕ್ಷಣದ ಒಂದು ಮುಖ್ಯ ಲಕ್ಷಣವನ್ನು ಈಗಾಗಲೇ ನೋಡಿದ್ದೇವೆ. ಈ ಪದ್ಧತಿಯಲ್ಲಿ ಗುರು ಮತ್ತು ಶಿಷ್ಯರು ಕಲಿಕೆಯ ಉದ್ದಕ್ಕೂ ಪರಸ್ಪರರಿಂದ ದೂರ ಇರುತ್ತಾರೆಂದು ಹೇಳಿದೆವು. ನಮ್ಮ ಸಾಂಪ್ರದಾಯಿಕ ಶಿಕ್ಷಣ ಪದ್ಧತಿಯಲ್ಲಿ ಅವರಿಬ್ಬರೂ ಮುಖಾಮುಖಿ ಸಂಬಂಧ ಹೊಂದಿರುತ್ತಾರೆ. ಹಿಂದೆ ಗುರುಕುಲದಲ್ಲಿಯೂ ಹಾಗೆ ಇತ್ತು; ಇಂದು ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲೂ ಅದು ಅನಿವಾರ್ಯ. ಆದರೆ ದೂರಶಿಕ್ಷಣದಲ್ಲಿ ಹಾಗಿಲ್ಲ.

ಎರಡನೆಯದಾಗಿ, ದೂರಶಿಕ್ಷಣದಲ್ಲಿ ಬೋಧನೆಯ ವಿಷಯಗಳನ್ನು ಯೋಜಿಸುವ, ಅಧ್ಯಯನಕ್ಕೆ ಅವಶ್ಯವಾದ ಪಾಠಗಳನ್ನು ರೂಪಿಸುವ ಹಾಗೂ ವಿದ್ಯಾರ್ಥಿಗಳಿಗೆ ಅವಶ್ಯವಿರುವ ಬೆಂಬಲ ಸೇವೆಗಳನ್ನು ಒದಗಿಸುವ ಕೆಲಸವನ್ನು ವಿಶ್ವವಿದ್ಯಾಲಯದಂಥ ಒಂದು ಸಂಸ್ಥೆ ಅಥವಾ ಸಂಘಟಿತ ವ್ಯವಸ್ಥೆ ಪೂರ್ಣ ಪ್ರಮಾಣದಲ್ಲಿ ನಿರ್ವಹಿಸುವುದು. 'ನಮ್ಮ ಪಾಠ

ಕಳುಹಿಸಿಯಾಯಿತು. ಇನ್ನು ಕಲಿಯುವುದು, ಬಿಡುವುದು ಅವರಿಗೆ ಸೇರಿದ್ದು. ಕಲಿತಷ್ಟು ಕಲಿಯಲಿ, ಬಿಟ್ಟಷ್ಟು ಬಿಡಲಿ' ಎಂಬ ಧೋರಣೆಯಿಂದ ಈ ಶಿಕ್ಷಣ ನಡೆಯುವುದಿಲ್ಲ. ಖಾಸಗಿ ಸಂಸ್ಥೆಗಳು ಕೇವಲ ಹಣ ಸಂಪಾದನೆಗಾಗಿ ಕೊಡುವ 'ಮನೆಯಲ್ಲೇ ಕಲಿಯಿರಿ' ಯೋಜನೆಗಳಲ್ಲಿ ಇಂಥ ಧೋರಣೆ ಇರುತ್ತದೆ. ವಿದ್ಯಾರ್ಥಿಗಳು ಇಂಥವರು ಕಳುಹಿಸುವ ಟಿಪ್ಪಣಿಗಳನ್ನು ಮೇಲುಮೇಲಕ್ಕೆ ನೋಡಿಕೊಂಡು ನಾಮ ಮಾತ್ರಕ್ಕೆ ಇರುವ ಪರೀಕ್ಷೆಗಳಿಗೆ ಕೂತುಕೊಂಡು ನೂರಕ್ಕೆ ನೂರು ಪಾಸಾಗುವರು. ಓದಲಿ, ಬಿಡಲಿ; ಕಲಿಯಲಿ, ಬಿಡಲಿ; ನೀವು ವೈದ್ಯರೋ, ಇಂಜಿನೀಯರೋ, ಲೆಕ್ಕ ಪರಿಶೋಧಕರೊ, ಪತ್ರಿಕೋದ್ಯೋಗಿಗಳೋ ಆದ ಬಗ್ಗೆ ನಿಮಗೆ ಪ್ರಮಾಣ ಪತ್ರ ಬರುವುದು. ಆದರೆ ವ್ಯವಸ್ಥಿತ ದೂರಶಿಕ್ಷಣದಲ್ಲಿ ಹೀಗಾಗುವುದಿಲ್ಲ. ವಿದ್ಯಾರ್ಥಿಗಳಿಗೆ ಅವಶ್ಯವಾದ ಬೆಂಬಲ ನಿರಂತರವಾಗಿ ಸಿಗುವ ಏರ್ಪಾಡಿರುತ್ತದೆ. ಸರ್ಕಾರಗಳ ಉಸ್ತುವಾರಿಯಲ್ಲಿರುವ ಎಲ್ಲ ಮುಕ್ತ ವಿಶ್ವವಿದ್ಯಾಲಯಗಳು ಇದನ್ನು ತಪ್ಪದೇ ಮಾಡುತ್ತವೆ.

ಮೂರನೆಯದಾಗಿ, ದೂರಶಿಕ್ಷಣವು ಮುದ್ರಿತ ಟಿಪ್ಪಣಿಗಳು, ಕ್ಯಾಸೆಟ್ಟುಗಳಲ್ಲಿ ಸಂಗ್ರಹಿಸಿಟ್ಟ ದೃಶ್ಯ-ಶ್ರಾವ್ಯ ಪಾಠಗಳು, ರೇಡಿಯೊದಲ್ಲಿ ವಿಶೇಷವಾಗಿ ಬಿತ್ತರಿಸುವ ಪಾಠಗಳು, ದೂರದರ್ಶನ ದರ್ಶಿಸುವ ಮಾಹಿತಿ, ಕಂಪ್ಯೂಟರ್ ಮಾಹಿತಿ ಇತ್ಯಾದಿ ಬಹುಮಾಧ್ಯಮಗಳ ಮೂಲಕ ನಡೆಯುತ್ತದೆ. ಮಾಧ್ಯಮಗಳು ಕಲಿಯುವವರನ್ನೂ ಕಲಿಸುವವರನ್ನೂ ಜೋಡಿಸುವ ಕೆಲಸ ಮಾಡುತ್ತವೆ. ಅಲ್ಲದೆ ಅವು ಬೋಧನಾ ಸಾಮಗ್ರಿಯನ್ನು ವಿದ್ಯಾರ್ಥಿಗಳಿಗೆ ಮುಟ್ಟಿಸುತ್ತವೆ.

ನಾಲ್ಕನೆಯದಾಗಿ, ಶಾಲೆ ಕಾಲೇಜುಗಳಲ್ಲಿ ನಾವು ಸಾಮಾನ್ಯವಾಗಿ ಕಾಣುವ ಗುರು-ಶಿಷ್ಯ ಸಂಪರ್ಕ, ಸಂವಾದ ದೂರಶಿಕ್ಷಣದಲ್ಲಿ ಕಾಣುವುದಿಲ್ಲ ಆದರೆ ವಿವಿಧ ಮಾಧ್ಯಮಗಳ ಮೂಲಕ, ಮುದ್ರಿತ ಸಾಮಗ್ರಿಯಲ್ಲೇ ಅಡಗಿರುವ ಪ್ರಶ್ನೆ-ಮರುಪ್ರಶ್ನೆ-ಸಮಾಧಾನಗಳ ಮೂಲಕ, ಈ ಶಿಕ್ಷಣದಲ್ಲೂ ಒಂದು ರೀತಿಯ ಸಂವಾದ-ಸಂವಹನ ನಡೆದೇ ಇರುತ್ತದೆ. ಇದನ್ನು ಸರಿಯಾಗಿ ಬಳಸಿಕೊಳ್ಳಬಲ್ಲ ವಿದ್ಯಾರ್ಥಿ ದೂರಶಿಕ್ಷಣದ ಸಂಪೂರ್ಣ ಪ್ರಯೋಜನ ಪಡೆಯಬಲ್ಲ.

ಐದನೆಯದಾಗಿ, ದೂರಶಿಕ್ಷಣವು ಮುಖ್ಯವಾಗಿ ಖಾಸಗಿ ಹಾಗೂ ಒಬ್ಬಂಟಿ ಕಲಿಕೆ. ಅದು ಸಾಮೂಹಿಕ ಚಟುವಟಿಕೆಯಲ್ಲ. ಆದರೂ ಕೆಲವು ಸಂಶಯಗಳನ್ನು ನಿವಾರಿಸಿಕೊಳ್ಳಲು, ವೈಯಕ್ತಿಕ ಮಾರ್ಗದರ್ಶನ ಪಡೆಯಲು ಹಾಗೂ ಕೆಲವೊಮ್ಮೆ ಸಾಮಾಜಿಕ ಸಂಬಂಧವನ್ನು ಏರ್ಪಡಿಸಿಕೊಳ್ಳಲು ದೂರಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಆಗಾಗ ಒತ್ತಟ್ಟಿಗೆ ಬರುವ ಅವಕಾಶಗಳುಂಟು. ವಿಶ್ವವಿದ್ಯಾಲಯಗಳು ಅಲ್ಪಾವಧಿ ಶಿಬಿರಗಳನ್ನು ಅಥವಾ ಸಂಪರ್ಕ ವರ್ಗಗಳನ್ನು ಏರ್ಪಡಿಸಿ ಅಭ್ಯರ್ಥಿಗಳನ್ನೂ ಶೈಕ್ಷಣಿಕ ಸಲಹಾಕಾರರನ್ನೂ ಒಟ್ಟಿಗೆ ತರಲು ಪ್ರಯತ್ನಿಸುವುದಿದೆ.

ಈ ಐದು ಪ್ರಮುಖ ಲಕ್ಷಣಗಳನ್ನು ಹೇಳಿದ ಡೆಸ್ಮಂಡ್ ರೇಗನ್ ಎಂಬಾತ ಇನ್ನೂ ಎರಡು ಲಕ್ಷಣಗಳನ್ನು ಸೇರಿಸಿದ್ದಾನೆ. ಅವುಗಳಲ್ಲಿ ಮೊದಲನೆಯದೆಂದರೆ ದೂರಶಿಕ್ಷಣವು

ಆಧುನಿಕ ಔದ್ಯಮಿಕ ಸಮಾಜದ ಸೃಷ್ಟಿಯಾಗಿದ್ದು ಔದ್ಯಮಿಕತೆಯ ಲಕ್ಷಣಗಳನ್ನು ಹೊಂದಿದೆ. ಯಾವುದೇ ಮುಕ್ತ ವಿಶ್ವವಿದ್ಯಾಲಯದ ಉದಾಹರಣೆ ತೆಗೆದುಕೊಳ್ಳಿ, ಅಲ್ಲಿ ಲಕ್ಷಗಟ್ಟಲೆ ವಿದ್ಯಾರ್ಥಿಗಳು ಹೆಸರು ಹಚ್ಚಿರುತ್ತಾರೆ. ಅವರಿಗಾಗಿ ಅನೇಕ ಲಕ್ಷ ಸಂಖ್ಯೆಯಲ್ಲಿ ಸ್ವಯಂ ಬೋಧೆಯ ಸಾಮಗ್ರಿ ತಯಾರಿಗೊಂಡು, ವಿವಿಧ ಬಣ್ಣ ವಿನ್ಯಾಸಗಳಲ್ಲಿ ಮುದ್ರಣಗೊಂಡು ಅಂಚೆದ್ವಾರಾ ದೂರದೂರದ ಊರುಗಳಲ್ಲಿರುವ ವಿದ್ಯಾರ್ಥಿಗಳಿಗೆ ಹೋಗಬೇಕು. ಅಂಥ ಸಾಮಗ್ರಿಯನ್ನು ಮುದ್ರಿಸಲು ದೊಡ್ಡ ದೊಡ್ಡ ಮುದ್ರಣಾಲಯಗಳು ಬೇಕು. ದೃಶ್ಯ-ಶ್ರಾವ್ಯ ಕ್ಯಾಸೆಟ್ಟುಗಳನ್ನು ತಯಾರಿಸುವ ಯಂತ್ರಗಳೂ ತಾಂತ್ರಿಕರೂ ಬೇಕು. ಆಕಾಶವಾಣಿ-ದೂರದರ್ಶನಗಳಲ್ಲಿ ನಿಗದಿತ ವೇಳೆಗೆ ಪಾಠಗಳು ಬಿತ್ತರಗೊಳ್ಳಬೇಕು. ಇದೊಂದು ಆಧುನಿಕ ತಂತ್ರಜ್ಞಾನದ ಮೇಲೆ ಅವಲಂಬಿಸಿರುವ ದೊಡ್ಡ ಉದ್ಯಮವೆಂದರೆ ಅತಿಶಯೋಕ್ತಿಯಲ್ಲ.

ಕೊನೆಯದಾಗಿ, ಸಾಂಸ್ಥಿಕವಾದ ವಿದ್ಯೆಯನ್ನು ಹೆಚ್ಚು ಜನರು ಖಾಸಗಿಯಾಗಿ, ವೈಯಕ್ತಿಕವಾಗಿ ಕಲಿಯುವ ಅನುಕೂಲತೆ ಇದರಲ್ಲಿ ಸಾಧ್ಯವಾಗಿದೆ. ಹಿಂದೆ ಶಾಲೆ, ಕಾಲೇಜುಗಳಲ್ಲಿ ಔಪಚಾರಿಕವಾಗಿ ಸಿಗುತ್ತಿದ್ದ ವಿದ್ಯೆ ದೂರ ಶಿಕ್ಷಣದ ಮೂಲಕ ಜವರ ಮನೆಯ ಬಾಗಿಲಿಗೆ ಬಂದಿದೆ. ನಿಮ್ಮ ಅನುಕೂಲ ನೋಡಿಕೊಂಡು, ವಿರಾಮದ ವೇಳೆ ನೋಡಿಕೊಂಡು, ನಿಮ್ಮ ಆಸಕ್ತಿಗೆ ಅನುಗುಣವಾಗಿ ಮನೆಯಲ್ಲಿಯೇ ಕುಳಿತು ಆರ್ಜಿಸಿಕೊಳ್ಳಬಹುದು.

ಒಟ್ಟಿನಲ್ಲಿ, ರೇಗನ್ ಹೇಳಿದ ಏಳು ಲಕ್ಷಣಗಳನ್ನು ಹೀಗೆ ಸಂಕ್ಷೇಪಿಸಿ ಹೇಳಬಹುದು.

೧. ದೂರಶಿಕ್ಷಣದಲ್ಲಿ ಗುರು-ಶಿಷ್ಯರ ಮುಖಾ ಮುಖಿ ಸಂಪರ್ಕವಿರುವುದಿಲ್ಲ.

೨. ಶಿಕ್ಷಣದ ಸಂಪೂರ್ಣ ಜವಾಬ್ದಾರಿಯನ್ನು ಹೊರುವ ಒಂದು ಪ್ರತ್ಯೇಕ ವ್ಯವಸ್ಥೆಯಿದ್ದು ಅದು ವಿದ್ಯಾರ್ಥಿಗಳಿಗೆ ಏನನ್ನು ಕಲಿಸಬೇಕು, ಹೇಗೆ ಕಲಿಸಬೇಕೆಂದು ನಿರ್ಧರಿಸುತ್ತದೆಯಲ್ಲದೆ ಅವರಿಗೆ ಅವಶ್ಯವಿರುವ ಬೆಂಬಲ ಸೇವೆಗಳನ್ನು ಒದಗಿಸುತ್ತದೆ.

೩. ದೂರ ಶಿಕ್ಷಣವು ಬಹು ಮಾಧ್ಯಮಗಳ ಮೂಲಕ ನಡೆಯುವ ಕಲಿಕೆ.

೪. ಇಲ್ಲಿ ಸಾಮಾನ್ಯ ಅರ್ಥದಲ್ಲಿ ಶಿಕ್ಷಣ ಮತ್ತು ಶಿಕ್ಷಣಾರ್ಥಿಗಳ ನಡುವಿನ ಸಂವಾದವಿಲ್ಲದಿದ್ದರೂ ಮುದ್ರಿತ ಸಾಮಗ್ರಿ ಮತ್ತಿತರ ಮಾಧ್ಯಮಗಳ ಮೂಲಕ ಒಂದು ವಿಧದ ಸಂವಾದ ಸಾಧ್ಯವಾಗುತ್ತದೆ.

೫. ಹೆಚ್ಚಿನ ಕಲಿಕೆ ವೈಯಕ್ತಿಕ ಮತ್ತು ಖಾಸಗಿಯಾಗಿದ್ದರೂ ಶಿಕ್ಷಾರ್ಥಿಗಳ ನಡುವೆ ಒಂದಿಷ್ಟು ಪರಸ್ಪರ ಸಂಪರ್ಕ ಸಾಧ್ಯವಿದೆ.

೬. ದೂರಶಿಕ್ಷಣವು ಔದ್ಯಮಿಕ ಸಮಾಜದ ಸೃಷ್ಟಿಯಾಗಿದ್ದು ತಾನೇ ಒಂದು ಉದ್ಯಮದಂತಿದೆ.

೭. ದೂರಶಿಕ್ಷಣದ ಮೂಲಕ ಸಾಂಸ್ಥಿಕ ಶಿಕ್ಷಣದ ಖಾಸಗೀಕರಣ ಸಾಧ್ಯವಾಗಿದೆ.

iii. ದೂರಶಿಕ್ಷಣದ ಅವಶ್ಯಕತೆ

ಶಾಲೆ ಕಾಲೇಜುಗಳಲ್ಲಿ ಗುರುವಿನ ಸಮ್ಮುಖದಲ್ಲಿ ಕಲಿಯುವ ಪದ್ಧತಿಯನ್ನು ಬಿಟ್ಟುಕೊಟ್ಟು ಆಧುನಿಕ ಬಹು ಮಾಧ್ಯಮಗಳ ಮೂಲಕ ಕಲಿಯುವ ಬದಲಿ ಮಾರ್ಗಕ್ಕೆ ಜನರು ಶರಣು ಹೋಗುವುದು ಏಕೆ ಎಂಬ ಪ್ರಶ್ನೆ ಏಳುತ್ತದೆ. 'ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ' ಎಂದು ನಂಬಿದ ಕಾಲವೊಂದಿತ್ತು. ಗುರುಕುಲದಲ್ಲಿದ್ದು ಸದಾಕಾಲ ಗುರುಸೇವೆಗೈದು ಶಿಕ್ಷಣ ಪಡೆಯುತ್ತಿದ್ದ, ಗುರುವಿನ ಪಾದಸ್ಪರ್ಷದಿಂದಲೇ ಎಲ್ಲ ವಿದ್ಯೆಗಳು ಲಭ್ಯವಾಗುವುವು ಎಂದು ನಂಬುತ್ತಿದ್ದ ಕಾಲವೊಂದಿತ್ತು. ಗುರುವಿನ ಸಮ್ಮುಖದಲ್ಲಿದ್ದು ಅವನ ನಡೆನುಡಿಯನ್ನು ಅಂತರ್ಗತ ಮಾಡಿಕೊಂಡರೆ ಮಾತ್ರ ವ್ಯಕ್ತಿತ್ವದ ಪೂರ್ಣ ವಿಕಸನ ಸಾಧ್ಯ ಎಂಬ ಶಿಕ್ಷಣಶಾಸ್ತ್ರಜ್ಞರಿದ್ದಾರೆ. ಹೀಗಿದ್ದರೂ ದೂರಶಿಕ್ಷಣ ವಿಧಾನಗಳನ್ನು ಬಳಸಿ ವಿದ್ಯೆ ಪಡೆಯುವ ವಿಧಾನ ಈಗ ಅನೇಕ ದೇಶಗಳಲ್ಲಿ ಪ್ರಚಾರ ಪಡೆಯುತ್ತಿದೆ. ಅಭಿವೃದ್ಧಿ ಹೊಂದಿದ ದೇಶಗಳೂ ಅಭಿವೃದ್ಧಿಪರ ದೇಶಗಳೂ ದೂರಶಿಕ್ಷಣ ವಿಧಾನಗಳನ್ನು ಬಳಸಲು ಹವಣಿಸುತ್ತಿವೆ. ಈ ಹೊಸ ವಿಧಾನಗಳಿಂದ ಲಾಭವಿಲ್ಲದೇ ಹೋಗಿದ್ದರೆ ಈ ದೇಶಗಳು ಸಂಪ್ರದಾಯದಿಂದ ಬಂದ ಔಪಚಾರಿಕ ಶಿಕ್ಷಣ ಪದ್ಧತಿಯನ್ನೇ ನಂಬಿಕೊಂಡಿರುತ್ತಿದ್ದವು. ಹಾಗಾದರೆ ಆ ಲಾಭಗಳು ಯಾವುವು? ದೂರಶಿಕ್ಷಣ ಪದ್ಧತಿಯನ್ನು ಸ್ವಾಗತಿಸಲು ಕಾರಣವಾದ ಪರಿಸ್ಥಿತಿಗಳು ಯಾವುವು?

ಮೊದಲನೆಯದಾಗಿ, ಒಂದು ದೇಶ ಅಭಿವೃದ್ಧಿ ಹೊಂದಿರಲಿ, ಬಿಡಲಿ, ಅದು ತನ್ನ ಎಲ್ಲ ಪ್ರಜೆಗಳಿಗೂ ಸಮಾನವಾಗಿ ಹಾಗೂ ಸಾರ್ವತ್ರಿಕವಾಗಿ ಶಿಕ್ಷಣಕೊಡಲು ಬಯಸುತ್ತದೆ. ಹೆಚ್ಚು ಹೆಚ್ಚು ಪ್ರಜೆಗಳು ವಿದ್ಯಾವಂತರಾಗಬೇಕೆಂಬುದು ಎಲ್ಲ ದೇಶಗಳ ಗುರಿ. ಆದರೆ ತಮ್ಮಲ್ಲಿರುವ ಶಾಲೆ-ಕಾಲೇಜುಗಳಲ್ಲಿ ಶಿಕ್ಷಣ ಕೊಡಲು ಅಸಾಧ್ಯವಾದಾಗ ಬದಲಿ ವ್ಯವಸ್ಥೆಯೊಂದನ್ನು ಅವು ರೂಪಿಸಿಕೊಳ್ಳಬೇಕಾಗುತ್ತದೆ. ದೂರಶಿಕ್ಷಣ ಅಂಥ ಬದಲಿ ವ್ಯವಸ್ಥೆ.

ಎರಡನೆಯದಾಗಿ, ಕೆಲವರು ಚಿಕ್ಕಂದಿನಲ್ಲಿ ಕಾರಣಾಂತರಗಳಿಂದ ಶಾಲೆಗೆ ಹೋಗುವುದಿಲ್ಲ ಅಥವಾ ಶಿಕ್ಷಣವನ್ನು ಅರ್ಧಕ್ಕೇ ನಿಲ್ಲಿಸಿಬಿಡುವರು. ಮುಂದೆ ಅವರ ಮನಸ್ಸು ಮತ್ತು ಪರಿಸ್ಥಿತಿಗಳು ಬದಲಾಗಿ ಮತ್ತೆ ಶಿಕ್ಷಣ ಪಡೆಯಲು ಮನಸ್ಸು ಮಾಡುವರು. ಇಂಥವರಿಗೆ ಅವಕಾಶ ಕೊಡುವುದು ಕೂಡ ಸರ್ಕಾರಗಳ ಕರ್ತವ್ಯ. ಔಪಚಾರಿಕ ಶಿಕ್ಷಣ ಪದ್ಧತಿಯಲ್ಲಿ ಇಂಥ ವಯಸ್ಕರಿಗೆ ಶಿಕ್ಷಣ ಕೊಡುವುದು ಕಷ್ಟದ ಕೆಲಸ, ದೂರಶಿಕ್ಷಣದಲ್ಲಿ ಈ ಕೆಲಸ ಸಾಧ್ಯ.

ಮೂರನೆಯದಾಗಿ, ಮಕ್ಕಳನ್ನು ಒಮ್ಮೆ ಶಾಲೆ ಕಾಲೇಜುಗಳಿಗೆ ಕಳುಹಿಸಿ, ಅಲ್ಲಿ ಕೆಲವು ವರ್ಷಗಳ ಕಾಲ ಓದಿಸಿ, ಪದವಿಗಳನ್ನು ಕೊಟ್ಟು ಶಾಲೆಯಿಂದ ಹೊರಗೆ ಅಟ್ಟಿದರೆ ಮುಗಿಯಲಿಲ್ಲ. ಶಾಲೆಯಿಂದ ಹೊರಗೆ ಬಂದ ಮೇಲೂ ಅವರು ತಾವಿರುವ ಉದ್ಯೋಗ ದಂಧೆಗಳಲ್ಲಿಯೇ ಇದ್ದು ತಮ್ಮ ವಿದ್ಯೆ-ಬುದ್ಧಿ, ಶಕ್ತಿ-ಸಾಮರ್ಥ್ಯಗಳನ್ನು ಹೆಚ್ಚಿಸಿಕೊಳ್ಳುವ ಅವಕಾಶವಿರಬೇಕು. ಇದು ದೂರಶಿಕ್ಷಣ ಪದ್ಧತಿಯಲ್ಲಿ ಮಾತ್ರ ಸಾಧ್ಯವಾಗುತ್ತದೆಂದರೆ ತಪ್ಪಿಲ್ಲ.

ನಾಲ್ಕನೆಯದಾಗಿ, ಈಗಿರುವ ಶಾಲೆಕಾಲೇಜುಗಳಲ್ಲಿ ಕಂಡು ಬರುವ ನೂಕುನುಗ್ಗಲು ಕಡಿಮೆಯಾಗಿ, ಅವುಗಳ ಗುಣಮಟ್ಟ ತಕ್ಕಮಟ್ಟಿಗಾದರೂ ಸುಧಾರಿಸುವುದು ಅತಿ ಅವಶ್ಯವಾಗಿದೆ. ಆದರೆ ಪ್ರಜಾಪ್ರಭುತ್ವದ ದಿನಗಳಲ್ಲಿ ಶಾಲೆಕಾಲೇಜುಗಳಲ್ಲಿ ಪ್ರವೇಶ ಸಂಖ್ಯೆಯನ್ನು ಏಕಪಕ್ಷೀಯವಾಗಿ ಕಡಿಮೆ ಮಾಡುವುದು ಆಗದ ಮಾತು. ದೂರಶಿಕ್ಷಣವನ್ನು ಜನಪ್ರಿಯಗೊಳಿಸುವ ಮೂಲಕ ಇದನ್ನು ತಕ್ಕಮಟ್ಟಿಗೆ ಸಾಧಿಸಬಹುದು.

ಐದನೆಯದಾಗಿ, ಈಗಿರುವ ವಿಶ್ವವಿದ್ಯಾಲಯಗಳು ತೀವ್ರಗತಿಯಲ್ಲಿ ಬೆಳೆಯುತ್ತಿರುವ ತಂತ್ರಜ್ಞಾನವನ್ನು ಪ್ರಸಾರಗೊಳಿಸಲು ಹಾಗೂ ತಂತ್ರಜ್ಞರನ್ನು ಮತ್ತು ಕುಶಲ ಕರ್ಮಿಗಳನ್ನು ತರಬೇತುಗೊಳಿಸಲು ಅಸಮರ್ಥವಾಗಿವೆ. ಅಭಿವೃದ್ಧಿಪರ ದೇಶಗಳಲ್ಲಂತೂ ಪರಿಣತ ಕೆಲಸಗಾರರ ಅವಶ್ಯಕತೆ ತುಂಬಾ ಇದೆ. ತರಬೇತುಗೊಳಿಸುವುದು ಕಷ್ಟದ ಕೆಲಸವೂ ಆಗಿದೆ. ಈ ಕೆಲಸವನ್ನು ಒಂದಿಷ್ಟು ಮಟ್ಟಿಗೆ ದೂರಶಿಕ್ಷಣದಿಂದ ಸಾಧಿಸಲು ಸಾಧ್ಯ. ಶಾಲಾಮಟ್ಟದ ಶಿಕ್ಷಣ ಮುಗಿಸಿದ ಯುವಕರನ್ನೂ ವಯಸ್ಕರನ್ನೂ ವಿವಿಧ ಕಸಬು ಮತ್ತು ಕೌಶಲ್ಯಗಳಿಗಾಗಿ ತಯಾರು ಮಾಡಬಹುದು. ಔಪಚಾರಿಕ ವ್ಯವಸ್ಥೆಯಲ್ಲಿ ಇದು ಬಹಳ ವಿಳಂಬದ ಕೆಲಸ, ದುಬಾರಿಯ ಕೆಲಸ. ಆದರೆ ದೂರಶಿಕ್ಷಣ ವಿಧಾನದಿಂದ ಕಡಿಮೆ ಖರ್ಚಿನಲ್ಲಿ ಹೆಚ್ಚು ಜನರನ್ನು ತರಬೇತುಗೊಳಿಸಬಹುದು.

ಆರನೆಯದಾಗಿ, ಬದಲಾಗುತ್ತಿರುವ ಸಮಾಜಗಳಲ್ಲಿ ಹೊಸ ಹೊಸ ಉದ್ಯೋಗ-ದಂಧೆಗಳಿಗೆ, ಹೊಸ ಹೊಸ ಕೌಶಲ್ಯಗಳಿಗೆ, ಹೊಸ ಹೊಸ ಸೇವೆಗಳಿಗೆ ಬೇಡಿಕೆಯಿರುತ್ತದೆ. ಪರಂಪರಾಗತ ಔಪಚಾರಿಕ ಶಿಕ್ಷಣ ಸಂಸ್ಥೆಗಳು ಇವುಗಳನ್ನು ನಿಭಾಯಿಸಲಾರವು. ಹೊಸತನ್ನು ಸುಲಭವಾಗಿ ಅಳವಡಿಸಿಕೊಳ್ಳಬಲ್ಲ, ಕಡಿಮೆ ನಿಯಮಾವಳಿಗಳನ್ನು ಹೊಂದಿರುವ, ಮುಕ್ತ ಪ್ರವೇಶದ ಅವಕಾಶವಿರುವ ಪದ್ಧತಿಗಳು ಬೇಕಾಗುವುವು. ದೂರಶಿಕ್ಷಣದಲ್ಲಿ ಈ ಗುಣಗಳಿವೆ.

ಏಳನೆಯದಾಗಿ, ಪರಂಪರಾಗತ ಶಿಕ್ಷಣ ಪದ್ಧತಿ ಮತ್ತು ವ್ಯವಸ್ಥೆಗಳು ಕ್ರಮೇಣ ತಮ್ಮ ಸತ್ವವನ್ನು ಕಳೆದುಕೊಂಡು ಅಪಮೌಲ್ಯ ಹೊಂದುತ್ತವೆ. ಅವುಗಳಲ್ಲಿನ ದೋಷಗಳನ್ನು ಹೋಗಲಾಡಿಸುವುದು ಅವಶ್ಯವಾಗುತ್ತದೆ. ದೂರಶಿಕ್ಷಣದ ಪ್ರಭಾವದಿಂದ ಇದು ಸಾಧ್ಯವೆನ್ನುತ್ತಾರೆ.

ಕೊನೆಯಾಗಿ, ಶಿಕ್ಷಣವು ಸಮಾಜದ ಬದಲಾಗುತ್ತಿರುವ ಅವಶ್ಯಕತೆಗಳಿಗೆ ಅನುಗುಣವಾಗಿರಬೇಕು, ಪ್ರಸ್ತುತವಾಗಿರಬೇಕು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಔಪಚಾರಿಕ ಶಿಕ್ಷಣ ಪದ್ಧತಿ ಮತ್ತು ಸ್ಥಾಪಿತ ವಿಶ್ವವಿದ್ಯಾಲಯಗಳು ಸುಲಭವಾಗಿ

ಬದಲಾಗಲಾರವು. ದೂರಶಿಕ್ಷಣ ಸಂಸ್ಥೆಗಳು ಮಾತ್ರ ಬಹು ಶೀಘ್ರಗತಿಯಲ್ಲಿ, ಕಡಿಮೆ ಖರ್ಚಿನಲ್ಲಿ, ಸಮಾಜದ ಅವಶ್ಯಕತೆಗಳಿಗೆ ಅನುಗುಣವಾದ ಕೋರ್ಸುಗಳನ್ನು ರೂಪಿಸಿ, ತರಬೇತಿಯ ಹೊಣೆ ಮತ್ತು ಸುಸಂಗತವಾದ ಶಿಕ್ಷಣ ಒದಗಿಸಬಲ್ಲವು ಎಂಬ ಭಾವನೆ ಬಂದಿದೆ.

ಇಂಥ ಲಾಭಗಳನ್ನು ಗ್ರಹಿಸಿಯೇ ಸರ್ಕಾರಗಳು ದೂರಶಿಕ್ಷಣಕ್ಕೆ ಮಹತ್ವದ ಸ್ಥಾನ ಕೊಡುತ್ತಿವೆ.

iv. ಭಾರತದ ಸಂದರ್ಭ: ನಮಗೇಕೆ ಇಂಥ ಶಿಕ್ಷಣ ಬೇಕು?

ಭಾರತದ ಸಂದರ್ಭದಲ್ಲಿ ದೂರಶಿಕ್ಷಣದ ಅವಶ್ಯಕತೆ ಇದೆಯೇ ಎಂಬ ಪ್ರಶ್ನೆಯನ್ನು ಈಗ ಎತ್ತಿಕೊಳ್ಳಬಹುದು. ನಮ್ಮಲ್ಲಿ ಶಿಕ್ಷಣ ಪಡೆಯುವ ಅವಕಾಶ ಎಲ್ಲರಿಗೂ ಇದೆಯೆ? ಕಳೆದ ೪೦ ವರ್ಷಗಳಲ್ಲಿ ಪ್ರಾಥಮಿಕ ಹಂತದಿಂದ ಹಿಡಿದು ವಿಶ್ವವಿದ್ಯಾಲಯದ ಹಂತದವರೆಗೆ ಶಿಕ್ಷಣ ಪ್ರಸಾರ ಬಿರುಸಾಗಿ ನಡೆದಿದೆ ಎಂಬ ಬಗ್ಗೆ ಎರಡು ಮಾತಿಲ್ಲ. ೧೯೫೧ರಲ್ಲಿ ಭಾರತದಲ್ಲಿ ೩೩ ವಿಶ್ವವಿದ್ಯಾಲಯಗಳೂ, ೬೯೫ ಕಾಲೇಜುಗಳೂ ಇದ್ದವು. ೧೯೮೫ರ ಹೊತ್ತಿಗೆ ಈ ಸಂಖ್ಯೆ ಕ್ರಮವಾಗಿ ೧೬೦ ಮತ್ತು ೫೪೮೨ಕ್ಕೆ ಏರಿತು. ಇದೇ ಹೊತ್ತಿಗೆ ಕಾಲೇಜು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆ ೧೭೪,೦೦೦ ರಿಂದ ೩೫೩೮,೦೦೦ ಗೆ ಏರಿತು. ಶಿಕ್ಷಣಕ್ಕಾಗಿ ಖರ್ಚುಮಾಡುವ ಹಣ ೧೧೪ ಕೋಟಿ ರೂಪಾಯಿಗಳಿಂದ ೬೦೦೦ ಕೋಟಿ ರೂಪಾಯಿಗಳಿಗೆ ಏರಿತು. ಹೀಗಿದ್ದರೂ ಕಾಲೇಜುಗಳಿಗೆ ಹೋಗುವ ೧೭ರಿಂದ ೨೩ ವರ್ಷದೊಳಗಿನ ವಿದ್ಯಾರ್ಥಿಗಳ ಪ್ರಮಾಣ ಶೇಕಡಾ ೫ ರಷ್ಟು ಕೂಡಾ ಇರಲಿಲ್ಲ. ಫಿಲಿಫೈನ್ಸದಲ್ಲಿ ಈ ಪ್ರಮಾಣ ೨೫%, ಜಪಾನಿನಲ್ಲಿ ೩೦%, ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ೫೫% ಇದೆಯಂತೆ. ಅಂದರೆ ನಮ್ಮಲ್ಲಿ ಶಾಲಾಪರೀಕ್ಷೆ ಪಾಸಾಗಿ ಕಾಲೇಜಿಗೆ ಹೋಗುವವರು ಕೇವಲ ೫% ವಿದ್ಯಾರ್ಥಿಗಳು ಮಾತ್ರ; ಹೋಗದೇ ಇರುವವರು ೯೫%. ಈ ೯೫% ಜನರಲ್ಲಿ ಕೆಲವರಾದರೂ ತಮ್ಮ ಮುಂದಿನ ಜೀವನದಲ್ಲಿ ವಿದ್ಯೆ ಪಡೆಯುವ ಎರಡನೆ ಅವಕಾಶಕ್ಕಾಗಿ ಹುಡುಕುತ್ತಾರೆ. ಅಂಥವರಿಗೆ ಅವಕಾಶಕೊಡುವ ಭಾಗ್ಯ ದೂರ ಶಿಕ್ಷಣದ್ದು.

ಜನರ ಶಿಕ್ಷಣಕ್ಕೆ ಅವಕಾಶವಿಲ್ಲ ಎಂದು ಹೇಳಿದೆವು. ಇಷ್ಟೇ ಅಲ್ಲ, ಸಿಗುವ ಈ ಅವಕಾಶಗಳು ಗಂಡಿಗೆ ಹೆಚ್ಚು, ಹೆಣ್ಣಿಗೆ ಕಡಿಮೆ; ನಗರವಾಸಿಗಳಿಗೆ ಹೆಚ್ಚು, ಗ್ರಾಮೀಣರಿಗೆ ಕಡಿಮೆ; ಮೇಲ್ಜಾತಿಗಳಿಗೆ ಹೆಚ್ಚು, ಪರಿಶಿಷ್ಟ ಜಾತಿಜನಾಂಗಗಳಿಗೆ ಕಡಿಮೆ; ಬಯಲಿನ ಚಂಡೀಗಡಕ್ಕೆ ಹೆಚ್ಚು, ಬೆಟ್ಟ ಪ್ರದೇಶದ ಅರುಣಾಚಲ ಪ್ರದೇಶಕ್ಕೆ ಕಡಿಮೆ - ಹೀಗೆ ತಾರತಮ್ಯಗಳಿಗೆ ಲೆಕ್ಕವಿಲ್ಲ. ೧೯೮೩ರಲ್ಲಿ ಮಾಧ್ಯಮಿಕ ಹಂತದ ನಂತರ ಶಿಕ್ಷಣ ಪಡೆಯುತ್ತಿದ್ದವರ ಪೈಕಿ ಪುರುಷರ ಪ್ರಮಾಣ ೭೨% ಮತ್ತು ಸ್ತ್ರೀಯರದು ೨೮%. ವಿದ್ಯಾರ್ಥಿನಿಯರಲ್ಲಿ ವಿಜ್ಞಾನ ವಿಷಯಗಳನ್ನು ಆಯ್ದುಕೊಂಡವರು ಕೇವಲ ೩೯% ಮಾತ್ರ.

ಈಗಿರುವ ಶಾಲೆ ಕಾಲೇಜುಗಳು ಈ ಅಸಮತೋಲನವನ್ನು ನಿವಾರಿಸಲಾರವು ಎಂಬುದಂತೂ ಸತ್ಯ. ಈ ವಿಷಯದಲ್ಲಿ ಕೂಡ ದೂರಶಿಕ್ಷಣ ನಮ್ಮ ಪಾಲಿಗೆ ವರದಾನವಾಗಿ ಪರಿಣಮಿಸಿತು.

ಕಳೆದ ೪೦ ವರ್ಷಗಳಲ್ಲಿ ಶಾಲೆ ಕಾಲೇಜುಗಳ ಸಂಖ್ಯೆ ಬೆಳೆಯಿತೇನೋ ನಿಜ. ಆದರೆ ಇದರಿಂದ ಎಲ್ಲರಿಗೂ ಶಿಕ್ಷಣ ಪಡೆಯುವ ಅವಕಾಶ ದೊರೆಯುವುದೆಂಬ ಆಸೆ ಈಡೇರಲಿಲ್ಲ. ಸಮಾನ ಅವಕಾಶದ ಗುರಿಯೂ ಸಾಧಿಸಲಿಲ್ಲ. ನಾವು ನಡೆಸಿಕೊಂಡು ಬಂದ ಶಿಕ್ಷಣ ಪದ್ಧತಿಯಲ್ಲಿ ಪಾಠ ಕಲಿಸಲು ಪೂರ್ಣಾವಧಿ ಶಿಕ್ಷಕರು ಬೇಕು. ಪೂರ್ಣಾವಧಿ ಕಲಿಯುವ ವಿದ್ಯಾರ್ಥಿಗಳು ಬೇಕು. ಇವರೆಲ್ಲರನ್ನು ಒತ್ತಟ್ಟಿಗೆ ತಂದು ಕೂಡಿಸಲು ಕಟ್ಟಡಗಳೂ ಕೊಠಡಿಗಳೂ ಬೇಕು. ಮುಖಾಮುಖಿ ಭೇಟಿಮಾಡುವ ಸಮಯಾವಕಾಶ ಬೇಕು. ಇಂಥ ಔಪಚಾರಿಕ ಶಿಕ್ಷಣ ಬಲು ದುಬಾರಿಯ ವಸ್ತು. ಎಲ್ಲರಿಗೂ ಶಿಕ್ಷಣ ಒದಗಿಸುವುದು ಅಸಾಧ್ಯ ಕೋಟಿಯ ಮಾತು. ಒಂದು ವೇಳೆ ಸರ್ಕಾರ ಎಲ್ಲಿಂದಲೋ ಹಣತಂದು, ಶಾಲೆ ಕಾಲೇಜುಗಳನ್ನು ತೆರೆದು ಅವಕಾಶಗಳನ್ನು ಕಲ್ಪಿಸಿದರೂ ಮನೆಯಲ್ಲಿ ದುಡಿಯಬೇಕಾದ ಗೃಹಿಣಿ, ಉದ್ಯೋಗ ದಂಧೆಗಳಲ್ಲಿ ಕೆಲಸಗಾರರು, ನೌಕರಿ ಚಾಕರಿಯಲ್ಲಿರುವ ಜನರು, ಮನೆಯಲ್ಲಿದ್ದುಕೊಂಡೇ ಹೆಚ್ಚಿನ ವಿದ್ಯೆ ಪಡೆಯಬೇಕೆಂಬ ವಯಸ್ಕರು, ಮೊದಲು ನೌಕರಿ, ದಂಧೆಮಾಡಿ ನಾಲ್ಕು ಕಾಸು ಗಳಿಸಿ ಅನಂತರ ವಿದ್ಯೆಯ ಬಗ್ಗೆ ತಲೆಕೆಡಿಸಿಕೊಂಡರಾಯಿತು ಎಂಬ ಯುವಕರು - ಇವರೆಲ್ಲ ಸರ್ಕಾರ ಕಲ್ಪಿಸುವ ಅವಕಾಶಗಳನ್ನು ಬಳಸಿಕೊಳ್ಳಲಾರರು. ಅಂದರೆ ವರ್ಷವೆರಡುವರ್ಷ ಶಾಲೆಕಾಲೇಜು ಸೇರಿ ವಿದ್ಯಾಭ್ಯಾಸ ಮುಂದುವರಿಸಲಾರರು. ಇವರಿಗೆಲ್ಲ ಮುಕ್ತವಾಗಿರುವ ಒಂದೇ ಒಂದು ಮಾರ್ಗವೆಂದರೆ ದೂರಶಿಕ್ಷಣ.

ನಮ್ಮ ಪ್ರಸಕ್ತ ಶಿಕ್ಷಣ ಪದ್ಧತಿಯ ಬಗ್ಗೆ ವ್ಯಾಪಕವಾಗಿ ಕೇಳಿಬರುವ ಒಂದು ಟೀಕೆಯೆಂದರೆ, ಅದರ ಗುಣಮಟ್ಟ ಕೆಳಗೆ ಇಳಿದಿದೆಯೆಂಬುದು. ಗ್ರಾಮೀಣ ಭಾಗದಲ್ಲಂತೂ ಅದು ತೀರ ಕಳಪೆಯೆಂದು ಅಭಿಪ್ರಾಯ ಪಡಲಾಗುತ್ತದೆ. ಕೆಲವು ವಿಶ್ವವಿದ್ಯಾಲಯಗಳೂ, ಐ.ಐ.ಟಿ. ಯಂಥ ಪ್ರತಿಷ್ಠೆಯ ಸಂಸ್ಥೆಗಳೂ, ಕೆಲವು ಉಚ್ಚಮಟ್ಟದ ತಂತ್ರಜ್ಞಾನ ಸಂಸ್ಥೆಗಳೂ, ಮ್ಯಾನೇಜಮೆಂಟ ತರಬೇತಿ ಸಂಸ್ಥೆಗಳೂ ಅಂತರ ರಾಷ್ಟ್ರೀಯ ಮಟ್ಟದ ಶಿಕ್ಷಣ ಸಂಸ್ಥೆಗಳೆಂದು ಹೆಸರು ಮಾಡಿರಬಹುದು. ಕೆಲವು ವಿಶ್ವವಿದ್ಯಾಲಯಗಳ ಒಂದೆರಡು ವಿಭಾಗಗಳು ತಮ್ಮ ಗುಣಮಟ್ಟ ಕಾಯ್ದುಕೊಂಡು ಬಂದಿರಲೂಬಹುದು. ಆದರೆ ಇಂಥ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಎಷ್ಟು ಜನರಿಗೆ ಪ್ರವೇಶ ಸಿಗಬಹುದು?ಇವೆಲ್ಲ ಗಣ್ಯರಿಗೆ ಮೀಸಲಾದವು. ಉಳಿದ ಸಂಸ್ಥೆಗಳು ತಮ್ಮ ಸಾಮರ್ಥ್ಯಕ್ಕೆ ಮೀರಿ ಬೆಳೆದಿವೆ. ಪ್ರವೇಶ ಪಡೆಯುವವರ ಸಂಖ್ಯೆ ಬೆಳೆಯುತ್ತ ಹೋಗಿರುವುದರಿಂದ ಗುಣಮಟ್ಟ ಉಳಿಸಿಕೊಳ್ಳುವುದು ಅಸಾಧ್ಯವಾಗಿದೆ. ಅಷ್ಟೇ ಅಲ್ಲ, ಶಿಕ್ಷಣಕ್ಕಾಗಿ ರಾಷ್ಟ್ರಮಟ್ಟದಲ್ಲಿ ಖರ್ಚು ಮಾಡುವ ಒಟ್ಟು ಹಣ ಈಗ ಅನೇಕ ವರ್ಷಗಳಿಂದ ಹೆಚ್ಚುತ್ತ ಹೋದರೂ, ಒಬ್ಬ ವಿದ್ಯಾರ್ಥಿಯ ಮೇಲೆ ಖರ್ಚು ಮಾಡುವ ತಲಾ ಖರ್ಚು ಕಡಿಮೆಯಾಗುತ್ತಲೇ ಹೋಗಿದೆ. ಉದಾಹರಣೆಗೆ ೧೯೫೦-೫೧ ರಲ್ಲಿ ನಮ್ಮಲ್ಲಿ ತಲಾ ವೆಚ್ಚ ರೂ.೪೦೧೧ ಇದ್ದರೆ, ೧೯೭೫-೭೬ರಲ್ಲಿ ಈ ಖರ್ಚು ತಲಾ ರೂ.೩೬೬೪ ಇತ್ತು. ಅಂದರೆ ಶಿಕ್ಷಣಕ್ಕೆ ಹಣವಿಲ್ಲ. ದುಬಾರಿ ವೆಚ್ಚದಲ್ಲಿ ಶಿಕ್ಷಣದ ಗುಣಮಟ್ಟ ಉಳಿಸಿಕೊಳ್ಳುವುದು ಸರ್ಕಾರಗಳಿಗೆ ಸಾಧ್ಯವಾಗುತ್ತಿಲ್ಲ. ಪ್ರಜಾಪ್ರಭುತ್ವದಲ್ಲಿ ನಾಗರಿಕರಿಗೆ ಶಿಕ್ಷಣದ

ಸೌಕರ್ಯಗಳನ್ನು ನಿರಾಕರಿಸುವಂತೆಯೂ ಇಲ್ಲ. ಹೀಗಾಗಿ ಹೆಚ್ಚು ಜನರಿಗೆ ಶಿಕ್ಷಣವನ್ನು ತಲುಪಿಸುವ, ಕಡಿಮೆ ಗುಣಮಟ್ಟವನ್ನು ಒಪ್ಪದ, ಆದರೆ ದುಬಾರಿಯಲ್ಲದ ಬದಲಿ ವ್ಯವಸ್ಥೆಗಳನ್ನು ರೂಪಿಸಬೇಕಾಗುವುದು. ಇದು ದೂರಶಿಕ್ಷಣದಿಂದ ಮಾತ್ರವೇ ಸಾಧ್ಯವೆಂದು ಅಭಿಪ್ರಾಯ ಪಡಲಾಗುತ್ತಿದೆ.

ಮತ್ತೊಂದು ಟೀಕೆಯ ಬಗ್ಗೆ ಪ್ರಸ್ತಾಪ ಮಾಡಬೇಕು. ಈಗಿನ ಶಿಕ್ಷಣ ಪದ್ಧತಿ ಗಣ್ಯರಿಗೆಂದೇ ರೂಪಿತವಾಗಿದೆ ಎಂಬ ಟೀಕೆಯಿದೆಯಲ್ಲದೆ, ಅದು ನಮ್ಮ ಪ್ರಸಕ್ತ ಅಗತ್ಯಗಳಿಗೆ ಅನುಗುಣವಾಗಿಲ್ಲ, ಅದು ಅಪ್ರಸ್ತುತವಾಗಿದೆ ಎಂಬ ಟೀಕೆಯೂ ಇದೆ. ಸದ್ಯ ನಮಗೆ ವಿವಿಧ ವಿಷಯಗಳ ಬಗೆಗಿನ ತಂತ್ರಜ್ಞಾನ ಬೇಕಾಗಿರುವಾಗ ಹೆಚ್ಚು ಬಿ.ಎ. ಗಳನ್ನು ಸೃಷ್ಟಿಸುತ್ತಿದ್ದೇವೆ. ಹೆಚ್ಚು ಮಧ್ಯಮ ಹಂತದ ತಾಂತ್ರಿಕರು ಬೇಕಾಗಿರುವಾಗ, ದೊಡ್ಡ ಸಂಖ್ಯೆಯಲ್ಲಿ ಇಂಜಿನೀಯರಿಂಗ್ ಪದವೀಧರರನ್ನು ತಯಾರಿಸಿದ್ದೇವೆ; ವಿವಿಧ ಕಸಬು ವೃತ್ತಿಗಳಿಗಾಗಿ ತರಬೇತಿ ಅವಶ್ಯವಿರುವಾಗ, ದೊಡ್ಡ ಸಂಖ್ಯೆಯಲ್ಲಿ ಶಾಲೆ, ಕಾಲೇಜುಗಳನ್ನು ತೆರೆದು ಸಾಮಾನ್ಯ ಶಿಕ್ಷಣಕ್ಕೆ ಹೆಚ್ಚು ಅವಕಾಶಕೊಡುತ್ತಿದ್ದೇವೆ- ಹೀಗೆ ಹಲವು ಓರೆಕೋರೆಗಳಿವೆ. ಇಂಥ ಪರಿಸ್ಥಿತಿಯಿಂದ ಪಾರಾಗಬೇಕಾಗರೆ ದೂರಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವುದೊಂದೇ ಮಾರ್ಗ. ಏನಿಲ್ಲೆಂದರೂ ಔಪಚಾರಿಕ ಶಿಕ್ಷಣ ಸಂಸ್ಥೆಗಳ ಪ್ರವೇಶದ ನೂಕುನುಗ್ಗಲನ್ನು ಕಡಿಮೆ ಮಾಡುವುದಾದರೂ ಆದೀತು.

ಒಟ್ಟಿನಲ್ಲಿ ಹೆಚ್ಚು ಹೆಚ್ಚು ಜನರಿಗೆ ಶಿಕ್ಷಣಾವಕಾಶಗಳನ್ನು ಕಲ್ಪಿಸುವುದಕ್ಕಾಗಿ, ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದಕ್ಕಾಗಿ ಮತ್ತು ಇಂದಿನ ಪರಿಸ್ಥಿತಿಗೆ ಬೇಕಾದ ಪ್ರಸ್ತುತ ಶಿಕ್ಷಣ ಒದಗಿಸುವುದಕ್ಕಾಗಿ ಆದಷ್ಟು ತೀವ್ರವಾಗಿ ಮತ್ತು ವ್ಯಾಪಕವಾಗಿ ನಾವು ದೂರಶಿಕ್ಷಣ ವಿಧಾನವನ್ನು ಬಳಸಿಕೊಳ್ಳುವುದು ಸೂಕ್ತ. ಆಧುನಿಕ ತಂತ್ರಜ್ಞಾನದಿಂದ ಲಭ್ಯವಾಗಿರುವ ಬಹುಮಾಧ್ಯಮಗಳ ಸಹಾಯದಿಂದ ಶಿಕ್ಷಣದ ಹೆಚ್ಚು ಅವಕಾಶಗಳನ್ನು ಕಲ್ಪಿಸುವುದೂ, ಗುಣಮಟ್ಟವನ್ನು ಸುಧಾರಿಸುವುದೂ, ಪ್ರಸ್ತುತತೆಯನ್ನು ಸಾಧಿಸುವುದೂ ಸಾಧ್ಯವಾಗಬಹುದು.

V. ಅಂಚೆ ತೆರಪಿನ ಶಿಕ್ಷಣ

ಇತ್ತೀಚೆಗಿನ ವರ್ಷಗಳಲ್ಲಿ ಭಾರತದಲ್ಲಿ ದೂರಶಿಕ್ಷಣವು ಔಪಚಾರಿಕ ಶಿಕ್ಷಣಕ್ಕೆ ಬದಲಿ ವ್ಯವಸ್ಥೆಯಾಗಿ ರೂಪುಗೊಳ್ಳುತ್ತಿದೆ. ಸಾರ್ವತ್ರಿಕ ಪ್ರಚಾರ, ಪ್ರತಿಷ್ಠೆ, ವಿಪುಲ ಸಂಪನ್ಮೂಲ ಇವೆಲ್ಲ ಇನ್ನೂ ಸಿಕ್ಕಿಲ್ಲ ಎಂಬುದು ಸತ್ಯವಾದರೂ ಶೈಕ್ಷಣಿಕ ವಲಯಗಳಲ್ಲಿ ದೂರಶಿಕ್ಷಣವು ಔಪಚಾರಿಕ ಶಿಕ್ಷಣಕ್ಕಿಂತ ಭಿನ್ನವಾದುದೆಂದೂ ಕೆಲವೊಂದು ಮಟ್ಟಿಗೆ ಹೆಚ್ಚು ವಿಶ್ವಾಸಾರ್ಹವಾದುದೆಂದೂ, ಬರಬರುತ್ತ ಹೆಚ್ಚಿನ ಮಹತ್ವ ಪಡೆಯುವದೆಂದೂ ನಂಬಲಾಗುತ್ತಿದೆ. ಕೇಂದ್ರ ಸರ್ಕಾರ, ರಾಜ್ಯಸರ್ಕಾರಗಳು, ವಿಶ್ವವಿದ್ಯಾಲಯ ಧನಸಹಾಯ ಆಯೋಗ ಇವೆಲ್ಲ ದೂರಶಿಕ್ಷಣವನ್ನು ಬೆಂಬಲಿಸುತ್ತಿವೆ. ಆದರೆ ದುರದೃಷ್ಟವಶಾತ್ ಜನರಲ್ಲಿ ದೂರಶಿಕ್ಷಣದ ಬಗ್ಗೆ ಇನ್ನೂ ಸಂಕೋಚ, ಸಂಶಯಗಳು ಉಳಿದುಕೊಂಡಿವೆ.

ಇರಲಿ, ಭಾರತದಲ್ಲಿ ನಾವು ಕಾಣುವಂತೆ ಸ್ಥೂಲವಾಗಿ ಎರಡು ಪ್ರಕಾರದ ದೂರಶಿಕ್ಷಣ ವ್ಯವಸ್ಥೆಗಳು ಈಗ ಕೆಲಸಮಾಡುತ್ತಿವೆ. ಇವುಗಳಲ್ಲಿ ಮೊದಲನೆಯದು 'ಕರೆಸ್ಪೋಂಡನ್ಸ ಕೋರ್ಸ್' ಅಥವಾ ಅಂಚೆ ತೆರಪಿನ ಶಿಕ್ಷಣ ವ್ಯವಸ್ಥೆಗಳು. ಎರಡನೆಯದು 'ಓಪನ್ ಯುನಿವರ್ಸಿಟಿ' ಅಥವಾ ಮುಕ್ತ ವಿಶ್ವವಿದ್ಯಾಲಯಗಳು. ಮೊದಲು ಅಂಚೆ ತೆರಪಿನ ಶಿಕ್ಷಣದ ಬಗ್ಗೆ ಕಿರುಪರಿಚಯ ಮಾಡಿಕೊಳ್ಳೋಣ.

ಅಂಚೆ ತೆರಪಿನ ಶಿಕ್ಷಣ ಎಂದು ಈಗ ಸುಪರಿಚಿತವಾಗಿರುವ ವ್ಯವಸ್ಥೆಗಳು ಸಂಘಟಿತವಾಗಿರುವ ಬಹು ಮೊದಲೇ ನಮ್ಮಲ್ಲಿ ಅದನ್ನು ಹೋಲುವ ಕೆಲವು ಶಿಕ್ಷಣ ಪದ್ಧತಿಗಳಿದ್ದವು. ಉದಾಹರಣೆಗೆ, ಮನೆಯಲ್ಲೇ ಕುಳಿತು ಕಲಿಯಲು ಅನುಕೂಲವಿರುವಂಥ ಟೈಲರಿಗ್ ಡಿಪ್ಲೋಮಾ ಕೋರ್ಸುಗಳು ಸುಮಾರು ೭೦-೮೦ ವರ್ಷದಿಂದಲೂ ಇವೆ. ಆ ಕೋರ್ಸುಗಳಿಗಾಗಿ ಅಂಚೆ ಮೂಲಕ ಪಾಠಗಳನ್ನು ಕಳುಹಿಸುತ್ತಿದ್ದರು. ಒಂದು ಸಾಂಕೇತಿಕ ಪರೀಕ್ಷೆ ಮುಗಿದ ಬಳಿಕ ಪ್ರಮಾಣಪತ್ರ ಅಥವಾ ಪದವಿ ಕೊಡಲಾಗುತ್ತಿತ್ತು. ಸಾಕಷ್ಟು ಪ್ರತಿಷ್ಠೆಯನ್ನು ಪಡೆದಿರುವ ಎ. ಎಂ. ಐ. ಈ. ಎಂಬ ಪದವಿಗಾಗಿ ತಾಂತ್ರಿಕ ಸಂಸ್ಥೆಯೊಂದು ಅಭ್ಯರ್ಥಿಗಳಿಗೆ ಟಿಪ್ಪಣಿಗಳನ್ನು ಕಳುಹಿಸಿಕೊಟ್ಟು, ಪ್ರತಿವರ್ಷ ಪರೀಕ್ಷೆಗಳನ್ನು ನಡೆಸಿ, ಉತ್ತೀರ್ಣರಾದವರಿಗೆ ಪದವಿ ನೀಡುತ್ತಿದೆ. ಇದು ಈಗ ಸುಮಾರು ೬೦ ವರ್ಷಗಳಿಂದಲೂ ಚಾಲ್ತಿಯಲ್ಲಿದೆ. ಕೆಲವು ಖಾಸಗಿ ಸಂಘಟನೆಗಳು ಗೃಹಾಲಂಕರಣ, ಭಾಷಾಕಲಿಕೆ ಮುಂತಾದ ವಿಷಯಗಳಲ್ಲಿ ಡಿಪ್ಲೋಮಾ ಅಥವಾ ಸರ್ಟಿಫಿಕೇಟ ಕೋರ್ಸುಗಳನ್ನು ನಡೆಸುತ್ತಿವೆ. ಅನ್ಯದೇಶಗಳಲ್ಲಿರುವ ಇಂಥ ಕೆಲವು ಸಂಸ್ಥೆಗಳು ಭಾರತದಲ್ಲಿ ತಮ್ಮ ಶಾಖೆಗಳನ್ನು ತೆರೆದು ಅಂಚೆ ಮೂಲಕ ಶಿಕ್ಷಣ ಕೊಡುತ್ತಿವೆ. ಇವೆಲ್ಲ ಸೀಮಿತ ರೀತಿಯಲ್ಲಿ ದೂರಶಿಕ್ಷಣ ಒದಗಿಸುವ ಏರ್ಪಾಟುಗಳೆನ್ನಬಹುದು. ಅವು ಕೆಲವೇ ಕೆಲವು ವಿಷಯಗಳಿಗೆ ಹಾಗೂ ಕೌಶಲ್ಯಗಳಿಗೆ ಸೀಮಿತವಾಗಿದ್ದು, ಕೆಲವೇ ಕೆಲವು ಜನರನ್ನು ತಲುಪಬಲ್ಲವು. ಇವುಗಳಿಗೆ ಹೋಲಿಸಿ ನೋಡಿದರೆ ವಿಶ್ವವಿದ್ಯಾಲಯಗಳು ಕೊಡುವ ಅಂಚೆ ತೆರಪಿನ ಶಿಕ್ಷಣ ಹೆಚ್ಚು ಸಂಘಟಿತವಾದುದು ಹಾಗೂ ಹೆಚ್ಚು ಜನರನ್ನು ತಲುಪವಂಥದು.

ಅಂಚೆ ತೆರಪಿನ ಶಿಕ್ಷಣದಲ್ಲಿ ನಾವು 'ಬಾಹ್ಯ ಶಿಕ್ಷಣ', 'ಖಾಸಗಿ ಅಭ್ಯರ್ಥಿ' ಶಿಕ್ಷಣ ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಪದವಿ ಪಡೆಯುವ ವಿಧಾನವನ್ನು ಸೇರಿಸುವುದಿಲ್ಲ. ಕೆಲವೊಂದು ಶಿಕ್ಷಣ ಮಂಡಳಿಗಳು ಹಾಗೂ ವಿಶ್ವವಿದ್ಯಾಲಯಗಳು ಒಂದು ವಯೋಮಿತಿಯೊಳಗಿನ ಕೆಲವರಿಗೆ ಖಾಸಗಿ ವಿದ್ಯಾರ್ಥಿಗಳೆಂದು ಪರೀಕ್ಷೆಗೆ ಕುಳಿತುಕೊಳ್ಳಲು ಅನುಮತಿಸುತ್ತವೆ. ಉದಾಹರಣೆಗೆ ಹಿಂದಿನ ಮದ್ರಾಸ್ ರಾಜ್ಯದಲ್ಲಿದ್ದ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆ ಅಥವಾ ಕರ್ನಾಟಕದ ಪದವಿಪೂರ್ವ ಪರೀಕ್ಷೆ. ಖಾಸಗಿ ವಿದ್ಯಾರ್ಥಿಯಾಗಿ ಪರೀಕ್ಷೆಗೆ ಕೂಡಲು ಅಲ್ಲಿ ಅನುಮತಿಯುಂಟು. ಹಾಗೆಯೇ ಕರ್ನಾಟಕ ವಿಶ್ವವಿದ್ಯಾಲಯದವರ ಬಾಹ್ಯಪರೀಕ್ಷಾ ಪದ್ಧತಿ. ಈ ಎಲ್ಲ ಉದಾಹರಣೆಗಳಲ್ಲಿ ಪರೀಕ್ಷೆ ನಡೆಸುವ ವ್ಯವಸ್ಥೆಗಳು ವಿದ್ಯಾರ್ಥಿಗಳ ಕಲಿಯುವಿಕೆಗಾಗಿ ಏನನ್ನೂ ಮಾಡುವುದಿಲ್ಲ. ಅಂಚೆ ಮೂಲಕ ಪಾಠಗಳನ್ನು ಕಳುಹಿಸುವುದಿಲ್ಲ ಅಥವಾ ಅವರ ಉತ್ತರಗಳನ್ನು ತಿದ್ದಿ ಪರೀಕ್ಷೆಗಳಿಗೆ ತಯಾರಿ ಮಾಡಿಸುವುದಿಲ್ಲ. ಹೀಗೆ ಇವು ಅಂಚೆ ತೆರಪಿನ ವ್ಯವಸ್ಥೆಗಳಲ್ಲ; ದೂರಶಿಕ್ಷಣ ವ್ಯವಸ್ಥೆಗಳಲ್ಲ.

ಭಾರತದಲ್ಲಿ ಅಂಚೆ ತೆರಪಿನ ಶಿಕ್ಷಣದ ಪ್ರಾರಂಭ ೧೯೬೨ರಲ್ಲಿ ಆಯಿತು. ಕೇಂದ್ರ ಶಿಕ್ಷಣ ಸಲಹಾ ಮಂಡಳಿ ಖಾಸಗಿ ಅಭ್ಯರ್ಥಿಗಳಾಗಿ ಪರೀಕ್ಷೆಗೆ ಕೂಡುವವರ ಕಷ್ಟಗಳನ್ನು ಮನಗಂಡು, ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಗುರಿಯನ್ನು ಇಟ್ಟುಕೊಂಡು ಅಂಚೆ ತೆರಪಿನ ಶಿಕ್ಷಣವನ್ನು ಪ್ರಾರಂಭಿಸಿಲು ಸಲಹೆ ಮಾಡಿತು. ಆಗ ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಅಧ್ಯಕ್ಷರಾಗಿದ್ದ ಡಾ|| ಡಿ. ಎಸ್. ಕೊಠಾರಿಯವರ ಅಧ್ಯಕ್ಷತೆಯಲ್ಲಿ ರಚಿತವಾದ ಸಮಿತಿ ೧೯೬೧ ರಲ್ಲಿ ಈ ಬಗ್ಗೆ ಶಿಫಾರಸು ಮಾಡಿತು. ೧೯೬೨ರಲ್ಲಿ ದಿಲ್ಲಿ ವಿಶ್ವವಿದ್ಯಾಲಯವು ದೇಶದಲ್ಲೇ ಮೊದಲನೆಯದಾಗಿ ಅಂಚೆ ತೆರಪಿನ ವಿಭಾಗವನ್ನು ಪ್ರಾರಂಭಿಸಿತು. ಆ ವಿಭಾಗವನ್ನು ಉದ್ಘಾಟಿಸಿದ ಆಗಿನ ಶಿಕ್ಷಣ ಮಂತ್ರಿ ಡಾ|| ಕೆ. ಎಲ್. ಶ್ರೀಮಾಲಿಯವರು ಹೊಸ ಪದ್ಧತಿಯ ಮೂರು ಉದ್ದೇಶಗಳನ್ನು ಸ್ಪಷ್ಟಪಡಿಸಿದ್ದರು:

೧. ಹೆಚ್ಚು ದಕ್ಷವಾದ ಹಾಗೂ ಕಡಿಮೆ ಖರ್ಚಿನ ಶಿಕ್ಷಣ ವಿಧಾನವೊಂದನ್ನು ಕೊಡುವುದು;

೨. ಉನ್ನತ ಶಿಕ್ಷಣ ಪಡೆಯುವ ಅರ್ಹತೆಯಿದ್ದರೂ ಪ್ರವೇಶ ಪಡೆಯಲಾಗದ ಅಥವಾ ವೈಯಕ್ತಿಕ ಅಥವಾ ಆರ್ಥಿಕ ಕಾರಣಗಳಿಂದ ಶಿಕ್ಷಣ ಪಡೆಯಲು ಅಸಮರ್ಥರಾದ ಜನರು ಶಿಕ್ಷಣ ಮುಂದುವರಿಸುವ ಅನುಕೂಲಗಳನ್ನು ಒದಗಿಸುವುದು;

೩. ತಾವಿರುವ ಉದ್ಯೋಗಗಳಲ್ಲಿಯೇ ಇದ್ದುಕೊಂಡು ಹೆಚ್ಚು ಶಿಕ್ಷಣ ಪಡೆಯುವ ಉತ್ಸಾಹವುಳ್ಳ ಜನರಿಗೆ ಅವಕಾಶ ಕಲ್ಪಿಸುವುದು.

ವಿಶ್ವವಿದ್ಯಾಲಯ ಧನಸಹಾಯ ಆಯೋಗವು ವಿಶ್ವವಿದ್ಯಾಲಯಗಳು ಈ ಕೆಳಗಿನ ವರ್ಗದ ಜನರಿಗಾಗಿ ಅಂಚೆ ತೆರಪಿನ ಶಿಕ್ಷಣವನ್ನು ಕೊಡುವಂತೆ ಪ್ರೋತ್ಸಾಹಿಸುತ್ತ ಬಂದಿದೆ:

೧. ಹಣದ ಅಡಚಣೆ ಅಥವಾ ಬೇರೆ ಕಾರಣಗಳಿಂದ ವಿದ್ಯಾಭ್ಯಾಸವನ್ನು ಅರ್ಧಕ್ಕೇ ನಿಲ್ಲಿಸಿದ ವಿದ್ಯಾರ್ಥಿಗಳು;

೨. ಭೌಗೋಲಿಕವಾಗಿ ತೀರ ದೂರದ ಪ್ರದೇಶಗಳಲ್ಲಿ ಅಂದರೆ ದುರ್ಗಮ ಮೂಲೆಗಳಲ್ಲಿ ವಾಸಿಸುವ ವಿದ್ಯಾರ್ಥಿಗಳು;

೩. ಓದುವ ದಿನಗಳಲ್ಲಿ ಓದುವ ಮನಸ್ಸಾಗದೇ ಅಥವಾ ಪ್ರೇರಣೆ ಸಾಲದೆ ಓದನ್ನು ಅರ್ಧಕ್ಕೆ ನಿಲ್ಲಿಸಿ, ಮುಂದೊಂದು ದಿನ ಓದಬೇಕೆಂದು ನಿರ್ಧರಿಸುವ ವಿದ್ಯಾರ್ಥಿಗಳು;

೪. ಶಿಕ್ಷಣ ಪಡೆಯುವ ಅರ್ಹತೆಯಿದ್ದೂ ಶಿಕ್ಷಣ ಸಂಸ್ಥೆಯಲ್ಲಿ ಪ್ರವೇಶ ಪಡೆಯದೇ ಹೋದ ವಿದ್ಯಾರ್ಥಿಗಳು;

೫. ಶಿಕ್ಷಣವು ಜೀವನದುದ್ದಕ್ಕೂ ನಡೆಯುವ ಪ್ರಕ್ರಿಯೆ ಎಂದು ನಂಬಿ ಸದ್ಯ ಇರುವ ಒಂದು ಶೈಕ್ಷಣಿಕ ಶಿಸ್ತಿನಲ್ಲಿ ನಿರಂತರ ಕಲಿಯಲು ಬಯಸುವ ವ್ಯಕ್ತಿಗಳು ಮತ್ತು ಹೊಸ ಹೊಸ ಜ್ಞಾನವನ್ನು ಸಂಗ್ರಹಿಸಲು ಬಯಸುವ ವ್ಯಕ್ತಿಗಳು;

೬. ಸೇವೆಯಲ್ಲಿದ್ದುಕೊಂಡು ಶಿಕ್ಷಣ ಅಥವಾ ತರಬೇತಿ ಬಯಸುವ ವಿದ್ಯಾರ್ಥಿಗಳು.

ಡಾ|| ಕೊಠಾರಿಯವರ ನೇತೃತ್ವದ ಶಿಕ್ಷಣ ಆಯೋಗವು(೧೯೬೪-೬೬) ಅಂಚೆ ತೆರಪಿನ ಶಿಕ್ಷಣವನ್ನು ಔಪಚಾರಿಕ ಶಿಕ್ಷಣದ ಹೊರೆಯನ್ನು ಕಡಿಮೆ ಮಾಡುವ ಹಾಗೂ ಭಾರತದ ಶಿಕ್ಷಣದ ಗುಣಮಟ್ಟವನ್ನು ಗಣನೀಯವಾಗಿ ಸುಧಾರಿಸುವ ಮಾರ್ಗವೆಂದು ವರ್ಣಿಸಿದೆಯಲ್ಲದೆ, ೧೯೮೬ರ ಹೊತ್ತಿಗೆ ದೇಶದ ಒಟ್ಟು ಕಾಲೇಜು ವಿದ್ಯಾರ್ಥಿಗಳಲ್ಲಿ ಮೂರರಲ್ಲಿ ಒಂದು ಪಾಲಿನಷ್ಟಾದರೂ ವಿದ್ಯಾರ್ಥಿಗಳು ಅಂಚೆ ತೆರಪಿನ ಸಂಸ್ಥೆಗಳಲ್ಲಿ ಮತ್ತು ಸಂಜೆ ಕಾಲೇಜುಗಳಲ್ಲಿ ಕಲಿಯುವಂತಾಗಬೇಕು ಎಂದು ಶಿಫಾರಸ್ಸು ಮಾಡಿದೆ.

ಇವೆಲ್ಲವುಗಳಿಂದ ಒಂದು ಮಾತು ಸ್ಪಷ್ಟವಾಗುತ್ತದೆ-ಅದೇನೆಂದರೆ, ನಮ್ಮಲ್ಲಿರುವ ಪರಂಪರಾಗತ ಔಪಚಾರಿಕ ಶಿಕ್ಷಣ ಸಂಸ್ಥೆಗಳು ಶಿಕ್ಷಣವನ್ನು ಪಡೆಯಲು ಬಯಸುವ ಎಲ್ಲರಿಗೂ ಅವಕಾಶ ಒದಗಿಸಲು ಅಸಮರ್ಥವಾಗಿವೆ; ಇಂಥ ಶಾಲೆ ಕಾಲೇಜು ತರಬೇತಿ ಸಂಸ್ಥೆಗಳ ಗುಣಮಟ್ಟ ಕಾಪಾಡಿಕೊಳ್ಳುವುದು ಕಷ್ಟದ ಕೆಲಸ; ಅಂಚೆ ತೆರಪಿನ ಶಿಕ್ಷಣದ ಮೂಲಕ ಹೆಚ್ಚು ಜನರಿಗೆ ಕಡಿಮೆ ಖರ್ಚಿನಲ್ಲಿ, ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸುವ ಬದಲಿ ಮಾರ್ಗವನ್ನು ಪ್ರೋತ್ಸಾಹಿಸಬೇಕು.

ಆದರೆ ದುರದೃಷ್ಟವಶಾತ್ ಭಾರತದಲ್ಲಿ ಪ್ರಚಲಿತವಿರುವ ಅಂಚೆ ತೆರಪಿನ ಶಿಕ್ಷಣ ಈಗಾಗಲೇ ಅಪಮೌಲ್ಯಗೊಂಡಿರುವ ಔಪಚಾರಿಕ ಶಿಕ್ಷಣದ ಬಡಬಂಧುವಿನಂತೆ ಇದೆ. ವಿಶ್ವವಿದ್ಯಾಲಯದಲ್ಲಿ ಈಗಾಗಲೇ ಅಸ್ತಿತ್ವದಲ್ಲಿರುವ ಕೆಲವು ವಿಷಯಗಳಲ್ಲಿ ಪದವಿ ಅಥವಾ ಡಿಪ್ಲೋಮಾಗಳನ್ನು ಅಂಚೆತೆರಪಿನ ವಿಭಾಗಗಳು ಕೊಡುತ್ತವೆ. ಸದ್ಯ ೩೫ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು ತಮ್ಮ ಔಪಚಾರಿಕ ಪದವಿ, ಸ್ನಾತಕೋತ್ತರ ಪದವಿಗಳ ಜೊತೆಗೆ ಅಂಚೆ ತೆರಪಿನ ಪದವಿಗಳನ್ನು ಕೊಡುತ್ತವೆ. ಸಾಧಾರಣವಾಗಿ ಬಿ.ಎ., ಬಿ.ಕಾಂ., ಎಂ.ಎ., ಎಂ.ಕಾಂ., ಎಲ್‌ಎಲ್.ಬಿ., ಬಿ.ಎಡ್., ಎಂ.ಎಡ್. ಕೋರ್ಸುಗಳಿಗೆ ಪ್ರಾಶಸ್ತ್ಯವಿದೆ. ಕೆಲವೇ ಕೆಲವು ವಿಶ್ವವಿದ್ಯಾಲಯಗಳು ಬಿಟೆಕ್ ಅಥವಾ ಮ್ಯಾನೇಜಮೆಂಟ್‌ದಂಥ ಪ್ರತಿಷ್ಠಿತ ಕೋರ್ಸುಗಳನ್ನು ಕೊಡುತ್ತಿವೆ. ಮದುರೆಯ ಕಾಮರಾಜ ವಿಶ್ವವಿದ್ಯಾಲಯ, ಮದ್ರಾಸು, ಅಣ್ಣಾಮಲೈ, ಪಂಜಾಬ, ದಿಲ್ಲಿ, ಮುಂಬೈ, ಎಸ್.ಎನ್.ಡಿ.ಟಿ, ಪೂಣಾ, ಮೈಸೂರು ಇತ್ಯಾದಿ ವಿಶ್ವವಿದ್ಯಾಲಯಗಳು ತಮ್ಮ ಅಂಚೆತೆರಪಿನ ವಿಭಾಗಗಳನ್ನು ಸಾಕಷ್ಟು ಬಲಪಡಿಸಿಕೊಂಡಿವೆ. ಸದ್ಯ ಇವುಗಳಲ್ಲಿ ನೋಂದಣಿ ಮಾಡಿಕೊಂಡರ ಸಂಖ್ಯೆ ಒಂದೂಮುಕ್ಕಾಲು ಲಕ್ಷದಷ್ಟಿದೆ. ಕೆಲವು ವಿಶ್ವವಿದ್ಯಾಲಯಗಳಲ್ಲಿ ಅಂಚೆತೆರಪಿನ ವಿಭಾಗ ವಿಶ್ವವಿದ್ಯಾಲಯದ ಭಂಡಾರಕ್ಕಾಗಿ ವಿಪುಲ ಲಾಭಾಂಶ ಕೊಡುತ್ತದೆಯೆನ್ನುತ್ತಾರೆ. ವಿಶ್ವವಿದ್ಯಾಲಯ ಧನಸಹಾಯ ಆಯೋಗವೂ ಕೂಡ ಧನಸಹಾಯ ಒದಗಿಸುತ್ತದೆ. ಆದರೂ ಇಡೀ ವ್ಯವಸ್ಥೆ ಪೂರ್ಣ ಆರೋಗ್ಯಕರವಾಗಿಲ್ಲವೆಂದೇ ಹೇಳಬೇಕು. ಔಪಚಾರಿಕ ಶಿಕ್ಷಣ ಪದ್ಧತಿಯನ್ನು ನಕಲು ಮಾಡುವುದೇ ತಮ್ಮ ಪರಮಭಾಗ್ಯವೆಂದು ಈ ವಿಭಾಗದಲ್ಲಿರುವವರು ತಿಳಿದುಕೊಂಡಿರುವುದು ದುರದೃಷ್ಟಕರ. ಜನರಿಗೆ ಬೇಕಾಗುವ ಹೊಸ ಕೋರ್ಸುಗಳನ್ನು ಅಪ್ಪಿತಪ್ಪಿಯಾದರೂ ಅವರು ಯೋಜಿಸುವುದಿಲ್ಲ. ಅವರು ವಿದ್ಯಾರ್ಥಿಗಳಿಗೆ ಕೊಡುವ

ಬೋಧನಾಸಾಮಗ್ರಿ ಬಹುತೇಕ ಕಳಪೆ. ಅಂಚೆಯಲ್ಲಿ ಕಳಿಸುವಾಗ ಒಂದರ್ಧ ಇವು ಮಾಯವಾಗುತ್ತವೆಯಂತೆ. ಪರೀಕ್ಷೆಗೆ ಕೆಲವೇ ಕೆಲವು ದಿನಗಳು ಅಥವಾ ವಾರಗಳ ಮುಂಚೆ ವಿದ್ಯಾರ್ಥಿಗಳಿಗೆ ಅವು ತಲುಪುವುದು ರೂಢಿ. ಅನೇಕ ವಿಶ್ವವಿದ್ಯಾಲಯಗಳು ಸಂಪರ್ಕ ಶಿಬಿರಗಳನ್ನು ಏರ್ಪಡಿಸುವುದೇನೋ ನಿಜ. ಅವುಗಳಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ತಮ್ಮ ಸಂಶಯಗಳನ್ನು ನಿವಾರಿಸಿಕೊಳ್ಳುವುದಿಲ್ಲ. ಈ ಶಿಬಿರಗಳಿಗೆ ಬರುವವರಿಗೆ ವಿಭಾಗದಿಂದ ಟಿಪ್ಪಣಿಗಳೇ ಬಂದಿರುವುದಿಲ್ಲ; ಬಂದಿದ್ದರೂ ಅವರು ಓದಿರುವುದಿಲ್ಲ. ಹೀಗಾಗಿ ವಿದ್ಯಾರ್ಥಿಗಳು ಪಾಠಕ್ರಮದ ಸಂಕ್ಷಿಪ್ತ ಸಾರಾಂಶ ಹೇಳುವಂತೆ ಬೇಡಿಕೆ ಮಂಡಿಸುತ್ತಾರೆ. ಯಾರೋ ಬಂದು ಏನೋ ಪಾಠಹೇಳಿ ಎಲ್ಲೋ ಮಾಯವಾಗಿ ಹೋಗುವ ಮೋಜು ಕಾಣಸಿಗುತ್ತದೆ. ಹೀಗೆ ಇಡೀ ವ್ಯವಸ್ಥೆಯನ್ನು ಹತ್ತಿರದಿಂದ ನೋಡಿದವರಿಗೆ ಜಿಗುಪ್ಸೆ ಉಂಟಾಗದೇ ಇರದು. ನುರಿತ ಶಿಕ್ಷಕರು ಈ ವಿಭಾಗಗಳಲ್ಲಿ ಕೆಲಸ ಮಾಡುವುದು ತಮ್ಮ ಮುಖಭಂಗದ ಪ್ರಸಂಗವೆಂದು ತಿಳಿಯುತ್ತಾರೆ. ಹಿಂದೆ ಆಂಧ್ರಪ್ರದೇಶದ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿದ್ದು ಅಲ್ಲಿ ಮುಕ್ತ ವಿಶ್ವವಿದ್ಯಾಲಯದ ಹುಟ್ಟಿಗೆ ಕಾರಣರಾದ ಡಾ. ರಾಮರೆಡ್ಡಿ ಉಸ್ಮಾನಿಯಾದಲ್ಲಿ ತಾವಿದ್ದಾಗ ಅಂಚೆತೆರಪಿನ ವಿಭಾಗದಲ್ಲಿ ತಾವು ಕಂಡ ಅಸಹನೀಯ ಪರಿಸ್ಥಿತಿಯ ಬಗ್ಗೆ ಬರೆದಿದ್ದಾರೆ. ಒಮ್ಮೆ ಅವರು ವಿಶ್ವವಿದ್ಯಾಲಯ ವಿಭಾಗದ ವರಿಷ್ಠರಿಗೆ ಪತ್ರಬರೆದು ಆ ವಿಭಾಗದ ಒಬ್ಬ ಶಿಕ್ಷಕರನ್ನು ಆಯ್ದು ಅಂಚೆ ತೆರಪಿನ ವಿಭಾಗಕ್ಕೆ ಕಳುಹಿಸಿ ಕೊಡಿ ಎಂದು ವಿನಂತಿಸಿಕೊಂಡಿದ್ದರಂತೆ. ಇದೇ ಸುಸಂದರ್ಭವೆಂದು ತಿಳಿದು ಆ ವರಿಷ್ಠ ತಮಗೆ ಬೇಡವಾದ ಒಬ್ಬರನ್ನು ಅಂಚೆ ತೆರಪಿನ ವಿಭಾಗಕ್ಕೆ ಕಳುಹಿಸಿ ಕೈತೊಳೆದುಕೊಂಡರಂತೆ. ಯಾರಿಗೂ ಬೇಡವಾದವರಿದ್ದರೆ ಅಂಚೆತೆರಪಿನ ವಿಭಾಗಕ್ಕೆ ಹೊತ್ತು ಹಾಕುವುದು ಸಾಮಾನ್ಯ. ಇದು ಹೆಚ್ಚು ಕಡಿಮೆ ಎಲ್ಲರ ಅನುಭವವೆಂದರೆ ತಪ್ಪಿಲ್ಲ

ಸಮೀಕ್ಷಕರು ಪಟ್ಟಿ ಮಾಡಿದ ನ್ಯೂನತೆಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ಹೇಳಬಹುದು.

೧. ಜನರಲ್ಲಿ ಇದರ ಬಗ್ಗೆ ಸದಭಿಪ್ರಾಯವಿಲ್ಲ. ಇದು ಎರಡನೆ ದರ್ಜೆಯ ಶಿಕ್ಷಣ ಪದ್ಧತಿ ಎಂಬ ಜನಾಭಿಪ್ರಾಯವಿದೆ.

೨. ಅಂಚೆತೆರಪಿನ ಶಿಕ್ಷಣ ಔಪಚಾರಿಕ ಶಿಕ್ಷಣವನ್ನು ಅನುಕರಿಸುವುದೇ ತನ್ನ ಭಾಗ್ಯವೆಂದು ತಿಳಿದಂತಿದೆ. ಹೀಗಾಗಿ ಶ್ರೀಮಂತ ನೆಂಟರ ಬಡಬಂಧುವಿನಂತಿದೆ ಅದರ ಆಚರಣೆ.

೩. ಹೆಚ್ಚಿನ ಸಂಸ್ಥೆಗಳು ಮತ್ತೆ ಮತ್ತೆ ಅದೇ ಬಿ ಎ., ಅದೇ ಬಿ ಕಾಂ ಪದವಿಗಳನ್ನು ಕೊಡುವುದರಲ್ಲಿಯೇ ತೃಪ್ತಿಪಟ್ಟುಕೊಳ್ಳುತ್ತವೆ.

೪. ಔಪಚಾರಿಕ ಶಿಕ್ಷಣದ ಪದ್ಧತಿಗಳನ್ನೇ ಬಳಸಿ, ಅದೇ ಮೌಲ್ಯಮಾಪನ ಪದ್ಧತಿಯನ್ನು ಬಳಸಿ, ಅದೇ ನಿಯಮಾವಳಿಯನ್ನು ಪಾಲಿಸುವ ಬಡಕಲು ಗೊಡ್ಡೆಮ್ಮೆಗಳಾಗಿವೆ.

೫. ಆಧುನಿಕ ತಂತ್ರಜ್ಞಾನ ಕೊಡುವ ಬಹುಮಾಧ್ಯಮಗಳನ್ನು ಬಳಸದೆ ಕೇವಲ ಮುದ್ರಿತ ಸಾಮಗ್ರಿಯನ್ನು ಮಾತ್ರ ಬಳಸುತ್ತವೆ.

೬. ವಿಶ್ವವಿದ್ಯಾಲಯಗಳು ತಮ್ಮ ಅಂಚೆತೆರಪಿನ ವಿಭಾಗಗಳಿಗೆ ಸಾಕಷ್ಟು ಹಣಕಾಸು ಒದಗಿಸುವುದಿಲ್ಲ. ಆ ವಿಭಾಗಗಳು ಸಾಕಷ್ಟು ಉತ್ಪನ್ನ ತಂದರೂ ಕೂಡ ಇದೇ ಹಣೆಬರಹ.

೭. ದೇಶದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿರುವ ಅಂಚೆತೆರಪಿನ ವಿಭಾಗಗಳು ಪರಸ್ಪರ ಸಂಬಂಧ ಹೊಂದದೇ ಇದ್ದು ಒಬ್ಬರು ಮಾಡಿದ್ದನ್ನೇ ಇನ್ನೊಬ್ಬರು ಮಾಡಿ ಇಬ್ಬರೂ ನಷ್ಟಕ್ಕೊಳಗಾಗುತ್ತಿದ್ದಾರೆ.

೮. ಈ ವಿಭಾಗಗಳಲ್ಲಿ ಕೆಲಸ ಮಾಡುವುದು ಯಾರಿಗೂ ಬೇಡದ ಒಂದು ಶಿಕ್ಷೆಯೆಂದು ತಿಳಿದುಕೊಂಡವರೇ ಬಹಳ. ಅಲ್ಲಿರುವವರಿಗೆ ವಿಶ್ವವಿದ್ಯಾಲಯದ ಧೋರಣೆಗಳನ್ನು ರೂಪಿಸುವುದರಲ್ಲಿ ಯಾವುದೇ ಸ್ಥಾನವಿಲ್ಲ.

ಇಂಥ ರಚನೆಯನ್ನು ಹೊಂದಿರುವ ಶಿಕ್ಷಣ ವ್ಯವಸ್ಥೆಗಳು ಜನರಿಗೆ ಬೇಕಾದ ಶಿಕ್ಷಣವನ್ನು ಕೊಡುವುದಾದರೂ ಹೇಗೆ? ದೂರಶಿಕ್ಷಣದ ಒಂದು ಪ್ರಕಾರವು ಹೀಗೆ ಊನಶಕ್ತವಾಗಿರುವುದು ದುರದೃಷ್ಟಕರ. ಇನ್ನು ದೂರ ಶಿಕ್ಷಣದ ಇನ್ನೊಂದು ಪ್ರಕಾರವಾದ ಮುಕ್ತಶಿಕ್ಷಣ ಪದ್ಧತಿ ಮತ್ತು ಮುಕ್ತ ವಿಶ್ವವಿದ್ಯಾಲಯಗಳ ಕಡೆಗೆ ಕಣ್ಣು ಹಾಯಿಸೋಣ.

vi. ಇನ್ನೊಂದು ರೂಪ: ಮುಕ್ತ ವಿಶ್ವವಿದ್ಯಾಲಯ

ನಾವು ಈ ಹಿಂದೆ ಹೇಳಿದ ಹಾಗೆ ದೂರಶಿಕ್ಷಣದ ಇನ್ನೊಂದು ಪ್ರಕಟ ರೂಪವೇ ಮುಕ್ತ ವಿಶ್ವವಿದ್ಯಾಲಯ. ಮುಕ್ತಕಲಿಕೆಯನ್ನು ಆಧರಿಸುವ ಶಿಕ್ಷಣ ಪದ್ಧತಿಗೆ ಮುಕ್ತ ಶಿಕ್ಷಣವೆಂದೂ, ಅಂಥ ಶಿಕ್ಷಣ ಕೊಡುವ ವ್ಯವಸ್ಥೆಗೆ ಮುಕ್ತ ವಿಶ್ವವಿದ್ಯಾಲಯವೆಂದೂ ಕರೆಯಬಹುದು. ಆದರೆ ಮುಕ್ತಕಲಿಕೆ ಎಂದರೇನು? ನಮಗೆ ಪರಿಚಿತವಿರುವ ಕಲಿಕೆಯಲ್ಲಿ ಪಾಠದ ಕೊಠಡಿಗಳು ಬೇಕು. ಪೀಠೋಪಕರಣಗಳು, ಕರಿಹಲಗೆ, ವಸತಿಗೃಹ, ಆಟದ ಬಯಲು, ಆವರಣದ ಗೋಡೆಗಳು, ಹತ್ತಿಪ್ಪತ್ತು ಅಥವಾ ನೂರಿನ್ನೂರು ವಿದ್ಯಾರ್ಥಿಗಳ ಎದುರು ಪಾಠಹೇಳುವ ಶಿಕ್ಷಕರು ಇವೆಲ್ಲ ಬೇಕು. ಮುಕ್ತವಿಶ್ವವಿದ್ಯಾಲಯಗಳೆಂದರೆ ಇವು ಯಾವುವೂ ಇಲ್ಲದ ವಿಶ್ವವಿದ್ಯಾಲಯಗಳು. ಅಂದರೆ ಗೋಡೆಗಳಿಲ್ಲದ ವಿಶ್ವವಿದ್ಯಾಲಯಗಳು. ದೂರಶಿಕ್ಷಣ ಎಂದರೂ ಇದೇ ಅರ್ಥ ಬರುತ್ತದೆ. ಹಾಗಾದರೆ 'ಮುಕ್ತ' ಎಂಬ ಮಾತಿನ ಅರ್ಥವೇನು?

ಸಾಮಾನ್ಯವಾಗಿ 'ಮುಕ್ತಕಲಿಕೆ' ಎಂಬ ಮಾತಿನಲ್ಲಿ ನಾವು ನಾಲ್ಕು ಅಂಶಗಳನ್ನು ಗಮನದಲ್ಲಿಟ್ಟು ಕೊಳ್ಳುತ್ತೇವೆ. ಒಂದು: ಜನರಿಗೆ ಪ್ರವೇಶ ಕೊಡುವಲ್ಲಿ ಅವರ ವಿದ್ಯಾರ್ಹತೆಗಳನ್ನು ನೋಡದೆ, ಕಲಿಯಬೇಕೆಂದು ಬಯಸುವ ಎಲ್ಲರಿಗೂ ಮುಕ್ತ ಪ್ರವೇಶ ಕೊಡುವುದು. ಎರಡು: ಕಲಿಯುವುದು ಮತ್ತು ಕಲಿಸುವುದರ ಶಾಲೆ ಕಾಲೇಜುಗಳ ನಾಲ್ಕು

ಗೋಡೆಗಳ ಒಳಗೆ ಮಾತ್ರ ನಡೆಯಬೇಕೆಂಬ ನಿರ್ಬಂಧವಿಲ್ಲದೆ ಮನೆಯಲ್ಲಿದ್ದು ಕಲಿಯಲು ಅನುಕೂಲ ಮಾಡಿಕೊಡುವುದು. ಮೂರು: ಗುರುವಿನ ಮುಖದಿಂದ ಬಂದ ಮಾತೊಂದೇ ಶಿಕ್ಷಣವಲ್ಲವೆಂಬುದನ್ನು ಗ್ರಹಿಸಿ, ಆಧುನಿಕ ಯಂತ್ರಜ್ಞಾನ ಸೃಷ್ಟಿಸಿದ ಮುದ್ರಿತ ಪುಸ್ತಕ, ರೇಡಿಯೋ, ಟೆಲಿವಿಷನ್, ವಿಡಿಯೋಕ್ಯಾಸೆಟ್, ಕಂಪ್ಯೂಟರ್ ಬಹುಮಾಧ್ಯಮಗಳ ಮೂಲಕ ಬೋಧಿಸುವುದು. ನಾಲ್ಕು: ಹಳೆಯ ಕಾಲದ ವಿಚಾರಗಳನ್ನು ಬದಿಗಿಟ್ಟು ಆಧುನಿಕವಾದ ಜ್ಞಾನವನ್ನು ವಿದ್ಯಾರ್ಥಿಗಳಿಗೆ ತಲುಪಿಸುವುದು. ಹೀಗೆ ನಾಲ್ಕು ರೀತಿಯ "ಮುಕ್ತತೆ" ಈ ಕಲ್ಪನೆಯಲ್ಲಿ ಅಡಗಿದೆ. ವ್ಯಾವಹಾರಿಕವಾಗಿ ಇನ್ನೂ ಎರಡು ಅಂಶಗಳನ್ನು ಸೇರಿಸಬಹುದು:

೧. ಹಾಜರಾತಿ ನಿರ್ಬಂಧವಿಲ್ಲದಿರುವುದು ಮತ್ತು ೨. ಯಾವುದೇ ವಿಷಯವನ್ನು ಆಯ್ದುಕೊಂಡು ಅನುಕೂಲ ಸಮಯದಲ್ಲಿ ಓದನ್ನು ಮುಗಿಸುವುದು.

ಆದರೆ ಎಲ್ಲ ಬಗೆಯ ಶಿಕ್ಷಣ ಪದ್ಧತಿಗಳಲ್ಲಿ ಒಂದಿಷ್ಟು ಮುಕ್ತತೆ, ಒಂದಿಷ್ಟು ನಿರ್ಬಂಧ ಅನಿವಾರ್ಯವಾಗಿದೆ ಎಂಬ ಮಾತನ್ನು ಎಲ್ಲರೂ ತಿಳಿದಿದ್ದಾರೆ. ಹೀಗಾಗಿ ಮುಕ್ತಕಲಿಕೆ ಅಥವಾ ಮುಕ್ತಶಿಕ್ಷಣವೇನೆಂದು ವ್ಯಾಖ್ಯಾನಿಸುವುದು ಕಷ್ಟ. ಸದ್ಯ ಮುಕ್ತ ವಿಶ್ವವಿದ್ಯಾಲಯಗಳು ಅನುಸರಿಸುವ ಶಿಕ್ಷಣ ಪದ್ಧತಿಯನ್ನು ಮುಕ್ತ ಶಿಕ್ಷಣವೆಂದು ವರ್ಣಿಸಿ ಪಾರಾಗೋಣ. ಮುಕ್ತ ವಿಶ್ವವಿದ್ಯಾಲಯದ ಮುಖ್ಯ ತತ್ವವೆಂದರೆ, ಔಪಚಾರಿಕ ಶಿಕ್ಷಣ ಪಡೆಯದೇ ಇರುವ, ಅಥವಾ ಸ್ವಉದ್ಯೋಗ ಮತ್ತು ನೌಕರಿ ಚಾಕರಿಗಳಲ್ಲಿರುವಾಗಲೇ ಇನ್ನೊಂದಿಷ್ಟು ಓದಬೇಕೆಂಬ ಅಥವಾ ತಮ್ಮ ಕೌಶಲ್ಯಗಳನ್ನು ನಿರಂತರವಾಗಿ ಅಭಿವೃದ್ಧಿಗೊಳಿಸಿಕೊಳ್ಳಬೇಕೆಂಬ ವಯಸ್ಕರಿಗೆ ಅಥವಾ ಶಾಲೆಬಿಟ್ಟ ಯುವಕರಿಗೆ ಉಚ್ಚಶಿಕ್ಷಣದ ಬಾಗಿಲನ್ನು ತೆರೆಯುವುದು, ಅವರಿಗೂ ಶಿಕ್ಷಣದ ಸಮಾನ ಅವಕಾಶ ಕಲ್ಪಿಸುವುದು. ಅಷ್ಟೇ ಅಲ್ಲ, ಇಂಥ ಜನರು ತಾವಿರುವಲ್ಲೇ ಜ್ಞಾನ-ಕೌಶಲ್ಯಗಳಲ್ಲಿ ತರಬೇತಿ ಪಡೆಯುವಂತೆ ಮಾಡುವುದು.

ವಿಶ್ವದ ಹಲವು ದೇಶಗಳು ಈಗ ಮುಕ್ತ ವಿಶ್ವವಿದ್ಯಾಲಯಗಳನ್ನು ಹೊಂದಿವೆ. ಇವುಗಳಲ್ಲಿ ಇಂಗ್ಲೆಂಡ್, ಪಶ್ಚಿಮ ಜರ್ಮನಿ, ಸ್ಪೈನ್, ಚೀಣಾ, ಥೈಲಂಡ್, ಶ್ರೀಲಂಕಾ, ಭಾರತ, ನೆದರಲ್ಯಾಂಡ್ಸ್, ಇಸ್ರಾಯಿಲ್, ಪಾಕಿಸ್ತಾನ ಇಂಡೋನೇಶಿಯಾ, ಫಿಲಿಫೈನ್ಸ್, ನೈಜೀರಿಯಾ, ಕೊಸ್ಟರಿಕಾ, ದಕ್ಷಿಣಕೋರಿಯಾ, ಅಮ್ಮಾನ್, ಕೆನಡಾ ಮತ್ತು ಜಪಾನ್ ಸೇರಿವೆ. ಸದ್ಯ ೨೫ಕ್ಕೂ ಹೆಚ್ಚು ಸ್ವತಂತ್ರ ಮುಕ್ತ ವಿಶ್ವವಿದ್ಯಾಲಯಗಳು ಅಸ್ತಿತ್ವದಲ್ಲಿವೆ. ಸುಮಾರು ೧೦ ಲಕ್ಷಕ್ಕೂ ಮೀರಿದ ವಿದ್ಯಾರ್ಥಿಗಳು ಇಲ್ಲಿ ಪ್ರವೇಶ ಪಡೆದಿದ್ದಾರೆ. ವಿಶ್ವದ ಮೊಟ್ಟ ಮೊದಲ ಮುಕ್ತ ವಿಶ್ವವಿದ್ಯಾಲಯ ಇಂಗ್ಲೆಂಡಿನಲ್ಲಿ ೧೯೬೯ರಲ್ಲಿ ಸ್ಥಾಪಿತವಾಯಿತು. ದೂರಶಿಕ್ಷಣ ವಿಧಾನಗಳನ್ನು ಆಧರಿಸಿದ ಈ ಪ್ರಯೋಗ ಯಶಸ್ವಿಯಾದುದನ್ನು ನೋಡಿ ಯುರೋಪಿನ ಹಾಗೂ ಏಶಿಯಾದ ಅನೇಕ ದೇಶಗಳು ಒಂದೊಂದಾಗಿ ತಮ್ಮ ಮುಕ್ತ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಿದವು. ಭಾರತದಲ್ಲಿ ಇಂಥ ಪ್ರಯೋಗ ನಡೆಯಬೇಕೆಂಬ ವಿಚಾರ ಮೂಡಿದ್ದು ೧೯೭೦ರ ಸುಮಾರಿಗೆ. ಜಿ. ಪಾರ್ಥಸಾರಥಿಯವರ ನೇತೃತ್ವದ ಒಂದು ಕಾರ್ಯದಳ ಭಾರತದಲ್ಲಿ ಒಂದು ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯವನ್ನು

ಸ್ಥಾಪಿಸಬೇಕೆಂಬ ಶಿಫಾರಸ್ಸು ಮಾಡಿತು. ಆದರೆ ಕಾರಣಾಂತರಗಳಿಂದ ೧೯೮೨ರ ವರೆಗೆ ಈ ದಿಶೆಯಲ್ಲಿ ಯಾವ ಕೆಲಸವೂ ನಡೆಯಲಿಲ್ಲ. ಭಾರತದಲ್ಲಿ ಮೊಟ್ಟಮೊದಲ ಮುಕ್ತ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದ ಕೀರ್ತಿ ಆಂಧ್ರಪ್ರದೇಶಕ್ಕೆ ಸಲ್ಲುತ್ತದೆ. ೧೯೮೨ರಲ್ಲಿ ಆಂಧ್ರಪ್ರದೇಶ ಮುಕ್ತ ವಿಶ್ವವಿದ್ಯಾಲಯ ಸ್ಥಾಪಿತವಾಯಿತು. ಮುಂದೆ ೧೯೮೫ರ ಸಪ್ಟೆಂಬರದಲ್ಲಿ ಭಾರತದ ಸಂಸತ್ತಿನಲ್ಲಿ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಮಸೂದೆಯನ್ನು ತರಲಾಯಿತು. ಸೂಕ್ತ ಸಿದ್ಧತೆಗಳ ನಂತರ ೧೯೮೭ರಲ್ಲಿ ಆ ವಿಶ್ವವಿದ್ಯಾಲಯವು ಮ್ಯಾನೇಜಮೆಂಟ ಮತ್ತು ದೂರಶಿಕ್ಷಣ ವಿಷಯಗಳಲ್ಲಿ ಡಿಪ್ಲೋಮಾ ಕೋರ್ಸುಗಳನ್ನೂ, ಬ್ಯಾಂಕ್ ಅಭಿವೃದ್ಧಿ ಅಧಿಕಾರಿಗಳಿಗಾಗಿ ಗ್ರಾಮೀಣ ಅಭಿವೃದ್ಧಿ ವಿಷಯದಲ್ಲಿ ಸರ್ಟಿಫಿಕೇಟ ಕೋರ್ಸನ್ನೂ, ಯಾವುದೇ ಔಪಚಾರಿಕ ವಿದ್ಯಾರ್ಹತೆ ಇಲ್ಲದ ಜನರಿಗಾಗಿ ಪದವಿಸಿದ್ಧತಾ ಕೋರ್ಸುಗಳನ್ನೂ ಪ್ರಾರಂಭಿಸುವ ಮೂಲಕ ವಿನೂತನ ಪ್ರಯೋಗಕ್ಕೆ ಶ್ರೀಕಾರ ಹಾಕಲಾಯಿತು.

ಈಗ ಮುಕ್ತ ವಿಶ್ವವಿದ್ಯಾಲಯಗಳ ಕೆಲವು ಮುಖ್ಯ ಲಕ್ಷಣಗಳನ್ನು ನೋಡೋಣ. ಅವುಗಳಲ್ಲಿ ಮೊದಲನೆಯದೆಂದರೆ : ನಾವು ಈ ಮೊದಲು ನೋಡಿದಂತೆ ಅಂಚೆತೆರಪಿನ ಸಂಸ್ಥೆಗಳು ಔಪಚಾರಿಕ ವಿಶ್ವವಿದ್ಯಾಲಯಗಳ ವಿಭಾಗಗಳಾಗಿದ್ದು, ತಮ್ಮ ತಮ್ಮ ವಿಶ್ವವಿದ್ಯಾಲಯಗಳ ಪಾಠಕ್ರಮ, ಪರೀಕ್ಷಾಪದ್ಧತಿ, ಪ್ರವೇಶಾರ್ಹತೆಗಳನ್ನು ಪಾಲಿಸಬೇಕಾಗುತ್ತದೆ. ಅವುಗಳಿಗೆ ಸ್ವತಂತ್ರ ಧೋರಣೆಗಳಾಗಲೀ ಸಂಪನ್ಮೂಲಗಳಾಗಲೀ ಇಲ್ಲ. ಆದರೆ ಮುಕ್ತ ವಿಶ್ವವಿದ್ಯಾಲಯಗಳು ಸ್ವತಂತ್ರ ವ್ಯವಸ್ಥೆಗಳಾಗಿದ್ದು ತಮ್ಮದೇ ಆದ ಪಾಠಕ್ರಮ, ಪರೀಕ್ಷಾ ಪದ್ಧತಿ, ಪ್ರವೇಶಾರ್ಹತೆಗಳನ್ನು ಹೊಂದಿರುತ್ತವೆ.

ಎರಡು: ಬೋಧನೆಯಲ್ಲಿ ಇಲೆಕ್ಟ್ರಾನಿಕ್ ಮಾಧ್ಯಮವನ್ನು ಒಳಗೊಂಡಂತೆ ಬಹುಮಾಧ್ಯಮವನ್ನು ಬಳಸಿಕೊಳ್ಳುತ್ತವೆ.

ಮೂರು: ಅಂಚೆತೆರಪಿನ ಶಿಕ್ಷಣದಲ್ಲಿ ಇದರ ಒಂದು ಸಲ್ಲಕ್ಷಣವನ್ನು ನಾವಿಲ್ಲಿ ಕಾಣಬಹುದು. ಅದೇನೆಂದರೆ, ಅವು ವಿದ್ಯಾರ್ಥಿಗಳಿಗೆ ಬೆಂಬಲ ಸೇವೆಗಳನ್ನು ಒದಗಿಸುತ್ತವೆ. ಅಂದರೆ, ತಮ್ಮ ಪ್ರಾದೇಶಿಕ ಅಥವಾ ಅಧ್ಯಯನ ಕೇಂದ್ರಗಳಲ್ಲಿ ದೃಶ್ಯ-ಶ್ರಾವ್ಯ ಸಾಮಗ್ರಿಗಳನ್ನೂ ಗ್ರಂಥಾಲಯ ಸೌಲಭ್ಯಗಳನ್ನೂ ಕಲ್ಪಿಸುತ್ತವೆ. ನಿಯಮಿತವಾಗಿ ಶೈಕ್ಷಣಿಕ ಸಲಹಾಕಾರರನ್ನು ಆಮಂತ್ರಿಸಿ ಅವರಿಂದ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಕೊಡಿಸುವ ಏರ್ಪಾಡು ಮಾಡುತ್ತಾರೆ. ಆಗೊಮ್ಮೆ ಈಗೊಮ್ಮೆ ವಿದ್ಯಾರ್ಥಿಗಳನ್ನೂ ಶೈಕ್ಷಣಿಕ ಸಲಹಾಕಾರರನ್ನೂ ಒಟ್ಟಿಗೆ ತರುವ ಶಿಬಿರಗಳನ್ನು ಏರ್ಪಡಿಸುತ್ತಾರೆ. ಇಂಥ ಇನ್ನೂ ಕೆಲವು ಬೆಂಬಲ ಸೇವೆಗಳಿರಬಹುದು.

ನಾಲ್ಕು: ವಿದ್ಯಾರ್ಥಿಗಳಿಗೆ ಮುದ್ರಿತ ರೂಪದಲ್ಲಿ ಕಳುಹಿಸಿಕೊಡುವ ಸ್ವಬೋಧಿನಿ ಸಾಮಗ್ರಿಯನ್ನು ಆಯಾ ವಿಷಯದ ಪರಿಣತರಿಂದ ಬರೆಯಿಸುತ್ತಾರೆ. ದೂರಶಿಕ್ಷಣ ವ್ಯವಸ್ಥೆಯಲ್ಲಿ ದೃಶ್ಯ-ಶ್ರಾವ್ಯ ಮಾಧ್ಯಮಗಳಿಗೆ ಸ್ಥಾನವಿದ್ದರೂ ವಿಶಿಷ್ಟ ರೀತಿಯಲ್ಲಿ ಬರೆಯಿಸುವ ಈ ಸ್ವಬೋಧಿನಿಗೆ ತುಂಬಾ ಮಹತ್ವ. ಇದರಲ್ಲಿ ವಿಷಯವೂ, ಶಿಕ್ಷಕನೂ,

ಬೋಧನಾ ಪದ್ಧತಿಯೂ ಸಮ್ಮಿಳಿತಗೊಂಡಿರುತ್ತದೆ ಎನ್ನುತ್ತಾರೆ. ಹೀಗೆ ಇದು 'ಒಂದರಲ್ಲಿ-ಮೂರು' ಅಡಗಿರುವ ಮಹತ್ವದ ಸಾಧನ. ಇಡೀ ಪದ್ಧತಿಯ ಬೆನ್ನೆಲುಬು.

ಐದು: ಮುಕ್ತ ವಿಶ್ವವಿದ್ಯಾಲಯದ ಹೆಸರೇ ಸೂಚಿಸುವಂತೆ, ವಿದ್ಯಾರ್ಥಿಗಳ ಪ್ರವೇಶದ ವಿಷಯದಲ್ಲಿ ನಿರ್ಬಂಧಗಳು ಅತಿ ಕಡಿಮೆಯಿದ್ದು, ಕಲಿಯಬೇಕೆಂಬ ಬಯಕೆ ಇರುವ ಎಲ್ಲರಿಗೂ ಮುಕ್ತದ್ವಾರವಿದೆ.

ಆರು: ವಿದ್ಯಾರ್ಥಿಯು ಅಧ್ಯಯನಕ್ಕಾಗಿ ತನ್ನ ಅನುಕೂಲದ ಸಮಯವನ್ನೂ ತನ್ನ ಅಭಿರುಚಿಯ ವಿಷಯವನ್ನೂ ಆಯ್ದುಕೊಳ್ಳಬಹುದು. ಶಾಲೆ-ಕಾಲೇಜುಗಳಿಂದ ದೂರ ಇರುವ ಸ್ಥಳಗಳಲ್ಲಿ ವಾಸಿಸುವ, ಅವುಗಳಲ್ಲಿ ಪ್ರವೇಶ ಪಡೆಯಲಾಗದ, ಸ್ವಉದ್ಯೋಗ ಅಥವಾ ನೌಕರಿ ಚಾಕರಿಗಳಲ್ಲಿ ತೊಡಗಿಕೊಂಡಿರುವ, ಉನ್ನತ ಶಿಕ್ಷಣ ಪಡೆಯಲು ಮನಸ್ಸಿದ್ದರೂ ಕನಿಷ್ಠ ಅರ್ಹತೆ ಪಡೆಯದೇ ಹೋದ ಅಥವಾ ಆರ್ಥಿಕ ಅನುಕೂಲ ಇಲ್ಲದ ಜನರಿಗೆ ಇದು ವರದಂತಿದೆ. ಯಾವುದೇ ವಯಸ್ಸಿನಲ್ಲಿ ಪ್ರಾರಂಭಿಸಬಹುದು; ದೇಶದ ಯಾವುದೇ ಭಾಗದವರು ಸೇರಿಕೊಳ್ಳಬಹುದು. ಗೃಹಿಣಿಯರು, ಸ್ವಉದ್ಯೋಗ ಮಾಡುವವರು, ಕಚೇರಿಗಳಲ್ಲಿ ದುಡಿಯುವವರು ತಮ್ಮ ಅನುಕೂಲ ನೋಡಿಕೊಂಡು ಮುದ್ರಿತ ಟಿಪ್ಪಣಿ ಮತ್ತು ಬಹುಮಾಧ್ಯಮದ ಪಾಠಗಳನ್ನು ಓದಿ ನೋಡಿ, ಪರೀಕ್ಷೆಗಳಿಗೆ ಕೂಡಬಹುದು. ಹಾಜರಾತಿಯ ಕಡ್ಡಾಯವಿಲ್ಲ. ಒಂದು ವರ್ಷದ ಕೋರ್ಸನ್ನು ನಾಲ್ಕು ವರ್ಷ ಅಥವಾ ಅದಕ್ಕೂ ದೀರ್ಘ ಕಾಲದೊಳಗೆ ಮಾಡಿ ಮುಗಿಸುವ ಅನುಕೂಲವಿದೆ.

ಭಾರತದಂಥ ಅಭಿವೃದ್ಧಿ ಹೊಂದುತ್ತಿರುವ ದೇಶದಲ್ಲಿ ಮುಕ್ತ ವಿಶ್ವವಿದ್ಯಾಲಯಗಳ ಅವಶ್ಯಕತೆ ತುಂಬಾ ಇದೆ. ಈ ಮಾತನ್ನು ವಿ.ಎಸ್.ಝಾ ಎಂಬವರು ಬಿಹಾರ ಸರ್ಕಾರಕ್ಕೆ ಸಲ್ಲಿಸಿದ ವಿಶ್ವವಿದ್ಯಾಲಯ ತನಿಖಾ ವರದಿಯಲ್ಲಿ ಚೆನ್ನಾಗಿ ವಿವರಿಸಿದ್ದಾರೆ. ಆ ವರದಿಯ ಮೂರು ಮುಖ್ಯಾಂಶಗಳು ಇಡೀ ದೇಶಕ್ಕೆ ಅನ್ವಯವಾಗುವುವು. ಅವುಗಳನ್ನು ಇಲ್ಲಿ ಸಂಕ್ಷಿಪ್ತವಾಗಿ ಪ್ರಸ್ತಾಪಿಸಬಹುದು. ಮೊದಲನೆಯದಾಗಿ, ಭಾರತದಲ್ಲಿ ಇತ್ತೀಚೆಗಿನ ವರ್ಷಗಳಲ್ಲಿ ಶಿಕ್ಷಣದ ಸಾರ್ವತ್ರೀಕರಣದ ಕೂಗು ಎದ್ದಿದೆ. ಈಗ ಇರುವ ಔಪಚಾರಿಕ ಶಿಕ್ಷಣ ಸಂಸ್ಥೆಗಳು ವಿಪರೀತವಾಗಿ ಹೆಚ್ಚುತ್ತಿರುವ ಶೈಕ್ಷಣಿಕ ಬೇಡಿಕೆಗಳನ್ನು ಪೂರೈಸುವ ಸ್ಥಿತಿಯಲ್ಲಿಲ್ಲ. ಇನ್ನೊಂದಿಷ್ಟು ಶಾಲೆಕಾಲೇಜುಗಳನ್ನು ತೆರೆಯುವುದರಿಂದಲೂ ಲಾಭವಿಲ್ಲ. ಮೇಲಾಗಿ ಯಾವುದೇ ಸರ್ಕಾರ ಈ ಕೆಲಸಕ್ಕೆ ಬೇಕಾಗುವಷ್ಟು ಸಂಪನ್ಮೂಲಗಳನ್ನು ಕ್ರೋಢೀಕರಿಸಲಾರದು. ಅಲ್ಲದೆ ಉಚ್ಚಶಿಕ್ಷಣದ ಗುಣಮಟ್ಟವನ್ನು ಕಾಪಾಡಿಕೊಂಡು ಬರುವುದು ಅಸಾಧ್ಯವಾದ ಮಾತು. ಎರಡನೆಯದಾಗಿ, ಬಹುದೀರ್ಘಕಾಲದಿಂದ ಶಿಕ್ಷಣವೆಂಬುದು ಅನುಕೂಲವಂತ ವರ್ಗಗಳ ಹಾಗೂ ಗಣ್ಯರ ಸೊತ್ತಾಗಿದೆ. ಹೀಗೆ ಗಣ್ಯರಿಗೆ ಮಾತ್ರ ಮೀಸಲಾದ ಶಿಕ್ಷಣವು ಪ್ರಜಾಪ್ರಭುತ್ವಕ್ಕೆ ಅನುಗುಣವಾಗಿರಲಾರದು. ಶಾಲಾಶಿಕ್ಷಣ ಮತ್ತು ಉಚ್ಚಶಿಕ್ಷಣ ಇವೆರಡನ್ನೂ ಪ್ರಜಾಪ್ರಭುತ್ವ ದಿಶೀಕರಣಗೊಳಿಸುವುದು ಈಗ ಅನಿವಾರ್ಯವಾಗಿದೆ. ಮೂರನೆಯದಾಗಿ, ವಿವಿಧ ಸ್ವಉದ್ಯೋಗ ಮತ್ತು ನೌಕರಿಗಳಲ್ಲಿ ನಿರತರಾದವರಿಗೆ, ಹಾಗೂ ನಿರಂತರವಾಗಿ ಶಿಕ್ಷಣವನ್ನು ಮುಂದುವರಿಸಬೇಕೆಂಬ ಜನರಿಗೆ

ಅನುವು ಮಾಡಿಕೊಡುವುದು ಸಮಾಜದ ಕರ್ತವ್ಯ. ಆದುದರಿಂದ ಈಗಿನ ಶಿಕ್ಷಣ ಪದ್ಧತಿಯನ್ನು ಆಮೂಲಾಗ್ರ ಸುಧಾರಿಸಬೇಕು. ತನಿಖಾ ವರದಿ ಹೇಳುವಂತೆ "ಕ್ರಾಂತಿಕಾರಿಯಾದ ನವನವೀನ ಮಾರ್ಗವನ್ನು ತುಳಿದು, ಅನೌಪಚಾರಿಕ ಶಿಕ್ಷಣ ಪದ್ಧತಿಯನ್ನು ಬಳಸಿ, ಆಧುನಿಕ ಶೈಕ್ಷಣಿಕ ತಂತ್ರಜ್ಞಾನವನ್ನೂ ಸ್ವ-ಶಿಕ್ಷಣವನ್ನೂ ಪ್ರೋತ್ಸಾಹಿಸುವುದು ಈಗ ನಮಗಿರುವ ಏಕೈಕ ಮಾರ್ಗ." ಇದೇ ಮುಕ್ತ ವಿಶ್ವವಿದ್ಯಾಲಯದ ಸವಾಲು ಹಾಗೂ ಸದವಕಾಶ.

ಒಟ್ಟಿನಲ್ಲಿ ದೂರಶಿಕ್ಷಣ ಪದ್ಧತಿಯನ್ನು ಬಳಸುವ ಮುಕ್ತ ವಿಶ್ವವಿದ್ಯಾಲಯಗಳಿಗೆ ಸ್ವಾಗತ ಮಾಡೋಣ. ಇವುಗಳಿಂದ ಹಲವು ವರ್ಗಗಳು ಲಾಭ ಪಡೆಯಬಹುದೆಂದು ಮತ್ತೊಮ್ಮೆ ನೆನಪಿಸೋಣ. ಇಂಥ ಫಲಾನುಭವಿಗಳಲ್ಲಿ ಸೇರಬಹುದಾದ ಕೆಲವು ವರ್ಗಗಳನ್ನು ಇಲ್ಲಿ ಪಟ್ಟಿಮಾಡಿದ್ದೇವೆ.

೧. ಆರ್ಥಿಕ ಮತ್ತಿತರ ಕಾರಣಗಳಿಂದ ವಿದ್ಯಾಭ್ಯಾಸ ನಿಲ್ಲಿಸಿ ಗಳಿಕೆಯ ಕೆಲಸದಲ್ಲಿ ತೊಡಗಿದ ಕೆಲ ಸಮಯದ ಮೇಲೆ ಮತ್ತೆ ವಿದ್ಯಾಭ್ಯಾಸ ಮುಂದುವರಿಸಬೇಕೆಂಬ ಜನರು;

೨. ಶಾಲೆ-ಕಾಲೇಜುಗಳಿಗೆ ಶರಣು ಹೊಡೆದು ಮುಂದೊಂದು ದಿನ ಪುನಃ ಓದಬೇಕೆಂದು ಮನಸ್ಸು ಮಾಡಿದ ಜನರು;

೩. ಶಾಲೆ-ಕಾಲೇಜುಗಳಿಲ್ಲದ ದೂರದೂರದ ಪ್ರದೇಶಗಳಲ್ಲಿ ವಾಸ ಮಾಡುವವರು;

೪. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದವರು;

೫. ಪ್ರವೇಶ ಸಂಖ್ಯೆಯ ಮೇಲೆ ನಿರ್ಬಂಧವಿರುವುದರಿಂದ ಶಾಲೆ ಕಾಲೇಜುಗಳಲ್ಲಿ ಪ್ರವೇಶ ಸಿಗದೇ ಇರುವವರು;

೬. ನಿವೃತ್ತಿ ಹೊಂದಿದ ಮೇಲೆ ಸಿಗುವ ಅಪಾರ ವಿರಾಮ ವೇಳೆಯಲ್ಲಿ ಏನಾದರೊಂದನ್ನು ಕಲಿಯುತ್ತ ವೇಳೆ ಕಳೆಯಬೇಕೆನ್ನುವವರು;

೭. ಗಳಿಸುತ್ತಲೇ ಕಲಿ ಎಂದು ನಂಬಿ, ಕಲಿಯುವುದನ್ನೂ ಗಳಿಸುವುದನ್ನೂ ಒಟ್ಟೊಟ್ಟಿಗೆ ಮಾಡುವವರು;

೮. ಕೇವಲ ಕುತೂಹಲ ಅಥವಾ ಆಸಕ್ತಿಗಾಗಿ ಒಂದು ಹೊಸ ವಿಷಯವನ್ನು ಕಲಿಯಬೇಕೆನ್ನುವವರು.

೯. ಅಂಗವಿಕಲರಾಗಿರುವುದರಿಂದ ಔಪಚಾರಿಕ ಸಂಸ್ಥೆಗಳಲ್ಲಿ ಸೇರಿಕೊಂಡು ಕಲಿಯಲು ಅಸಮರ್ಥರಾದವರು;

೧೦. ತಮ್ಮ ಔಪಚಾರಿಕ ಶಿಕ್ಷಣದ ಜೊತೆಗೆ ಇನ್ನೊಂದಿಷ್ಟು ಹೆಚ್ಚಿಗೆ, ಒಂದಿಷ್ಟು ಹೊಸತು ಕಲಿಯಬೇಕೆಂಬ ಹಂಬಲದಿಂದ ಈ ಕೋರ್ಸುಗಳನ್ನು ಸೇರುವವರು;ಮತ್ತು

೧೧. ಔಪಚಾರಿಕ ಶಿಕ್ಷಣ ಸಂಸ್ಥೆಗಳಿಗೆ ಸೇರಲು ಬೇಕಾದ ಕನಿಷ್ಠ ವಿದ್ಯಾರ್ಹತೆ ಪಡೆಯದವರು.

ಈ ದೀರ್ಘ ಪಟ್ಟಿಯಲ್ಲಿ ಪ್ರಾಥಮಿಕ ಶಿಕ್ಷಕರೂ ಇತರ ಎಲ್ಲ ಶಿಕ್ಷಕರೂ ಬರುತ್ತಾರೆಂದು ಬೇರೆ ಹೇಳಬೇಕಾಗಿಲ್ಲ.

vii. ಭಾರತಕ್ಕೊಂದು ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ

ಭಾರತದಲ್ಲಿ ಒಂದು ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಸ್ಥಾಪನೆಯಾದ ಬಗ್ಗೆ ಈ ಹಿಂದೆಯೇ ಪ್ರಸ್ತಾಪ ಮಾಡಿದ್ದೇವೆ. ಇದಕ್ಕೆ ಪ್ರೇರಣೆ ಸಿಕ್ಕಿದ್ದು ಇಂಗ್ಲಂಡಿನ ಮುಕ್ತ ವಿಶ್ವವಿದ್ಯಾಲಯ ಸ್ಥಾಪನೆಯಾದ ಮೇಲೆ. ೧೯೭೦ರಷ್ಟು ಹಿಂದೆಯೇ ಆಗಿನ ಶಿಕ್ಷಣಮಂತ್ರಿಗಳಾದ ಡಾ. ವಿ. ಕೆ. ಆರ್. ವಿ. ರಾವ್ ರಾಷ್ಟ್ರೀಯ ಮಟ್ಟದಲ್ಲಿ ಒಂದು ಮುಕ್ತ ವಿಶ್ವವಿದ್ಯಾಲಯ ಸ್ಥಾಪಿಸಬೇಕೆಂದು ಸೂಚಿಸಿದ್ದರು. ೧೯೭೪ರಲ್ಲಿ ಜಿ. ಪಾರ್ಥಸಾರಥಿಯವರು ತಮ್ಮ ವರದಿಯಲ್ಲಿ ಇದನ್ನು ಸಮರ್ಥಿಸಿದರು. ೧೯೮೨ರಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಅಧ್ಯಕ್ಷೆ ಡಾ. (ಶ್ರೀಮತಿ) ಮಾಧುರಿ ಶಹಾ ಕೇಂದ್ರ ವಿಶ್ವವಿದ್ಯಾಲಯಗಳ ಕಾರ್ಯವೈಖರಿಯನ್ನು ಸಮೀಕ್ಷಿಸುತ್ತ ಆದಷ್ಟು ತೀವ್ರವಾಗಿ ದೂರಶಿಕ್ಷಣದ ಮೂಲಕ ಇಡೀ ದೇಶದ ಜನತೆಗೆ ಉನ್ನತ ಶಿಕ್ಷಣದ ಸೌಲಭ್ಯ ಕಲ್ಪಿಸಲು ರಾಷ್ಟ್ರೀಯ ವಿಶ್ವವಿದ್ಯಾಲಯವೊಂದನ್ನು ಸ್ಥಾಪಿಸಲು ಆಗ್ರಹ ಪಡಿಸಿದರು. ಹೀಗೆ ಶಿಕ್ಷಣತಜ್ಞರು ಮೇಲಿಂದ ಮೇಲೆ ಒತ್ತಾಯ ತರುತ್ತಿದ್ದರೂ ಕೇಂದ್ರ ವಿಶ್ವವಿದ್ಯಾಲಯ ಸ್ಥಾಪಿಸಲು ಕಾಲ ಒದಗಿಬರಲಿಲ್ಲ. ಆದರೆ ರಾಜ್ಯ ಸರ್ಕಾರವೊಂದು ಈ ಕೆಲಸ ಮಾಡಿತು. ಆಂಧ್ರಪ್ರದೇಶ ಸರ್ಕಾರ ಆಗಸ್ಟ ೧೯೮೨ರಲ್ಲಿ ಆಂಧ್ರಪ್ರದೇಶ ಮುಕ್ತ ವಿಶ್ವವಿದ್ಯಾಲಯ ಸ್ಥಾಪಿಸುವ ಮೂಲಕ ಈ ವಿಷಯದಲ್ಲಿ ಅಗ್ರಗಾಮಿಯಾಯಿತು. ಇದಾದ ಮೂರು ವರ್ಷಗಳ ನಂತರ ೨೦ ಸೆಪ್ಟಂಬರ ೧೯೮೫ರಲ್ಲಿ ಸಂಸತ್ತಿನಲ್ಲಿ ರಾಷ್ಟ್ರೀಯ ವಿಶ್ವವಿದ್ಯಾಲಯ ಸ್ಥಾಪಿಸುವ ಮಸೂದೆ ಸ್ವೀಕೃತವಾಗಿ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಅಸ್ತಿತ್ವಕ್ಕೆ ಬಂತು. ರಾಷ್ಟ್ರಪತಿಗಳು ಈ ಹೊಸ ವಿಶ್ವವಿದ್ಯಾಲಯದ ಸಂದರ್ಶಕರು. ಬೇರೆ ಕುಲಾಧಿಪತಿಯಿಲ್ಲ. ಸಂದರ್ಶಕರಾದ ರಾಷ್ಟ್ರಪತಿಗಳ ಸಹಮತಿಯ ಮೇರೆಗೆ ಒಂದು ಆಯ್ಕೆಸಮಿತಿ ಕುಲಪತಿಯನ್ನು ನೇಮಿಸುವುದು. ಇಡೀ ದೇಶ ಈ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವುದು. ಹಣಕಾಸು ಮುಖ್ಯವಾಗಿ ಕೇಂದ್ರ ಸರ್ಕಾರದ ಅನುದಾನದ ರೂಪದಲ್ಲಿ ಬರುವುದು. ರಾಷ್ಟ್ರೀಯ ವಿಶ್ವವಿದ್ಯಾಲಯವೆಂದ ಮೇಲೆ ದೇಶದ ಎಲ್ಲ ಭಾಗಗಳ ಜನರಿಗೆ ಅನುಕೂಲವಾಗಲೆಂದು ವಿವಿಧ ಭಾಗಗಳಲ್ಲಿ ಅಧ್ಯಯನ ಕೇಂದ್ರಗಳನ್ನು ತೆರೆಯುವ ಅವಕಾಶವಿದೆ. ಸದ್ಯ (ಜನೆವರಿ ೧೯೯೬) ಸುಮಾರು ೨೪೪ ಅಧ್ಯಯನ ಕೇಂದ್ರಗಳು ಕೆಲಸ ಮಾಡುತ್ತಿವೆ. ಕರ್ನಾಟಕದಲ್ಲಿ ಈಗ ಬೆಂಗಳೂರು, ಮಂಗಳೂರು, ಧಾರವಾಡ, ಬೆಳಗಾವಿ, ಬಿಜಾಪುರ, ಬಳ್ಳಾರಿ, ಶಿವಮೊಗ್ಗ, ಮೈಸೂರು ಮತ್ತು ಗುಲಬರ್ಗಾಗಳಲ್ಲಿ ಇಂಥ ಕೇಂದ್ರಗಳಿವೆ. ಇತರ ಎಲ್ಲ ಜಿಲ್ಲಾ ಕೇಂದ್ರಗಳಲ್ಲೂ ಹಂತಹಂತವಾಗಿ ಅಧ್ಯಯನ ಕೇಂದ್ರಗಳನ್ನು ತೆರೆಯುವ ಯೋಜನೆಯಿದೆ. ಮಣಿಪಾಲದಲ್ಲಿ ಮಂಗಳೂರು ಕೇಂದ್ರಕ್ಕೆ

ಅಂಟಿಕೊಂಡ ಒಂದು ಸೆಟಲೈಟ್ ಅಧ್ಯಯನ ಕೇಂದ್ರವಿದೆ. ಇವುಗಳ ಉಸ್ತುವಾರಿ ಮಾಡಲು ಬೆಂಗಳೂರಿನಲ್ಲಿ ಪ್ರಾದೇಶಿಕ ಕಚೇರಿ ಇದೆ. ಇಂಥ ಒಟ್ಟು ೧೮ ಪ್ರಾದೇಶಿಕ ಕಚೇರಿಗಳು ಈಗ ದೇಶಾದ್ಯಂತ ಕೆಲಸಮಾಡುತ್ತಿವೆ.

ಈ ಎರಡು ಮುಕ್ತ ವಿಶ್ವವಿದ್ಯಾಲಯಗಳ ಸ್ಥಾಪನೆಯ ನಂತರ ಮೂರು ಮುಕ್ತ ವಿಶ್ವವಿದ್ಯಾಲಯಗಳು ಅಸ್ತಿತ್ವಕ್ಕೆ ಬಂದಿವೆ. ಒಂದು ರಾಜಸ್ತಾನದ ಕೋಟಾದಲ್ಲಿರುವ ಮುಕ್ತ ವಿಶ್ವವಿದ್ಯಾಲಯ, ಇನ್ನೊಂದು ಬಿಹಾರದಲ್ಲಿರುವ ನಾಲಂದಾ ಮುಕ್ತ ವಿಶ್ವವಿದ್ಯಾಲಯ, ಮೂರನೆಯದು ಮಹಾರಾಷ್ಟ್ರದಲ್ಲಿ ಅದೇ ವರ್ಷ ಸ್ಥಾಪಿತವಾದ ವೈ. ಬಿ. ಚವ್ಹಾಣ ಮುಕ್ತ ವಿಶ್ವವಿದ್ಯಾಲಯ. ಪಶ್ಚಿಮ ಬಂಗಾಳ, ಕೇರಳ, ಉತ್ತರಪ್ರದೇಶ, ಮಧ್ಯಪ್ರದೇಶ, ಗುಜರಾತ, ಕರ್ನಾಟಕ ಮತ್ತು ಓರಿಸ್ಸಾ ರಾಜ್ಯಗಳು ತಮ್ಮದೇ ಆದ ಮುಕ್ತ ವಿಶ್ವವಿದ್ಯಾಲಯಗಳ ಬಗ್ಗೆ ಯೋಜಿಸುತ್ತಿವೆ. ಕರ್ನಾಟಕವು ಈ ಬಗೆಗೆ ಒಂದು ವಿಧೇಯಕವನ್ನು ಪಾಸುಮಾಡಿ ಪ್ರಾರಂಭಿಕ ಸಿದ್ಧತೆಗಳನ್ನು ಮಾಡಿದೆ. ಕೆಲವು ರಾಜ್ಯಗಳು ಪ್ರತ್ಯೇಕ ವಿಶ್ವವಿದ್ಯಾಲಯಗಳನ್ನು ತೆರೆಯದೆ ರಾಷ್ಟ್ರೀಯ ವಿಶ್ವವಿದ್ಯಾಲಯದ ಅಭ್ಯಾಸ ಪತ್ರಿಕೆಯನ್ನೂ ಬೋಧನಾ ಸಾಮಗ್ರಿಯನ್ನೂ ಅಳವಡಿಸಿಕೊಳ್ಳುವ ಯೋಚನೆ ಮಾಡುತ್ತಿವೆ.

ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯವನ್ನು 'ಮುಕ್ತ' ವಿಶ್ವವಿದ್ಯಾಲಯವೆಂದು ಕರೆಯಲು ಕಾರಣಗಳಿವೆ. ಎಲ್ಲ ಭಾಗಗಳ, ಎಲ್ಲ ಜಾತಿವರ್ಗಗಳ, ಎಲ್ಲ ಶೈಕ್ಷಣಿಕ ಅರ್ಹತೆಗಳ ಜನರ ಆಯ್ಕೆಯ ವಿಷಯಗಳನ್ನು ಆಯ್ದುಕೊಳ್ಳುವ ಸ್ವಾತಂತ್ರ್ಯವಿದೆ. ಅನುಕೂಲವಾದ ಸಮಯದಲ್ಲಿ ಅಭ್ಯರ್ಥಿಗಳು ತಮ್ಮ ಅಧ್ಯಯನ ಪ್ರಾರಂಭಿಸಬಹುದು. ಹಾಜರಾತಿಯ ನಿರ್ಬಂಧವಿಲ್ಲ. ಇದರಿಂದಾಗಿ, ಮುಕ್ತ ವಿಶ್ವವಿದ್ಯಾಲಯವೆಂಬ ಮಾತು ಇದಕ್ಕೆ ಒಪ್ಪುತ್ತದೆ.

ಎಲ್ಲ ಮುಕ್ತ ವಿಶ್ವವಿದ್ಯಾಲಯಗಳಂತೆ ಇಲ್ಲಿ ದೂರಶಿಕ್ಷಣ ವಿಧಾನ ಬಳಸುತ್ತಾರೆ. ವಿವಿಧ ವಿಷಯಗಳಿಗೆ ಬೇರೆ ಬೇರೆ ಬೋಧನಾ ವಿಧಾನಗಳನ್ನು ಬಳಸಬೇಕಾಗುತ್ತದೆ. ಇವೆಲ್ಲ ಆಧುನಿಕ ತಂತ್ರಜ್ಞಾನದ ಕೊಡುಗೆಗಳು. ಸದ್ಯ ಮುದ್ರಿತ ಪಾಠಗಳು, ಆಡಿಯೊ ಮತ್ತು ವಿಡಿಯೊ ಕ್ಯಾಸೆಟ್ಟುಗಳ ರೂಪದಲ್ಲಿ ಪಾಠ ಸಾಮಗ್ರಿಗಳನ್ನು ವಿದ್ಯಾರ್ಥಿಗಳಿಗೆ ಒದಗಿಸುತ್ತಾರೆ. ಸದ್ಯೋಭವಿಷತ್ತಿನಲ್ಲಿ ವಿಶ್ವವಿದ್ಯಾಲಯ ಧನ ಸಹಾಯ ಆಯೋಗದ ಶೈಕ್ಷಣಿಕ ಪಾಠಗಳ ಮಾದರಿಯಲ್ಲಿ ದೂರದರ್ಶನದಲ್ಲಿ ಪಾಠಗಳನ್ನು ಕೊಡುವ ಯೋಜನೆಯಿದೆ. ಕಂಪ್ಯೂಟರ್ ಬಳಸುವ ಸಿದ್ಧತೆ ನಡೆದಿದೆ. ವಿಜ್ಞಾನ ಪಾಠಗಳಿಗಾಗಿ ಮತ್ತು ಪ್ರಯೋಗಗಳಿಗಾಗಿ ವಿದ್ಯಾರ್ಥಿಗಳಿಗೆ ಪ್ರಯೋಗಾಲಯ ಸಾಮಗ್ರಿಯ ಗಂಟುಗಳನ್ನು (ಎಕ್ಸಪೆರಿಮೆಂಟಲ್ ಕಿಟ್ಸ) ಕೊಡುವ ಸಿದ್ಧತೆಗಳೂ ಪೂರ್ಣಗೊಂಡಿವೆ. ವಿವಿಧ ಕೋರ್ಸುಗಳ ಬಗ್ಗೆ ಸ್ವ-ಬೋಧಿನಿ ಸಾಮಗ್ರಿಯನ್ನು ಸಿದ್ಧಪಡಿಸಿ ಪುಸ್ತಕಗಳ ರೂಪದಲ್ಲಿ ವಿದ್ಯಾರ್ಥಿಗಳಿಗೆ ಅಂಚೆಯ ಮೂಲಕ ಕಳುಹಿಸಿಕೊಡಲಾಗುತ್ತಿದೆ. ಈ ಪುಸ್ತಕಗಳನ್ನು ದೇಶದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕೆಲಸ ಮಾಡುವ ಪರಿಣತರು ಹಾಗೂ ವೃತ್ತಿ ಸಂಸ್ಥೆಗಳಲ್ಲಿ, ಸಂಘಟನೆಗಳಲ್ಲಿ ಕೆಲಸ ಮಾಡುವ ಅನುಭವಿಗಳಾದ ತಜ್ಞರು ಸಿದ್ಧಮಾಡುತ್ತಾರೆ. ದೂರಶಿಕ್ಷಣ ತಜ್ಞರು ಅವುಗಳನ್ನು

ಪರಿಶೀಲಿಸಿದ ನಂತರ ಅನೇಕ ಸಾವಿರ ಸಂಖ್ಯೆಯಲ್ಲಿ ಬಣ್ಣಬಣ್ಣಗಳಲ್ಲಿ ಮುದ್ರಿಸುತ್ತಾರೆ. ಸದ್ಯ ಇಂಗ್ಲಿಷ್ ಮತ್ತು ಹಿಂದಿ ಇವೆರಡೇ ಮಾಧ್ಯಮಗಳಲ್ಲಿ ಬೋಧನೆ ಮತ್ತು ಪರೀಕ್ಷೆ ನಡೆಯುವುದು. ಆಹಾರ ಮತ್ತು ಪೋಷಕಾಂಶಗಳ ಬಗ್ಗೆ ಇರುವ ಸರ್ಟಿಫಿಕೇಟ ಕೋರ್ಸ ಮಾತ್ರ ಇದಕ್ಕೆ ಅಪವಾದ. ಇಂಗ್ಲಿಷ್, ಹಿಂದಿ ಭಾಷೆಗಳಲ್ಲದೆ, ಅಸ್ಸಾಂ ಮತ್ತು ಗುಜರಾತಿ ಭಾಷೆಗಳನ್ನು ಇಲ್ಲಿ ಬಳಸಲಾಗುತ್ತದೆ. ಆಂಧ್ರಪ್ರದೇಶ ಮುಕ್ತ ವಿಶ್ವವಿದ್ಯಾಲಯ ಇಂಗ್ಲಿಷ್ ಮತ್ತು ತೆಲಗು ಭಾಷೆಗಳನ್ನು ಬಳಸುತ್ತದೆ. ಕಾಲಕ್ರಮೇಣ ಸಂಬಂಧಪಟ್ಟ ರಾಜ್ಯ ಸರ್ಕಾರಗಳ ಸಹಯೋಗದೊಂದಿಗೆ ಇತರ ಭಾಷೆಗಳಲ್ಲಿ ಪಾಠಗಳನ್ನು ತಯಾರಿಸುವ ಯೋಜನೆಯಿದೆ. ಈ ವಿಶ್ವವಿದ್ಯಾಲಯವು ಸಂಸತ್ತಿನಿಂದ ಸ್ಥಾಪಿತವಾದ ವಿಶ್ವವಿದ್ಯಾಲಯವಾಗಿರುವುದರಿಂದ ಇದರ ಪದವಿ, ಡಿಪ್ಲೋಮಾ, ಸರ್ಟಿಫಿಕೇಟ ಕೋರ್ಸುಗಳಿಗೆ ದೇಶದ ಇತರ ವಿಶ್ವವಿದ್ಯಾಲಯಗಳಂತೆಯೇ ಮಾನ್ಯತೆ ಇದೆ.

ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯವು ಇಡೀ ರಾಷ್ಟ್ರದ ವ್ಯಾಪ್ತಿಯನ್ನು ಹೊಂದಿದ್ದು ಕಾಲಕ್ರಮೇಣ ಅನೇಕ ಲಕ್ಷ ವಿದ್ಯಾರ್ಥಿಗಳ ಹೊಣೆಯನ್ನು ಹೊರಬೇಕಾಗುತ್ತದೆ. ವಿವಿಧ ವಿಷಯಗಳಲ್ಲಿ ಬೋಧನೆ ನಡೆಸಬೇಕಾಗುತ್ತದೆ. ಹೀಗಾಗಿ ವಿದ್ಯಾರ್ಥಿಗಳ ಕೂಡ ನಿರಂತರವಾದ ಹಾಗೂ ಅರ್ಥಪೂರ್ಣವಾದ ಸಂಪರ್ಕಹೊಂದುವುದು ಕಷ್ಟದ ಕೆಲವಾಗುತ್ತದೆ. ಸ್ಥಳೀಯ ಅನುಕೂಲ ಮತ್ತು ಅನಾನುಕೂಲಗಳನ್ನು ಗಮನಿಸುವುದು ಅಸಾಧ್ಯವಾಗುತ್ತದೆ. ಅಲ್ಲದೆ ವಿದ್ಯಾರ್ಥಿಗಳು ಶೈಕ್ಷಣಿಕ ಸಲಹಾಕಾರರ ವೈಯಕ್ತಿಕ ಮಾರ್ಗದರ್ಶನ ಪಡೆಯುವುದು ಹೆಚ್ಚು ಕಡಿಮೆ ಅಸಂಭವವಾಗುತ್ತದೆ. ಇದನ್ನೆಲ್ಲ ಗಮನಿಸಿ ವಿಶ್ವವಿದ್ಯಾಲಯವು ದೇಶದ ನಾನಾ ಭಾಗಗಳಲ್ಲಿ ತನ್ನ ಅಧ್ಯಯನ ಕೇಂದ್ರಗಳನ್ನು ತೆರೆದಿದೆ. ಸದ್ಯ ಸುಮಾರು ೨೪೪ ಅಧ್ಯಯನ ಕೇಂದ್ರಗಳಿವೆ. ಪ್ರತಿಯೊಂದು ಕೇಂದ್ರದಲ್ಲಿ ಆ ಭಾಗದ ಕಾಲೇಜುಗಳಲ್ಲಿ ಅಥವಾ ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುವ ನುರಿತ ಅಧ್ಯಾಪಕರನ್ನು ಶೈಕ್ಷಣಿಕ ಸಲಹಾಕಾರರೆಂದು ನೇಮಕ ಮಾಡಿಕೊಂಡಿರುತ್ತಾರೆ. ಇವರಿಗೆ ಪ್ರಾರಂಭದಲ್ಲಿಯೇ ದೂರಶಿಕ್ಷಣದ ಬಗ್ಗೆ ದಿಶೀಕರಣ ಮಾಡಿರುತ್ತಾರಲ್ಲದೆ ಕಾಲಕಾಲಕ್ಕೆ ಪುನರ್ ದಿಶೀಕರಣ ಮಾಡಿರುತ್ತಾರೆ. ಅಂದರೆ ಮೇಲಿಂದ ಮೇಲೆ ತರಬೇತುಗೊಳಿಸುತ್ತಾರೆ. ಈ ಕೇಂದ್ರಗಳಲ್ಲಿ ಆಡಿಯೊ ವಿಡಿಯೊ ಕ್ಯಾಸೆಟ್ಟುಗಳನ್ನು ಬಳಸಿಕೊಳ್ಳುವ ಸೌಲಭ್ಯವಿದೆ. ಪ್ರತಿಯೊಂದು ಅಧ್ಯಯನ ಕೇಂದ್ರದಲ್ಲಿ ಒಂದು ಚಿಕ್ಕ ಗ್ರಂಥಾಲಯವನ್ನು ತೆರೆದಿರುತ್ತಾರೆ. ಅಲ್ಲದೆ, ನಿಗದಿತ ವೇಳಾಪಟ್ಟಿಯಂತೆ ರವಿವಾರ ಮತ್ತು ರಜಾದಿನಗಳಲ್ಲಿ ನುರಿತ ಅಧ್ಯಾಪಕರು ಕೇಂದ್ರಕ್ಕೆ ಬಂದು ಪಾಠಗಳ ಬಗ್ಗೆ ಮಾರ್ಗದರ್ಶನ ಮಾಡುವರು. ಇಂಥ ಸಲಹಾ ಸಭೆಗಳಲ್ಲಿ ಮಹಾವಿದ್ಯಾಲಯಗಳಲ್ಲಿರುವಂಥ ಉಪನ್ಯಾಸಗಳಿಗೆ ಅವಕಾಶವಿಲ್ಲ. ವಿದ್ಯಾರ್ಥಿಗಳು ಮಾರ್ಗದರ್ಶಕರೊಡನೆ ತಮ್ಮ ಶೈಕ್ಷಣಿಕ ಸಮಸ್ಯೆಗಳನ್ನು ಚರ್ಚಿಸುವರು. ಅವರ ಮನೆಪಾಠಗಳ (ಅಸೈನ್‌ಮೆಂಟ್) ಬಗ್ಗೆ ಸಲಹೆ ಸೂಚನೆ ಕೊಡುವರು. ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದಿಷ್ಟು ಮನೆಪಾಠಗಳನ್ನು ಬರೆದು ಕೊಡಬೇಕು. ಇವುಗಳನ್ನು ಈ ಸಲಹಾಕಾರರು ತಿದ್ದಿ ವಿದ್ಯಾರ್ಥಿಗಳಿಗೆ ಮರಳಿ ಕೊಡುವರು. ವಿದ್ಯಾರ್ಥಿಗಳು ಕೇಂದ್ರಕ್ಕೆ ಬಂದಿರದಿದ್ದರೆ ಅಂಚೆಮೂಲಕ ಮನೆಪಾಠಗಳನ್ನು ಅವರಿಗೆ ತಲುಪಿಸಲಾಗುವುದು. ಬೇರೆ

ಬೇರೆ ಕೋರ್ಸುಗಳಲ್ಲಿ ಈ ಮನೆಪಾಠಗಳಿಗೆ ೨೫% ಅಥವಾ ೩೦% ಗುಣಾಂಕಗಳನ್ನು ಕೊಡಲಾಗುತ್ತದೆ. ಉಳಿದ ೭೦-೭೫% ಗುಣಾಂಕಗಳನ್ನು ನಿರ್ಧರಿಸಲು ವರ್ಷದ ಕೊನೆಯಲ್ಲಿ (ಅಥವಾ ಕಡಿಮೆ ಅವಧಿಯ ಡಿಪ್ಲೊಮಾ ಇದ್ದರೆ ಕೋರ್ಸಿನ ಕೊನೆಯಲ್ಲಿ) ಲಿಖಿತ ಪರೀಕ್ಷೆ ಇದೆ.

ಸಾಂಪ್ರದಾಯಿಕ ವಿಶ್ವವಿದ್ಯಾಲಯದ ಕೋರ್ಸುಗಳಿಂದ ಭಿನ್ನವಾದ, ಆಧುನಿಕವಾದ ಹಾಗೂ ಸಾಮಾಜಿಕವಾಗಿ ಸಮಂಜಸವಾದ ಕೋರ್ಸುಗಳನ್ನು ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ರೂಪಿಸಿದೆ. ಈ ವಿಶ್ವವಿದ್ಯಾಲಯದ ಸ್ವ-ಬೋಧೆಯ ಸಾಮಗ್ರಿ ಅತ್ಯುನ್ನತ ಮಟ್ಟದ್ದೆಂದು ಈಗಾಗಲೇ ದೇಶವಿದೇಶಗಳಲ್ಲಿ ಮನ್ನಣೆ ಸಿಕ್ಕಿದೆ. ಉತ್ತಮ ಗುಣಮಟ್ಟದ ಶಿಕ್ಷಣ ಹೀಗೆ ದೇಶದ ಎಲ್ಲ ಭಾಗಗಳ ಜನರಿಗೆ, ಎಲ್ಲ ವರ್ಗಗಳಿಗೆ ಲಭ್ಯವಾಗಿದೆ. ಈಗಾಗಲೇ ಪ್ರಾರಂಭಗೊಂಡಿರುವ ಅಧ್ಯಯನ ಕಾರ್ಯಕ್ರಮಗಳ ಸಂಕ್ಷಿಪ್ತ ಪರಿಚಯ ಮಾಡಿಕೊಳ್ಳೋಣ.

ಇತರ ವಿಶ್ವವಿದ್ಯಾಲಯಗಳಂತೆ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಬಿ.ಎ. ಮತ್ತು ಬಿ.ಕಾಂ. ಪದವಿ ಕೋರ್ಸುಗಳನ್ನು ೧೯೮೮-೮೯ರಲ್ಲಿ ಪ್ರಾರಂಭಿಸಿದೆ. ಇದರಲ್ಲಿ ಹೊಸತೇನಿದೆ ಎಂದು ಕೇಳಬಹುದು. ನಿಜವಾಗಿಯೂ ಹೊಸತು ಇದೆ. ಇಲ್ಲಿಯ ಪದವಿ ಶಿಕ್ಷಣ ಇತರ ವಿಶ್ವದ್ಯಾಲಯಗಳಲ್ಲಿ ಇರುವಂತಿಲ್ಲ. ಔಪಚಾರಿಕ ಶಿಕ್ಷಣ ಪಡೆಯದಿರುವ ಎಲ್ಲ ಅಭ್ಯರ್ಥಿಗಳಿಗೆ ಒಂದು ಪ್ರವೇಶ ಪರೀಕ್ಷೆ ಸಾಮಾನ್ಯವಾಗಿ ಸಪ್ಟಂಬರ ತಿಂಗಳಲ್ಲಿ ನಡೆಯುವದು. ಔಪಚಾರಿಕ ಶಿಕ್ಷಣ ಪಡೆಯದ ಎಲ್ಲರಿಗೂ ಈ ಪರೀಕ್ಷೆ ಕಡ್ಡಾಯ. ಉತ್ತೀರ್ಣರಾದವರಿಗೆ ದೂರಶಿಕ್ಷಣ ವಿಧಾನದಿಂದ ೧೦ ತಿಂಗಳ ತರಬೇತಿ ನಂತರ ಬಿ.ಎ., ಬಿ.ಕಾಂ., ಪದವಿ ವರ್ಗಗಳಿಗೆ ಪ್ರವೇಶ ಕೊಡುವರು. ಪದವಿಯ ಮೊದಲವರ್ಷ ಕೆಲವು 'ಆಧಾರ' (ಫೌಂಡೇಶನ್) ಕೋರ್ಸುಗಳನ್ನು ಮುಗಿಸಬೇಕು. ಇಂಥ ವಿಷಯಗಳನ್ನು ಹಿಂದೆ ವಿಶ್ವವಿದ್ಯಾಲಯ ಧನಸಹಾಯ ಆಯೋಗ ಎಲ್ಲ ವಿಶ್ವವಿದ್ಯಾಲಯಗಳು ಪ್ರಾರಂಭಿಸಬೇಕೆಂದು ಒತ್ತಾಯ ತಂದಿದ್ದರೂ ಯಾರೂ ಆ ಶಿಫಾರಸ್ಸನ್ನು ಜಾರಿಗೆ ತಂದಿರಲಿಲ್ಲ. ಈಗ ರಾಷ್ಟ್ರೀಯ ವಿಶ್ವವಿದ್ಯಾಲಯ ಅದನ್ನು ಪೂರ್ಣವಾಗಿ ಜಾರಿಗೆ ತಂದಿದೆ. ವಿಜ್ಞಾನ ಮತ್ತು ತಂತ್ರಜ್ಞಾನದ ಒಂದು ಕೋರ್ಸು ಮತ್ತು ಮಾನವಿಕ ಹಾಗೂ ಸಮಾಜವಿಜ್ಞಾನಗಳ ಒಂದು ಕೋರ್ಸು ಹೀಗೆ ಎರಡು ಕಡ್ಡಾಯದ ಕೋರ್ಸುಗಳಿವೆ. ಒಬ್ಬ ಪ್ರಜ್ಞಾವಂತ ನಾಗರಿಕನು ಇವೆಲ್ಲ ವಿಷಯಗಳನ್ನು ತಿಳಿಯುವುದು ಅತ್ಯಾವಶ್ಯಕವೆಂದು ನಿರ್ಣಯಿಸಿ ಇದನ್ನು ಕಡ್ಡಾಯಗೊಳಿಸಲಾಗಿದೆ. ಇವಲ್ಲದೆ ಇಂಗ್ಲಿಷ್ ಮತ್ತು ಹಿಂದಿ ಅಥವಾ ಪ್ರಾದೇಶಿಕ ಭಾಷೆ ಕಡ್ಡಾಯ ವಿಷಯಗಳು. ಇವುಗಳಿಗೆ ಒಟ್ಟು ೨೪'ಕ್ರೆಡಿಟ್'ಗಳು. ಇಷ್ಟು ಕ್ರೆಡಿಟ್ ಗಳಿಸಿದ ಮೇಲೆ ತಲಾ ೮ ಕ್ರೆಡಿಟ್‌ಗಳಿರುವ ೬-೮ ಕೋರ್ಸುಗಳ ಐಚ್ಛಿಕ ವಿಷಯಗಳನ್ನು ಕಲಿಯಬೇಕು. ಕೊನೆಯ ವರ್ಷ ಐಚ್ಛಿಕ ವಿಷಯಗಳ ಜೊತೆಗೆ ೧೬ ಕ್ರೆಡಿಟ್‌ಗಳಿರುವ ಅನ್ವಯಿಕ ವಿಷಯಗಳಿವೆ. ಇವು ಐಚ್ಛಿಕ ವಿಷಯಗಳಿಗೆ ಸಂಬಂಧಿಸಿವೆ. ಉದಾಹರಣೆಗೆ, ಅರ್ಥಶಾಸ್ತ್ರ ಮತ್ತು ವಾಣಿಜ್ಯಶಾಸ್ತ್ರಗಳಿಗೆ ಸಂಬಂಧಿಸಿದಂತೆ ಬ್ಯಾಂಕಿಂಗ್, ಇನ್ಸೂರನ್ಸ ಮತ್ತಿತರ ವಿಷಯಗಳು; ಅರ್ಥಶಾಸ್ತ್ರ ಮತ್ತು ಸಮಾಜಶಾಸ್ತ್ರಗಳಿಗೆ

ಸಂಬಂಧಿಸಿದಂತೆ ಗ್ರಾಮಿಣ ಅಭಿವೃದ್ಧಿ, ಕಾರ್ಮಿಕ ಕಲ್ಯಾಣ ಇತ್ಯಾದಿ. ಪದವಿ ಗಳಿಸಲು ಒಟ್ಟು ೯೭ ಕ್ರೆಡಿಟ್ ಗಳಿಸಬೇಕು. ವಿದ್ಯಾರ್ಥಿಗಳು ಕೇವಲ ಸೈದ್ಧಾಂತಿಕ ವಿಷಯಗಳನ್ನು ಕಲಿತರೆ ಸಾಲದು, ಅವರು ಗಳಿಸಿದ ಜ್ಞಾನ ಅನ್ವಯವಾಗುವುದು ಮುಖ್ಯ ಎಂಬ ತತ್ವ ಇಲ್ಲಿದೆ. ೧೯೯೦ನೇ ವರ್ಷದಿಂದ ಬಿ. ಎಸ್‌ಸಿ. ಪದವಿವರ್ಗ ಪ್ರಾರಂಭವಾಗಿದೆ. ಸದ್ಯ ಈಶಾನ್ಯ ಭಾಗದ ಕೆಲವು ರಾಜ್ಯಗಳ ವಿದ್ಯಾರ್ಥಿಗಳಿಗೆ ದೇಶದ ಇತರ ಭಾಗಗಳಲ್ಲಿ ಆಯ್ದ ಕಡೆಗಳಲ್ಲೂ ಬಿ. ಎಸ್‌ಸಿ. ಪ್ರವೇಶ ಕೊಡುತ್ತಿದ್ದಾರೆ. ಪದವಿಗೆ ಸೇರಿಕೊಳ್ಳಲು ಪ್ರಾಶಸ್ತ್ಯ ಕೊಟ್ಟಿದ್ದಾರೆ. ಈ ಭಾಗಗಳಲ್ಲಿ ಕಾಲೇಜು ಶಿಕ್ಷಣ ದುಸ್ತರವಾಗಿರುವುದರಿಂದ ಇಲ್ಲಿಂದ ಪ್ರಾರಂಭ ಮಾಡಿದ್ದಾರೆ. ಪ್ರಯೋಗ ಯಶಸ್ವಿಯಾದರೆ ದೇಶದ ಇತರ ಭಾಗಗಳಿಗೆ ವಿಸ್ತರಿಸುವ ಆಲೋಚನೆ ಇದೆ. ದೂರಶಿಕ್ಷಣ ವಿಧಾನದಿಂದ ಅಭ್ಯಾಸಕ್ರಮದ ಎಲ್ಲ ವಿಷಯಗಳನ್ನು ಬೋಧಿಸುತ್ತಾರೆ. ಅನಿವಾರ್ಯವಾದ ಕೆಲವು ವಿಷಯಗಳ ಬಗ್ಗೆ ಪ್ರಯೋಗಶಾಲೆಯ ಬಳಕೆಯಾಗುವುದು. ಸದ್ಯ ಇರುವ ವಿಜ್ಞಾನ ಕಾಲೇಜುಗಳ ಪ್ರಯೋಗ ಶಾಲೆಗಳನ್ನು ಬಿಡುವಿನ ವೇಳೆಯಲ್ಲಿ ದೂರಶಿಕ್ಷಣದ ವಿದ್ಯಾರ್ಥಿಗಳಿಗಾಗಿ ಬಳಸಿಕೊಳ್ಳುತ್ತಾರೆ. ವಿಜ್ಞಾನ ವಿದ್ಯಾರ್ಥಿಗಳಿಗೂ ಬಿ. ಎ. ಬಿ.ಕಾಂ., ವಿದ್ಯಾಥಿಗಳಿಗಿರುವಂತೆ ಆಧಾರ(ಫೌಂಡೇಶನ್) ವಿಷಯಗಳು, ಐಚ್ಛಿಕ ವಿಷಯಗಳು ಮತ್ತು ಅನ್ವಯಿಕ ವಿಷಯಗಳು ಇರುತ್ತವೆ.

ಈ ವಿಶ್ವವಿದ್ಯಾಲಯದಲ್ಲಿ ಪ್ರಾರಂಭದ ವರ್ಷದಿಂದಲೂ ಮ್ಯಾನೇಜಮೆಂಟ ವಿಷಯ ಬೋಧಿಸಲಾಗುತ್ತಿದೆ. ಇದು ಸರ್ವರೀತಿಯಿಂದಲೂ ಪ್ರತಿಷ್ಠೆಯ ವಿಷಯವಾಗಿ ಬೆಳೆದಿದೆ. ಸಂಘ ಸಂಸ್ಥೆ, ಕಾರ್ಖಾನೆಗಳಲ್ಲಿ ಮೇಲ್ವಿಚಾರಣೆಯ ಹೊಣೆಹೊತ್ತವರಿಗಾಗಿ ಇದು ರೂಪುಗೊಂಡಿದೆ. ಪದವೀಧರರಾದರೆ ಅವರಿಗೆ ೩ ವರ್ಷದ ಅನುಭವವಿರಬೇಕು, ಪದವೀಧರರಲ್ಲದಿದ್ದರೆ ೬ ವರ್ಷದ ಅನುಭವವಿರಬೇಕೆಂಬುದು ಪ್ರವೇಶದ ಕನಿಷ್ಠ ಅರ್ಹತೆ. ಮೊದಲನೆಯ ವರ್ಷದ ಡಿಪ್ಲೊಮಾ ಮುಗಿಸಿದ ಮೇಲೆ ಒಂದರ ನಂತರ ಒಂದಾಗಿ ಒಟ್ಟು ನಾಲ್ಕು ಮೊಡ್ಯೂಲು(ಭಾಗ)ಗಳನ್ನು ಮುಗಿಸಿದರೆ ಮಾಸ್ಟರ್ ಪದವಿ ಸಿಗುತ್ತದೆ. ೧೯೮೯-೯೦ರಿಂದ ಇನ್ನೊಂದು ಮುಖ್ಯ ಶೈಕ್ಷಣಿಕ ಕಾರ್ಯಕ್ರಮ ಪ್ರಾರಂಭವಾಗಿದೆ. ಇದು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ. ತರಬೇತಿ ಹೊಂದಿದ ಗ್ರಂಥ ಪಾಲಕರ ಕೊರತೆ ಇರುವುದನ್ನು ಮನಗಂಡು ಇದನ್ನು ಪ್ರಾರಂಭಿಸಿದ್ದಾರೆ. ಅಭ್ಯರ್ಥಿಗಳು ಪದವೀಧರರಿದ್ದು ಕನಿಷ್ಠ ಎರಡು ವರ್ಷಗಳ ಕಾಲ ಗ್ರಂಥಾಲಯದಲ್ಲಿ ದುಡಿದವರಿರಬೇಕು. ವೃತ್ತಿನಿರತರು ತಮ್ಮ ಅರ್ಹತೆಯನ್ನು ಉತ್ತಮಗೊಳಿಸಿಕೊಳ್ಳಲು ಈ ವಿಜ್ಞಾನ ಸಹಾಯಕವಾಗಿದೆ.

ದೂರಶಿಕ್ಷಣ ಪದ್ಧತಿಯನ್ನು ಪರಿಚಯ ಮಾಡಿಕೊಡುವ ಒಂದು ಡಿಪ್ಲೊಮಾ ಕಾರ್ಯಕ್ರಮವಿದೆ. ಅದು ಒಂದು ವರ್ಷ ಅವಧಿಯದು. ಮುಂಬರುವ ವರ್ಷಗಳಲ್ಲಿ ದೂರಶಿಕ್ಷಣ ಬಹಳ ಮಹತ್ವ ಪಡೆಯುತ್ತದೆ ಎಂಬುದನ್ನು ಗ್ರಹಿಸಿ ಅದನ್ನು ಪ್ರಾರಂಭಿಸಲಾಗಿದೆ. ಸ್ನಾತಕೋತ್ತರ ಪದವಿ ಅಥವಾ ವೈದ್ಯ, ಇಂಜಿನೀಯರಿಂಗ್ ಅಥವಾ ಕಾಯ್ದೆ ಮುಂತಾದ ವೃತ್ತಿಪರ ಪದವಿಗಳನ್ನು ಪಡೆದವರು ಸೇರಿಕೊಳ್ಳಬಹುದು. ಇಂಗ್ಲಿಷ್ ಭಾಷೆಯಲ್ಲಿ ಸೃಜನಾತ್ಮಕ ಬರವಣಿಗೆ ಎಂಬ ಒಂದು ವಿಶೇಷ ಡಿಪ್ಲೊಮಾ ಅಧ್ಯಯನವನ್ನು ಪ್ರಾರಂಭಿಸಲಾಗಿದೆ. ಆಹಾರ ಮತ್ತು ಪೋಷಕಾಂಶಗಳನ್ನು ಕುರಿತ ಸರ್ಟಿಫಿಕೇಟ್

ಕಾರ್ಯಕ್ರಮ ಕೂಡ ಪ್ರಾರಂಭವಾಗಿದೆ. ಇನ್ನೊಂದು ಉಪಯುಕ್ತ ಕಾರ್ಯಕ್ರಮವೆಂದರೆ ಗ್ರಾಮೀಣ ಅಭಿವೃದ್ಧಿ ಕೋರ್ಸು. ಆದರೆ ಸದ್ಯ ಸಾರ್ವಜನಿಕರಿಗೆ ಮುಕ್ತವಿಲ್ಲ. ಸರ್ಕಾರವೇ ಆಯ್ಕೆಮಾಡಿ ಕಳುಹಿಸುವ ಅಧಿಕಾರಿಗಳಿಗಾಗಿ ಇದನ್ನು ರೂಪಿಸಲಾಗಿದೆ.

ಇತ್ತೀಚಿನ ವರ್ಷಗಳಲ್ಲಿ ಇನ್ನೂ ಕೆಲವು ನವೀನ ಉಪಕ್ರಮಗಳು ಬಂದಿವೆ. ಹಿಂದೀ ಭಾಷಿಕರಿಗಾಗಿ ಸೃಜನಾತ್ಮಕ ಬರವಣಿಗೆಯ ಕಲೆಯನ್ನು ಕಲಿಸಿಕೊಡುವ ಡಿಪ್ಲೊಮಾ ವರ್ಗ ಪ್ರಾರಂಭವಾಗಿದೆ. ಈಗಿರುವ ಮ್ಯಾನೇಜಮೆಂಟ ಕೋರ್ಸಿನ ಮುಂದಿನ ಮೊಡ್ಯೂಲುಗಳು ಸಿದ್ಧವಾಗಿವೆ. ದೂರಶಿಕ್ಷಣಕ್ಕೆ ಸಂಬಂಧಿಸಿದಂತೆ ಉನ್ನತ ಶಿಕ್ಷಣಕ್ಕೆ ಕಾರ್ಯಕ್ರಮ ರೂಪುಗೊಂಡಿದೆ. ಕಚೇರಿ ನಿರ್ವಹಣೆಯಲ್ಲಿ ಕಂಪ್ಯೂಟರ್ ಬಳಕೆ, ಉನ್ನತ ಶಿಕ್ಷಣ, ಶಿಶುಸಂರಕ್ಷಣೆ ಮತ್ತು ಪೌಷ್ಟಿಕಾಹಾರ, ಜಲಸಂಪನ್ಮೂಲ ನಿರ್ವಹಣೆ, ಶಕ್ತಿ ಸಂಪನ್ಮೂಲ ರಕ್ಷಣೆ ಮತ್ತು ನಿರ್ವಹಣೆ ಮುಂತಾದ ಆಧುನಿಕ ಮತ್ತು ಉಪಯುಕ್ತ ವಿಷಯಗಳಲ್ಲಿ ಡಿಪ್ಲೊಮಾ ಪ್ರಾರಂಭವಾಗಿದೆ. ಜಲಸಂಪನ್ಮೂಲ ನಿರ್ವಹಣೆ ವಿಷಯದಲ್ಲಿ ಬಿ.ಟೆಕ್ ಪದವಿ ಶಿಕ್ಷಣಕ್ಕೆ ಈಗ ಅವಕಾಶವಿದೆ. ಪತ್ರಿಕೋದ್ಯಮ ಮತ್ತು ಸಮೂಹ ಸಂಪರ್ಕ ಡಿಪ್ಲೊಮಾ, ಪ್ರವಾಸೋದ್ಯಮ ಅಧ್ಯಯನ ಡಿಪ್ಲೊಮಾ, ನರ್ಸಿಂಗ್ ಪದವಿ ಕೋರ್ಸು, ಗ್ರಂಥಾಲಯ ವಿಜ್ಞಾನ ಸ್ನಾತಕೋತ್ತರ ಪದವಿ, ಮಾರುಕಟ್ಟೆ ನಿರ್ವಹಣೆ - ಹೀಗೆ ಸದ್ಯ ಒಟ್ಟು ೩೨ ಕಾರ್ಯಕ್ರಮಗಳನ್ನು ಈ ವಿಶ್ವವಿದ್ಯಾಲಯ ನಡೆಸುತ್ತಿದೆ. ಇವೆಲ್ಲ ಕೋರ್ಸುಗಳನ್ನು ಪ್ರಾರಂಭಿಸಲು ಈಗಿರುವ ವಿಶ್ವವಿದ್ಯಾಲಯಗಳೂ ತಾಂತ್ರಿಕ ಸಂಸ್ಥೆಗಳೂ ಹಿಂದೇಟು ಹಾಕುತ್ತಿರುವಾಗ ದೂರಶಿಕ್ಷಣ ವಿಧಾನಗಳನ್ನು ಬಳಸಿ ಇವುಗಳನ್ನು ಬೋಧಿಸಲು ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ ಮುಂದೆ ಬಂದಿರುವುದು ಧೈರ್ಯದ ಮಾತೇ ಸರಿ! ಜನರಿಗೆ ಅಗತ್ಯವಿರುವ ಯಾವ ಹೊಸ ಕೋರ್ಸನ್ನು ಬೇಕಾದರೂ ತಾನು ರೂಪಿಸಿ ನಿರ್ವಹಿಸುವುದಾಗಿ ಈ ವಿಶ್ವವಿದ್ಯಾಲಯ ಸವಾಲು ಹಾಕಿದೆ.

ಈ ಸಂದರ್ಭದಲ್ಲಿ ಇಂದಿರಾಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯದ ಇನ್ನೊಂದು ಮಹತ್ವದ ಹೊಣೆಗಾರಿಕೆಯನ್ನು ನಾವಿಲ್ಲಿ ಸಂಕ್ಷಿಪ್ತವಾಗಿಯಾದರೂ ಪ್ರಸ್ತಾಪ ಮಾಡುವುದು ಉಚಿತ. ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ದೂರಶಿಕ್ಷಣಕ್ಕೆ ಬಹಳ ಮಹತ್ವ ಕೊಡಲಾಗಿದೆ. ದೂರಶಿಕ್ಷಣದ ಮಾದರಿ ಸಂಸ್ಥೆಯೆನ್ನಬಹುದಾದ ಇಂದಿರಾಗಾಂಧಿ ಮುಕ್ತ ವಿಶ್ವವಿದ್ಯಾಲಯವು ಕೆಲವು ಕಾರ್ಯಕ್ರಮಗಳನ್ನು ರೂಪಿಸಿ ಅವುಗಳನ್ನು ನಿರ್ವಹಿಸಿದರೆ ಮುಗಿಯಲಿಲ್ಲ. ಜೊತೆಜೊತೆಗೆ ಅದು ಇಂಥ ಇತರ ಸಂಸ್ಥೆಗಳ ಉಸ್ತುವಾರಿ ಮಾಡುವ ಹೊಣೆಯನ್ನೂ ಹೊಂದಿದೆ. ಇತರ ಸ್ಥಾಪಿತ ವಿಶ್ವವಿದ್ಯಾಲಯಗಳು ನೀಡುವ ಅಂಚೆತೆರಪಿನ ಶಿಕ್ಷಣ ಕಾರ್ಯಕ್ರಮಗಳನ್ನೂ ಮುಕ್ತ ವಿಶ್ವವಿದ್ಯಾಲಯದ ಕೋರ್ಸುಗಳನ್ನೂ ಅದು ಮೇಲ್ವಿಚಾರಣೆ ಮಾಡುತ್ತದೆ. ಅವುಗಳ ಬೋಧನೆಯ ಗುಣಮಟ್ಟ, ಮೌಲ್ಯಮಾಪನ ಮತ್ತು ಸಂಶೋಧನೆಗಳ ಮೇಲೆ ನಿಗಾ ಇಡುವ ಹೊಣೆಗಾರಿಕೆಯೂ ರಾಷ್ಟ್ರೀಯ ವಿಶ್ವವಿದ್ಯಾಲಯಕ್ಕೆ ಸೇರಿದ್ದು. ವಿಶ್ವವಿದ್ಯಾಲಯ ಧನಸಹಾಯ ಆಯೋಗದ ಮಾದರಿಯಲ್ಲಿ ದೂರಶಿಕ್ಷಣ ಸಂಸ್ಥೆಗಳಿಗೆ ಧನಸಹಾಯವನ್ನು ನಿರ್ಧರಿಸುವ ಕಾರ್ಯವನ್ನು ಅದಕ್ಕೆ ಒಪ್ಪಿಸಲಾಗಿದೆ. ದೂರಶಿಕ್ಷಣ ಸಂಸ್ಥೆಗಳು ಉತ್ತಮ ಗುಣಮಟ್ಟವನ್ನು ಕಾಯ್ದುಕೊಂಡು

ಹೋಗುವಂತೆ ಮಾಡುವುದು ಇನ್ನೊಂದು ಮಹತ್ವದ ಹೊಣೆಗಾರಿಕೆ. ವಿವಿಧ ಶೈಕ್ಷಣಿಕ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಮತ್ತೊಂದು ಹೊಣೆ. ಒಟ್ಟಿನಲ್ಲಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯವು ಇತರರಿಗೆ ಮಾರ್ಗದರ್ಶಕವಾದ ಮಾದರಿ ಸಂಸ್ಥೆಯಾಗಿ ಬೆಳೆಯಬೇಕಾಗಿದೆ. ೧೯೮೭ರಲ್ಲಿ ಕೇವಲ ೪೩೮೧ ವಿದ್ಯಾರ್ಥಿ ಪ್ರವೇಶ ಸಂಖ್ಯೆ ಹೊಂದಿದ್ದ ಈ ವಿಶ್ವವಿದ್ಯಾಲಯ ೧೯೯೫ರ ಹೊತ್ತಿಗೆ ೯೧೩೯೮ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕೊಟ್ಟಿತ್ತು. ಈ ಸಂಖ್ಯೆ ೯೬-೯೭ರಲ್ಲಿ ಒಂದು ಲಕ್ಷವನ್ನು ಮೀರುವ ಸಂಭವವಿದೆ. ಪ್ರವೇಶ ಸಂಖ್ಯೆ ಬೆಳೆದಂತೆ ಸಹಜವಾಗಿ ಬೆಳೆಯುವ ಸಮಸ್ಯೆಗಳನ್ನು ಹೇಗೆ ನಿಭಾಯಿಸಲಾಗುತ್ತದೋ ಕಾದು ನೋಡಬೇಕು.

* * *

ಕುವೆಂಪು ವಿಚಾರ ಸಾಹಿತ್ಯ

ಡಾ. ರಾಗೌ

ಕುವೆಂಪು ಅವರು ತಮ್ಮ ಸಾಹಿತ್ಯದ ಉದ್ದೇಶದ ಬಗ್ಗೆ ಮಾತನಾಡುತ್ತಾ" ನನ್ನ ಸಾಹಿತ್ಯವೆಲ್ಲ ಸಾಮಾಜಿಕ ಅಸ್ತ್ರವಾಗಿಯೂ ಉದ್ದಿಷ್ಟವಾದದ್ದು"[1] ಎಂದು ಹೇಳಿದ್ದಾರೆ. ತಮ್ಮ ಸಾಹಿತ್ಯ 'Social weapon' ಆಗಿ ಕೂಡ ಕೆಲಸಮಾಡುತ್ತದೆ ಎಂಬ ಅವರ ಈ ದೃಷ್ಟಿಯನ್ನು ಅವರ ಸೃಜನಶೀಲ ಸಾಹಿತ್ಯವೂ ನಡೆಸಿಕೊಟ್ಟಿದೆ. ಅದಕ್ಕಿಂತಲೂ ಹೆಚ್ಚಾಗಿ ನೇರವಾಗಿ ಮತ್ತು ಪ್ರಖರವಾಗಿ ಅವರ ' ವಿಚಾರ ಸಾಹಿತ್ಯ' ತೋರಿಸಿಕೊಟ್ಟಿದೆ. ಈ ವಿಚಾರ ಸಾಹಿತ್ಯದ ವ್ಯಾಪ್ತಿಗೆ ' ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ', 'ಷಷ್ಟಿ ನಮನ', ಮನುಜಮತ ವಿಶ್ವಪಥ, ' ವಿಚಾರಕ್ರಾಂತಿ', ' ಜನತಾಪ್ರಜ್ಞೆ ' ಮತ್ತು' ವೈಚಾರಿಕ ಜಾಗೃತಿ', 'ವಿಚಾರ ಕ್ರಾಂತಿಗೆ ಆಹ್ವಾನ' ಕೃತಿಗಳು ಸೇರುತ್ತವೆ. 'ವಿಚಾರಕ್ರಾಂತಿ' ಪುಸ್ತಕದಲ್ಲಿರುವ'ವಿಚಾರ ಕ್ರಾಂತಿಗೆ ಆಹ್ವಾನ' ಮತ್ತು 'ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ' ಎಂಬ ಲೇಖನಗಳು ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ', 'ವಿಚಾರ ಕ್ರಾಂತಿಗೆ ಆಹ್ವಾನ' ಪುಸ್ತಕದಲ್ಲೂ ಸೇರ್ಪಡೆಯಾಗಿವೆ. ನಾಡಿನ ಬೇರೆ ಬೇರೆ ಕಡೆ ಬೇರೆ ಬೇರೆ ಸಂದರ್ಭಗಳಲ್ಲಿ ಮಾಡಿದ ಭಾಷಣಗಳು ಇವಾಗಿರುವುದರಿಂದ, ಕೆಲವು ವಿಚಾರಗಳು ಮತ್ತೆ ಮತ್ತೆ ಕಾಣಿಸಿಕೊಂಡಿವೆ. ಇಂಥವು ಎಲ್ಲಕಡೆಯೂ ಹೇಳಲೇಬೇಕಾಗಿರುವ ಗಾಢವಾದ ವೈಚಾರಿಕ ಪ್ರಜ್ಞೆಯಿಂದ ಮೂಡಿದವು. ರುಜೆ ಹಿಡಿದ ಸಮಾಜವನ್ನು ಗುಣಪಡಿಸಬೇಕೆಂಬ ಕಾಳಜಿಯಿಂದ ಕೂಡಿದವು. ವಿಚಾರ ಸಾಹಿತ್ಯದ ಪುಸ್ತಕಗಳಲ್ಲಿ ಸೇರಿರುವ ಸಾಹಿತ್ಯ ವಿಮರ್ಶೆ ಮತ್ತು ಜೀವನ ಚರಿತ್ರೆಗೆ ಸಂಬಂಧಿಸಿದ ಬರಹಗಳನ್ನು ಹೊರತುಪಡಿಸಿ ಪ್ರಸ್ತುತ ಪರಿಶೀಲನೆಯಿದೆ.

ಪ್ರತಿಯೊಂದು ಸಂದರ್ಭದಲ್ಲೂ ಕುವೆಂಪು ಸಮಸ್ಯೆಯ ಮೂಲಕ್ಕೆ ಹೋಗುವ ಪ್ರಯತ್ನ ಮಾಡುತ್ತಾರೆ. ಹಾಗೆಯೇ ಮುಖವಾಡಗಳನ್ನು ತೆಗೆದು ನಿಜವಾದ ಮುಖಗಳ ಅನಾವರಣ ಮಾಡುತ್ತಾರೆ. ಹೀಗೆ ಮಾಡುವಾಗ ಅವರೆಲ್ಲೂ ಉದ್ವೇಗಕ್ಕೆ ಒಳಗಾಗುವುದಿಲ್ಲ; ಬದಲಾಗಿ, ಅಲಿಪ್ತವಾಗಿ ಆಲೋಚಿಸುತ್ತಾರೆ. ಅವರ ಭಾಷಣಗಳೆಲ್ಲ ತೀಕ್ಷ್ಣ ಸ್ವರೂಪದವು ಎಂಬುದು ನಿಜ ಆದರೆ, ಅರ್ಥಪೂರ್ಣವಾದವು ಎಂಬುದು ಅಷ್ಟೇ ನಿಜ. ಇಲ್ಲಿ

ವ್ಯಕ್ತವಾಗಿರುವ ವಿಚಾರಗಳು ಸಕಾಲಿಕ ಮಾತ್ರವಲ್ಲ, ಸಾರ್ವಕಾಲಿಕ ಕೂಡ. ಎಲ್ಲ ಸಂದರ್ಭಗಳಲ್ಲೂ ಕುವೆಂಪು ಅವರ ಜೀವನ ಶ್ರದ್ಧೆ, ಮೌಲ್ಯನಿಷ್ಠೆ ಮತ್ತು ಪ್ರಾಮಾಣಿಕ ನಿಲುವುಗಳನ್ನು ಕಾಣಬಹುದು. ಅವರು ಯಾವ ವಿಚಾರವನ್ನೆ ಹೇಳಲಿ ಅದನ್ನು ಅತ್ಯಂತ ಆಕರ್ಷಕವಾಗಿ ಪರಿಣಾಮಕಾರಿಯಾಗಿ ಹೇಳಬಲ್ಲರು. ಅವರೇ ಒಂದು ಕಡೆ ಹೇಳುವ" ಮಾತು ನನ್ನ ಕಲೆ" ಎಂಬುದಕ್ಕೆ ವಿಚಾರ ಸಾಹಿತ್ಯವೂ ನಿದರ್ಶನವಾಗುತ್ತದೆ.[2]

ಕುವೆಂಪು ಅವರ ವಿಚಾರ ಸಾಹಿತ್ಯದಲ್ಲಿ ವಿದ್ಯಾರ್ಥಿಗಳನ್ನು ಯುವಜನರನ್ನೂ ಕುರಿತ ಭಾಷಣಗಳದು ಸಿಂಹಪಾತ್ರ. ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎಂಬ ಇಡೀ ಪುಸ್ತಕ ಇದಕ್ಕೆ ಮೀಸಲು, ಉಳಿದ ಕೃತಿಗಳಲ್ಲೂ ಈ ಕುರಿತ ಪ್ರಸ್ತಾಪಗಳಿವೆ. ಈ ಎಲ್ಲ ಭಾಷಣಗಳ ಮುಖ್ಯ ಗುರಿ ವೈಜ್ಞಾನಿಕ ದೃಷ್ಟಿ ಮತ್ತು ವೈಚಾರಿಕ ಬುದ್ಧಿಯನ್ನು ಪ್ರಚೋದಿಸುವುದು. ಯುವಜನರು ಮತೀಯ ಮತ್ತು ಸಾಮಾಜಿಕ ಅಂಧಶ್ರದ್ಧೆಗಳಿಂದ ಪಾರಾಗದಿದ್ದರೆ ಉದ್ಧಾರ ಸಾಧ್ಯವಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತಾರೆ. ವರ್ಣಾಶ್ರಮ, ಜಾತಿಪದ್ಧತಿ, ಅಸ್ಪೃಶ್ಯತೆಗಳಂತಹ ಸಾಮಾಜಿಕ ಅನ್ಯಾಯಗಳ ವಿರುದ್ಧ ಪ್ರತಿಭಟನಾತ್ಮಕ ಧೋರಣೆಯನ್ನು ಬೆಳಸಿಕೊಳ್ಳಲು ಕುವೆಂಪು ಕರೆಕೊಡುತ್ತಾರೆ. ಸಂಸ್ಕೃತಿಯ ಹೆಸರಿನಲ್ಲಿ ನಡೆಯುತ್ತಿರುವ ಅವಿವೇಕದ ಅತಿರೇಕಗಳನ್ನು ಹತ್ತಿಕ್ಕಬೇಕಾಗಿರುವ ಅಗತ್ಯವನ್ನು ತಮ್ಮೆಲ್ಲ ಭಾಷಣಗಳಲ್ಲಿ ಪ್ರತಿಪಾದಿಸದೆ ಬಿಡುವುದಿಲ್ಲ. ವಿದ್ಯಾರ್ಥಿಗಳಿಗೆ ಈಗ ಇರುವ ಪರ್ಯಾಯವೆಂದರೆ, ವಿಜ್ಞಾನ ಮತ್ತು ಆಧ್ಯಾತ್ಮಗಳೆರಡೇ ಎಂಬುದರ ಕಡೆಗೆ ಗಮನ ಸೆಳೆಯಲು ಕುವೆಂಪು ಮರೆಯುವುದಿಲ್ಲ.

'ನಿರಂಕುಶಮತಿ' ಪರಿಕಲ್ಪನೆಯನ್ನು ಕುವೆಂಪು ನಿಸ್ಸಂದಿಗ್ಧವಾಗಿ ವಿವರಿಸುತ್ತಾರೆ. ಅದು ಸಂಯಮಪೂರ್ಣ ಬುದ್ಧಿಸ್ವಾತಂತ್ರ್ಯವಾಗಿದ್ದು, ಆತ್ಮಶ್ರೀಗೆ ಸಂಬಂಧಿಸಿದ್ದೆಂದು ಅವರ ವ್ಯಾಖ್ಯಾನ. ಮರೆಗೆ ಅಂಕುಶಗಳು ಅತಿಯಾಗಿ ಹೋಗಿ ಜೀವನ ನಿಸ್ತೇಜವಾಗಿದೆ. ಆದಕಾರಣ ಮಾನವನ ಸರ್ವೋತ್ಕೃಷ್ಟ ಆಯುಧವಾದ ಮರೆಯೇ ಮನುಷ್ಯತ್ವದ ಹಕ್ಕು ಎಂದು ಪ್ರತಿಪಾದಿಸುತ್ತಾರೆ. ವಿಚಾರ ಸ್ವಾತಂತ್ರ್ಯದ ಮೂಲಕೇಂದ್ರವಾದ ಬುದ್ಧಿಯೇ ನಮ್ಮ ನಿಜವಾದ ಒರೆಗಲ್ಲಾಗಬೇಕೆಂದು ಇದರ ಅರ್ಥ. ಮತ್ತೂ ವಿವರಣೆ ಕೊಡುತ್ತ, "ನಮಗೆ ಬೇಕಾಗುವ ಧೀರ, ಸ್ವತಂತ್ರ, ಉದಾರ ಪ್ರತಿಭಾಪೂರ್ಣವಾದ ಬುದ್ಧಿಯನ್ನೇ ನಾನು 'ನಿರಂಕುಶಮತಿ' ಎಂದು ಕರೆದಿದ್ದೇನೆ"[3] ಎನ್ನುತ್ತಾರೆ. ಇದು ಫಲಿಸುವುದು ನಮ್ಮಲ್ಲಿನ ದಾಸ್ಯ ಬುದ್ಧಿ ತೊಲಗಿದಾಗ ಮಾತ್ರ. ಯಾವಾಗ ಸ್ವತಂತ್ರ ಸ್ವಾವಲಂಬನ ಜೀವನ ಸಾಧ್ಯವಾಗುತ್ತದೆಯೋ ಆಗ ಇದು ಸಿದ್ಧಿಸುತ್ತದೆ. ನಮಗಿಂದು ಬೇಕಾಗಿರುವುದು ಮತಿಗೌರವವೇ ಹೊರತು ಮತ ಗೌರವವಲ್ಲ. ಇದು ಅವರ ನಿಚ್ಚಳ ದೃಷ್ಟಿ. ವಿದ್ಯಾರ್ಥಿ ಜೀವನವನ್ನು ಅವನ ವಿದ್ಯಾರ್ಜನೆಯನ್ನೂ ತುಂಬುಗೌರವದಿಂದ ಪರಿಭಾವಿಸುತ್ತಾರೆ ಕುವೆಂಪು. ಇದಕ್ಕೆ "ವಿದ್ಯಾರ್ಥಿಯ ಜೀವನವೂ ಒಂದು ತಪಸ್ಸಾಧನೆ, ಪ್ರತಿಯೊಬ್ಬ ದಿಟವಾದ ವಿದ್ಯಾರ್ಥಿಯೂ ಒಬ್ಬ ಗೌರವ ತಪಸ್ವಿ"[4] ಎಂಬ ಮಾತೇ ನಿದರ್ಶನ. ವಿದ್ಯಾರ್ಥಿಗಳು ಅಲ್ಪತೃಪ್ತಿಗೆ ಆಸೆಪಡದೆ ವಿಶ್ವವಿಶಾಲತೆಯಲ್ಲಿ ರಸಯಾತ್ರಿಯಾಗಬೇಕೆಂಬುದೇ ಕವಿಯ ಉದ್ದೇಶ.

ವಿದ್ಯಾರ್ಥಿಗಳಿಗೆ ಆತ್ಮಶ್ರೀ ಏಕೆ ಎಂಬ ವಿಚಾರವನ್ನು ಎತ್ತಿಕೊಂಡು, ಅದು ಜೀವನದ ತುದಿಗೆ ಬರುವಂಥದೆಂಬ ಕೆಲವರ ಅಭಿಪ್ರಾಯವನ್ನು ನಿರಾಕರಿಸುತ್ತಾರೆ. ಆತ್ಮಶ್ರೀಯನ್ನು ಬದುಕಿನ ಮೊದಲಿಗೆ ವರ್ಗಾಯಿಸಿದರೆ ದೇಹಶ್ರೀ ಭಾವಶ್ರೀ ಬುದ್ಧಿಶ್ರೀಗಳಿಗೆ ಘಾತವಾಗುವುದಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತಾರೆ. "ವಿದ್ಯೆ ಆತ್ಮಶ್ರೀಯಿಂದ ಪ್ರದೀಪ್ತವಾದರೆ ಅದು ನಿಜವಾಗಿಯೂ ವಿದ್ಯೆಯಾಗುತ್ತದೆ, ಇಲ್ಲದಿದ್ದರೆ, ಅದು 'ಅವಿದ್ಯೆ' ಎನಿಸಿಕೊಳ್ಳುತ್ತದೆ"[5] ಎಂಬುದು ಕುವೆಂಪು ಅವರ ವಾದ. ಸಾಮಾನ್ಯ ವೈಷಯಿಕ ಜ್ಞಾನಕ್ಕಿಂತ ಆತ್ಮ ಜ್ಞಾನವೇ ಮಿಗಿಲೆಂಬ ಹಿನ್ನೆಲೆಯಲ್ಲಿ ಈ ಮಾತು ಬಂದಿದೆ. ಹಿಂದೆ ವಿದ್ಯಾರ್ಥಿಗೆ ಸಂಬಂಧಿಸಿದಂತೆ 'ತಪಸ್ಸು' ,'ತಪಸ್ವಿ' ಎಂಬ ಪದಗಳನ್ನು ಬಳಸಿರುವುದು ಇದಕ್ಕಾಗಿಯೇ. ಯುವಜನರಲ್ಲಿ ವೈಚಾರಿಕ ಪ್ರಜ್ಞೆಯನ್ನು ಬೆಳೆಸಬೇಕೆಂಬುದೇ ಈ ಎಲ್ಲ ಭಾಷಣಗಳ ಗುರಿ. ಈ ಪ್ರಬಂಧಗಳನ್ನು ಓದುತ್ತಾ ಹೋದ ಹಾಗೆ ದೃಢ ನಿಲುವಿನ ಧೀರ ವ್ಯಕ್ತಿತ್ವದ ಆಕೃತಿಯೊಂದು ನಮ್ಮ ಕಣ್ಣು ಮುಂದೆ ಹಾದು ಹೋಗುತ್ತದೆ.

ವಿದ್ಯೆಯ ಮಹತ್ವವನ್ನು, ಅದರಲ್ಲಿ ವಿಶ್ವವಿದ್ಯಾನಿಲಯಗಳ ಪಾತ್ರವನ್ನು ಕುರಿತು 'ವಿಶ್ವಮಾನವ', 'ಮಾನಸಗಂಗೋತ್ರಿ' ಮೊದಲಾದ ಭಾಷಣ ಲೇಖನಗಳಲ್ಲಿ ಆಯೋಜಿಸಿದ್ದಾರೆ. ವಿಶ್ವವಿದ್ಯೆಯಿಂದ ವಿಶ್ವಪ್ರಜ್ಞೆಯೂ ಮೂಡುತ್ತದೆ, ವಿಶ್ವಪ್ರಜ್ಞೆಯಿಂದ ವಿಶ್ವಮೈತ್ರಿ ಸಾಧಿತವಾಗುತ್ತದೆ. ಈ ವಿಶ್ವಮೈತ್ರಿಯನ್ನು ಪಡೆದ ಮಾನವನೇ ವಿಶ್ವಮಾನವ. ಈ ವಿಶ್ವಮಾನವನನ್ನು ಸೃಷ್ಟಿಸುವಂಥದೇ ವಿಶ್ವವಿದ್ಯಾನಿಲಯಗಳು ಇದು ಕುವೆಂಪು ಅವರ ಆದರ್ಶ. ಇದು ಕಷ್ಟವಾದರೂ ನಿರಾಶರಾಗದೆ ಕಟ್ಟಬೇಕೆಂಬುದು ಅವರ ಅಪೇಕ್ಷೆ. ವಿಶ್ವವಿದ್ಯಾನಿಲಯವನ್ನು ಸಂಶೋಧನಾಂಗ, ಬೋಧನಾಂಗ ಮತ್ತು ಪ್ರಸಾರಾಂಗಗಳೆಂದು ವಿಭಾಗಿಸಿ, ಅರ್ಥಪೂರ್ಣವಾಗಿ ವ್ಯಾಖ್ಯಾನಿಸಿದ್ದಾರೆ. ಅಧ್ಯಾಪಕ ಮಾನಸದಲ್ಲಿ ಉದ್ಭವಿಸಿದ ಜ್ಞಾನಗಂಗೆ ಈ ಅವಸ್ಥಾತ್ರಯಗಳನ್ನು ಪಡೆದು ಮನೋಭೂಮಿಕೆಯಿಂದ ಲೋಕಭೂಮಿಕೆಗೆ ಅವತರಿಸಬೇಕೆಂದು ತಮ್ಮದೇ ಕಾವ್ಯಶೈಲಿಯಲ್ಲಿ ವರ್ಣಿಸಿದ್ದಾರೆ. 'ಮಾನಸಗಂಗೋತ್ರಿ' ಎಂಬ ಸಾರ್ಥಕ ಹೆಸರನ್ನು ನೀಡಿ, ಅದರ ಪ್ರಾರಂಭೋತ್ಸವದಲ್ಲಿ ಮಾತಾಡುತ್ತಾ" ಇನ್ನು ಐವತ್ತು ವರ್ಷಗಳಲ್ಲಿ ಮೈಸೂರಿಗೆ ಪ್ರೇಕ್ಷಕರಾಗಿ ಯಾತ್ರಿಕರಾಗಿ ಬರುವವರು ಶ್ರವಣಬೆಳಗೊಳ, ಶಿವನಸಮುದ್ರ, ಬೇಲೂರು, ಹಳೇಬೀಡು, ಸೋಮನಾಥಪುರ, ಬೃಂದಾವನಗಳಿಗೆ ಮಾತ್ರವೆ ಅಲ್ಲದೆ ಮಾನಸಗಂಗೋತ್ರಿ ಕ್ಷೇತ್ರಕ್ಕೂ ಬರುತ್ತಾರೆ"[6] ಎಂಬ ಆಶಯ ವ್ಯಕ್ತಪಡಿಸಿದ್ದಾರೆ. ಇಲ್ಲೆಲ್ಲ ಕವಿಯ ಕನಸು, ಆದರ್ಶ, ದೂರದೃಷ್ಟಿಗಳು ಬಿಂಬಿತವಾಗಿವೆ.

ಭಾಷಾಸಮಸ್ಯೆಯನ್ನು ಕುವೆಂಪು ಅವರ ಹಾಗೆ ಬಿಡಿಸಿದವರೂ ವಿವರಿಸಿದವರೂ ಮತ್ತೊಬ್ಬರಿಲ್ಲ. ಇದಕ್ಕೆ 'ಷಷ್ಟಿನಮನ' ಮತ್ತು 'ಮನುಜಮತ-ವಿಶ್ವಪಥ' ಗ್ರಂಥಗಳಲ್ಲಿರುವ ಲೇಖನಗಳು ಉದಾಹರಣೆಯಾಗಿವೆ. ಈ ವಿಷಯದಲ್ಲಿರುವ ಕುವೆಂಪು ಅವರ ಆಸಕ್ತಿ,ಕಾತರ, ಕಳಕಳಿಗಳು ಅಪೂರ್ವವೂ ಸ್ವೋಪಜ್ಞವೂ ಆದ ರೀತಿಯಲ್ಲಿ ವ್ಯಕ್ತವಾಗಿವೆ. ಕನ್ನಡವನ್ನು ಕಟ್ಟಿದ ಮಹನೀಯರಲ್ಲಿ ಒಬ್ಬರಾದ ಕುವೆಂಪು, ಏಕೀಕೃತ ಕರ್ಣಾಟಕತ್ವಕ್ಕಾಗಿಯೂ ಕನ್ನಡ ಭಾಷೆಯ ಸಾರ್ವಭೌಮತ್ವಕ್ಕಾಗಿಯೂ ಹೋರಾಡಿದ್ದು ಈಗ ಇತಿಹಾಸದ ವಿಷಯ. ಅವರಿಗೆ 'ಕರ್ಣಾಟಕ' ಎನ್ನುವುದು ಕೇವಲ ಭೌಗೋಲಿಕ ಪ್ರದೇಶವಾಗಿರಲಿಲ್ಲ, 'ಸಂಸ್ಕೃತಿ ಕೋಶವೂ'

'ಸೂಕ್ಷ್ಮ ಶರೀರ'ವೂ ಆಗಿತ್ತು. ದೇಶಭಾಷೆಗಳಿಗೆ ಮೊತ್ತಮೊದಲು ಸ್ಥಾನ ದೊರೆಯಬೇಕೆಂದು ಹೋರಾಡಿದ ಆದ್ಯರಲ್ಲಿ ಕುವೆಂಪು ಪ್ರಮುಖರು. ಕನ್ನಡ ಆಡಳಿತ ಭಾಷೆಯಾಗಬೇಕು, ಶಿಕ್ಷಣಕ್ರಮದಲ್ಲಿ ಕನ್ನಡ ಪ್ರಥಮ ಭಾಷೆಯಾಗಬೇಕು ಮತ್ತು ಎಲ್ಲ ಮಟ್ಟಗಳಲ್ಲಿಯೂ ಕನ್ನಡ ಶಿಕ್ಷಣ ಮಾಧ್ಯಮವಾಗಬೇಕು ಇವು ಕುವೆಂಪು ಅವರ ಭಾಷಾಧೋರಣೆಗಳಾಗಿದ್ದವು.

ದೇಶದ ಸೂಕ್ಷ್ಮ ಸಮಸ್ಯೆಗಳಲ್ಲಿ ಭಾಷಾ ಸಮಸ್ಯೆಯೂ ಒಂದು. ಕುವೆಂಪು ಅದನ್ನು ಯಶಸ್ವಿಯಾಗಿ ಪರಿಹರಿಸಲು ಯತ್ನಿಸಿದರು. ಪ್ರಾದೇಶಿಕ ಭಾಷೆಗೆ ಪ್ರಥಮಸ್ಥಾನ, ಸಂಯುಕ್ತಭಾಷೆಗೆ ಎರಡನೆಯ ಸ್ಥಾನ, ಅಂತರರಾಷ್ಟ್ರೀಯ ಭಾಷೆಗೆ ಐಚ್ಛಿಕಸ್ಥಾನ ಕೊಡಬೇಕೆಂಬ ನಿರ್ಧಾರಕ್ಕೆ ಕುವೆಂಪು ಬಂದರು. ಇಂಗ್ಲೀಷ್ ಭಾಷೆಯನ್ನು ಬಿಡಬೇಕೆಂದಾಗಲಿ, ದ್ವೇಷಿಸಬೇಕೆಂದಾಗಲಿ ಕುವೆಂಪು ಅವರ ದೃಷ್ಟಿಯಲ್ಲ. ಯಾರಿಗೆ ಎಷ್ಟು ಬೇಕೊ ಅಷ್ಟನ್ನು ಕಲಿಯಲಿ ಬಲಾತ್ಕಾರದ ಅಂಶವನ್ನು ತೆಗೆಯಿರಿ ಇದು ಕುವೆಂಪು ಅವರ ದೃಷ್ಟಿ. "ಇಂಗ್ಲೀಷ್ ಎಲ್ಲರಿಗೂ ಬೇಡ ಹಲವರಿಗೆ ಕೊಂಚಮಟ್ಟಿಗೆ ಬೇಕು. ಕೆಲವರಿಗೆ ಮಾತ್ರ ಚೆನ್ನಾಗಿಯೆ ಬೇಕು"[7]ಎಂದು ತಮ್ಮ ನಿಲುವನ್ನು ವಿವರಿಸಿದ್ದಾರೆ. ಇಂಗ್ಲಿಷ್ ಕಲಿಯುವವರನ್ನು ಭಾಷೆ ಮತ್ತು ಸಾಹಿತ್ಯ ದೃಷ್ಟಿಯಿಂದ ಕಲಿಯುವವರೆಂದು ವಿಭಜಿಸಿಕೊಳ್ಳುತ್ತಾರೆ.'ಭಾರತದಲ್ಲಿ ಇಂಗ್ಲೀಷಿನ ಸ್ಥಾನ' ಎಂಬ ತಮ್ಮ ಭಾಷಣದಲ್ಲಿ "ಇಂಗ್ಲಿಷ್ ಪಾಠಗಳನ್ನು ಕನ್ನಡದಲ್ಲಿ ಬೋಧಿಸಬೇಕು. ಪರೀಕ್ಷೆಯಲ್ಲಿ ಉತ್ತರವನ್ನು ಕನ್ನಡದಲ್ಲಿ ಬರೆಯಬೇಕು"[8] ಎಂಬ ಕ್ರಾಂತಿಕಾರಿ ಸಲಹೆಯನ್ನು ಮುಂದಿಡುತ್ತಾರೆ. ಇಂಗ್ಲೀಷ್‌ಸಾಹಿತ್ಯದ ಪುಷ್ಟಿಯನ್ನು ಪಡೆಯಲು ಇದು ಸೂಕ್ತ ಎಂಬುದು ಅವರ ವಿವರಣೆ. ಎಲ್ಲರಿಗೂ ಇಂಗ್ಲೀಷ್ ಹೇರುವ ಹವ್ಯಾಸವನ್ನು[9] ಕುವೆಂಪು ಕಟುವಾಗಿ ವಿರೋಧಿಸುತ್ತಾರೆ. ಬಲಾತ್ಕಾರ ಇಂಗ್ಲೀಷ್‌ನ್ನು 'ಪ್ರಚ್ಛನ್ನ ಭ್ರಷ್ಟಾಚಾರ' ಎಂದು ಕರೆಯುತ್ತಾರೆ.

ಕನ್ನಡ ನಾಡಿನಲ್ಲಿ ಕನ್ನಡವೇ ಅಗ್ರಮಾನ್ಯ ಭಾಷೆ ಎಂಬುದು ನಿರ್ವಿವಾದ. ಅನ್ಯಭಾಷೀಯರು ತಾವು ವಾಸ ಮಾಡುವ ಪ್ರದೇಶದ ಭಾಷೆಯ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಬೇಕೆಂದು ಒತ್ತಾಯಿಸಿದ ಕುವೆಂಪು, ಬೇರೆ ಭಾಷಾ ಪ್ರದೇಶದಲ್ಲಿ ವಾಸಮಾಡುವ ಕನ್ನಡಿಗರೂ ಇದಕ್ಕೆ ಹೊರತಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಕೇಂದ್ರ ಸರ್ಕಾರದ ತ್ರಿಭಾಷಾಸೂತ್ರಕ್ಕೆ ಕುವೆಂಪು ಅವರ ಒಪ್ಪಿಗೆಯಿಲ್ಲ. ಅದು ತ್ರಿಶೂಲ ಇದ್ದ ಹಾಗೆ ಎಂದು ಅವರ ವರ್ಣನೆ. ಈ ತ್ರಿಭಾಷಾ ಸೂತ್ರದಿಂದ ಕನ್ನಡ ಕಷ್ಟಕ್ಕೆ ಒಳಗಾಗುತ್ತದೆ ಎಂದು ಅವರ ವಿಶ್ಲೇಷಣೆ. ಆದ್ದರಿಂದ ಕುವೆಂಪು ಅವರ ಒಲವು 'ದ್ವಿಭಾಷಾ ಸೂತ್ರ'ದ ಕಡೆಗೆ. ಅವರರೀತ್ಯಾ ದ್ವಿಭಾಷಾ ಸೂತ್ರವೆಂದರೆ, 'ಬಹುಭಾಷೆಗಳಲ್ಲಿ ದ್ವಿಭಾಷೆ'[10] ಎಂದು ಅರ್ಥ.

ಭಾಷೆಯ ವಿಷಯದಲ್ಲಿ ಕುವೆಂಪು ಅವರಂತೆ ನಿರ್ದುಷ್ಟವಾಗಿ ಆಲೋಚಿಸಿದವರು ಕನ್ನಡದಲ್ಲಿ ಬಹಳ ಜನರಿಲ್ಲ. ಕಟ್ಟಭದ್ರಹಿತಾಸಕ್ತಿಗಳ ವಾದವನ್ನು ತಿರಸ್ಕರಿಸಿ, ಸ್ವಾಭಿಮಾನವನ್ನು ಬೆಳೆಸಿದವರು ಕುವೆಂಪು. ತಮ್ಮ ವಿಚಾರಗಳ ಮೂಲಕ ಕನ್ನಡ ಚಳುವಳಿಗೆ ಒಂದು ಅಧಿಕೃತತೆಯನ್ನು ತಂದುಕೊಟ್ಟ ಕೀರ್ತಿ ಅವರದು. ಕುವೆಂಪು ಕನ್ನಡ ಪ್ರಜ್ಞೆಯನ್ನು ಬೆಳೆಸಿದ ಹಾಗೆಯೇ ವಿಶ್ವಪ್ರಜ್ಞೆಯನ್ನು ಸಾರಿದರು. ಮೇಲುನೋಟಕ್ಕೆ ಇವು ಪರಸ್ಪರ

ವಿರೋಧಾಂಶಗಳಂತೆ ಕಾಣಬಹುದು; ಆದರೆ ಇವು ಪರಸ್ಪರ ಪೂರಕವಾದವುಗಳು. ಏಕೆಂದರೆ, ಕುವೆಂಪು ಪರಸ್ಪರ ವೈರುಧ್ಯಗಳಲ್ಲಿ ಸಾಮರಸ್ಯವನ್ನು ಸಾಧಿಸಿದವರು.

ರಾಜಕೀಯ ಸಾಮಾಜಿಕ ರೀತಿನೀತಿಗಳ ಅವಲೋಕನದಲ್ಲಿ ಆಲೋಚನೆಯ ಮತ್ತೊಂದು ಆಯಾಮವನ್ನು ಕಾಣುತ್ತೇವೆ. ಕುವೆಂಪು ಬದುಕನ್ನು ಎಷ್ಟು ನಿಕಟವಾಗಿ ಪರಿಶೀಲಿಸಬಲ್ಲರು ಎಂಬುದಕ್ಕೆ ಇವು ನಿದರ್ಶನವಾಗಿವೆ. ರಾಜಕೀಯವಲಯದಲ್ಲಿ ಜ್ಯೋತಿಷ್ಯದ ಪ್ರಭಾವವನ್ನು ಕುರಿತು ಚಿಂತಿಸುತ್ತ, ಅದು ಪ್ರಜಾಸತ್ತೆಯ ಋಜು ನಿಯಮಗಳಿಗೆ ವಿರುದ್ಧವಾಗಿರುವುದರ ಕಡೆಗೆ ಬೆಳಕು ಚೆಲ್ಲುತ್ತಾರೆ. ಜ್ಯೋತಿಷಿಯ ಈ 'ಸುಭದ್ರ ಅಜ್ಞಾನ'ಕ್ಕೆ ಶರಣುಹೋಗುವವರನ್ನು ಖಂಡಿಸುತ್ತ ಹೀಗೆನ್ನುತ್ತಾರೆ. "ಅಧ್ಯಾಪಕ, ಅಧಿಕಾರಿ, ಮಂತ್ರಿ, ವ್ಯಾಪಾರಿ, ಮಠಾಧಿಪತಿ, ಶ್ರಮಜೀವಿ, ಕೂಲಿ,ಕಡೆಗೆ ಕಳ್ಳ ಎಲ್ಲರಲ್ಲಿಯೂ ಇಂತಹ ಅವೈಜ್ಞಾನಿಕತೆ ಮತ್ತು ಅವೈಚಾರಿಕತೆ ವ್ಯಾಪಿಸಿ ವರ್ಧಿಸುತ್ತಿರುವುದನ್ನು ಸಂಕಟದಿಂದ ನೋಡುತ್ತಿರಬೇಕಾಗಿದೆ."[11] ಲೇಖಕರ ಈ ದಿವ್ಯಯಾತನೆ ಸಮಾಜದ ಉದ್ಧಾರಕ್ಕೆ ಹೊರತು, ಬೇರಲ್ಲ.

ರಾಜಕೀಯ ಮತ್ತು ಸಾಮಾಜಿಕ ವಿಚಾರಗಳಿಗೆ ಕುವೆಂಪು ತೀವ್ರವಾಗಿ ಸ್ಪಂದಿಸಿದವರು. ದೇಶದ ಆಗುಹೋಗುಗಳ ಬಗ್ಗೆ ತಮ್ಮದೇ ಅಭಿಪ್ರಾಯಗಳ ಕ್ಷಕಿರಣ ಹಾಯಿಸಿದವರು. ಯಾವುದೇ ವಿಚಾರವಿರಲಿ ಅದು ಸರಿಯಾದ ರೀತಿಯಲ್ಲಿ ಇಲ್ಲದಿದ್ದರೆ ಅದರ ಬಗ್ಗೆ ಕಟುಟೀಕೆಯನ್ನು ವ್ಯಕ್ತಪಡಿಸಲು ಅವರು ಹಿಂಜರಿದವರಲ್ಲ. ಮಹಾಚುನಾವಣೆಗಳು ಪ್ರಜಾಪ್ರಭುತ್ವದ ತತ್ವವನ್ನು ಬಿತ್ತುವುದಕ್ಕೆ ಬದಲಾಗಿ ಅಸೂಯೆ ಸ್ಪರ್ಧೆ ವೈರ ಜಾತಿಮಾತ್ಸರ್ಯ ಸ್ವಾರ್ಥತೆಗಳನ್ನು ಬೆಳೆಸುತ್ತಿರುವ ಪರಿಗೆ ನೋಯುತ್ತಾರೆ. ಸರ್ವೋದಯ ಹಾಗೂ ಸಮನ್ವಯ ದೃಷ್ಟಿ ಸರ್ವತ್ರ ವ್ಯಾಪಿಸಬೇಕು. ಸಮಾಜದಲ್ಲಿ 'ಅತ್ಯಂತ ಕೀಳಾದವನಿಗೂ ಮೇಲಾಗುವ ಅವಕಾಶವಿರಬೇಕು"[12]. ಇಂತಹ ಚಿಂತನೆಗಳಲ್ಲಿ ಲೇಖಕರ ಜನಪದ ದೃಷ್ಟಿಯನ್ನೂ ಸಮಾನತೆಯ ಕಲ್ಪನೆಯನ್ನೂ ಕಾಣಬಹುದಾಗಿದೆ. ಪ್ರಾದೇಶಿಕತೆ ವಿಶ್ವವೈಶಾಲ್ಯತೆಗೆ ಅವಿರುದ್ಧವಾಗಿ ನಿಂತು, ಅನೇಕತೆ ಏಕತೆಯ ಕಡೆಗೆ ಚಲಿಸಿದಾಗಲೆ ಮನುಕುಲದ ಉದ್ಧಾರವೆಂದು ಹೇಳುತ್ತಾರೆ.

ಸ್ವಾತಂತ್ರ್ಯದ ಪೂರ್ವೋತ್ತರ ಬದುಕನ್ನು ಪರಿಭಾವಿಸಿದ ಲೇಖಕರು, ಅಂದು ತ್ಯಾಗಶೀಲವಾದುದು ಆಮೇಲೆ ಭೋಗಾಭಿಲಾಷೆಯಾಗಿ ಪರಿಣಮಿಸಿದ್ದಕ್ಕೆ ವಿಷಾದ ಪಡುತ್ತಾರೆ. ಮತ ಮತ್ತು ರಾಜಕೀಯಗಳ ಸ್ಥಾನವನ್ನು ಅಧ್ಯಾತ್ಮ ಮತ್ತು ವಿಜ್ಞಾನ ಆಕ್ರಮಿಸಿಕೊಳ್ಳಬೇಕೆಂಬುದು ಕವಿಯ ಒಟ್ಟಾರೆ ನಿಲುವು. ವೈಜ್ಞಾನಿಕ ದೃಷ್ಟಿ ಮತ್ತು ವಿಚಾರ ಬುದ್ಧಿಗಳನ್ನು ನೆಹರೂ ಅವರಲ್ಲಿ ಕಂಡು, ಅವರನ್ನು ಅಧ್ಯಕ್ಷ ಮತ್ತು ವಿಜ್ಞಾನಗಳ ಸರ್ವೋಚ್ಚ ಪ್ರತಿನಿಧಿ ಎಂದು ಬಣ್ಣಿಸುತ್ತಾರೆ. ಸಾರ್ವಜನಿಕ ಜೀವನದಲ್ಲಿ ಮೌಢ್ಯವನ್ನು ಪ್ರತಿಭಟಿಸಿದ ನೆಹರೂ ಬಗ್ಗೆ ಪ್ರಶಂಸೆಯ ದೃಷ್ಟಿಕೋನವನ್ನು ತಳೆಯುತ್ತಾರೆ. ಆದರೆ ನೆಹರೂರವರ ಆರ್ಥಿಕ ನೀತಿಯನ್ನು ಅಷ್ಟೇ ಕಟುವಾಗಿ ಟೀಕಿಸುವುದನ್ನು ನೋಡುತ್ತೇವೆ. ಗಾಂಧೀಜಿಯವರ ಆರ್ಥಿಕ ನೀತಿಯಿಂದ ನೆಹರೂ ದೂರ ಸರಿದುದರಿಂದಲೇ ಭಾರತದ

ಆರ್ಥಿಕ ವ್ಯವಸ್ಥೆ ಏರುಪೇರಾಗಲು ಕಾರಣವಾಯಿತೆಂಬ ಅಭಿಪ್ರಾಯಕ್ಕೆ ಕುವೆಂಪು ಬರುತ್ತಾರೆ. ಈ ಸಂದರ್ಭದ ಅವರ ಮಾತುಗಳು ಹೀಗಿವೆ : "ನೆಹರೂ ಅವರ ಮುಂದಾಳುತನದ ನೇತೃತ್ವದಲ್ಲಿ ನಾವು ಗಾಂಧೀಜಿಯ ತತ್ವಗಳನೆಲ್ಲ ಮೂಲೆಗೊತ್ತಿ, ನಮ್ಮ ರಾಷ್ಟ್ರವನ್ನು ಏಕಾಏಕಿ ಅಭಿವೃದ್ಧ ಶ್ರೀಮಂತ ಪಾಶ್ಚಾತ್ಯ ದೇಶಗಳ ಸರಿಸಮಕ್ಕೇರಿಸುವ ಹುಮ್ಮಸಿನಲ್ಲಿ ಸಂಪೂರ್ಣವಾಗಿ ಅವರ ಅನುಕರಣೆಗೆ ದೀಕ್ಷಿತರಾದೆವು.

ತರುವಾಯ ಸ್ವದೇಶದ ಮತ್ತು ವಿದೇಶದ ಕೆಲವು ರಾಜಕೀಯ ಮತ್ತು ಆರ್ಥಿಕ ಪ್ರಾಜ್ಞರು ಕೊಟ್ಟ ಎಚ್ಚರಿಕೆಯನ್ನು ನಾವು ಲೆಕ್ಕಿಸಲಿಲ್ಲ."[13] ಸಮಕಾಲೀನ ಪರಿಸ್ಥಿತಿಗೆ ಸಂವೇದನಶೀಲ ಮನಸ್ಸೊಂದು ಪ್ರತಿಕ್ರಿಯಿಸುವ ಇಂತಹ ಹಲವಾರು ನಿದರ್ಶನಗಳು 'ವಿಚಾರ ಕ್ರಾಂತಿ' ಕೃತಿಯಲ್ಲಿವೆ. ಯಂತ್ರ ನಾಗರಿಕತೆಗೆ ಒತ್ತು ಕೊಟ್ಟು ಹಳ್ಳಿಗಳನ್ನು ಮರೆತು ಬಿಟ್ಟಿದ್ದಕ್ಕೆ ಅವರು ಮರುಗುತ್ತಾರೆ. ಬಡರೈತರ ತೆರಿಗೆ ಹಣವನ್ನು ಭೋಗದ ಮತ್ತು ಷೋಕಿಯ ವಸ್ತುಗಳ ತಯಾರಿಕೆಗೆ ವ್ಯಯಮಾಡಿದ್ದಕ್ಕೆ ವ್ಯಥೆ ಪಡುತ್ತಾರೆ. ಸಮಾಜವಾದವೆ ಗುರಿಯೆಂದು ಘೋಷಿಸಿಕೊಂಡು ಸಾಧಿಸಿದ್ದಾದರೂ ಏನು ಎಂದು ಪ್ರಶ್ನಿಸುತ್ತಾರೆ. ಹೀಗೆ ಭಾರತದ ದುಃಸ್ಥಿತಿಯ ವಿವರಗಳನ್ನು ಒದಗಿಸಿ, "ಇಲ್ಲಿ 'ಡೆಮಾಕ್ರಸಿ' ಬರಿಯ ಮಾಕರಿ ಆಗಿದೆ"[14] ಎಂದು ವಿಡಂಬಿಸುತ್ತಾರೆ. ಕುವೆಂಪು ಅವರ ಈ ಎಲ್ಲ ವಿಚಾರಗಳಿಗೆ 'ಶ್ರೀ ಸಾಮಾನ್ಯ'ನೆ ಕೇಂದ್ರಬಿಂದು. ರಾಜಕೀಯ ಸಾಮಾಜಿಕ ಆಗುಹೋಗುಗಳು ಈ ಸಾಮಾನ್ಯನನ್ನು ಶೋಷಿಸುತ್ತಾ ನಿರ್ಲಕ್ಷಿಸುತ್ತಾ ಬಂದಿರುವುದನ್ನು ಕುವೆಂಪು ಎತ್ತಿ ತೋರಿಸುತ್ತಾರೆ. ಜಡ್ಡುಗಟ್ಟಿದ ಈ ವ್ಯವಸ್ಥೆಗೆ ಕುವೆಂಪು ಪ್ರತಿಕ್ರಿಯಿಸುವ ಒಂದು ರೀತಿ ಇಲ್ಲಿದೆ. "ಭ್ರಷ್ಟಾಚಾರವನ್ನು ನಿರ್ಮೂಲ ಮಾಡುವ ಮತ್ತು ನಿಜವಾದ ಪ್ರಜಾಸತ್ತೆಯನ್ನು ರಕ್ಷಿಸುವ ಇಚ್ಛೆ ನಿಮಗಿದ್ದರೆ ಇಂದಿನ ರೀತಿಯ ಧನಾಶ್ರಿತ ಚುನಾವಣೆಯ ಪದ್ಧತಿಯನ್ನು ಬದಲಾಯಿಸಿ ಅದನ್ನು ಗುಣಾಶ್ರಿತವನ್ನಾಗಿ ಪರಿವರ್ತಿಸುವ ಕರ್ತವ್ಯ ನಿಮ್ಮ ಹೆಗಲ ಮೇಲೆ ಬೀಳುತ್ತದೆ."[15] ಸಾಮಾನ್ಯರೀತಿಯಲ್ಲಿ ಇದು ಸಾಧ್ಯವಾಗದಿದ್ದರೆ, ಉಗ್ರಕ್ರಾಂತಿಯಿಂದಲಾದರೂ ಸಾಧ್ಯಮಾಡಬೇಕೆಂದು ಕುವೆಂಪು ಅವರ ಕರೆ. ನಮಗೆ ಕುವೆಂಪು ಏಕೆ ಹೆಚ್ಚು ಪ್ರಸ್ತುತರಾಗುತ್ತಾರೆ, ಹತ್ತಿರವಾಗುತ್ತಾರೆ ಎನ್ನುವುದಕ್ಕೆ ಇದಕ್ಕಿಂತ ನಿದರ್ಶನಗಳು ಬೇಕಿಲ್ಲ. ಇಂತಹ ವಿಚಾರಗಳಿಂದ ಕುವೆಂಪು ಕನ್ನಡ ಲೇಖಕರಲ್ಲಿಯೇ ವಿಶಿಷ್ಟರಾಗಿ ನಿಲ್ಲುತ್ತಾರೆ. ಅವರು ನಮ್ಮ ಮೊದಲ ನೈಜ ಬಂಡಾಯಗಾರರೆಂದರೆ ಅದು ಅತಿಶಯೋಕ್ತಿಯಲ್ಲ.

ಪ್ರಾಚೀನ ಪುರಾಣ ಶಾಸ್ತ್ರಗಳ ಮರುಮೌಲ್ಯಮಾಪನಕ್ಕೆ ಕುವೆಂಪು ಕರೆ ಕೊಡುತ್ತಾರೆ. ಪುರಾತನವಾದುದೆಲ್ಲ ಸತ್ಯವಾದುದೆಂಬ ಭ್ರಮೆಯನ್ನು ಬಿಡಬೇಕೆಂದು ತಿಳಿಸುತ್ತಾರೆ. ಯಾವುದೋ ಕಾಲದ ಯಾವುದೋ ಸಮಾಜಕ್ಕೆ ಬರೆದಿಟ್ಟವುಗಳನ್ನು ಇಂದು ನಮ್ಮನ್ನಾಳುವ ಅಗತ್ಯವಿಲ್ಲವೆಂಬುದು ಅವರ ಖಚಿತ ನಿರ್ಧಾರ. ಇಂದು ನಮಗೆ ಗಾಂಧಿ ಪ್ರಸ್ತುತವಾಗುವ ಹಾಗೆ ಮನು ಪ್ರಸ್ತುತವಾಗಬೇಕಿಲ್ಲವೆಂದು ವಿವರಿಸುತ್ತಾರೆ. ಪ್ರಾಚೀನ ತಿಳಿವಳಿಕೆಯನ್ನು ನಿರಾಕರಿಸುವಾಗ ನಿಜವಾದ ಅಕ್ಷೀಯ ಮೌಲ್ಯಗಳನ್ನು ಸ್ವೀಕರಿಸುವ ಅಗತ್ಯವನ್ನು ಒತ್ತಿ ಹೇಳಲು ಅವರು ಮರೆಯುವುದಿಲ್ಲ. ಹಳೆಯ ಒಡವೆಗಳನ್ನು ಹೊಸ ಅಗತ್ಯಗಳಿಗೆ ತಕ್ಕಂತೆ

ಹೇಗೆ ಕರಗಿಸಿ ಮಾರ್ಪಡಿಸಿಕೊಳ್ಳುತ್ತೇವೆಯೋ ಹಾಗೆ ಇವುಗಳ ಬಗೆಗಿನ ನಮ್ಮ ನಿಲುವಾಗಿರಬೇಕೆಂದು ವಿಶ್ಲೇಷಿಸುತ್ತಾರೆ. ವೇದ ಉಪನಿಷತ್ತುಗಳ ವಿಚಾರಗಳನ್ನು ಆ ಮೇಲಿನ ಪುರಾಣಗಳು ಸಂಕೇತಗೊಳಿಸುವ ನೆಪದಲ್ಲಿ ಹೇಗೆ ಕೃತಕ ಆಚರಣೆಗಳಿಗಿಳಿಸಿದುವು ಎಂಬುದನ್ನು ಸಾಧಾರಣವಾಗಿ ನಿರೂಪಿಸಿದ್ದಾರೆ. ಜಾತಿ ಮತ್ತು ವರ್ಣಾಶ್ರಮ ಪದ್ಧತಿಗಳು ಮೊದಲಾದುದೇ ಪುರಾಣಗಳ ಆರಂಭದಿಂದ. ಈ ಪುರಾಣಗಳಲ್ಲಿ ಉಕ್ತವಾಗಿರುವ ಲೋಕಾಚಾರ ಕಾಲಾಚಾರಗಳು ಅನುಸರಣೆ ದೇಶದ ಸ್ಥಿತಿ ಹದಗೆಡಲು ಕಾರಣವಾದುದನ್ನು ಉಲ್ಲೇಖಿಸಲಾಗಿದೆ. ಪ್ರಾಚೀನ ಪುರಾಣಗಳು ನಮ್ಮನ್ನು ಹೇಗೆ ದಾರಿ ತಪ್ಪಿಸುತ್ತವೆ, ನಂಬಲೇಬೇಕೆಂದು ಬಲತ್ಕರಿಸುತ್ತವೆ ಎಂಬುದಕ್ಕೆ 'ಶೂದ್ರ ತಪಸ್ವಿ' ಮತ್ತು 'ಪ್ರಹ್ಲಾದ ಚರಿತ್ರೆ' ಯಂಥವು ಉದಾಹರಣೆಗಳಾಗುತ್ತವೆ. 'ಶೂದ್ರ ತಪಸ್ವಿ' ಬಗ್ಗೆ ಕುವೆಂಪು ಅವರ ನಿಲುವೇನು ಎಂಬುದು ಅವರ ನಾಟಕದ ಮರುಚಿಂತನೆಯಲ್ಲಿ ವ್ಯಕ್ತವಾಗಿದೆ. ಪ್ರಹ್ಲಾದ ಮತ್ತು ಹಿರಣ್ಯಕಶಿಪು ಕಥೆಯಲ್ಲಿ . ಶೈವ ಮತ್ತು ವೈಷ್ಣವ ಮತಗಳ ಸಂಘರ್ಷವೂ ವಿಷ್ಣು ಪಾರಮ್ಯವೂ ಇರುವುದನ್ನು ಗುರುತಿಸಿ, ಭಕ್ತಿಯ ನೆಪದಲ್ಲಿ ಅದು ಹೇಗೆ ಮತಮೂಲವಾಗಿದೆ ಎಂಬುದನ್ನು ತೋರಿಸಿ ಕೊಡುತ್ತಾರೆ. ಪುರಾಣವನ್ನು ಈ ಬಗೆಯ ಶೋಧನ ದೃಷ್ಟಿಗೆ ಒಳಪಡಿಸಿದವರಲ್ಲಿ ಕುವೆಂಪು ಮೊದಲಿಗರೆಂದೇ ತೋರುತ್ತದೆ.

ಕುವೆಂಪು ವಿಚಾರ ಸಾಹಿತ್ಯದಲ್ಲಿ ಮೇಲಿಂದ ಮೇಲೆ ಪ್ರಸ್ತಾಪಕ್ಕೆ ಬರುವ ವಿಷಯವೆಂದರೆ, ಜಾತಿ ಮತಗಳಿಂದಾದ ಅನಾಹುತ. ಸಮಾಜದ ಪ್ರಗತಿಗೆ ಅಡ್ಡಿಯಾಗಿರುವ ಆತಂಕಕಾರಿಯಾದ ವಿಷಯಗಳು ಈ ಜಾತಿ ಭ್ರಾಂತಿ ಮತ್ತು ಮತಮೌಢ್ಯಗಳು. ಮತ ಒಂದು ಬಂಧನ ಎಂಬುದನ್ನು ಅವರು ಉದ್ದಕ್ಕೂ ಸ್ಪಷ್ಟಪಡಿಸುತ್ತಾ ಹೋಗುತ್ತಾರೆ. ಸಾಮಾಜಿಕ ಕಟ್ಟು ಕಟ್ಟಳೆಗಳ ಹೆಸರಿನಲ್ಲಿ ಹರಡಿಕೊಂಡಿರುವ ಇಂತಹ ಮೌಢ್ಯವನ್ನು ತೊಲಗಿಸದೆ ವೈಜ್ಞಾನಿಕ ಪ್ರಗತಿ ಅಸಾಧ್ಯವೆಂಬುದನ್ನು ನಿದರ್ಶನಗಳೊಡನೆ ಮನದಟ್ಟು ಮಾಡುತ್ತಾರೆ. ಉದ್ದೇಶ ಎಷ್ಟೇ ಶ್ಲಾಘನೀಯವಾಗಿದ್ದರೂ ತಿಳಿವಳಿಕೆಯಿಂದ ಕೂಡಿರದಿದ್ದರೆ ಅದರಿಂದ ಅಪಾಯವೆನ್ನುವುದು ಅಭಿಪ್ರಾಯ. ಆದಕಾರಣ ಪರೀಕ್ಷಿಸುವ ಬುದ್ಧಿಯೂ ವಿಮರ್ಶಿಸುವ ಧೈರ್ಯವೂ ನಮ್ಮದಾಗಬೇಕೆಂದು ತಿಳಿಸುತ್ತಾರೆ. ನಾವು ನಾಸ್ತಿಕರಾದರೂ ಚಿಂತೆಯಿಲ್ಲ ಈ ಮತಮೌಢ್ಯದಿಂದ ಹೊರಬರಬೇಕೆಂಬುದು ಅವರ ಆಶಯ.

ಪ್ರಜಾಸತ್ತೆ ಕಲುಷಿತವಾಗಲು ಹಣ ಒಂದು ಕಾರಣವಾದರೆ, ಮತ ಇನ್ನೊಂದು ಕಾರಣ. ಇದು ಅವರ ಸ್ಪಷ್ಟ ಅಭಿಪ್ರಾಯ. ಇದರಿಂದ ಆಗಿರುವಷ್ಟು ಅನಾಹುತ ಬೇರಾವುದರಿಂದಲೂ ಆಗಿಲ್ಲವೆಂದು ಅವರ ಸಮರ್ಥನೆ. ಈ ಮೌಢ್ಯದಿಂದ ಮುಕ್ತರಾಗದಿದ್ದರೆ ಪ್ರಜಾಸತ್ತೆಗೆ ಉಳಿಗಾಲವಿಲ್ಲ. ಈ ಕುರಿತು ಮಾತಾಡುವಾಗ ಕುವೆಂಪು ಯಾವ ಪೂರ್ವಾಗ್ರಹಕ್ಕೂ ಒಳಗಾಗುವುದಿಲ್ಲ. ಅವರೇ ಹೇಳುವ ಹಾಗೆ ಸಮಾನತಾದೃಷ್ಟಿ ಅವರದು. ಪುರೋಹಿತಶಾಹಿ ಎಲ್ಲ ಮತಗಳಲ್ಲೂ ಇರುವುದನ್ನು ಗುರುತಿಸಲು ಮರೆಯುವುದಿಲ್ಲ. ಹೀಗಾಗಿ, ಕುವೆಂಪು ವಿರೋಧಿಸುವುದು ವ್ಯವಸ್ಥೆಯನ್ನೇ ಹೊರತು, ವ್ಯಕ್ತಿಯನ್ನಲ್ಲ. ಸತ್ವವಿರುವುದನ್ನು ಸ್ವೀಕರಿಸಬೇಕೆಂಬ ಬುದ್ಧಿ ಮಾತು ಹೇಳುತ್ತಾರೆ ಕೂಡ. ಯಾವುದೇ ತತ್ವ ವಿಶ್ವಕ್ಕೆ ಅನ್ವಯವಾಗುವುದಿದ್ದರೆ ಅದನ್ನು ಗಾಹ್ಯವೆಂದೇ ಬಗೆಯಬೇಕು.

ಜಾತಿಮತಗಳು ಇದಕ್ಕೆ ವಿರುದ್ಧವಾಗಿರುವುದರಿಂದಲೇ ಅವರ ಉಗ್ರ ಟೀಕೆ. ತಮ್ಮ ತಮ್ಮ ಜಾತಿಮತಗಳ ಶ್ರೇಷ್ಠತೆಯನ್ನು ರಕ್ಷಿಸಿಕೊಂಡು ಬರುವಲ್ಲಿ ಉಳಿದವರನ್ನು ಊಳಿಗದವರಂತೆ ಕಾಣುವ ಉದ್ದೇಶವಿತ್ತು. ಇದಕ್ಕಾಗಿ ಶಾಸ್ತ್ರಗಳೂ ಪುರಾಣಗಳೂ ವ್ಯಾಖ್ಯಾನಗಳೂ ಕೆಲಸ ಮಾಡಿದ್ದರ ಇತಿಹಾಸದ ಕಡೆಗೆ ಗಮನ ಸೆಳೆಯುತ್ತಾರೆ. ಆಗಿಹೋದ ಎಲ್ಲಕ್ರಾಂತಿಗಳನ್ನು ಪುರೋಹಿತ ಶಾಹಿ ಹಿಮ್ಮೆಟ್ಟಿಸಿದ್ದರ ವಿಚಾರ ಹೇಳಿ, ಆ ಬಗ್ಗೆ ಎಚ್ಚರವಿರುವಂತೆ ತಿಳಿಸುತ್ತಾರೆ.

ಜನತೆಯ ಪ್ರಗತಿಯ ದೃಷ್ಟಿಯಿಂದ ಸನಾತನ ಧರ್ಮ ಮೌಲ್ಯಗಳು ಅಗತ್ಯಕ್ಕೆ ಅನುಗುಣವಾಗಿ ಬದಲಾಗಬೇಕು. ಜನ ಅಂಧಕಾರದಲ್ಲಿ ಉಳಿಯಲು ಪೂರ್ವಿಕರು ತಮ್ಮ ತತ್ವಾದರ್ಶಗಳನ್ನು ಹೇಳಲು ಬಳಸಿದ ಭಾಷೆಯೂ ಕಾರಣವಾಗಿತ್ತೆಂಬ ಅಂಶ ಒಂದು ಮುಖ್ಯ ವಿಚಾರ. ಜಾತಿಮತಗಳ ಬಗೆಗಿನ ಭಾವನೆಗಳು ಮೊದಲಿನಿಂದಲೂ ಪವಿತ್ರವೆಂಬ ಮೂಢಮನೋಧರ್ಮವನ್ನು ಹುಟ್ಟುಹಾಕಿ, ಪ್ರಶ್ನಿಸುವ ಹಕ್ಕನ್ನೆ ಕಿತ್ತುಕೊಂಡಿದ್ದ ವಿಚಾರ ಕೂಡ ಮುಖ್ಯವಾದುದು. ಈ ಭೇದಕಾರಕ ಅನಿಷ್ಟಗಳನ್ನು ಭಗವಂತನೇ ಸೃಷ್ಟಿಸಿದನೆಂದು ಕಲ್ಪಿಸಿ ಪ್ರಚಾರ ಮಾಡಿದ್ದು ಅನಾಹುತ ಮತ್ತಷ್ಟು ತೀವ್ರಗೊಳ್ಳಲು ಕಾರಣ ವಾಯಿತೆಂಬ ಲೇಖಕರ ಮಾತು ಸತ್ಯವಾದುದೇ.

ಇತಿಹಾಸದ ಈ ಎಲ್ಲ ಅನಾಹುತಗಳನ್ನೂ ಸತ್ಯವನ್ನು ತಿಳಿಯಬೇಕಾದರೆ ವಿಚಾರವಾದದ ಅಗತ್ಯವನ್ನು ಕುವೆಂಪು ಪ್ರಸ್ತಾಪಿಸುತ್ತಾರೆ. ವಿಚಾರವಾದ ಎಂದರೆ ನಾಸ್ತಿಕವಾದವಲ್ಲ. ವಿಚಾರವಾದಿಯಾದವನು ಅಜ್ಞೇಯತಾವಾದಿಯಾಗಬಹುದೇ ಹೊರತು ನಾಸ್ತಿಕವಾದಿಯಾಗಬೇಕಾಗಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ವಿಚಾರವಾದಿ ನಕಾರಾತ್ಮಕ ಪ್ರವೃತ್ತಿಯನ್ನು ಬಿಟ್ಟು ರಚನಾತ್ಮಕ ದೃಷ್ಟಿಯನ್ನು ಕಳೆಯಲು ಒತ್ತಿ ಹೇಳುತ್ತಾರೆ. ಅವನಿಗೆ ಆಧ್ಯಾತ್ಮಿಕ ಧೈರ್ಯವೂ ತೆರೆದ ಮನಸ್ಸು ಇರಬೇಕೆನ್ನುತ್ತಾರೆ ಕುವೆಂಪು.

ಕುವೆಂಪು ಅವರ ಯಾವ ಚಿಂತನೆಯ ಬಗ್ಗೆಯೂ ಭಿನ್ನಾಭಿಪ್ರಾಯ ತಳೆಯಲು ಸಾಧ್ಯವಾಗುವುದಿಲ್ಲ. ಅಷ್ಟರಮಟ್ಟಿಗೆ ಅವು ನಿರ್ದಿಷ್ಟ ಮತ್ತು ವಾಸ್ತವ. ಆದರೆ 'ಮಕ್ಕಳಿಗೇಕೆ ವೈಚಾರಿಕತೆ' ಎಂಬ ಲೇಖನದ "ಮಗು ಮಾತ್ರ ಪೂರ್ವಜನ್ಮ ಕರ್ಮ ಸಂಸ್ಕಾರ ನಿಯಂತ್ರಣಕ್ಕೆ ಅನಿವಾರ್ಯವಾಗಿ ಒಳಗಾಗಿ"[16] ಮುಂದುವರಿಯುತ್ತದೆ ಎಂಬ ಮಾತನ್ನು ಅರಗಿಸಿಕೊಳ್ಳುವುದು ಕಷ್ಟ. ಮಗು ಏನಾಗಬೇಕೊ ಅದೆಲ್ಲ ಪೂರ್ವಜನ್ಮಕ್ಕೆ ಅನುಗುಣವಾಗಿ ನಿರ್ಣೀತವಾಗುತ್ತದೆ ಎಂದು ಹೇಳುವುದಾದರೆ, ಅವನಿಗೆ ಈ ಎಲ್ಲ ಸಾಹಿತ್ಯ, ತಿಳಿವಳಿಕೆ, ವಿದ್ಯಾಭ್ಯಾಸವೆಲ್ಲ ಏಕೆ ಎಂದೂ ಕೇಳಬೇಕಾಗುತ್ತದೆ. ಆದ್ದರಿಂದ ಇಂಥ ವಾದ ತರ್ಕಗಳೆಲ್ಲ ತತ್ವಶಾಸ್ತ್ರಕ್ಕೆ ಸೀಮಿತವಾದರೆ ವಾಸಿ. ವಾಸ್ತವಲೋಕಕ್ಕೆ ಎಳೆದು ತಂದರೆ ಅದು ಉಚಿತವಾಗಲಾರದು ಎಂಬುದಿರಲಿ, ಅವರೇ ಹೇಳಿದ ವೈಜ್ಞಾನಿಕ ವೈಚಾರಿಕ ದೃಷ್ಟಿಗೆ ವಿರುದ್ಧವಾಗುತ್ತದೆ.

ಕುವೆಂಪು ತಮ್ಮ ಬರವಣಿಗೆಯನ್ನು ಆರಂಭಮಾಡಿದ ಹೊಸ್ತಿಲಿನಿಂದಲೂ ಪರಮಹಂಸ, ವಿವೇಕಾನಂದ, ಗಾಂಧೀಜಿ, ಅರವಿಂದರ ಪ್ರಭಾವಕ್ಕೆ ಒಳಗಾದರು. ಅವರು ಪ್ರತಿಪಾದಿಸಿದ ಯುಗ ಮೌಲ್ಯಗಳಾದ ಸಮನ್ವಯ, ಸರ್ವೋದಯ, ಪೂರ್ಣದೃಷ್ಟಿಗಳು

ಕುವೆಂಪು ಸಾಹಿತ್ಯದ ಮೂಲ ಕಣ್ಣಾದವು. ವಿಚಾರ ಸಾಹಿತ್ಯದ ಮೂಲ ಭಿತ್ತಿಗಳೂ ಇವೇ. ಜೊತೆಗೆ ಮನುಜಮತ, ವಿಶ್ವಪಥ, ವಿಜ್ಞಾನದೃಷ್ಟಿ, ವಿಚಾರಬುದ್ಧಿಗಳೂ ಈ ಪ್ರಕಾರವನ್ನು ರೂಪಿಸಿವೆ. ಅವರ ವಿಚಾರ ಸಾಹಿತ್ಯವೆಲ್ಲ ಸಮಾಜದ ಉದ್ಧಾರಕ್ಕೆ ಉದ್ದಿಷ್ಟವಾದುದು. ಇಷ್ಟಾದರೂ ಸಮಾಜವನ್ನು ಪೂರ್ಣವಾಗಿ ತಿದ್ದಲು ಸಾಧ್ಯವಿಲ್ಲವೆಂಬ ಅರಿವು ಕುವೆಂಪು ಅವರಿಗಿದೆ. ಆದ್ದರಿಂದಲೇ ದಾರಿಯ ಮುಳ್ಳನ್ನೆಲ್ಲ ತೆಗೆಯಲಾಗದಿದ್ದರೂ ಕಾಲಿಗೆ ಮೆಟ್ಟುಹಾಕಿಕೊಂಡು ನಡೆದರೆ ಸಾಕು[17] ಎಂಬ ತೀರ್ಮಾನಕ್ಕೆ ಬರುವುದು.

ಕುವೆಂಪು ಅವರ ಈ ಭಾಷಣ ಬರಹಗಳಲ್ಲಿ ಅವರ ಅಪಾರ ಅನುಭವ, ನಿರ್ದಿಷ್ಟ ದೃಷ್ಟಿ, ವೈಜ್ಞಾನಿಕ ಚಿಂತನೆ ಮತ್ತು ದ್ವಂದ್ವದೂರವಾದ ಅಭಿವ್ಯಕ್ತಿಯನ್ನು ಕಾಣುತ್ತೇವೆ. ಎಲ್ಲವಿಚಾರಗಳನ್ನೂ ಸ್ಪಷ್ಟಮಾತುಗಳಲ್ಲಿ ಮತ್ತು ದೃಢಧ್ವನಿಯಲ್ಲಿ ಹೇಳುತ್ತಾರೆ. ಗೊಂದಲವಿಲ್ಲದ ಅವರ ವಿಚಾರಗಳು ನೇರವಾಗಿ ಮನಮುಟ್ಟುವುದರಲ್ಲಿ ಸಫಲವಾಗಿವೆ. ಭಾಷೆಯ ತೀವ್ರತೆ ಮತ್ತು ಅಭಿವ್ಯಕ್ತಿಯ ಬಂಧುರತೆಗಳು ಎರಡು ಮುಖ್ಯ ಗುಣಗಳು. ಸರಳ ಮಾತುಗಳಲ್ಲಿಯೇ ವೈಚಾರಿಕ ಜಾಗೃತಿಯನ್ನು ಆಕರ್ಷಕವಾಗಿ ಮೂಡಿಸಬಲ್ಲರು ಎನ್ನುವುದಕ್ಕೆ ಅನೇಕ ನಿದರ್ಶನಗಳನ್ನುಕೊಡಬಹುದು. ಮತ ಮೂಲವಾಗಿರದೆ ಮತಿಮೂಲವಾಗಿರಬೇಕೆಂದು ಹೇಳುತ್ತ ಈ ಮಾತುಗಳಿವೆ." ಆಗುದು, ಈ ಆಚಾರ್ಯ, ಆಧರ್ಮಶಾಸ್ತ್ರ, ಈ ಮನುಸ್ಮೃತಿ ಮೊದಲಾದವು ಏನೇ ಹೇಳಲಿ, ಎಲ್ಲವನ್ನೂ ವಿಮರ್ಶಿಸುವ, ಪರೀಕ್ಷಿಸುವ, ಒರೆಗಲ್ಲಿಗೆ ಹಚ್ಚುವ ಹಕ್ಕು ನಮ್ಮದಾಗಿರುತ್ತದೆ"[18] ಯಾವ ವಿಚಾರವೇ ಆಗಿರಲಿ ಅಂತಿಮ ನಿರ್ಧಾರ ನಮ್ಮದಾಗಬೇಕೆಂಬುದು ಕುವೆಂಪು ಅವರ ಒತ್ತು. ಮತ್ತೆ ಮತ್ತೆ ಮೆಲುಕು ಹಾಕುವಂತಹ ಹೇಳಿಕೆಗಳು ವಿಚಾರ ಸಾಹಿತ್ಯದ ಉದ್ದಕ್ಕೂ ದೊರೆಯುತ್ತವೆ. "ನಮ್ಮ ಉತ್ಸಾಹ ಹುಲ್ಲಿನ ಬೆಂಕಿಯಾಗಬಾರದು, ಕಲ್ಲಿದ್ದಲ ಕಾವಾಗಬೇಕು",[19] "ಪರೀಕ್ಷೆ ಜ್ಞಾನದ ಪರೀಕ್ಷೆಯಲ್ಲ, ಜ್ಞಾಪಕಶಕ್ತಿಯ ಮತ್ತು ಅದೃಷ್ಟದ ಪರೀಕ್ಷೆಯಾಗಿದೆ,"[20] "ಕನ್ನಡಿಗರ ಔದಾರ್ಯ ಸಲಕ್ಷಣಗಳು ಅಸಹಾಯಕತೆಯಾಗಬಾರದು, ನಿರ್ವಿಣ್ಣತೆಯಾಗಬಾರದು"[21] ಮೊದಲಾದವು. ಈ ಬಗೆಯ ಉಕ್ತಿಗಳಿಂದ ಸಹಜವಾಗಿಯೇ ಅಭಿವ್ಯಕ್ತಿ ಗಟ್ಟಿಗೊಳ್ಳುತ್ತದೆ.

ಕುವೆಂಪು ವಿಚಾರ ಸಾಹಿತ್ಯದ ಭಾಷಾಭಿವ್ಯಕ್ತಿಯೂ ಲಕ್ಷಿಸುವಂಥದೇ. ಇದು ನೇರ, ಸರಳ, ಖಚಿತ ಎಂಬ ಮೂರು ಮಾತುಗಳಲ್ಲಿ ಹಿಡಿದಿರಿಸಬಹುದು. ಇಲ್ಲಿ ಭಾವಾಭಿವ್ಯಕ್ತಿಗಿಂತ ವಿಚಾರಾಭಿವ್ಯಕ್ತಿಯೇ ಮುಖ್ಯ. ಅನೇಕ ಕಡೆ ಆಡುಮಾತಿನ ಧಾಟಿ ಪ್ರವೇಶಿಸಿರುವುದರಿಂದ ವಿಚಾರದ ಸಂವಹನಕ್ಕೆ ಸುಲಭವಾಗಿದೆ. ಭಾಷೆ ಆಲಂಕಾರಿಕವಾಗುವುದು ಕಡಿಮೆ. ಆದರೆ ಕೆಲವು ಸಲ ಉಪಮೆ ರೂಪಕಗಳಂತಹ ಸಾಮಗ್ರಿಯ ಬಳಕೆಯಿಂದ ಅರ್ಥವಾಹಕತ್ವಕ್ಕೆ ದಾರಿಮಾಡಿಕೊಡಬಹುದು. ಅಂತಹ ನಾಲ್ಕು ನಿದರ್ಶಗಳು ಇಲ್ಲಿವೆ ೧. "ವಿಶ್ವವಿದ್ಯಾನಿಲಯಗಳು ದೇಶದ ಪುರೋಗಮನದ ಮೋಟಾರುಕಾರಿನ ಮುಂದಿನ ದೀಪಗಳಿದ್ದ ಹಾಗೆ"[22]. ೨. "ಇಂಗ್ಲೀಷ್ ಮಾಧ್ಯಮ ಸರ್ವೋದಯಕ್ಕೆ ಹಿಡಿದ ಶನಿಯಾಗಿದೆ, ಬಡಿದ ಅಶನಿಯಾಗಿದೆ"[23] ೩. "ಇಂಗ್ಲೀಷಿನಲ್ಲಿ ನೀವು ಪಾಠ ಹೇಳುತ್ತಾ ಇದ್ದರೆ, ಹುಡುಗರಿಗೆ ಅನೆಸ್ತೀಸಿಯಾ ಕೊಟ್ಟ ಹಾಗೆ ಇರುತ್ತೆ. ಏನು

ಆಪರೇಷನ್ ಬೇಕಾದರೂ ಮಾಡಿ! ಎಲ್ಲ ಮಕ್ಕಳೂ ಒಂದು ಘಂಟೆ ಆದ ಮೇಲೆ ಎಚ್ಚರಗೊಳ್ಳುತ್ತಾರೆ."[24] ೪. "ಪುರೋಹಿತಶಾಹಿ ಹುಲಿಯಂತೆ. ಇದಕ್ಕೆ ಸಣ್ಣಪುಟ್ಟ ಕಲ್ಲನ್ನು ಜೇಬಿನಲ್ಲಿಟ್ಟುಕೊಂಡು ಹೋಗಿ ಹೊಡೆಯುತ್ತೇನೆಂದರೆ ಹುಡುಗಾಟದ ಕೆಲಸವಲ್ಲ. ಅದನ್ನು ಹೊಡೆಯಬೇಕಾದರೆ ನಾವು ಮದ್ದುಗುಂಡುಗಳನ್ನೆ ತಯಾರು ಮಾಡಬೇಕು"[25] ಇಂತಹ ಹೇಳಿಕೆಗಳು ಭಾಷಣಗಳ 'ಸಾಲಂಕೃತ ಶೈಲಿ'ಗೆ ಕಾರಣವಾಗಿರಬಹುದಾದರೂ, ಅದಕ್ಕಿಂತ ಹೆಚ್ಚಾಗಿ ವಿಚಾರ ಮುಷ್ಟಿ ಗ್ರಾಹ್ಯವಾಗಲು ನೆರವಾಗಿದೆ. ಇಂಥವುಗಳ ಬಳಕೆಯಿಂದ ಭಾಷಣವನ್ನು ಲವಲವಿಕೆಯಿಂದ ಇರುವ ಹಾಗೆ ಕೂಡಮಾಡಬಹುದು. ಹೀಗಾಗಿ ವಿಚಾರ ಗಟ್ಟಿಗೊಳ್ಳುತ್ತಾ ಹೋಗುವುದಕ್ಕೆ ಇಲ್ಲಿನ ಭಾಷೆ ತನ್ನ ದೃಢ ನೆಲೆಯಲ್ಲಿ ದುಡಿದಿದೆ.

ಕುವೆಂಪು ಅವರ ಈ ಎಲ್ಲ ಭಾಷಣಗಳು ಕನ್ನಡದಲ್ಲಿ ಒಂದು ವಿಶೇಷ ದಾಖಲೆಯೆನಿಸಿವೆ. ಇವು ಭಾಷಣಗಳಾದರೂ ವಿಚಾರಗಳ ಭಾರದಿಂದ ಜಗ್ಗುತ್ತಿವೆ. ಪ್ರತಿಯೊಂದು ವಿಚಾರವನ್ನು ಅವರು ಎಳೆಎಳೆಯಾಗಿ ಬಿಡಿಸಿ ಪೃಥಕ್ಕರಿಸಿ ತೋರಿಸುತ್ತಾರೆ. ಆಧಾರಗಳೊಡನೆ ಪ್ರತಿಪಾದಿಸುತ್ತಾರೆ. ಮೊದಲ ಬಾರಿಗೆ ಸಾಂಪ್ರದಾಯಿಕ ವಿಚಾರಗಳನ್ನು ಪ್ರಶ್ನಿಸಿ, ಹೊಸ ನಿರ್ಧಾರಗಳನ್ನು ಪ್ರಕಟಿಸುವ ನಿದರ್ಶನಗಳಾಗಿವೆ ಇವು. ಈ ಎಲ್ಲ ಭಾಷಣಗಳು ಎಷ್ಟು ಪ್ರಭಾವಶಾಲಿಯಾದವು ಎಂದರೆ, ಆ ಸಂದರ್ಭದಲ್ಲಿ ವ್ಯಕ್ತವಾದ ಪ್ರಶಂಸೆ, ಪ್ರತಿರೋಧ, ವಾದ ವಿವಾದ, ಟೀಕೆಟಿಪ್ಪಣಿ, ಸಮರ್ಥನೆ ಬೆಂಬಲಗಳದೇ ಒಂದು ಪ್ರತ್ಯೇಕ ಚರಿತ್ರೆಯಾಗುತ್ತದೆ. ಶ್ರೀರಂಗಪಟ್ಟಣದಲ್ಲಿ 'ನಿರಂಕುಶಮತಿಗಳಾಗಿ' ಎಂಬ ಭಾಷಣಮಾಡಿದಾಗ, ಅದನ್ನು ವಿರೋಧಿಸಿ ಕೆಲವರು ವಿಶ್ವವಿದ್ಯಾನಿಲಯಕ್ಕೆ ದೂರಿತ್ತರು. ವಿಶ್ವವಿದ್ಯಾನಿಲಯ ವಿಚಾರಣೆಗಾಗಿ ಪ್ರೊ. ವೆಂಕಣ್ಣಯ್ಯನವರನ್ನು ನೇಮಿಸಿತು. ಅವರು ಪರಿಶೀಲಿಸಿ," ನನ್ನ ಮಗನಿಗೆ ನಾನು ಬುದ್ಧಿ ಹೇಳಬೇಕಾದರೆ ಇದಕ್ಕಿಂತಲೂ ಉತ್ತಮವಾಗಿ ಮತ್ತು ಸಮರ್ಥವಾಗಿ ನಾನು ಏನನ್ನೂ ಹೇಳಲಾರೆ"[26] ಎಂದು ವರದಿಮಾಡಿದರಂತೆ. ಕುವೆಂಪು ಅವರ ವಿಚಾರ ಪ್ರತಿಪಾದನೆಗೆ ದೊರೆತ ಮೊದಲ ಅರ್ಹ ಜಯ ಇದಾಗಿತ್ತು. ಬೆಂಗಳೂರು ವಿಶ್ವವಿದ್ಯಾನಿಲಯದ ಘಟಿಕೋತ್ಸವ ಸಂದರ್ಭದಲ್ಲಿ 'ವಿಚಾರ ಕ್ರಾಂತಿಗೆ ಆಹ್ವಾನ' ಭಾಷಣ ಮಾಡಿದಾಗ ಅದನ್ನೋದಿದ ಒಬ್ಬ ಪ್ರಮುಖರು ಕುವೆಂಪು 'ಬೆಂಕಿ'[27] ಯಂತೆ ಎಂದು ಹೇಳಿದರಂತೆ. ಆದರೆ ಕುವೆಂಪು ಬೆಂಕಿಯಲ್ಲ ನಿಶ್ಚಯವಾಗಿಯೂ ಅವರೊಂದು ಬೆಳಕು. ಮೈಸೂರಿನ ಬರಹಗಾರರ ಒಕ್ಕೂಟದಲ್ಲಿ ಮಾಡಿದ 'ಸಂಸ್ಕೃತಿ ಕ್ರಾಂತಿಗೆ ಕಹಳೆನಾಂದಿ' ಭಾಷಣವಂತೂ ಒಂದು ಇತಿಹಾಸವನ್ನೇ ಸ್ಥಾಪಿಸಿತು. ಇದರ ಪರಿಣಾಮವಾಗಿ ಒಂದು ಕಡೆ ಅವರ ವಿರುದ್ಧ ವಕೀಲರ ನೋಟೀಸು ಜಾರಿಯಾಯಿತು. ಇನ್ನೊಂದು ಕಡೆ ಅವರನ್ನು ಕೋರ್ಟಿಗೆಳೆದರೆ ಸಮರ್ಥನೆಗಾಗಿ ಖ್ಯಾತ ವಕೀಲರ ಒಂದು ಮಂಡಳಿಯೇ ರಚಿತವಾಯಿತು.[28] ಈಗ ಇವೆಲ್ಲ ಇತಿಹಾಸದ ಭಾಗಗಳಾಗಿವೆ. ಆದರೆ ಕುವೆಂಪು ವಿಚಾರಗಳು ನಿರಂತರ ಪರಿಣಾಮಕಾರಿಯಾಗಿ ಮುಂದುವರಿದಿವೆ. ಈ ಮೂರು ಭಾಷಣಗಳು ಕನ್ನಡದ ಅತಿಶ್ರೇಷ್ಠ ಭಾಷಣಗಳೆನ್ನುವುದರಲ್ಲಿ ಸಂಶಯವಿಲ್ಲ. ಇಂದಿಗೂ ಮುಂದಕ್ಕೂ ಪ್ರಸ್ತುತವಾಗುವ ವಿಚಾರಗಳ ಒಂದು ಗೊಂಚಲೇ ಇಲ್ಲಿದೆ. ಸ್ವೀಕೃತ ಮೌಲ್ಯಗಳ ವಿಚಾರದಲ್ಲಿ ಹೊಸದೃಷ್ಟಿಯನ್ನು ತಂದು ಕೊಟ್ಟ ಕೀರ್ತಿ ಕುವೆಂಪು ಅವರದು. ಈ ವೈಚಾರಿಕತೆ

ಒಂದು ಸಾಮಾಜಿಕ ಸಂದರ್ಭದಲ್ಲಿ ನಾಡನ್ನು ರಚನಾತ್ಮಕವಾಗಿ ಕಟ್ಟುವ ಕೈಂಕರ್ಯಕ್ಕೆ ಸಂಬಂಧಿಸಿದ್ದೆಂಬುದು ತನಗೆ ತಾನೇ ವೇದ್ಯವಾಗುವ ಸಂಗತಿ. ಒಂದು ಸಂಸ್ಕೃತಿಯನ್ನು ನಕಾರಾತ್ಮಕವಾಗಿ ಪರಿವರ್ತಿಸುವುದು ಅವರ ಅಪೇಕ್ಷೆಯಲ್ಲ. ಅದನ್ನು ಗುಣಾತ್ಮಕವಾಗಿ ಬದಲಿಸುವುದು ಅವರ ಉದ್ದೇಶ. ಆದ್ದರಿಂದ ಕುವೆಂಪು ಅವರ ವಿಚಾರ ಸಾಹಿತ್ಯವನ್ನು 'ಕ್ರಾಂತಿ ಸಾಹಿತ್ಯ' ಎಂದು ಕರೆದರು. ಆದೀತು. ಅಷ್ಟರಮಟ್ಟಿಗೆ ಅದು ಬದಲಾವಣೆಯ ಬೀಜವನ್ನು ಬಿತ್ತಿದೆ. ವಿಚಾರದ ದೀವಿಗೆಯನ್ನು ಹೊತ್ತಿಸಿದೆ.

ಕುವೆಂಪು ಅವರು ಮಹಾಮಾನವತಾವಾದಿಯಾಗಿರುವಂತೆಯೇ ಮಹಾವಿಚಾರವಾದಿ ಕೂಡ. ಅವರ ಈ ವಿಚಾರವಾದ ತೋರಿಕೆಯದಲ್ಲ. ಸಾಮಾಜಿಕ ಬದ್ಧತೆಯಿಂದ ಕೂಡಿರುವಂಥದು. ಅವರ ಈ ವಿಚಾರಕ ಧೋರಣೆ ಸೃಜನಶೀಲಸಾಹಿತ್ಯದಲ್ಲಿ ಗುಪ್ತವಾಗಿ, ಧ್ವನಿತವಾಗಿ ಸಾಗಿದರೆ, ವಿಚಾರ ಸಾಹಿತ್ಯದಲ್ಲಿ ನೇರವಾಗಿ, ಸ್ಪಷ್ಟವಾಗಿ ಮತ್ತು ಪ್ರಖರವಾಗಿ ಕಾಣಿಸಿಕೊಂಡಿದೆ. ನಮ್ಮಲ್ಲಿ ಅನೇಕ ವಿಚಾರವಾದಿಗಳು ಮಾತಿನಲ್ಲಿಯೇ ಉಳಿದು ಬಿಡುತ್ತಾರೆ. ಅದು ಅವರ ವ್ಯಕ್ತಿತ್ವದಲ್ಲಿ ಕರಗುವುದಿಲ್ಲ. ಕುವೆಂಪು ಅವರಿಗೆ ಈ ದ್ವಂದ್ವವಿಲ್ಲ. ಅವರು ಬರೆದ ಹಾಗೆ ಬದುಕಿದವರು ಬದುಕಿದ ಹಾಗೆ ಬರೆದವರು. ಅನೇಕ ಸರ್ತಿ ಪೂರ್ವ ವಿಚಾರವಾದಿಗಳಿಂದ ಗ್ರಹಿಸಿದ ವಿಚಾರಗಳು ನಮ್ಮನ್ನು ಪರಿವರ್ತಿಸುವುದು ನಿಜವಾದರೂ, ಸ್ವತಂತ್ರ ವಿಚಾರಧಾರೆಯಾಗಿ ಹೊಮ್ಮದೆ ಹೋಗಿ ಬಿಡಬಹುದು. ಆದರೆ ಕುವೆಂಪು ವಿಚಾರ ಸಾಹಿತ್ಯ ಸ್ವತಂತ್ರ ಆಲೋಚನೆಯ ಉನ್ನತ ಪ್ರಣಾಳಿಕೆಯೆನ್ನುವುದು ಸತ್ಯ. ಅವರು ವಿಚಾರ ಮಾಡುವಾಗ ತರ್ಕಕ್ಕೆ ಅನುಭವವನ್ನು, ಬುದ್ಧಿಗೆ ಹೃದಯವನ್ನು ಜೋಡಿಸುತ್ತಾರೆ. ಇಲ್ಲಿಯ ಭಾಷಣಗಳು ಬರವಣಿಗೆಯ ಖಚಿತತೆಯನ್ನು ಹೊಂದಿವೆ. ಈ ಎಲ್ಲ ಭಾಷಣಗಳ ಗುರಿ ವಿಮರ್ಶಕನಲ್ಲ, ವಿದ್ವಾಂಸನೂ ಅಲ್ಲ, ಯುವಕರು, ವಿದ್ಯಾರ್ಥಿಗಳು ಮತ್ತು ಸಾಮಾನ್ಯರು. ವಿಚಾರ ಪ್ರಚೋದಕವೂ, ಪ್ರಸ್ತುತವೂ ಆದ ಇಂತಹ ಬರವಣಿಗೆ ಕನ್ನಡದಲ್ಲಿ ಅಪರೂಪ. ತಮ್ಮ ವಿಚಾರಗಳಿಂದ ಇಷ್ಟೊಂದು ಪ್ರಭಾವಿಸಿದ ಇನ್ನೊಬ್ಬ ಕನ್ನಡ ಲೇಖಕನಿಲ್ಲ. ಅವರು ನಮ್ಮಲ್ಲಿ ವಿಚಾರದ ಆಂದೋಲನವನ್ನೆ ಉಂಟುಮಾಡಿದರು. ಕನ್ನಡದ ಸಂದರ್ಭದಲ್ಲಿ ಹೊಸ ವಿಚಾರ ಕ್ರಾಂತಿಗೆ ಕುವೆಂಪು ಕಾರಣರಾದಂತೆ ಬಹಳ ಜನಕಾರಣರಾಗಿಲ್ಲೆಂದರೆ ಅದನ್ನು ನಂಬಬೇಕು. 'ಸ್ಥಿರ' ಸಂಸ್ಕೃತಿಯನ್ನು 'ಚರ' ಸಂಸ್ಕೃತಿಗೆ ಬದಲಾಯಿಸುವುದು ಕುವೆಂಪು ಅವರ ಉದ್ದೇಶ ಮತ್ತು ಆದೇಶ ಕೂಡ. ಈ ಎಲ್ಲ ಲೇಖನಗಳ ಮೂಲದಲ್ಲಿರುವುದು ಸಾಂಪ್ರದಾಯಿಕ ಸಮಾಜಕ್ಕೂ ಮತ್ತದರ ಸ್ಥಾಪಿತ ಮೌಲ್ಯಗಳಿಗೂ ಬಲವಾದ ಆಘಾತ ನೀಡಿ, ಆ ಮೂಲಕ ಪರಿವರ್ತನೆಯ ಪ್ರಕ್ರಿಯೆಗೂ ನೂತನ ಮೌಲ್ಯಗಳ ಆವಾಹನೆಗೂ ಕಾರಣವಾಗಬೇಕೆಂಬುದು. ಒಟ್ಟಂದದಲ್ಲಿ ಸಾಮಾಜಿಕ ಜಾಗೃತಿಯೇ ಕುವೆಂಪು ವಿಚಾರ ಸಾಹಿತ್ಯದ ಜೀವನಾಡಿ ಹಾಗೂ ಅಪೇಕ್ಷಿತ ಗುರಿ ಎಂದು ಹೇಳಬಹುದು.

* * *

ಅಡಿ ಟಿಪ್ಪಣಿಗಳು

1. ಸಿಪಿಕೆ, ಮಹಾಕವಿಯೊಡನೆ ಮಾತುಕತೆ, ಪು. ೨.
2. ಮಂತ್ರಾಕ್ಷತೆ, ಪು. ೯.
3. ಆತ್ಮಶ್ರೀಗಾಗಿ ನಿರಂಕುಶಯತಿಗಳಾಗಿ, ಪು. ೯-೧೦.
4. ಅದೇ, ಪು. ೩೪.
5. ಅದೇ, ಪು. ೫೦.
6. ಷಷ್ಟಿನಯನ, ಪು. ೭೦.
7. ಅದೇ, ಪು. ೭೭.
8. ಅದೇ, ಪು. ೧೨೧.
9. ಮನುಜಮತ-ವಿಶ್ವಪಥ, ಪು. ೧೧.
10. ವಿಚಾರಕ್ರಾಂತಿಗೆ ಆಹ್ವಾನ, ಪು. ೯೨, ೧೧೮.
11. ಆತ್ಮಶ್ರೀಗಾಗಿ ನಿರಂಕುಶಯತಿಗಳಾಗಿ, ಮುನ್ನುಡಿ, ಪು. vii.
12. ಷಷ್ಟಿನಯನ, ಪು. ೨೦೮.
13. ವಿಚಾರಕ್ರಾಂತಿ, ಪು. ೩.
14. ಅದೇ, ಪು. ೫.
15. ಅದೇ, ಪು. ೭.
16. ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತೆ, ಪು. ೩೭.
17. ಆತ್ಮಶ್ರೀಗಾಗಿ ನಿರಂಕುಶಯತಿಗಳಾಗಿ, ಮುನ್ನುಡಿ, ಪು. vii.
18. ಅದೇ, ಪು. ೩.
19. ಅದೇ, ಪು. ೧೩.
20. ಷಷ್ಟಿನಯನ, ಪು. ೨೨.
21. ಮನುಜಮತ-ವಿಶ್ವಪಥ, ಪು. ೫೧.
22. ಷಷ್ಟಿನಯನ, ಪು. ೪೯.
23. ವಿಚಾರಕ್ರಾಂತಿಗೆ ಆಹ್ವಾನ, ಪು. ೯೧.
24. ಮನುಜಮತ-ವಿಶ್ವಪಥ, ಪು. ೭೦.
25. ವಿಚಾರಕ್ರಾಂತಿ, ಪು. ೩೯.
26. ರಾಮೇಗೌಡ ಮತ್ತು ಪ್ರಧಾನ ಗುರುದತ್ತ, ವಿನಯೋನ್ನತಿ, ಪು. ೧೨.
27. ಜನತಾಪ್ರಜ್ಞೆ ಮತ್ತು ವೈಚಾರಿಕ ಜಾಗೃತೆ, ಹಿನ್ನುಡಿ (ದೇಜಗೌ), ಪು. ೮೧.
28. ಅದೇ, ಹಿನ್ನುಡಿ, ಪು. ೭೫.

ಕುವೆಂಪು ಸಾಹಿತ್ಯದಲ್ಲಿ ರಾಜಕೀಯ ನಿಲುವುಗಳು

ಎಸ್. ಶಿವಾನಂದ

ಸಾಹಿತ್ಯದೊಳಗೆ ರಾಜಕೀಯ ಎಂದಾಕ್ಷಣ ರಾಜಾವಳಿ ಕುರಿತದ್ದು ಅಥವಾ ರಾಜಕಾರಣಿ ಕುರಿತದ್ದು ಅಥವಾ ರಾಜಕೀಯ ವಸ್ತು ಕುರಿತದ್ದು ಎಂಬುದಾಗಿ ತಿಳಿಯುವುದು ಮೇಲ್ಮೈ ಮಟ್ಟದ ಸರಳೀಕರಣವಾಗುತ್ತದೆ. ಇನ್ನೊಂದು ಕಡೆ, ಸಾಹಿತ್ಯವು ರಾಜಕೀಯದಿಂದ ದೂರವಿರಬೇಕು; ಪಕ್ಷಾತೀತವಾಗಿರಬೇಕು; ಮುಕ್ತವಾಗಿರಬೇಕು ಎಂಬುದಾಗಿ ಹೇಳಲಾಗುತ್ತದೆ. ಆದರೆ ಇಂಥ ಅಪಕಲ್ಪನೆಗಳ ಅಂತರ್ಯದಲ್ಲಿ ಸಾಹಿತ್ಯ ಮತ್ತು ರಾಜಕೀಯ ಬೇರೆ ಬೇರೆ ಕ್ಷೇತ್ರಗಳು; ಹಾಗೂ ಸಾಹಿತ್ಯವು ರಾಜಕೀಯ ವಲಯದಿಂದ ಮಲಿನವಾಗಬಾರದು ಎಂಬ ಗ್ರಹಿಕೆ ಹುದುಗಿದೆ. ಇಲ್ಲಿ ರಾಜಕೀಯ ಎಂದರೆ ಕೇವಲ ಪುಂಡ ಪುಢಾರಿಗಳ ಆಡುಂಬೊಲ, ಅದು ಅಶುದ್ಧ, ಅನೈತಿಕ ಎಂಬುದು ಗೃಹೀತ. ಆದರೆ ಸಾಹಿತ್ಯವು ರಾಜಕೀಯವಾಗಿ ತಟಸ್ಥವಾಗಿರಬೇಕು ಎಂಬ ಗ್ರಹಿಕೆಯ ಹಿಂದೆ ಪ್ರಜಾಪ್ರಭುತ್ವ ವಿರೋಧೀ ನಿಲುವು ಮತ್ತು 'ಅರಾಜಕತೆ'ಯ ಧೋರಣೆ ಅಂತರ್ಗತವಾಗಿರುತ್ತದೆ. ಇಂಥ ತಟಸ್ಥ ನೀತಿ ಅಂತಿಮವಾಗಿ ಯಥಾಸ್ಥಿತಿವಾದಿ ಆಗಿರುವುದಲ್ಲದೆ, ತನಗೆ ತಿಳಿಯದಂತೆಯೆ ಪ್ರತಿಗಾಮಿಯೂ ಆಗಿ ಪರಿಣಮಿಸುತ್ತದೆ.

ಹಾಗೆ ನೋಡಿದರೆ, ರಾಜಕಾರಣ ಎಂಬುದು ಬದುಕಿನಿಂದ, ಸಮಾಜದಿಂದ ಬೇರ್ಪಟ್ಟ ಸ್ವಯಂ ಸಂರಚನಾ ಘಟಕವೇನಲ್ಲ; ಬದಲಾಗಿ, ಅದು ಮನುಷ್ಯನ ಇರವು ಮತ್ತು ಅರಿವನ್ನು ನಿರ್ದೇಶಿಸುವ/ನಿಯಂತ್ರಿಸುವ 'ರಾಜನೀತಿ' ಅರ್ಥಾತ್ 'ಆಳುವ ಪ್ರಕ್ರಿಯೆ'ಯೇ ಆಗಿರುತ್ತದೆ. ರಾಜಕಾರಣ ಎಂಬುದು ಮೂಲತಃ 'ಅಧಿಕಾರಸ್ಥ' ನೆಲೆಯೇ ಆಗಿರುತ್ತದೆ.

ಮನುಷ್ಯನ 'ಇರವು' [Existence] ಎನ್ನುವುದು ಜಾತಿ, ವರ್ಗ, ಮತ-ಧರ್ಮ, ಶಿಕ್ಷಣ ಮುಂತಾದ ಈ ಎಲ್ಲ ಸಾಮಾಜಿಕ-ಆರ್ಥಿಕ-ಶೈಕ್ಷಣಿಕ-ಆಧ್ಯಾತ್ಮಿಕ-ಸಾಂಸ್ಕೃತಿಕ-ರಾಜಕೀಯದಂಥ ಮಾನವ ನಿರ್ಮಿತ 'ಅಧಿಕಾರಸ್ಥ' ನಿಯಂತ್ರಕಗಳ ನೆಲೆಗಳನ್ನು ಮೀರುವುದರಲ್ಲಿಯೆ ಒಬ್ಬ ಲೇಖಕನ ಚಾರಿತ್ರಿಕ ಮಹತ್ವ ಅಥವಾ ಮಿತಿಗಳನ್ನು ಗುರುತಿಸಬೇಕಾಗುತ್ತದೆ. ಇರವು ಎನ್ನುವುದು ಅರಿವಿನ [Knowledge] ಮೂಲವಾಗುತ್ತ,

ಮಾನವ ನಿರ್ಮಿತ ಈ ನಿಯಂತ್ರಕಗಳನ್ನು ಮೀರುವ ಕ್ರಿಯೆಯಲ್ಲಿಯೆ ಸಂಘರ್ಷದ ಬೀಜವಿದ್ದು, ಹೊಸ 'ಅರಿವಿನ' ಹೊಸ 'ಇರವಿನ' ಮನುಷ್ಯನನ್ನು ಪುನರ್ ನಿರ್ಮಿಸಲು ಉದ್ಯುಕ್ತವಾಗುತ್ತದೆ. 'ಪುನರ್ ನಿರ್ಮಾಣ'ದ ಇಂಥ ಶಕ್ತಿಯನ್ನೆ ಆಳದಲ್ಲಿ 'ರಾಜಕಾರಣ' ಎನ್ನಬೇಕಾಗುತ್ತದೆ.

ಸಾಹಿತ್ಯ/ಸಾಹಿತ್ಯ ವಿಮರ್ಶೆಗಳು ಕೇವಲ ಶೈಕ್ಷಣಿಕ ಶಿಸ್ತುಗಳಷ್ಟೇ ಅಲ್ಲ; ಅವು ಮಾನವ ನಿರ್ಮಿತ ಸಂಸ್ಥೆಗಳೂ ಆಗಿರುವುದರಿಂದ ಮೂಲತಃ ಚರಿತ್ರೆ ಮತ್ತು ಸಂಸ್ಕೃತಿಯ ಉತ್ಪನ್ನವೇ ಆಗಿರುತ್ತವೆ. ಈ ದೃಷ್ಟಿಯಿಂದ ಸಾಹಿತ್ಯ/ಸಾಹಿತ್ಯ ವಿಮರ್ಶೆಯು 'ಆಕೃತಿ ವಿಮರ್ಶೆ'ಯಾಗಷ್ಟೇ ಉಳಿಯದೆ, ಅಂತಿಮವಾಗಿ 'ಸಂಸ್ಕೃತಿ ವಿಮರ್ಶೆ'ಯಾಗಿ ಇಳಿದಾಗಲೆ ಸಮಕಾಲೀನತೆಗೆ ಶ್ರೇಷ್ಠತೆಯ ಪ್ರಸ್ತುತತೆ ಒದಗುತ್ತದೆ; ಮತ್ತು ಸಂಸ್ಕೃತಿ ವಿಮರ್ಶೆ ಎಂಬುದು ಸಂಸ್ಕೃತೀಕರಣದ ಉಪಕರಣವಾಗದೆ, 'ಪ್ರತಿ ಸಂಸ್ಕೃತಿ ನಿರ್ಮಾಣ'ದ ಒತ್ತಡವಾಗಿ ಅರಳುವ ಸಂದರ್ಭದಲ್ಲಿಯೆ ಸಾಹಿತ್ಯ-ಸಂಸ್ಕೃತಿ-ಚರಿತ್ರೆಗಳು ರಾಜಕಾರಣದ ಶಕ್ತಿಗಳಾಗಿ ಮಾರ್ಪಡುತ್ತವೆ. ಕುವೆಂಪುರವರ ಸಾಹಿತ್ಯಿಕ, ಸಾಮಾಜಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ನಿಲುವುಗಳು ಅಂತಿಮವಾಗಿ ಪ್ರತಿ ಸಂಸ್ಕೃತಿ ನಿರ್ಮಾಣದ ಒತ್ತಡಗಳಾಗಿ/ರಾಜಕಾರಣದ ಶಕ್ತಿಗಳಾಗಿ ನಿಲ್ಲುವುದರಿಂದಲೇ ಇಪ್ಪತ್ತನೇ ಶತಮಾನದ ಅತ್ಯಂತ ಶ್ರೇಷ್ಠ ಲೇಖಕರಾಗಿ ಅವರು ನಿಲ್ಲುತ್ತಾರೆ.

ನವೋದಯ ಸಾಹಿತ್ಯದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಿಂದ ಬೇರ್ಪಡಿಸಿ, ಕುವೆಂಪು ಸಾಹಿತ್ಯದೊಳಗಿನ ರಾಜಕೀಯ ನಿಲುವುಗಳನ್ನು ಪುನಾರಚಿಸಿಕೊಳ್ಳಲು ಸಾಧ್ಯವಿಲ್ಲ. 'ಪುನಾರಚನೆ' [Reconstruction] ಯಾಕೆ ಅವಶ್ಯವೆಂದರೆ: ಕುವೆಂಪು ಸಾಹಿತ್ಯವನ್ನು ಪ್ರಾರಂಭದಿಂದಲೂ ತಪ್ಪು ತಪ್ಪಾಗಿ ಅರ್ಥೈಸಿ [Miss-reading] ಮಂಡಿಸಿರುವುದು. ಕುವೆಂಪುರವರ ಸಮಕಾಲೀನರಾದಿಯಾಗಿ ತದನಂತರ ತಲೆ ಮಾರುಗಳೂ ಕುವೆಂಪು ಸಾಹಿತ್ಯ ಸೃಷ್ಟಿಯ ಮಹತ್ವವನ್ನು / ಪ್ರತಿ ಸಂಸ್ಕೃತಿ ನಿರ್ಮಾಣದ ತುಡಿತಗಳನ್ನು ತಿರುಚಿ ಹತ್ತಿಕ್ಕಲು / ಕಡೆಗಣಿಸಲು ನಡೆಸಿರುವ ಕುತಂತ್ರದ 'ರಾಜಕೀಯ'ವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕಾಗಿದೆ. ವಿಮರ್ಶೆಯ ಹೆಸರಿನಲ್ಲಿ ರಾಚುತ್ತಿದ್ದ / ತುಳಿಯುತ್ತಿದ್ದ ಇಂತ ನೀಚ ರಾಜಕೀಯದ ಹಿಂದೆ ಜಾತಿ ಕುಲ ಪಂಥ ವರ್ಗ ನೆಲೆಗಳು ಎಕ್ಕಿ ಸೊಕ್ಕಿರುವುದನ್ನು ಗಮನಿಸಬಹುದಾಗಿದೆ. ಆದರೆ ತುಳಿತಕ್ಕೊಳಗಾದ ಜಾತಿ ಕುಲ ವರ್ಗನೆಲೆಗಳಿಂದಲೇ ಬಂದ ಕುವೆಂಪು ಶೋಷಿತವರ್ಗದ ಪರವಾಗಿ ನಿಂತಿದ್ದರಿಂದಾಗಿ ಇಂಥ ಸಾಂಸ್ಕೃತಿಕ ಹುನ್ನಾರಗಳನ್ನು ಅತ್ಯುಗ್ರವಾಗಿ ಪ್ರತಿಭಟಿಸಿದ್ದಾರೆ. 'ಶೂದ್ರ ತಪಸ್ವಿ' ನಾಟಕ ಕುರಿತಂತೆ ಬಂದ ಮಾಸ್ತಿಯವರ ಟೀಕಾಸ್ತ್ರಕ್ಕೆ ಕುವೆಂಪು ಕೊಟ್ಟ ಮಾರುತ್ತರವು ವೈದಿಕ ಮತ್ತು ಶೂದ್ರ ಸಂಸ್ಕೃತಿಗಳ ನಡುವಣ ಸಂಘರ್ಷದ ಮಹತ್ವಪೂರ್ಣ ದಾಖಲೆಯಾಗಿದೆ. ಈ ನಿಟ್ಟಿನಲ್ಲಿಯೆ, ಕುವೆಂಪುರವರು 'ವಿಮರ್ಶಕವರೇಣ್ಯ'ನನ್ನು ಹೀಯಾಳಿಸುವುದನ್ನು ಅರ್ಥ ಮಾಡಿಕೊಳ್ಳಬೇಕು. 'ನೀನೇರ ಬಲ್ಲೆಯಾ ನಾನೇರುವೆತ್ತರಕೆ?' [೧೯೩೪] ಎಂಬ ಸವಾಲಿನಲ್ಲಿ ತನ್ನ ಕಾಲದ ವೈದಿಕ ವಿಮರ್ಶಕನ ವಿರುದ್ಧ ಶೆಡ್ಡು ಹೊಡೆದು ನಿಲ್ಲುತ್ತಾರೆ; ಹಾಗೆಯೆ 'ನಾ ಬಲ್ಲೆ ನೀನೊಂದು ಪಂಡಿತ ನಿಘಂಟೆಂದು' [೧೯೩೪] ಎಂಬುದಾಗಿ ಜರೆಯುತ್ತಾರೆ; ಅವತ್ತಿನ ವಿಮರ್ಶಕನನ್ನು

'ಗ್ರಾಮಸಿಂಹ' [೧೯೪೧: ಕೃತ್ತಿಕೆ] ಎಂದು ಕರೆಯುತ್ತ 'ಗಲ್ಲಿಯ ವಿಮರ್ಶೆಯೊಳ್ ಕಿವಿಗೆ ಬೀಳುವುದುಂಟೆ?' ಎಂಬುದಾಗಿ ಹಂಗಿಸುತ್ತಾರೆ. ಮತ್ತೊಂದು ಕಡೆ ವಿಮರ್ಶೆಯನ್ನು ಕಾಗೆಗಳಿಗೆ ಹೋಲಿಸುತ್ತಾರೆ.

"ಗೋ ಕಾಕ ವಿಕೃತ್‌ಗಳ ಕಾಲ್ಗೊಳೆ ಚಿಕಿತ್ಸೆಯಂ,
ಪಲ್‌ಕೋಡು ಕೊಕ್ಕಿಗಿದೆ, ಮೆದುಳಿಗುಂಟೇಶ್ರಮಂ?

[ಮಂತ್ರಾಕ್ಷತೆ:೧೯೪೧]

ಮೊದಲು ಹೊಗಳಿ, ಅನಂತರ ತೆಗಳಲು ನಿಂತ ತನ್ನ ಸಮಕಾಲೀನರ ಬಗ್ಗೆ ಇನ್ನೊಂದು ಕವಿತೆಯಲ್ಲಿ ಪ್ರತಿಕ್ರಿಯಿಸಿದ್ದಾರೆ:

"ಬೇಕಿಹುದನಾಡಬೇಕೆಂಬಾಸೆಯಿಹುದೆನಗೆ.
ರುಚಿಗಂತೆ ಸಾಹಿತ್ಯ! ಕಲೆಗಾಗಿ ಕಲೆಯಂತೆ!
ಬೆಳಕಿಗಲ್ಲದ ಎಣ್ಣೆ ಬತ್ತಿಗಳ ಕೃಷಿಯಂತೆ!
ದಿಟಬಯಕೆ ಬಾಯಿಲ್ಲದಿದೆ; ಹುಸಿಗೊ ಹೆಬ್ಬಾಯಿ!
ಮೊದ ಮೊದಲು ಹೃದಯ ಸುಖ ತೊದಲಾಗಿ ಹೊರಹೊಮ್ಮೆ
ಸಾಹಿತ್ಯ ಕಲೆಯೆಂದು ಬರೆದೆನ್ನ ಕವಿಯೆಂದು,
ಮೆಚ್ಚಿದರು ಹೊಗಳಿ, ತರುವಾಯ ಹೆಸರಿನ ಹೆಮ್ಮೆ
'ಕಲೆಗಾಗಿ ಕಲೆ' ಎಂದುದದರ ನೈಜವ ಕೊಂದು".

[ಎಚ್ಚರಿಕೆ:ಕೃತ್ತಿಕೆ:೧೯೩೫.]

ಈ ಹಿನ್ನೆಲೆಯಲ್ಲಿಯೆ 'ಕೊಳಲು', 'ನವಿಲು', 'ಕಥನ ಕವನಗಳು' ಸಂಕಲನಗಳಲ್ಲಿನ ಅಚ್ಚಗನ್ನಡದ/ದೇಸೀಯ ಎನ್ನಿಸುವ/ಆಪ್ತತೆಯನ್ನು ಬೆಸೆಯುವ ನುಡಿಕಟ್ಟು ಲಯ ಕಟ್ಟುಗಳನ್ನು ಬದಿಗಿರಿಸಿ, ಮಾರ್ಗದ ಛಂದೋಬಂಧಗಳನ್ನು/ ಸಂಸ್ಕೃತ ಶಬ್ದ ಸಂಪತ್ತನ್ನು ಬಳಸಲು ಶುರು ಮಾಡಿದ್ದು ಕುವೆಂಪು ಎದುರಿಸಿದ ಸಾಂಸ್ಕೃತಿಕ ಸವಾಲಿನ ಒಳ ಸಂರಚನೆಯೂ ಆಗಿತ್ತೆಂಬುದನ್ನು ಮರೆಯುವಂತಿಲ್ಲ.

ನಂತರದ ತಲೆಮಾರುಗಳು ಕುವೆಂಪು ಸಾಹಿತ್ಯವನ್ನು ಅಡ್ಡಾದಿಡ್ಡಿ ಜಗ್ಗಾಡಿ ತಂತಮ್ಮ ಮಠಗಳನ್ನು ಕಟ್ಟಿಕೊಳ್ಳುವಲ್ಲಿ ಮಗ್ನರಾದರು. ಒಂದು ಕಡೆ ಕುವೆಂಪು ಕಟ್ಟಾಭಿಮಾನಿಗಳು ವ್ಯಕ್ತಿ ಪೂಜೆಯ ಹಂತಕ್ಕೂ ತಲುಪಿ ಕುವೆಂಪು ಸಾಹಿತ್ಯವನ್ನು ಕುವೆಂಪುರವರ ಭವ್ಯೋಪಭವ್ಯ ಪರಿಭಾಷೆಯಲ್ಲಿಯೆ ತಾತ್ಪರ್ಯ-ವಿವರಣೆ-ವ್ಯಾಖ್ಯಾನ ಮಾಡುತ್ತಾ ಬಂದರು; ಮತ್ತೊಂದು ಕಡೆಯಲ್ಲಿ ನವ್ಯ ವಿಮರ್ಶಕರು ಕುವೆಂಪು ಸಾಹಿತ್ಯವನ್ನು ಎಲಿಯಟ್ ಲೀವಿಸ್ ಪ್ರಣೀತ ಕೃತಿನಿಷ್ಠ ವಿಮರ್ಶೆಯ ಹತಾರಗಳಿಂದ ಜಜ್ಜಿ ಹಾಕಿದರು. ಕುವೆಂಪು ಬರೆದದ್ದೆಲ್ಲ ಮಹಾನ್ ಭೂಮ ಸಾಹಿತ್ಯ ಎಂದೆಲ್ಲ ಒಂದು ಗುಂಪು ಉಘೇ ಉಘೇ ಎಂದು ಉಗ್ಗಡಿಸಿದರೆ, ಮತ್ತೊಂದು ಗುಂಪು ಕುವೆಂಪು ಕಾವ್ಯ ಅಳ್ಳಕವಾದದ್ದು, ಜೊಳ್ಳು ಜೊಳ್ಳಾದದ್ದು ಎಂದು ತುಚ್ಛೀಕರಿಸುತ್ತ ಮತ್ತೊಂದು ಅತಿರೇಕದಲ್ಲಿ ನಿಂತರು. ಒಂದು ಗುಂಪು ಹುಂಬುತನದ

ಭಾವಾತಿರೇಕದಲ್ಲಿ ಕುವೆಂಪು ಸಂರಕ್ಷಕ ದಳವಾಗಿ ನಿಂತರೆ, ಇನ್ನೊಂದು ಗುಂಪು ಸಾಹಿತ್ಯಿಕ ಮಾನ 'ದಂಡ'ಗಳಿಂದಲೇ ಕುವೆಂಪು ಭಂಜಕ ದಳವಾಗಿ ಕೆಲಸ ಮಾಡಿತು. ಒಬ್ಬ ಮಹತ್ವದ ಕವಿ/ಲೇಖಕನ ಬಗ್ಗೆ ಇಂಥ ಅಸಹ್ಯ/ ಜಿದ್ದು ಜಿಗುಟಿನ ವಾತಾವರಣ ಉಂಟಾದದ್ದು ಸಾಂಸ್ಕೃತಿಕವಾಗಿ ಅನಾರೋಗ್ಯಕರವಾದದ್ದು ಎಂದೇ ಹೇಳಬೇಕಾಗುತ್ತದೆ. ಇಂಥ ಅಸಹನೀಯ ಸನ್ನಿವೇಶ ಕುರಿತಂತೆ ಪೂರ್ಣಚಂದ್ರ ತೇಜಸ್ವಿಯವರು ದಾಖಲಿಸಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ; "ಆಗ ನವ್ಯ ಕಾವ್ಯದ ಅಲೆ ತುಂಬಾ ಜೋರಾಗಿದ್ದ ಕಾಲ. ಆಗಿನ ಪ್ರಮುಖ ನವ್ಯ ಸಾಹಿತಿಗಳಾದ ಶ್ರೀ ಗೋ.ಕೃ. ಅಡಿಗ, ರಾಮಚಂದ್ರ ಶರ್ಮ, ವಿ.ಕೃ. ಗೋಕಾಕ್, ಯು.ಆರ್. ಅನಂತಮೂರ್ತಿ ಮೊದಲಾದವರೆಲ್ಲ ಬ್ರಾಹ್ಮಣರಾಗಿದ್ದುದರಿಂದ ಅದೊಂದು ವೈದಿಕ ಪುನರುತ್ಥಾನ ಆಂದೋಳನದಂತೆ ಇತರರಿಗೆ ಭಾಸವಾಗುತ್ತಿತ್ತು. ಇದರೊಡನೆ ಇವರೆಲ್ಲ ಸಾರಾಸಗಟಾಗಿ ನವೋದಯ ಸಾಹಿತಿಗಳಲ್ಲಿ ಕುವೆಂಪು ಒಬ್ಬರನ್ನೇ ಆರಿಸಿಕೊಂಡು ತಾರಾಮಾರಿ ಟೀಕಿಸುತ್ತಿದ್ದರಿಂದ ನವ್ಯ ಕಾವ್ಯ ಎಂದರೆ ಹಾರುವರ ಪ್ರವರ ಎಂದೇ ಅವರ ವಿರೋಧಿಗಳೆಲ್ಲ ತಾತ್ಸಾರದಿಂದ ನೋಡುತ್ತಿದ್ದರು. ಸಾಹಿತ್ಯದ ಗಂಧ ಗಾಳಿ ಇಲ್ಲಡ ಮಡ್ಡರೇ ಮುಕ್ಕಾಲು ಜನ ಅದರಲ್ಲಿದ್ದವರು. ಸುಮ್ಮನೆ ಕುವೆಂಪು ಭಜನೆಯನ್ನು ಆದಷ್ಟು ತಾರಕ ಸ್ವರದಲ್ಲಿ ಮಾಡಿದರೆ ಸಾಕು, ನವ್ಯ ಸಾಹಿತಿಗಳೆಲ್ಲಾ ಹೆದರಿ ಹಿಂದೆಗೆಯುತ್ತಾರೆಂದು ತಿಳಿದು ಕೂಗಾಡುತ್ತಿದ್ದ ಅವರ ರೀತಿ ನೀತಿಗಳು ಸೃಜನಶೀಲ ಮನಸ್ಸುಗಳಿಗೆ ಅಸಹ್ಯ ಹುಟ್ಟಿಸುವಂತಿದ್ದವು" ["ಅಣ್ಣನ ನೆನಪು: ಲಂಕೇಶ್ ಪತ್ರಿಕೆ:೨೦.೯.೧೯೯೫.] ತೇಜಸ್ವಿಯವರ ಈ ಪ್ರತಿಕ್ರಿಯೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಈ ಎರಡೂ ಗುಂಪುಗಳ ನಡುವಿನ ಜಗಳ ಕೇವಲ ಸಾಹಿತ್ಯಿಕ ಜಗಳವಾಗಷ್ಟೇ ಅಲ್ಲದೆ, ಆಳದಲ್ಲಿ ಎರಡು ವರ್ಣ ಜಾತಿಗಳ ಪ್ರತಿಷ್ಠೆಯ ಪ್ರಶ್ನೆಯೂ ಆಗಿತ್ತೆಂಬುದು ತಿಳಿಯುತ್ತದೆ. ನವ್ಯರು ಪ್ರತಿಪಾದಿಸಿದಂತೆ ಈ ಜಗಳ ಕೇವಲ ಸಾಹಿತ್ಯಿಕ ವಸ್ತುನಿಷ್ಠ ಚರ್ಚೆಯಾಗಿತ್ತು ಎಂಬುದನ್ನು ನಂಬುವಂತಿಲ್ಲ.

ನವ್ಯ ಸಾಹಿತ್ಯ, ನವ್ಯ ವಿಮರ್ಶೆಗಳು ನವೋದಯ ಸಾಹಿತ್ಯವನ್ನು ಮತ್ತು ಪ್ರಗತಿ ಶೀಲ ಸಾಹಿತ್ಯವನ್ನು ಏಕಕಾಲಕ್ಕೆ ಅಧಿಕಾರಸ್ಥ ನೆಲೆಯಿಂದ ಪದಚ್ಯುತಗೊಳಿಸಬೇಕಾಗಿತ್ತು. ತನ್ನ ಅಸ್ತಿತ್ವವನ್ನು ಭದ್ರಗೊಳಿಸುವ ಉತ್ಕಟತೆಯಲ್ಲಿ ತನಗಿಂತ ಹಿಂದಿನ ಪಂಥಗಳ ಸಾಂಸ್ಕೃತಿಕ ಅಧಿಕಾರ ಪತ್ಯೆಯನ್ನು ಒಡೆದು ಹೊರಬರುವ ಪ್ರಕ್ರಿಯೆ ಚಾರಿತ್ರಿಕ ಒತ್ತಡಗಳಿಂದಾಗಿ ಸಹಜ ಎನ್ನಿಸಿದರೂ, ನವೋದಯದ ಬೇಂದ್ರೆ, ಕಾರಂತ, ಮಾಸ್ತಿಯವರ ಬಗ್ಗೆ ನವ್ಯ ವಿಮರ್ಶೆ ಕ್ರಮ ಕ್ರಮೇಣವಾಗಿ ಮೃದುಗೊಳ್ಳುತ್ತ, ಜೀರ್ಣೋಭವಿಸಿಕೊಂಡಂತೆ, ಅದೇ ನವೋದಯದ ಕುವೆಂಪುರನ್ನು ಹೊರಗೇ ಇಟ್ಟದ್ದು ಗ್ರಹೀತ ಸತ್ಯ. ನವ್ಯರ ಸಾಹಿತ್ಯಿಕ ಮಾನದಂಡಗಳು ಇದಕ್ಕೆ ಕಾರಣವೆ? ಅಥವಾ ನವ್ಯರ ತಾತ್ವಿಕ ಸಾಂಸ್ಕೃತಿಕ ವರ್ಗ ನೆಲೆಗಳು ಕಾರಣವೆ? ಎಂಬ ಪ್ರಶ್ನೆಗಳು ಎದುರಾಗುತ್ತವೆ. ಜೊತೆಗೆ ಇಲ್ಲಿ ಇನ್ನೊಂದು ಸಂದೇಹವೂ ಹಣಿಕಿಕ್ಕುತ್ತದೆ. ನವ್ಯರು ಹೆಚ್ಚು ಕಡಿಮೆ ದ್ವೈತ ಸಿದ್ಧಾಂತದ ಮಾಧ್ವ ಬ್ರಾಹ್ಮಣರಾಗಿದ್ದು, ಕುವೆಂಪು ತಾತ್ವಿಕವಾಗಿ ಅದ್ವೈತ ಸಿದ್ಧಾಂತವನ್ನು ಒಪ್ಪಿಕೊಂಡದ್ದು ಈ ಬಿರುಕಿಗೆ ಬುನಾದಿಯಾಗಿತ್ತೆ ಎಂಬ ಪ್ರಶ್ನೆಯನ್ನೂ ಕಡೆಗಣಿಸುವಂತಿಲ್ಲ. ಈ ಬಗ್ಗೆ ಕುವೆಂಪುರವರ

ಮಾತುಗಳೇ ಸ್ಪಷ್ಟೀಕರಣದಂತಿವೆ.''ಮಧ್ವ ಸಿದ್ಧಾಂತಕ್ಕಿಂತ ಕಳಪೆ ಸಿದ್ಧಾಂತ ಮತ್ತೊಂದಿಲ್ಲ! ಆದಕ್ಕೇನೆ ಆ ಮಾರ್ಗದ ಅನುಯಾಯಿಗಳಾದವರಿಗೆ ರಾಮಾಯಣ ದರ್ಶನದಂತಹ ಕೃತಿಗಳನ್ನು ಕಂಡರೆ ಆಗುವುದಿಲ್ಲ. ಏಕೆಂದರೆ ರಾಮಾಯಣ ದರ್ಶನದಲ್ಲಿರುವುದು ಸರ್ವೋದಯ, ಸಮನ್ವಯ ಮತ್ತು ಪೂರ್ಣ ದೃಷ್ಟಿ. ನಿತ್ಯಸಾರಕಿ, ಮುಕ್ತಿಯೋಗ್ಯ, ತಮೋಯೋಗ್ಯ, ನಿತ್ಯ ಸಂಸಾರಿ ಇದನ್ನೆಲ್ಲ ನಂಬಿದವರಿಗೆ ಶ್ರೀ ರಾಮಾಯಣ ದರ್ಶನವನ್ನು ಅಪ್ರೀಸಿಯೇಟ್ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದಲೇ ಅವರು - ಆ ಗುಂಪಿಗೆ ಸೇರಿದ ವಿಮರ್ಶಕ ಮಾನ್ಯರು - ಇಡೀ ಕಾವ್ಯವನ್ನೇ ಹಳಿಯುತ್ತಾ ಕುಳಿತುಕೊಳ್ಳುತ್ತಾರೆ'' ['ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ': ಸಂಕ್ರಮಣ ೬೦:ಜೂನ್ ೧೯೭೪].

ಹಾಗೆ ನೋಡಿದರೆ, ಕುವೆಂಪು ಭಕ್ತರು ಬರೆದು ಹಾಕಿದ ತೊಪ್ಪೆ-ತೊಪ್ಪೆ ತಾತ್ಪರ್ಯ ವ್ಯಾಖ್ಯಾನ ರಾಶಿಯ ಎದುರು ಕುವೆಂಪು ಸಾಹಿತ್ಯ ಕುರಿತಂತೆ ಗಂಭೀರ ಸಾಹಿತ್ಯಿಕ ಪ್ರಶ್ನೆಗಳನ್ನು ನಿಷ್ಠುರವಾಗಿ ಎತ್ತಿದವರು ನವ್ಯ ವಿಮರ್ಶಕರೆ: ಕುವೆಂಪು ಒಬ್ಬ ಶ್ರೇಷ್ಠ ಕಾದಂಬರಿಕಾರ ಎಂಬ ಸತ್ಯವನ್ನು ಕೃತಿನಿಷ್ಠ ವಿಮರ್ಶೆಯ ಮೂಸೆಯಲ್ಲಿಟ್ಟು ಕರಗಿಸಿ ಶೋಧಿಸಿದವರು ನವ್ಯರೆ ಎಂಬುದನ್ನು ಮರೆಯುವಂತಿಲ್ಲ. ಆದರೆ ಕುವೆಂಪುರನ್ನು ಒಬ್ಬ ಪ್ರತಿಭಾವಂತ ಶ್ರೇಷ್ಠ ಗದ್ಯ ಲೇಖಕರನ್ನಾಗಿ ಸ್ವೀಕರಿಸುವಂತೆ ಕವಿಯನ್ನಾಗಿ ಒಪ್ಪಿಕೊಳ್ಳಲಿಲ್ಲ; ಒಪ್ಪಿಕೊಳ್ಳುವಂತೆಯೂ ಇರಲಿಲ್ಲ. ಏಕೆಂದರೆ: ಕಾವ್ಯ ಕುರಿತ ಪರಿಕಲ್ಪನೆ-ಗ್ರಹಿಕೆಗಳು ಕುವೆಂಪುರಿಗೂ ಅಡಿಗರಿಗೂ ತದ್ವಿರುದ್ಧವಾಗಿದ್ದವು. ಕುವೆಂಪು ಕಾದಂಬರಿಗಳ ಬಗ್ಗೆ ನವ್ಯರು ತಳೆದ ನಿಲುವು ಮೇಲುನೋಟಕ್ಕೆ ಸ್ವಾಗತಾರ್ಹ ಅಭಿನಂದನಾರ್ಹ ಎನ್ನಿಸುವಂತಿದ್ದರೂ, ಈ ಕಾದಂಬರಿಗಳನ್ನು ಕುರಿತಂತೆ ವಸಾಹತುಶಾಹೀ ಅನುಭವದ ಹಿನ್ನೆಲೆಯಲ್ಲಿ ಹೊಸ ಸಾಂಸ್ಕೃತಿಕ ಚರ್ಚೆಯನ್ನು ಎತ್ತುವುದಕ್ಕೆ ಬದಲಾಗಿ, 'ಕೇಂದ್ರ ಪ್ರಜ್ಞೆಯ ಅಭಾವ' ಅಥವಾ 'ಸಾವಯವ ಶಿಲ್ಪದ ಸಮಗ್ರೀಕರಣದ ಕೊರತೆ': 'ವಿವರಗಳು ಸೊಕ್ಕುತ್ತವೆ' ಎಂಬಂಥ ತಾಂತ್ರಿಕ ವೈಫಲ್ಯಗಳನ್ನು ಹೆಕ್ಕಿ ಬಿಟ್ಟರು. ಇಂಥ ತಾಂತ್ರಿಕ ವೈಫಲ್ಯಗಳನ್ನು ಕಾದಂಬರಿಯ ಆಂತರಿಕ ದೋಷಗಳೆನ್ನಬೇಕೋ ಅಥವಾ ಈ ವೈಫಲ್ಯಗಳೆ ನವ್ಯ ವಿಮರ್ಶೆಯ ತಾತ್ವಿಕ ಪರಿಮಿತಿಗಳನ್ನು ಹೊಳೆಯಿಸುತ್ತವೆಯೋ ಎಂಬುದನ್ನು ಪ್ರತ್ಯೇಕವಾಗಿಯೆ ಚರ್ಚಿಸಬೇಕಾಗುತ್ತದೆ.

ಕುವೆಂಪುರವರ ಗದ್ಯ ಮತ್ತು ಪದ್ಯ ಕುರಿತಂತೆ ಅನಂತಮೂರ್ತಿಯವರು ಪ್ರಾರಂಭಿಸಿದ 'ಸೀಳು ಪ್ರಜ್ಞೆ'ಯ ಚರ್ಚೆಯನ್ನು ಈಗ ಪರಿಶೀಲಿಸಬೇಕಾಗಿದೆ. ಕುವೆಂಪು ಕಾವ್ಯ ಅತಿ ಭಾವುಕತೆಯಿಂದಾಗಿ, ರೆಟ್ಟರಿಕ್ಕಿನಿಂದಾಗಿ, ತನ್ಮಯತೆಯಿಂದಾಗಿ, ಬೋಳೆತನದಿಂದಾಗಿ, ಅಮೂರ್ತತೆಯಿಂದಾಗಿ ತೆಳುವಾಗುತ್ತಾ ಹೋದರೆ, ಮೂರ್ತ ವಿವರಗಳ ಸಮೃದ್ಧಿಯಿಂದಾಗಿ ಕುವೆಂಪು ಗದ್ಯ ಸೊಕ್ಕುತ್ತದೆ. ಕುವೆಂಪು ಕೊನೆಗೂ ದಾರ್ಶನಿಕ ಕಾದಂಬರಿ ಬರೆಯಲಾಗಲಿಲ್ಲ ಎಂಬುದು ಅವರ ವಾದದ ತಿರುಳು. ಅನಂತಮೂರ್ತಿಯವರು ಹುಟ್ಟು ಹಾಕಿದ ಕುವೆಂಪು ಗದ್ಯ-ಪದ್ಯಗಳ ನಡುವಿನ ವಿಭಜನೆಯ ವ್ಯಾಖ್ಯಾನವನ್ನೆ ಎಂ. ಜಿ. ಕೃಷ್ಣಮೂರ್ತಿ, ಕೀರ್ತಿನಾಥ ಕುರ್ತುಕೋಟಿ, ಜಿ.ಹೆಚ್. ನಾಯಕ್ ಮೊದಲಾದ ನವ್ಯ ವಿಮರ್ಶಕರು ಹಾಗೂ ಇವತ್ತಿನ ನವ್ಯೋತ್ತರ ವಿಮರ್ಶಕರು 'ಕುವೆಂಪುರವರ ಕಾವ್ಯದಲ್ಲಿ ಆದ ನಷ್ಟ ಕಾದಂಬರಿಯಲ್ಲಿ ತುಂಬಿ ಬಂತು' ಎಂಬಂಥ ಆಲಾಪನೆಯಾಗಿ ಹರಿಯುತ್ತಿದೆ. ಕಾದಂಬರಿ, ಸಣ್ಣಕಥೆ, ಕಥನ ಕವನ,

ಭಾವಗೀತೆ, ಮಹಾಕಾವ್ಯ, ಖಂಡಕಾವ್ಯ ಮುಂತಾದ ಪ್ರಕಾರಗಳ ನಡುವಿನ ವ್ಯತ್ಯಾಸ ಇಲ್ಲವೆ ಪರಿಮಿತಿಗಳನ್ನು 'ಪ್ರಕಾರ ವಿಮರ್ಶೆ' [Genre criticism] ಯ ಹಿನ್ನೆಲೆಯಲ್ಲಾದರೂ ಸೀಳು ಪ್ರಜ್ಞೆಯ ಇಂಥ ಚರ್ಚೆ ನಡೆಯಲಿಲ್ಲ. "ತನ್ನ ಕೃತಿಯೊಳಕ್ಕೆ ತಾನು ಸ್ವಂತ ಹೇಗೆ ಪ್ರವೇಶಿಸಬೇಕೆಂಬ ಪ್ರಶ್ನೆಯನ್ನು ಈ ಎರಡೂ ಕೃತಿಗಳಲ್ಲಿ [ಕಾನೂರು ಸುಬ್ಬಮ್ಮ ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು] ಕುವೆಂಪು ಬಗೆಹರಿಸಿಕೊಂಡಿಲ್ಲ ಎನಿಸುತ್ತದೆ" ಎಂಬ ಅನಂತಮೂರ್ತಿಯವರ ಮಾತನ್ನೆ [ಪ್ರಜ್ಞೆ ಮತ್ತು ಪರಿಸರ: 'ಭಾರತೀಯ ಸಂಸ್ಕೃತಿ ಮತ್ತು ಲೇಖಕ': ೧೯೭೧ ಪುಟ ೧೫೧] ತಿರುಗಿಸಿ ಹೇಳಬೇಕೆಂದರೆ ಕುವೆಂಪುರವರ ಕೃತಿಯೊಳಕ್ಕೆ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಹಿನ್ನೆಲೆಯಲ್ಲಿ ಹೇಗೆ ಪ್ರವೇಶಿಸಬೇಕೆಂಬ ಪ್ರಶ್ನೆಯನ್ನು ಅನಂತಮೂರ್ತಿ ಅರ್ಥಾತ್ ನವ್ಯರು ಬಗೆಹರಿಸಿಕೊಳ್ಳಲೇ ಇಲ್ಲ ಎನಿಸುತ್ತದೆ. ಒಟ್ಟಾರೆ ಇಂಥ 'ಏಕಾಗ್ರ' ದೃಷ್ಟಿಯ ಒಕ್ಕಣ್ಣಿನಿಂದ ಹುಟ್ಟಿದ ಉದ್ವಿಗ್ನತೆಯ, ಅತಿರೇಕದ ಪೂರ್ವಗ್ರಹಗಳ ಕಣ್ಕಟ್ಟಿನಿಂದ ಬಿಡಿಸಿಕೊಂಡು, ಕುವೆಂಪು ಸಾಹಿತ್ಯವನ್ನು ಚಾರಿತ್ರಿಕವಾಗಿ ಸಾಂಸ್ಕೃತಿಕ ನೆಲೆಯಲ್ಲಿ ಕಂಡು ಕೊಳ್ಳುವುದೆ ಭಾರತೀಯ ಪುನರುಜ್ಜೀವನದ [Renaissance] ಹಾಗೂ ಕನ್ನಡ ನವೋದಯದ ಪುನಾರಚನೆಯೇ ಆಗುತ್ತದೆ.

ಕುವೆಂಪು ಸಾಹಿತ್ಯದೊಳಗಿನ ರಾಜಕೀಯ ನಿಲುವುಗಳನ್ನು ಪ್ರಧಾನವಾಗಿ ಮೂರು ನೆಲೆಗಳಲ್ಲಿ ಪರಿಶೋಧಿಸಬಹುದಾಗಿದೆ.

೧. ಅದ್ವೈತ ಸಿದ್ಧಾಂತ ಮತ್ತು ನಿಸರ್ಗಾರಾಧನೆ

೨. ರಾಷ್ಟ್ರೀಯ ಹೋರಾಟ ಮತ್ತು ವರ್ಣ ವ್ಯವಸ್ಥೆ

೩. ವಿಶ್ವ ಮಾನವ ಪರಿಕಲ್ಪನೆ

ಹಾಗಂತ ಈ ನೆಲೆಗಳು ಕುವೆಂಪುರಲ್ಲಿ ಪ್ರತ್ಯೇಕ ಘಟಕಗಳೇನಲ್ಲ; ಅವು ಒಂದನ್ನೊಂದು ಪ್ರಭಾವಿಸುತ್ತಾ ಉಜ್ಜಿಕೊಳ್ಳುತ್ತಾ ಅಂತಃ ಸಂಬಂಧಿಯಾಗಿ ಬೆಳೆಯುತ್ತವೆ. ಅಲ್ಲದೆ ಈ ಪ್ರಧಾನ ನೆಲೆಯಲ್ಲಿ ಅನೇಕ ಒಳಧಾರೆಗಳೂ ಬಂದು ಸೇರಿಕೊಳ್ಳುತ್ತವೆ.

ಕುವೆಂಪುರವರ ಅದ್ವೈತ ತತ್ವ ಮತ್ತು ನಿಸರ್ಗೋಪಾಸನೆ

ಕುವೆಂಪುರವರ ಅದ್ವೈತ ತತ್ವ ಅವರ ಇಡೀ ಸಾಹಿತ್ಯಕ್ಕೆ ತಾತ್ವಿಕ ಅಡಿಪಾಯವಾಗಿ ನಿಂತಿದೆ. ಇದು ಅವರ ಚಿಂತನೆಗಳಿಗೆ ಭಾವನೆಗಳಿಗೆ ಒಂದು ನಿರ್ದಿಷ್ಟ ಸ್ವರೂಪವನ್ನೂ ಮತ್ತು ಗಟ್ಟಿಯಾದ ಜೀವನ ದೃಷ್ಟಿಯನ್ನೂ ಒದಗಿಸಿದೆ. ಬಹುಶಃ ಆಧುನಿಕ ಕನ್ನಡ ಸಾಹಿತ್ಯದಲ್ಲಿ ತತ್ವಜ್ಞಾನ ಮತ್ತು ಕಾವ್ಯಸಾಹಿತ್ಯ ಅವಿಚ್ಛಿನ್ನವಾಗಿ ಬೆರೆತು ಪ್ರಕಟಗೊಂಡಿರುವುದು ಕುವೆಂಪುರಲ್ಲಿಯೆ. ಈ ತಾತ್ವಿಕ ನೆಲೆಯೆ ನಿಸರ್ಗೋಪಾಸನೆಯಾಗಿ, ಪ್ರಣಯದ ಅಭೀಪ್ಸೆಯಾಗಿ, ದಾಂಪತ್ಯ ಪ್ರೇಮವಾಗಿ, ಆಧ್ಯಾತ್ಮಿಕ ದಾರ್ಶನಿಕ ಹಂಬಲವಾಗಿ, ನಾಡು ನುಡಿ ದೇಶ ರಾಷ್ಟ್ರಪ್ರೇಮವಾಗಿ, ಕೊನೆಗೆ ವಿಶ್ವಮಾನವ ಪರಿಕಲ್ಪನೆಯಾಗಿ ಹಬ್ಬುತ್ತಾ ಹೋಗಿದೆ.

ಕುವೆಂಪು ಅದ್ವೈತದ ತಾತ್ವಿಕ ನೆಲೆಯನ್ನೇ ಆಯ್ದುಕೊಳ್ಳಲು ಇದ್ದ ಸಾಂಸ್ಕೃತಿಕ ಚಾರಿತ್ರಿಕ ಒತ್ತಡಗಳನ್ನು ಗ್ರಹಿಸಿಕೊಳ್ಳದಿದ್ದಲ್ಲಿ ಅವರ ಕಾವ್ಯವನ್ನು ಭಾವುಕತನದ ಭಾವಸಮಾಧಿಯ / ಬೋಳೆತನದ / ರೆಟರಿಕ್ಕಿನ ಸರಳ ರಚನೆಗಳು ಎಂದು ತಳ್ಳಿ ಹಾಕಿ ಬಿಡುವ ಅಪಾಯಕ್ಕೆ ತುತ್ತಾಗುತ್ತೇವೆ. ೧೯ನೇ ಶತಮಾನದ ಕೊನೆ ಮತ್ತು ೨೦ನೇ ಶತಮಾನದ ಆರಂಭ ಭಾರತದ ಸಾಂಸ್ಕೃತಿಕ ಪುನರುಜ್ಜೀವನಕ್ಕೆ ಒಡ್ಡಿಕೊಂಡ ಕಾಲಘಟ್ಟ. ಬ್ರಹ್ಮ ಸಮಾಜ ಆರ್ಯ ಸಮಾಜಗಳು ಸಮಾಜ ಸುಧಾರಣೆಯ ಸಮೇತವೆ ಸ್ವ ಸಂಸ್ಕೃತಿಯನ್ನು ಶೋಧನೆಗೆ ಒಳಪಡಿಸಿದ್ದವು. ವಸಾಹತುಶಾಹಿಯ ಸ್ವಯಂ ತಂತ್ರವಾದೀ [ಲಿಬರಲಿಸಂ] ನಿಲುವಿನ ಫಲವಾಗಿ ಭಾರತೀಯ ವಿದ್ಯಾವಂತ ವರ್ಗದಲ್ಲಿ ಅರ್ಥಾತ್ ಬ್ರಾಹ್ಮಣ ಸಮಾಜದಲ್ಲಿ ಈ ಸುಧಾರಣೆ ಮತ್ತು ಸ್ವಸಂಸ್ಕೃತಿಯ ಶೋಧನೆಗಳು ವಸಾಹತುಶಾಹೀ ಸಂಸ್ಕೃತಿಗೆ ಎದುರಾಗಿ ಪ್ರತಿ ಸಂಸ್ಕೃತಿ ನಿರ್ಮಾಣದ ಒತ್ತಡಗಳಾಗಿ ಪರಿಣಮಿಸಿದವು. ಈ ಸಂದರ್ಭದಲ್ಲಿಯೆ ಶೂದ್ರ ರೈತಾಪಿ ಕುಲದಿಂದ ಬಂದ ಕುವೆಂಪು ಇಂಗ್ಲಿಷ್ ವಿದ್ಯಾಭ್ಯಾಸದ ಮೂಲಕವೆ ತಾತ್ವಿಕ ಶೋಧನೆಗೆ ತೊಡಗಿದ್ದು, ಪಾಶ್ಚಾತ್ಯ ಪೌರಾತ್ಯ ತತ್ವಜ್ಞಾನವನ್ನು ಅಧ್ಯಯನ ಮಾಡಿದ್ದು, ೧೯೨೫ರಲ್ಲಿ ರಾಮಕೃಷ್ಣಾಶ್ರಮ ಸೇರಿದ್ದು ಹಾಗೂ ೧೯೩೯ರಲ್ಲಿ ಕಲ್ಕತ್ತೆಗೆ ಹೋಗಿ ಗುರುದೀಕ್ಷೆ ಪಡೆದಿದ್ದು. ಈ ಗುರುದೀಕ್ಷೆ ಇವರ ತಾತ್ವಿಕ ಬದ್ಧತೆಯ ಸಂಕೇತ ಎನ್ನಬಹುದು. ಇಲ್ಲಿಯೆ, ಕುವೆಂಪು ಆಯ್ದುಕೊಂಡ ತಾತ್ವಿಕ ನೆಲೆಯ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ರಾಜಾರಾಮ್ ಮೋಹನರಾಯ್-ದಯಾನಂದ ಸರಸ್ವತಿಯವರು ಸ್ಥಾಪಿಸಿದ ಬ್ರಹ್ಮಸಮಾಜ, ಆರ್ಯ ಸಮಾಜಗಳಿಂದ ಆಕರ್ಷಿತರಾಗದೆ, ಮತಾತೀತ ಧರ್ಮಾತೀತ ನೆಲೆಯ ರಾಮಕೃಷ್ಣಾಶ್ರಮದ ಜೊತೆಗೆ ತನ್ನನ್ನು ಗುರುತಿಸಿಕೊಂಡದ್ದು ಕೇವಲ ಆಶ್ರಯವಷ್ಟೇ ಆಗದೆ, ತಾತ್ವಿಕ ನೆಲೆಯ ಆಯ್ಕೆಯೇ ಆಗಿತ್ತು. ಹಾಗಾಗಿ ಮೇಲ್ಜಾತಿ ಮೇಲ್ವರ್ಗದ ಸಮಾಜ ಸುಧಾರಣೆ ಹಾಗೂ ಏಕದೇವೋಪಾಸನೆಯ ನೆಲೆಗಳಿಗಿಂತ ಬಹುದೇವೋಪಾಸನೆಯ ನೆಲೆಗಳತ್ತ, ಪರಮಹಂಸ ವಿವೇಕಾನಂದರ ಸರ್ವಧರ್ಮ ಸಮನ್ವಯ ಹಾಗೂ ಸರ್ವೋದಯದ ವಿಚಾರ ಧಾರೆಗಳಿಗೆ ಒಡ್ಡಿಕೊಂಡದ್ದು ಕುವೆಂಪುರವರ 'ಸ್ವಸಂಸ್ಕೃತಿ ಶೋಧನೆ'ಯ ವಿಭಿನ್ನತೆಯನ್ನು ಸೂಚಿಸುತ್ತದೆ. ಇದರಿಂದಾಗಿ ವೈದಿಕನೆಲೆಯ 'ಹಿಂದುತ್ವ'ದ ಚೌಕಟ್ಟಿನಿಂದ ಬಿಡಿಸಿಕೊಳ್ಳಲು ಕುವೆಂಪುಗೆ ಸಾಧ್ಯವಾಯಿತು.

ದಟ್ಟ ಮಲೆನಾಡಿನ ಗರ್ಭದಿಂದ ಬಂದ ಕುವೆಂಪುಗೆ ನಿಸರ್ಗ ಔಪಚಾರಿಕವಾದ ಒಂದು ಅಷ್ಟಾದಶ ವರ್ಣನೆಯಾಗಿ ಬರಲಿಲ್ಲ ಅಥವಾ ಕೈಗಾರೀಕೀಕರಣದ ಛಿದ್ರೀಕೃತ ಜಂಜಡದಿಂದ ಓಡಿಹೋಗಿ ಪ್ರಕೃತಿಯ ಮಡಿಲಲ್ಲಿ ಆಸರೆ ಪಡೆಯುವ ಪಲಾಯನವಾದೀ ನೆಲೆಯೂ ಆಗಿರಲಿಲ್ಲ ಆರೋಪಿತ ಸಮಾಧಿಸ್ಥ ನೆಲೆಯೂ ಆಗಿರಲಿಲ್ಲ. ಭಾರತದ ಸಾಂಸ್ಕೃತಿಕ ಪುನರುಜ್ಜೀವನದ ಒತ್ತಡಗಳು ಕುವೆಂಪುರ ನಿಸರ್ಗೋಪಾಸನೆಯಲ್ಲಿ ಮೂರ್ತಗೊಳ್ಳುತ್ತವೆ. ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಪ್ರಭಾವವನ್ನು ಅಲ್ಲಗಳೆಯಲಾಗದಿದ್ದರೂ, ಕುವೆಂಪುರ ನಿಸರ್ಗಾಭೂತಿಯ ತಾತ್ವಿಕ ಬೇರುಗಳು ಇಂಗ್ಲೆಂಡಿನಿಂದ ಬಂದಂಥವಲ್ಲ. ಈ ಬಗ್ಗೆ ಕುವೆಂಪುರವರೆ ಹೇಳುವ ಮಾತುಗಳು ಹೀಗಿವೆ "ಆಂಗ್ಲೇಯ ಭಾಷೆಯ ಮುಖಾಂತರ ನಮ್ಮ ದೇಶಕ್ಕೆ ಆಗಮಿಸಿದ ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳು ಭಾರತೀಯರ ಬದುಕಿನ ಮೇಲೆ

ಬೀರಿದ ಪ್ರಭಾವವೆ ಆಧುನಿಕ ನವೋದಯಕ್ಕೆ ಕಾರಣ. ಈ ಪ್ರಭಾವ ಕವನಗಳ ವಸ್ತು ಮತ್ತು ದೃಷ್ಟಿ ಇವುಗಳನ್ನು ಕುರಿತದ್ದಕ್ಕಿಂತಲೂ ಹೆಚ್ಚಾಗಿ ಅವುಗಳ ಛಂದಸ್ಸು ರೀತಿ ರೂಪ ಮತ್ತು ಭಾವವಿನ್ಯಾಸಗಳಿಗೆ ವಿಶೇಷವಾಗಿ ಅನ್ವಯವಾಗುತ್ತದೆ." ['ಇಂದಿನ ಹೊಸಗನ್ನಡ ಕವಿತೆ ಮತ್ತು ಮುಂದಿನ ನಡೆ'; ವಿಭೂತಿ ಪೂಜೆ: ೧೯೫೩].

ಕುವೆಂಪುರಲ್ಲಿ ಭೌತಸ್ವರೂಪ ಜಡ ನಿಸರ್ಗ ಅಂತರಿಕವಾಗಿ ಚೈತನ್ಯಶಾಲಿಯಾಗಿ ಪರಿವರ್ತನೆಯಾಗುತ್ತದೆ. ವಾಸ್ತವದ ಜಡಸ್ಥಿತಿಯನ್ನು / ನಿಷ್ಕ್ರಿಯತೆಯನ್ನು ಮೀರುವ ಶಕ್ತಿಯಾಗಿ ಮೈದೋರುತ್ತದೆ. ಹಾಗೆಯೆ ಇವರ ಕಾವ್ಯದಲ್ಲಿ ಬರುವ 'ಆನಂದ', 'ಜಡ', 'ಚೇತನ', 'ಜೀವ', 'ಆತ್ಮ', 'ತಾದಾತ್ಮ್ಯ', 'ಸೌಂದರ್ಯ' ಮುಂತಾದ ಪದಗಳಿಗೆ ಆಧ್ಯಾತ್ಮಿಕ ಸ್ಪರ್ಶವಿದ್ದರೂ, ಇವು ಐಹಿಕನೆಲೆಯ ನಿರಾಕರಣೆಯಾಗಿ ಬರದೆ ಜಡಸ್ಥಿತಿಯಿಂದ ಇಹಲೋಕ 'ಇರ'ವನ್ನು ಪೃಥಕ್ಕರಿಸುವ ಜೀವ ಸೆಲೆಗಳಾಗಿ, ಪರಿವರ್ತನಶೀಲ ಧಾತುಗಳಾಗಿ, ಪರಿಣಮಿಸುತ್ತವೆ. ಶ್ರೇಣೀಕೃತ ಜಡ ಸಮಾಜದಲ್ಲಿ ಹುಟ್ಟಿಬಂದ ಶೂದ್ರ ಕವಿಗೆ ಜೀವರುಗಳ ನಡುವೆ ಭೇದ-ಭಿನ್ನತೆ-ತಾರತಮ್ಯವನ್ನು ಅಲ್ಲಗಳೆಯುವಂಥ 'ಅಹಂ ಬ್ರಹ್ಮಾಸ್ಮಿ'- 'ತತ್ವಮಸಿ' ಎನ್ನುವ ಅಭೇದವಾಗುವ ಅದ್ವೈತದ ನೆಲೆಯು ಕುವೆಂಪುರಲ್ಲಿ ಪರಿವರ್ತನಶೀಲ ಜೀವನದೃಷ್ಟಿಯನ್ನೂ ಮತ್ತು ಆತ್ಮ ವಿಶ್ವಾಸವನ್ನೂ ಸಂಚಯಿಸಿ ಕೊಟ್ಟದ್ದು ಸಾಂಸ್ಕೃತಿಕವಾಗಿ ಅತ್ಯಂತ ಆರೋಗ್ಯಕರ ನೆಲೆಯೇ ಆಗಿದೆ. ಈ ಕುರಿತು ಪೂರ್ಣಚಂದ್ರ ತೇಜಸ್ವಿಯವರ ಪ್ರಶ್ನೆಗಳು ಗಮನಾರ್ಹ:" ಇಪ್ಪತ್ತನೇ ಶತಮಾನದ ಕನ್ನಡ ಸಂಸ್ಕೃತಿಯ ಶೂದ್ರ ಆಂದೋಲನಕ್ಕೆ ಏಕೆ ಈ ಅದ್ವೈತದೃಷ್ಟಿ ಹೆಚ್ಚು ಪ್ರಿಯವಾಯ್ತು? ಕುವೆಂಪುರಂಥ ಬರಹಗಾರರು ಏಕೆ ಇದರಿಂದ ಪ್ರಭಾವಿತರಾದರು? ಜೀವಾತ್ಮ ಪರಮಾತ್ಮರ ಶಾಶ್ವತ ಭೇದವನ್ನು ಒಪ್ಪಿದ, ಜೀವಾತ್ಮರಲ್ಲೂ ನಿತ್ಯನಾರಕಿಗಳನ್ನು ಸೃಷ್ಟಿ ಮಾಡಿದ ಜಾತಿ ಪದ್ಧತಿಯನ್ನು ಅತ್ಯಂತ ಹೇಯವಾಗಿ ಪ್ರತಿಪಾದಿಸಿದ ದ್ವೈತ ಸಿದ್ಧಾಂತದಿಂದ ಸಾವಿರಾರು ವರುಷ ಮೂಕತೆಯಲ್ಲಿ ಕುದಿಯುತ್ತಿದ್ದ ಶೂದ್ರ ಸಮುದಾಯ ಪ್ರಭಾವಿತಗೊಳ್ಳಲು ಸಾಧ್ಯವಿದ್ದಿತೆ? " [ಸಂಕ್ರಮಣ ೬೦ ಜೂನ್ ೧೯೭೪]. ಕುವೆಂಪುರ ಅದ್ವೈತ ದೃಷ್ಟಿ ಶಂಕರಾಚಾರ್ಯರ ಅದ್ವೈತದಿಂದ ಬಂದದ್ದಾಗಿರದೆ, ಪರಮಹಂಸ ವಿವೇಕಾನಂದರ ಮತಾತೀತ ನೆಲೆಯಿಂದ ರೂಪಿತಗೊಂಡಿದ್ದಾಗಿದೆ. ಈ ಜಗತ್ತು ಮಿಥ್ಯೆ-ಮಾಯೆ ಎಂಬ ವೇದಾಂತದ ನಿಲುವನ್ನು ನಿರಾಕರಿಸುತ್ತಲೆ, ಈ ಲೋಕದ ಬಗ್ಗೆ ಪ್ರೀತಿಯನ್ನು, ಜೀವ ಕಾರುಣ್ಯವನ್ನು ತಳೆಯುತ್ತಾರೆ. ಶಂಕರಾಚಾರ್ಯರ ಅದ್ವೈತವನ್ನು ಕುವೆಂಪು ಅನೇಕ ಕವಿತೆಗಳಲ್ಲಿ ಪರಾಮರ್ಶಿಸಿದ್ದಾರೆ. 'ತರ್ಕ ಮತ್ತು ಬಾಳು' [೧೯೩೧] ಎಂಬ ಕವಿತೆ ['ಕುಟೀಚಕ']

"ನೀನಿದನ್ನು ಎಂದು ಕಲಿಯುವೆ, ಹೇಳು ಸಂನ್ಯಾಸಿ?
ವಾದವೂ ಜಗದಂತೆ ಮಾಯೆ ಎಂದು;
ತರ್ಕಯುಕ್ತಿಗಳೆಲ್ಲ ಬಯಕೆಯ ಮರಿಗಳೆಂದು;
ಇವನನುದ್ಧರಿಸು ಪೊರೆದು!"

ಹಾಗೆಯೆ 'ಬ್ರಹ್ಮದ ಲಾಂಗೂಲ' [೧೯೩೧: ಕುಟೀಚಕ] ಎಂಬ ಪದ್ಯದಲ್ಲಿ ವಿದ್ವಜ್ಜನರ ಬ್ರಹ್ಮವಿದ್ಯೆಯ ಜಿಜ್ಞಾಸೆಯನ್ನು ಪರಿಹಾಸ್ಯ ಮಾಡುತ್ತಾರೆ. 'ಜನನಿಗೆ' ಎಂಬ ಪದ್ಯದಲ್ಲಿ[೧೯೩೧ ಕುಟೀಚಕ]

"ಜನನಿಯೇ. ವರುಷವೇಳರ ಹಿಂದೆ ನೀನಗಲಿ
ಹೋದೆ ಕಣ್ಮರೆಯಾದೆ. ನಾನಂದು ಸುರಿಯದಾ
ಕಂಬನಿಗಳೆಲ್ಲವೂ ಹಿರಿಯ ಹೊಳೆಯಾಗಿಂದು
ನನ್ನೆದೆಯ ನೊಂದ ದಡಗಳ ಕೊಚ್ಚಿ ಹರಿಯುತಿದೆ.
ನೀನು ಮಡಿದಂದು ನಾನದ್ವೈತದರ್ಶನದ
ಮದಿರೆಯಲಿ ಮುಳುಗಿದ್ದೆ; ನನ್ನ ಕಿರುಬಾಳಿನಲಿ ನನ್ನದಲ್ಲದ ಹಿರಿಯ
ಶಕ್ತಿಯೊಂದಿರುತ್ತಿತ್ತು.
ವಿಶ್ವವೆಲ್ಲವು ಮಾಯೆ; ಜೀವರೆಂಬುವರೆಲ್ಲ
ಸುಳ್ಳಿನಲಿ ಕೆತ್ತಿರುವ ಗುಳ್ಳೆಗಳು, ಶಿವನಾನು;
ಎಂಬ ತತ್ವದ ಮತ್ತಿನಲ್ಲಿ ನೀನು, ಯಾರೆದೆಯ
ಹಾಲುಂಡು ಬದುಕಿದೆನೊ ಆ ನೀನು ಮಡಿದುದನು
ಹುಲ್ಲೆಂದು ಬಗೆದೆ"

ಆತ್ಮಕಥನದ ಆತ್ಮೀಯ ಧಾಟಿಯಲ್ಲಿ ಸಾಗುವ ಈ ಕವಿತೆ ಆತ್ಮಾವಲೋಕನದ ಸಮೇತವೆ ಶಂಕರಾಚಾರ್ಯರ ಒಣ ವೇದಾಂತದ ನಿರ್ದಯತೆಯನ್ನು ಬಯಲಿಗಿಡುತ್ತ, ಜೀವಕಾರುಣ್ಯವನ್ನು ಪುನಃ ಸಂಚಯಿಸಿಕೊಂಡ ಬಗೆಯನ್ನು ಸೂಚಿಸುತ್ತದೆ. ಹಾಗೆಯೆ 'ಶಂಕರಾಚಾರ್ಯ' [ಕಲಾಸುಂದರಿ] ಎಂಬ ಕವಿತೆಯಲ್ಲೂ ಇದೇ ರೀತಿಯ ಪರಾಮರ್ಶನವನ್ನು ಕಾಣಬಹುದಾಗಿದೆ.

ಪ್ರಕೃತಿ ಮತ್ತು ಮಾನವನ ಅಂತಃಸಂಬಂಧದ ತಾದಾತ್ಮ್ಯವೆ ಉಪನಿಷತ್ತಿನ ಅದ್ವೈತದ ತಿಳಿವು. ಈ ದೃಷ್ಟಿಯಿಂದಾಗಿಯೆ ಸೃಷ್ಟಿಯ ಚರಾಚರ ವಸ್ತುಗಳೆಲ್ಲ ಚೇತನ ರೂಪಿಯಾಗಿ ಪರಿವರ್ತನಗೊಳ್ಳುತ್ತವೆ. ಮಹತ್ತಿಗೆಷ್ಟು ಪ್ರಾಧಾನ್ಯವೋ ಅಣುವಿಗೂ ಅಷ್ಟೇ ಪ್ರಾಧಾನ್ಯ ದೊರಕುತ್ತದೆ. ಈ ಲೋಕದ 'ಅಲ್ಪ'ದಲ್ಲಿಯೂ ಆ 'ಭೂಮ'ದ ಅನುಭೂತಿ ಸಾಧ್ಯವಾಗುತ್ತದೆ. 'ಕ್ಷುದ್ರ ಕ್ಷುದ್ರದಲ್ಲಿಯೂ ಮಹಾಮಹತ್ತಿನಲ್ಲಿಯೂ ಏಕಮೇವ ಅದ್ವೀತಿಯ ಚೈತನ್ಯ ಅಂತರ್ಯಾಮಿಯಾಗಿದೆ. ಅದ್ವೈತದ ಇಂಥ ದೃಷ್ಟಿಯಿಂದಾಗಿಯೆ, ಅಂಚಿನಲ್ಲಿದ್ದ ಶೂದ್ರತ್ವಕ್ಕೆ ಔನತ್ಯವನ್ನೂ ಸಮಾನತೆಯನ್ನೂ ತಂದು ಕುವೆಂಪು ಕೊಡುತ್ತಾರೆ.

'ಕ್ಷುದ್ರ'ವೆಂದು ಬಗೆಯಲ್ಪಟ್ಟದ್ದು ಕುವೆಂಪುರಲ್ಲಿ 'ಭವ್ಯತೆ'ಯ ನೆಲೆಗೇರಲು ಹವಣಿಸುವುದನ್ನು ಈ ನಿಟ್ಟಿನಲ್ಲಿ ಗ್ರಹಿಸಬೇಕಾಗುತ್ತದೆ. ಹಾಗಾಗಿಯೆ ಇಬ್ಬನಿ 'ಹಿಮಮಣಿ' ಯಾಗುತ್ತದೆ. ಹುಲ್ಲಗರಿಕೆ 'ಭವ್ಯ'ವಾಗುತ್ತದೆ. ಮರಗಿಡಗಳು 'ಚೇತನದ ಚಿಲುಮೆ'ಗಳಾಗುತ್ತವೆ. 'ಅತಿ ಸಾಮಾನ್ಯದ ಈ ಬೀದಿ, ಸ್ವರ್ಗಕ್ಕೆ ಹಾದಿ'ಯಾಗುತ್ತದೆ

['ಪಕ್ಷಿಕಾಶಿ'], 'ಯಾರೂ ನೋಡದ, ಯಾರೂ ಬೇಡದ' ಒಂದು ಗುಲಾಬಿಯ ಹೂವು 'ಸ್ವರ್ಗ ಸುಂದರಿ'ಯಾಗುತ್ತದೆ ['ಗುಲಾಬಿ': ೧೯೩೫ ಪಕ್ಷಿಕಾಪಶಿ].

ಪ್ರಕೃತಿ ಮತ್ತು ಸಮಸ್ತ ಜೀವಕೋಟಿಯು ಮನುಷ್ಯನಿಗೆ ಅಧೀನ ಎಂಬ ಸ್ವಾರ್ಥದ ಮನುಷ್ಯಕೇಂದ್ರಿತ ನೆಲೆಯನ್ನು ಒಡೆದುಕೊಂಡು ಹೊರಬರಲು ಅದ್ವೈತದ ನೆಲೆಯು ಕುವೆಂಪುರಲ್ಲಿ ಜೀವಸೆಲೆಯಾಗಿ ಪರಿಣಮಿಸುತ್ತದೆ. "ಒಂದು ಹೂವಿಗೆ" ಎಂಬ ಒಂದು ಸಣ್ಣ ಕವಿತೆ [ಪಕ್ಷಿಕಾಶಿ:೧೯೩೩] ಮನುಷ್ಯ ಕೇಂದ್ರಿತ ನೆಲೆಯ ಸಂಕುಚಿತ ಪ್ರಜ್ಞೆಯಿಂದ ಮೀರುತ್ತ, ಪ್ರಕೃತಿಯ ಪ್ರತಿಯೊಂದು ಜೀವಕ್ಕೂ ಆದರದ್ದೇ ಆದ ಅಸ್ತಿತ್ವವಿದೆ ಎಂಬ ದರ್ಶನವನ್ನು ಧ್ವನಿಸುತ್ತದೆ:

"ಅನಂತ ಕಾಲವು ನಿನ್ನನು ಹೊತ್ತಿದೆ;
ಸಮಸ್ತ ವಿಶ್ವವೆ ನಿನ್ನನು ಹೆತ್ತಿದೆ;
ನನಗೆಂತುಟೋ ನಿನಗುಂತುಟೆ ಸೃಷ್ಟಿ;
ನನ್ನಂತೆಯೆ ನಿನಗೂ ಇದೆ ದೃಷ್ಟಿ;
ನನ್ನಂತೆಯೆ ಅನುಭವಿಸುವ ಶಕ್ತಿ;
ನನ್ನಂತೆಯೆ ನೀನೂ ವ್ಯಕ್ತಿ!"

ಮನುಷ್ಯ ಮತ್ತು ಪ್ರಕೃತಿಯ ನಡುವಣ ಅಂತಃಸಂಬಂಧದ ನೆಲೆಗಳನ್ನು 'ಶರತ್ಕಾಲದ ಸೂರ್ಯೋದಯದಲಿ' ಎಂಬ ಕವಿತೆ [೧೯೩೩: ಪಕ್ಷಿಕಾಶಿ] ಅತ್ಯಂತ ಪರಿಣಾಮಕಾರಿಯಾಗಿ ಪರಿಶೋಧಿಸುತ್ತದೆ.

"ಕಲ್ಲಿನ ಯುಗಯುಗದಿರವೂ ಶೂನ್ಯ,
ಹುಲ್ಲಿನ ಅರೆನಿಮಿಷದ ಹನಿ ಧನ್ಯ!"

ಕಲ್ಲಿನ ಜಡದ ನಿರರ್ಥಕ ಬದುಕಿಗಿಂತ ಹುಲ್ಲಿನ ಹನಿಯ ಕ್ಷಣಿಕತ್ವವೆ ಧನ್ಯ ಎಂಬಲ್ಲಿ ಕ್ಷಣಿಕತೆಯ ಅಲ್ಪತೆಯನ್ನೂ ಔನತ್ಯಕ್ಕೇರಿಸಲಾಗಿದೆ. ಸ್ಥಾವರದ ಶಾಶ್ವತದ ಎದುರು ಕ್ಷಣಿಕತೆಯೂ, ಅಲ್ಪತೆಯೂ ಸಾರ್ಥಕವೇ ಆಗಿದೆ.

"ನೋಡಿದರೆಲ್ಲಿಯೂ ಚೈತನ್ಯ!
ಕಲ್ಲಲಿ, ಮಣ್ಣಲಿ, ಹುಲ್ಲಲಿ, ಹುಡಿಯಲಿ,
ನೀರಿನ ಹನಿಯಲಿ, ಬೆಂಕಿಯ ಕಿಡಿಯಲಿ
ನನ್ನಲಿ-ಎಲ್ಲಿಯು ಚೈತನ್ಯ!"

ಮನುಷ್ಯ ಕೇಂದ್ರಿತ ಪ್ರಜ್ಞೆಯ ಕುಬ್ಜತೆಯನ್ನು ಅಹಂಕಾರವನ್ನು ಮೀರಿದಾಗಲೆ, ಪ್ರಕೃತಿಯ ಭೌತಿಕ ಜಗತ್ತಿನಲ್ಲಿ ತಾನೊಬ್ಬನೇ ಕೇಂದ್ರವಲ್ಲವೆಂದೂ, ತನ್ನಿಂದಲೇ ತನ್ನ ಪ್ರಜ್ಞೆಯಿಂದಲೇ ಜಗತ್ತು ಎಂಬ ಮಿಥ್ಯೆ ಅಳಿಸಿದಾಗಲೆ ಚೈತನ್ಯದ, ಜೀವ ಕಾರುಣ್ಯದ ಜೀವ ಸಂಚಾರ ಸಾಧ್ಯವಾಗುತ್ತದೆ. ಪ್ರಕೃತಿ ಮತ್ತು ಮನುಷ್ಯನ ಅಂತಃ ಸಂಬಂಧ 'ಕನ್ನೆಯ ಸ್ನೇಹ'ವಾಗಿ ಪರಿಣಮಿಸುತ್ತದೆ:

ಕುವೆಂಪು ಸಾಹಿತ್ಯದಲ್ಲಿ ರಾಜಕೀಯ ನಿಲುವುಗಳು

ಎಸ್. ಶಿವಾನಂದ

ಸಾಹಿತ್ಯದೊಳಗೆ ರಾಜಕೀಯ ಎಂದಾಕ್ಷಣ ರಾಜಾವಳಿ ಕುರಿತದ್ದು ಅಥವಾ ರಾಜಕಾರಣ ಕುರಿತದ್ದು ಅಥವಾ ರಾಜಕೀಯ ವಸ್ತು ಕುರಿತದ್ದು ಎಂಬುದಾಗಿ ತಿಳಿಯುವುದು ಮೇಲ್ಮೈ ಮಟ್ಟದ ಸರಳೀಕರಣವಾಗುತ್ತದೆ. ಇನ್ನೊಂದು ಕಡೆ, ಸಾಹಿತ್ಯವು ರಾಜಕೀಯದಿಂದ ದೂರವಿರಬೇಕು; ಪಕ್ಷಾತೀತವಾಗಿರಬೇಕು; ಮುಕ್ತವಾಗಿರಬೇಕು ಎಂಬುದಾಗಿ ಹೇಳಲಾಗುತ್ತದೆ. ಆದರೆ ಇಂಥ ಆಪಕಲ್ಪನೆಗಳ ಆಂತರ್ಯದಲ್ಲಿ ಸಾಹಿತ್ಯ ಮತ್ತು ರಾಜಕೀಯ ಬೇರೆ ಬೇರೆ ಕ್ಷೇತ್ರಗಳು; ಹಾಗೂ ಸಾಹಿತ್ಯವು ರಾಜಕೀಯ ವಲಯದಿಂದ ಮಲಿನವಾಗಬಾರದು ಎಂಬ ಗ್ರಹಿಕೆ ಹುದುಗಿದೆ. ಇಲ್ಲಿ ರಾಜಕೀಯ ಎಂದರೆ ಕೇವಲ ಪುಂಡ ಪುಢಾರಿಗಳ ಆಡುಂಬೊಲ, ಅದು ಅಶುದ್ಧ, ಅನೈತಿಕ ಎಂಬುದು ಗೃಹೀತ. ಆದರೆ ಸಾಹಿತ್ಯವು ರಾಜಕೀಯವಾಗಿ ತಟಸ್ಥವಾಗಿರಬೇಕು ಎಂಬ ಗ್ರಹಿಕೆಯ ಹಿಂದೆ ಪ್ರಜಾಪ್ರಭುತ್ವ ವಿರೋಧೀ ನಿಲುವು ಮತ್ತು 'ಅರಾಜಕತೆ'ಯ ಧೋರಣೆ ಅಂತರ್ಗತವಾಗಿರುತ್ತದೆ. ಇಂಥ ತಟಸ್ಥ ನೀತಿ ಅಂತಿಮವಾಗಿ ಯಥಾಸ್ಥಿತಿವಾದಿ ಆಗಿರುವುದಲ್ಲದೆ, ತನಗೆ ತಿಳಿಯದಂತೆಯೆ ಪ್ರತಿಗಾಮಿಯೂ ಆಗಿ ಪರಿಣಮಿಸುತ್ತದೆ.

ಹಾಗೆ ನೋಡಿದರೆ, ರಾಜಕಾರಣ ಎಂಬುದು ಬದುಕಿನಿಂದ, ಸಮಾಜದಿಂದ ಬೇರ್ಪಟ್ಟ ಸ್ವಯಂ ಸಂರಚನಾ ಘಟಕವೇನಲ್ಲ; ಬದಲಾಗಿ, ಅದು ಮನುಷ್ಯನ ಇರವು ಮತ್ತು ಅರಿವನ್ನು ನಿರ್ದೇಶಿಸುವ/ನಿಯಂತ್ರಿಸುವ 'ರಾಜನೀತಿ' ಅರ್ಥಾತ್ 'ಆಳುವ ಪ್ರಕ್ರಿಯೆ'ಯೇ ಆಗಿರುತ್ತದೆ. ರಾಜಕಾರಣ ಎಂಬುದು ಮೂಲತಃ 'ಅಧಿಕಾರಸ್ಥ' ನೆಲೆಯೇ ಆಗಿರುತ್ತದೆ.

ಮನುಷ್ಯನ 'ಇರವು' [Existence] ಎನ್ನುವುದು ಜಾತಿ, ವರ್ಗ, ಮತ-ಧರ್ಮ, ಶಿಕ್ಷಣ ಮುಂತಾದ ಈ ಎಲ್ಲ ಸಾಮಾಜಿಕ-ಆರ್ಥಿಕ-ಶೈಕ್ಷಣಿಕ-ಆಧ್ಯಾತ್ಮಿಕ-ಸಾಂಸ್ಕೃತಿಕ-ರಾಜಕೀಯದಂಥ ಮಾನವ ನಿರ್ಮಿತ 'ಅಧಿಕಾರಸ್ಥ' ನಿಯಂತ್ರಕಗಳ ನೆಲೆಗಳನ್ನು ಮೀರುವುದರಲ್ಲಿಯೆ ಒಬ್ಬ ಲೇಖಕನ ಚಾರಿತ್ರಿಕ ಮಹತ್ವ ಅಥವಾ ಮಿತಿಗಳನ್ನು ಗುರುತಿಸಬೇಕಾಗುತ್ತದೆ. ಇರವು ಎನ್ನುವುದು ಅರಿವಿನ [Knowledge] ಮೂಲವಾಗುತ್ತ,

ಮಾನವ ನಿರ್ಮಿತ ಈ ನಿಯಂತ್ರಕಗಳನ್ನು ಮೀರುವ ಕ್ರಿಯೆಯಲ್ಲಿಯೆ ಸಂಘರ್ಷದ ಬೀಜವಿದ್ದು, ಹೊಸ 'ಅರಿವಿನ' ಹೊಸ 'ಇರವಿನ' ಮನುಷ್ಯನನ್ನು ಪುನರ್ ನಿರ್ಮಿಸಲು ಉದ್ಯುಕ್ತವಾಗುತ್ತದೆ. 'ಪುನರ್ ನಿರ್ಮಾಣ'ದ ಇಂಥ ಶಕ್ತಿಯನ್ನೆ ಆಳದಲ್ಲಿ 'ರಾಜಕಾರಣ' ಎನ್ನಬೇಕಾಗುತ್ತದೆ.

ಸಾಹಿತ್ಯ/ಸಾಹಿತ್ಯ ವಿಮರ್ಶೆಗಳು ಕೇವಲ ಶೈಕ್ಷಣಿಕ ಶಿಸ್ತುಗಳಷ್ಟೇ ಅಲ್ಲ; ಅವು ಮಾನವ ನಿರ್ಮಿತ ಸಂಸ್ಥೆಗಳೂ ಆಗಿರುವುದರಿಂದ ಮೂಲತಃ ಚರಿತ್ರೆ ಮತ್ತು ಸಂಸ್ಕೃತಿಯ ಉತ್ಪನ್ನವೇ ಆಗಿರುತ್ತವೆ. ಈ ದೃಷ್ಟಿಯಿಂದ ಸಾಹಿತ್ಯ/ಸಾಹಿತ್ಯ ವಿಮರ್ಶೆಯು 'ಆಕೃತಿ ವಿಮರ್ಶೆ'ಯಾಗಷ್ಟೇ ಉಳಿಯದೆ, ಅಂತಿಮವಾಗಿ 'ಸಂಸ್ಕೃತಿ ವಿಮರ್ಶೆ'ಯಾಗಿ ಇಳಿದಾಗಲೆ ಸಮಕಾಲೀನತೆಗೆ ಶ್ರೇಷ್ಠತೆಯ ಪ್ರಸ್ತುತತೆ ಒದಗುತ್ತದೆ; ಮತ್ತು ಸಂಸ್ಕೃತಿ ವಿಮರ್ಶೆ ಎಂಬುದು ಸಂಸ್ಕೃತೀಕರಣದ ಉಪಕರಣವಾಗದೆ, 'ಪ್ರತಿ ಸಂಸ್ಕೃತಿ ನಿರ್ಮಾಣ'ದ ಒತ್ತಡವಾಗಿ ಅರಳುವ ಸಂದರ್ಭದಲ್ಲಿಯೆ ಸಾಹಿತ್ಯ-ಸಂಸ್ಕೃತಿ-ಚರಿತ್ರೆಗಳು ರಾಜಕಾರಣದ ಶಕ್ತಿಗಳಾಗಿ ಮಾರ್ಪಡುತ್ತವೆ. ಕುವೆಂಪುರವರ ಸಾಹಿತ್ಯಿಕ, ಸಾಮಾಜಿಕ, ಸಾಂಸ್ಕೃತಿಕ, ಆಧ್ಯಾತ್ಮಿಕ ನಿಲುವುಗಳು ಅಂತಿಮವಾಗಿ ಪ್ರತಿ ಸಂಸ್ಕೃತಿ ನಿರ್ಮಾಣದ ಒತ್ತಡಗಳಾಗಿ/ರಾಜಕಾರಣದ ಶಕ್ತಿಗಳಾಗಿ ನಿಲ್ಲುವುದರಿಂದಲೇ ಇಪ್ಪತ್ತನೇ ಶತಮಾನದ ಅತ್ಯಂತ ಶ್ರೇಷ್ಠ ಲೇಖಕರಾಗಿ ಅವರು ನಿಲ್ಲುತ್ತಾರೆ.

ನವೋದಯ ಸಾಹಿತ್ಯದ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂದರ್ಭಗಳಿಂದ ಬೇರ್ಪಡಿಸಿ, ಕುವೆಂಪು ಸಾಹಿತ್ಯದೊಳಗಿನ ರಾಜಕೀಯ ನಿಲುವುಗಳನ್ನು ಪುನಾರಚಿಸಿಕೊಳ್ಳಲು ಸಾಧ್ಯವಿಲ್ಲ. 'ಪುನಾರಚನೆ' [Reconstruction] ಯಾಕೆ ಅವಶ್ಯವೆಂದರೆ: ಕುವೆಂಪು ಸಾಹಿತ್ಯವನ್ನು ಪ್ರಾರಂಭದಿಂದಲೂ ತಪ್ಪು ತಪ್ಪಾಗಿ ಅರ್ಥೈಸಿ [Miss-reading] ಮಂಡಿಸಿರುವುದು. ಕುವೆಂಪುರವರ ಸಮಕಾಲೀನರಾದಿಯಾಗಿ ತದನಂತರ ತಲೆ ಮಾರುಗಳೂ ಕುವೆಂಪು ಸಾಹಿತ್ಯ ಸೃಷ್ಟಿಯ ಮಹತ್ವವನ್ನು / ಪ್ರತಿ ಸಂಸ್ಕೃತಿ ನಿರ್ಮಾಣದ ತುಡಿತಗಳನ್ನು ತಿರುಚಿ ಹತ್ತಿಕ್ಕಲು / ಕಡೆಗಣಿಸಲು ನಡೆಸಿರುವ ಕುತಂತ್ರದ 'ರಾಜಕೀಯ'ವನ್ನು ಸೂಕ್ಷ್ಮವಾಗಿ ಪರಿಶೀಲಿಸಬೇಕಾಗಿದೆ. ವಿಮರ್ಶೆಯ ಹೆಸರಿನಲ್ಲಿ ರಾಚುತ್ತಿದ್ದ / ತುಳಿಯುತ್ತಿದ್ದ ಇಂತ ನೀಚ ರಾಜಕೀಯದ ಹಿಂದೆ ಜಾತಿ ಕುಲ ಪಂಥ ವರ್ಗ ನೆಲೆಗಳು ಎಕ್ಕಿ ಸೊಕ್ಕಿರುವುದನ್ನು ಗಮನಿಸಬಹುದಾಗಿದೆ. ಆದರೆ ತುಳಿತಕ್ಕೊಳಗಾದ ಜಾತಿ ಕುಲ ವರ್ಗನೆಲೆಗಳಿಂದಲೇ ಬಂದ ಕುವೆಂಪು ಶೋಷಿತವರ್ಗದ ಪರವಾಗಿ ನಿಂತಿದ್ದರಿಂದಾಗಿ ಇಂಥ ಸಾಂಸ್ಕೃತಿಕ ಹುನ್ನಾರಗಳನ್ನು ಅತ್ಯುಗ್ರವಾಗಿ ಪ್ರತಿಭಟಿಸಿದ್ದಾರೆ. 'ಶೂದ್ರ ತಪಸ್ವಿ' ನಾಟಕ ಕುರಿತಂತೆ ಬಂದ ಮಾಸ್ತಿಯವರ ಟೀಕಾಸ್ತ್ರಕ್ಕೆ ಕುವೆಂಪು ಕೊಟ್ಟ ಮಾರುತ್ತರವು ವೈದಿಕ ಮತ್ತು ಶೂದ್ರ ಸಂಸ್ಕೃತಿಗಳ ನಡುವಣ ಸಂಘರ್ಷದ ಮಹತ್ವಪೂರ್ಣ ದಾಖಲೆಯಾಗಿದೆ. ಈ ನಿಟ್ಟಿನಲ್ಲಿಯೆ, ಕುವೆಂಪುರವರು 'ವಿಮರ್ಶಕವರೇಣ್ಯ'ನನ್ನು ಹೀಯಾಳಿಸುವುದನ್ನು ಅರ್ಥ ಮಾಡಿಕೊಳ್ಳಬೇಕು. 'ನೀನೇರ ಬಲ್ಲೆಯಾ ನಾನೇರುವೆತ್ತರಕೆ?' [೧೯೩೪] ಎಂಬ ಸವಾಲಿನಲ್ಲಿ ತನ್ನ ಕಾಲದ ವೈದಿಕ ವಿಮರ್ಶಕನ ವಿರುದ್ಧ ಶೆಡ್ಡು ಹೊಡೆದು ನಿಲ್ಲುತ್ತಾರೆ; ಹಾಗೆಯೆ 'ನಾ ಬಲ್ಲೆ ನೀನೊಂದು ಪಂಡಿತ ನಿಘಂಟೆಂದು' [೧೯೩೪] ಎಂಬುದಾಗಿ ಜರೆಯುತ್ತಾರೆ; ಅವತ್ತಿನ ವಿಮರ್ಶಕನನ್ನು

'ಗ್ರಾಮಸಿಂಹ' [೧೯೪೧: ಕೃತ್ತಿಕೆ] ಎಂದು ಕರೆಯುತ್ತ 'ಗಲ್ಲಿಯ ವಿಮರ್ಶೆಯೊಳ್ ಕಿವಿಗೆ ಬೀಳುವುದುಂಟೆ?' ಎಂಬುದಾಗಿ ಹಂಗಿಸುತ್ತಾರೆ. ಮತ್ತೊಂದು ಕಡೆ ವಿಮರ್ಶೆಯನ್ನು ಕಾಗೆಗಳಿಗೆ ಹೋಲಿಸುತ್ತಾರೆ.

"ಗೋ ಕಾಕ ವಿಕೃತ್‌ಗಳ ಕಾಲ್ಗೊಳೆ ಚಿಕಿತ್ಸೆಯಂ,
ಪಲ್‌ಕೋಡು ಕೊಕ್ಕಿಗಿದೆ, ಮೆದುಳಿಗುಂಟೇಶ್ರಮಂ?

[ಮಂತ್ರಾಕ್ಷತೆ:೧೯೪೧]

ಮೊದಲು ಹೊಗಳಿ, ಅನಂತರ ತೆಗಳಲು ನಿಂತ ತನ್ನ ಸಮಕಾಲೀನರ ಬಗ್ಗೆ ಇನ್ನೊಂದು ಕವಿತೆಯಲ್ಲಿ ಪ್ರತಿಕ್ರಿಯಿಸಿದ್ದಾರೆ:

"ಬೇಕಿಹುದನಾಡಬೇಕೆಂಬಾಸೆಯಿಹುದೆನಗೆ.
ರುಚಿಗಂತೆ ಸಾಹಿತ್ಯ! ಕಲೆಗಾಗಿ ಕಲೆಯಂತೆ!
ಬೆಳಕಿಗಲ್ಲದ ಎಣ್ಣೆ ಬತ್ತಿಗಳ ಕೃಷಿಯಂತೆ!
ದಿಟಬಯಕೆ ಬಾಯಿಲ್ಲದಿದೆ; ಹುಸಿಗೊ ಹೆಬ್ಬಾಯಿ!
ಮೊದ ಮೊದಲು ಹೃದಯ ಸುಖ ತೊದಲಾಗಿ ಹೊರಹೊಮ್ಮಿ
ಸಾಹಿತ್ಯ ಕಲೆಯೆಂದು ಬರೆದೆನ್ನ ಕವಿಯೆಂದು,
ಮೆಚ್ಚಿದರು ಹೊಗಳಿ, ತರುವಾಯ ಹೆಸರಿನ ಹೆಮ್ಮೆ
'ಕಲೆಗಾಗಿ ಕಲೆ' ಎಂದುದದರ ನೈಜವ ಕೊಂದು".

[ಎಚ್ಚರಿಕೆ:ಕೃತ್ತಿಕೆ:೧೯೩೫.]

ಈ ಹಿನ್ನೆಲೆಯಲ್ಲಿಯೆ 'ಕೊಳಲು', 'ನವಿಲು', 'ಕಥನ ಕವನಗಳು' ಸಂಕಲನಗಳಲ್ಲಿನ ಅಚ್ಚಗನ್ನಡದ/ದೇಸೀಯ ಎನ್ನಿಸುವ/ಆಪ್ತತೆಯನ್ನು ಬೆಸೆಯುವ ನುಡಿಕಟ್ಟು ಲಯ ಕಟ್ಟುಗಳನ್ನು ಬದಿಗಿರಿಸಿ, ಮಾರ್ಗದ ಛಂದೋಬಂಧಗಳನ್ನು/ ಸಂಸ್ಕೃತ ಶಬ್ದ ಸಂಪತ್ತನ್ನು ಬಳಸಲು ಶುರು ಮಾಡಿದ್ದು ಕುವೆಂಪು ಎದುರಿಸಿದ ಸಾಂಸ್ಕೃತಿಕ ಸವಾಲಿನ ಒಳ ಸಂರಚನೆಯೂ ಆಗಿತ್ತೆಂಬುದನ್ನು ಮರೆಯುವಂತಿಲ್ಲ.

ನಂತರದ ತಲೆಮಾರುಗಳು ಕುವೆಂಪು ಸಾಹಿತ್ಯವನ್ನು ಅಡ್ಡಾದಿಡ್ಡಿ ಜಗ್ಗಾಡಿ ತಂತಮ್ಮ ಮಠಗಳನ್ನು ಕಟ್ಟಿಕೊಳ್ಳುವಲ್ಲಿ ಮಗ್ನರಾದರು. ಒಂದು ಕಡೆ ಕುವೆಂಪು ಕಟ್ಟಾಭಿಮಾನಿಗಳು ವ್ಯಕ್ತಿ ಪೂಜೆಯ ಹಂತಕ್ಕೂ ತಲುಪಿ ಕುವೆಂಪು ಸಾಹಿತ್ಯವನ್ನು ಕುವೆಂಪುರವರ ಭವ್ಯೋಪಭವ್ಯ ಪರಿಭಾಷೆಯಲ್ಲಿಯೆ ತಾತ್ಪರ್ಯ-ವಿವರಣೆ-ವ್ಯಾಖ್ಯಾನ ಮಾಡುತ್ತಾ ಬಂದರು; ಮತ್ತೊಂದು ಕಡೆಯಲ್ಲಿ ನವ್ಯ ವಿಮರ್ಶಕರು ಕುವೆಂಪು ಸಾಹಿತ್ಯವನ್ನು ಎಲಿಯಟ್ ಲೀವಿಸ್ ಪ್ರಣೀತ ಕೃತಿನಿಷ್ಠ ವಿಮರ್ಶೆಯ ಹತಾರಗಳಿಂದ ಜಜ್ಜಿ ಹಾಕಿದರು. ಕುವೆಂಪು ಬರೆದದ್ದೆಲ್ಲ ಮಹಾನ್ ಭೂಮ ಸಾಹಿತ್ಯ ಎಂದೆಲ್ಲ ಒಂದು ಗುಂಪು ಉಘೇ ಉಘೇ ಎಂದು ಉಗ್ಗಡಿಸಿದರೆ, ಮತ್ತೊಂದು ಗುಂಪು ಕುವೆಂಪು ಕಾವ್ಯ ಅಳ್ಳಕವಾದದ್ದು, ಜೊಳ್ಳು ಜೊಳ್ಳಾದದ್ದು ಎಂದು ತುಚ್ಛೀಕರಿಸುತ್ತ ಮತ್ತೊಂದು ಅತಿರೇಕದಲ್ಲಿ ನಿಂತರು. ಒಂದು ಗುಂಪು ಹುಂಬುತನದ

ಭಾವಾತಿರೇಕದಲ್ಲಿ ಕುವೆಂಪು ಸಂರಕ್ಷಕ ದಳವಾಗಿ ನಿಂತರೆ, ಇನ್ನೊಂದು ಗುಂಪು ಸಾಹಿತ್ಯಿಕ ಮಾನ 'ದಂಡ'ಗಳಿಂದಲೇ ಕುವೆಂಪು ಭಂಜಕ ದಳವಾಗಿ ಕೆಲಸ ಮಾಡಿತು. ಒಬ್ಬ ಮಹತ್ವದ ಕವಿ/ಲೇಖಕನ ಬಗ್ಗೆ ಇಂಥ ಅಸಹ್ಯ/ ಜಿದ್ದು ಜಿಗುಟಿನ ವಾತಾವರಣ ಉಂಟಾದದ್ದು ಸಾಂಸ್ಕೃತಿಕವಾಗಿ ಅನಾರೋಗ್ಯಕರವಾದದ್ದು ಎಂದೇ ಹೇಳಬೇಕಾಗುತ್ತದೆ. ಇಂಥ ಅಸಹನೀಯ ಸನ್ನಿವೇಶ ಕುರಿತಂತೆ ಪೂರ್ಣಚಂದ್ರ ತೇಜಸ್ವಿಯವರು ದಾಖಲಿಸಿರುವುದನ್ನು ಇಲ್ಲಿ ಗಮನಿಸಬಹುದಾಗಿದೆ; "ಆಗ ನವ್ಯ ಕಾವ್ಯದ ಅಲೆ ತುಂಬಾ ಜೋರಾಗಿದ್ದ ಕಾಲ. ಆಗಿನ ಪ್ರಮುಖ ನವ್ಯ ಸಾಹಿತಿಗಳಾದ ಶ್ರೀ ಗೋ.ಕೃ. ಅಡಿಗ, ರಾಮಚಂದ್ರ ಶರ್ಮ, ವಿ.ಕೃ. ಗೋಕಾಕ್, ಯು.ಆರ್. ಅನಂತಮೂರ್ತಿ ಮೊದಲಾದವರೆಲ್ಲ ಬ್ರಾಹ್ಮಣರಾಗಿದ್ದುದರಿಂದ ಅದೊಂದು ವೈದಿಕ ಪುನರುತ್ಥಾನ ಆಂದೋಳನದಂತೆ ಇತರರಿಗೆ ಭಾಸವಾಗುತ್ತಿತ್ತು. ಇದರೊಡನೆ ಇವರೆಲ್ಲ ಸಾರಾಸಗಟಾಗಿ ನವೋದಯ ಸಾಹಿತಿಗಳಲ್ಲಿ ಕುವೆಂಪು ಒಬ್ಬರನ್ನೇ ಆರಿಸಿಕೊಂಡು ತಾರಾಮಾರಿ ಟೀಕಿಸುತ್ತಿದ್ದರಿಂದ ನವ್ಯ ಕಾವ್ಯ ಎಂದರೆ ಹಾರುವರ ಪ್ರವರ ಎಂದೇ ಅವರ ವಿರೋಧಿಗಳೆಲ್ಲ ತಾತ್ಸಾರದಿಂದ ನೋಡುತ್ತಿದ್ದರು. ಸಾಹಿತ್ಯದ ಗಂಧ ಗಾಳಿ ಇಲ್ಲಡ ಮಡ್ಡರೇ ಮುಕ್ಕಾಲು ಜನ ಅದರಲ್ಲಿದ್ದವರು. ಸುಮ್ಮನೆ ಕುವೆಂಪು ಭಜನೆಯನ್ನು ಆದಷ್ಟು ತಾರಕ ಸ್ವರದಲ್ಲಿ ಮಾಡಿದರೆ ಸಾಕು, ನವ್ಯ ಸಾಹಿತಿಗಳೆಲ್ಲಾ ಹೆದರಿ ಹಿಂದೆಗೆಯುತ್ತಾರೆಂದು ತಿಳಿದು ಕೂಗಾಡುತ್ತಿದ್ದ ಅವರ ರೀತಿ ನೀತಿಗಳು ಸೃಜನಶೀಲ ಮನಸ್ಸುಗಳಿಗೆ ಅಸಹ್ಯ ಹುಟ್ಟಿಸುವಂತಿದ್ದವು" ["ಅಣ್ಣನ ನೆನಪು: ಲಂಕೇಶ್ ಪತ್ರಿಕೆ:೨೦.೯.೧೯೯೫.] ತೇಜಸ್ವಿಯವರ ಈ ಪ್ರತಿಕ್ರಿಯೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ, ಈ ಎರಡೂ ಗುಂಪುಗಳ ನಡುವಿನ ಜಗಳ ಕೇವಲ ಸಾಹಿತ್ಯಿಕ ಜಗಳವಾಗಷ್ಟೇ ಅಲ್ಲದೆ, ಆಳದಲ್ಲಿ ಎರಡು ವರ್ಣ ಜಾತಿಗಳ ಪ್ರತಿಷ್ಠೆಯ ಪ್ರಶ್ನೆಯೂ ಆಗಿತ್ತೆಂಬುದು ತಿಳಿಯುತ್ತದೆ. ನವ್ಯರು ಪ್ರತಿಪಾದಿಸಿದಂತೆ ಈ ಜಗಳ ಕೇವಲ ಸಾಹಿತ್ಯಿಕ ವಸ್ತುನಿಷ್ಠ ಚರ್ಚೆಯಾಗಿತ್ತು ಎಂಬುದನ್ನು ನಂಬುವಂತಿಲ್ಲ.

ನವ್ಯ ಸಾಹಿತ್ಯ, ನವ್ಯ ವಿಮರ್ಶೆಗಳು ನವೋದಯ ಸಾಹಿತ್ಯವನ್ನು ಮತ್ತು ಪ್ರಗತಿ ಶೀಲ ಸಾಹಿತ್ಯವನ್ನು ಏಕಕಾಲಕ್ಕೆ ಅಧಿಕಾರಸ್ಥ ನೆಲೆಯಿಂದ ಪದಚ್ಯುತಗೊಳಿಸಬೇಕಾಗಿತ್ತು. ತನ್ನ ಅಸ್ತಿತ್ವವನ್ನು ಭದ್ರಗೊಳಿಸುವ ಉತ್ಕಟತೆಯಲ್ಲಿ ತನಗಿಂತ ಹಿಂದಿನ ಪಂಥಗಳ ಸಾಂಸ್ಕೃತಿಕ ಅಧಿಕಾರ ಪತ್ಯೆಯನ್ನು ಒಡೆದು ಹೊರಬರುವ ಪ್ರಕ್ರಿಯೆ ಚಾರಿತ್ರಿಕ ಒತ್ತಡಗಳಿಂದಾಗಿ ಸಹಜ ಎನ್ನಿಸಿದರೂ, ನವೋದಯದ ಬೇಂದ್ರೆ, ಕಾರಂತ, ಮಾಸ್ತಿಯವರ ಬಗ್ಗೆ ನವ್ಯ ವಿಮರ್ಶೆ ಕ್ರಮ ಕ್ರಮೇಣವಾಗಿ ಮೃದುಗೊಳ್ಳುತ್ತ, ಜೀರ್ಣೋಭವಿಸಿಕೊಂಡಂತೆ, ಅದೇ ನವೋದಯದ ಕುವೆಂಪುರನ್ನು ಹೊರಗೇ ಇಟ್ಟದ್ದು ಗ್ರಹೀತ ಸತ್ಯ. ನವ್ಯರ ಸಾಹಿತ್ಯಿಕ ಮಾನದಂಡಗಳು ಇದಕ್ಕೆ ಕಾರಣವೆ? ಅಥವಾ ನವ್ಯರ ತಾತ್ವಿಕ ಸಾಂಸ್ಕೃತಿಕ ವರ್ಗ ನೆಲೆಗಳು ಕಾರಣವೆ? ಎಂಬ ಪ್ರಶ್ನೆಗಳು ಎದುರಾಗುತ್ತವೆ. ಜೊತೆಗೆ ಇಲ್ಲಿ ಇನ್ನೊಂದು ಸಂದೇಹವೂ ಹಣಿಕಿಕ್ಕುತ್ತದೆ. ನವ್ಯರು ಹೆಚ್ಚು ಕಡಿಮೆ ದ್ವೈತ ಸಿದ್ಧಾಂತದ ಮಾಧ್ವ ಬ್ರಾಹ್ಮಣರಾಗಿದ್ದು, ಕುವೆಂಪು ತಾತ್ವಿಕವಾಗಿ ಅದ್ವೈತ ಸಿದ್ಧಾಂತವನ್ನು ಒಪ್ಪಿಕೊಂಡದ್ದು ಈ ಬಿರುಕಿಗೆ ಬುನಾದಿಯಾಗಿತ್ತೆ ಎಂಬ ಪ್ರಶ್ನೆಯನ್ನೂ ಕಡೆಗಣಿಸುವಂತಿಲ್ಲ. ಈ ಬಗ್ಗೆ ಕುವೆಂಪುರವರ

ಮಾತುಗಳೇ ಸ್ಪಷ್ಟೀಕರಣದಂತಿವೆ. "ಮಧ್ವ ಸಿದ್ಧಾಂತಕ್ಕಿಂತ ಕಳಪೆ ಸಿದ್ಧಾಂತ ಮತ್ತೊಂದಿಲ್ಲ! ಅದಕ್ಕೇನೆ ಆ ಮಾರ್ಗದ ಅನುಯಾಯಿಗಳಾದವರಿಗೆ ರಾಮಾಯಣ ದರ್ಶನದಂತಹ ಕೃತಿಗಳನ್ನು ಕಂಡರೆ ಆಗುವುದಿಲ್ಲ. ಏಕೆಂದರೆ ರಾಮಾಯಣ ದರ್ಶನದಲ್ಲಿರುವುದು ಸರ್ವೋದಯ, ಸಮನ್ವಯ ಮತ್ತು ಪೂರ್ಣ ದೃಷ್ಟಿ. ನಿತ್ಯಸಾರಕಿ, ಮುಕ್ತಿಯೋಗ್ಯ, ತಮೋಯೋಗ್ಯ, ನಿತ್ಯ ಸಂಸಾರಿ ಇದನ್ನೆಲ್ಲ ನಂಬಿದವರಿಗೆ ಶ್ರೀ ರಾಮಾಯಣ ದರ್ಶನವನ್ನು ಅಪ್ರೀಸಿಯೇಟ್ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದಲೇ ಅವರು - ಆ ಗುಂಪಿಗೆ ಸೇರಿದ ವಿಮರ್ಶಕ ಮಾನ್ಯರು - ಇಡೀ ಕಾವ್ಯವನ್ನೇ ಹಳಿಯುತ್ತಾ ಕುಳಿತುಕೊಳ್ಳುತ್ತಾರೆ" ['ಸಂಸ್ಕೃತಿ ಕ್ರಾಂತಿಗೆ ಕಹಳೆ ನಾಂದಿ': ಸಂಕ್ರಮಣ ೬೦;ಜೂನ್ ೧೯೭೪].

ಹಾಗೆ ನೋಡಿದರೆ, ಕುವೆಂಪು ಭಕ್ತರು ಬರೆದು ಹಾಕಿದ ತೊಪ್ಪೆ-ತೊಪ್ಪೆ ತಾತ್ಪರ್ಯ ವ್ಯಾಖ್ಯಾನ ರಾಶಿಯ ಎದುರು ಕುವೆಂಪು ಸಾಹಿತ್ಯ ಕುರಿತಂತೆ ಗಂಭೀರ ಸಾಹಿತ್ಯಿಕ ಪ್ರಶ್ನೆಗಳನ್ನು ನಿಷ್ಠುರವಾಗಿ ಎತ್ತಿದವರು ನವ್ಯ ವಿಮರ್ಶಕರೆ: ಕುವೆಂಪು ಒಬ್ಬ ಶ್ರೇಷ್ಠ ಕಾದಂಬರಿಕಾರ ಎಂಬ ಸತ್ಯವನ್ನು ಕೃತಿನಿಷ್ಠ ವಿಮರ್ಶೆಯ ಮೂಸೆಯಲ್ಲಿಟ್ಟು ಕರಗಿಸಿ ಶೋಧಿಸಿದವರು ನವ್ಯರೆ ಎಂಬುದನ್ನು ಮರೆಯುವಂತಿಲ್ಲ. ಆದರೆ ಕುವೆಂಪುರನ್ನು ಒಬ್ಬ ಪ್ರತಿಭಾವಂತ ಶ್ರೇಷ್ಠ ಗದ್ಯ ಲೇಖಕರನ್ನಾಗಿ ಸ್ವೀಕರಿಸುವಂತೆ ಕವಿಯನ್ನಾಗಿ ಒಪ್ಪಿಕೊಳ್ಳಲಿಲ್ಲ; ಒಪ್ಪಿಕೊಳ್ಳುವಂತೆಯೂ ಇರಲಿಲ್ಲ. ಏಕೆಂದರೆ; ಕಾವ್ಯ ಕುರಿತ ಪರಿಕಲ್ಪನೆ-ಗ್ರಹಿಕೆಗಳು ಕುವೆಂಪುರಿಗೂ ಅಡಿಗರಿಗೂ ತದ್ವಿರುದ್ಧವಾಗಿದ್ದವು. ಕುವೆಂಪು ಕಾದಂಬರಿಗಳ ಬಗ್ಗೆ ನವ್ಯರು ತಳೆದ ನಿಲುವು ಮೇಲುನೋಟಕ್ಕೆ ಸ್ವಾಗತಾರ್ಹ ಅಭಿನಂದನಾರ್ಹ ಎನ್ನಿಸುವಂತಿದ್ದರೂ, ಈ ಕಾದಂಬರಿಗಳನ್ನು ಕುರಿತಂತೆ ವಸಾಹತುಶಾಹೀ ಅನುಭವದ ಹಿನ್ನೆಲೆಯಲ್ಲಿ ಹೊಸ ಸಾಂಸ್ಕೃತಿಕ ಚರ್ಚೆಯನ್ನು ಎತ್ತುವುದಕ್ಕೆ ಬದಲಾಗಿ, 'ಕೇಂದ್ರ ಪ್ರಜ್ಞೆಯ ಅಭಾವ' ಅಥವಾ 'ಸಾವಯವ ಶಿಲ್ಪದ ಸಮಗ್ರೀಕರಣದ ಕೊರತೆ': 'ವಿವರಗಳು ಸೊಕ್ಕುತ್ತವೆ' ಎಂಬಂಥ ತಾಂತ್ರಿಕ ವೈಫಲ್ಯಗಳನ್ನು ಹೆಕ್ಕಿ ಬಿಟ್ಟರು. ಇಂಥ ತಾಂತ್ರಿಕ ವೈಫಲ್ಯಗಳನ್ನು ಕಾದಂಬರಿಯ ಆಂತರಿಕ ದೋಷಗಳೆನ್ನಬೇಕೋ ಅಥವಾ ಈ ವೈಫಲ್ಯಗಳೆ ನವ್ಯ ವಿಮರ್ಶೆಯ ತಾತ್ವಿಕ ಪರಿಮಿತಿಗಳನ್ನು ಹೊಳೆಯಿಸುತ್ತವೆಯೋ ಎಂಬುದನ್ನು ಪ್ರತ್ಯೇಕವಾಗಿಯೆ ಚರ್ಚಿಸಬೇಕಾಗುತ್ತದೆ.

ಕುವೆಂಪುರವರ ಗದ್ಯ ಮತ್ತು ಪದ್ಯ ಕುರಿತಂತೆ ಅನಂತಮೂರ್ತಿಯವರು ಪ್ರಾರಂಭಿಸಿದ 'ಸೀಳು ಪ್ರಜ್ಞೆ'ಯ ಚರ್ಚೆಯನ್ನು ಈಗ ಪರಿಶೀಲಿಸಬೇಕಾಗಿದೆ. ಕುವೆಂಪು ಕಾವ್ಯ ಅತಿ ಭಾವುಕತೆಯಿಂದಾಗಿ, ರೆಟ್ಟರಿಕ್ಕಿನಿಂದಾಗಿ, ತನ್ಮಯತೆಯಿಂದಾಗಿ, ಬೋಳೆತನದಿಂದಾಗಿ, ಅಮೂರ್ತತೆಯಿಂದಾಗಿ ತೆಳುವಾಗುತ್ತಾ ಹೋದರೆ, ಮೂರ್ತ ವಿವರಗಳ ಸಮೃದ್ಧಿಯಿಂದಾಗಿ ಕುವೆಂಪು ಗದ್ಯ ಸೊಕ್ಕುತ್ತದೆ. ಕುವೆಂಪು ಕೊನೆಗೂ ದಾರ್ಶನಿಕ ಕಾದಂಬರಿ ಬರೆಯಲಾಗಲಿಲ್ಲ ಎಂಬುದು ಅವರ ವಾದದ ತಿರುಳು. ಅನಂತಮೂರ್ತಿಯವರು ಹುಟ್ಟು ಹಾಕಿದ ಕುವೆಂಪು ಗದ್ಯ-ಪದ್ಯಗಳ ನಡುವಿನ ವಿಭಜನೆಯ ವ್ಯಾಖ್ಯಾನವನ್ನೆ ಎಂ. ಜಿ. ಕೃಷ್ಣಮೂರ್ತಿ, ಕೀರ್ತಿನಾಥ ಕುರ್ತುಕೋಟಿ, ಜಿ.ಹೆಚ್. ನಾಯಕ್ ಮೊದಲಾದ ನವ್ಯ ವಿಮರ್ಶಕರು ಹಾಗೂ ಇವತ್ತಿನ ನವ್ಯೋತ್ತರ ವಿಮರ್ಶಕರು 'ಕುವೆಂಪುರವರ ಕಾವ್ಯದಲ್ಲಿ ಆದ ನಷ್ಟ ಕಾದಂಬರಿಯಲ್ಲಿ ತುಂಬಿ ಬಂತು' ಎಂಬಂಥ ಆಲಾಪನೆಯಾಗಿ ಹರಿಯುತ್ತಿದೆ. ಕಾದಂಬರಿ, ಸಣ್ಣಕಥೆ, ಕಥನ ಕವನ,

ಭಾವಗೀತೆ, ಮಹಾಕಾವ್ಯ, ಖಂಡಕಾವ್ಯ ಮುಂತಾದ ಪ್ರಕಾರಗಳ ನಡುವಿನ ವ್ಯತ್ಯಾಸ ಇಲ್ಲವೆ ಪರಿಮಿತಿಗಳನ್ನು 'ಪ್ರಕಾರ ವಿಮರ್ಶೆ' [Genre criticism] ಯ ಹಿನ್ನೆಲೆಯಲ್ಲಾದರೂ ಸೀಳು ಪ್ರಜ್ಞೆಯ ಇಂಥ ಚರ್ಚೆ ನಡೆಯಲಿಲ್ಲ. "ತನ್ನ ಕೃತಿಯೊಳಕ್ಕೆ ತಾನು ಸ್ವಂತ ಹೇಗೆ ಪ್ರವೇಶಿಸಬೇಕೆಂಬ ಪ್ರಶ್ನೆಯನ್ನು ಈ ಎರಡೂ ಕೃತಿಗಳಲ್ಲಿ [ಕಾನೂರು ಸುಬ್ಬಮ್ಮ ಹೆಗ್ಗಡಿತಿ ಮತ್ತು ಮಲೆಗಳಲ್ಲಿ ಮದುಮಗಳು] ಕುವೆಂಪು ಬಗೆಹರಿಸಿಕೊಂಡಿಲ್ಲ ಎನಿಸುತ್ತದೆ" ಎಂಬ ಅನಂತಮೂರ್ತಿಯವರ ಮಾತನ್ನೆ [ಪ್ರಜ್ಞೆ ಮತ್ತು ಪರಿಸರ: 'ಭಾರತೀಯ ಸಂಸ್ಕೃತಿ ಮತ್ತು ಲೇಖಕ': ೧೯೭೧ ಪುಟ ೧೫೧] ತಿರುಗಿಸಿ ಹೇಳಬೇಕೆಂದರೆ ಕುವೆಂಪುರವರ ಕೃತಿಯೊಳಕ್ಕೆ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಹಿನ್ನೆಲೆಯಲ್ಲಿ ಹೇಗೆ ಪ್ರವೇಶಿಸಬೇಕೆಂಬ ಪ್ರಶ್ನೆಯನ್ನು ಅನಂತಮೂರ್ತಿ ಅರ್ಥಾತ್ ನವ್ಯರು ಬಗೆಹರಿಸಿಕೊಳ್ಳಲೇ ಇಲ್ಲ ಎನಿಸುತ್ತದೆ. ಒಟ್ಟಾರೆ ಇಂಥ 'ಏಕಾಗ್ರ' ದೃಷ್ಟಿಯ ಒಕ್ಕಣ್ಣಿನಿಂದ ಹುಟ್ಟಿದ ಉದ್ವಿಗ್ನತೆಯ, ಅತಿರೇಕದ ಪೂರ್ವಗ್ರಹಗಳ ಕಣ್ಕಟ್ಟಿನಿಂದ ಬಿಡಿಸಿಕೊಂಡು, ಕುವೆಂಪು ಸಾಹಿತ್ಯವನ್ನು ಚಾರಿತ್ರಿಕವಾಗಿ ಸಾಂಸ್ಕೃತಿಕ ನೆಲೆಯಲ್ಲಿ ಕಂಡು ಕೊಳ್ಳುವುದೆ ಭಾರತೀಯ ಪುನರುಜ್ಜೀವನದ [Renaissance] ಹಾಗೂ ಕನ್ನಡ ನವೋದಯದ ಪುನಾರಚನೆಯೇ ಆಗುತ್ತದೆ.

ಕುವೆಂಪು ಸಾಹಿತ್ಯದೊಳಗಿನ ರಾಜಕೀಯ ನಿಲುವುಗಳನ್ನು ಪ್ರಧಾನವಾಗಿ ಮೂರು ನೆಲೆಗಳಲ್ಲಿ ಪರಿಶೋಧಿಸಬಹುದಾಗಿದೆ.

೧. ಅದ್ವೈತ ಸಿದ್ಧಾಂತ ಮತ್ತು ನಿಸರ್ಗಾರಾಧನೆ

೨. ರಾಷ್ಟ್ರೀಯ ಹೋರಾಟ ಮತ್ತು ವರ್ಣ ವ್ಯವಸ್ಥೆ

೩. ವಿಶ್ವ ಮಾನವ ಪರಿಕಲ್ಪನೆ

ಹಾಗಂತ ಈ ನೆಲೆಗಳು ಕುವೆಂಪುರಲ್ಲಿ ಪ್ರತ್ಯೇಕ ಘಟಕಗಳೇನಲ್ಲ; ಅವು ಒಂದನ್ನೊಂದು ಪ್ರಭಾವಿಸುತ್ತಾ ಉಜ್ಜಿಕೊಳ್ಳುತ್ತಾ ಅಂತಃ ಸಂಬಂಧಿಯಾಗಿ ಬೆಳೆಯುತ್ತವೆ. ಅಲ್ಲದೆ ಈ ಪ್ರಧಾನ ನೆಲೆಯಲ್ಲಿ ಅನೇಕ ಒಳಧಾರೆಗಳೂ ಬಂದು ಸೇರಿಕೊಳ್ಳುತ್ತವೆ.

ಕುವೆಂಪುರವರ ಅದ್ವೈತ ತತ್ತ್ವ ಮತ್ತು ನಿಸರ್ಗೋಪಾಸನೆ

ಕುವೆಂಪುರವರ ಅದ್ವೈತ ತತ್ವ ಅವರ ಇಡೀ ಸಾಹಿತ್ಯಕ್ಕೆ ತಾತ್ವಿಕ ಅಡಿಪಾಯವಾಗಿ ನಿಂತಿದೆ. ಇದು ಅವರ ಚಿಂತನೆಗಳಿಗೆ ಭಾವನೆಗಳಿಗೆ ಒಂದು ನಿರ್ದಿಷ್ಟ ಸ್ವರೂಪವನ್ನೂ ಮತ್ತು ಗಟ್ಟಿಯಾದ ಜೀವನ ದೃಷ್ಟಿಯನ್ನೂ ಒದಗಿಸಿದೆ. ಬಹುಶಃ ಆಧುನಿಕ ಕನ್ನಡ ಸಾಹಿತ್ಯದಲ್ಲಿ ತತ್ವಜ್ಞಾನ ಮತ್ತು ಕಾವ್ಯಸಾಹಿತ್ಯ ಅವಿಚ್ಛಿನ್ನವಾಗಿ ಬೆರೆತು ಪ್ರಕಟಗೊಂಡಿರುವುದು ಕುವೆಂಪುರಲ್ಲಿಯೆ. ಈ ತಾತ್ವಿಕ ನೆಲೆಯೆ ನಿಸರ್ಗೋಪಾಸನೆಯಾಗಿ, ಪ್ರಣಯದ ಅಭೀಪ್ಸೆಯಾಗಿ, ದಾಂಪತ್ಯ ಪ್ರೇಮವಾಗಿ, ಆಧ್ಯಾತ್ಮಿಕ ದಾರ್ಶನಿಕ ಹಂಬಲವಾಗಿ, ನಾಡು ನುಡಿ ದೇಶ ರಾಷ್ಟ್ರಪ್ರೇಮವಾಗಿ, ಕೊನೆಗೆ ವಿಶ್ವಮಾನವ ಪರಿಕಲ್ಪನೆಯಾಗಿ ಹಬ್ಬುತ್ತಾ ಹೋಗಿದೆ.

ಕುವೆಂಪು ಅದ್ವೈತದ ತಾತ್ವಿಕ ನೆಲೆಯನ್ನೇ ಆಯ್ದುಕೊಳ್ಳಲು ಇದ್ದ ಸಾಂಸ್ಕೃತಿಕ ಚಾರಿತ್ರಿಕ ಒತ್ತಡಗಳನ್ನು ಗ್ರಹಿಸಿಕೊಳ್ಳದಿದ್ದಲ್ಲಿ ಅವರ ಕಾವ್ಯವನ್ನು ಭಾವುಕತನದ ಭಾವಸಮಾಧಿಯ / ಬೋಳೆತನದ / ರೆಟರಿಕ್ಕಿನ ಸರಳ ರಚನೆಗಳು ಎಂದು ತಳ್ಳಿ ಹಾಕಿ ಬಿಡುವ ಅಪಾಯಕ್ಕೆ ತುತ್ತಾಗುತ್ತೇವೆ. ೧೯ನೇ ಶತಮಾನದ ಕೊನೆ ಮತ್ತು ೨೦ನೇ ಶತಮಾನದ ಆರಂಭ ಭಾರತದ ಸಾಂಸ್ಕೃತಿಕ ಪುನರುಜ್ಜೀವನಕ್ಕೆ ಒಡ್ಡಿಕೊಂಡ ಕಾಲಘಟ್ಟ. ಬ್ರಹ್ಮ ಸಮಾಜ ಆರ್ಯ ಸಮಾಜಗಳು ಸಮಾಜ ಸುಧಾರಣೆಯ ಸಮೇತವೆ ಸ್ವ ಸಂಸ್ಕೃತಿಯನ್ನು ಶೋಧನೆಗೆ ಒಳಪಡಿಸಿದ್ದವು. ವಸಾಹತುಶಾಹಿಯ ಸ್ವಯಂ ತಂತ್ರವಾದೀ [ಲಿಬರಲಿಸಂ] ನಿಲುವಿನ ಫಲವಾಗಿ ಭಾರತೀಯ ವಿದ್ಯಾವಂತ ವರ್ಗದಲ್ಲಿ ಅರ್ಥಾತ್ ಬ್ರಾಹ್ಮಣ ಸಮಾಜದಲ್ಲಿ ಈ ಸುಧಾರಣೆ ಮತ್ತು ಸ್ವಸಂಸ್ಕೃತಿಯ ಶೋಧನೆಗಳು ವಸಾಹತುಶಾಹೀ ಸಂಸ್ಕೃತಿಗೆ ಎದುರಾಗಿ ಪ್ರತಿ ಸಂಸ್ಕೃತಿ ನಿರ್ಮಾಣದ ಒತ್ತಡಗಳಾಗಿ ಪರಿಣಮಿಸಿದವು. ಈ ಸಂದರ್ಭದಲ್ಲಿಯೆ ಶೂದ್ರ ರೈತಾಪಿ ಕುಲದಿಂದ ಬಂದ ಕುವೆಂಪು ಇಂಗ್ಲಿಷ್ ವಿದ್ಯಾಭ್ಯಾಸದ ಮೂಲಕವೆ ತಾತ್ವಿಕ ಶೋಧನೆಗೆ ತೊಡಗಿದ್ದು, ಪಾಶ್ಚಾತ್ಯ ಪೌರಾತ್ಯ ತತ್ವಜ್ಞಾನವನ್ನು ಅಧ್ಯಯನ ಮಾಡಿದ್ದು, ೧೯೨೪ರಲ್ಲಿ ರಾಮಕೃಷ್ಣಾಶ್ರಮ ಸೇರಿದ್ದು ಹಾಗೂ ೧೯೨೯ರಲ್ಲಿ ಕಲ್ಕತ್ತೆಗೆ ಹೋಗಿ ಗುರುದೀಕ್ಷೆ ಪಡೆದಿದ್ದು. ಈ ಗುರುದೀಕ್ಷೆ ಇವರ ತಾತ್ವಿಕ ಬದ್ಧತೆಯ ಸಂಕೇತ ಎನ್ನಬಹುದು. ಇಲ್ಲಿಯೆ, ಕುವೆಂಪು ಆಯ್ದುಕೊಂಡ ತಾತ್ವಿಕ ನೆಲೆಯ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಗುರುತಿಸಿಕೊಳ್ಳಬೇಕಾಗುತ್ತದೆ. ರಾಜಾರಾಮ್ ಮೋಹನರಾಯ್-ದಯಾನಂದ ಸರಸ್ವತಿಯವರು ಸ್ಥಾಪಿಸಿದ ಬ್ರಹ್ಮಸಮಾಜ, ಆರ್ಯ ಸಮಾಜಗಳಿಂದ ಆಕರ್ಷಿತರಾಗದೆ, ಮತಾತೀತ ಧರ್ಮಾತೀತ ನೆಲೆಯ ರಾಮಕೃಷ್ಣಾಶ್ರಮದ ಜೊತೆಗೆ ತನ್ನನ್ನು ಗುರುತಿಸಿಕೊಂಡದ್ದು ಕೇವಲ ಆಶ್ರಯವಷ್ಟೇ ಆಗದೆ, ತಾತ್ವಿಕ ನೆಲೆಯ ಆಯ್ಕೆಯೇ ಆಗಿತ್ತು. ಹಾಗಾಗಿ ಮೇಲ್ಜಾತಿ ಮೇಲ್ವರ್ಗದ ಸಮಾಜ ಸುಧಾರಣೆ ಹಾಗೂ ಏಕದೇವೋಪಾಸನೆಯ ನೆಲೆಗಳಿಗಿಂತ ಬಹುದೇವೋಪಾಸನೆಯ ನೆಲೆಗಳತ್ತ, ಪರಮಹಂಸ ವಿವೇಕಾನಂದರ ಸರ್ವಧರ್ಮ ಸಮನ್ವಯ ಹಾಗೂ ಸರ್ವೋದಯದ ವಿಚಾರ ಧಾರೆಗಳಿಗೆ ಒಡ್ಡಿಕೊಂಡದ್ದು ಕುವೆಂಪುರವರ 'ಸ್ವಸಂಸ್ಕೃತಿ ಶೋಧನೆ'ಯ ವಿಭಿನ್ನತೆಯನ್ನು ಸೂಚಿಸುತ್ತದೆ. ಇದರಿಂದಾಗಿ ವೈದಿಕನೆಲೆಯ 'ಹಿಂದುತ್ವ'ದ ಚೌಕಟ್ಟಿನಿಂದ ಬಿಡಿಸಿಕೊಳ್ಳಲು ಕುವೆಂಪುಗೆ ಸಾಧ್ಯವಾಯಿತು.

ದಟ್ಟ ಮಲೆನಾಡಿನ ಗರ್ಭದಿಂದ ಬಂದ ಕುವೆಂಪುಗೆ ನಿಸರ್ಗ ಔಪಚಾರಿಕವಾದ ಒಂದು ಆಸ್ವಾದಶ ವರ್ಣನೆಯಾಗಿ ಬರಲಿಲ್ಲ ಅಥವಾ ಕೈಗಾರಿಕೀಕರಣದ ಛಿದ್ರೀಕೃತ ಜಂಜಡದಿಂದ ಓಡಿಹೋಗಿ ಪ್ರಕೃತಿಯ ಮಡಿಲಲ್ಲಿ ಆಸರೆ ಪಡೆಯುವ ಪಲಾಯನವಾದೀ ನೆಲೆಯೂ ಆಗಿರಲಿಲ್ಲ ಆರೋಪಿತ ಸಮಾಧಿಸ್ಥ ನೆಲೆಯೂ ಆಗಿರಲಿಲ್ಲ. ಭಾರತದ ಸಾಂಸ್ಕೃತಿಕ ಪುನರುಜ್ಜೀವನದ ಒತ್ತಡಗಳು ಕುವೆಂಪುರ ನಿಸರ್ಗೋಪಾಸನೆಯಲ್ಲಿ ಮೂರ್ತಗೊಳ್ಳುತ್ತವೆ. ಇಂಗ್ಲಿಷ್ ರೊಮ್ಯಾಂಟಿಕ್ ಕವಿಗಳ ಪ್ರಭಾವವನ್ನು ಅಲ್ಲಗಳೆಯಲಾಗದಿದ್ದರೂ, ಕುವೆಂಪುರ ನಿಸರ್ಗಾನುಭೂತಿಯ ತಾತ್ವಿಕ ಬೇರುಗಳು ಇಂಗ್ಲೆಂಡಿನಿಂದ ಬಂದಂಥವಲ್ಲ. ಈ ಬಗ್ಗೆ ಕುವೆಂಪುರವರೆ ಹೇಳುವ ಮಾತುಗಳು ಹೀಗಿವೆ "ಆಂಗ್ಲೇಯ ಭಾಷೆಯ ಮುಖಾಂತರ ನಮ್ಮ ದೇಶಕ್ಕೆ ಆಗಮಿಸಿದ ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳು ಭಾರತೀಯರ ಬದುಕಿನ ಮೇಲೆ

ಬೀರಿದ ಪ್ರಭಾವವೆ ಆಧುನಿಕ ನವೋದಯಕ್ಕೆ ಕಾರಣ. ಈ ಪ್ರಭಾವ ಕವನಗಳ ವಸ್ತು ಮತ್ತು ದೃಷ್ಟಿ ಇವುಗಳನ್ನು ಕುರಿತದ್ದಕ್ಕಿಂತಲೂ ಹೆಚ್ಚಾಗಿ ಅವುಗಳ ಛಂದಸ್ಸು ರೀತಿ ರೂಪ ಮತ್ತು ಭಾವವಿನ್ಯಾಸಗಳಿಗೆ ವಿಶೇಷವಾಗಿ ಅನ್ವಯವಾಗುತ್ತದೆ." ['ಇಂದಿನ ಹೊಸಗನ್ನಡ ಕವಿತೆ ಮತ್ತು ಮುಂದಿನ ನಡೆ'; ವಿಭೂತಿ ಪೂಜೆ: ೧೯೫೩].

ಕುವೆಂಪುರಲ್ಲಿ ಭೌತಸ್ವರೂಪ ಜಡ ನಿಸರ್ಗ ಆಂತರಿಕವಾಗಿ ಚೈತನ್ಯಶಾಲಿಯಾಗಿ ಪರಿವರ್ತನೆಯಾಗುತ್ತದೆ. ವಾಸ್ತವದ ಜಡಸ್ಥಿತಿಯನ್ನು / ನಿಷ್ಕ್ರಿಯತೆಯನ್ನು ಮೀರುವ ಶಕ್ತಿಯಾಗಿ ಮೈದೋರುತ್ತದೆ. ಹಾಗೆಯೆ ಇವರ ಕಾವ್ಯದಲ್ಲಿ ಬರುವ 'ಆನಂದ', 'ಜಡ', 'ಚೇತನ', 'ಜೀವ', 'ಆತ್ಮ', 'ತಾದಾತ್ಮ್ಯ', 'ಸೌಂದರ್ಯ' ಮುಂತಾದ ಪದಗಳಿಗೆ ಆಧ್ಯಾತ್ಮಿಕ ಸ್ಪರ್ಶವಿದ್ದರೂ, ಇವು ಐಹಿಕನೆಲೆಯ ನಿರಾಕರಣೆಯಾಗಿ ಬರದೆ ಜಡಸ್ಥಿತಿಯಿಂದ ಇಹಲೋಕ 'ಇರ'ವನ್ನು ಪೃಥಕ್ಕರಿಸುವ ಜೀವ ಸೆಲೆಗಳಾಗಿ, ಪರಿವರ್ತನಶೀಲ ಧಾತುಗಳಾಗಿ, ಪರಿಣಮಿಸುತ್ತವೆ. ಶ್ರೇಣೀಕೃತ ಜಡ ಸಮಾಜದಲ್ಲಿ ಹುಟ್ಟಿಬಂದ ಶೂದ್ರ ಕವಿಗೆ ಜೀವರುಗಳ ನಡುವೆ ಭೇದ-ಭಿನ್ನತೆ-ತಾರತಮ್ಯವನ್ನು ಅಲ್ಲಗಳೆಯುವಂಥ 'ಅಹಂ ಬ್ರಹ್ಮಾಸ್ಮಿ'- 'ತತ್ವಮಸಿ' ಎನ್ನುವ ಅಭೇದವಾಗುವ ಅದ್ವೈತದ ನೆಲೆಯು ಕುವೆಂಪುರಲ್ಲಿ ಪರಿವರ್ತನಶೀಲ ಜೀವನದೃಷ್ಟಿಯನ್ನೂ ಮತ್ತು ಆತ್ಮ ವಿಶ್ವಾಸವನ್ನೂ ಸಂಚಯಿಸಿ ಕೊಟ್ಟದ್ದು ಸಾಂಸ್ಕೃತಿಕವಾಗಿ ಅತ್ಯಂತ ಆರೋಗ್ಯಕರ ನೆಲೆಯೇ ಆಗಿದೆ. ಈ ಕುರಿತು ಪೂರ್ಣಚಂದ್ರ ತೇಜಸ್ವಿಯವರ ಪ್ರಶ್ನೆಗಳು ಗಮನಾರ್ಹ:" ಇಪ್ಪತ್ತನೇ ಶತಮಾನದ ಕನ್ನಡ ಸಂಸ್ಕೃತಿಯ ಶೂದ್ರ ಆಂದೋಲನಕ್ಕೆ ಏಕೆ ಈ ಅದ್ವೈತದೃಷ್ಟಿ ಹೆಚ್ಚು ಪ್ರಿಯವಾಯ್ತು? ಕುವೆಂಪುರಂಥ ಬರಹಗಾರರು ಏಕೆ ಇದರಿಂದ ಪ್ರಭಾವಿತರಾದರು? ಜೀವಾತ್ಮ ಪರಮಾತ್ಮರ ಶಾಶ್ವತ ಭೇದವನ್ನು ಒಪ್ಪಿದ, ಜೀವಾತ್ಮರಲ್ಲೂ ನಿತ್ಯನಾರಕಿಗಳನ್ನು ಸೃಷ್ಟಿ ಮಾಡಿದ ಜಾತಿ ಪದ್ಧತಿಯನ್ನು ಅತ್ಯಂತ ಹೇಯವಾಗಿ ಪ್ರತಿಪಾದಿಸಿದ ದ್ವೈತ ಸಿದ್ಧಾಂತದಿಂದ ಸಾವಿರಾರು ವರುಷ ಮೂಕತೆಯಲ್ಲಿ ಕುದಿಯುತ್ತಿದ್ದ ಶೂದ್ರ ಸಮುದಾಯ ಪ್ರಭಾವಿತಗೊಳ್ಳಲು ಸಾಧ್ಯವಿದ್ದಿತೆ? " [ಸಂಕ್ರಮಣ ೬೦ ಜೂನ್ ೧೯೭೪]. ಕುವೆಂಪುರ ಅದ್ವೈತ ದೃಷ್ಟಿ ಶಂಕರಾಚಾರ್ಯರ ಅದ್ವೈತದಿಂದ ಬಂದದ್ದಾಗಿರದೆ, ಪರಮಹಂಸ ವಿವೇಕಾನಂದರ ಮತಾತೀತ ನೆಲೆಯಿಂದ ರೂಪಿತಗೊಂಡಿದ್ದಾಗಿದೆ. ಈ ಜಗತ್ತು ಮಿಥ್ಯೆ-ಮಾಯೆ ಎಂಬ ವೇದಾಂತದ ನಿಲುವನ್ನು ನಿರಾಕರಿಸುತ್ತಲೆ, ಈ ಲೋಕದ ಬಗ್ಗೆ ಪ್ರೀತಿಯನ್ನು, ಜೀವ ಕಾರುಣ್ಯವನ್ನು ತಳೆಯುತ್ತಾರೆ. ಶಂಕರಾಚಾರ್ಯರ ಅದ್ವೈತವನ್ನು ಕುವೆಂಪು ಅನೇಕ ಕವಿತೆಗಳಲ್ಲಿ ಪರಾಮರ್ಶಿಸಿದ್ದಾರೆ. 'ತರ್ಕ ಮತ್ತು ಬಾಳು' [೧೯೩೧] ಎಂಬ ಕವಿತೆ ['ಕುಟೀಚಕ']

"ನೀನಿದನ್ನು ಎಂದು ಕಲಿಯುವೆ, ಹೇಳು ಸಂನ್ಯಾಸಿ?
ವಾದವೂ ಜಗದಂತೆ ಮಾಯೆ ಎಂದು;
ತರ್ಕಯುಕ್ತಿಗಳೆಲ್ಲ ಬಯಕೆಯ ಮರಿಗಳೆಂದು;
ಇವನನುದ್ಧರಿಸು ಪೊರೆದು!"

ಹಾಗೆಯೆ 'ಬ್ರಹ್ಮದ ಲಾಂಗೂಲ' [೧೯೩೧: ಕುಟೀಚಕ] ಎಂಬ ಪದ್ಯದಲ್ಲಿ ವಿದ್ವಜ್ಜನರ ಬ್ರಹ್ಮವಿದ್ಯೆಯ ಜಿಜ್ಞಾಸೆಯನ್ನು ಪರಿಹಾಸ್ಯ ಮಾಡುತ್ತಾರೆ. 'ಜನನಿಗೆ' ಎಂಬ ಪದ್ಯದಲ್ಲಿ[೧೯೩೧ ಕುಟೀಚಕ]

"ಜನನಿಯೇ. ವರುಷವೇಳರ ಹಿಂದೆ ನೀನಗಲಿ
ಹೋದೆ ಕಣ್ಮರೆಯಾದೆ. ನಾನಂದು ಸುರಿಯದಾ
ಕಂಬನಿಗಳೆಲ್ಲವೂ ಹಿರಿಯ ಹೊಳೆಯಾಗಿಂದು
ನನ್ನೆದೆಯ ನೊಂದ ದಡಗಳ ಕೊಚ್ಚಿ ಹರಿಯುತಿದೆ.
ನೀನು ಮಡಿದಂದು ನಾನದ್ವೈತದರ್ಶನದ
ಮದಿರೆಯಲಿ ಮುಳುಗಿದ್ದೆ; ನನ್ನ ಕಿರುಬಾಳಿನಲಿ ನನ್ನದಲ್ಲದ ಹಿರಿಯ
ಶಕ್ತಿಯೊಂದಿರುತ್ತಿತ್ತು.
ವಿಶ್ವವೆಲ್ಲವು ಮಾಯೆ; ಜೀವರೆಂಬುವರೆಲ್ಲ
ಸುಳ್ಳಿನಲಿ ಕೆತ್ತಿರುವ ಗುಳ್ಳೆಗಳು, ಶಿವನಾನು;
ಎಂಬ ತತ್ವದ ಮತ್ತಿನಲ್ಲಿ ನೀನು, ಯಾರೆದೆಯ
ಹಾಲುಂಡು ಬದುಕಿದೆನೊ ಆ ನೀನು ಮಡಿದುದನು
ಹುಲ್ಲೆಂದು ಬಗೆದೆ"

ಆತ್ಮಕಥನದ ಆತ್ಮೀಯ ಧಾಟಿಯಲ್ಲಿ ಸಾಗುವ ಈ ಕವಿತೆ ಆತ್ಮಾವಲೋಕನದ ಸಮೇತವೆ ಶಂಕರಾಚಾರ್ಯರ ಒಣ ವೇದಾಂತದ ನಿರ್ದಯತೆಯನ್ನು ಬಯಲಿಗಿಡುತ್ತ, ಜೀವಕಾರುಣ್ಯವನ್ನು ಪುನಃ ಸಂಚಯಿಸಿಕೊಂಡ ಬಗೆಯನ್ನು ಸೂಚಿಸುತ್ತದೆ. ಹಾಗೆಯೆ 'ಶಂಕರಾಚಾರ್ಯ' [ಕಲಾಸುಂದರಿ] ಎಂಬ ಕವಿತೆಯಲ್ಲೂ ಇದೇ ರೀತಿಯ ಪರಾಮರ್ಶನವನ್ನು ಕಾಣಬಹುದಾಗಿದೆ.

ಪ್ರಕೃತಿ ಮತ್ತು ಮಾನವನ ಅಂತಃಸಂಬಂಧದ ತಾದಾತ್ಮ್ಯವೆ ಉಪನಿಷತ್ತಿನ ಅದ್ವೈತದ ತಿಳಿವು. ಈ ದೃಷ್ಟಿಯಿಂದಾಗಿಯೆ ಸೃಷ್ಟಿಯ ಚರಾಚರ ವಸ್ತುಗಳೆಲ್ಲ ಚೇತನ ರೂಪಿಯಾಗಿ ಪರಿವರ್ತನಗೊಳ್ಳುತ್ತವೆ. ಮಹತ್ತಿಗೆಷ್ಟು ಪ್ರಾಧಾನ್ಯವೋ ಅಣುವಿಗೂ ಅಷ್ಟೇ ಪ್ರಾಧಾನ್ಯ ದೊರಕುತ್ತದೆ. ಈ ಲೋಕದ 'ಅಲ್ಪ'ದಲ್ಲಿಯೂ ಆ 'ಭೂಮ'ದ ಅನುಭೂತಿ ಸಾಧ್ಯವಾಗುತ್ತದೆ. 'ಕ್ಷುದ್ರ ಕ್ಷುದ್ರದಲ್ಲಿಯೂ ಮಹಾಮಹತ್ತಿನಲ್ಲಿಯೂ ಏಕಮೇವ ಅದ್ವಿತೀಯ ಚೈತನ್ಯ ಅಂತರ್ಯಾಮಿಯಾಗಿದೆ. ಅದ್ವೈತದ ಇಂಥ ದೃಷ್ಟಿಯಿಂದಾಗಿಯೆ, ಅಂಚಿನಲ್ಲಿದ್ದ ಶೂದ್ರತ್ವಕ್ಕೆ ಔನತ್ಯವನ್ನೂ ಸಮಾನತೆಯನ್ನೂ ತಂದು ಕುವೆಂಪು ಕೊಡುತ್ತಾರೆ.

'ಕ್ಷುದ್ರ'ವೆಂದು ಬಗೆಯಲ್ಪಟ್ಟದ್ದು ಕುವೆಂಪುರಲ್ಲಿ 'ಭವ್ಯತೆ'ಯ ನೆಲೆಗೇರಲು ಹವಣಿಸುವುದನ್ನು ಈ ನಿಟ್ಟಿನಲ್ಲಿ ಗ್ರಹಿಸಬೇಕಾಗುತ್ತದೆ. ಹಾಗಾಗಿಯೆ ಇಬ್ಬನಿ 'ಹಿಮಮಣಿ'ಯಾಗುತ್ತದೆ. ಹುಲ್ಲಗರಿಕೆ 'ಭವ್ಯ'ವಾಗುತ್ತದೆ. ಮರಗಿಡಗಳು 'ಚೇತನದ ಚಿಲುಮೆ'ಗಳಾಗುತ್ತವೆ. 'ಅತಿ ಸಾಮಾನ್ಯದ ಈ ಬೀದಿ, ಸ್ವರ್ಗಕ್ಕೆ ಹಾದಿ'ಯಾಗುತ್ತದೆ

[‘ಪಕ್ಷಿಕಾಶಿ’] , ‘ಯಾರೂ ನೋಡದ, ಯಾರೂ ಬೇಡದ’ ಒಂದು ಗುಲಾಬಿಯ ಹೂವು ‘ಸ್ವರ್ಗ ಸುಂದರಿ’ಯಾಗುತ್ತದೆ [‘ಗುಲಾಬಿ’: ೧೯೩೫ ಪಕ್ಷಿಕಾಪಶಿ].

ಪ್ರಕೃತಿ ಮತ್ತು ಸಮಸ್ತ ಜೀವಕೋಟಿಯು ಮನುಷ್ಯನಿಗೆ ಅಧೀನ ಎಂಬ ಸ್ವಾರ್ಥದ ಮನುಷ್ಯಕೇಂದ್ರಿತ ನೆಲೆಯನ್ನು ಒಡೆದುಕೊಂಡು ಹೊರಬರಲು ಅದ್ವೈತದ ನೆಲೆಯು ಕುವೆಂಪುರಲ್ಲಿ ಜೀವಸೆಲೆಯಾಗಿ ಪರಿಣಮಿಸುತ್ತದೆ. “ಒಂದು ಹೂವಿಗೆ” ಎಂಬ ಒಂದು ಸಣ್ಣ ಕವಿತೆ [ಪಕ್ಷಿಕಾಶಿ:೧೯೩೩] ಮನುಷ್ಯ ಕೇಂದ್ರಿತ ನೆಲೆಯ ಸಂಕುಚಿತ ಪ್ರಜ್ಞೆಯಿಂದ ಮೀರುತ್ತ, ಪ್ರಕೃತಿಯ ಪ್ರತಿಯೊಂದು ಜೀವಕ್ಕೂ ಅದರದ್ದೇ ಆದ ಅಸ್ತಿತ್ವವಿದೆ ಎಂಬ ದರ್ಶನವನ್ನು ಧ್ವನಿಸುತ್ತದೆ:

“ಅನಂತ ಕಾಲವು ನಿನ್ನನು ಹೊತ್ತಿದೆ;
ಸಮಸ್ತ ವಿಶ್ವವೆ ನಿನ್ನನು ಹೆತ್ತಿದೆ;
ನನಗೆಂತುಟೋ ನಿನಗಂತುಟಿ ಸೃಷ್ಟಿ;
ನನ್ನಂತೆಯೆ ನಿನಗೂ ಇದೆ ದೃಷ್ಟಿ;
ನನ್ನಂತೆಯೆ ಅನುಭವಿಸುವ ಶಕ್ತಿ;
ನನ್ನಂತೆಯೆ ನೀನೂ ವ್ಯಕ್ತಿ!”

ಮನುಷ್ಯ ಮತ್ತು ಪ್ರಕೃತಿಯ ನಡುವಣ ಅಂತಃಸಂಬಂಧದ ನೆಲೆಗಳನ್ನು ‘ಶರತ್ಕಾಲದ ಸೂರ್ಯೋದಯದಲಿ’ ಎಂಬ ಕವಿತೆ [೧೯೩೩: ಪಕ್ಷಿಕಾಶಿ] ಅತ್ಯಂತ ಪರಿಣಾಮಕಾರಿಯಾಗಿ ಪರಿಶೋಧಿಸುತ್ತದೆ.

“ಕಲ್ಲಿನ ಯುಗಯುಗದಿರವೂ ಶೂನ್ಯ,
ಹುಲ್ಲಿನ ಅರೆನಿಮಿಷದ ಹನಿ ಧನ್ಯ!”

ಕಲ್ಲಿನ ಜಡದ ನಿರರ್ಥಕ ಬದುಕಿಗಿಂತ ಹುಲ್ಲಿನ ಹನಿಯ ಕ್ಷಣಿಕತ್ವವೆ ಧನ್ಯ ಎಂಬಲ್ಲಿ ಕ್ಷಣಿಕತೆಯ ಅಲ್ಪತೆಯನ್ನೂ ಔನತ್ಯಕ್ಕೇರಿಸಲಾಗಿದೆ. ಸ್ಥಾವರದ ಶಾಶ್ವತದ ಎದುರು ಕ್ಷಣಿಕತೆಯೂ, ಅಲ್ಪತೆಯೂ ಸಾರ್ಥಕವೇ ಆಗಿದೆ.

“ನೋಡಿದರೆಲ್ಲಿಯೂ ಚೈತನ್ಯ!
ಕಲ್ಲಲಿ, ಮಣ್ಣಲಿ, ಹುಲ್ಲಲಿ, ಹುಡಿಯಲಿ,
ನೀರಿನ ಹನಿಯಲಿ, ಬೆಂಕಿಯ ಕಿಡಿಯಲಿ
ನನ್ನಲಿ-ಎಲ್ಲಿಯು ಚೈತನ್ಯ!”

ಮನುಷ್ಯ ಕೇಂದ್ರಿತ ಪ್ರಜ್ಞೆಯ ಕುಬ್ಜತೆಯನ್ನು ಅಹಂಕಾರವನ್ನು ಮೀರಿದಾಗಲೆ, ಪ್ರಕೃತಿಯ ಭೌತಿಕ ಜಗತ್ತಿನಲ್ಲಿ ತಾನೊಬ್ಬನೇ ಕೇಂದ್ರವಲ್ಲವೆಂದೂ, ತನ್ನಿಂದಲೇ ತನ್ನ ಪ್ರಜ್ಞೆಯಿಂದಲೇ ಜಗತ್ತು ಎಂಬ ಮಿಥ್ಯೆ ಅಳಿಸಿದಾಗಲೆ ಚೈತನ್ಯದ, ಜೀವ ಕಾರುಣ್ಯದ ಜೀವ ಸಂಚಾರ ಸಾಧ್ಯವಾಗುತ್ತದೆ. ಪ್ರಕೃತಿ ಮತ್ತು ಮನುಷ್ಯನ ಅಂತಃ ಸಂಬಂಧ ‘ಕನ್ನೆಯ ಸ್ನೇಹ’ವಾಗಿ ಪರಿಣಮಿಸುತ್ತದೆ:

"ಹನಿಯನು ನಾನನುಭವಿಸುವ ಪ್ರೀತಿ
ಆ ಹನಿ ನನ್ನನು ರಮಿಸುವ ರೀತಿ!
ನನ್ನಡಿ ಸೋಂಕಿದ ಈ ಹುಲ್ಲು
ಇನಿಯನ ತುಟಿಸೋಂಕನೆ ಸವಿಯುತ್ತಿದೆ!
ಪ್ರೀತಿಯ ಮುತ್ತಿಗೆ ಹಾತೊರೆಯುತ್ತಿದೆ
ಚೇತನ ಮೂರ್ತಿಯು ಆ ಕಲ್ಲು;
ತೆಗೆ! ಜಡವೆಂಬುದೆ ಬರಿ ಸುಳ್ಳು!"

"ಹೀರೆಯ ಹೂವು" ಕವಿತೆ [ಪಕ್ಷಿಕಾಶಿ] ತಾತ್ಸಾರಕ್ಕೊಳಗಾದ, ತಿರಸ್ಕಾರಕ್ಕೆ ತುತ್ತಾದ ಹೀರೆಯ ಹೂವಿನೊಂದಿಗೆ ಕವಿ ಆತ್ಮೀಯವಾಗಿ ಸಂಭಾಷಿಸುತ್ತಲೇ, ಆ ಹೂವನ್ನು ಮನುಷ್ಯನು ಲಾಭಕ್ಕೋಸ್ಕರ, ಉದರಕ್ಕೋಸ್ಕರ ಬಳಸಿಕೊಂಡ ಬಗೆಯನ್ನು ಅಚ್ಚಗನ್ನಡದ ಅಚ್ಚುಮೆಚ್ಚಿನ ಶಿಶುಲಯದ ಸಹಜ ಆತ್ಮೀಯತೆಯಲ್ಲಿ ಅನಾವರಣಗೊಳಿಸುವುದನ್ನು ನೋಡಬಹುದಾಗಿದೆ.

"ದೇವರ ಪೂಜೆಗೆ ಕೊಯ್ಯರು ನಿನ್ನ,
ಲಾಭದಪೇಕ್ಷೆಯಲಿ . . . . . .
ಹೀರೆಯ ಹೂವೆಂದೊಲಿಯರು ನಿನ್ನ
ಮುಡಿಯರು ರಮಣಿಯರು . . . .
ಅವರಾದರ್ಶವು ಬರಿಯುಪಯೋಗ
ಹೊಟ್ಟೆಯ ಭೋಗವೆ ಅವರಿಗೆ ಭೋಗ!"

ಎಲ್ಲರಿಂದಲೂ ಹೀಗೆ ಉಪೇಕ್ಷಿಸಲ್ಪಟ್ಟ ಭೋಗಿಸಲ್ಪಟ್ಟ 'ಹೀರೆಯ ಹೂವ'ನ್ನು ಕವಿ ಸಂತೈಸುತ್ತಲೆ, ಪ್ರಕೃತಿಯನ್ನು 'ಭೋಗಿಸುವ' ಮನುಷ್ಯ ಕೇಂದ್ರಿತ ನೆಲೆಯನ್ನು ಖಂಡಿಸುವ ನಿಲುವನ್ನು ಗುರುತಿಸಬಹುದಾಗಿದೆ.

ಇಂಥ ಕ್ಷುಲ್ಲ, ಕ್ಷುದ್ರ, ನಿರ್ಲಕ್ಷಿತ ವಸ್ತುಗಳನ್ನು ಕುರಿತ ವಿಶಾಲ ಸಮಾನ ದೃಷ್ಟಿಯೆ ಕುವೆಂಪುರಲ್ಲಿ ಕರಿಸಿದ್ದ, ಕಿಟ್ಟಯ್ಯ, ಬೀರ, ಐತ-ಪಿಂಚಲು, ತಿಮ್ಮಿ, ಗುತ್ತಿ ಮೊದಲಾದ ಶೂದ್ರಾತಿಶೂದ್ರ ಮನುಷ್ಯರನ್ನೂ, ಹುಲಿಯನಂಥ ನಾಯಿಯನ್ನೂ, ಸೆಗಣಿಹುಳುವಿನ ಉಂಡೆಯ ಪ್ರತಿಮೆಯನ್ನೂ ಸೃಷ್ಟಿಸಲು ಸಾಧ್ಯವಾಗುತ್ತದೆ. ಗೊಬ್ಬರವು ಸಿಂಹಾಸನಕ್ಕೇರಲು ಅರ್ಹವಾಗುತ್ತದೆ. ಕಲ್ಲು ಅಹಲ್ಯೆಯಾಗುತ್ತದೆ; 'ಶ್ರೀ ಸಾಮಾನ್ಯ'ವೆ 'ಭಗವದ್‌ಮಾನ್ಯ' ಆಗುತ್ತದೆ. ಈ ನಿಟ್ಟಿನಲ್ಲಿ 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಪ್ರಾರಂಭದಲ್ಲಿ ಕುವೆಂಪು ಹೇಳುವ ಮಾತುಗಳನ್ನು ಗ್ರಹಿಸಬೇಕಾಗುತ್ತದೆ.

"ಇಲ್ಲಿ ಯಾರೂ ಮುಖ್ಯರಲ್ಲ;
ಯಾರೂ ಅಮುಖ್ಯರಲ್ಲ;
ಯಾವುದೂ ಯಃಕಶ್ಚಿತವಲ್ಲ!

ಇಲ್ಲಿ ಎಲ್ಲಕ್ಕೂ ಇದೆ ಅರ್ಥ
ಯಾವುದೂ ಅಲ್ಲ ವ್ಯರ್ಥ
ನೀರೆಲ್ಲವೂ ತೀರ್ಥ!"

ಅದ್ವೈತ ದರ್ಶನದ ಸಾರರೂಪವಾಗಿ/ತಿಳಿವಾಗಿ ಈ ಮಾತುಗಳು ಧ್ವನಿಪೂರ್ಣವಾಗಿವೆ.

ಕುವೆಂಪುರವರ ಪುರೋಹಿತಶಾಹೀ ವಿರೋಧಿ ನಿಲುವು ವಿವೇಕಾನಂದರ ವಿಚಾರಧಾರೆಗಳಿಂದ ಉದ್ದೀಪ್ತವಾಗಿದ್ದರೂ, ಮೂಲತಃ ನಿಸರ್ಗೋಪಾಸನೆಯ ತಾತ್ವಿಕ ನೆಲೆಯ ಧಾತುವಿನಿಂದಲೂ ರೂಪಿತಗೊಂಡಿದೆ. ಸ್ಥಾಪಿತ ಸಾಂಸ್ಥಿಕ ಧರ್ಮದ ಗುಡಿಗುಂಡಾರದ ಮೂರ್ತಿಪೂಜೆ ಆಚೆಗಿನ, ಉಪನಿಷತ್ ಕಾಲದ ಋಷಿಗಳ ಮೂಲದ ಸೂರ್ಯೋದಯ, ಚಂದ್ರೋದಯ, ಅರುಣೋದಯ, ಸೂರ್ಯಾಸ್ತ, ಬೆಳಗು-ಬೈಗು, ಪ್ರಾತಃಕಾಲ/ಉಷೆ, ಋತುಮಾನಗಳು, ಗಿರಿ, ಬೆಟ್ಟ, ತೊರೆ, ಮೋಡ, ಹಸುರು ಮೊದಲಾದ ಸೃಷ್ಟಿಯ/ಪ್ರಕೃತಿಯ ಮೂಲ ಶಕ್ತಿಗಳನ್ನು ಆರಾಧಿಸುವ ಒಳ ವಿನ್ಯಾಸದಲ್ಲಿಯೆ ವಿಗ್ರಹಾರಾಧನೆಯ ಭಂಜಕ ಪ್ರವೃತ್ತಿ ಹೆಣೆದುಕೊಂಡಿರುವುದನ್ನು ಕಾಣಬಹುದಾಗಿದೆ:

"ಆನಂದಮಯ ಈ ಜಗ ಹೃದಯ:
ಏತಕೆ ಭಯ? ಮಾಣೊ!
ಸೂರ್ಯೋದಯ ಚಂದ್ರೋದಯ
ದೇವರ ದಯ ಕಾಣೊ!"

[ಪಕ್ಷಿಕಾಶಿ:೧೯೩೩]

ಈ ಜಗತ್ತು ಆನಂದ ಜನ್ಯ; ನಿರ್ಭೀತಿಯೆ ಇಂಥ ಆನಂದದ ಮೂಲ; ಪ್ರಕೃತಿ ಸೌಂದರ್ಯವೆ ದೇವರು ಎಂಬ ಪರಿಭಾವನೆ ಇಲ್ಲಿ ಒಡಮೂಡಿದೆ.

"ಶರತ್ಕಾಲದ ಸೂರ್ಯೋದಯದಲಿ
ಸ್ವರ್ಗವು ಹೊಮ್ಮಿರೆ ಮರ್ತ್ಯ ಹೃದಯದಲಿ
ಬಂಗಾರದ ಹೊಳೆ ಹರಿದಾಡಿತ್ತು.
ತಿರೆ ಸಗ್ಗವದಾಯಿತೊ ಎನಿಸೆ!"

[ಪಕ್ಷಿಕಾಶಿ:೧೯೩೩]

"ಸತ್ತಳೊ ಊರ್ವಶಿ ಸ್ವರ್ಗದಲಿ . . . . . .
ವೈಕುಂಠವಿದೆ ನಿಸರ್ಗದಲ್ಲಿ"

[ಇಂತಹ ಸುಂದರ ಪ್ರಾತಃಕಾಲದಿ]

"ಸಗ್ಗದ ಸಿರಿಯೆ ನೆಲಕೆ ಬಿದ್ದು
ಹುಡಿ ಹುಡಿ ಹುಡಿಯಾಗಿದೆ"

[ಒಂದು ಪ್ರಾತಃ ಕಾಲ]

"ಆಃ! ನಿಂತು ನೋಡಿಲ್ಲಿ:
ಸ್ವರ್ಗವರಳುತಿದೆ ಆ ಮರದ ಮೈಸಿರಿಯಲ್ಲಿ!
ನೂರು ಋಷಿಗಳ ಬೋಧನೆಯ ಸಾರವಿಹುದಿಲ್ಲಿ
ಕೋಟಿ ಮೈಲಿಗಳಾಚೆ ಕಾಶಿಯಾತ್ರೆಗಳೇಕೆ?
ಇಲ್ಲಿಗೈತರು, ಯಾತ್ರಿಕನೆ, ಇದುವೆ ತರುಕಾಶಿ!
ರಸತೀರ್ಥದಲಿ ಮಿಂದವಗೆ ಭವದ ಭಯವೇಕೆ?
ಪುಣ್ಯದಾಲಯ ಪೃಥ್ವಿ! ಸ್ವರ್ಗವದು ಪರದೇಶಿ!"

['ಕೆಂದಳಿರು': ೧೯೩೩].

"ಯಾವ ಗುಡಿ
ಮಿಗಿಲು ಈ ಭುವನ ದೇವಾಲಯಕೆ? ಮೇಣಾವ
ವಿಗ್ರಹಂ ಮೀರಿರುವುದೀ ಭವ್ಯ ಸುಂದರ ದಿವ್ಯ
ಸೂರ್ಯದೇವನಿಗೆ?

[ಪ್ರಕೃತಿ ಉಪಾಸನ]

"ಇಂದ್ರ ದಿಗಂತದಿ ದೂರಾದ್ದೂರಂ
ಪ್ರಾತಃ ಸ್ವರ್ಗದ ಸ್ವರ್ಣದ್ವಾರಂ" [೧೯೩೫]

"ಹಕ್ಕಿಗಳುಲಿಯಲು, ಹೂವುಗಳರಳಲು
ತೆರೆವುದು ದಿನದಿನ ಸಗ್ಗದ ಬಾಗಿಲು"

[ಕೊಳಲು]

"ಆಹ! ನಾಕವೆ ನಮ್ಮ ಲೋಕಕೆ
ಕಳಚಿ ಬಿದ್ದಿದೆ ಬನ್ನಿರಿ!"

[ನವಿಲು:೧೯೩೪]

ಇಂಥ ನೂರಾರು ಸಾಲುಗಳು ಕುವೆಂಪುರವರ ನಿಸರ್ಗೋಪಾಸನೆಯ ಒಳವಿನ್ಯಾಸಗಳನ್ನು ತೆರೆಯುತ್ತವೆ: ಸ್ವರ್ಗ-ನಂದನ-ಊರ್ವಶಿ ಮುಂತಾದ ಅಭೌತ ಕಲ್ಪನೆಗಳು ಇಹಲೋಕದ ಪ್ರಕೃತಿ ಸೌಂದರ್ಯದಲ್ಲಿ ಮೂರ್ತಗೊಳ್ಳುವುದನ್ನು ಕಾಣಬಹುದಾಗಿದೆ. ಮೂರ್ತಿ ಪೂಜೆಯ ಖಂಡನೆ ಮತ್ತು ಮೂಢನಂಬಿಕೆಗಳ ನಿರಾಕರಣೆಯ ಅಂಶಗಳು ಭಾರತದ ಪುನರುಜ್ಜೀವನದ ಚಳುವಳಿಯ ಒಳಧಾರೆಗಳೇ ಆಗಿದ್ದು, ಇವು ನವೋದಯದ ವೈಚಾರಿಕ ಆಕೃತಿಗಳಾಗಿ ಕುವೆಂಪುರ ನಿಸರ್ಗೋಪಾಸನೆಯಲ್ಲಿ ಅಂತರ್ಗತವಾಗಿವೆ.

"ಉಳ್ಳವರು ಶಿವಾಲಯವ ಮಾಡುವರು
ನಾನೇನ ಮಾಡಲಿ? ಬಡವನಯ್ಯ"

ಹನ್ನೆರಡನೆಯ ಶತಮಾನದ ಬಸವಣ್ಣ ಉಳ್ಳವರು ಕಟ್ಟಿದ ಸ್ಥಾವರ ದೇವಸ್ಥಾನಗಳನ್ನು ನಿರಾಕರಿಸಿದಂತೆಯೇ. ಇಪ್ಪತ್ತನೆಯ ಶತಮಾನದ ಕುವೆಂಪು ಕೂಡ ಮೂಢ ನಂಬಿಕೆಯ ಆಗರಗಳಾದ ದೇವಾಲಯಗಳನ್ನು, ವಿಗ್ರಹಾರಾಧನೆಯನ್ನು ಮತ್ತು ಪುರೋಹಿತಶಾಹಿಯನ್ನು ನಿರಾಕರಿಸುತ್ತಾರೆ. ಕುವೆಂಪುರ ನಿಸರ್ಗಾನುಭವವು ಸಾಂಸ್ಥಿಕ ಧರ್ಮದ ನಿರಾಕರಣೆಯಾಗಿ 'ಹೂವು-ದೇವರು' [೧೯೩೫] ಕವಿತೆಯಲ್ಲಿ ಸ್ಫೋಟಿಸುತ್ತದೆ.

"ಹೂ ಕುಯ್ಯಲು ಬಂದನು ಪೂಜಾರಿ,
ಹೂ ಬುಟ್ಟಿ ಅದೋ ಕೈಯಲ್ಲಿ!
ಹೂಗಳ ಚೆಲುವಿಗೆ ದೇವರೆ ಮಾರಿ?
ಪೂಜಾರಿಯೆ ಕಟುಕನೆ ಇಲ್ಲಿ?
ಹಕ್ಕಿಯು ಮರಿಗಳ ಕುತ್ತಿಗೆ ಮುರಿದು
ಬೇಡನು ಕೊಲ್ಲುವ ರೀತಿಯಲಿ
ಹೂಗಳ ತೊಟ್ಟನು ತಿರುಪ್ಪಿ ಹರಿದು
ಬುಟ್ಟಿಗೆ ಬಿಡುವನು 'ಪ್ರೀತಿಯಲಿ'!

ಕವನದ ಕೊನೆ ತುಂಬ ನಾಟಕೀಯವಾಗಿ ಮುಕ್ತಾಯವಾಗುತ್ತದೆ.

"ಬಿಡೊ ಅಲ್ಲಿರಲಿ ಆ ಹೂವು!
ನೀ ಸೃಷ್ಟಿಸಲಾರದ ಚೆಲುವಿಗೆ ನಿನ್ನಿಂದೇತಕೆ ಸಾವು?"

ಎಂದು ಪೂಜಾರಿಯನ್ನು ಗದರಿಸಿ ಬಿಡುತ್ತಾರೆ. ಪೂಜಾರಿ ನಿಸರ್ಗದ ಕೊಲೆಗಡುಕನಾಗಿದ್ದಾನೆ. ನಿಸರ್ಗದ ಸೌಂದರ್ಯಕ್ಕೆ ಸ್ಥಾವರ ದೇವಸ್ಥಾನದ ದೇವರು ಮಾರಿಯಾಗಿ ಬರುತ್ತದೆ. ಈ ಕವಿತೆ ಪೂಜಾರಿ-ಪುರೋಹಿತಶಾಹೀ ವಿರುದ್ಧದ ಪ್ರತಿ ಭಟನೆಯಾಗಿರುವಂತೆಯೆ, ಇವತ್ತಿನ ಪರಿಸರ ನಾಶದ ವಿರುದ್ಧದ ಒಳಧ್ವನಿಯಾಗಿಯೂ ನಿಲ್ಲುತ್ತದೆ.

'ದೇವರು ರುಜು ಮಾಡಿದನು' [೧೯೩೭] ಕವಿತೆಯಲ್ಲಿ ದೇವರು ರುಜು ಮಾಡಿದ್ದನ್ನು ತಾನು ನೋಡಿದೆ ಎನ್ನುತ್ತ, ಬೆಳ್ಳಕ್ಕಿಯ ಸಾಲುಗಳೆ ದೇವರ ರುಜುವಿದ್ದ ಹಾಗಿತ್ತು ಎನ್ನುತ್ತಾರೆ. ಆ ಮೂಲಕ ಸಾಂಸ್ಥಿಕ ಧರ್ಮದ ಸಂಕೇತವಾದ ದೇವಸ್ಥಾನ/ದೇವರು ಪರಿಕಲ್ಪನೆಯ ನಿರಾಕರಣೆಯನ್ನು ಧ್ವನಿಸಲಾಗಿದೆ.

ರಾಷ್ಟ್ರೀಯ ಹೋರಾಟ ಮತ್ತು ಸಂಸ್ಕೃತಿ ವಿಮರ್ಶೆ

"ನಾನು ಲಾಠಿಯೇಟು ತಿಂದಿಲ್ಲ; ಸೆರೆಮನೆಗೆ ಹೋಗಿಲ್ಲ; ಬ್ರಿಟಿಷ್‌ರ ವಿರುದ್ಧವಾಗಿ ತಿಲಕರ ಮತ್ತು ಗಾಂಧೀಜಿಯ ಪ್ರಭಾವವು ಪ್ರಚೋದಿಸಿದ ವಿದ್ಯಾರ್ಥಿ ಮೆರವಣಿಗೆಗಳಲ್ಲಿ ಕೂಗಿಕೊಂಡು ಅಲೆದಿದ್ದೇನೆ. ವಿದೇಶಿ ವಸ್ತ್ರ ದಹನ ಯಜ್ಞಗಳಲ್ಲಿ ಭಾಗವಹಿಸಿದ್ದೇನೆ. ಆದರೆ ದೇಶದಲ್ಲಿ ನಡೆಯುತ್ತಿದ್ದದ್ದು ಏನು ಎಂಬುದರ ಅರ್ಥದ ಅರಿವು ಮಲೆನಾಡಿನ ಕಾಡಿನ

ಮೂಲೆಯ ಹಳ್ಳಿಯಿಂದ ಬಂದಿದ್ದ ಬಾಲಕನ ಗ್ರಾಮೀಣ ಪ್ರಜ್ಞೆಗೆ ಗೋಚರವಾದ ಮೇಲೆ, ಸುಮಾರು ೧೯೨೫-೨೬ರಿಂದ ೧೯೪೭-೪೮ರ ವರೆಗೆ ನಡೆದ ಭಾರತದ ಜಗನ್ಮಹಾದ್ಭುತ ಸ್ವಾತಂತ್ರ್ಯ ಸಂಗ್ರಾಮದ ಚಿತ್ಸಾಗರದಲ್ಲಿ ನನ್ನ ಕವಿಚೇತನ ಸಮುದ್ರ ಸಂಪೂರ್ಣ ಮಗ್ನವಾಗಿಬಿಟ್ಟಿತು. ಸಾವಿರಾರು ಕವನ ರಾಶಿ ಪುಂಜೀಭೂತವಾದವು, ಸಾಹಿತ್ಯ ವೇಲೆಯಲ್ಲಿ".

[೧೯೬೫:'ಮನುಜಮತ: ವಿಶ್ವಪಥ': ಪುಟ ೭]

ಕುವೆಂಪುರವರ ಈ ಮಾತುಗಳಲ್ಲಿ ಬರುವ ಸಂಸ್ಕೃತ ಪದಬಾಹುಳ್ಯ ಸ್ವಾತಂತ್ರ್ಯ ಸಂಗ್ರಾಮ ಕುರಿತಂತೆ ಅವರ ಗಾಢವಾದ ಭಾವ ತೀವ್ರತೆಯನ್ನು ಸೂಚಿಸುತ್ತದೆ. ರಾಜಕೀಯ ಹೋರಾಟದಲ್ಲಿ ಕವಿ/ಲೇಖಕ ನೇರವಾಗಿ ಧುಮುಕಬೇಕೆಂದೇನಿಲ್ಲ; ಅಂಥ ರಾಜಕೀಯ ಹೋರಾಟದ ಬಗ್ಗೆ ಅವನು ತಳೆಯುವ ನಿಲುವು ಮತ್ತು ಅಂಥ ರಾಜಕೀಯ ಸನ್ನಿವೇಶದ ಒಳ-ಹೊರಗನ್ನು ಪರಿಶೋಧಿಸುವ ಕ್ರಮ ಸಾಂಸ್ಕೃತಿಕವಾಗಿ ಮಹತ್ವ ಪಡೆಯುತ್ತದೆ. ಯಾಕೆಂದರೆ ಸಾಹಿತ್ಯ ಸೃಷ್ಟಿ ಕೂಡ ಸಂಸ್ಕೃತಿ ಪ್ರಕ್ರಿಯೆಯ ಒಂದು ಭಾಗವೇ ಆಗಿರುತ್ತದೆ.

೧೯೩೦ರ ದಶಕ ರಾಷ್ಟ್ರೀಯತೆಯನ್ನು ರೂಪಿಸಿದ ಕಾಲಘಟ್ಟ. ಸ್ವಾತಂತ್ರ್ಯ ಹೋರಾಟ ದೇಶದುದ್ದಕ್ಕೂ ಮಾರ್ದನಿಗೊಳ್ಳುತ್ತಿದ್ದ ಸನ್ನಿವೇಶ ಕಾವ್ಯದ ಧ್ಯೇಯೋದ್ದೇಶಗಳನ್ನೂ ಮಾರ್ಪಡಿಸಿತು. 'ಕಬ್ಬಿಗರು' ಎಂಬ ಕವನ [ನವಿಲು:೧೯೩೪] ಬದಲಾದ ಧೋರಣೆಯನ್ನು ಪ್ರಕಟಿಸುತ್ತದೆ:

"ಸಿರಿ ಮರಳಿ ಮೆರೆಯುವುದು
ದಶರಥನ ಪುರಿಯು
ಇನ್ನೊಮ್ಮೆ ಬೇಯುವುದು
ಲಂಕಾ ನಗರಿಯು"

ಕಳೆದುಹೋದ 'ಸಿರಿ'[ಸೀತೆ ಭಾರತ]ಯನ್ನು ಮರಳಿ ಪಡೆಯುವ ಹಾಗೂ ರಾಮರಾಜ್ಯವನ್ನು ಮತ್ತೆ ಕಟ್ಟುವ ಸ್ವಾತಂತ್ರ್ಯದ ಅಭೀಪ್ಸೆ ಇಲ್ಲಿ ಒಡಮೂಡಿದೆ.

"ಸಮರದಲಿ ಭೇರಿಯನು
ಹೊಯ್ಯುವವರು ನಾವು;
ಮಾಡುವೆವು ಮಡಿವೆವು;
ಬೊಮ್ಮ ಸಿವರಂತೆ"

ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿನ 'ಮಾಡು ಇಲ್ಲವೆ ಮಡಿ' ಎಂಬ ಪ್ರತಿಜ್ಞೆ ಇಲ್ಲಿ ಮಾರ್ದನಿಗೊಂಡಿರುವುದನ್ನು ಕಾಣಬಹುದು. ತತ್ವಜ್ಞಾನದ ಅದ್ವೈತದ 'ಮುಕ್ತಿ', 'ಆತ್ಮದ ಬಿಡುಗಡೆ' ಮುಂತಾದ ಪರಿಭಾಷೆ ಸ್ವಾತಂತ್ರ್ಯ ಸಂಗ್ರಾಮದ ಸನ್ನಿವೇಶದಲ್ಲಿ 'ದೇಶದ ಮುಕ್ತಿ' 'ಬಿಡುಗಡೆ'ಯ ಹಂಬಲವಾಗಿ ಏಕೀಭವಿಸುತ್ತವೆ.

'ರಾಷ್ಟ್ರೀಯತೆ' ಪರಿಕಲ್ಪನೆ ಮೂಲತಃ ವಸಾಹತು ಶಾಹಿಯ ಉತ್ಪನ್ನವಾದಂತೆಯೆ, ವಸಾಹತುಶಾಹಿ ವಿರೋಧೀ ಸಂಘಟನೆಯೂ ಆಗಿರುತ್ತದೆ. ಇದರ ಪರಿಣಾಮವಾಗಿ ಸ್ವಸಂಸ್ಕೃತಿಯ ಶೋಧನೆ ಮತ್ತು ವೈಭವೀಕರಣ ಕ್ರಿಯೆಗಳು ಉದ್ದೀಪ್ತವಾಗುತ್ತವೆ. 'ನಡೆ ಮುಂದೆ, ನಡೆ ಮುಂದೆ, ನುಗ್ಗಿ ನಡೆ ಮುಂದೆ/ನಮ್ಮೆಲುಬುಗಳ ಮೇಲೆ ಮೂಡುವುದು ನವಭಾರತದ ಲೀಲೆ!" [ಪಾಂಚಜನ್ಯ:೧೯೨೯] ಎಂಬಂಥ ಸಾಲುಗಳಲ್ಲಿ ವಿವೇಕಾನಂದ ಹಾಗೂ ತಿಲಕರ ಪ್ರಭಾವಗಳು ಏಕತ್ರ ಸಂಯೋಜನಗೊಂಡಿರುವುದನ್ನು ಅವಲೋಕಿಸಬಹುದು.

'ತನಿಯರೆಯಿರ್ಕೆ ನಿಮ್ಮ ಎದೆ ನೆತ್ತರನು ಬಸಿದು
ಸ್ವಾತಂತ್ರ್ಯ ದೇವತೆಯ ತೃಷಿತ ಮುಖಕೆ'

-ರಕ್ತ ತರ್ಪಣ[೧೯೩೫]

'ಬೀಳಲಿ ಮ್ಮೆ ನೆತ್ತರು ಕಾರಿ;
ಹೋದರೆ ಹೋಗಲಿ ತಲೆಹಾರಿ . . .
ಕರೆಯುತ್ತಿಹಳೋ ರಣಕಾಳಿ'

['ಸುಮುಹೂರ್ತವೊ ಇಂದೆ: ೧೯೩೫]

ಕ್ಲೈಬ್ಯವನು ಸಂಹರಿಸೊ, ದೌರ್ಬಲ್ಯವನು ದಹಿಸೊ,
ಹೃದಯಕ್ಕೆ ಪೌರುಷದ ದಯಪಾಲಿಸೊ' [೧೯೩೩]

"ಭರತ ಭೂಮಿ ನನ್ನ ತಾಯಿ,
ನನ್ನ ಪೊರೆವ ತೊಟ್ಟಿಲು;
ಜೀವನವನೆ ದೇವಿಗೆರೆವೆ
ಬಿಡುತೆ ಗುಡಿಯ ಕಟ್ಟಲು" [೧೯೩೫]

ವಸಾಹತುಶಾಹೀ ಆಕ್ರಮಣವನ್ನು ಎದುರಿಸುವ ಛಲ-ಕೆಚ್ಚು-ವೀರಾವೇಶ-ರಣೋತ್ಸಾಹವನ್ನು ರಾಷ್ಟ್ರೀಯತೆಯ ಪ್ರಜ್ಞೆ ಪ್ರಚೋದಿಸುತ್ತದೆ. 'ರಾಷ್ಟ್ರ' ಎನ್ನುವುದು ರಾಜಕೀಯ ಕಲ್ಪನೆಯಾದರೂ, ಅದು ರಾಷ್ಟ್ರೀಯ ಸಂಸ್ಕೃತಿಯನ್ನು ಗತಕಾಲದ ವೈಭವೀಕರಣದೊಂದಿಗೆ ಪುನರುಜ್ಜೀವನಗೊಳಿಸುವಂಥದು. 'ಭರತಮಾತೆಗೆ' [ಕೃತ್ತಿಕೆ:೧೯೩೧] ಎಂಬ ಕವಿತೆ ಅಪಮಾನಕ್ಕೆ ತುತ್ತಾದ ಚರಿತ್ರೆಯನ್ನು ವರ್ತಮಾನಕ್ಕೆ ತಂದುಕೊಳ್ಳುವ ಪರಿಯನ್ನು ಬಿಂಬಿಸುತ್ತದೆ.

"ನಿನ್ನ ಸುಲಿಗೆಯ ಕತೆಯ ನೋಡುತಿರೆಯಿರೆ ಕಣ್ಣು
ಹನಿ ತುಂಬಿ ಮಂಜಾಗುವುದು ದೈನ್ಯದಲಿ ನೊಂದು
ನರಳುವುದು ಬಗೆ; ಕುದಿಯುವುದು ನೆತ್ತರದೆ ಬೆಂದು".

ಇಂಥ ಮನ ಸ್ಥಿತಿಯೆ 'ಭಾರತ ತಪಸ್ವಿನಿ' [ಕೃತ್ತಿಕೆ:೧೯೩೩] ಎಂಬ ಕವಿತೆಯಲ್ಲಿ ಓರಿಯಂಟಲಿಸ್ಟ್ ಧೋರಣೆಯ ಪರಾಕಾಷ್ಠೆಯಾಗಿ ಪ್ರತಿಧ್ವನಿಸುತ್ತದೆ:

"ವೇದ ಋಷಿ ಭೂಮಿಯಲಿ ನಾಕ ನರಕಗಳಿಂದು
ಸಾವು ಬದುಕಿನ ಕಟ್ಟ ಕಡೆಯ ಹೋರಾಟದಲಿ
ಸಂಧಿಸಿವೆ. ನಾಗರಿಕತೆಯ ನಾಗಿನಿಯು
ಪ್ರಗತಿನಾಮಕ ಫಣೆಯ ಮೇಲೆತ್ತಿ
ಚುಂಬಿಸಿಯೆ ಕೊಲ್ಲಲೆಳಸುತಿದೆ ಮತ್ತೊಮ್ಮೆ
ಭಾರತಾಂಬೆಯು ಜಗದ ಬೆಳಕಾಗುವಳು."

ವಸಾಹತು ಶಾಹಿಯ ಉಪ ಉತ್ಪನ್ನವಾದ 'ಆಧುನಿಕತೆ'ಯು ಓರಿಯಂಟಲಿಸ್ಟ್ ಧೋರಣೆಗೆ'ನಾಗರಿಕತೆಯ ನಾಗಿನಿ'ಯಾಗಿ, ವಿಷಸರ್ಪವಾಗಿ ಗೋಚರಿಸುತ್ತದೆ. ಆದರೆ ಉಗ್ರ ರಾಷ್ಟ್ರೀಯ ಚಳುವಳಿಯನ್ನು ಕುವೆಂಪು ಬೇರೊಂದು ನೆಲೆಯಲ್ಲಿ ಪೃಥಕ್ಕರಿಸಿಕೊಳ್ಳುವುದರಿಂದಾಗಿ, ಇಂಥ ಓರಿಯಂಟಲಿಸ್ಟ್ ನೆಲೆಯ ಭಾವಾವೇಶದಿಂದ ವೀರಾವೇಶದಿಂದ ನಿಧಾನವಾಗಿ ಬಿಡಿಸಿಕೊಳ್ಳುವುದು ಸಾಂಸ್ಕೃತಿಕವಾಗಿ ಮಹತ್ವದ ಸಂಗತಿಯಾಗಿದೆ. ರಾಜಕೀಯ ಸ್ವಾತಂತ್ರ್ಯದ ಜೊತೆಯಲ್ಲಿಯೆ ಸಾಂಸ್ಕೃತಿಕ ಸ್ವಾತಂತ್ರ್ಯವನ್ನು ಬೆಸೆಯುವ ಮೂಲಕ ತಿಲಕ್‌ವಾದೀ ರಾಷ್ಟ್ರೀಯತೆಯಿಂದ ಗಾಂಧಿವಾದೀ ರಾಷ್ಟ್ರೀಯತೆಯ ತೆಕ್ಕೆಗೆ ಬರುತ್ತಾರೆ. ತಿಲಕರ ಬಗ್ಗೆ ಕುವೆಂಪು ಕವಿತೆಯನ್ನೆ ಬರೆದಿಲ್ಲವೆಂದು ತಿಲಕ್‌ವಾದೀ ಪ್ರಭಾವವನ್ನು ಅಲ್ಲಗಳೆಯಲಾಗುವುದಿಲ್ಲ. ರಾಷ್ಟ್ರೀಯತೆಗೆ ಕುವೆಂಪು ಒಡ್ಡಿಕೊಂಡದ್ದೆ ಲಾಲಾಲಜಪತ್‌ರಾಯ್ - ಬಾಲಗಂಗಾಧರ ತಿಲಕ್ - ಬಿಪಿನ್ ಚಂದ್ರಪಾಲ್‌ರವರು ರೂಪಿಸುತ್ತಿದ್ದ ರಾಷ್ಟ್ರೀಯ ಚಳುವಳಿಯ ಮುಖಾಂತರವೆ ಎಂಬುದನ್ನು ಮರೆಯುವಂತಿಲ್ಲ.

ರಾಷ್ಟ್ರೀಯ ಚಳುವಳಿಯೊಂದಿಗೆ ಸಾಮಾಜಿಕ ಸಾಂಸ್ಕೃತಿಕ ವಿಮೋಚನೆಯ ಪ್ರಶ್ನೆಯನ್ನು ಮೇಳೈಸಿದ್ದರಿಂದಲೆ ಕುವೆಂಪು ಮಹತ್ವದ ಚಿಂತಕರೂ ಆಗಿದ್ದಾರೆ. ಇಂಥ ಪ್ರಶ್ನೆಯನ್ನು ಜ್ಯೋತಿಬಾಫುಲೆ, ಡಾ. ಅಂಬೇಡ್ಕರ್ ಮತ್ತು ಪೆರಿಯಾರ್ ರಾಮಸ್ವಾಮಿ ನಾಯ್ಕರ್‌ರಂಥವರು ಇದೇ ಸಂದರ್ಭದಲ್ಲಿ ಎತ್ತಿರುವುದನ್ನು ಗಮನಿಸಬೇಕಾಗುತ್ತದೆ. ತೀವ್ರಗಾಮಿಗಳ ರಾಷ್ಟ್ರೀಯತೆ ಮತ್ತು ಅದು ಕಟ್ಟಿಕೊಡುವ ಓರಿಯಂಟಲಿಸ್ಟ್ ನೆಲೆಯ ಆರ್ಷೇಯ / ಹಿಂದೂ ಸಂಸ್ಕೃತಿಯು ಮೂಲತಃ ಆರ್ಯಕುಲದ ಪುನರುತ್ಥಾನ ಎಂದೂ, ಮತ್ತು ಅದು ಅನಾರ್ಯರನ್ನು - ಮುಸ್ಲಿಮರು / ಅಬ್ರಾಹ್ಮಣರನ್ನು - ಹೊರಗಿಡುತ್ತದೆಂದೂ ಈ ಭಿನ್ನಮತೀಯ ಚಿಂತಕರು ಅದರ ವಿರುದ್ಧ / ರಾಷ್ಟ್ರೀಯ ಕಾಂಗ್ರೆಸ್ ವಿರುದ್ಧ ದನಿ ಎತ್ತಿದರು ಮತ್ತು ಶೂದ್ರ ಚಳುವಳಿಯ ಹರಿಕಾರರಾದರು.

ಕರ್ನಾಟಕದಲ್ಲಿ ಶೂದ್ರ ಚಳುವಳಿ ಒಂದು ಜನಾಂದೋಲನವಾಗಿ ಬೆಳೆಯಲಿಲ್ಲವಾದರೂ ಅದರ ಒಳಸುಳಿ ಕುವೆಂಪುರಲ್ಲಿ ಪ್ರತಿಧ್ವನಿಸುತ್ತದೆ. 'ಕ್ರಾಂತಿ ಕಾಳಿ' ಎಂಬ ಕವಿತೆ [ಕೃತ್ತಿಕೆ:೧೯೩೫] ಸಾಮಾಜಿಕ ಪ್ರಜ್ಞೆಯನ್ನು / ಶೂದ್ರತ್ವವನ್ನು ಕವಿ ಆವಾಹನೆಗೊಳಿಸಿಕೊಳ್ಳುವುದನ್ನು ಅತ್ಯಂತ ನಾಟಕೀಯವಾಗಿ ತೋರಿಸುತ್ತದೆ.

"ಓ ದ್ರೋಹಿ ಕವಿಯೆ, ನಿನಗಿತ್ತಾಣತಿಯ ಮರೆತು
ಕ್ಲೀಬತನದಲಿ ಹೆಣ್ಣು ಸೋಬಾನೆಗಳ ಹಾಡಿ
ಪಾಳ್ಗಯ್ದೆ ಕಜ್ಜಮಂ!"

ಪ್ರಕೃತಿ ವರ್ಣನೆಗಳನ್ನು ಆಚೆ ನೂಕಿ. 'ಬಡತನಂ, ಗೊಬ್ಬರು, ಕತ್ತಿ, ಗುದ್ದಲಿ, ಹಾರೆ, ಬೆವರು, ನೆತ್ತರು'ಗಳ ಬಗ್ಗೆ ಹಾಡುವಂತೆ ಕ್ರಾಂತಿಕಾಳಿ ಕವಿಗೆ ಆದೇಶಿಸುತ್ತಾನೆ. ದುಡಿಯುವವರ ಪರವಾಗಿ ಶ್ರಮಜೀವಿಗಳ ಪರವಾಗಿ ಕಾವ್ಯ ದನಿ ಎತ್ತುತ್ತದೆ. "ಬೆಕ್ಕು ಇಲಿ" ಎಂಬ ಕವಿತೆ [ಕೃತ್ತಿಕೆ:೧೯೩೫] ತೋಟಿ, ಕೂಲಿಕಾರ, ರೈತಾಪಿ ಬಡ ಜನರ ಶೋಷಣೆಯನ್ನು ಚಿತ್ರಿಸುತ್ತದೆ:

"ಊರಿನ ಕೊಳೆಯನೆಲ್ಲ ತೊಳೆವ ನಿನಗೆಯೆ ತೊಳೆಯೆ
ನೀರಿಲ್ಲ, ಓ ತೋಟಿ! ಹಣವಂತರಿಗೆ ತೊಟ್ಟಿ
ಮನೆಗಳನು ಕಟ್ಟುವ ನಿನಗೆ ಮಲಗೆ ಬಡಹಟ್ಟಿ
ಗತಿಯಿಲ್ಲ, ಓ ಕೂಲಿಕಾರ! ಪೈರನು ಬೆಳೆಯೆ,
ಆದರುಣ್ಣಲು ನಿನಗೆ ಕಾಳಿಲ್ಲ, ಓ ರೈತ!
ರಾಜ್ಯದ ಭಾರ ನಿಮ್ಮ ಮೂಳೆಯ ಮೇಲೆ;
ರಾಜ್ಯ ಭಾರದ ಸೂತ್ರ ಪಾತ್ರ ನಿಮಗಿಲ್ಲ;
ಶ್ರೀಮಂತ ಬೆಕ್ಕುಗಳೆಲ್ಲ ಸಭೆ ಸೇರ್ದರಾದಂತೆ
ಬಡ ಇಲಿಗಳುದ್ಧಾರ?"

ಬಂಡವಾಳಶಾಹೀ ಆಡಳಿತದಿಂದ ಬಡವರ ಉದ್ಧಾರ ಸಾಧ್ಯವಿಲ್ಲ. 'ಕಲ್ಕಿ' [ಪಾಂಚಜನ್ಯ:೧೯೩೦] ಪದ್ಯದಲ್ಲಿ ಹಸಿವೆಯೆ ಬೆಂಕಿಯಾಗಿ, ರಕ್ತದಾಹಿಯಾಗಿ, ಇಡೀ ಸಮಾಜದ ಶೋಷಣೆಯನ್ನೇ ಸುಟ್ಟು ಹಾಕುವ ಭೀಭತ್ಸ ಅವತಾರವಾಗಿ ಬರುತ್ತದೆ. ರೈತಾಪಿ ಕುಳದಿಂದ ಬಂದ ಕುವೆಂಪು ರೈತರ ಪರವಾಗಿ, ಶೋಷಿತರ ಪರವಾಗಿ ನಿಂತು, ಸಾಮಾಜಿಕ ವಾಸ್ತವತೆಗೆ ಮುಖ ಕೊಟ್ಟು ನಿಂತದ್ದು ಗಾಂಧಿವಾದೀ ರಾಷ್ಟ್ರೀಯತೆಯ ಸೆಳವಿನಲ್ಲಿಯೆ. 'ಬಲಿದಾನ' ನಾಟಕ ರಾಷ್ಟ್ರೀಯ ಹೋರಾಟದ ಚಿತ್ರಣವನ್ನು ಮುಂದಿಟ್ಟರೆ, 'ಜಲಗಾರ' [೧೯೨೮] ಹರಿಜನೋದ್ಧಾರ ಸಂದರ್ಭವನ್ನು ನಾಟ್ಯೀಕರಿಸುತ್ತದೆ. 'ಗೊಬ್ಬರ' ಕವಿತೆ [೧೯೩೫] ಬ್ರಾಹ್ಮಣ-ಶೂದ್ರ ಸಂಘರ್ಷವನ್ನು ಚಿತ್ರಿಸುತ್ತ ಅತ್ಯಂತ ಪರಿಣಾಮಕಾರಿಯಾಗಿ ಕಾವ್ಯ-ಸಾಹಿತ್ಯದ ಧ್ಯೇಯೋದ್ದೇಶಗಳನ್ನೇ ಪ್ರಶ್ನಿಸುತ್ತದೆ.

"ನೂರು ದೇವರನೆಲ್ಲ ನೂಕಾಚೆ ದೂರ
ಭಾರತಾಂಬೆಯೆ ದೇವಿ ನಮಗಿಂದು
ಪೂಜಿಸುವ ಬಾರ!
ಸತ್ತ ಕಲ್ಗಳ ಮುಂದೆ ಅತ್ತು ಕರೆದುದು ಸಾಕು.
ಜೀವದಾತೆಯನಿಂದು ಕೂಗಬೇಕು!
ಇಂದೋ ನಾಳೆಯೋ ದಾಸನೀಶನಾಗಲೆಬೇಕು"

"ಇಂದಿನ ದೇವರು" [ಪಾಂಚಜನ್ಯ:೧೯೩೧] ಕವಿತೆಯ ಈ ಸಾಲುಗಳಲ್ಲಿ 'ಜಡಶಿಲೆ'ಯ ಸ್ಥಾವರ ದೇವರುಗಳನ್ನೆಲ್ಲ ತಳ್ಳಿಹಾಕಿ, ಭಾರತಾಂಬೆಯನ್ನೆ 'ದೇವಿ'

'ಜೀವದಾತೆ'ಯನ್ನಾಗಿ ಸ್ವೀಕರಿಸುವ ನಿಲುವಿನಲ್ಲಿ ಉಪಸಂಸ್ಕೃತಿಗಳ ನಿರಾಕರಣೆ ಇರುವುದಿಲ್ಲ; ಬದಲಾಗಿ ಪುರೋಹಿತ ಶಾಹೀ ಸಂಸ್ಕೃತಿಯ ನಿರ್ನಾಮವನ್ನು ಕವಿ ಆಶಿಸುತ್ತಲೆ ತುಳಿತಕ್ಕೊಳಗಾಗದವರು ['ದಾಸ'] ಅಧಿಕಾರಕ್ಕೇರುವ ಆಶಯವನ್ನು ಪ್ರಕಟಿಸಿದ್ದಾನೆ. ಶೋಷಿತರು ಅಧಿಕಾರಕ್ಕೆ ಬರಲು ಇರುವ ಅಡ್ಡಿ ಎಂದರೆ ವರ್ಣಾಶ್ರಮ ಧರ್ಮವನ್ನು, ಕೋಮುವಾದವನ್ನು ಬಿತ್ತುವ ವೈದಿಕ ಪುರೋಹಿತ ಶಾಹಿಯೇ ಎಂಬುದು ಇಲ್ಲಿನ ಗ್ರಹೀತ ಸತ್ಯ. ಆದ್ದರಿಂದಲೆ ವರ್ಣಾಶ್ರಮ ಧರ್ಮದ ಪ್ರತಿಪಾದಕ ಮನುವರೇಣ್ಯನನ್ನು ಅವನ ಧರ್ಮಶಾಸ್ತ್ರದ ಜೊತೆಯಲ್ಲೆ ಸುತ್ತಿ ಬಿಸಾಡುತ್ತಾರೆ.['ಯಾವ ಕಾಲದ ಶಾಸ್ತ್ರವೇನು ಹೇಳಿದರೇನು?' ೧೯೩೪]. ಕುವೆಂಪುರಲ್ಲಿ ಭಾರತದ ಪುನರುಜ್ಜೀವನ ಹಿಂದೂತ್ವದ ಪುನರುತ್ಥಾನವಾಗಿ ಬರದೆ, ಸಂಸ್ಕೃತಿ ವಿಮರ್ಶೆಯಾಗಿ ಮೈದಳೆಯುತ್ತದೆ:

"ಬೀಸುತಿದೆ ಪಶ್ಚಿಮದ ರಸಪೂರ್ಣ ಹೊಸಗಾಳಿ
ಭಾರತದ ಬಣಗು ಬಾಳ್ಮರವನಲುಗಾಡಿ;
ಹಳೆಮತದ ಕೊಳೆಯೆಲ್ಲ ಹೊಸಮತದ ಹೊಳೆಯಲ್ಲಿ
ಕೊಚ್ಚಿ ಹೋಗಲಿ; ಬರಲಿ ವಿಜ್ಞಾನ ಬುದ್ಧಿ.
ವೇದ ಪ್ರಮಾಣತೆಯ ಮರು ಮರೀಚಿಕೆಯಲ್ಲಿ
ನೀರರಸಿ ಕೆಡದಿರಲಿ ಸ್ವಾತಂತ್ರ್ಯ ಸಿದ್ಧಿ!"

['ತರುಣರಿರ, ಎದ್ದೇಳಿ': ೧೯೩೫]

ಕನ್ನಡದ ಸಂದರ್ಭದಲ್ಲಿ ಇಂಥ ಪ್ರಖರವಾದ ವಿಚಾರವಾದೀ ನಿಲುವನ್ನು ಪ್ರತಿಪಾದಿಸಿದವರು ಬೇರೊಬ್ಬರಿಲ್ಲ. 'ವಿಜ್ಞಾನ ಬುದ್ಧಿ'ಯೊಂದಿಗೆ 'ಸ್ವಾತಂತ್ರ್ಯ ಸಿದ್ಧಿ'ಯನ್ನು ಮೇಳವಿಸಿ ಸ್ವಾತಂತ್ರ್ಯದ ಪರಿಕಲ್ಪನೆಯನ್ನೆ ಇಲ್ಲಿ ಹಿಗ್ಗಿಸಿದ್ದಾರೆ. ಈ 'ವಿಜ್ಞಾನ ಬುದ್ಧಿ'ಯನ್ನು ಪಡೆಯದೆ ಕೇವಲ 'ಸ್ವಾತಂತ್ರ್ಯ ಸಿದ್ಧಿ'ಗಳಿಸಿದಲ್ಲಿ ಅದು 'ವೇದ ಪ್ರಮಾಣತೆಯ ಭ್ರಮೆ'ಯಾಗಿ/ 'ಮರೀಚಿಕೆ'ಯಾಗಿ ಇಂಗಿ ಹೋಗುತ್ತದೆ ಎಂಬ ಎಚ್ಚರದ ಧ್ವನಿ ಇಲ್ಲಿ ಪ್ರಕಟಗೊಂಡಿದೆ. ಭಾರತದ ಅಬ್ರಾಹ್ಮಣ ಚಿಂತಕರು ಮಹಾತ್ಮ ಫುಲೆ, ಡಾ.ಅಂಬೇಡ್ಕರ, ಪೆರಿಯಾರ್ ವಸಾಹತು ಶಾಹಿಯನ್ನು ಸಂಪೂರ್ಣವಾಗಿ ನಿಷೇಧಿಸುವುದಿಲ್ಲ ಎಂಬ ಸಂಗತಿ ಕುತೂಹಲಕರವಾದದ್ದು. ಕುವೆಂಪು ಕೂಡ ವಸಾಹತು ಶಾಹಿಯನ್ನು ಸಾಮಾಜಿಕ ಸಾಂಸ್ಕೃತಿಕ ಕಾರಣಗಳಿಗಾಗಿ ಸಂಪೂರ್ಣ ಬಹಿಷ್ಕರಿಸುವುದಿಲ್ಲ. 'ಪಶ್ಚಿಮದ ರಸಪೂರ್ಣ ಹೊಸಗಾಳಿ' ಎಂದು ಕರೆಯುತ್ತಾರೆ. 'ಬ್ರಿಟಿಷರು ಭಾರತಕ್ಕೆ ಬರದಿದ್ದಲ್ಲಿ ಯಾರದೋ ಮನೆಯಲ್ಲಿ ಸಗಣಿ ಬಾಚುತ್ತಿದ್ದೆ.' ಎಂಬ ಮಾತು ಇಲ್ಲಿ ಉಲ್ಲೇಖಾರ್ಹ. ಹಾಗೆಯೆ ಇವರ ಕಾದಂಬರಿಗಳಲ್ಲಿ ಬರುವ ಕ್ರಿಶ್ಚಿಯನ್ ಮಿಶನರಿಯ ಸ್ವರೂಪಕ್ಕೂ ಮಾಸ್ತಿಯವರ ಕಾದಂಬರಿಯಲ್ಲಿನ ಮಿಶನರಿಯ ಸ್ವರೂಪಕ್ಕೂ ಇರುವ ವ್ಯತ್ಯಾಸವನ್ನು ಗ್ರಹಿಸಿದರೆ ಕುವೆಂಪು ತಳೆಯುವ ಧನಾತ್ಮಕ ನಿಲುವು ಸ್ಪಷ್ಟವಾಗುತ್ತದೆ. ಆದರೆ ಸಾಮ್ರಾಜ್ಯ ಶಾಹಿಯನ್ನು ಕವಿ ಖಂಡಿಸುತ್ತಾರೆ:

"ಕರಿಯರದೊ ಬಿಳಿಯರದೊ ಯಾರದಾದರೆ ಏನು?
ಸಾಮ್ರಾಜ್ಯವಾವಗಂ ಸುಲಿಗೆ ರೈತರಿಗೆ!
ವಿಜಯನಗರವೊ? ಮೊಗಲರಾಳ್ವಿಕೆಯೊ? ಇಂಗ್ಲಿಷರೊ?
ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ"

-['ರೈತನ ದೃಷ್ಟಿ':೧೯೩೬]

ರಾಷ್ಟ್ರೀಯತೆಯ ಇನ್ನೊಂದು ಮಗ್ಗುಲನ್ನು ಈಗ ಪರಿಶೀಲಿಸೋಣ. 'ರಾಷ್ಟ್ರ'ದ ಕಲ್ಪನೆ ಮೂಲತಃ ಏಕೀಕೃತ ರಾಷ್ಟ್ರವನ್ನು ಕಟ್ಟುವುದಾಗಿದ್ದು, ಅದಕ್ಕಾಗಿ ಪಾರತಂತ್ರ್ಯವನ್ನು ವಿರೋಧಿಸುವಂತೆಯೆ ಪಾಳೆಗಾರೀ ವ್ಯವಸ್ಥೆಯ ರಾಜ-ಮಹಾರಾಜರ ಆಳ್ವಿಕೆಯನ್ನೂ ವಿರೋಧಿಸುತ್ತದೆ. ರಾಜತ್ವವನ್ನು ಕುರಿತಂತೆ ಕುವೆಂಪುರವರ ನಿಲುವನ್ನು ಈ ನಿಟ್ಟಿನಲ್ಲಿ ಗ್ರಹಿಸಬೇಕಾಗುತ್ತದೆ. ಏಕ ರಾಷ್ಟ್ರದ ಕಲ್ಪನೆಯನ್ನು ಜನಾಂಗಿಕ ನೆಲೆಯಲ್ಲಿ ಬೆಳೆಸಿದ್ದರಿಂದಲೆ ಹಿಂದೂ ಮುಸ್ಲಿಂ ಒಡಕು ತಲೆದೋರಿ ತಿಲಕರ 'ಸ್ವದೇಶಿ ಚಳುವಳಿ' ವಿಫಲವಾದದ್ದು; ಅಂದರೆ, ಸ್ವದೇಶಿ ಚಳುವಳಿಯ ಅತಿರೇಕದಲ್ಲಿ ಮತೀಯತೆಯ ದುರ್ಬೀಜ ಹುದುಗಿರುತ್ತದೆ. ಕುವೆಂಪುರಲ್ಲಿ ಇಂಥ ಮತೀಯ ರಾಷ್ಟ್ರೀಯತೆ ಎಲ್ಲೂ ಪ್ರಕಟವಾಗುವುದಿಲ್ಲ ಎಂಬುದು ಗಮನಾರ್ಹ ಅಂಶ.

ರಾಷ್ಟ್ರೀಯತೆಯ ಮುಖ್ಯ ಲಕ್ಷಣವೆ ಏತದ್ದೇಶಿಯತೆ. ರಾಷ್ಟ್ರಪ್ರೇಮ ನಾಡು ನುಡಿಯ ಪ್ರೇಮವೂ ಆಗುತ್ತದೆ; ಪ್ರಾದೇಶಿಕತೆಯ ಉಪರಾಷ್ಟ್ರೀಯತೆಯಾಗುತ್ತದೆ. 'ಮಾತೃಭೂಮಿ' ಎಂಬುದು ಹುಟ್ಟಿದೂರಿನಿಂದ ಹಿಡಿದು ರಾಷ್ಟ್ರದ ತನಕ ಹಬ್ಬುತ್ತದೆ. ಹಾಗಾಗಿ ರಾಷ್ಟ್ರೀಯತೆ ಎಂಬುದು ಕೆಳಹಂತದಿಂದ, ಪ್ರಾದೇಶಿಕತೆಯಿಂದ, ಅನೇಕತೆಯಿಂದ ಕಟ್ಟಲ್ಪಟ್ಟಾಗಲೆ ಅದಕ್ಕೆ ಒಗ್ಗಟ್ಟು ಮತ್ತು ಪ್ರಜಾಪ್ರಭುತ್ವದ ಲಕ್ಷಣ ಪ್ರಾಪ್ತವಾಗುತ್ತದೆ. ಗಾಂಧೀಜಿ ಕಟ್ಟಿದ ರಾಷ್ಟ್ರೀಯತೆ ಇದು. ಈ ನೆಲೆಯಲ್ಲಿಯೆ ಕನ್ನಡ ನಾಡು-ನುಡಿಯ ಬಗ್ಗೆ ಕುವೆಂಪು ಬರೆದಿರುವುದನ್ನು ಗ್ರಹಿಸಬೇಕಾಗುತ್ತದೆ.'ಕರ್ನಾಟಕ ಮಾತೆ ಭಾರತ ಜನನಿಯ ತನುಜಾತೆ'ಯಾಗುತ್ತಾಳೆ.

'ಮತದ ಬಿರುಕುಗಳನು ತೊರೆವೆ;
ನುಡಿಗಳೊಡಕುಗಳನು ಮರೆವೆ"

-['ಭರತ ಭೂಮಿ ನನ್ನ ತಾಯಿ':೧೯೩೪]

ಎಂಬುದಾಗಿ ಹೇಳುತ್ತಾರೆ. ರಾಷ್ಟ್ರೀಯತೆಯು 'ಮತದ ಬಿರುಕು'ಗಳನ್ನು ಹುಟ್ಟಿಸದೆ, ಮತ ಧರ್ಮ ಸಹಿಷ್ಣುತೆಯನ್ನು, ಸೆಕ್ಯುಲರ್ ದೃಷ್ಟಿಕೋನವನ್ನು ಕಟ್ಟಬೇಕು ಎಂಬುದು ಇಲ್ಲಿನ ಗೃಹೀತ. ರಾಷ್ಟ್ರ ಎಷ್ಟು ಮುಖ್ಯವೊ ತಾನು ನಿಂತ ನೆಲವೂ ಅಷ್ಟೇ ಮುಖ್ಯವಾಗುತ್ತದೆ.

"ಎಲ್ಲಾದರು ಇರು; ಎಂತಾದರು ಇರು;
ಎಂದೆಂದಿಗು ನೀ ಕನ್ನಡವಾಗಿರು."

ಎಂಬುದಾಗಿ 'ಮೆಟ್ಟುವ ನೆಲ ಕರ್ನಾಟಕ' [೧೯೪೧] ಕವಿತೆಯಲ್ಲಿ ಹೇಳುತ್ತಾರೆ. ಕನ್ನಡ ಸಂಸ್ಕೃತಿಯ ಅಸ್ತಿತ್ವ ಕನ್ನಡ ನುಡಿಯಲ್ಲಿಯೇ ಅಡಗಿರುವುದರಿಂದಾಗಿಯೆ,ಅನ್ಯ ಭಾಷೆಗಳ ಆಕ್ರಮಣವನ್ನು ಕುವೆಂಪು ಖಂಡಿಸುತ್ತಾರೆ. 'ಕನ್ನಡಮ್ಮನ ಹರಕೆ', 'ಸಾಕು ಈ ಬಲಾತ್ಕಾರ', 'ಪ್ರಾರ್ಥಿಸಿ ಓ ಮಕ್ಕಳಿರಾ', 'ಭಾಷಾ ತ್ರಿಶೂಲ' ಮುಂತಾದ ಪದ್ಯಗಳಲ್ಲಿ ಮಕ್ಕಳ ಮೇಲಾಗುವ ಇಂಗ್ಲೀಷ್ ಭಾಷೆಯ ಅಪಾಯಗಳನ್ನು ಗುರುತಿಸುತ್ತಾರೆ. ಕನ್ನಡ ಪ್ರೇಮ ಎಂಬುದು ಕುವೆಂಪುರಲ್ಲಿ ಅಮೂರ್ತ ಭಾವುಕತೆಯಾಗದೆ, ಭಾವೋದ್ವಿಗ್ನತೆಯ ಸೆಳೆತವೂ ಆಗದೆ, ರಾಷ್ಟ್ರೀಯತೆಯ ಉತ್ಪನ್ನವಾದ ಪ್ರಾದೇಶಿಕತೆಯ ಫಲವಾಗಿ ಬರುತ್ತದೆ.

ವಿಶ್ವ ಮಾನವ ಪರಿಕಲ್ಪನೆ

ಮಹಾತ್ಮ ಫುಲೆ, ಅಂಬೇಡ್ಕರ್, ಪೆರಿಯಾರ್‌ರವರು ಹಿಂದೂ ಸಂಸ್ಕೃತಿಯ ನೆಲೆಗಟ್ಟಿನಿಂದ ಸಿಡಿದು ಹೊರಬಂದಂತೆ, ಕುವೆಂಪು ಹೊರಬರಲಿಲ್ಲ; ಬದಲಾಗಿ ಅವರು ಗಾಂಧಿ ಸಂಸ್ಕೃತಿಯ ನೆಲಗಟ್ಟಿನಲ್ಲಿ ನಿಂತರು. 'ಹೃದಯ ಪರಿವರ್ತನೆ'ಯ ತತ್ವದಲ್ಲಿ ನಂಬಿಕೆಯಿಟ್ಟು, ಮನುಷ್ಯ ವ್ಯವಸ್ಥೆಯ ಅಂತರಂಗದಲ್ಲಿ ಬದಲಾವಣೆ ಸಾಧ್ಯ ಎಂಬ ನಿಲುವು ತಳೆದರು. "ಶ್ರೀ ರಾಮಾಯಣ ದರ್ಶನಂ" ಮಹಾಕಾವ್ಯ ಗಾಂಧೀಯುಗದ ಪುರಾಣವೆ[ಎಪಿಕ್]ಆಗಿದೆ. "ಪಾಪಿಗೂ ಉದ್ಧಾರಮಿಹುದು" ಎಂಬ ಕಾಣ್ಕೆಯಲ್ಲಿ ಮಂಥರೆ, ಕೈಕೆ, ರಾವಣ, ಬ್ರಿಟಿಷರು, ಕೇಡು [ಈವಿಲ್] ದುಷ್ಟತನವನ್ನು ನೀಗಿ ನಿಲ್ಲುತ್ತಾರೆ.

ಕುವೆಂಪುರವರ ವಿಶ್ವಮಾನವ ಪರಿಕಲ್ಪನೆ ಅಮೂರ್ತವಾದದ್ದೆ ? ಯಾವುದೇ ವಿಚಾರ/ಪರಿಕಲ್ಪನೆ[concept]ಯನ್ನು ಅದರ ಚಾರಿತ್ರಿಕ ಮತ್ತು ಸಾಂಸ್ಕೃತಿಕ ಸಂದರ್ಭದಿಂದ ಕತ್ತರಿಸಿ ನೋಡಿದರೆ ಅದು ಅಮೂರ್ತವಾಗುತ್ತದೆ. ಕುವೆಂಪುರವರ 'ವಿಶ್ವಮಾನವ' ಪರಿಕಲ್ಪನೆಯಲ್ಲಿ ಪಂಚ ತತ್ವಗಳು ಸಂಯೋಜನೆಗೊಂಡಿವೆ: ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ ಹಾಗೂ ಪೂರ್ಣದೃಷ್ಟಿ. ಈ ಐದೂ ತತ್ವಗಳು ಹುಟ್ಟಿ ಬಂದ ನೆಲೆಗಳನ್ನು ಪರಿಶೀಲಿಸಿದಾಗಲೆ ಅವುಗಳ ಚಾರಿತ್ರಿಕ ಮಹತ್ವ ಇಲ್ಲವೆ ಮಿತಿಗಳು ಸ್ಪಷ್ಟವಾಗುತ್ತವೆ. ಈ ನಿಟ್ಟಿನಲ್ಲಿ ಸ್ಥೂಲವಾಗಿ ಗಮನಿಸಿದರೆ: 'ಮನುಜಮತ' ಕಲ್ಪನೆಯನ್ನು ಜಾತಿ-ಮತ-ಧರ್ಮಗಳ ಸಂಕುಚಿತ ಗಡಿಗಳನ್ನು ಮೀರುವ ತತ್ವವನ್ನಾಗಿ ಪರಿಭಾವಿಸಲಾಗಿದೆ. 'ಮನುಷ್ಯಜಾತಿ ತಾನೊಂದೆವಲಂ' ಎಂಬ ಪಂಪನ ಮಾತು ಮತ್ತು ಆಧುನಿಕ ಮಾನವತಾವಾದ ಈ 'ಮನುಜಮತ' ಕಲ್ಪನೆಯಲ್ಲಿ ಮಿಳಿತಗೊಂಡಿವೆ ಎನ್ನಬಹುದು: "ನೂರು ಮತದ ಹೊಟ್ಟ ತೂರಿ/ಎಲ್ಲ ತತ್ತ್ವದೆಲ್ಲೆ ಮೀರಿ/ನಿರ್ದಿಗಂತವಾಗಿ ಏರಿ/ಓ ನನ್ನ ಚೇತನ/ಆಗು ನೀ ಅನಿಕೇತನ" [ಅನಿಕೇತನ]

"ಸಿಲುಕದಿರಿ ಮತವೆಂಬ ಮೋಹದಜ್ಞಾನಕ್ಕೆ;
ಮತಿಯಿಂದ ದುಡಿಯಿರೈ ಲೋಕ ಹಿತಕೆ.
ಆ ಮತದ ಈ ಮತದ ಹಳೆಮತದ ಸಹವಾಸ

ಸಾಕಿನ್ನು ಸೇರಿರೈ ಮನುಜ ಮತಕೆ.
ಓ ಬನ್ನಿ, ಸೋದರರೆ, ವಿಶ್ವಪಥಕೆ!" [೧೯೩೫]

ಇಂಥ ಸಾಲುಗಳು/ವಿಚಾರಗಳು ಹುಟ್ಟಿಬಂದ ಸಂದರ್ಭವನ್ನು ವಿಶ್ಲೇಷಿಸಿದಾಗಲೆ ವಿಚಾರದ ಮೂಲ ಸೆಲೆಗಳು ಗೋಚರವಾಗುತ್ತವೆ. ಸ್ವಾತಂತ್ರ್ಯ ಸಂಗ್ರಾಮದ ಸಂದರ್ಭದಲ್ಲಿ ಉಲ್ಬಣಿಸುತ್ತಿದ್ದ ಮತೀಯ ಸ್ವರೂಪದ ರಾಷ್ಟ್ರೀಯತೆ ಉಂಟು ಮಾಡಿದ್ದ ಸಾಂಸ್ಕೃತಿಕ ಬಿಕ್ಕಟ್ಟನ್ನು ಮೀರಲು ಕುವೆಂಪು ವಿಶ್ವಾತ್ಮಕ ಮೌಲ್ಯಗಳನ್ನು ಪರಿಶೋಧಿಸುತ್ತಾರೆ; ಮತ್ತು ಅವುಗಳಿಂದ 'ವಿಶ್ವ ಮಾನವ' [Universalism] ಪರಿಕಲ್ಪನೆಯನ್ನು ಸಂಯೋಜಿಸಿ ಕೊಳ್ಳುತ್ತಾರೆ ಎನ್ನಿಸುತ್ತದೆ. ಹಾಗಾಗಿ'ಮನುಜಮತ' [Humanism] ಎಂಬುದು ಮಾನವತಾವಾದ ಹಾಗೂ 'ಮತಮೌಢ್ಯ'ವನ್ನು ತೊಡೆದು ಹಾಕುವ 'ವಿಜ್ಞಾನ ಬುದ್ಧಿ'ಯಾಗಿ/ ವೈಚಾರಿಕ ನೆಲೆಗಟ್ಟಾಗಿ ನಿಲ್ಲುತ್ತದೆ. 'ವಿಶ್ವಪಥ' ಎಂಬುದು ರಾಷ್ಟ್ರ ಎನ್ನುವಂಥ ಗಡಿರೇಖೆಯನ್ನು ದಾಟುವ ಸಹೋದರತ್ವದ ಆಶಯವಾಗುತ್ತದೆ. 'ಸರ್ವೋದಯ' ತತ್ತ್ವ ಪಾಪಿಗೂ ಕೂಡ ಉದ್ಧಾರ ಉಂಟು ಎಂಬ ಗಾಂಧೀ ವಿಚಾರ ಧಾರೆಯಾದರೆ, ಪರಮಹಂಸ-ವಿವೇಕಾನಂದರಿಂದ ರೂಪುಗೊಂಡ 'ಸರ್ವ ಧರ್ಮ ಸಮನ್ವಯ' ತತ್ತ್ವ ಸಹಿಷ್ಣುತೆಯ/ಧರ್ಮ ನಿರಪೇಕ್ಷತೆಯ ಪ್ರತೀಕವಾಗುತ್ತದೆ. ಹಾಗೆಯೆ ಅರವಿಂದರ 'ಪೂರ್ಣದೃಷ್ಟಿ'ಯ ನೆಲೆಯನ್ನು ಸಂಚಯಿಸಿಕೊಳ್ಳಲಾಗಿದೆ. 'ಹೊಸಬಾಳಿನ ಗೀತೆ' [೧೯೩೫]ಯಲ್ಲಿ ಸರ್ವೋದಯ ತತ್ತ್ವದೊಂದಿಗೆ ಸಮತಾವಾದಿ ನೆಲೆಯನ್ನೂ ಬೆಸೆಯುತ್ತಾರೆ:

"ಸರ್ವರಿಗೆ ಸಮಬಾಳು! ಸರ್ವರಿಗೆ ಸಮಪಾಲು!"
ಎಂಬ ನವಯುಗ ವಾಣಿ ಘೋಷಿಸಿದೆ ಕೇಳಿ!

ಹಾಗೆಯೆ, ವ್ಯಕ್ತಿಸ್ವಾತಂತ್ರ್ಯವಿಲ್ಲದ ಸಮತಾವಾದವನ್ನು ಕುವೆಂಪು ನಿರಾಕರಿಸುತ್ತಾರೆ. ['ಕೋಗಿಲೆ ಮತ್ತು ಸೋವಿಯತ್ ರಷ್ಯಾ' : ೧೯೩೬]. "ಶ್ರೀ ಸಾಮಾನ್ಯರ ದೀಕ್ಷಾಗೀತೆ'ಯಲ್ಲಿ [ಇಕ್ಷುಗಂಗೋತ್ರಿ: ೨೬.೧.೧೯೫೦] ಗಣರಾಜ್ಯದ ಉದಯವನ್ನು ಸರ್ವೋದಯ ತತ್ತ್ವದೊಂದಿಗೆ ಸಮೀಕರಿಸಿ, ಭಾರತದ ಸಾಮಾಜಿಕ-ಸಾಂಸ್ಕೃತಿಕ ನವೋದಯವನ್ನು ಹಾರೈಸುತ್ತಾರೆ. ಹೀಗೆ ವಿಶ್ವ ಮಾನವ ಪರಿಕಲ್ಪನೆಯಲ್ಲಿನ ತತ್ತ್ವಾಶಯಗಳು ಕುವೆಂಪುರಲ್ಲಿ ರಾಷ್ಟ್ರೀಯ/ರಾಜಕೀಯ ಸ್ವಾತಂತ್ರ್ಯಕ್ಕೆ ಪರ್ಯಾಯವಾಗಿ ಸಾಂಸ್ಕೃತಿಕ ಮೌಲ್ಯಗಳಾಗಿ ಬರುತ್ತವೆ; ಮತ್ತು ಈ ಮೌಲ್ಯಗಳು ಪ್ರಜಾಸತ್ತಾತ್ಮಕ ಆಶಯಗಳಾಗಿಯೂ ನಿಲ್ಲುತ್ತವೆ ಎಂಬುದನ್ನು ಮರೆಯುವಂತಿಲ್ಲ. ವಿಶ್ವಮಾನವ ಪರಿಕಲ್ಪನೆ ಅಮೂರ್ತ ಆದರ್ಶ ಎನ್ನುವುದಾದರೆ ಪ್ರಜಾಪ್ರಭುತ್ವದ ಸ್ವರೂಪವೂ ಅದೇ ಆಗಿರುತ್ತದೆ; 'ಆಗು ಆಗು ನೀ ಅನಿಕೇತನ' ಎಂಬುದು 'ಆಗುವಿಕೆ'ಯ ಆಶಯವೇ ಆಗಿದೆ; ಹಾಗೂ ಚಲನಶೀಲತ್ವ/ ಜಂಗಮತ್ವದ ಪ್ರತೀಕವೂ ಆಗಿದೆ.

ಉಪಸಂಸ್ಕೃತಿಗಳ ಗೈರು ಹಾಜರಿ: ಈ ವಿಶ್ವಮಾನವ ಪರಿಕಲ್ಪನೆಯ ಸಂಯೋಜನೆಯಲ್ಲಿ ಒಂದು ಮುಖ್ಯ ಮಿತಿ ಆಗಿದೆ. ಜಾತಿ-ಮತ-ಮೌಢ್ಯಗಳನ್ನು ಸವರಿ

ಹಾಕುವ ತವಕದಲ್ಲಿ, ವಿಜ್ಞಾನ ಬುದ್ಧಿಯ ಪ್ರಖರ ಬೆಳಕಿನಲ್ಲಿ ಉಪ ಸಂಸ್ಕೃತಿಗಳ ನೆಲೆಗಳು ಅಳಿಸಿ ಬಿಡುತ್ತವೆ: 'ಮಾದೇಶ್ವರನ ಬೆಟ್ಟಕಂತೆ!'' [ಕೃತಿಕೆ: ೧೯೩೫] ಕವಿತೆ ಇದಕ್ಕೊಂದು ಒಳ್ಳೆಯ ಉದಾಹರಣೆ.

ಡಾ. ಅಂಬೇಡ್ಕರ್ ಹಿಂದೂತ್ವ ಸಂಸ್ಕೃತಿಯಿಂದ ಸಿಡಿದು ಬೌದ್ಧ ಧರ್ಮ ಸ್ವೀಕರಿಸಿದರೆ, ಪೆರಿಯಾರ್ ಪ್ರಧಾನ ಸಂಸ್ಕೃತಿಯಿಂದ ಹೊರಬಂದು ದ್ರಾವಿಡ ಸಂಸ್ಕೃತಿಯನ್ನು ಕಟ್ಟಿದರೆ, ಕುವೆಂಪು ಹಿಂದೂ ಸಂಸ್ಕೃತಿಯನ್ನು ನಿರಾಕರಿಸುತ್ತಲೆ ಶೂದ್ರ ಸಂಸ್ಕೃತಿಯ ಮೂಲಕ ಅದರೊಳಗಿನಿಂದಲೆ ವಿಶ್ವಮಾನವ ಪರಿಕಲ್ಪನೆಯನ್ನು ಕಟ್ಟಿ ಕೊಡುತ್ತಾರೆ. ಸಂಸ್ಕೃತಿ ವಿಮರ್ಶೆ ಮುಖಾಂತರ ಜೀವಪರವಾದ ಹಾಗೂ ಪ್ರಜಾಸತ್ತಾತ್ಮಕವಾದ ಪ್ರತಿ ಸಂಸ್ಕೃತಿಯನ್ನು ಕಟ್ಟಲು ಸಾಂಸ್ಕೃತಿಕವಾಗಿ ಹೋರಾಡಿದ ಕುವೆಂಪು-ಮಿತಿಗಳೇನಿದ್ದರೂ ಕೂಡ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕ.

❋ ❋ ❋

ಭಾಷಾಸಂವಹನಗಳನ್ನು ಕುರಿತು ಪರ್ಯಾಯ ಚಿಂತನೆಗಳು

ಕೆ. ವಿ. ಸುಬ್ಬಣ್ಣ

ನನ್ನ ಭಾಷಣದ 'ತಾತ್ಪರ್ಯ ಟಿಪ್ಪಣಿ'ಕೊಡಲು ಸಾಧ್ಯವಾಗುತ್ತಿಲ್ಲ. ಬದಲಾಗಿ ಒಂದು ಪ್ರಾರಂಭಿಕ'ಪ್ರಸ್ತಾವನೆ'ಯನ್ನು ಕೊಡುತ್ತಿದ್ದೇನೆ. ಈ ಭಾಷಣವು ಪ್ರಸ್ತುತ ವಿಷಯವನ್ನು ಕುರಿತು ಕೆಲವು ಖಚಿತ ಅಂಶಗಳನ್ನು ಕ್ರಮವಾಗಿ ತರ್ಕಬದ್ಧವಾಗಿ ಜೋಡಿಸಿ ತಯಾರಿಸಿರುವ ಸಿದ್ಧಾಂತ ಮಂಡನೆಯಾಗಿರುವುದಿಲ್ಲ. ಹಾಗೆ ಇದು ಅಕಡಮಿಕ್ ಎನ್ನಿಸಿಕೊಳ್ಳುವ ಭಾಷಣವಲ್ಲ. ಒಟ್ಟೂ ಅವಧಿಯಲ್ಲಿ, ನನ್ನ ಮಂಡನೆಗಿಂತ ಹೆಚ್ಚುವೇಳೆ ಸಾಮಾಜಿಕ ಶ್ರೋತೃಗಳ ಜತೆಗಿನ ಚರ್ಚೆಗಾಗಿ ಮಿಸಲಾಗಬೇಕು ಎಂದು ನನ್ನ ಆಸೆ. ಭಾಷಣಕ್ಕಿಂತ ಇದು ಸಂಭಾಷಣವಾಗಬೇಕು. ನನ್ನಲ್ಲಿ ಮೂಡಿರುವ ಚಿಂತನೆಯ ಸ್ವರೂಪವು ಇಂಥದೊಂದು ರೂಢಿಭಿನ್ನ ರೂಪವನ್ನು ಒತ್ತಾಯಿಸುತ್ತದೆ.

'ಸಂವಹನ' ಎನ್ನುವ ಪದವನ್ನು ನಾನು ಕಮ್ಯುನಿಕೇಶನ್ ಎಂಬ ಇಂಗ್ಲಿಷ್ ಪದಕ್ಕೆ ಪರ್ಯಾಯವಾಗಿ ಬಳಸುತ್ತಿದ್ದೇನೆ. ಕಮ್ಯುನಿಕೇಶನ್ ಎಂಬ ಪದವು ಕೆಲವೊಮ್ಮೆ ಭೌತಿಕ ಸಂಪರ್ಕಗಳಿಗೂ ಬಳಕೆಯಾಗುವುದರಿಂದ ಮತ್ತು ನನ್ನ ವಿಷಯವು ಚಿಂತನೆ ಅನುಭವ ಇತ್ಯಾದಿ ಭೌತಿಕೇತರ ಸಂಪರ್ಕಗಳನ್ನು ಮಾತ್ರವೇ ಕುರಿತಿರುವುದರಿಂದ ಇಲ್ಲಿ 'ಭಾಷಾಸಂವಹನ' ಎಂಬ ಮಾತನ್ನು ಬಳಸುತ್ತಿದ್ದೇನೆ. 'ಭಾಷೆ' ಯೆಂದರೆ, ಕೇವಲ 'ಶಾಬ್ದಿಕ ಭಾಷೆ' ಗಳು ಮಾತ್ರವಲ್ಲ. ಚಿತ್ರ ಶಿಲ್ಪ ಸಂಗೀತ ನೃತ್ಯ ರಂಗಭೂಮಿ ಮುಂತಾದ ಎಲ್ಲ ಸಾಂಪ್ರದಾಯಿಕ 'ಮಾಧ್ಯಮ' ಗಳು ಹಾಗೂ ಮುದ್ರಣ, ರೇಡಿಯೊ, ಟಿ. ವಿ. ಮುಂತಾದ ಎಲ್ಲ ಹೊಸ ' ಸಮೂಹಮಾಧ್ಯಮ'ಗಳು-ಇವೆಲ್ಲವನ್ನೂ ಇಲ್ಲಿ 'ಭಾಷೆ' ಯೆಂದು ಕರೆಯುತ್ತಿದ್ದೇನೆ.

ಭಾಷಾಸಂವಹನಗಳ ಬಗ್ಗೆ ಯೋಚಿಸುವಾಗ ನನ್ನ ಮನಸ್ಸು ಕೇವಲ ಅದರ ಮೇಲೆಯೇ ಕೇಂದ್ರೀಕೃತವಾಗಿಲ್ಲ ಎನ್ನುವುದನ್ನೂ ಹೇಳಬೇಕು. ಈ ಕಾರಣದಿಂದಲೂ ನನ್ನ ಮಂಡನೆ ಅಕಡಮಿಕ್ ಆಗದೆ ಉಳಿಯುತ್ತದೆ. ತೀರ ಇವತ್ತಿನ ನಮ್ಮೆದುರಿನ ಸಂಗತಿಗಳು -ವಾಣಿಜ್ಯ, ಅಮೆರಿಕದ ಜಾಗತಿಕ ಸಾರ್ವಭೌಮ ಯಾಜಮಾನ್ಯ, ದಿನದಿನಕ್ಕೆ ಅಹಸ್ಯವೆಂಬಂತೆ ಬೆಳೆಯುತ್ತಿರುವ ಇಂಡಿಯಾದ ಐಹಿಕಾಭಿವೃದ್ಧಿಯ 'ಏಕೈಕ ಪಿಪಾಸೆ, ಅಸಂಖ್ಯ ಭಿನ್ನತೆ

ಹಗೆತನಗಳಿಂದ ಛಿದ್ರಗೊಳ್ಳುತ್ತಿರುವ ಇಂಡಿಯಾ, ದ್ವೇಷದೌರ್ಬಲ್ಯಗಳ ಕಂದರದೊಳಕ್ಕೆ ಜಾರಿಕೊಳ್ಳುತ್ತಿರುವ ಕರ್ನಾಟಕ - ಈ ಮುಂತಾದ ತಲ್ಲಣಗಳಿಂದ ತತ್ತರಿಸುತ್ತ ಪರಿಹಾರಕ್ಕಾಗಿ ಹಾತೊರೆಯುತ್ತ ಹತ್ತುಕಡೆ ನೋಡುತ್ತೇನೆ. ಭಾಷೆಯ ಕಡೆಯೂ ನೋಡುತ್ತೇನೆ. ನನ್ನ ಯೋಚನೆಗಳು ಈ ನಿಲುವಿನಿಂದ.

ಸುಮಾರು ೨೫-೩೦ ಸಾವಿರ ವರ್ಷಗಳ ಹಿಂದಿನ ಗುಹಾಚಿತ್ರಗಳಿಂದ ಮೊದಲುಗೊಂಡು ಮನುಷ್ಯಕುಟುಂಬವು ವಿವಿಧ ಭಾಷೆಗಳನ್ನು ನಿರ್ಮಿಸಿಕೊಳ್ಳುತ್ತ ಬಂದಿದೆ ಮತ್ತು ಆ ಮೂಲಕ ಪರಸ್ಪರ ಅನುಭವಸಂಬಂಧಗಳನ್ನು ಕಲ್ಪಿಸಿಕೊಳ್ಳುತ್ತ ಬಂದಿದೆ. ಈಚಿನ ಒಂದೆರಡು ಶತಮಾನಗಳಲ್ಲಿ ನಾವು, ಹೊಸ ವೈಜ್ಞಾನಿಕ ಸಾಧನಗಳ ಮೂಲಕ ಅತಿ ಪ್ರಾಚೀನವಾದ ವಿವಿಧ ಭಾಷೆಗಳಿಗೆ ಹೊಸ ವ್ಯಾಪ್ತಿಶಕ್ತಿಯನ್ನು ಕಲ್ಪಿಸಿ 'ಸಮೂಹಮಾಧ್ಯಮ'ಗಳೆಂಬುವನ್ನು ರೂಪಿಸಿಕೊಂಡಿದ್ದೇವೆ. ಅಲ್ಲದೆ, ಈ ಶತಮಾನದಲ್ಲಿ ಹೊಸ ಹೊಸ ಭೌತಿಕ ಶೀಘ್ರ ಸಂಪರ್ಕಸಾಧನಗಳು ಸಂಶೋಧಿತವಾಗಿ ಅಪಾರ ವೇಗದಲ್ಲಿ ಹಬ್ಬಿಕೊಂಡವು. ಇಡೀ ಜಗತ್ತು ಒಂದು ಗ್ರಾಮ ಎನ್ನುವ ಕಲ್ಪನೆ ಮೂಡಿತು.

ಹೀಗೆ ಒಂದು ಕಡೆ, ಭಾಷಾಸಂಪರ್ಕ ಭೌತಿಕ ಸಂಪರ್ಕಗಳಿಂದ ರಾಷ್ಟ್ರಜನಾಂಗಗಳು ಸಮೀಪವಾಗುತ್ತಿದ್ದರೆ ಇನ್ನೊಂದು ಕಡೆ, ಇಂಥ ಸಂಪರ್ಕಸಂಸ್ಕೃತಿಯು ವ್ಯಾಪಕವಾಗಿ ಆವರಿಸಿದ ಪಶ್ಚಿಮದ ನೆಲದಲ್ಲೇ ಕೇವಲ ೩೦ ವರ್ಷಗಳ ಅವಧಿಯಲ್ಲಿ ಇತಿಹಾಸ ಯಾವತ್ತೂ ಕಾಣದಂಥ ಎರಡು ಭಯಂಕರ ಜಾಗತಿಕ ಮಹಾಯುದ್ಧಗಳು ಸಂಭವಿಸಿದವು. ಒಂದು ಕಡೆ, ಇನ್ನೇನು ಹಳೆಯ ಶಬ್ದಾಕ್ಷರ ಸಂಸ್ಕೃತಿಯು ನಶಿಸಿ ಹೊಸ ದೃಶ್ಯಶ್ರವಣ ಸಂಸ್ಕೃತಿಯು ಬೆಳೆದು ಮಾನವಜನಾಂಗ ಇನ್ನೊಂದು ಮೇಲಿನ ಘಟ್ಟವನ್ನೇರಿಕೊಳ್ಳುತ್ತದೆ ಎಂಬ ಆಸೆ ಚಿಗುರುತ್ತಿದ್ದಾಗ ಇನ್ನೊಂದು ಕಡೆ, ಅಮಾನವೀಯ ನಾಗರಕ ಬರ್ಬರ ಸಂಸ್ಕೃತಿ ಹಬ್ಬಿಕೊಳ್ಳುತ್ತ ನಡೆದಿದೆ.

ಈತನಕ ಪಶ್ಚಿಮದಲ್ಲಿ ಹಬ್ಬಿದ್ದ ಇಂಥರೋಗವು ಈಗ ಇಂಡಿಯಾವನ್ನು ಆಕ್ರಮಿಸುತ್ತಿದೆ. ಇಂಥ ಸಂದರ್ಭದಲ್ಲಿ, ಸಂಪರ್ಕ ಸಾಧನಗಳನ್ನೂ ನಾವು ಯಾವ ನೆಲೆಯಿಂದ ಗುರುತಿಸಿಕೊಳ್ಳುತ್ತೇವೆ ಮತ್ತು ಅದನ್ನು ಹೇಗೆ ನಮ್ಮ ಸ್ವಾಸ್ಥ್ಯ ಸ್ಥಾಪನೆಗೆ ಬಳಸಿಕೊಳ್ಳುತ್ತೇವೆ ಅನ್ನುವುದು ಮುಖ್ಯವಾಗುತ್ತದೆ. ಈ ದಿಶೆಯಲ್ಲಿ ನಮ್ಮ ಭಾರತೀಯ ಭಾಷಾತತ್ತ್ವ ಚಿಂತನೆಗಳು ಎಷ್ಟು ಪ್ರಯೋಜಕವಾದಾವು ಅನ್ನುವುದನ್ನೂ ನಾವು ನೋಡಿಕೊಳ್ಳಬೇಕಾಗಿದೆ.

ಹೀಗೆ ಭಾಷೆಗಳನ್ನು ನಮ್ಮ ಇವತ್ತಿನ ಬದುಕಿನ ನೆಲೆಯಲ್ಲಿ ಪರಿಭಾವಿಸಿಕೊಳ್ಳುವ, ನಮ್ಮ ಪ್ರಜಾಪ್ರಭುತ್ವ, ಪಾರ್ಲಿಮೆಂಟು, ವಿಕೇಂದ್ರಿಕರಣ, ಪಂಚಾಯತಿ ಆಡಳಿತ ಮುಂತಾದ ಪ್ರಯತ್ನಗಳ ಜತೆಯಲ್ಲಿ ಸಮೀಕೃತವಾಗಬಹುದಾದ ಹೊಸ ಬಗೆಯ ಸಂಪರ್ಕವ್ಯವಸ್ಥೆಯನ್ನು ರೂಪಿಸಿಕೊಳ್ಳುವ, ಸ್ವಾತಂತ್ರ್ಯ ಸಮತ್ವಗಳ ಸಮಾಜವನ್ನು ರೂಢಿಸಿಕೊಳ್ಳುವ ದಿಶೆಯಲ್ಲಿ ಕಿಂಚಿತ್ ಯೋಚಿಸಿ, ಚರ್ಚಿಸಿಕೊಳ್ಳಬೇಕಾಗುವುದು.

* * *

ಕನ್ನಡದ ಪ್ರಾದೇಶಿಕ ಉಪಮಾದರಿಗಳು

ಅಂಬಳಿಕೆ ಹಿರಿಯಣ್ಣ

ಇಂಗ್ಲಿಷಿನ oicotypeಗೆ ಸಂವಾದಿಯಾಗಿ ಕನ್ನಡದಲ್ಲಿ 'ಪ್ರಾದೇಶಿಕ ಉಪ ಮಾದರಿ' ಎಂಬ ಪ್ರಯೋಗ ಬಳಕೆಯಾಗುತ್ತದೆ. ಪ್ರಾದೇಶಿಕ ಉಪಮಾದರಿ ಎಂದರೆ ಒಂದು ಗೊತ್ತಾದ ಸಾಮಾಜಿಕ ಗುಂಪು ಅಥವಾ ಪ್ರದೇಶದಲ್ಲಿ ಪ್ರಚಲಿತವಿರುವ ವಿಶಿಷ್ಟ ಜನಪದ ಕಥಾಮಾದರಿ. ಕನ್ನಡದ ಪ್ರಾದೇಶಿಕ ಉಪಮಾದರಿ ದಕ್ಷಿಣ ಭಾರತದ ಕಥಾಮಾದರಿಯೇ ಆಗಿದೆ. ಅದೇನೇ ಇರಲಿ, ಕನ್ನಡಕ್ಕೇ ವಿಶಿಷ್ಟವಾದ ಒಂದು ಕಥೆ ಹೇಳುವ ಮಾದರಿ ಅಸ್ತಿತ್ವದಲ್ಲಿದೆಯೆ ಎಂಬುದು ಪ್ರಶ್ನೆ. ಕನ್ನಡದ ಪ್ರಾದೇಶಿಕ ಉಪಮಾದರಿಗಳ ಬಗೆಗಿನ ನಮ್ಮ ತಿಳಿವಳಿಕೆ ಅತ್ಯಲ್ಪವಾದುದು.

ಪ್ರಾದೇಶಿಕ ಉಪಮಾದರಿಗಳ ಕುರಿತ ಅಧ್ಯಯನ ಇನ್ನೂ ಶೈಶವಾವಸ್ಥೆಯಲ್ಲಿದ್ದರೂ ಕೆಲವೇ ಕೆಲವು ಉಪಯುಕ್ತ ಅಧ್ಯಯನಗಳು ಈಗಾಗಲೇ ನಡೆದಿವೆ. ಉತ್ತರ ಅಮೆರಿಕೆಯ ಜನಪದ ಕಥಾ ಮಾದರಿಗಳಿಗೆ ಸಂಬಂಧಿಸಿದಂತೆ ನಡೆದಿರುವ ಅಧ್ಯಯನ ಕನ್ನಡದ ಕಥಾ ಮಾದರಿಗಳ ಬಗೆಗೆ ನಿರ್ಣಯಗಳನ್ನು ರೂಪಿಸಲು ಸಹಾಯಕವಾಗಿದೆ.

ಹೊಸ ಜಗತ್ತಿನ ಕಥಾಮಾದರಿಗಳನ್ನು ತೌಲನಿಕವಾಗಿ ಅಭ್ಯಸಿಸಿರುವ ಬೌಮನ್(೧೯೬೬) 'ಅಳತೆ ಮೀರಿದ ಕಥೆ'ಗಳನ್ನು ಅಮೆರಿಕನ್ ಮಾದರಿಯವು ಎಂದು ಗುರುತಿಸಿದ್ದಾನೆ. ಅಲ್ಲದೆ ಅಮೆರಿಕನ್ 'ಅನೃತ ಕಥೆ' ಗಳನ್ನು ಯುರೋಪಿಯನ್ ಜನಪದ ಕಥಾಪರಂಪರೆಯಲ್ಲಿ ಈಗಾಗಲೇ ಪ್ರಚಲಿತದಲ್ಲಿರುವ ಅತಿರಂಜಕ ಶೈಲಿಯವು ಎಂದು ಹೇಳಿದ್ದಾನೆ. ಆತನ ಪ್ರಕಾರ, ಈ ಅತಿರಂಜಕತೆ ಅಮೆರಿಕೆಯ ಈಗಿನ ಹೊಸ ಜಾಗತಿಕ ಹಿನ್ನೆಲೆಯ ಭೌತಿಕ, ಬೌದ್ಧಿಕ ಹಾಗೂ ಭಾವನಾತ್ಮಕ ಸನ್ನಿವೇಶದಿಂದ ಪ್ರೇರಿತವಾದುದಾಗಿದೆ. ವಿಶಿಷ್ಟ ಕಥಾ ಮಾದರಿಗಳ ಬಗೆಗೆ ವಿಚಾರ ಮಾಡಿರುವ ರಿಚರ್ಡ್ ಎಂ. ಡಾರ್ಸನ್(೧೯೮೦). ರಾಷ್ಟ್ರೀಯ ಗುಣಸ್ವಭಾವದ ಕೆಲವು ಸ್ವಭಾವ ಲಕ್ಷಣಗಳನ್ನು ಸ್ಥೂಲವಾಗಿ ಪರಿಚಯಿಸುತ್ತಾ 'ಪ್ರಾದೇಶಿಕ ಉಪಮಾದರಿ' ಎಂಬ ಪರಿಭಾಷೆಯನ್ನು ಪ್ರಯೋಗಿಸದೆ ಅಮೆರಿಕನ್ ಆಶೋತ್ತರದ ಅನನ್ಯತೆಯನ್ನು ಒತ್ತಿ ಹೇಳಿದ್ದಾರೆ. ಡಾರ್ಸನ್ ಪ್ರಕಾರ ಅಮೆರಿಕನ್

ಜಾನಪದಕ್ಕೆ ದ್ವಂದ್ವ ಗುಣಗಳಿವೆ: ೧. ಒಟ್ಟು ಉತ್ಪ್ರೇಕ್ಷೆ ಮಾಡಿ ಹೇಳುವುದು ಹಾಗೂ ೨. ಔದ್ಯಮಿಕ ರಂಗದ ಪ್ರತಿಷ್ಠೆಯನ್ನು ಅತಿಶಯಗೊಳಿಸಿಕೊಳ್ಳುವುದು. ಈ ಗುಣಗಳನ್ನು ಸ್ವಯಂ ಘೋಷಿತ ಧೀರ ನಾಯಕರ ಕಥೆಗಳಲ್ಲಿ ಹಾಗೂ ಆಧುನಿಕ ಕಾಲದ ವಿಕ್ರಮ, ಚಾತುರ್ಯಗಳನ್ನು ನಿರೂಪಿಸುವ ಕಥೆಗಳಲ್ಲಿ ಗುರುತಿಸಬಹುದು ಎಂದು ಹೇಳಿದ್ದಾರೆ.

ಬೌಮನ್ ಮತ್ತು ಡಾರ್ಸನ್-ಇಬ್ಬರೂ ಜನಪದ ಕಥಾಮಾದರಿಗಳ ವಿಶಿಷ್ಟಾಂಶಗಳನ್ನು ಗುರುತಿಸಲು ಚಾರಿತ್ರಿಕ ಪರಂಪರೆಯ ಅರಿವು ಅಗತ್ಯ ಎಂದು ಪ್ರತಿಪಾದಿಸಿರುವುದು ಗಮನಾರ್ಹ. ಇದೇ ಕಾರಣಕ್ಕಾಗಿ, ಕರ್ನಾಟಕ ಪ್ರದೇಶದ ಹಿಂದಣ ಸಾಮಾಜಿಕ ಅನುಭವಗಳಿಗೆ ಕೊಂಡಿ ಬೆಸೆಯುವ ವಸ್ತುಗಳ ಕಡೆ ವಿಶೇಷ ಗಮನಹರಿಸುವ ಅಗತ್ಯವಿದೆ. ಕನ್ನಡ ಜಾನಪದದಲ್ಲೂ ಹಳೆಯ ಧಾರ್ಮಿಕ ಹಾಗೂ ರಾಜಕೀಯ ಸ್ಪರ್ಧೆಗಳ ಉಲ್ಲೇಖಗಳು ಹೇರಳವಾಗಿವೆ. ಅಂತೆಯೇ ಡಕಾಯಿತಿ ಹಾಗೂ ಕಳ್ಳತನ ಕುರಿತ ಕಥೆಗಳೂ ಅಲ್ಲಲ್ಲಿ ವಿಜೃಂಭಿಸಿವೆ. ಆದರೆ ಅಮೆರಿಕನ್ ಕಲ್ಪನೆಯ 'ಅತಿಶಯತೆ'ಗೆ ಬದಲಾಗಿ ಇಲ್ಲಿ ಸಾಂಸ್ಕೃತಿಕ ವೀರರನ್ನು ಸ್ಥಳೀಯಕರಣಗೊಳಿಸಿ 'ಮೆರೆಸುವ' ಪ್ರವೃತ್ತಿ ಕಂಡು ಬರುತ್ತದೆ. ಗಣ್ಯ ಸಾಂಸ್ಕೃತಿಕ ವೀರರನ್ನು ಮೆರೆಸುವ ಸಾಮಾನ್ಯ ಪ್ರವೃತ್ತಿಗೆ ಜನಪದ ಮಹಾಭಾರತ ಮತ್ತು ರಾಮಾಯಣ ಪ್ರಸಂಗಗಳು ಉತ್ತಮ ನಿದರ್ಶನಗಳೆನಿಸಿವೆ. ಅದರಲ್ಲೂ ಕನ್ನಡ ಜನಪದ ಕಥೆಗಳು ಸ್ಥಳೀಯ ಧರ್ಮ ಮತ್ತು ಪುರಾಣಗಳೊಡನೆ ನಿಕಟ ಸಂಬಂಧ ಸಾಧಿಸಿರುವುದನ್ನು ನೋಡಬಹುದು. ಈ ಕಾರಣಕ್ಕಾಗಿ ಕನ್ನಡದ ಪ್ರಾದೇಶಿಕ ಉಪ ಮಾದರಿಗಳನ್ನು ಅಮೆರಿಕನ್ ಕಲ್ಪನೆಯ 'ಅತಿಶಯತೆ' ಗೆ ಬದಲಾಗಿ ಪುರಾಣೀಕರಣಗೊಳಿಸುವ ಪ್ರವೃತ್ತಿ ಎನ್ನಬಹುದು. ಅಮೆರಿಕನ್ ಕಥಾಮಾದರಿಗಳೆಲ್ಲಾ ಸ್ಪಷ್ಟವಾಗಿ ಭವಿಷ್ಯನಿಷ್ಠವಾದರೆ ಕನ್ನಡದ ಮಾದರಿಗಳು ಬಹುಮಟ್ಟಿಗೆ ಗತದೊಂದಿಗೆ ತಮ್ಮನ್ನು ಗುರುತಿಸಿಕೊಳ್ಳಲು ಹೆಣಗಾಡುವುದು ವಿಶೇಷ.

ಈ ವ್ಯತ್ಯಾಸಗಳು ಕನ್ನಡ ಜನಪದ ಕಥಾ ಮಾದರಿಗಳ ಅಧ್ಯಯನಕ್ಕೆ ಕೆಲವು ಮಹತ್ವದ ಸುಳಿವುಗಳನ್ನು ಒದಗಿಸುತ್ತವೆ. ಪ್ರಾದೇಶಿಕ ಉಪಮಾದರಿಗಳನ್ನು ಗುರುತಿಸುವಾಗ ಆ ಮೂಲಕ ಬೇರೆ ಬೇರೆ ಸಾಮಾಜಿಕ ಗುಂಪುಗಳಲ್ಲಿ ಕಾಣಸಿಗದ ಸದೃಶ ಕಥಾರೂಪಗಳನ್ನು ತುಲನಾತ್ಮಕವಾಗಿ ನೋಡುವಾಗ ಕಥೆಯ ಯಾವ ಮುಖಗಳು ಸಾರ್ವತ್ರಿಕವಾದವು, ಯಾವ ಧೋರಣೆ ಮತ್ತು ಮೌಲ್ಯಗಳು ನಿರ್ದಿಷ್ಟವಾಗಿ ಅಭಿವ್ಯಕ್ತಿ ಪಡೆಯುತ್ತವೆ ಎಂಬುದನ್ನು ತಿಳಿಯಲು ಸಾಧ್ಯವಾಗುತ್ತದೆ. ಒಂದು ಗೊತ್ತಾದ ಸಂಸ್ಕೃತಿಯಿಂದ ಸ್ವೀಕೃತಗೊಂಡ ಕತೆ ಆ ಪರಿಸರಕ್ಕೆ ಸರಿ ಹೊಂದುವಂತೆ ಪರಿವರ್ತನೆಗೊಂಡಿದೆಯೆ ಇಲ್ಲವೆ ಎಂಬುದನ್ನು ಸ್ಥಿರೀಕರಿಸಲು ಸಾಧ್ಯವಾಗುತ್ತದೆ. ಅದೇ ರೀತಿಯಾಗಿ, ಹೇಗೆ ವಿಭಿನ್ನ ಸಾಮಾಜಿಕ ಗುಂಪುಗಳು ತಮ್ಮ ಮನಸ್ಥಿತಿಗನುಗುಣವಾಗಿ, ಲೋಕದೃಷ್ಟಿಗನುಗುಣವಾಗಿ ಕತೆಯನ್ನು ಹೊಂದಿಸಿ ಕೊಳ್ಳುತ್ತಾರೆಂಬುದನ್ನು ನೋಡಲು ಕೂಡ ಅದರಿಂದ ಅನುಕೂಲವಾಗುತ್ತದೆ. ಒಟ್ಟಿನಲ್ಲಿ ಪ್ರಾದೇಶಿಕ ಉಪ ಮಾದರಿಗಳನ್ನು ಗುರುತಿಸುವುದೆಂದರೆ ಮಾನವ ಮನಸ್ಸಿನ ಸಾರ್ವತ್ರಿಕ ಲಕ್ಷಣಗಳು ಹಾಗೂ ಸ್ಥಳೀಯ ಸಂಸ್ಕೃತಿಗಳ ನಡುವಿನ ಒಳ ಪಾತ್ರವನ್ನು ಅರಿಯುವುದು ಎಂದರ್ಥ.

ಪ್ರಾದೇಶಿಕ ಉಪಮಾದರಿಗಳನ್ನು ಕುರಿತು ಚರ್ಚಿಸಲು ಅಲನ್ ಡಂಡೆಸ್(೧೯೭೫) ಪ್ರಸ್ತಾಪಿಸಿರುವ 'ಕಥಾ ಚೌಕಟ್ಟು' (Frame) ಪರಿಕಲ್ಪನೆ ಬಹು ಉಪಯುಕ್ತವಾಗಿ ಕಾಣುತ್ತದೆ. ಆ ಪರಿಕಲ್ಪನೆ ಪ್ರಕಾರ ಒಂದು ಗೊತ್ತಾದ ಗುಂಪು ಅಥವಾ ಪ್ರದೇಶದ ಕಥೆಗಳು ಆದರಲ್ಲಿ ಅಳವಡುತ್ತವೆ. ಕಥೆಯೊಂದರ ಘಟನೆಗಳಿಗೆ ವಿರುದ್ಧವಾದ, ಸಾಮಾನ್ಯವಾದ ಸಾಂಸ್ಕೃತಿಕ ಧೋರಣೆಗಳ ಹಿನ್ನೆಲೆಯನ್ನು ಈ ಚೌಕಟ್ಟು ಒದಗಿಸುತ್ತದೆ. ಉದಾಹರಣೆಗೆ ಡಂಡೆಸ್ ಪೂರ್ವ ಆಫ್ರಿಕೆಯ ಕಥೆಗಳನ್ನು ಕುರಿತು ಚರ್ಚಿಸುವಾಗ ಅವುಗಳಲ್ಲಿ ಹೆಚ್ಚಿನವು ಗೆಳೆತನದ ಚೌಕಟ್ಟಿನ ವ್ಯಾಪ್ತಿಯಲ್ಲಿ ಬರುತ್ತವೆ ಎಂದು ತೋರಿಸಿಕೊಟ್ಟಿದ್ದಾರೆ. ಸಾಮಾನ್ಯವಾಗಿ ಕತೆಯಲ್ಲಿ ಎರಡು ಪಾತ್ರಗಳು ಗೆಳೆತನವನ್ನು ಸಾಧಿಸಿಕೊಳ್ಳುತ್ತವೆ. ಆದರೆ ಕ್ರಮೇಣ ಈ ಗೆಳೆತನವನ್ನು ದುರುಪಯೋಗಪಡಿಸಿಕೊಳ್ಳುವುದೊ ವಂಚಿಸುವುದೊ ಕಾಣಸುತ್ತದೆ. ಅನೇಕ ಕಾರಣಗಳಿಂದ ಗೆಳೆತನ ಮುರಿದು ಬೀಳಬಹುದು. ಒಟ್ಟಿನಲ್ಲಿ ಗೆಳೆತನ ಪ್ರಬಲವಾಗಿ ರೂಪುಗೊಳ್ಳುವ ಹಾಗೂ ದುರ್ಬಲಗೊಳ್ಳುವ ಪರಿಯನ್ನು ವಿವಿಧ ಭಿನ್ನರೂಪಗಳಲ್ಲಿ ಆದರೆ ಒಂದೇ ವಿಶಾಲ ಪೂರ್ವ ಆಫ್ರಿಕನ್ ವಸ್ತುವಿನಲ್ಲಿ ವ್ಯಕ್ತಗೊಳ್ಳುವುದನ್ನು ಕಾಣುತ್ತೇವೆ ಎಂದು ಡಂಡೆಸ್ ಪ್ರತಿಪಾದಿಸಿದ್ದಾರೆ(೧೯೭೫).

ಥಾಮ್ಸನ್ ಕಥಾ ಮಾದರಿಗಳ ಮುಂದುವರಿದ ಉಪಯುಕ್ತ ಅಧ್ಯಯನ ನಡೆಸಿರುವ ಬ್ರೆಂಡಾ ಬೆಕ್(೧೯೮೦) ಅವರು ಒಂದೇ ತೆರನ ನಾಲ್ಕು ಕಥಾ ಚೌಕಟ್ಟುಗಳ ಅಸ್ತಿತ್ವವನ್ನು ಕುರಿತು ವಿವೇಚಿಸಿರುವುದು ಗಮನಾರ್ಹ. ಬೆಕ್ ಪ್ರಕಾರ, ಆ ನಾಲ್ಕು ಕಥಾ ಚೌಕಟ್ಟುಗಳೆಂದರೆ ೧. ಕುಲ ಬಂಧನ ೨. ಪೋಷಕ ಕಕ್ಷಿದಾರನ ಬಂಧನ ೩. ವಿರೋಧಿಯ ಬೆದರಿಕೆ ೪. ವೈಯಕ್ತಿಕ ಆಸೆಯ ಬಲದಿಂದ ಕ್ರಿಯಾಚರಣೆಗಳಲ್ಲಿ ತೊಡಗುವುದು. ಈ ನಾಲ್ಕೂ ಕಥಾ ಚೌಕಟ್ಟುಗಳು ಥಾಮ್ಸನ್ ಸೂಚಿಯಲ್ಲಿ ವರ್ಣಿತವಾಗಿರುವ ನಿರ್ದಿಷ್ಟ ಕಥಾನಮೂನೆಗಳ ಬಗೆಗೆ ಸ್ಪಷ್ಟ ತೀರ್ಮಾನಕ್ಕೆ ಬರಲು ನೆರವಾಗುತ್ತವೆ.

ವಾಸ್ತವವಾಗಿ, ಈ ನಾಲ್ಕೂ ಚೌಕಟ್ಟುಗಳು ಭಾರತೀಯ ಮೌಲ್ಯಗಳ ಮೂಲಭೂತ ವರ್ಗಕ್ಕೆ ಸೇರುತ್ತವೆ. ಭಾರತೀಯ ಸಂಸ್ಕೃತಿಯಲ್ಲಿ ಹೆಚ್ಚು ಒತ್ತು ಇರುವುದು ಕುಲಗಳ ನಡುವಿನ ಸಂಬಂಧದ ಮರ್ಯಾದೆ ಮತ್ತು ವರ್ಧನೆಗೆ. ಪರಸ್ಪರರ ಮೇಲೆ ಹುಟ್ಟಿನಿಂದ ಅಸ್ತಿತ್ವದಲ್ಲಿರುವ ಆರೋಪಿತ ಬಾಂಧವ್ಯಗಳನ್ನು ಕಥಾಸಂದರ್ಭದಲ್ಲಿ ಎತ್ತಿ ಹಿಡಿಯಲಾಗಿದೆ. ಇಲ್ಲವೆ ಅನುಚಿತ ನಡವಳಿಕೆಯಿಂದ ಭಗ್ನಗೊಳಿಸಲಾಗಿದೆ. ಇದೇ ರೀತಿಯಾಗಿ ಭಾರತೀಯ ಕಥೆಗಳಲ್ಲಿ ಪೋಷಕ ಕಕ್ಷಿದಾರನ ಶ್ರೇಣೀಕರಣ ಸಂಬಂಧ ಹೆಚ್ಚು ಮೌಲಿಕವಾಗಿದೆ. ಹಿರಿಯವನು ರಕ್ಷಕನೂ ದಾನಿಯೂ ಆಗಿದ್ದರೆ ಕಿರಿಯವನು ಅರ್ಪಣಾ ಮನೋಭಾವದವನೂ ನಮ್ರ ಸ್ವಭಾವದವನೂ ಆಗಿರುತ್ತಾನೆ. ಈ ಬಂಧನ ಕೂಡ ಕೆಲವೊಮ್ಮೆ ಕಥೆಯೊಂದರಿಂದ ಎತ್ತಿ ಹಿಡಿಯಲ್ಪಡಬಹುದು ಇಲ್ಲವೆ ಮುರಿದು ಬಿದ್ದಂತೆ ತೋರಿಸಬಹುದು. ಗೆಳೆತನ ಸಹ ಶ್ರೇಣೀಕರಣಾತ್ಮಕ ಹಾಗೂ ಗೌರವಾರ್ಥಕ ಗುಣವನ್ನು ಸಾಧಿಸಿಕೊಳ್ಳಬಹುದು. ಆದರೆ, ಮೊದಲನೆಯ ಕಥಾ ಚೌಕಟ್ಟಿನಲ್ಲಿ ವರ್ಣಿತಗೊಳ್ಳುವ ಕುಲ ಬಂಧನದಿಂದ ಅವು ಸಂಪೂರ್ಣ ಭಿನ್ನ.

ಕಥಾ ಚೌಕಟ್ಟು ಮೂರು ಮತ್ತು ನಾಲ್ಕು ಸ್ವಭಾವದಲ್ಲಿ ಮೊದಲ ಎರಡರಿಂದ ಭಿನ್ನ. ಕಥಾ ಚೌಕಟ್ಟು ಮೂರರಲ್ಲಿ ನಾಯಕನು ಅನಿರೀಕ್ಷಿತವಾದ ಆಕ್ರಮಣ ವಿರೋಧವನ್ನು

ಎದುರಿಸಬೇಕಾಗುತ್ತದೆ. ಅವನು ದೆವ್ವಭೂತ, ಕಳ್ಳಕಾಕರ ವಿರುದ್ಧ ಸಮರಸಾರಿ ತನ್ನನ್ನು ತಾನು ರಕ್ಷಿಸಿಕೊಳ್ಳಬೇಕಾಗುತ್ತದೆ. ಹಿಂದಿನ ಎರಡು ಕಥಾ ಚೌಕಟ್ಟುಗಳಲ್ಲಿದ್ದಂತೆ ಅಂಥ ಸವಾಲುಗಳನ್ನು ಎದುರಿಸುವಲ್ಲಿ ಎಲ್ಲಿ ನಾಯಕನು ಅಯಶಸ್ವಿಯಾದಂತೆ ಕಾಣುವನೊ ಅಂಥ ಕಡೆಗಳಲ್ಲಿ ಅವನನ್ನು ಜಯಶಾಲಿಯಂತೆ ಕಂಗೊಳಿಸುವಂತೆ ಮಾಡುತ್ತದೆ. ನಾಲ್ಕನೆಯ ಕಥಾ ಚೌಕಟ್ಟಿನಲ್ಲಿ ನಾಯಕನ ಸಂಬಂಧ ಯಾವುದೇ ನಿರ್ದಿಷ್ಟ ಪಾತ್ರದೊಂದಿಗಿರುವುದಿಲ್ಲ. ಬದಲಿಗೆ ವ್ಯಕ್ತಿಯೊಬ್ಬನ ಬಯಕೆಗಳ ಸುತ್ತ ಕೇಂದ್ರೀಕೃತವಾಗಿರುತ್ತದೆ. ಆ ವ್ಯಕ್ತಿ ತನ್ನ ಇಚ್ಛೆಯನ್ನು ಈಡೇರಿಸಿಕೊಳ್ಳಲು ಇಲ್ಲವೆ ಗುರಿಯನ್ನು ತಲುಪಲು, ಸಾಮಾಜಿಕ ಸಂದರ್ಭ ಯಾವುದೇ ಆಗಿರಲಿ, ತನ್ನ ಉದ್ದೇಶಿತ ಗುರಿಯನ್ನು ಸೇರಲು ಹೆಣಗಾಡುತ್ತಾನೆ. ಸ್ವಂತ ಆಸೆಯನ್ನು ನಿಗ್ರಹಿಸಿಕೊಳ್ಳಲು ಇದು ಮುಂದಾಗಿಯೇ ಎಚ್ಚರಿಕೆ ನೀಡುವುದು ವಿಶೇಷ.

ಕೆಲವು ಕಥೆಗಳು ಪ್ರಾಥಮಿಕ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿದರೆ ಮತ್ತೆ ಕೆಲವು ಮಾನವ ಸಂಬಂಧಗಳ ಪೆಡಸುತನವನ್ನು ತೆರೆದಿಡುತ್ತವೆ. ಈ ರೀತಿಯಾಗಿ ಭಾರತೀಯ ಜನಪದ ಕಥೆಗಳು ನಿರಾಶಾವಾದದೊಂದಿಗೆ ಆಶಾವಾದವನ್ನು ಸಮದೂಗಿಸುತ್ತವೆ. ಮಾನವನ ಮೂಲಭೂತವಾದ ಸಾಮಾಜಿಕ ಜವಾಬ್ದಾರಿಗಳ ಸಾಮರ್ಥ್ಯವನ್ನು ಹೇಳುತ್ತವೆ. ಬಹುತೇಕ ಸ್ನೇಹ ಸಂಬಂಧಗಳು ಅಂತಿಮವಾಗಿ ವಂಚನೆಯಿಂದ ಕಡಿದು ಹೋಗುತ್ತವೆ. ಅಮೆರಿಕನ್ ಇಂಡಿಯನ್ನರ ಕಥೆಗಳಲ್ಲಿ ಮಾನವರು ಅತಿಮಾನುಷ ಜೀವಿಗಳ ನಡುವಿನ ತಮ್ಮ ಒಪ್ಪಂದವನ್ನು ಸತತವಾಗಿ ಮುರಿಯುತ್ತಾ ಹೋದರೆ ಭಾರತೀಯ ಕಥೆಗಳಲ್ಲಿ ನಾಯಕನು ಇಂಥ ಅತಿಮಾನುಷ ಶಕ್ತಿಗಳೊಡನೆ ಕೆಲಸ ನಿರ್ವಹಿಸುತ್ತಾನೆ(ಡಂಡೆಸ್:೧೯೭೧)

ಆರ್ನೆ ಥಾಮ್ಸನ್ ಗ್ರಂಥಸೂಚಿಯು ಕಥಾವಸ್ತುವನ್ನು ನಾಲ್ಕು ದೊಡ್ಡ ಗುಂಪುಗಳಾಗಿ ಒಡೆದಿದೆ. ೧. ಪ್ರಾಣಿ ಕಥೆಗಳು ೨. ಸಾಮಾನ್ಯ ಜನಪದ ಕಥೆಗಳು ೩.ವಿನೋದಗಳು ಹಾಗೂ ಅಡ್ಡಕತೆಗಳು ೪. ಸೂತ್ರಕಥೆಗಳು. ಕಥಾಚೌಕಟ್ಟುಗಳನ್ನು ಕುರಿತ ಈ ಪ್ರಾಥಮಿಕ ಕಾರ್ಯವನ್ನು ನಿರ್ವಹಿಸುವುದಕ್ಕಾಗಿ ಬ್ರೆಂಡಾ ಬೆಕ್ ಥಾಮ್ಸನ್ ಸೂಚಿಯ ಮಾದರಿ ೩೦೦ ರಿಂದ ೧೯೯೯ ರ ವರೆಗಿನ ಮಾದರಿಗಳನ್ನು ಮಾತ್ರ ಆಯ್ದುಕೊಳ್ಳುತ್ತಾರೆ. ಈ ವ್ಯಾಪ್ತಿಯ ಕಥೆಗಳು ಮಾನವನು ಎಲ್ಲೆಲ್ಲಿ ಮುಖ್ಯ ಪಾತ್ರಧಾರಿಯೊ ಅಂಥ ಎಲ್ಲ ಕಥೆಗಳನ್ನೂ ಒಳಗೊಳ್ಳುತ್ತವೆ. ಮಾನವ ಸಂಬಂಧಿ ಕಥೆಗಳಿಗೆ ಒಮ್ಮೆ ಒಂದು ಸರ್ವಸಮ್ಮತವಾದ ಕಥಾ ಚೌಕಟ್ಟನ್ನು ಕಂಡುಕೊಂಡರೆ ಉಳಿದವನ್ನು ಬಹು ಬೇಗ ಅರ್ಥಮಾಡಿಕೊಳ್ಳಬಹುದು. ಈ ಕಾರಣದಿಂದಾಗಿಯೇ ಪ್ರಾಣಿಸಂಬಂಧೀ ಕಥೆಗಳು ಮಾನವನ ನೈತಿಕ ಸಮಸ್ಯೆಗಳ ಸುತ್ತ ಸುತ್ತುತ್ತಿರುತ್ತವೆ (ಆಮೇಲೆ ಅದು ಮಾನವೇತರ ಕ್ಷೇತ್ರದ ಮೇಲೆ ಪರಿಣಾಮ ಬೀರುತ್ತದೆ).

ಅನೇಕ ಮಾನವಶಾಸ್ತ್ರಜ್ಞರು, ಚರಿತ್ರಕಾರರು, ತತ್ವಶಾಸ್ತ್ರಜ್ಞರು ಮತ್ತು ಮನೋವಿಜ್ಞಾನಿಗಳು ಭಾರತೀಯ ಮಾದರಿಗಳನ್ನು ಗುರುತಿಸಲು ಯತ್ನಿಸಿರುವುದುಂಟು. ಬಹಳ ಕೆಲವೇ ಮಂದಿ ಈ ಮಹತ್ವದ ಸಮಸ್ಯೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಕೆಲಸ ಮಾಡಿದರು. ಆರ್ನೆ ಥಾಮ್ಸನ್ ಕಥಾಮಾದರಿ ಸೂಚಿ ಈ ಸಮಸ್ಯೆಯ ಮೇಲೆ ಕೆಲಸ ಮಾಡಲು ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿತು. ಥಾಮ್ಸನ್ ಸೂಚಿಯ ದತ್ತ ಸಾಮಗ್ರಿ ೨೬೬ ಪ್ರಕಟಿತ ಸಂಕಲನಗಳು ಹಾಗೂ ಬಿಡಿಬರಹಗಳನ್ನು ಒಳಗೊಳ್ಳುತ್ತದೆ. ಪ್ರತಿಯೊಂದು ಆಕರ ಕೂಡ ಕೆಲವು ಆಯ್ದ ಭಾರತೀಯ ಜನಪದ ಕಥೆಗಳನ್ನು ಇಂಗ್ಲಿಷಿನಲ್ಲಿ ಪುನರ್

ನಿರೂಪಿಸುತ್ತದೆ. ಈ ಸೂಚಿಯಲ್ಲಿ ಪ್ರಸ್ತಾವಗೊಂಡಿರುವ ಬಹುತೇಕ ಪ್ರಕಟಣೆಗಳು ಸ್ವಾತಂತ್ರ್ಯಪೂರ್ವ ಮಾನವಕುಲಶಾಸ್ತ್ರೀಯ ಕಾರ್ಯವನ್ನು ಅವಲಂಬಿಸಿವೆ. ಕೆಲವು ಸಂಪುಟಗಳು ೧೯ನೆಯ ಶತಮಾನದಷ್ಟು ಹಳೆಯವು. ಬಳಸಿಕೊಂಡ ಸಂಕಲನಗಳಲ್ಲಿ ಕೆಲವು ಉನ್ನತ ಗುಣಮಟ್ಟದವಾದರೆ ಹಲವು ಕಳಪೆಯವು. ಆಕರ ಸಾಮಗ್ರಿಯ ಆಯ್ಕೆಯಲ್ಲಿ ಥಾಮ್ಸನ್ ಆಯ್ಕೆಯನ್ನು ಟೀಕಿಸುವುದು ಸುಲಭ; ಎಷ್ಟೋ ವೇಳೆ ಕಥಾ ಮಾದರಿಗಳನ್ನು ಟೀಕಿಸುವುದು ಕೂಡ ಸುಲಭ. ಈ ಕಾರಣಕ್ಕಾಗಿ ಇಲ್ಲಿ ಕನ್ನಡದ ಅಪೂರ್ವ ಕಥಾ ಮಾದರಿಗಳ ಕೂಲಂಕಷ ಶೋಧಕ್ಕೆ ಒಂದು ಆರಂಭಿಕ ಪ್ರಯತ್ನ ಮಾಡಿದೆ.

ಈ ಕೆಳಗೆ ಪ್ರಸ್ತಾಪ ಮಾಡಿರುವ ಕಥಾ ಚೌಕಟ್ಟುಗಳು ಕನ್ನಡಕ್ಕೇ ವಿಶಿಷ್ಟವಾದ ಪ್ರಾದೇಶಿಕ ಉಪಮಾದರಿಗಳನ್ನು ಕಂಡುಕೊಳ್ಳಲು ಉತ್ತಮ ಸಾಧನಗಳಾಗಿವೆ.

ಪಟ್ಟಿಕೆ ೧: ನಾಲ್ಕು ಕಥಾ ಚೌಕಟ್ಟುಗಳು

	ಆರ್ನೆ ಥಾಮ್ಸನ್ ಮಾದರಿ ಸೂಚಿಯ ಕಥಾ ಮಾದರಿ ಸಂಖ್ಯೆಗಳು	
ಕಥಾ ಚೌಕಟ್ಟುಗಳು	ನಾಯಕನಿಗೆ ಸಹಾಯಕವಾಗಿ ಬರುವ ಫಲಶ್ರುತಿ	ನಾಯಕನ ಅಯಶಸ್ಸಿಗೆ ಕಾರಣವಾಗುವ ಫಲಶ್ರುತಿ
೧. ಕುಲಬಂಧನ	450A, 567A, 897	315A, 780A, 923B, 976A, 1633
೨. ಪೋಷಕ / ಕಕ್ಷಿದಾರನ ಬಂಧನ	302B, 465D, 516A, 534, 535, 546, 622, 670A, 674, 709A, 910H, 939, 949, 978, 11640	875E, 875B2, 875B3, 1532, 1534A, 1692, 1693, 1707
೩. ವಿರೋಧಿಯ ಬೆದರಿಕೆ	655A, 926A, 934D, 951C, 1152, 1646 1653E	910 J, 1168B, 1525N, 1962A
೪. ವೈಯಕ್ತಿಕ ಆಕಾಂಕ್ಷೆಯ ಬಲದಿಂದ ಕ್ರಿಯಾಶೀಲರಾಗುವುದು	411, 413, 433C,459 467,516B, 653B, 855 856, 881A, 888A, 977 1609C, 1525Q	369, 462, 612A, 896, 926B, 1250B, 1295B, 1331B, 1511, 1685A

ಇಬ್ಬರು ಅಥವಾ ಇಬ್ಬರಿಗಿಂತ ಹೆಚ್ಚು ಮಂದಿ ಸೋದರರು ಒಂದಾದ ಮೇಲೊಂದರಂತೆ ಹಲವಾರು ಸಾಹಸ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಕನ್ನಡ ಜನಪದ ಕಥೆಗಳ ಒಂದು ಬಹು ಮಹತ್ವದ ಮತ್ತು ಸಾಮಾನ್ಯ ವಸ್ತುವಾಗಿದೆ. ಈ ಮಾದರಿ ಮಹಾಭಾರತ ಮತ್ತು ರಾಮಾಯಣ ಕಥೆಗಳಷ್ಟು ಹಳೆಯದು. ಸೋದರರ ಗುಂಪು ಕಥಾವಸ್ತು ಮಹಾಕಾವ್ಯ ಮತ್ತು ಸಾಹಸ ಕಥೆಗಳಲ್ಲಿ ಬೆರೆತಿದ್ದು ಅಲ್ಲಿ ಪುರುಷ ಬಂಧನಗಳು ಮತ್ತೆ ಮತ್ತೆ ಬಾಹ್ಯ ಸವಾಲುಗಳನ್ನು ಎದುರಿಸುವ ಸನ್ನಿವೇಶಗಳು ಬರುತ್ತವೆ. ಈ ಮಾದರಿಯ ಎರಡು ಲಕ್ಷಣಗಳೆಂದರೆ: ಇತರ ಸಂಸ್ಕೃತಿಗಳಿಗೆ ವೈದೃಶ್ಯವಾಗಿ, ಇಲ್ಲಿಯ ಸೋದರರು ಯಾವಾಗಲೂ ಅನ್ಯೋನ್ಯ ಜೋಡಿಗಳಾಗಿ ಕಂಡು ಬರುತ್ತಾರೆ. ಅವರ ಆಕ್ರಮಣ ಯಾವತ್ತು ಹೊರಗಿನವರ ಮೇಲೆ ಕೆಲವೊಮ್ಮೆ ದೂರದ ಸಂಬಂಧಿಗಳ ಮೇಲೂ ಆಗಬಹುದು. ಥಾಮ್ಸನ್ ಸೂಚಿಯಲ್ಲಿ ಉಲ್ಲೇಖಿತವಾಗಿರುವ ಶಾಪಗ್ರಸ್ತ ಸೋದರರು-ಕನ್ನಡ ಕಥೆಗಳಲ್ಲಿ ಸಾಂಸ್ಕೃತಿಕ ವೀರರಾಗಿ ಕಾಣಿಸಿಕೊಳ್ಳುತ್ತಾರೆ. ಅದೇ ರೀತಿಯಾಗಿ P311 ಶಾಪಗ್ರಸ್ತ ಸೋದರಿಯರು ಕೂಡ ಗಮನ ಸೆಳೆದುಕೊಳ್ಳುತ್ತಾರೆ. ಹಿರಿಯ ಅಥವಾ ಕಿರಿಯ ಸೋದರರು ಅವಳಿಗಳಾಗಿ ಚಿತ್ರಿತರಾಗುವುದು ಈ ಮಾದರಿಗಳ ವಿಶೇಷ. ಕನ್ನಡ ಕಥೆಗಳಲ್ಲಿ ಕಿರಿಯ ಸೋದರ ಕೊನೆಯಲ್ಲಿ ರಾಜನಾಗಿ ಪಟ್ಟಾಭಿಷಿಕ್ತನಾಗುತ್ತಾನೆ. ಹಿರಿಯ ಸೋದರ ಸ್ಥಾನವನ್ನು ತ್ಯಾಗ ಮಾಡುತ್ತಾನೆ.

ಈ ಹಲವಾರು ಬಂಧುಮಾದರಿಗಳು ಕುಟುಂಬದ ಆಸ್ತಿಯನ್ನು ಜಂಟಿಯಾಗಿ ನೋಡಿಕೊಳ್ಳುವ ಕರ್ನಾಟಕ ಪರಂಪರೆಯ ಮೇಲೆ ಬೆಳಕು ಚೆಲ್ಲುತ್ತವೆ. ಅವು ಜೀವನದ ಕಡೆಯ ಘಟ್ಟದಲ್ಲಿ ಘನತೆಯಿಂದ ಒಟ್ಟಾಗಿ ಬೆರೆಯುವ ಪವಿತ್ರ ಕರ್ತವ್ಯದ ಮೌಲ್ಯವನ್ನು ಪ್ರತಿಪಾದಿಸುತ್ತವೆ. ಕಥಾ ನಮೂನೆ 567A, ಮಾಂತ್ರಿಕ ಪಕ್ಷಿ ಹೃದಯ ಹಾಗೂ ಪ್ರತ್ಯೇಕಗೊಂಡ ಸೋದರರು ಅವಳಿಗಳನ್ನು ಹೊರತುಪಡಿಸಿ ಮೇಲಿನ ಎಲ್ಲ ಲಕ್ಷಣಗಳನ್ನು ಮೈಗೂಡಿಸಿಕೊಂಡಿದೆ. ಈ ಕಥಾ ನಮೂನೆಯಲ್ಲಿ ಪ್ರತಿಯೊಬ್ಬ ಸೋದರನೂ ಒಂದು ನಿರ್ದಿಷ್ಟ ಸಾಹಸ ಶ್ರೇಣಿಯಲ್ಲಿ ಕ್ರಮಿಸಬೇಕಾಗುತ್ತದೆ. ಆದರೆ ದೊಡ್ಡವನು ರಾಜನಾದ ಮೇಲೆ ಇಬ್ಬರೂ ಒಂದಾಗುತ್ತಾರೆ. ಈ ಕಥಾ ಚೌಕಟ್ಟು ವಿರೋಧಿ ಸೋದರರು ಒಂದಾಗುವುದಕ್ಕೆ ಅವಕಾಶ ಕಲ್ಪಿಸಿಕೊಡುವುದಲ್ಲದೆ ನೇರ ಸ್ಪರ್ಧೆಗೆ ಇಳಿಯದಂತೆ ಮಾಡುತ್ತದೆ. ತತ್ಫಲವಾಗಿ ಹಿರಿಯವನು ಕಿರಿಯವನಿಗೆ ತನ್ನ ರಾಜಕೀಯ ಸ್ಥಾನಮಾನಗಳನ್ನು ಬಿಟ್ಟುಕೊಡಬೇಕಾಗುತ್ತದೆ.

ಕನ್ನಡದ ಕಥೆಗಳಲ್ಲಿ ಕುಲ ಏಕತೆಯ ಆಯಾಮಗಳು ಸೋದರರಿಂದ ಸೋದರರಿಗೆ ಬಂಧಿತವಾದ ಹಕ್ಕುಗಳು ಮತ್ತು ದಾಕ್ಷಿಣ್ಯಗಳನ್ನು ಒಳಗೊಳ್ಳುತ್ತವೆ. ಹಿಂದೂ ಪರಂಪರೆ ಸಾಮಾನ್ಯವಾಗಿ ವರದಕ್ಷಿಣೆ ರೂಪದಲ್ಲಿ ಸ್ತ್ರೀಯರು ಸಂಪತ್ತನ್ನು ಹಂಚಿಕೊಳ್ಳಲು ಬಾಧ್ಯರು; ಆದರೆ ಭೂಮಿಯನ್ನಲ್ಲ ಎಂದು ತೀರ್ಪು ನೀಡುತ್ತದೆ. ಈ ವರದಕ್ಷಿಣೆ ಹಿಡುಗಿನಿಂದಾಗಿ ಸೋದರರು ಸೋದರಿಯರಿಂದ ಬಿಡುಗಡೆ ಹೊಂದುವುದು ಕಷ್ಟ. ಬದಲಿಗೆ ಅವರು

ಸೋದರಿಯರ ಕೈಗಳನ್ನು ಬಲಪಡಿಸಬೇಕಾಗುತ್ತದೆ, ಯಾವುದಾದರೂ ಕಠಿಣ ಸಮಸ್ಯೆಗಳಲ್ಲಿ ಸಿಲುಕಿಕೊಂಡಾಗ. ಸೋದರಿಯರು ಅದಕ್ಕೆ ಪ್ರತಿಯಾಗಿ ತಮ್ಮ ಸೋದರರಿಗೆ ಸಮೃದ್ಧಿಯನ್ನು ಬಯಸುತ್ತಾರೆ. ಈ ಸೋದರ/ಸೋದರಿ ಬೆಂಬಲ ಮಾದರಿ ಕನ್ನಡ ಜನಪದ ಕಥಾ ಪರಂಪರೆಯ ವಿಶಿಷ್ಟ ಮಾದರಿಯಾಗಿದೆ.

ಕಥಾ ನಮೂನೆ ೪೫೦, ಕಿರಿಯ ಸೋದರ ಮತ್ತು ಕಿರಿಯ ಸೋದರಿ ಆರ್ನೆ ಥಾಮ್ಸನ್ ಸೂಚಿಯಲ್ಲಿ ಇದರ ವಿವರವಾದ ಪ್ರಸ್ತಾಪವೇ ಇಲ್ಲ. ಆದರೆ ಕನ್ನಡದಲ್ಲಿ ಇದಕ್ಕೆ ಸಾಕಷ್ಟು ನಿದರ್ಶನಗಳಿವೆ. ಅತ್ತಿಗೆಯು ನಾದಿನಿಯನ್ನು ಅತ್ಯಂತ ಕ್ರೂರ ರೀತಿಯಲ್ಲಿ ನಡೆಸಿಕೊಳ್ಳುವ ಕಥೆಗಳಿವೆ. ಈ ನಮೂನೆ ಆರ್ನೆ ಥಾಮ್ಸನ್ ಸೂಚಿಯ ಸಂಖ್ಯೆ ೮೭೨ ರಲ್ಲಿ ದಾಖಲಾಗಿದೆ. ಅನಾಥ ಕನ್ಯೆ ಹಾಗೂ ಅವಳ ಕ್ರೂರ ನಾದಿನಿ. ಅದು ಕನ್ನಡದ ಹಲವಾರು ನಿದರ್ಶನಗಳಿಂದ ಸಮರ್ಥನೆ ಪಡೆದಿದೆ.

ಕನ್ನಡ ಜನಪದ ಕಥಾ ಸಂಚಯಗಳಲ್ಲಿ ಅವಿವಾಹಿತ ಸೋದರಿ ಮತ್ತು ಅವಳ ಹಿರಿಯ ಸೋದರರ ನಡುವಿನ ನಂಟುಗಂಟನ್ನು ವರ್ಣಿಸುವ ಕಥೆಗಳಿವೆ. ಸೋದರಿಯೊಬ್ಬಳು ಅಣ್ಣ/ ತಮ್ಮನ ಕತ್ತಿಯನ್ನು ಹರಸಬಹುದು ಇಲ್ಲವೆ ಬಹುತೇಕವಾಗಿ ಅವರ ಸಾಹಸಕಾರ್ಯಗಳಿಗೆ ಸ್ಫೂರ್ತಿ, ಪ್ರೇರಣೆ ಒದಗಿಸಬಹುದು. ಕಥಾ ನಮೂನೆ 450A, ಹಾವಾಗಿ ರೂಪಪರಿವರ್ತನೆ ಹೊಂದಿದ ಸೋದರ ಕಥೆಯಲ್ಲಿ ಸೋದರ ಮತ್ತು ಸೋದರಿ ಮಲತಾಯಿಯಿಂದ ಹೊರನೂಕಲ್ಪಡುತ್ತಾರೆ. ಹಾವನ್ನು ಕೊಲ್ಲುವುದರ ಮೂಲಕ ಸೋದರನು ಸೋದರಿಯನ್ನು ರಕ್ಷಿಸುತ್ತಾನೆ. ಆ ಹಾವಿನ ದೇಹದಿಂದ ಹೂ ಬಿಡುವ ಮರವೊಂದು ಬೆಳೆದು ನಿಲ್ಲುವುದನ್ನು ಆ ಸೋದರಿ ಕಾಣುತ್ತಾಳೆ. ಅರಳಿದ ಹೂಗಳನ್ನು ಸ್ಪರ್ಶಿಸುವುದರ ಮೂಲಕ ಅವಳು ತನ್ನ ಸೋದರನನ್ನು ಹರಸುತ್ತಾಳೆ. ಆದರೆ ಆ ಕ್ಷಣದಲ್ಲೇ ಸೋದರನು ಹಾವಾಗಿ ಪರಿವರ್ತಿತನಾಗಿ ಅನಂತರ ಮೊದಲಿನ ರೂಪ ತಳೆಯುವನು. ಈ ರೀತಿಯಾಗಿ ಈ ಕಥಾ ನಮೂನೆ ಎರಡು ತತ್ವಗಳನ್ನು ಸುಂದರವಾಗಿ ಪ್ರತಿಪಾದಿಸುತ್ತದೆ: ೧. ಪರಸ್ಪರರನ್ನು ಜೋಪಾಸನ ಮಾಡುವ ಪರಿ ಹಾಗೂ ೨. ಮಾಂತ್ರಿಕ ಬಂಧನಗಳು ಅಸ್ತಿತ್ವ ತಾಳುವುದನ್ನು ಇಲ್ಲಿ ವಿಶೇಷವಾಗಿ ಗಮನಿಸಬಹುದು.

ಸೋದರಿಯರ ನಡುವಿನ ತಾರ್ಕಿಕ ಕುಲಬಂಧನಕ್ಕೆ ಒತ್ತು ಹೇರುವ ಕಥೆಗಳು ಬಹಳ ಕಡಿಮೆ. ಏಳು ಮಂದಿ ಸೋದರಿಯರು/ ಸಪ್ತ ಮಾತೃಕೆಯರು ಕಥೆಗಳು ಪುರಾಣಕ್ಕೆ ಹೆಚ್ಚು ಅಂಟಿಕೊಂಡಿವೆ. ಕನ್ನಡದ ಕಥೆಗಳಲ್ಲಿ ಮದುವೆ ಪ್ರಸ್ತಾಪ ಬಂದ ಸಂದರ್ಭದಲ್ಲಿ ಹಲವಾರು ಸೋದರಿಯರನ್ನು ತುಲನೆ ಮಾಡಿ ನೋಡುವ ಸನ್ನಿವೇಶ ಬಂದರೂ ಸ್ತ್ರೀಯರ ನಡುವಿನ ದಾಕ್ಷಿಣ್ಯಗಳನ್ನು ಲಕ್ಷಿಸುವುದಿಲ್ಲ. ಪಿತೃಮೂಲೀಯ ಹಾಗೂ ಪಿತೃಪ್ರಧಾನ ಸಮಾಜಗಳಲ್ಲಿ ಸೋದರಿಯರು ತಮ್ಮ ಇಚ್ಛೆಯಂತೆ ನಡೆದುಕೊಳ್ಳುತ್ತಾರೆ. ಇದು ಮಾತೃಮೂಲೀಯ ಹಾಗೂ ಮಾತೃಪ್ರಧಾನ ಕುಟುಂಬಗಳಿಗೆ ಸಂಬಂಧಿಸಿದಂತೆ ನೋಡುವುದಾದರೆ ಇನ್ನೂ ಕುತೂಹಲಕರ. ಉದಾಹರಣೆಗೆ ಕ್ಲಾಸ್ ಅವರು ತುಳುನಾಡಿನಿಂದ ಅವಳಿ ಸೋದರಿಯರನ್ನು ಕುರಿತು

ಪ್ರಚಲಿತವಿರುವ ಕಥೆಗಳನ್ನು ವರದಿ ಮಾಡಿದ್ದಾರೆ. ಇವು ಎಲ್ಲೆಡೆ ದೊರಕುವ ಅವಳಿ ಸೋದರರ ಕಥೆಗಳಿಗೆ ಸಂವಾದಿಯಾದವು ಎಂದು ತೋರುತ್ತದೆ.

ಪ್ರಕೃತ ಚೌಕಟ್ಟಿನ ಮತ್ತೊಂದು ಅರ್ಧ ಭಾಗ ಈ ಮಹತ್ವಪೂರ್ಣ ಕುಲ ಬಂಧನಗಳ ವಿರುದ್ಧ ಸೆಟೆದು ನಿಲ್ಲುವ ಬಂಧನವನ್ನು ಮೀರುವ ಪ್ರಕ್ರಿಯೆಗಳಿಂದ ತುಂಬಿ ಹೋಗಿವೆ. ಕಥಾ ನಮೂನೆ 976A ನಲ್ಲಿ ಕಥೆಯೊಂದರಿಂದ ಕಳ್ಳನ ಗುಟ್ಟು ಬಯಲಾಗುವುದು, ಜಂಟಿಯಾಗಿ ಒಡೆತನ ಹೊಂದಿದ್ದ ಒಡವೆ ಅಂಗಡಿಯಿಂದ ಸೋದರನೊಬ್ಬ ಕದಿಯುವನು. ಈ ಅಪ್ರಮಾಣಿಕ ಕುಲಬಂಧನ ಬುದ್ಧಿವಂತನ ಚತುರ ಪ್ರಶ್ನೆಗಳಿಗೆ ಗುರಿಯಾಗಿ ನೀಡುವ ಉತ್ತರದ ಮೂಲಕ ಬಯಲಿಗೆ ಬೀಳುವುದು. ಕಥಾ ನಮೂನೆ 780A ಸೋದರಿಯನ್ನೇ ಭಕ್ಷಿಸುವ ಸೋದರರು ಆಕಸ್ಮಿಕವಾಗಿ ಕತ್ತರಿಸಿಕೊಂಡ ಬೆರಳಿನ ರಕ್ತದಿಂದ ಸೋದರಿಯು ಅಣಿಗೊಳಿಸಿದ ಅಡುಗೆಯನ್ನು ಸವಿದ ಸೋದರರೆಲ್ಲ ಕೂಡಿ ಅವಳನ್ನು ಕೊಂದು ತಿನ್ನುವರು. ಕಥಾ ನಮೂನೆ 315A ನಲ್ಲಿ ರಾಜಕುಮಾರಿಯೊಬ್ಬಳು ನರಭಕ್ಷಕ ರಕ್ಕಸಿಯಾಗಿ ಚಿತ್ರಿತಳಾಗಿದ್ದಾಳೆ. ಪ್ರಾಣಿಗಳು, ರಾಜರು ಮತ್ತು ನಗರವಾಸಿಗಳನ್ನು ತಿಂದ ಮೇಲೆ ಅಂತಿಮವಾಗಿ ಅವಳು ತನ್ನ ಸೋದರರನ್ನೇ ತಿನ್ನಲು ಮುಂದಾಗುವಳು. ಕೌಶಲದಿಂದ ಅವಳನ್ನು ಸೆರೆ ಹಿಡಿದು ಕೊನೆಯಲ್ಲಿ ಕೊಲ್ಲಲಾಗುವುದು.

ಕುಲಬಂಧನವನ್ನು ಮೀರಿ ನಿಲ್ಲುವ ಪ್ರಕರಣಗಳಲ್ಲಿ ಕಿರಿಯವನು ಹಿರಿಯರೊಂದಿಗೆ ಸೆಣಸುವಾಗ ಆಕ್ರಮಣಕಾರಿಯಾಗಿ ನಡೆದುಕೊಳ್ಳುವುದು ಗಮನಾರ್ಹ. ಕಥಾ ನಮೂನೆ ೧೬೩೩ ರಲ್ಲಿ ಜಂಟಿ ಒಡೆತನದಲ್ಲಿದ್ದ ಹಸುವೊಂದರ ಹಿಂದಿನ ಭಾಗವನ್ನು ಹಿರಿಯವನು ಕೇಳಿ ಪಡೆದು ಕಿರಿಯವನಿಗೆ ಹಸುವಿನ ಮುಂದಿನ ಭಾಗವನ್ನು ನೀಡುತ್ತಾನೆ. ಈ ರೀತಿಯಾಗಿ ಹಸುವಿನ ಹಾಲನ್ನು ಹಿರಿಯವನು ಪಡೆದರೆ ಕಿರಿಯವನು ಅದರ ಪಾಲನೆ ಪೋಷಣೆಯ ಜವಾಬ್ದಾರಿ ಹೊತ್ತುಕೊಳ್ಳುತ್ತಾನೆ. ಇಲ್ಲಿ ಹೀಗೆ ವಯಸ್ಸಿನ ಅಂತರ ಮತ್ತು ಉತ್ಪನ್ನವನ್ನು ಸಮಾನವಾಗಿ ಹಂಚಿಕೊಳ್ಳುವ ಒಪ್ಪಂದವನ್ನು ಮುರಿದು ಕಿರಿಯವನನ್ನು ವಂಚಿಸುತ್ತಾನೆ. ಆದರೆ ಆಮೇಲೆ ಒಂದು ತಂತ್ರ ಬಳಸಿ ಕಿರಿಯವನಿಗೆ ಉತ್ಪನ್ನದಲ್ಲಿ ಸಮಪಾಲು ಸಿಗುವಂತೆ ನೋಡಿಕೊಳ್ಳಲಾಗುವುದು. 'ತನ್ನ ಭವಿಷ್ಯಕ್ಕೆ ಹೊಣೆಯಾದ ರಾಜಕುಮಾರಿ', 923B ಕಥಾ ನಮೂನೆಯಲ್ಲಿ ರಾಜನು ತನ್ನ ಹೆಣ್ಣು ಮಕ್ಕಳನ್ನುದ್ದೇಶಿಸಿ 'ನಿಮ್ಮ ಉಜ್ವಲ ಭವಿಷ್ಯಕ್ಕೆ ಕಾರಣವಾಗುವುದು ಏನು' ಎಂದು ಕೇಳಿದಾಗ ತಮ್ಮ ಭವಿಷ್ಯ ಉಜ್ವಲವಾಗಲು ಸ್ವಯಂ ರಾಜನೇ ಕಾರಣವೆಂದು (ಹಿರಿಯ ಮಕ್ಕಳು) ಮುಖಸ್ತುತಿ ಮಾಡಿದರೆ ಕಿರಿಯವಳು ತನ್ನ ಭವಿಷ್ಯಕ್ಕೆ ತಾನೇ ಕಾರಣ ಎಂದು ವಾದಿಸುವಳು. ಅವಳ ಈ ಪ್ರತಿಕ್ರಿಯೆಗಾಗಿ ರಾಜನು ಅವಳನ್ನು ಕಠಿಣವಾಗಿ ಶಿಕ್ಷಿಸುತ್ತಾನೆ. ಪರಿಣಾಮವಾಗಿ ಅವಳು ವಿವೇಕ ಮತ್ತು ಕೌಶಲದಿಂದ ರಾಜನ ಮೇಲೆ ಸೇಡು ತೀರಿಸಿಕೊಳ್ಳತೊಡಗುತ್ತಾಳೆ. ಕೊನೆಯಲ್ಲಿ ಅವಳ ಪತಿ ಶ್ರೀಮಂತನಾಗಿ ಸಾಮ್ರಾಜ್ಯವನ್ನೇ ಗಳಿಸುತ್ತಾನೆ. ಅತ್ತ ಅವಳ ತಂದೆ ಸ್ವಯಂ ಕೃತಾಪರಾಧದಿಂದ ಎಲ್ಲವನ್ನೂ ಕಳೆದುಕೊಳ್ಳುತ್ತಾನೆ. ಆದನ್ನು ತಂದೆ ಮಗಳ ನಡುವಿನ ಹೋರಾಟದ ಒಂದು ನಿದರ್ಶನವಾಗಿ ನೋಡಬಹುದು. ಆದರೆ ಕಥೆಯ ಒಟ್ಟು ಲಕ್ಷ್ಯ ಕಿರಿಯ ಹೆಣ್ಣು ಮಗಳು ಮಾತ್ರ ವಿರುದ್ಧ ದಿಕ್ಕಿನಲ್ಲಿ ಸಾಗಿ ಸವಾಲು ಎಸೆಯುವುದರ ಕಡೆ ಇದೆ. ಆದುದರಿಂದ ಈ ಕಥೆ ಕುಟುಂಬದ

ಹಿರಿಯರು ದುರ್ಬಲರನ್ನು ಗೋಳು ಹೊಯ್ದುಕೊಳ್ಳುವ ಪ್ರವೃತ್ತಿಯದಾಗಿ ಕಾಣುತ್ತದೆ. ತಂದೆ, ಕಿರಿಯವಳೊಬ್ಬಳನ್ನುಳಿದು ಮಿಕ್ಕವರನ್ನು ಒಳ್ಳೆಯ ಕಡೆಗೆ ಮದುವೆ ಮಾಡಿಕೊಡುತ್ತಾನೆ. ಆದರೆ ಕಿರಿಯವಳನ್ನು ಭಿಕ್ಷುಕನಿಗೆ ಮದುವೆ ಮಾಡಿಕೊಟ್ಟು ನರಳಿಸುತ್ತಾನೆ. ಕಿರಿಯವಳ ಸ್ವಂತ ಪರಿಶ್ರಮದಿಂದ ಅನಪೇಕ್ಷಿತ ಗಂಡ ಕ್ರಮೇಣ ಯಶ ಸಾಧಿಸುತ್ತಾನೆ. ಈ ರೀತಿಯಾಗಿ ಕುಲ ಬಂಧನವನ್ನು ಅತಿಕ್ರಮಿಸುವ ಹಾಗೂ ಕಿರಿಯ ಸದಸ್ಯರನ್ನು ಹೀನಾಯವಾಗಿ ನಡೆಸಿಕೊಳ್ಳುವ ರೀತಿಯನ್ನು ನೋಡುತ್ತೇವೆ. ಈ ಕಥಾ ನಮೂನೆ ನಾಯಕನ ಸೇಡಿನಲ್ಲಿ ಮುಕ್ತಾಯ ಸಾಧಿಸುತ್ತದೆ.

ದುರ್ಬಲ ಹಾಗೂ ಕಿರಿಯವನು ಯಶಸ್ಸು ಸಾಧಿಸುವುದು ಬಹು ಮುಖ್ಯವಾದ ಕಥಾ ವಸ್ತು. ಇದು ಕನ್ನಡಕ್ಕೇ ವಿಶಿಷ್ಟವಾದದ್ದಲ್ಲವಾದರೂ ಶ್ರೇಣೀಕರಣ ವ್ಯವಸ್ಥೆ ಬಲವಾಗಿರುವ ಸಮಾಜಗಳಲ್ಲಿ ಈ ಆಶಯ ಬಹು ಮಹತ್ವದ ಅಭಿವ್ಯಕ್ತಾತ್ಮಕ ಗುಣವನ್ನು ಹೊಂದಿದೆ. ಪರಿಣಾಮವಾಗಿ ದೊಡ್ಡ ಸಂಖ್ಯೆಯ ಕಥೆಗಳಲ್ಲಿ ಕಿರಿಯರು ದೊಡ್ಡವರ ಎದುರಿಗೆ ಜಯಶಾಲಿಗಳಾದಂತೆ ಕಾಣುತ್ತಾರೆ. ಇದಕ್ಕೆ ಉತ್ತಮ ನಿದರ್ಶನಗಳೆಂದರೆ L 315.10, L 315.11, L 315.12 ಕಥಾ ನಮೂನೆಗಳು. ಹಲ್ಲಿ ಚಿರತೆಯನ್ನು ಸೋಲಿಸುವ ಕುಂದಿಲಿ ಘೇಂಡಾಮೃಗವನ್ನು ವಧಿಸುವ ಪ್ರಸಂಗಗಳು ಇವು. ಈ ಬಗೆಯ ವಸ್ತುಗಳು ಸಾಮಾಜಿಕ ಶ್ರೇಣೀಕರಣ ವ್ಯವಸ್ಥೆ ಕಟ್ಟುನಿಟ್ಟಾಗಿ ಇಲ್ಲವೆ ಸಡಿಲವಾಗಿರುವ ಪ್ರದೇಶಗಳಲ್ಲಿ ಪ್ರಚಲಿತ ಇವೆಯೆ? ಮತ್ತು ಶ್ರೇಣೀಕರಣ ಕ್ರಮ ದುರ್ಬಲವಾಗಿರುವ ಪ್ರದೇಶಗಳಲ್ಲಿ ಇವೆಯೆ? ಎಂಬ ಪ್ರಶ್ನೆ ಕುತೂಹಲಕರವಾಗಿದೆ.

ಕಥಾ ಚೌಕಟ್ಟು-೨

ಚೌಕಟ್ಟು ೨ ಬಹುಮಟ್ಟಿಗೆ ಚೌಕಟ್ಟು ೧ ಕ್ಕೆ ಸದೃಶವಾದುದಾದರೂ ಅದು ಒಳಗೊಳ್ಳುವ ಬಂಧನ ಸ್ವಯಂ ಪ್ರೇರಿತವಾದುದು; ಬಂಧುತ್ವ ಆಧರಿತವಾದುದಲ್ಲ. ವಿವಿಧ ಸಾಮಾಜಿಕ ಸ್ಥಾನಗಳಲ್ಲಿದ್ದ ಇಬ್ಬರು ವ್ಯಕ್ತಿಗಳ ನಡುವೆ ಮುಖ್ಯ ಬಂಧನವಿರುತ್ತದೆ. ಇದರಲ್ಲಿ ಬರುವ ಪಾತ್ರಗಳಲ್ಲಿ ಪೋಷಕ ಹಾಗೂ ಕಕ್ಷಿದಾರ, ಉಪದೇಶಿ ಹಾಗೂ ಶಿಷ್ಯ, ಅಸಮಾನ ಶ್ರೇಣಿಯ ಇಬ್ಬರು ಒಡನಾಡಿಗಳು ಇವುಗಳಲ್ಲಿ ಮೊದಲ ಎರಡು ಎಲ್ಲೆಡೆ ಪ್ರಚಲಿತವಾಗಿವೆ. ಹಿರಿಯವನು ಕಿರಿಯರ ಚಟುವಟಿಕೆಗಳಲ್ಲಿ ಸಮಭಾಗಿಯಾಗಿ ಪ್ರತಿಯೊಬ್ಬರನ್ನೂ ಬೆಂಬಲಿಸುವವನ್ನು ಮತ್ತು ರಕ್ಷಿಸುವವನಂತೆ ಕಂಡು ಬಂದರೆ ಕಿರಿಯವನು ನಿಷ್ಠೆಯಿಂದ ಹಿರಿಯವನ ಸೇವೆ ಮಾಡಬೇಕಾಗುತ್ತದೆ.

ನಿಷ್ಠೆಯ ಅನ್ಯೋನ್ಯ ಬಂಧನಗಳ ಮೂರು ಮೂಲ ಮಾತೃಕೆಗಳ ನಿದರ್ಶನಗಳನ್ನು ಕಾಣುತ್ತೇವೆ. ಮೊದಲನೆಯದು ರಾಜ ಮತ್ತು ಅವನ ಮಂತ್ರಿಯದು. ಇಲ್ಲವೆ ರಾಜಕುಮಾರ ಹಾಗೂ ಮಂತ್ರಿ ಕುಮಾರನದು. ಇಬ್ಬರೂ ಸಾಹಸ ಯಾತ್ರೆಗಳಲ್ಲಿ ತೊಡಗುತ್ತಾರೆ. ಅದರಲ್ಲಿ ಕಿರಿಯವನು ಉದ್ದಕ್ಕೂ ಹಿರಿಯವನ ಸೇವೆ ಗೈಯುತ್ತಾನೆ. ಕಥಾ ನಮೂನೆ 516 A ನಲ್ಲಿ ರಾಜಕುಮಾರಿಯ ಸಂಜ್ಞಾಭಾಷೆಯನ್ನು ಅರಿಯಬಲ್ಲ ಮಂತ್ರಿಕುಮಾರ ರಾಜಕುಮಾರನಿಗೆ

ರಾಜಕುಮಾರಿಯನ್ನು ಗೆಲ್ಲಲು ಸಹಕರಿಸುತ್ತಾನೆ. ಆರ್ನೆ ಥಾಮ್ಸನ್ ಸೂಚಿ ಈ ಬಗೆಯ ಇಪ್ಪತ್ತೊಂದು ಕಥೆಗಳನ್ನು ವರದಿ ಮಾಡಿದೆ. ಎರಡನೆಯ ಉಪಬಗೆ ನಾಯಕ ಹಾಗೂ ಅವನ ಗೆಳೆಯನ ನಡುವಿನ ಸಂಬಂಧವನ್ನು ಹೇಳುತ್ತದೆ. ಇಲ್ಲಿ ಮುಖ್ಯವಾದುದೆಂದರೆ ಹೊರಗಿನ ವಿರೋಧಿಯ ಬೆದರಿಕೆಗೆ ಯಾರಾದರೊಬ್ಬರು ಗುರಿಯಾಗುವುದು. ಈ ಭಾವನೆಯು ಕಥಾ ನಮೂನೆ 302 B ಯಲ್ಲಿ, ಕತ್ತಿಯನ್ನವಲಂಬಿಸಿದ ಜೀವನವಿರುವ ನಾಯಕ ಉತ್ತಮವಾಗಿ ಪ್ರತಿಪಾದಿತವಾಗಿದೆ. ಈ ಕಥಾ ನಮೂನೆಯಲ್ಲಿ, ಪ್ರತಿಸ್ಪರ್ಧಿ ನಾಯಕನ ಪತ್ನಿಯನ್ನು ಬಯಸುತ್ತಾನೆ. ಅವನು ಅವಳನ್ನು ಕದ್ದುಕೊಂಡು ಬರಲು ಹಾಗೂ ರಾಜನ ರಕ್ಷಕ ಕತ್ತಿಯನ್ನು ನಾಶಗೊಳಿಸಿ ಬರಲು ಒಬ್ಬನನ್ನು ಕಳುಹಿಸುತ್ತಾನೆ. ಆದರೆ ನಾಯಕನ ಸಹಾಯಕ ಗೆಳೆಯನ ಪತ್ನಿಯನ್ನು ರಕ್ಷಿಸಿ ಆಯುಧವನ್ನು ಮರಳಿ ಸಂಪಾದಿಸಿ ಕೊಡುತ್ತಾನೆ. ಮೂರನೆಯ ಭಿನ್ನರೂಪ ನಾಯಕನು ಮಹಾತ್ಯಾಗ ಮಾಡಲು ಸಿದ್ಧನಾಗಬೇಕು ಇಲ್ಲವೆ ಶಾಪ ಹೊರಲು ತಯಾರಾಗಬೇಕೆಂಬ ದೇವರ ಒತ್ತಾಯಕ್ಕೆ ಮಣಿಯಬೇಕಾಗುತ್ತದೆ. ಇದು ಕಥಾ ನಮೂನೆ 949ರಿಂದ ಪ್ರದಿಪಾದಿತವಾಗುತ್ತದೆ. ವಿಧೇಯ ಸೇವಕನು ನಾಯಕನ ಸಹಾಯ ಯಾಚಿಸುವುದು, ರಾಜನ ಸ್ಥಾನದಲ್ಲಿ ತಾನು ಅಥವಾ ತನ್ನ ಮಕ್ಕಳಿಗೆ ಸ್ಥಾನ ದೊರಕಿಸಿಕೊಡುವ ಪ್ರಯತ್ನವಿರುತ್ತದೆ. ಇದರಿಂದ ದೇವಾನುದೇವತೆಗಳು ಸಂತೃಪ್ತವಾಗುತ್ತವೆ. ಕೊನೆಯಲ್ಲಿ ಜೀವತ್ಯಾಗ ಮಾಡಲಿಚ್ಛಿಸಿದವನಿಗೆ ಜೀವದಾನವಾಗುತ್ತದೆ.

ವಿಧೇಯಕ ಸೇವಕ ವಸ್ತುವಿನ ಮುಖ್ಯ ಭಿನ್ನರೂಪ ನಾಯಕನನ್ನು ದೇವರ ಸೇವಕನನ್ನಾಗಿ ತೋರಿಸುತ್ತದೆ. ದೇವರು ಅನಂತರ ಅನುಯಾಯಿಗಳ ನಿಷ್ಠೆಯನ್ನು ನೇರವಾಗಿ ಪರೀಕ್ಷಿಸುತ್ತದೆ. ಉದಾಹರಣೆಗೆ ಭಕ್ತನೊಬ್ಬ ದಾರಿದ್ರ್ಯದಲ್ಲಿ ತೊಳಲಾಡಬಹುದು, ಮನೆ ಚಾಕರಿ ಮಾಡಬೇಕಾಗಿ ಬರಬಹುದು, ನಿರ್ದಿಷ್ಟ ಅವಧಿಯವರೆಗೆ ನಾನಾ ರೀತಿಯ ಸೇವಾದಾನ ಮಾಡಬೇಕಾಗಿ ಬರಬಹುದು- ಇಂಥ ಪ್ರಯತ್ನಗಳ ಕೊನೆಯಲ್ಲಿ ದೇವತಾನುಗ್ರಹದಿಂದ ಆ ಭಕ್ತ ತನ್ನ ಮೊದಲಿನ ಸ್ಥಾನಮಾನವನ್ನು ಗಳಿಸಿಕೊಳ್ಳಬಹುದು. ಇದು ಕಥಾ ನಮೂನೆ 939- ಮನನೋಯಿಸುವ ದೇವತೆ.

ಬಹಳ ವಿರಳವಾಗಿ ಕಾಣಬರುವ ಮತ್ತೊಂದು ಉಪನಮೂನೆಯಲ್ಲಿ ದೆವ್ವ ಮಾನವನ ಸಹಾಯಕ್ಕೆ ಬರುತ್ತದೆ. ಈ ಇಬ್ಬರ ನಡುವೆ ದೇವರು ಮತ್ತು ಭಕ್ತ ಇಲ್ಲವೆ ರಾಜ ಮತ್ತು ಅವನ ಮಂತ್ರಿಯ ನಡುವೆ ಕಾಣುವ ಒಪ್ಪಂದವನ್ನು ನೋಡುತ್ತೇವೆ. ನಾಯಕನು ತನ್ನ ಆಸೆಗಳನ್ನು ಈಡೇರಿಸಿಕೊಳ್ಳಲು ಭೂತದಿಂದ ಎಲ್ಲ ರೀತಿಯ ಸಹಕಾರ ಪಡೆಯುತ್ತಾನೆ. ಇವರಿಬ್ಬರ ಸಹಯೋಗ ನಾಯಕನ ಎಲ್ಲ ಬಯಕೆಗಳು ಈಡೇರುವ ಹಂತದಲ್ಲಿ ಹಿರಿಯವನೊಬ್ಬನ ಸಹಭಾಗಿತ್ವದ ಕಾರಣದಿಂದ ಕೊನೆಗಾಣುತ್ತದೆ. ಸಹಯೋಗದ ಉತ್ತಮ ನಿರ್ವಹಣೆಗಾಗಿ ಭೂತವು ತೃಪ್ತಿಪಟ್ಟುಕೊಳ್ಳುತ್ತದೆ. ಇದು ದೆವ್ವ ಮತ್ತು ಮಾನವ ಶಕ್ತಿ ಒಟ್ಟು ಸೇರುವುದು- ಕಥಾ ನಮೂನೆ 1164 D.

ಎರಡನೆಯ ಕಥಾ ಚೌಕಟ್ಟಿನ ಬಳಕೆಯಲ್ಲಿ ಕಾಣುವ ಒಂದು ವ್ಯತ್ಯಯವೆಂದರೆ ನಾಯಕ ಮತ್ತು ಪ್ರಾಣಿಯ ನಡುವಿನ ಸಹಯೋಗ ಸಂಬಂಧ. ಕಥಾ ನಮೂನೆ 910 H

ಜೊತೆಗಾರಗಿಲ್ಲದೆ ಪ್ರಯಾಣ ಸಲ್ಲದು ಕಥೆಯಲ್ಲಿ ನಾಯಕನು ಮಾರ್ಗ ಮಧ್ಯದಲ್ಲಿ ಏಡಿಯನ್ನು ಜೊತೆಗಾರನಾಗಿ ಒಯ್ಯಲು ನಿಶ್ಚಯಿಸುತ್ತಾನೆ. ಆಮೇಲೆ ಅವನು ಅನಿರೀಕ್ಷಿತವಾಗಿ ರಾಜನಾದ ಮೇಲೆ ಈ ಏಡಿ ನಾನಾ ವಿಧದಲ್ಲಿ ಅವನಿಗೆ ಸಹಾಯ ಮಾಡಲು ಯತ್ನಿಸುತ್ತದೆ. ಎದುರಾಳಿಗಳನೇಕರನ್ನು ಕೊಲ್ಲುತ್ತದೆ. ಮತ್ತೊಂದು ಕಥಾ ನಮೂನೆ 465 Dಯಲ್ಲಿ ಪ್ರಾಣಿ ಸೋದರರು ನಾಯಕನಿಗೆ ಸಹಾಯಕರಾಗಿರುತ್ತಾರೆ. ಎದುರಾಳಿಗಳನ್ನು ಬಗ್ಗು ಬಡಿಯಲು ನಾಯಕ ಒಂದು ಗೂಳಿಯನ್ನು ಹೊಂದುತ್ತಾನೆ. ಕಥಾ ನಮೂನೆ 535 ರಲ್ಲಿ ಹುಲಿಯಿಂದ ದತ್ತಾಗಿ ಸ್ವೀಕೃತನಾದ ಹುಡುಗ ಕಾಡಿನಲ್ಲಿ ಬದುಕುಳಿಯಲು ಮೃಗ ಪಕ್ಷಿಗಳು ಸಹಾಯ ಮಾಡುತ್ತವೆ. ಕೊನೆಯಲ್ಲಿ ಸುಂದರ ಕನ್ಯೆಯನ್ನು ವರಿಸಲು ಅನುಕೂಲ ಮಾಡಿಕೊಡುತ್ತವೆ. ಕಥಾ ನಮೂನೆ 534 ರಲ್ಲಿ ಮಾತನಾಡುವ ಗಿಣಿ ರಾಜನಿಗೆ ರಾಜಕುಮಾರಿಯನ್ನು ಗೆದ್ದು ಕೊಡುತ್ತದೆ. ಪ್ರಾಣಿಗಳು ಕೂಡ ಇಂಥದೇ ಸನ್ನಿವೇಶಗಳಲ್ಲಿ ಹೆಂಗಸರಿಗೆ ಉಪಕಾರ ಮಾಡುತ್ತವೆ. ಪಕ್ಷಿಗಳು ಗಂಡಸರಿಗೆ ನೆರವು ನೀಡಿದರೂ ಅವು ಸಾಮಾನ್ಯವಾಗಿ ಸ್ತ್ರೀ ಪಕ್ಷಪಾತಿಗಳು. ಉದಾಹರಣೆಗೆ ಕಥಾ ನಮೂನೆ 670A, 674 ಹಾಗೂ 709A. ಮಹತ್ವದ ಅಂಶವೆಂದರೆ ಪ್ರಾಣಿಗಳ ಮಾತುಗಳನ್ನು ಸ್ತ್ರೀಯರು ಬಹುಬೇಗ ಗ್ರಹಿಸಿಕೊಳ್ಳುತ್ತಾರೆ ಎಂಬುದು. ಅದೇನೇ ಇರಲಿ, ಕಥಾ ನಮೂನೆ 622 ನಿರ್ಜೀವ ವಸ್ತುವಿನ ಮಾತು ಕೇಳಬೇಕಾಗಿ ಬರುವುದು ನಾಯಕನಿಗೆ ಮುಂದೊದಗುವ ಆಪತ್ತುಗಳ ಬಗೆಗೆ, ಸಂಕಷ್ಟಗಳ ಬಗೆಗೆ ಆ ಮೂಲದಿಂದ ಮುನ್ಸೂಚನೆ ನೀಡುವುದಲ್ಲದೆ ಸಾಂದರ್ಭಿಕವಾಗಿ ನೆರವು ಒದಗಿ ಬರುತ್ತದೆ.

ಈ ಎರಡನೆಯ ಕಥಾ ಚೌಕಟ್ಟು ಕಡಿಮೆ ಅದೃಷ್ಟಶಾಲಿ ಫಲಿತಗಳನ್ನು ಕೂಡ ಒಳಗೊಳ್ಳುತ್ತದೆ. ಬಂಧನವನ್ನು ಇಲ್ಲಿ ಶೋಷಣೆಗೆ ಗುರಿಮಾಡುವುದು ವಿಶೇಷ. ಹಿರಿಯನು ಪಾಲನೆ ಪೋಷಣೆ ಮತ್ತು ರಕ್ಷಣೆಯ ಒಪ್ಪಂದವನ್ನು ಮುರಿಯುತ್ತಾನೆ. ಉದಾಹರಣೆಗೆ ಕಥಾ ನಮೂನೆ 1532ರಲ್ಲಿ ಸಮಾಧಿಯೊಳಗಿನಿಂದ ಹೊರಬಂದ ಧ್ವನಿ ಆಗಷ್ಟೇ ಸಮಾಧಿ ಮಾಡಿದ ವ್ಯಕ್ತಿಯೊಬ್ಬನ ಸಂಪತ್ತನ್ನು ಲಪಾಟಾಯಿಸಲು ಇಬ್ಬರು ವ್ಯಕ್ತಿಗಳು ಸಂಚು ನಡೆಸುತ್ತಾರೆ. ಈ ಸಂಚಿನಲ್ಲಿ ಕಡಿಮೆ ಪಾಲು ಬಯಸಿದವನು ಸಮಾಧಿಯ ಬಳಿ ಅವಿತುಕೊಳ್ಳುತ್ತಾನೆ. ಹೆಚ್ಚು ಪಾಲು ಬಯಸಿದವ ಅವನ ಬಂಧುಗಳೊಡನೆ ಮಾತನಾಡಲು ಹೋಗುತ್ತಾನೆ. 'ಸತ್ತ ವ್ಯಕ್ತಿ ಸಾಲ ಪಾವತಿ ಮಾಡದೆ ಹೋಗಿದ್ದಾನೆ. ಬೇಕಿದ್ದರೆ ಸಮಾಧಿಯ ಬಳಿಗೆ ಬಂದು ಸತ್ತವನ ಆತ್ಮದೊಡನೆ ಮಾತನಾಡಿ ಖಚಿತ ಮಾಡಿಕೊಳ್ಳಬಹುದು' ಎನ್ನುತ್ತಾನೆ. ಆ ಬಂಧುಗಳು ಸತ್ತವನ ಆತ್ಮದ ಸಲಹೆ ಕೇಳಲು ಸಮಾಧಿಯ ಬಳಿಗೆ ಬಂದಾಗ ಸಮಾಧಿಯ ಹಿಂದೆ ಅವಿತುಕೊಂಡಿದ್ದವನು ಸಾಲ ಮರುಪಾವತಿ ಮಾಡಲು ಒತ್ತಾಯಿಸುತ್ತಾನೆ. ಹೆಚ್ಚು ಪಾಲು ಬೇಡಿದವನು ಕಡಿಮೆ ಪಾಲು ಕೇಳಿದವನಿಗೆ ಪಾಲು ಕೊಡದೆ ಪರಾರಿಯಾಗುತ್ತಾನೆ. ಬಹುತೇಕ ಎಲ್ಲ ಪ್ರಾಣಿ ಕಥೆಗಳಲ್ಲೂ ಇದೇ ವಸ್ತು ಕಂಡು ಬರುತ್ತದೆ. ದುರ್ಬಲನ ಶರಣಾಗತಿ ಮನೋಭಾವ ಆದರಿಂದ ಪ್ರಬಲನಿಗೆ ಆಗುವ ಲಾಭ-ಕನ್ನಡದ ಅನೇಕ ಉದಾಹರಣೆಗಳಲ್ಲಿ ಕಾಣಿಸಿಕೊಂಡಿದೆ. ಥಾಮ್ಸನ್ ಸೂಚಿಯ J420, J 429 ಕಥಾ ನಮೂನೆಗಳು ಇದೇ ಸಾಲಿಗೆ ಸೇರುವಂಥವು. J 426.2 ನಮೂನೆಯಲ್ಲಿ

ಹಾವು ಮತ್ತು ಕಪ್ಪೆಯ ನಡುವಿನ ಸ್ನೇಹ ಕಪ್ಪೆಯನ್ನು ಹಾವು ನುಂಗಿ ಹಾಕುವುದರೊಂದಿಗೆ ಕಡಿದು ಹೋಗುತ್ತದೆ.

ಎರಡನೆಯ ಕಥಾ ಚೌಕಟ್ಟಿಗೆ ಕೊಟ್ಟ ಮತ್ತೊಂದು ತಿರುವು ಎಂದರೆ ನಾಯಕನು ತನ್ನ ಅಂಕೆಯಲ್ಲಿದ್ದವನನ್ನು ನಿಷ್ಕಾರಣವಾಗಿ ಅನುಮಾನದಿಂದ ನೋಡುವುದು. ಕಥಾ ನಮೂನೆ 178B ಯಲ್ಲಿ ತನ್ನ ಸಾಲಕ್ಕೆ ಜಾಮೀನಾಗಿ ಸಾಕುನಾಯಿಯನ್ನು ಒತ್ತೆ ಇಡುವುದು ಸಾಲಿಗನು ಕಳ್ಳರನ್ನು ಹಿಡಿಯಲು ನಾಯಿಯನ್ನು ಸಾಲವಾಗಿ ಕೊಡುವನು. ಈ ನಾಯಿ ಸಾಲಿಗನನ್ನು ಚೆನ್ನಾಗಿ ನೋಡಿಕೊಳ್ಳುತ್ತದೆ ಮತ್ತು ಧನ್ಯವಾದದ ಪತ್ರವೊಂದನ್ನು ತರುತ್ತದೆ. ಆದರೆ ಅದರ ಯಜಮಾನ ನಾಯಿಯು ತನ್ನ ಮನೆ ಬಾಗಿಲಲ್ಲಿರುವುದನ್ನು ಕಂಡು ನಿಯೋಜಿತ ಕೆಲಸದಿಂದ ತಪ್ಪಿಸಿಕೊಂಡು ಬಂದಿದೆ ಎಂದು ತಿಳಿದು ಕೋಪದಿಂದ ಹೊಡೆದು ಸಾಯಿಸುತ್ತಾನೆ. ಆಮೇಲೆ ಕೊರಳಲ್ಲಿದ್ದ ಕಾಗದ ನೋಡಿ ತನ್ನ ಅಕೃತ್ಯಕ್ಕಾಗಿ ಪರಿತಪಿಸುತ್ತಾನೆ. ಇದು ಬ್ರಾಹ್ಮಣ ಮತ್ತು ಮುಂಗುಸಿಯ ಕತೆಯನ್ನು ನೆನಪಿಗೆ ತರುತ್ತದೆ. ಮನೆಯ ಮಗು ಕಾಣದಾದಾಗ ಮುಂಗುಸಿಯ ಬಾಯಲ್ಲಿ ರಕ್ತವಿರುವುದನ್ನು ತಪ್ಪಾಗಿ ಗ್ರಹಿಸಿ ಅದನ್ನು ಕೊಲ್ಲುವ ಕತೆ. ವಾಸ್ತವವಾಗಿ ಮಗುವನ್ನು ರಕ್ಷಿಸುವುದಕ್ಕಾಗಿ ನಾಯಿಯು ಹಾವನ್ನು ಸಾಯಿಸುತ್ತದೆ. ಕನ್ನಡದ ಅನೇಕ ಕಥೆಗಳು ಇದೇ ಭಾವನೆಯನ್ನು ಮುಂದಿಡುತ್ತವೆ.

ಈ ಕಥಾ ಚೌಕಟ್ಟು ಕಥಾ ನಮೂನೆ 243-ದೇವರಂತೆ ನಲಿಸುವ ಗಿಣಿ- ವಸ್ತುವಿಗೂ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತದೆ. ಗಿಣಿಯು ತನ್ನ ಯಜಮಾನನಿಗೆ ತನ್ನನ್ನು ದೇವರೆಂದು ನಂಬುವಂತೆ ಮಾಡುತ್ತದೆ. ನೆರೆದ ಜನ ಸಮೂಹದ ಮುಂದೆ ತನ್ನ ಆದೇಶಗಳು ಅನುಸರಣೆಗೊಳ್ಳುವಂತೆ ಮಾಡಿ ತನ್ನ ಒಡೆಯನನ್ನು ಲೇವಡಿ ಮಾಡುವ ಅವಕಾಶವನ್ನು ಬಳಸಿಕೊಳ್ಳುತ್ತವೆ. ಇಲ್ಲಿ ಯಜಮಾನನ ವಶದಲ್ಲಿದ್ದವನು ಯಜಮಾನನನ್ನು ಮುಜುಗರಕ್ಕೆ ಗುರಿ ಮಾಡುವುದನ್ನು ನೋಡುತ್ತೇವೆ.

ಕಥಾಚೌಕಟ್ಟು-೩

ಈ ಮೂರನೆಯ ಕಥಾ ಚೌಕಟ್ಟು ಹಿಂದಿನ ಎರಡರೊಂದಿಗೆ ವೈದೃಶ್ಯ ಸಾಧಿಸುತ್ತದೆ. ಈ ಕಥಾ ಚೌಕಟ್ಟಿನಲ್ಲಿ ಎದ್ದು ಕಾಣುವ ಸನ್ನಿವೇಶವೆಂದರೆ ವಿರೋಧಿಯು ಪ್ರತ್ಯಕ್ಷವಾಗಿ ಕಾಣಿಸಿಕೊಂಡು ನಾಯಕನಿಗೆ ಸವಾಲು ಎಸೆಯುತ್ತಾ ಹೋಗುತ್ತಾನೆ- ಸವಾಲುಗಳು ಬೆಳೆಯುತ್ತಾ ಹೋಗುತ್ತವೆ. ಈ ಚೌಕಟ್ಟಿನಲ್ಲಿ ಹೆಚ್ಚು ಗಮನ ಸೆಳೆಯುವ ವಸ್ತು ಎಂದರೆ ವೇಷಾಂತರ. ನಾಯಕ ಅಥವಾ ಅವನ ವಿರೋಧಿ ವೇಷಾಂತರದಲ್ಲಿ ಕಾಣಿಸಿಕೊಳ್ಳುವುದು. ನಾಯಕನು ತನ್ನ ವಿರೋಧಿಯನ್ನು ಮುಗಿಸಲು ಅನೇಕಾನೇಕ ವಂಚನೆಯ ತಂತ್ರಗಳನ್ನು ಬಳಸುತ್ತಾನೆ. ಕಥಾನಮೂನೆ 951C ಯನ್ನು ನೋಡಬಹುದು ವೇಷಾಂತರದಲ್ಲಿ ರಾಜನು ಕಳ್ಳರನ್ನು ಸೇರುವುದು. ರಾಜನು ತನ್ನ ಸಂಪತ್ತನ್ನು ಲೂಟಿ ಮಾಡ ಬಯಸುವ ಜನರಿಂದ ಬೆದರಿಕೆಗೆ ಗುರಿಯಾಗುತ್ತಾನೆ. ಆದರಿಂದ ಪಾರಾಗಲು ರಾಜನು ವೇಷಾಂತರದಲ್ಲಿ ಕಳ್ಳರ ಸೇನೆ ಸೇರುವನು. ರಾಜನಿಗೆ ಈ ಸೇನೆಯೊಂದಿಗೆ ಒಡನಾಟ ಇರದಿದ್ದುದರಿಂದ ಅವರ ಸಂಚುಗಳಿಗೆ

ಯಾವ ತಡೆಯನ್ನೂ ಒಡ್ಡಲಾಗುವುದಿಲ್ಲ. ಕೊನೆಯಲ್ಲಿ ಅವನು ಅವರನ್ನು ತನ್ನ ಅರಮನೆಯ ಕಳ್ಳತನಕ್ಕೆ ಹುರಿದುಂಬಿಸಿ ಸೂಕ್ತ ಸಂದರ್ಭದಲ್ಲಿ ಅವರನ್ನು ಬಂಧಿಸಲು ಏರ್ಪಾಟು ಮಾಡುತ್ತಾನೆ.

ಮತ್ತೊಂದು ಉದಾಹರಣೆಯಲ್ಲಿ ವೇಷಾಂತರದಲ್ಲಿ ತೊಡಗುವವನು ವಿರೋಧಿಯಾಗಿರುತ್ತಾನೆ. ಕಥಾ ನಮೂನೆ 926 A ನಲ್ಲಿ ದೆವ್ವವು ನಾಯಕನಿಗೆ ಸವಾಲೆಸೆಯುತ್ತಾ ತೀರಿಕೊಂಡವನ ಹೆಂಡತಿಯ ನಿಜವಾದ ಪತಿ ಯಾರೆಂದು ಕೇಳುವನು. ನ್ಯಾಯವೇತ್ತರು ಬಹಳ ಚತುರತೆಯಿಂದ ಒಂದು ಸಲಹೆ ನೀಡುತ್ತಾರೆ. ಒಂದು ಗೊತ್ತಾದ ಗಾತ್ರದ ಮಡಕೆಯೊಳಗೆ ಯಾರು ತಲೆ ತೂರಿಸುವರೊ ಅವರೇ ನಿಜವಾದ ಪತಿ ಎಂದು ಭೂತವು ಈ ಸವಾಲನ್ನು ಸ್ವೀಕರಿಸಿ ತಲೆ ತೂರಿಸುವ ಪ್ರಯತ್ನದಲ್ಲಿದ್ದಾಗ ಸೆರೆ ಹಿಡಿಯಲಾಗುವುದು. ಮೂರನೆಯ ಭಿನ್ನರೂಪ ಕಥಾ ನಮೂನೆ 1152 ರಲ್ಲಿ ನಾಯಕನು ರಕ್ಕಸನಿಂದ ಸವಾಲು ಎದುರಿಸಬೇಕಾಗುತ್ತದೆ. ಅದಕ್ಕಾಗಿ ನಾಯಕನು ತನ್ನ ಬಾಗಿಲು ಮತ್ತು ಕಿಟಕಿಗಳ ಮೂಲಕ ವಸ್ತುಗಳನ್ನು ತುರುಕುತ್ತಾನೆ. ಒಂದು ಹಗ್ಗವನ್ನು ಪ್ರದರ್ಶಿಸುತ್ತಾ ಇದು ಅವಿತುಕೊಂಡ ರಕ್ಕಸನ ಕಿವಿಯೆಂದೂ ಮೊಸರನ್ನವನ್ನು ತೋರಿಸುತ್ತಾ ರಕ್ಕಸನ ಉಗುಳೆಂದೂ ಡೊಳ್ಳನ್ನು ಬಡಿದು ತೋರಿಸುತ್ತಾ ರಕ್ಕಸನು ಎದೆ ಬಡಿದುಕೊಳ್ಳುತ್ತಿದ್ದಾನೆಂದೂ ಹೇಳುತ್ತಾನೆ. ಸವಾಲು ಒಡ್ಡಿದ ರಕ್ಕಸನು, ನಾಯಕನು ತನಗಿಂತ ಭಯಂಕರ ಎಂದು ಭ್ರಮಿಸಿ ಭಯಭೀತನಾಗುತ್ತಾನೆ. ಬುದ್ಧಿವಂತಿಕೆ ಪ್ರದರ್ಶನಕ್ಕೆ ಇಲ್ಲಿ ವಿಶೇಷ ಒತ್ತು ಇದ್ದು ಇಬ್ಬಂದಿತನಕ್ಕೆ ಜಾಣ ಪರಿಹಾರಗಳನ್ನು ಕಂಡುಕೊಳ್ಳುವ ಯತ್ನವಿದೆ.

ಕಥಾ ಚೌಕಟ್ಟು-೩ ಅಳವಡುವ ಮತ್ತೊಂದು ವಸ್ತುವೆಂದರೆ ವಿಧಿಯ ಕಲ್ಪನೆಗೆ ಸಂಬಂಧಿಸಿದ್ದಾಗಿದೆ. ಕಥಾನಮೂನೆ 934 D ಯಲ್ಲಿ, ಉದಾಹರಣೆಗೆ ವಿಧಿಯೇ ವಿರೋಧಿಯಾಗಿ ಕಾಣಿಸಿಕೊಳ್ಳುತ್ತದೆ. ಇಲ್ಲಿ ನಾಯಕ ಬಡವನಾದರೂ ಯಾವತ್ತೂ ಒಂದು ಎತ್ತಿನ ಒಡೆತನ ಹೊಂದಿರುತ್ತಾನೆ. ದೇವರು ತನ್ನ ಬಡತನ ನಿವಾರಿಸಬಹುದೆಂದು ತಿಳಿದು ಪ್ರತಿನಿತ್ಯವೂ ಅವನು ಎತ್ತನ್ನು ಮಾರಲು ಹೋಗುತ್ತಾನೆ. ಅದೇ ರೀತಿಯಾಗಿ ಅವನು ತನ್ನ ತಂಗಿ ಒಬ್ಬ ವೇಶ್ಯೆ ಎಂದು ಗೊತ್ತಾದಾಗ ಅವಳಿಗೆ ಪ್ರತಿಯೊಬ್ಬ ಗಿರಾಕಿಯಿಂದಲೂ ಒಂದೊಂದು ಹಿಡಿಯಷ್ಟು ಮುತ್ತುಗಳನ್ನು ಕೇಳಿ ಪಡೆಯಲು ಸೂಚಿಸಿದ. ಒಂದು ದಿನ ದೇವರೇ ವೇಷಾಂತರದಲ್ಲಿ ಬಂದ. ಅವಳ ಸ್ಥಿತಿಗಾಗಿ ಮರುಗಿ ಶಾಪ ವಿಮೋಚನೆ ಮಾಡುತ್ತಾನೆ.

ದಿಢೀರ್ ಅದೃಷ್ಟದ ಕಲ್ಪನೆ ಕೂಡ ಕನ್ನಡ ಜನಪದ ಕಥೆಗಳ ಮಹತ್ವದ ವಸ್ತುವೆನಿಸಿದೆ. ಕಥಾ ನಮೂನೆ 1646 ರಲ್ಲಿ ಅದೃಷ್ಟದ ಕೊರತೆ, ವ್ಯಕ್ತಿಯೊಬ್ಬ ಹೆಚ್ಚಿನ ಪ್ರಯಾಸವಿಲ್ಲದೆ ರಾಜನ ಕಿರೀಟವನ್ನು ಬೀಳಿಸುತ್ತಾನೆ. ವಿಷ ಸರ್ಪವೊಂದು ರಾಜನ ಕಿರೀಟದೊಳಗೆ ಅವಿತಿದ್ದುದು ಗೊತ್ತಾದ ಮೇಲೆ ರಾಜನಿಗೆ ಆ ವ್ಯಕ್ತಿಯ ಬಗೆಗೆ ಕೃತಜ್ಞತಾ ಭಾವ ಬೆಳೆಯುವುದು. 1653E ಕಥಾ ನಮೂನೆಯಲ್ಲಿ ಮೂರ್ಖನೊಬ್ಬ ಏರಿ ಕುಳಿತಿದ್ದ ಮರದ ಕೆಳಗೆ ವಿಶ್ರಮಿಸುತ್ತಿದ್ದ ರಾಜಕುಮಾರನ ತಲೆಯ ಮೇಲೆ ಆಕಸ್ಮಿಕವಾಗಿ

ಪ್ರಾಣಿಯೊಂದರ ಕರುಳು ಬೀಳುವುದು. ರಾಜಕುಮಾರನು ತನ್ನ ಎಲ್ಲ ಸಂಪತ್ತುಗಳನ್ನು ಅಲ್ಲೇ ಬಿಟ್ಟು ಅನುಯಾಯಿಗಳೊಡನೆ ಓಡಿ ಹೋಗುತ್ತಾನೆ. ಈ ಕಾರಣಕ್ಕಾಗಿ ಈ ಜನರ ವಿಧಿಯ ಕಲ್ಪನೆಯನ್ನು ವಿಭಿನ್ನಗೊಳಿಸಿ ಹೇಳುವುದು ಕಷ್ಟ.

ಕಥಾ ಚೌಕಟ್ಟು-೩ ರಲ್ಲಿ ವರ್ಗೀಕರಿಸಲಾಗಿರುವ ಕಥೆಗಳ ಫಲಿತಗಳು ತೀರ ಸಾಮಾನ್ಯ ಸ್ವರೂಪದವು. ಉದಾಹರಣೆಗೆ ಕಥಾ ನಮೂನೆ 1525 ರಲ್ಲಿ ಇಬ್ಬರು ಕಳ್ಳರು ಪರಸ್ಪರರನ್ನು ವಂಚಿಸಲು ಯತ್ನಿಸುತ್ತಾರೆ. ಅವರು ಅನೇಕ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಆದರೆ ಇಬ್ಬರಿಂದಲೂ ಸುಳ್ಳು ಹಕ್ಕು ಸ್ಥಾಪನೆ ಆಗುತ್ತದೆ. ಕೊನೆಗೆ ಇಬ್ಬರೂ ಲಾಭಗಳಿಸಲಾಗದೆ ಹೋಗುತ್ತಾರೆ. ಕಥಾ ನಮೂನೆ 1168 D ಯಲ್ಲಿ ಭೂತ ಮತ್ತು ವ್ಯಕ್ತಿಯ ನಡುವೆ ವಾರ್ಷಿಕವಾಗಿ ನೀಡುವ ಮೊಬಲಗಿನ ವಿಷಯವಾಗಿ ಒಂದು ಒಪ್ಪಂದವಾಗುತ್ತದೆ. ಆದರೆ ಕಾರಣಾಂತರದಿಂದ ಭೂತ ಆ ಒಪ್ಪಂದವನ್ನು ಮುಂದುವರಿಸಿಕೊಂಡು ಹೋಗಲಿಚ್ಛಿಸದೆ ಆ ವ್ಯಕ್ತಿಯನ್ನು ವಂಚಿಸಲು ತೊಡಗುತ್ತದೆ. ಅದನ್ನು ಮನಗಂಡ ಆ ವ್ಯಕ್ತಿ ಭೂತವನ್ನು ಕೊಡತಿಯಿಂದ ಹೊಡೆದು ತೀವ್ರತರವಾಗಿ ಘಾಸಿಗೊಳಿಸುತ್ತಾನೆ. ಒಳ್ಳೆಯದರ ವಿರುದ್ಧ ಕೆಟ್ಟ ಶಕ್ತಿಗಳ ಹೋರಾಟ ಬಂದಾಗ ಹಿಂದೂ ಮನೋಭಾವ ಹೇಗೆ ಕೆಲಸ ಮಾಡುತ್ತದೆ ಎಂಬುದಕ್ಕೆ ಇವು ನಿದರ್ಶನಗಳು.

ಶಾಂತಿ ಮತ್ತು ಸ್ವರಕ್ಷಣ ತತ್ವವನ್ನು ಪ್ರತಿಪಾದಿಸುವ ಕಥಾ ನಮೂನೆಗಳು ಈ ಕಥಾ ಚೌಕಟ್ಟಿನ ವ್ಯಾಪ್ತಿಯಲ್ಲೇ ಬರುತ್ತವೆ. ಕಥಾ ನಮೂನೆ 910 J ಮುಳ್ಳಿನ ಗಿಡವನ್ನು ನೆಡಬೇಡ, ಗಾಜಿನ ಮನೆಯೊಳಗಿದ್ದವರು ಬೇರೆಯವರ ಮೇಲೆ ಕಲ್ಲು ಎಸೆಯ ಹೋಗಬಾರದು ಎಂಬ ಗಾದೆಯಂತೆ ಮುಳ್ಳಿವ ಗಿಡ ನೆಡಲು ಹೋಗುವವರು ತಮ್ಮ ರುಮಾಲು ಮುಳ್ಳಿಗೆ ಬೀಳದಂತೆ ತಡೆಯುವುದು ಕಷ್ಟ. ಜಂಬ ಕೊಚ್ಚಿಕೊಳ್ಳುವವರು, ಕೋಪತಾಪ ತೋರುವವರು ಬೇರೆಯವರ ಮೇಲೆ ಸವಾರಿ ಮಾಡಲು ಹೋಗಬಾರದು- ಈ ಎಲ್ಲ ತತ್ವಗಳು ಹಿಂದೂ ಮೌಲ್ಯಗಳ ಮಹತ್ವದ ಮುಖಗಳನ್ನು ನೆನಪಿಗೆ ತಂದುಕೊಡುತ್ತವೆ.

ಕಥಾ ಚೌಕಟ್ಟು-೪

ಚೌಕಟ್ಟು-೪ ನಾಯಕನ ಅಹಂ ಆಸಕ್ತಿಗಳನ್ನು ಗಣನೆಗೆ ತೆಗೆದುಕೊಳ್ಳುವುದರಿಂದ ಕಥಾ ಚೌಕಟ್ಟು- ೩ ರಿಂದ ಭಿನ್ನವಾಗುತ್ತದೆ. ಹೊರಗಿನ ಒತ್ತಡಗಳೇನೇ ಇರಲಿ, ನಾಯಕನು ವ್ಯಕ್ತಿಗತ ಆಸಕ್ತಿಗಳನ್ನು ಬೆಂಬತ್ತಲೇ ಬೇಕಾಗುತ್ತದೆ. ಆರ್ನೆ-ಥಾಮ್ಸನ್ ಸೂಚಿಯ ಕಥಾನಮೂನೆ 413, 467, 516 B ಮತ್ತು 856- ಈ ಎಲ್ಲ ವಿಶಿಷ್ಟ ಕಥಾನಮೂನೆಗಳೂ ಈ ಕಥಾ ಚೌಕಟ್ಟನ್ನು ಬಳಸಿಕೊಳ್ಳುತ್ತವೆ. ಒಬ್ಬರಾದ ಮೇಲೊಬ್ಬರಂತೆ ಹಲವಾರು ಹೊಸ ಹೊಸ ಹೆಂಗಸರನ್ನು ಅರಸುತ್ತಾ ಹೋಗುವವನತ್ತ ಇವರ ಲಕ್ಷ್ಯವಿರುತ್ತದೆ. ಕೆಲವು ಕಥೆಗಳಲ್ಲಿ ನಾಯಕ ಒಂದು ಬಗೆಯ ಮಾಂತ್ರಿಕ ವಸ್ತುವನ್ನು ಗಳಿಸಿಕೊಂಡರೆ ಮತ್ತೆ ಕೆಲವು ರಚನೆಗಳಲ್ಲಿ, ಬಯಸಿದ ಹೆಣ್ಣಿನ ಸಲುಗೆಯನ್ನು ಸಾಧಿಸಲು ಮಾಂತ್ರಿಕ ರೂಪ ಪರಿವರ್ತನೆಗೆ ಸಾಧಿಸುವುದು ಕಂಡುಬರುತ್ತದೆ.

ಕಥಾ ನಮೂನೆ 411 ರಲ್ಲಿ ಮಾದರಿ ಬೇರೆಯಾಗುತ್ತಾ ಹೋಗುತ್ತದೆ. ನಾಯಕನು ಸರ್ಪಗನ್ನೆಯನ್ನು ವಿವಾಹವಾಗುತ್ತಾನೆ. ಅವಳ ನಿಜರೂಪ ಗೊತ್ತಾದಾಗ ಭಯಭೀತನಾಗಿ ಅವಳನ್ನು ಸುಟ್ಟು ಭಸ್ಮ ಮಾಡುತ್ತಾನೆ. ಆ ಹಾವಿನ ಬೂದಿಯಲ್ಲಿ ಒಂದು ಮಾಂತ್ರಿಕ ಹರಳು ಪತ್ತೆಯಾಗುವುದು. ಆ ಹರಳು ಬೇಡಿದ್ದನ್ನು ಕೊಡುವಂಥದಾಗಿರುತ್ತದೆ. ಹೆಣ್ಣೊಂದು ಹಾವಾಗಿ ರೂಪಪರಿವರ್ತನೆ ಹೊಂದುವ ವಸ್ತು ಕನ್ನಡದಲ್ಲಿ ತುಂಬ ಜನಪ್ರಿಯ, ಮಾಂತ್ರಿಕ ಹಾಗೂ ಸುಂದರ ಹೆಣ್ಣಿಗಾಗಿ ತರುಣನು ಅನ್ವೇಷಣೆಯಲ್ಲಿ ತೊಡಗುವುದು ಪ್ರಪಂಚದ ಬೇರೆ ಭೂಭಾಗದ ಸಂಸ್ಕೃತಿಯನ್ನು ಹಂಚಿಕೊಳ್ಳುವ ಬಗೆಯೇ ಆಗಿದೆ.

ಅನ್ವೇಷಣಾ ವಸ್ತುವಿನ ಸಾಮಾನ್ಯ ಭಿನ್ನರೂಪವೆಂದರೆ ಅನೇಕಾನೇಕ ಇಷ್ಟಾರ್ಥಿಗಳು ವ್ಯಕ್ತಿಗತ ಸಾಧನಗಳ ಮೂಲಕ ಸ್ತ್ರೀಯನ್ನು ಮೋಹಿಸುತ್ತಾರೆ. ಇಲ್ಲಿ ಯಾರನ್ನು ವರನನ್ನಾಗಿ ಆರಿಸಿಕೊಳ್ಳಬೇಕೆಂಬ ಪ್ರಶ್ನೆ ಏಳುತ್ತದೆ. ಇದರಲ್ಲಿ ಕನ್ನಡಕ್ಕೇ ವಿಶಿಷ್ಟವಾಗಿರುವುದು 653 B ಕಥಾ ನಮೂನೆ ಕನ್ಯಾರ್ಥಿಗಳು ವಧುವನ್ನು ಮರು ಜೀವಗೊಳಿಸುವುದು. ಹುಡುಗಿಯನ್ನು ಯಾರು ಮದುವೆಯಾಗಬೇಕು ಎಂಬುದರ ಬಗೆಗೆ ಸ್ಥಳೀಯರು ಮತ್ತು ಸ್ಥಳೀಯ ಸಮಾಜದ ಮುಖಂಡರು ಚರ್ಚಿಸುವರು. ಮತ್ತೊಂದು ಭಿನ್ನರೂಪವೆಂದರೆ ಕಥಾ ನಮೂನೆ 855 ಪರ್ಯಾಯ ಪತಿ- ಕನ್ಯೆಯನ್ನು ಅಪಾಯದಿಂದ ರಕ್ಷಿಸಿದ ವರನು ಕಲ್ಯಾಣ ಮಂಟಪದಲ್ಲಿ ಕನ್ಯಾರ್ಥಿಯಾಗಿ ಕಾಣಿಸಿಕೊಳ್ಳಬಯಸುತ್ತಾನೆ. ಆದರೆ ಆಕೆ ನಿಜದ ಗಂಡನಲ್ಲಿ ಒಲವು ತೋರುತ್ತಾಳೆ. ಗುಂಪಿನ ನಡುವೆಯಿದ್ದ ಅವನನ್ನು ಅವಳು ಪತ್ತೆ ಮಾಡುತ್ತಾಳೆ. 1525 Q ಕಥಾ ನಮೂನೆಯಲ್ಲಿ ಸ್ತ್ರೀ ಇಬ್ಬರು ಕಳ್ಳರ ಸೆರೆಯಲ್ಲಿರುತ್ತಾಳೆ. ಬುದ್ಧಿವಂತನನ್ನು ವರಿಸಲು ಬಯಸಿರುತ್ತಾಳೆ. ಬುದ್ಧಿವಂತರು ತಮ್ಮ ಪ್ರತಿಭೆಯನ್ನು ಪ್ರದರ್ಶಿಸುತ್ತಾರೆ. ಮತ್ತೊಂದು ಕಥಾ ನಮೂನೆ 306 A ನಲ್ಲಿ ವರನೇ ವಧುವನ್ನು ಹುಡುಕಿಕೊಳ್ಳಬೇಕಾಗುತ್ತದೆ. ಈ ಸಲ ವಧು ಮೊದಲೇ ಆಯ್ಕೆ ಹೊಂದಿದವಳಾಗಿರುತ್ತಾಳೆ. ಆದರೆ ಒಂದೇ ತೆರನಾಗಿ ಕಾಣುವ ಹಲವು ಹುಡುಗಿಯರ ನಡುವೆ ಕಾಣಿಸಿಕೊಳ್ಳಬೇಕಾಗುತ್ತದೆ. ಇವೆಲ್ಲವೂ ಅನ್ವೇಷಣಾ ವಸ್ತುವಿನ ವ್ಯತ್ಯಯಗಳು. ಈ ಎಲ್ಲವೂ ಬುದ್ಧಿವಂತಿಕೆಯ ಹಾಗೂ ಸಾಂಪ್ರದಾಯಿಕವಾದ ವೈವಾಹಿಕ ಸಂಬಂಧವನ್ನು ಪರಿಚಯಿಸುತ್ತವೆ. ಸಾಮಾನ್ಯ ಕಥಾ ನಮೂನೆ ಕನ್ನಡಕಷ್ಟೇ ಸೀಮಿತವಾಗಿಲ್ಲವಾದರೂ ಕಥೆಯ ಆಶಯಗಳು ಜನಪ್ರಿಯ ರಮ್ಯ ಕಥೆಯನ್ನು ನಿರೂಪಿಸುವ ಸ್ಥಳೀಯ ರೀತಿಗಳಾಗಿ ತೋರಿ ಬರುತ್ತವೆ.

ಕನ್ಯೆಯನ್ನು ಅರಸಿಕೊಂಡು ಹೋಗುವ ಕನ್ಯಾರ್ಥಿಗಳ ಸಂಬಂಧವಾಗಿ ದೊಡ್ಡ ಸಂಖ್ಯೆಯ ಕಥೆಗಳು ಇರುವಂತೆ ಜೀವನ ಸಂಗಾತಿಯನ್ನು ಆರಸಿಕೊಂಡು ಹೋಗುವ ಹೆಣ್ಣನ್ನು ಕುರಿತ ಕಥೆಗಳು ಅತ್ಯಲ್ಪ ಪ್ರಮಾಣದಲ್ಲಿ ಲಭ್ಯವಾಗುತ್ತವೆ. ಆದರೂ ಸ್ತ್ರೀ ಅನ್ವೇಷಕಿಯ ಬಗೆಗೆ ಚರ್ಚಿಸಲು ಇಲ್ಲಿ ಅವಕಾಶವಿದೆ. ಇದಕ್ಕೆ ಒಂದು ಉತ್ತಮ ನಿದರ್ಶನವೆಂದರೆ 433 C ಸರ್ಪಪತಿ ಹಾಗೂ ಅಸೂಯಾ ಕನ್ಯೆ- ಕನ್ಯೆಯೊಬ್ಬಳು ಸರ್ಪವನ್ನು ಪತಿಯನ್ನಾಗಿ ಸ್ವೀಕರಿಸುತ್ತಾಳೆ. ಆ ಸರ್ಪ ಆಮೇಲೆ ಸುಂದರ ತರುಣನಾಗಿ ರೂಪ ಪರಿವರ್ತನೆ ಹೊಂದುತ್ತದೆ. ಕಥಾ ನಮೂನೆ 411 ರಲ್ಲಿ ಇದು ತಲೆಕೆಳಗಾಗುತ್ತದೆ. ತರುಣನೊಬ್ಬ ತರುಣಿಯನ್ನು ವಿವಾಹವಾಗುತ್ತಾನೆ. ಅವಳು ಹಾವಾಗಿ

ಪರಿವರ್ತಿತಳಾಗುತ್ತಾಳೆ. ತರುಣನು ತನ್ನ ವಧುವಿನ ಬಗೆಗೆ ಭಯ ತಾಳುತ್ತಾನೆ. ಆದರೆ ಆಕೆ ಮಾತ್ರ ಪತಿಯೊಂದಿಗೆ ಸಂತೋಷವಾಗಿರುತ್ತಾಳೆ. ಮತ್ತೊಂದು ಕಥೆಯಲ್ಲಿ ಒಬ್ಬಳು ಮತ್ತೊಬ್ಬಳ ಸುಂದರ ನೋಟಕ್ಕೆ ಕರುಬುತ್ತಿರುತ್ತಾಳೆ. ಅದಕ್ಕಾಗಿ ಅವಳು ಹಾವೊಂದನ್ನು ಮದುವೆಯಾಗಲು ನಿಶ್ಚಯಿಸುತ್ತಾಳೆ. ಅವಳ ಆ ಧಾರ್ಷ್ಟ್ಯಕ್ಕೆ ಹಾವು ಅವಳನ್ನು ಕಡಿಯುವುದು. ಈ ತೆರನ ಆಶಯಗಳನ್ನು ಹೊಂದಿರುವ ಕಥೆಗಳಲ್ಲಿ ಮೂವರ ಪೈಕಿ ಇಬ್ಬರು ಉರಗ ಜೀವಿಗಳಿಂದ ಆಕರ್ಷಿತರಾಗಿರುತ್ತಾರೆ. ಈ ಕಾರಣಕ್ಕಾಗಿಯೇ ಇವರು ಪುರುಷರಿಂದ ಹತರಾಗುತ್ತಾರೆ. ಆದರೆ ಯಾವೊಬ್ಬ ಪುರುಷನೂ ಈ ಕಾರಣಕ್ಕಾಗಿ ಸ್ತ್ರೀಯ ಕೈಯಿಂದ ಸಾಯುವುದಿಲ್ಲ. ಹೀಗೆ ಸ್ತ್ರೀಯರು ಸ್ವತಃ ಕೋಪೋದ್ರೇಕಕ್ಕೊಳಗಾಗುವುದಕ್ಕೆ ಬದಲಾಗಿ ಪುರುಷರ ಕೋಪಕ್ಕೆ ಬಲಿಯಾಗುತ್ತಾರೆ. ಸರ್ಪ ಮಾನವ ವೇಷದ ಆಶಯ ಕನ್ನಡದಲ್ಲಿ ಬಹು ಜನಪ್ರಿಯವಾಗಿದ್ದಂತೆ ಕಾಣುತ್ತದೆ. ಶಿಷ್ಟ ಹಿಂದೂ ಪುರಾಣಗಳ ಆಶಯಗಳೊಡನೆ ಇವನ್ನು ಸಮೀಕರಿಸಿ ನೋಡಬಹುದು.

ಕನ್ನಡ ಜನಪದ ಕಥೆಗಳಲ್ಲಿ ಅತ್ಯಂತ ಸಾಮಾನ್ಯವಾಗಿ ಕಾಣುವ ಮಾದರಿಯೆಂದರೆ ಅನೇಕ ವಿರೋಧಗಳ ಮೂಲಕ ಪತಿಗೆ ನಿಷ್ಠಳಾಗಿರುವ ಪತ್ನಿ ಈ ಗುಂಪಿಗೆ ಸೇರಿಸಬಹುದಾದ ಕಥಾನಮೂನೆಗಳೆಂದರೆ 881A, 888A ಹಾಗೂ 977. ಇವು ಗಂಡ ಹೆಂಡಿರ ನಡುವಿನ ಸಾಮಾಜಿಕ ಬಂಧನಕ್ಕೆ ಸಂಬಂಧಿಸಿದ ಒಂದು ಪ್ರತ್ಯೇಕ ಕಥಾ ಚೌಕಟ್ಟನ್ನೇ ನಿರ್ಮಿಸಲು ಬೇಕಾದ ಸಾಮಗ್ರಿಯನ್ನು ಒದಗಿಸುತ್ತವೆ ಎನ್ನಬಹುದು. ಈ ವಾದಸರಣಿಯನ್ನು ಅಂಗೀಕರಿಸಲು ನಮಗಿರುವ ತೊಡಕುಗಳು ಎರಡು ಮಡಿಕೆಯವು. ಯಾವ ಕಥೆಗಳೂ ಮನುಷ್ಯನ ದಾಕ್ಷಿಣ್ಯಗಳನ್ನು ಪ್ರತಿಪಾದಿಸಲು ಅಸ್ತಿತ್ವ ಹೊಂದಿಲ್ಲ. ಹೆಂಡತಿಯ ಸಲಹೆಯ ಮೇರೆಗೆ ನಿಧಾನವಾಗಿ ಮನೆಗೆ ಆಗಮಿಸಿದ ವಿಧೇಯ ಪತಿಯ ಬಗೆಗೆ ಹೇಳುವ ಕಥಾ ನಮೂನೆ ಅದಕ್ಕೆ ಆಧಾರ ಎನಿಸಿದೆ. ನಿಧಾನವಾಗಿ ಮನೆಗೆ ಬಂದದ್ದರಿಂದ ಅವನು ಅವಳ ಪ್ರೇಮಿಯನ್ನು ಕಾಣಲು ಆಗುವುದಿಲ್ಲ. ನಂಬಿದ ಗಂಡನನ್ನೇ ಮುರ್ಖನನ್ನಾಗಿಸುವ ಪ್ರಕರಣವಿದು. ಮುಖ್ಯವಾದ ಸಂಗತಿಯೆಂದರೆ ಅವಿಧೇಯ ಪತ್ನಿ ವೈವಾಹಿಕ ಬಂಧನವನ್ನು ಕಡೆಗಣಿಸಿ ಸ್ವಂತ ಹಿತಾಸಕ್ತಿಯನ್ನು ನೋಡಿಕೊಳ್ಳುವುದು. ಅವಿಧೇಯ ಪತಿಯರ ಕಥೆಗಳಂತೆ ಇವು ಕೂಡ ಸ್ವಾರ್ಥಪರವಾದವು. ಸುಂದರಾಂಗನೆಯರನ್ನು ಅರಸಿಕೊಂಡು ಹೋಗುವ ಪುರುಷರಿರುವಂತೆ ಇಂಥವರು ಪರಪುರುಷರನ್ನು ಹಿಡಿದಿಟ್ಟುಕೊಳ್ಳುವ ಸ್ತ್ರೀಯರೆಂಬ ಹೆಸರು ಪಡೆದುಕೊಳ್ಳುವರು. ಪ್ರಾಪ್ ಪರಿಭಾಷೆಯಲ್ಲಿ ಹೇಳುವುದಾದರೆ, ಪತಿಯಿಲ್ಲದಿದ್ದರೆ ಹೆಣ್ಣಿನ ಬಾಳಿನಲ್ಲಿ ದೊಡ್ಡ 'ಕೊರತೆ' ಕಾಣಿಸಿಕೊಳ್ಳುತ್ತದೆ. ಸತ್ತ ಗಂಡನನ್ನು ಬದುಕಿಸಿಕೊಳ್ಳಲು, ವೈರಿಗಳ ಕೈಯಿಂದ ಅವನನ್ನು ಪಾರು ಮಾಡಲು, ಬಹಳ ದಿನಗಳ ಪ್ರತ್ಯೇಕತೆಯಿಂದ ಮತ್ತೆ ಅವನನ್ನು ಗುರುತಿಸುವ ಪ್ರಯತ್ನ ಮಾಡುವುದು- ಎಲ್ಲವೂ ಸ್ತ್ರೀಯ ಮೂಲಭೂತ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದರತ್ತಲೇ ನಿರ್ದೇಶಿತವಾಗಿವೆ. ಈ ಗುಂಪಿನ ಕಥೆಗಳಲ್ಲಿನ ಪುರುಷರು ಸರಳ ಅರ್ಥದಲ್ಲಿ ಅಪೇಕ್ಷೆಗಳಿಂದ ಪ್ರೇರೇಪಿತರಾಗಿದ್ದರೆ ಅವರ ಸ್ತ್ರೀಯರು ಹೆಚ್ಚು ಸಾಮಾನ್ಯವಾಗಿ ಸಾಮಾಜಿಕ ನ್ಯೂನತೆಯ ಭಯದಿಂದ ತತ್ತರಿಸುತ್ತಿರುತ್ತಾರೆ.

ಕನ್ನಡ ಜನಪದ ಕಥೆಗಳಲ್ಲಿ ಮೇಲಿಂದ ಮೇಲೆ ಕಂಡು ಬರುವ ಗಂಡಂದಿರ ಬಗೆಗಿನ ಸ್ತ್ರೀ ಕಾಳಜಿ ಮಕ್ಕಳ ಬಗೆಗೂ ವ್ಯಕ್ತವಾಗಿದೆ. ಅದರ ಸಾಮಾನ್ಯ ಎಳೆಯೆಂದರೆ ಬಂಜೆತನದ ಭಯ ಮತ್ತು ಅದರ ಪರಿಣಾಮ. ಇದಕ್ಕೆ ಉತ್ತಮ ನಿದರ್ಶನವೆಂದರೆ ಕಥಾ ನಮೂನೆ 459. ಸಂತಾನವಿಲ್ಲದಾಗ ಸ್ತ್ರೀ ಗಂಡನ ಮನೆಯಲ್ಲಿ ಮಗುವಿನ ಗೊಂಬೆ ಮಾಡಿಟ್ಟುಕೊಂಡು ಅದನ್ನು ಪೋಷಿಸುವ ಕೆಲಸ ಮಾಡುತ್ತಾಳೆ. ಸಾಂದರ್ಭಿಕವಾಗಿ ಅವಳು ಗಂಡನಿಗೆ ತಾನು ಮಗನನ್ನು ಹಡೆದಿರುವುದಾಗಿಯೂ ಆದರೆ ಆ ಮಗುವನ್ನು ಆತ ನೋಡುವಂತಿಲ್ಲ ಎಂದೂ ತಿಳಿಸುತ್ತಾಳೆ. ಮದುವೆಕಾಲ ಸನ್ನಿಹಿತವಾದಾಗ ಸ್ತ್ರೀಯು ಗೊಂಬೆಯ ಪ್ರತಿಮೆಯನ್ನು ಒಂದು ಕುರ್ಚಿಯ ಮೇಲಿಡುತ್ತಾಳೆ. ದೇವರಿಗೆ ಅವಳ ಮೇಲೆ ಕರುಣೆ ಬಂದು ಗೊಂಬೆಗೆ ಜೀವದಾನವಾಗುತ್ತದೆ. ಇಷ್ಟಾದ ಮೇಲೆ ಗಂಡನು ಅವಳನ್ನು ಮರಳಿ ಪಡೆಯಲು ಒಪ್ಪಿಕೊಳ್ಳುತ್ತಾನೆ.

ಕನ್ನಡಕ್ಕೇ ವಿಶಿಷ್ಟವಾದ ಕಥಾ ನಮೂನೆಗಳಲ್ಲಿ ಶೋಷಣೆಗೊಳಗಾದ ಪತ್ನಿಯರ ಬಗೆಗೆ ಒಂದು ವಿಶಿಷ್ಟ ಸಾಂಸ್ಕೃತಿಕ ಕಾಳಜಿ ಕಂಡು ಬರುತ್ತದೆ. S411.2 ಸಣ್ಣ ತಪ್ಪಿಗಾಗಿ ಪತ್ನಿಯನ್ನು ಮನೆಯಿಂದ ಅಟ್ಟುವುದು, S411.3 ಬಂಜೆಯನ್ನು ಮನೆಯಿಂದ ಹೊರಹಾಕುವುದು, S416 ವಾದದಲ್ಲಿ ಸೋಲಿಸಿದ ರಾಣಿಯನ್ನು ರಾಜನು ಗಡೀಪಾರು ಮಾಡಿಸುವುದು- ಅವುಗಳಲ್ಲಿ ಮುಖ್ಯವಾದವು. ತಿರಸ್ಕೃತಳಾದ ಪತ್ನಿಯನ್ನು ದನದ ಕೊಟ್ಟಿಗೆಗೆ ತಳ್ಳುವುದು ಮತ್ತು ಪರಿತ್ಯಕ್ತಳಾದ ರಾಣಿಯ ಕಣ್ಣನ್ನು ಕೀಳಿಸುವುದು ಇಂಥ ಈ ಬಗೆಯ ವಿಶಿಷ್ಟ ಕಥಾ ನಮೂನೆಗಳು ಪತಿಯನ್ನು ಕಳೆದುಕೊಳ್ಳುವ ಹೆಣ್ಣಿನ ಭಯವನ್ನು ದಾಖಲಿಸುತ್ತವೆ.

ಕಥಾನಮೂನೆ 369 ಕಳೆದು ಹೋದ ತಂದೆಗಾಗಿ ಮಗನ ಶೋಧ ಇಲ್ಲಿ ಸಂಕ್ಷೇಪ ಉಲ್ಲೇಖಕ್ಕೆ ಅರ್ಹವಾಗಿದೆ. ಇಲ್ಲಿಯ ಅನ್ವೇಷಣೆ ಕಳೆದು ಹೋದ ತಂದೆಯನ್ನು ಮರಳಿ ಹುಡುಕಿತರುವ ಕಾರ್ಯಕ್ಕೆ ಸಂಬಂಧಿಸಿದ್ದಾಗಿದೆ. ಸ್ತ್ರೀಯ ವಿಷಯದಲ್ಲಿ ಕಂಡು ಕೊಂಡ 'ನ್ಯೂನ್ಯತಾ' ರೋಗವೇ ಇದು ಕೂಡ. ತೀರಿಕೊಂಡ ತಂದೆಯ ಜೀವಕ್ಕೆ ಮರುಜೀವ ದೊರಕಿಸಿಕೊಡಲು ಯತ್ನಿಸುವುದು ಇಲ್ಲಿನ ವಿಶೇಷ. ಇದು ತಂದೆಯನ್ನು ಕೊಲ್ಲುವ ಯುರೋಪ್ ವಸ್ತುವಿಗೆ ವೈದೃಶ್ಯವಾಗಿದೆ.

ನಾಲ್ಕನೆಯ ಕಥಾ ಚೌಕಟ್ಟಿನ ವ್ಯಾಪ್ತಿಯಲ್ಲಿ ಬರುವ ಕೆಲವು ಕಥೆಗಳಲ್ಲಿ ನಾಯಕ ಅನ್ವೇಷಣ ಕಾರ್ಯದಲ್ಲಿ ವಿಫಲನಾಗುವುದನ್ನು ನಿರೂಪಿಸುವ ಸಂದರ್ಭಗಳೂ ಇವೆ. ಕಥಾ ನಮೂನೆ 896 ಇದಕ್ಕೆ ಒಂದು ಉತ್ತಮ ನಿದರ್ಶನ. ಒಬ್ಬ ಕಪಟಿ ಸುಂದರ ಕನ್ಯೆಯನ್ನು ಮೋಹಿಸುತ್ತಾನೆ. ಆದರೆ ಅವಳು ಆತನನ್ನು ಇಷ್ಟ ಪಡುವುದಿಲ್ಲ. ಆದರೂ ಅವನು ಹಿಮ್ಮೆಟ್ಟದೆ ಅವಳನ್ನು ತನ್ನವಳನ್ನಾಗಿಸಿಕೊಳ್ಳಲು ಎಲ್ಲ ಕುಟಿಲ ತಂತ್ರಗಳನ್ನೂ ಬಳಸಿನೋಡುವನು. ಕಥಾನಾಯಕ ಸಕಾಲದಲ್ಲಿ ಆ ಲಂಪಟನನ್ನು ಕೊಂದು ಕನ್ಯೆಯನ್ನು ರಕ್ಷಿಸುತ್ತಾನೆ. ಉತ್ತಮ ಸಂಗಾತಿಯನ್ನು ಅರಸಿಕೊಂಡು ಹೊರಡುವ ರಾಜಕುಮಾರರ ಕಥೆಯಂತಲ್ಲ ಇದು. ನಕಾರಾತ್ಮಕ ಫಲಶ್ರುತಿಯ ಜೊತೆಗೆ ಅವನು ಮೊದಲಿನಿಂದಲೂ

ಆಕೆಯ ಬಗೆಗೆ ತೋರುವ ಮೋಹ ಆಕ್ಷೇಪಾರ್ಹವಾದುದು. ಅಂತೆಯೇ ಸಾಧು ಸಂತರು ಸಂಪೂರ್ಣ ಲೈಂಗಿಕ ನಿರಶಗಳಲ್ಲ ಎಂಬುದು ಈಗ ಹೆಚ್ಚು ಜನಜನಿತ. ಕನ್ನಡ ಕಥೆಗಳು ಸಾಧುಸಂತರ ತೀವ್ರ ಲೈಂಗಿಕಾಪೇಕ್ಷೆಗಳ ಬಗೆಗೆ ವಿಪರೀತ ಹೇಳುತ್ತವೆ. ಈ ವಸ್ತು ಶಿಷ್ಟ ಹಿಂದೂ ಪುರಾಣಗಳಲ್ಲಿ ವ್ಯಾಪಕವಾಗಿ ದಾಖಲಾಗದೆ.

ಮತ್ತೊಂದು ಬಗೆಯ ಪುರುಷ ಒಲವಿನ ಕಥೇ ಇದೇ ಕಥಾ ಚೌಕಟ್ಟಿನಲ್ಲಿ ಕಾಣಿಸಿಕೊಳ್ಳುತ್ತದೆ. ಮೂರ್ಖರನ್ನು ಕುರಿತ ವಸ್ತುವಿಗೆ ಇಲ್ಲಿ ಹೆಚ್ಚು ಅವಕಾಶ. ಉದಾಹರಣೆಗೆ ಇಲ್ಲಿ ಮೂಗನು ತಾನು ಎಟುಕಿಸಿಕೊಳ್ಳಲಾಗದ್ದನ್ನು ಪಡೆಯಲು ಹೆಣಗುತ್ತಾನೆ. ಅವಜ್ಞೆಗೈಯಬಹುದಾದ ಸಣ್ಣ ಸಣ್ಣ ತಪ್ಪುಗಳನ್ನು ಮಾಡುತ್ತಾನೆ, ತನ್ನ ಅತ್ತೆಯೊಂದಿಗೆ ಲೈಂಗಿಕ ತೃಪ್ತಿ ಗಳಿಸಲು ಹವಣಿಸುವನು. ಇವು ಸಾಮಾಜಿಕವಾಗಿ ಒಪ್ಪಿತವಲ್ಲದ ಕ್ರಿಯೆಗಳು; ಅಸಮಂಜಸವಾದ ಬಯಕೆಗಳು. ಪರಿಮಿತ ಗುರಿಯನ್ನು ಸಾಧಿಸುವಲ್ಲಿ ಯಶ ಕಂಡರೂ ನಾಯಕ ಹಲವು ಸಂದರ್ಭಗಳಲ್ಲಿ ಮೂರ್ಖನಂತೆ ಕಂಗೊಳಿಸುತ್ತಾನೆ. ಈ ಗುಂಪಿಗೆ ಸೇರುವ ಎರಡು ಕಥಾ ನಮೂನೆಗಳೆಂದರೆ ಕಥಾನಮೂನೆ 926B ಮತ್ತು 1331 B.

ಸ್ತ್ರೀಗೆ ಸಂಬಂಧಿಸಿದಂತೆ ಈ ಕಥಾ ಚೌಕಟ್ಟಿನಲ್ಲಿ ಕಾಣಸಿಗುವ ಕಥಾ ನಮೂನೆಗಳು ಬಹುಮಟ್ಟಿಗೆ ಒಂದೇ ತೆರನಾಗಿವೆ. ಕಥಾ ನಮೂನೆ 612 A- ವೇಶ್ಯೆಯಾದ ಕೃತಘ್ನ ಪತ್ನಿ. ವೇಶ್ಯೆಯ ಸಹವಾಸದಿಂದ ಸಂತೋಷಿತನಾದ ರಾಜನು ಅವಳಿಗೆ ವರವೊಂದನ್ನು ನೀಡುವನು. ಅವಳು ತನ್ನ ಗಂಡನನ್ನು ಕೊಲ್ಲಿಸುವಂತೆ ಕೇಳಿಕೊಳ್ಳುತ್ತಾಳೆ. ರಾಜನು ಬಹು ಬುದ್ಧಿವಂತಿಕೆಯಿಂದ ಕೊಟ್ಟಿದ್ದ ವರವನ್ನು ಹಿಂದಿರುಗಿಸುವಂತೆ ಸೂಚಿಸುತ್ತಾನೆ. ವರವನ್ನು ಹಿಂದಕ್ಕೆ ಪಡೆಯಿದಿದ್ದ ಪಕ್ಷದಲ್ಲಿ ಅವಳು ಪತಿಯನ್ನು ಕೊಲ್ಲಿಸಿ ಬಿಡುತ್ತಿದ್ದಳು. ಈ ಕಥೆಗೆ ತುಸು ಭಿನ್ನವಾದ ಕಥಾ ನಮೂನೆ 1511, ಅವಿಧೇಯ ರಾಣಿ ಪತಿಯನ್ನು ಕೊಲ್ಲುವುದು-ಪ್ರೇಮದ ಬಲೆಯಲ್ಲಿ ಸಿಲುಕಿಕೊಂಡ ರಾಣಿ ತನ್ನ ಪತಿಯನ್ನೇ ಕೊಲ್ಲುತ್ತಾಳೆ. ಆದರೆ ಪ್ರೇಮಿ ಅವಳನ್ನು ನಿರಾಕರಿಸುತ್ತಾನೆ. ಕಥಾ ನಮೂನೆ 462, ವಿವಾಹಿತನನ್ನು ಪುಸಲಾಯಿಸಿ ಕೊಲೆಗೀಡಾಗುವುದು- ಹೆಣ್ಣೊಬ್ಬಳು ವಿವಾಹಿತ ಪುರುಷನನ್ನು ಪುಸಲಾಯಿಸಿ ಕೊಲೆಗೀಡಾಗುತ್ತಾಳೆ. ಇಂಥ ಪ್ರಯತ್ನದಲ್ಲಿಅಯಶಸ್ವಿಯಾಗುವ ಹೆಣ್ಣುಗಳ ಪ್ರಸ್ತಾಪ ಜನಪದ ಕಥಾ ಲೋಕದಲ್ಲಿ ತೀರ ವಿರಳ. ಈ ಕಾರಣಕ್ಕಾಗಿ ಈ ಕಥಾ ನಮೂನೆ ಮಹತ್ವಪೂರ್ಣವಾದುದು ಎನಿಸಿದೆ.

ಈ ಮೇಲೆ ಪ್ರತಿಪಾದಿಸಿದ ನಾಲ್ಕು ಕಥಾ ಚೌಕಟ್ಟುಗಳ ಯೋಜನೆಗೆ ಕಥೆಯೊಂದು ಹೇಗೆ ಅಳವಡುತ್ತದೆ ಎಂಬುದನ್ನು ನೋಡಲು ಇಲ್ಲಿ 'ಅಡಕ್ರಾ ಜನ ಮಗಳು' ಕಥೆಯನ್ನು ಗಮನಿಸಬಹುದು. ದಕ್ಷಿಣ ಕರ್ನಾಟಕ ಪ್ರದೇಶದಲ್ಲಿ ಹೆಚ್ಚು ಜನಪ್ರಿಯವಾಗಿರುವ ಕಥೆ ಇದು. ಈ ಕಥೆ ನಾಲ್ಕನೆಯ ಕಥಾ ಚೌಕಟ್ಟಿಗೆ ಸುಲಭವಾಗಿ ಅಳವಡುತ್ತದೆ. ವೈಯಕ್ತಿಕ ಆಕಾಂಕ್ಷೆಯ ಬಲದೊಡನೆ ಕ್ರಿಯೆ ಪ್ರೇರಿತವಾಗಿದೆ. ಈ ಕಥೆಯಲ್ಲಿ ನಾಯಕನು ತಂದೆ ತಾಯಿಗಳು ನೋಡಿದ ಹುಡುಗಿಯನ್ನು ವರಿಸಲು ಸಿದ್ಧನಿರುವುದಿಲ್ಲ. ತನಗೆ ಸರಿ

ಜೋಡಿಯಾಗುವ ಹೆಣ್ಣನ್ನು ಅರಸಿಕೊಂಡು ಹೋಗುತ್ತಾನೆ. ಅಡಕರಾಜನ ಮಗಳನ್ನು ವಿವಾಹವಾಗಲು ನಿಶ್ಚಯಿಸುವನು. ದಾರಿಯಲ್ಲಿ ದಾಸಿಗಳಿಂದ ಮಾಂತ್ರಿಕ ವಸ್ತುಗಳನ್ನು ಸಂಪಾದಿಸಿಕೊಳ್ಳುವನು. ಆ ವಸ್ತುಗಳನ್ನು ಸಂತರ ನಿರ್ದೇಶನದಂತೆ ಸಾಂದರ್ಭಿಕವಾಗಿ ಬಳಸಿಕೊಂಡು ಗುರಿ ತಲುಪಲು ಅಡಚಣೆ ಉಂಟು ಮಾಡಿದ ಎಲ್ಲ ಶಕ್ತಿಗಳನ್ನೂ ಜಯಿಸುವನು.

ಕಥೆಯ ಆರಂಭದಲ್ಲಿ ಕುಲದ ಪ್ರಸ್ತಾಪ ಬಂದಿದ್ದರೂ ಕಥೆಯ ಯಾವ ಘಟ್ಟದಲ್ಲೂ ನಾಯಕ ಮತ್ತು ಅವನ ಕುಲಸ್ಥರ ನಡುವಿನ ಹೋಲಿಕೆ ಬರುವುದಿಲ್ಲ. ಆತನ ಸಾಹಸಕಾರ್ಯದಲ್ಲಿ ನೆರವಾಗುವ ದಾನಿಗಳ ಪ್ರಸ್ತಾಪ ಕೂಡ ಉದ್ದೇಶಪೂರ್ವಕ ಆದುದಲ್ಲ. ಆದ್ದರಿಂದ ಈ ಕಥೆ ನಾಲ್ಕೂ ಚೌಕಟ್ಟುಗಳು ಒಂದೇ ಕಥೆಯಲ್ಲಿ ಸಂಯೋಗವಾಗಿರುವುದನ್ನು ಶ್ರುತಪಡಿಸುತ್ತದೆ.

ಈ ಕಥೆಯಲ್ಲಿ ಕಾಣಸಿಕೊಳ್ಳುವ ಅನ್ವೇಷಕ ವಸ್ತುವಿನ ಒಟ್ಟು ಪರಿಣಾಮವನ್ನು ಕಥಾಕ್ರಿಯೆಯ ಎರಡನೆಯ ಮಜಲಿನಲ್ಲಿ ಕಾಣುತ್ತೇವೆ. ರಾಜಕುಮಾರನು ಸವಾಲುಗಳ ಸರಮಾಲೆಯನ್ನೇ ಯಶಸ್ವಿಯಾಗಿ ಎದುರಿಸಿ ಅಡಿಕೆಯನ್ನು ಪತ್ತೆಮಾಡಿ ಅದನ್ನು ಕಿತ್ತುಕೊಳ್ಳುತ್ತಾನೆ. ಅಡಿಕೆಯೊಂದಿಗೆ ಹಿಂದಿರುಗುತ್ತಿದ್ದ ಅವನು ವಿಶ್ರಮಿಸಿಕೊಳ್ಳುತ್ತಿದ್ದಾಗ, ದಾನಿಯ ನಿರ್ದೇಶನವನ್ನು ಮರೆತು ಅಡಿಕೆಯನ್ನು ನೆಲದ ಮೇಲಿಟ್ಟು ಅನಾಹುತಕ್ಕೆ ಗುರಿಮಾಡಿಕೊಳ್ಳುತ್ತಾನೆ. ಅಡಿಕೆಯೊಳಗಿದ್ದ ಸುಂದರಿಯನ್ನು ಮೋಸದಿಂದ ನೀರಿಗೆ ತಳ್ಳಿ ಕುರುಡ ಕುಂಬಾರ್ತಿ ಆಕೆಯ ಸ್ಥಾನವನ್ನು ಆಕ್ರಮಿಸುವಳು.

ಪ್ರಕೃತ ಕಥೆಯಲ್ಲಿ ಆರ್ನೆ ಥಾಮ್ಸನ್ ಸೂಚಿಯ ನಾಲ್ಕು ಕಥಾ ನಮೂನೆಗಳ ಛಾಯೆಯನ್ನು ಗುರುತಿಸಬಹುದು. ಪ್ರೇಮಿಯನ್ನು ಅರಸಿಕೊಂಡು ಹೋಗುವ ಆಗಂತುಕ-ವಧು ಕಥಾ ನಮೂನೆ 467 ಅದ್ಭುತ ಹೂವಿಗಾಗಿ ನಡೆಸುವ ಶೋಧ. ಬಹುಮಟ್ಟಿಗೆ ಇದು ಪುರುಷ ಪ್ರಣಯಿಯ ಶೋಧಕ್ಕೆ ಸಂಬಂಧಿಸುತ್ತದೆ. ' ಅಡಿಕೆ' ಗೆ ಪರ್ಯಾಯವಾಗಿ 'ಹೂವು' ಬಂದಿದೆಯಷ್ಟೇ. ಕಥಾ ನಮೂನೆ 413ರ ಅಂಶವೂ ಇಲ್ಲಿದೆ ಕೀಳು ಕುಲದವಳು ಉಡುಪನ್ನು ಕದಿಯುವುದರ ಮೂಲಕ ವಿವಾಹವಾಗಲು ಯತ್ನಿಸುವುದು. ಇದೇ ರೀತಿಯಾಗಿ ಇಲ್ಲಿ ಕಥಾ ನಮೂನೆ 516 B ಯ ಎಳೆಗಳೂ ಇವೆ. ಅಪಹೃತ ರಾಜಕುಮಾರಿ ಹಂಗಾಮಿಯಾಗಿ ಅಡಕ ರಾಜಕುಮಾರಿಯಾಗಿ ಪರಿವರ್ತಿತಳಾಗುವುದರಿಂದ ಇಲ್ಲಿ ಕಥಾ ನಮೂನೆ 856 ನ್ನು ನಿರ್ಲಕ್ಷಿಸಲಾಗುವುದಿಲ್ಲ. ಅಲ್ಲಿ ರಾಜಕುಮಾರನು ವಂಚನೆಗೆ ಗುರಿಯಾದರೆ ಇಲ್ಲಿ ಹೆಣ್ಣೊಬ್ಬಳು ವಂಚನೆಗೆ ಗುರಿಯಾಗುವ ಸನ್ನಿವೇಶವಿದೆ.

ಪ್ರಕೃತ ಕಥೆಯಲ್ಲಿ ಆರ್ನೆ ಥಾಮ್ಸನ್ ಸೂಚಿಯ ಕನಿಷ್ಠ ನಾಲ್ಕು ಕಥಾ ನಮೂನೆಗಳ ನಡುವೆ ಇರುವ ಸಂಬಂಧದ ಎಳೆಗಳನ್ನು ಒಂದು ವಸ್ತುವನ್ನಾಗಿ ಸಂಯೋಜಿಸಬಹುದು. ಇದನ್ನೇ ಒಂದು ಕಥಾ ಮಾದರಿಯೆಂದು ಕರೆಯಬಹುದು. ಪ್ರಕೃತ ಕಥೆ ಹೆಚ್ಚು ಪ್ರಸ್ತುತ ಎನಿಸಿರುವುದು ಪುರಷನು ಒಬ್ಬರಿಗಿಂತ ಹೆಚ್ಚು ಸುಂದರಿಯರನ್ನು ವರಿಸಲು ಯತ್ನಿಸುವುದಕ್ಕಾಗಿ. ಈ ಕಥಾ ವಸ್ತುವಿನಲ್ಲಿ ಕಂಡು ಬರುವ ನಿರ್ದಿಷ್ಟ ಸಾಮಾಜಿಕ

ವ್ಯತ್ಯಯಗಳು ಅಡಕರಾಜಕುಮಾರಿ ಕತೆಯಲ್ಲಿ ಕಾಣಸಿಗುತ್ತವೆ. ಅನ್ವೇಷಕನು ದಾರಿಯಲ್ಲಿ ತಾನು ಭೇಟಿಯಾಗುವ ಸಾಧು ಸಂತರಲ್ಲಿ ಪೋಷಕರನ್ನು ಕಂಡುಕೊಳ್ಳುವುದು, ಅವನು ಬಯಸುವ ಸಂಗಾತಿ ವಿಶಿಷ್ಟ ಕೌಟುಂಬಿಕ ಪರಂಪರೆಯನ್ನು ಹೊಂದಿರುವುದು(ಅವಳು ಒಬ್ಬ ಅಡಕ ರಾಜನ ಮಗಳು)- ಈ ಕ್ರಿಯೆಗಳು ಒಂದು ವಿಶಿಷ್ಟ ಸಾಮಾಜಿಕ ಸನ್ನಿವೇಶವನ್ನು ನಿರ್ವಹಿಸುತ್ತವೆ. ಈ ಸಂಗತಿಗಳು ಕಥೆಗೆ ಒಂದು ಸಾಮಾನ್ಯ ಚೌಕಟ್ಟನ್ನು ಕೂಡಿಸಿಕೊಡುತ್ತವೆ. ಅಲ್ಲದೆ ನಾಯಕನ ಚಟುವಟಿಕೆಗಳು ವ್ಯಕ್ತಿಗತ ನಿರ್ಣಯಗಳ ರೂಪದಲ್ಲಿ ಸಾಮಾನ್ಯ ವಿಶ್ಲೇಷಣೆಗೆ ಗುರಿಯಾಗುತ್ತವೆ. ಹೀಗೆ ವ್ಯಕ್ತಿಗತ ಬಯಕೆ ಇಲ್ಲಿ ವಿಶಿಷ್ಟ ಪ್ರಾದೇಶಿಕ ಉಪಮಾದರಿ ರೂಪುಗೊಳ್ಳಲು ಸಹಕಾರಿಯಾಗಿದೆ.

ಕುರುಡುಕುಂಬಾರ್ತಿಯಿಂದ ನೀರಿಗೆ ತಳ್ಳಲ್ಪಟ್ಟ ಅಡಕರಾಜನ ಮಗಳು ಕಮಲವಾಗಿ ಬಾವಿಯಲ್ಲಿ ತೇಲಾಡುವುದನ್ನು ಕಂಡ ರಾಜಕುಮಾರ ಅದನ್ನು ಕಿತ್ತುಕೊಂಡಾಗ ಕುರುಡುಕುಂಬಾರ್ತಿಯು ಆ ಕಮಲವನ್ನು ಅವನ ಕೈಯಿಂದ ಕಿತ್ತು ಎಸೆಯುವುದು, ಆ ಕಮಲ ಗಂಧದ ಮರವಾಗಿ ಬೆಳೆದು ನಿಲ್ಲುವುದು, ಬೆಳೆದು ನಿಂತ ಆ ಮರವನ್ನು ಅವಳು ಕಡಿದು ಹಾಕಲು ಆದೇಶಿಸುವುದು, ಬಡಗಿಯು ಗಂಧದ ಒಂದು ತುಂಡನ್ನು ಅವಿಸಿಡುವುದು, ಆ ಮರದ ತುಂಡಿನಿಂದ ಸುಂದರ ಕನ್ಯೆ ರೂಪುಗೊಳ್ಳುವುದು, ಬಡಗಿಯು ಅವಳನ್ನು ದತ್ತಾಗಿ ಸ್ವೀಕರಿಸುವುದು- ಎಲ್ಲವನ್ನೂ ಹಾಡ್ಗತೆಯ ರೂಪದಲ್ಲಿ ಆಲಿಸಿದ ರಾಜಕುಮಾರನು ಕೊನೆಯಲ್ಲಿ ಕುರುಡು ಕುಂಬಾರ್ತಿಯನ್ನು ಜೀವಂತವಾಗಿ ಸುಟ್ಟು ಹಾಕಿ ನಿಜವಾದ ರಾಜಕುಮಾರಿಯನ್ನು ವಿವಾಹವಾಗುತ್ತಾನೆ. ಕಥೆಯ ಮುಕ್ತಾಯ ಹೀಗೆ ಕನ್ಯಾರ್ಥಿಗೆ ಸುಖಾಂತ ಫಲಶ್ರುತಿಯನ್ನು ದೊರಕಿಸಿಕೊಡುತ್ತದೆ. ಅವನ ಹೃದಯದ ಆಸೆ ಕೈಗೂಡುತ್ತದೆ ಹಾಗೂ ಆರಂಭದಲ್ಲಿ ಅವನು ಪ್ರದರ್ಶಿಸುವ ಬಂಡಾಯಕ್ಕೆ ನ್ಯಾಯ ದೊರಕಿಸಿಕೊಡಲಾಗುತ್ತದೆ. ಎದ್ದು ಕಾಣುವ ಅಂಶವೆಂದರೆ ಇಲ್ಲಿ ಸಾಂದರ್ಭಿಕವಾಗಿ ಬಳಸಿಕೊಳ್ಳಲು ನೀಡುವ ಮಾಂತ್ರಿಕ ಸಲಕರಣೆಗಳು ಭಾರತೀಯರಿಗೆ ವಿಶಿಷ್ಟವಲ್ಲವಾದರೂ ಲಿಂಬೆಹಣ್ಣು ಹಾಗೂ ಅರಿಶಿನದ ಕೊಂಬು ನಿಜವಾಗಿಯೂ ಸಾಂಸ್ಕೃತಿಕ ಸಂಕೇತಗಳು. ಇದೇ ರೀತಿಯಾಗಿ ರಾಜಕುಮಾರಿಯನ್ನು ಅಡಿಕೆ, ಬಾವಿ, ಹೂವು, ಶ್ರೀಗಂಧದಮರ ಹಾಗೂ ಬಡಗಿಯ ಮಡಕೆ ಮುಂತಾದ ಮಾಂತ್ರಿಕ ಸಾಧನಗಳಲ್ಲಿ ಅವಿಸಿಡುವ ಸಂಗತಿಗಳು ಕೂಡ ಸಾಂಸ್ಕೃತಿಕ ಗುರುತುಗಳಾಗಿ ಇಲ್ಲಿ ಪರಿಗಣಿತವಾಗುತ್ತವೆ.

* * *

ಆಕರ ಗ್ರಂಥಗಳು

Baughman E. W.

1966 *Type and Motif Index of the Folktales of England and North America*, Indiana University Folktale Series, No. 20, The Hague: Mouton

Beck Brenda E.F.

1980 Frames, Tale Types and Motifs: steps toward the discovery of several important Indian Oicotypes

1980 The Twin Brothers: Themes in a Tamil Folk Epic From India, Bloomington, Indiana University Press

Blackburn Stuart H.

1977 *'Creation Myths in Tribal India: Problems in Cultural Diffusion'* Man in India Vol 57 No. 3 pp . 191-207

Claus Peter J.

1975 The Siri Myth and Ritual : A mass Possession cult of south India, Ethnology vol. 14 No. 1 pp. 47-58

Dorson, Richard M.

1978 Boosterism in American Folklore, Journal of Folklore Institute, vol 15, pp 181-182

Thompson, Stith

1955-58 Motif-Index of Folk-Literature, 6 vols. 2nd ed. Bloomington: Indiana Uni. press.

1961 The Types of the Folktale, 2nd revision (based on original work by A. Aarne), FF Communications 184, Helsinki, Suomalainen Tiedeakatenia.

VALUE-BASED EDUCATION: HARBINGER OF HOPE IN THE CRISIS-LADEN WORLD OF TODAY

S. Sampath

I. The escalating crisis in human affairs is there a way out of the tangle?

It is paradoxical that, side by side with spectacular advances in the domain of Science and Technology, the pattern of life gets more and more complicated and the level of unhappiness in human society makes a quantum jump. Alvin Toffler, in his widely read book 'Future Shock', expressed his concern in these words:

"The increasing rate at which situations flow past us vastly complicates the entire structure of life, multiplying the numbeer of roles that we must play and the number of choices that we are forced to make. This accounts for the choking sense of complexity that pervades contemporary life. There are more and more situations in which previous experience does not apply. The Psychological implication of this is nothing short of explosive".

Scientist-Engineer, Daniel E. Noble says:

"Everyone can see that the prodigious growth of our technological environment has resulted from technological accumulation. This was not planned and it has all happened as

a result of the correlation of millions of individual forces at work in the total system. We all went along for the ride."

